ಮಣ್ಣಿನ ದೀಪಗಳು

ಸಂ.: ಡಾ. ಬಿ. ಪಾಂಡುಕುಮಾರ್



ಭಾಗ–1

ಮಣ್ಣಿನ ದೀಪಗಳು

ಸಂಪಾದಕರು
ಡಾ. ಬಿ. ಪಾಂಡುಕುಮಾರ್

ಪ್ರಕಾಶಕರು
ವೇದಾವತಿ ಪ್ರಕಾಶನ
'ಮಂಡ್ಯ ಹೌಸ್', ನಂ. 1539, 1ನೇ ಮುಖ್ಯರಸ್ತೆ.
ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಅಂಚೆ ಬೆಂಗಳೂರು–560 065
ಮೊಬೈಲ್ : 9880410304

Mannina Deepagalu : A Portriat of Great Persons of Vokkaliga Community by : Dr. B. Pandukumar, Associate Professor of History (Rtd.) Published by: Vedavavthy Prakashana, 'Mandya House', No.1539, Judicial Layout, G.K.V.K. Post, Bengaluru-560 065 Mob: 9880410304

ಮುದ್ರಣ : 2017

ಪುಟಗಳು : viii+266=274

ಬೆಲೆ : ₹ **200/-**

ಪ್ರತಿಗಳು : 1000

ಮುಖಪುಟ ವಿನ್ಯಾಸ : **ಎಂ.ಪಿ. ಯಶಸ್ ಮತ್ತು ಎಂ.ಪಿ. ಶ್ರೇಯಸ್**

ಮುದ್ರಣ :

ಸತ್ಯಶ್ರೀ ಪ್ರಿಂಟರ್ಸ್ ಪ್ರೈವೇಟ್ ಲಿ.

16/1, 3ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,
ಕಸ್ತೂರಿಬಾ ನಗರ, ಮೈಸೂರು ರಸ್ತೆ,
ಬೆಂಗಳೂರು-560 026
ದೂರವಾಣಿ : **080-2674 8811**
E-mail : satyasriprn@gmail.com

ಚೆನ್ನುಡಿ

ಇದು ನನ್ನ ನಾಲ್ಕನೆಯ ಕೃತಿ 2014 ಡಿಸೆಂಬರ್ ನಲ್ಲಿ ನಾನು ಬರೆದ 'ಕರ್ನಾಟಕದ ರತ್ನಗಳು' ಕೃತಿಯ ನಂತರ ಹೊರಬರುತ್ತಿರುವ "ಮಣ್ಣಿನ ದೀಪಗಳು" ಎಂಬ ಈ ಕೃತಿಯು ನನ್ನ ಸಂಪಾದಕತ್ವದಲ್ಲಿ ಹೊರಬರುತ್ತಿದೆ. ಕರ್ನಾಟಕದ ರತ್ನಗಳು ಭಾಗ–1 ನಂತರ ಮುಂದುವರೆಸಿ ಪ್ರತಿವರ್ಷ ಒಂದು ಇಲ್ಲವೆ ಎರಡು ಕೃತಿಗಳನ್ನು ಹೊರತರಬೇಕೆಂದು ಯೋಚಿಸಿದ್ದೆ. ನಾನು ನಿವೃತ್ತಿ ಹೊಂದಿದ ಮಾರನೆಯ ದಿನದಿಂದ 'ಒಕ್ಕಲಿಗರ ಪತ್ರಿಕೆ'ಯ ಸಂಪಾದಕನಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತು. ಪತ್ರಿಕೆಯನ್ನು ಹಂತಹಂತವಾಗಿ ಅಭಿವೃದ್ಧಿ ಪಡಿಸಿದೆ. ಮೊದಮೊದಲು ವಿದ್ವಾಂಸರಿಂದ ಲೇಖನಗಳನ್ನು ಸಂಗ್ರಹಿಸುವುದು ದುಸ್ತರವಾದಾಗ ಸಾಕಷ್ಟು ಲೇಖನಗಳನ್ನು ನಾನೇ ಬರೆಯುತ್ತಾ ಸಂಪೂರ್ಣವಾಗಿ ಅದರಲ್ಲೇ ಕಳೆದು ಹೋದೆ. ಪುಸ್ತಕ ಬರೆಯುವ ಕೆಲಸ ಅರ್ಧಕ್ಕೆ ನಿಂತು ಹೋಯಿತಲ್ಲ ಎಂದು ಚಿಂತಿಸುತ್ತಿದ್ದೆ. ನನ್ನ ಆತ್ಮೀಯ ಸ್ನೇಹಿತರು ಇತಿಹಾಸ ಸಂಶೋಧಕರಾದ ಶ್ರೀ ತಲಕಾಡು ಚಿಕ್ಕರಂಗೇಗೌಡರು. ನೀವು ಕಾಲೇಜಿನಲ್ಲಿ ಎಷ್ಟೇ ಸಂಶೋಧನೆ ಮಾಡಿರಬಹುದು. ಇಲ್ಲವೆ ಪುಸ್ತಕ ಬರೆದಿರಬಹುದು. ಅದು ಕಾಲೇಜಿಗೆ ಮಾತ್ರ ಸೀಮಿತ. ನೀವು ಒಕ್ಕಲಿಗರ ಪತ್ರಿಕೆಯ ಗೌರವ ಸಂಪಾದಕರಾಗಿರುವುದರಿಂದಾಗಿ ಪ್ರತಿ ತಿಂಗಳು ಕಡಿಮೆ ಎಂದರೂ 8–10 ಸಾವಿರ ಜನ ಪತ್ರಿಕೆಯನ್ನು ಓದುತ್ತಾರೆ. ಪ್ರತಿತಿಂಗಳೂ ನಿಮ್ಮ ಹೆಸರು ಸಾವಿರಾರು ಜನರಿಗೆ ಮುಟ್ಟುತ್ತದೆ. ಪುಸ್ತಕ ಬರೆದು ಜನಪ್ರಿಯು ವಾಗುವುದಕ್ಕಿಂತಲೂ ಹೆಚ್ಚಿನ ಜನಪ್ರಿಯತೆ ಫೇಸ್ ವ್ಯಾಲ್ಯು ಸಿಕ್ಕುತ್ತಿದೆ ಎಂದು ನನ್ನ ಮನದಲ್ಲಿದ್ದ ಚಿಂತೆಯನ್ನು ದೂರ ಮಾಡಿದರು. ನಮ್ಮ ಊರಿನವರೇ ಆದ ಡಾ. ಬೂದನೂರು ಪುಟ್ಟಸ್ವಾಮಿಯವರೂ ಕೂಡ ಅದಕ್ಕೆ ದನಿಗೂಡಿಸಿದರು.

ಹೀಗೆ ನನ್ನ ಸ್ನೇಹಿತರು ಒಕ್ಕಲಿಗರ ಪತ್ರಿಕೆಯ ಬಹುತೇಕ ಚಂದಾದಾರರು, ಒಕ್ಕಲಿಗರ ಸಂಘದ ಪದಾಧಿಕಾರಿಗಳು, ನಿರ್ದೇಶಕರು ತಮ್ಮ ಮೆಚ್ಚುಗೆ ಸೂಚಿಸಿದರು. ಕ್ರಮೇಣ ಹಿರಿಯ ವಿದ್ವಾಂಸರಾದ ಡಾ. ಎಂ.ಜಿ. ನಾಗರಾಜ್, ತಲಕಾಡು ಚಿಕ್ಕರಂಗೇಗೌಡ, ಡಾ. ಪ್ರಮೀಳದೇವಿ, ಡಾ. ಬಿ.ಎಸ್. ಪುಟ್ಟಸ್ವಾಮಿ, ಪ್ರೊ. ನಾರಾಯಣರೆಡ್ಡಿ, ಪ್ರೊ. ಕೆ. ನಾರಾಯಣಗೌಡ (ಕೃಷಿ ವಿ.ವಿ. ಕುಲಪತಿಗಳು) ಡಾ. ಸುಶಿ ಕಾಡನಕುಪ್ಪೆ, ಡಾ. ಶಿವರಾಂ, (ಮಂಡ್ಯ) ಡಾ. ಪದ್ಮ ಇವರೇ ಮುಂತಾದವರು ಉಪಯುಕ್ತ ಲೇಖನಗಳನ್ನು ಬರೆಯುವ ಮೂಲಕ ಪತ್ರಿಕೆಯನ್ನು ಜನಪ್ರಿಯಗೊಳಿಸಿದರು. ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಎಂ.ಎ. ಆನಂದ್‌ರವರು ಎಲ್ಲಾ ರೀತಿಯ ಪ್ರೋತ್ಸಾಹ ನೀಡಿದರು. ಆದರೂ ಕೂಡ ಏನೋ ಒಂದು ವಿದವಾದ ಕೊರತೆ ನನ್ನ ಮನಸ್ಸಿನಲ್ಲಿ ಇದ್ದೇ ಇತ್ತು. ನನ್ನ "1600 ವರ್ಷಗಳ ಒಕ್ಕಲಿಗರ ಇತಿಹಾಸ" ಕೃತಿಗಳು ಖಾಲಿಯಾಗಿದ್ದುವು. ಸಪ್ನ ಬುಕ್ ಹೌಸ್ ಮತ್ತು ನವಕರ್ನಾಟಕ ಪಬ್ಲಿಕೇಷನ್ ಇನ್ನೂ ಮುಂತಾದ ಪಬ್ಲಿಕೇಷನ್‌ಗಳು ಪುಸ್ತಕವನ್ನು ಪೂರೈಸುವಂತೆ ಒತ್ತಾಯಿಸುತ್ತಿದ್ದರು. ಇದೇ ಸಮಯಕ್ಕೆ ಒಕ್ಕಲಿಗರ ಸಂಘದ ಜನಪ್ರಿಯ ನಿರ್ದೇಶಕರು ಹಾಗೂ ಒಂದೊಮ್ಮೆ ವಿ.ವಿ.ಪುರಂ ಕಾಲೇಜಿನಲ್ಲಿದ್ದಾಗ ನನ್ನ ಮೆಚ್ಚಿನ ವಿದ್ಯಾರ್ಥಿಯಾಗಿದ್ದ ಶ್ರೀ ಅಚ್ಚೇಗೌಡ ಶಿವಣ್ಣರವರು ಮೂರುಸಾವಿರ ಪ್ರತಿಗಳನ್ನು ಸಂಘಕ್ಕೆ ಪೂರೈಸಲು ಕೋರಿಕೆಯಿತ್ತರು. ಆ ಕೂಡಲೇ ಪುಸ್ತಕವನ್ನು ಪರಿಷ್ಕರಿಸಿ ಮರುಮುದ್ರಣ ಮಾಡಿ ಸಂಘಕ್ಕೆ ಸರಬರಾಜು ಮಾಡಿದೆ.

ಶ್ರೀ ವೈ.ಡಿ. ರವಿಶಂಕರ್‌ರವರು ದುಬೈನಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ಉತ್ಸವ ಮಾಡಬೇಕೆಂದಿದ್ದೇವೆ. ಆ ಸಂದರ್ಭದ ನೆನಪಿಗಾಗಿ ಒಂದು ಪುಸ್ತಕವನ್ನು ಬಿಡುಗಡೆ ಮಾಡೋಣ. ತುರ್ತಾಗಿ ಒಂದು ಪುಸ್ತಕ ಬರೆಯಿರಿ ಎಂದು ಒಂದು ತಿಂಗಳ ಗಡುವು ನೀಡಿದರು. ಬಿಡುವಿಲ್ಲದ ನನಗೆ ಇದು ಸವಾಲಾಗಿ ಕಂಡಿತು. ಅಲ್ಲದೆ ಬೇಕಾಬಿಟ್ಟಿ ಬರೆದು ಹೆಸರು ಕಡೆಸಿಕೊಳ್ಳಲು ನಾನು ತಯಾರಿರಲಿಲ್ಲ. ಹೀಗಾಗಿ ನನ್ನ ಮಿತ್ರರು ಯಾರೆಲ್ಲ ಈಗಾಗಲೇ ಒಕ್ಕಲಿಗ – ಮೇರು ವ್ಯಕ್ತಿಗಳ ಲೇಖನ ಬರೆದು ಸಿದ್ಧವಿದೆಯೋ ಅಂತಹವರನ್ನು ಭೇಟಿ ಮಾಡಿ ಅವರಿಂದಲೇ

ಲೇಖನಗಳನ್ನು ಸಂಗ್ರಹಿಸಿ "ಮಣ್ಣಿನ ದೀಪಗಳು" ಎಂಬ ಶೀರ್ಷಿಕೆಯೊಂದಿಗೆ ಈ ಕೃತಿಯನ್ನು ಹೊರತರಲು ಇಚ್ಚಿಸಿದೆ. ಒಕ್ಕಲಿಗ ಮೇರು ವ್ಯಕ್ತಿಗಳು ನೂರಾರು ಜನರಿದ್ದಾರೆ. ಈ ಎಲ್ಲರನ್ನು ಒಂದೇ ಕೃತಿಯಲ್ಲಿ ತರುವುದು ಮೂರ್ಖತನವೆಂದು ಭಾವಿಸಿ ಕಂತುಗಳ ರೂಪದಲ್ಲಿ ಹೊರತರಲು ಬಯಸಿದೆ. ಆದಕಾರಣ ಈ ಕೃತಿಗೆ ಭಾಗ-1 ಎಂತಲೂ ಮುಂದೆ ಹೊರಬರಲಿರುವ ಸಂಪುಟಗಳಿಗೆ ಭಾಗ-2, 3, 4, ಹೀಗೆ ಮುಂದುವರಿಯುತ್ತಾ ಸಾಗುತ್ತದೆ. ಭಾಗ-1 ರಲ್ಲಿ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ "ಒಕ್ಕಲಿಗರ ಸಂಘದ ಸ್ಥಾಪನೆಗೆ ಕಾರಣಕರ್ತರು ಪ್ರಾತಃಸ್ಮರಣೀಯರಾದ ಶ್ರೀ ಕೆ.ಎಚ್. ರಾಮಯ್ಯನವರಿಂದ ಪ್ರಾರಂಭಿಸಿದ್ದೇನೆ. ಮಣ್ಣಿನ ದೀಪಗಳು ಸಂಪುಟಗಳಲ್ಲಿ ಮಣ್ಣಿನ ಮಕ್ಕಳ ಸಾಧನೆಗಳು ಅನಾವರಣಗೊಳ್ಳಲಿದೆ.

ಇದೇ ಸಂದರ್ಭದಲ್ಲಿ ವಿಶ್ವ ಒಕ್ಕಲಿಗರ ವೇದಿಕೆಯ ಬಗ್ಗೆ ಹೇಳಬೇಕೆಂದರೆ ಇಂದಿಗೆ ಹತ್ತಾರು ವರ್ಷಗಳ ಹಿಂದೆ ಕೆಂಪೇಗೌಡ ರಸ್ತೆಯಲ್ಲಿರುವ ಡಿ.ಸಿ. ಕಚೇರಿಯ ನೆಲಮಹಡಿಯಲ್ಲಿ ಶ್ರೀ ವೈ.ಡಿ. ರವಿಶಂಕರ್ ರವರು ವಿಶ್ವ ಒಕ್ಕಲಿಗರ ವೇದಿಕೆಯ ಸಭೆ ಕರೆದಿದ್ದರು. ಅಂದು ನನಗೆ ಅವರನ್ನು ಪರಿಚಯಿಸಿದ್ದು ಶ್ರೀ ಎಸ್.ಸಿ. ಅಶೋಕ್ ಕುಮಾರ್ ಅಲ್ಲಿಂದಾಗಿ ಅವರ ಚಟುವಟಿಕೆಗಳನ್ನು ಗಮನಿಸುತ್ತಾ ಹಾಗೂ ಭಾಗವಹಿಸುತ್ತಾ ಬಂದಿದ್ದೇನೆ. ಸಂಕ್ರಾಂತಿ ಹಬ್ಬದ ಆಚರಣೆ, ದೆಹಲಿಯಲ್ಲಿ ನಡೆಸಿದ ಕೆಂಪೇಗೌಡ 500 ವರ್ಷಾಚರಣೆ ಇಂದು ದೂರದ ದುಬೈನಲ್ಲಿ ಕೆಂಪೇಗೌಡರ ಉತ್ಸವವನ್ನು ಅಂತರರಾಷ್ಟ್ರ ಮಟ್ಟಕ್ಕೆ ಕೊಂಡಯ್ದಿದ್ದಾರೆ. ದುಬೈನಲ್ಲಿ ಐನೂರಕ್ಕೂ ಹೆಚ್ಚು ಜನಗಳನ್ನು ಸೇರಿಸುವುದು ಕಷ್ಟದ ಕೆಲಸ ಆದರೆ ಶ್ರೀ ವೈ.ಡಿ. ರವಿಶಂಕರ್ ಮತ್ತು ಶ್ರೀ ರಂಗಣ್ಣನವರಿಗೆ ಸುಲಭದ ವಿಚಾರವಾಗಿದೆ.

2015 ರಲ್ಲಿ ನಿವೃತ್ತಿ ಹೊಂದಿದ ತರುವಾಯ ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ "ಒಕ್ಕಲಿಗರ ಪತ್ರಿಕೆ" ಗೆ ಗೌರವ ಸಂಪಾದಕನನ್ನಾಗಿ ನನ್ನನ್ನು ಸಂಘವು ನೇಮಿಸಿಕೊಂಡಿತು. 'ಒಕ್ಕಲಿಗರ ಪತ್ರಿಕೆ'ಯ ಗುಣಮಟ್ಟವನ್ನು ತಕ್ಕಮಟ್ಟಿಗೆ ಹೆಚ್ಚಿಸಿದೆ. ನಾಡಪ್ರಭು ಕೆಂಪೇಗೌಡ ಸಂಶೋಧನ ಕೇಂದ್ರವನ್ನಾಗಿ ಮಾಡುವ ಹೊಣೆಯನ್ನು ವಹಿಸಿದ್ದಾರೆ. ಅಲ್ಲಿ ಉತ್ತಮವಾದ ಗ್ರಂಥಾಲಯ ಸೇರಿದಂತೆ ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತ ಪರಿಸರವನ್ನು

ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಸ್ಪಂದಿಸುತ್ತಿರುವ ಸಂಘದ ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರುಗಳಿಗೆ ನಾನು ಆಭಾರಿಯಾಗಿದ್ದೇನೆ.

ಡಾ. ಬಿ.ಎಸ್. ಪುಟ್ಟಸ್ವಾಮಿ, ಶ್ರೀಮತಿ ಶಶಿಕಲಾ ಗೌಡ ಮತ್ತು ನಾನು ಶ್ರೀ ತಲಕಾಡು ಚಿಕ್ಕರಂಗೇಗೌಡರ ಅಧ್ಯಕ್ಷತೆಯಲ್ಲಿ ಇಂದಿಗೆ ಎರಡು ವರ್ಷಗಳ ಹಿಂದೆ ಸಭೆ ಸೇರಿ **ಕೃಷಿಕ ಸಾಹಿತ್ಯ ಪರಿಷತ್ತು** ಎಂಬ ಹೆಸರಿನಲ್ಲಿ ಕೃಷಿಕ ಸಮುದಾಯಕ್ಕೆ ನಮ್ಮಂತಹವರು ಸೇರಿ ಒಂದು ವೇದಿಕೆ ಸಜ್ಜುಗೊಳಿಸಿದ್ದೇವೆ. ಇನ್ನು ಮುಂದೆ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗೆ ಕೊಡುಗೆ ನೀಡಲು ಈ ವೇದಿಕೆಯನ್ನು ಸಜ್ಜುಗೊಳಿಸಿದ್ದೇವೆ. ಸದ್ದಿಲ್ಲದೆ, ಸುದ್ದಿ ಮಾಡದೆ ಗುರಿಸಾಧಿಸುತ್ತೇವೆ ಎಂಬ ಭರವಸೆ ನಮ್ಮಲ್ಲಿದೆ.

ನನ್ನ ಕುಟುಂಬವರ್ಗದ ನನ್ನ ಶ್ರೀಮತಿ ಎಸ್.ಡಿ. ವೇದಾವತಿ, ಎಂ.ಪಿ. ಯಶಸ್, ಶ್ರೀಮತಿ ಅರ್ಪಿತ ಯಶಸ್ ಮತ್ತು ಎಂ.ಪಿ. ಶ್ರೇಯಸ್ ರವರ ಸಹಕಾರವನ್ನು ಮರೆಯುವಂತಿಲ್ಲ.

03–02–2017 **ಡಾ. ಬಿ. ಪಾಂಡುಕುಮಾರ್**

ಪರಿವಿಡಿ



ನಾಡಪ್ರಭು ಕೆಂಪೇಗೌಡರ ಅಂತರರಾಷ್ಟ್ರೀಯ ಉತ್ಸವ ದುಬೈನಲ್ಲಿ ನಡೆದ ಸಮಾರಂಭದಲ್ಲಿ
ಡಾ॥ ಪಾಂಡುಕುಮಾರ್‌ರವರ "ಮಣ್ಣಿನ ದೀಪಗಳು" ಕೃತಿ ಬಿಡುಗಡೆ.



1600ವರ್ಷಗಳ ಒಕ್ಕಲಿಗರ ಇತಿಹಾಸ ಗ್ರಂಥ ಲೋಕಾರ್ಪಣೆ
ಅಂದಿನ ಮಹಾರಾಷ್ಟ್ರ ರಾಜ್ಯಪಾಲರಾಗಿದ್ದ ಶ್ರೀ ಎಸ್.ಎಂ. ಕೃಷ್ಣ ರವರಿಂದ



ಲೇಖಕರಾದ ಡಾ॥ ಬಿ. ಪಾಂಡುಕುಮಾರ್ ದಂಪತಿಗಳಿಗೆ ಸನ್ಮಾನ



ಡಾ|| ಬಿ. ಪಾಂಡುಕುಮಾರ್ ವಿರಚಿತ ಕರ್ನಾಟಕದ ರತ್ನಗಳು
ಕೃತಿ ಲೋಕಾರ್ಪಣ ಸಮಾರಂಭ ಹಾಗೂ ಲೇಖಕರ 60ನೇ ವರ್ಷದ
ಹುಟ್ಟು ಹಬ್ಬ ಆಚರಣೆಯ ಸಂದರ್ಭ.



ಕರ್ನಾಟಕದ ರತ್ನಗಳು ಕೃತಿ ಲೋಕಾರ್ಪಣೆ: ಡಾ. ಚಿದಾನಂದ ಮೂರ್ತಿಗಳು
ಶ್ರೀಶ್ರೀಶ್ರೀ ನಂಜಾವದೂತ ಸ್ವಾಮಿಗಳು ಮತ್ತು ಇತರರಿಂದ



ಒಕ್ಕಲಿಗರ ಪತ್ರಿಕೆಗೆ 110ವರ್ಷಗಳ ಸಂಭ್ರಮ:
ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಮತ್ತು
ಶ್ರೀಶ್ರೀಶ್ರೀ ನಿರ್ಮಲಾನಂದ ಸ್ವಾಮಿಜಿಗಳಿಂದ.



ದೆಹಲಿಯ ಕರ್ನಾಟಕ ಸಂಘದಲ್ಲಿ ನಡೆದ ಕೆಂಪೇಗೌಡರ 500ನೇ ವರ್ಷಾಚರಣೆಯ
ಸಂದರ್ಭದಲ್ಲಿ ಡಾ|| ಪಾಂಡುಕುಮಾರ್‌ರವರ
ನಾಡಪ್ರಭು ಕೆಂಪೇಗೌಡರ ಕೃತಿ ಬಿಡುಗಡೆ ಸಮಾರಂಭ



ಕೆ.ಹೆಚ್. ರಾಮಯ್ಯ

– ಡಾ. ಬೂದನೂರು ಪುಟ್ಟಸ್ವಾಮಿ

ರಾಷ್ಟ್ರದ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವಿಲ್ಲದೇ ದೇಶದ ಆಗುಹೋಗುಗಳ ಬಗೆಗೆ ಪರಿಜ್ಞಾನವಿಲ್ಲದೆ ದುಡಿತವೊಂದೇ ದೈವವೆಂದು ಬಗೆದು, ಅಜ್ಞಾನವೆಂಬ ಭಾರೀ ಕೂಪದಲ್ಲಿ ಬಿದ್ದು ತೊಳಲುತ್ತಿದ್ದ ವ್ಯವಸಾಯಗಾರರಾದ ಒಕ್ಕಲು ಮಕ್ಕಳನ್ನು ಉದ್ಧಾರ ಮಾಡಿ ವಿಜ್ಞಾನ, ವ್ಯವಹಾರ ಜ್ಞಾನ ಜ್ಯೋತಿಯಿಂದ ಅವರು ಪ್ರಗತಿಯ ಕಡೆ ನಡೆಯುವಂತೆ ಮಾಡುವ ಮಹಾದಾಸೆಯನ್ನು ಮನದಲ್ಲಿ ಹೊತ್ತು ಸರ್ಕಾರದಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರಾಗಿ, ಒಕ್ಕಲಿಗರ ಸಂಘದ ಸೇವೆಗೆ ಕೆ.ಹೆಚ್. ರಾಮಯ್ಯನವರು ತಮ್ಮನ್ನು ತೊಡಗಿಸಿಕೊಂಡರು. ಇಂತಹ ಸಂದರ್ಭದಲ್ಲಿ ತಮ್ಮ ಸಮುದಾಯವನ್ನು ಮುನ್ನಡೆಸಲು ಹಲವಾರು ಆದರ್ಶ ಸುಶಿಕ್ಷಿತರು, ಸಮಾಜ ಸೇವಕರು ಮುಂದೆ ಬಂದಂತೆ ಕೆಲವು ಸಿರಿವಂತ ದಾನಿಗಳು ಸಹಾಯ ಹಸ್ತವನ್ನು ಚಾಚಿದರು. ಸಮಾಜದ ಹಿರಿಯರು ಮುಂದೆ ಬಂದಾಗ ಹಲವಾರು ಯುವಕರು, ವಿದ್ಯಾವಂತ ನಾಯಕರು ಜನಾಂಗದ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಕಲ್ಲುದೇವರಹಳ್ಳಿಯ ಗಂಗಡಿಕಾರ ಒಕ್ಕಲಿಗ ಜನಾಂಗದ ಶ್ರೀ ಹನುಮಯ್ಯ ಮತ್ತು ಶ್ರೀಮತಿ ನಂಜಮ್ಮ ದಂಪತಿಗಳ ಸುಪುತ್ರನಾಗಿ 1879ರ ಜುಲೈ 12 ರಂದು ಜನಿಸಿದ ಕೆ.ಹೆಚ್. ರಾಮಯ್ಯ ಒಕ್ಕಲಿಗ ಸಮುದಾಯದ ಆಶಾಕಿರಣ ಹೆಮ್ಮೆಯ ಪುತ್ರರೆಂದು ಪರಿಗಣಿಸಲಾಗಿದೆ. ಕಲ್ಲುದೇವರಹಳ್ಳಿಯ ಜಮೀನ್ದಾರಿ ಕುಟುಂಬದ ಚಿಕ್ಕಣ್ಣಗೌಡರು ಸಭ್ಯಸ್ತರು. ಧಾನ–ಧರ್ಮಕ್ಕೆ ಹೆಸರಾಗಿದ್ದವರು. ಸುತ್ತಮುತ್ತಲಿನ ಹಳ್ಳಿಯವರ ಕಷ್ಟ ಸುಖಗಳಿಗೆ, ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿ ಎಲ್ಲರ ಅಚ್ಚುಮೆಚ್ಚಿನ ಯಜಮಾನರಾಗಿದ್ದರು. ವ್ಯವಸಾಯ ಪ್ರಧಾನ ಕುಟುಂಬವಾಗಿದ್ದ ಇವರು ಸಾಮಾನ್ಯ ರೈತ ಪಟ್ಟ ಬವಣೆಗಳನ್ನು ಪಡಬೇಕಾಗಿತ್ತು. ಭಾರತೀಯ ಕೃಷಿ ಮಳೆಯೊಡನೆ

ಆಡುವ ಜೂಜಾಟವೆಂಬಂತೆ ವರುಣನ ಅವಕೃಪೆಗೆ ಒಳಗಾಗಿ ಭೀಕರ ಬರಗಾಲ ಎದುರಿಸುವ ಪರಿಸ್ಥಿತಿ ಒದಗಿತು. ವಿಧಿಯಿಲ್ಲದೆ, ಒಲ್ಲದ ಮನಸ್ಸಿನಿಂದ ಕುಟುಂಬ ಪರಿವಾರ ಸಮೇತ ಬೆಂಗಳೂರಿಗೆ ವಲಸೆ ಬಂದರು.

ರಾಮಯ್ಯನವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿದರು. ಉನ್ನತ ವಿದ್ಯಾಭ್ಯಾಸಕ್ಕಾಗಿ ಮದ್ರಾಸ್‌ಗೆ ತೆರಳಿದರು. ಮದ್ರಾಸ್‌ನಲ್ಲಿ ಓದುತ್ತಿರುವಾಗಲೇ ಅವರ ಜೀವನದಲ್ಲಿ ದೊಡ್ಡ ಬದಲಾವಣೆಯುಂಟಾಯಿತು. 1900ರ ಸುಮಾರಿನಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಭಾಷಣಗಳು, ಅಡ್ಯಾರಿನಲ್ಲಿ ನೆಲಸಿದ್ದ ಅನಿಬೆಸೆಂಟರ ಉಪದೇಶಗಳು ರಾಮಯ್ಯನವರನ್ನು ನ್ಯಾಯಶಾಸ್ತ್ರದ ಅಭ್ಯಾಸದಿಂದ ತಮ್ಮ ಕಡೆಗೆ ಸೆಳೆದುಬಿಟ್ಟವು. ನ್ಯಾಯಶಾಸ್ತ್ರದ ಓದು ಮೂಲೆ ಪಾಲಾಯಿತು. ಬ್ರಹ್ಮಜ್ಞಾನ ವೇದಾಂತ ಪುಸ್ತಕಗಳು ಅವರ ಪಠ್ಯಗಳಾದವು. ರಾಮಯ್ಯನವರು ತಮ್ಮ ಶಿಕ್ಷಣವನ್ನು ಪೂರ್ತಿಗೊಳಿಸದೆ ಮೈಸೂರು ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿಕೊಂಡರು (ಗೃಹಕೃತ್ಯಗಳ ತುರ್ತುಕರೆ -ಯಿಂದಾಗಿ ಮುಂದೆ ಖಾಸಗಿಯಾಗಿ ಬಿ.ಎಲ್. ಪದವಿ ಮುಗಿಸಿದರು) ತಮ್ಮ ಶ್ರದ್ಧೆ ಪ್ರಾಮಾಣಿಕತೆ ಶಿಸ್ತು ಸಾಮರ್ಥ್ಯ ಮತ್ತು ಬದ್ಧತೆಗಳಿಂದಾಗಿ ಇವರು ಇಲಾಖೆಯ ಮೇಲಾಧಿಕಾರಿಗಳ ಸ್ನೇಹ ಮತ್ತು ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದರು. ಇವರ ಜನಸೇವೆಯ ದುಡಿತವನ್ನು ಅರ್ಥಮಾಡಿಕೊಂಡ ದಿವಾನರು, ರಾಮಯ್ಯನವರನ್ನು ರಾಜ್ಯಾದ್ಯಂತ ಪ್ರವಾಸ ಕಳುಹಿಸಿ ಜನಸಾಮಾನ್ಯರಲ್ಲಿ ಶಿಕ್ಷಣದ ಅರಿವನ್ನು, ಸ್ವಾಭಿಮಾನದ ಪ್ರಜ್ಞಾವಂತಿಕೆಯನ್ನು ಮೂಡಿಸುವ ಜವಾಬ್ದಾರಿಯನ್ನು ವಹಿಸಿದರು. ದಿವಾನ್ ಪಿ.ಮಾಧವರಾಯರ ಮೂಲಕ ರಾಮಯ್ಯನವರಿಗೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ರವರ ಪರಿಚಯವಾಯಿತು. ಸಮುದಾಯಗಳ ಅಥವಾ ವರ್ಗ (ಜಾತಿ)ಗಳ ಪ್ರಮುಖರು ತಮ್ಮ ವೈಯಕ್ತಿಕ ಉದಾಹರಣೆಗಳಿಂದ ತಮಲ್ಲಿಯ ಗುರುತಿಸಿ, ಹಿಂದುಳಿದವರನ್ನೂ ಪರಿವರ್ತಿಸಬಲ್ಲರು ಎಂಬುದು ಸಮಾಜ ಶಾಸ್ತ್ರಜ್ಞರ ಅಭಿಪ್ರಾಯ. ಅದರಂತೆ ಮೈಸೂರಿನಲ್ಲಾದ ಬದಲಾವಣೆಗಳನ್ನು ಇಂತಹ ನಾಯಕತ್ವವನ್ನು ರಾಮಯ್ಯನವರಲ್ಲಿ ಗುರುತಿಸಬೇಕಾಗುತ್ತದೆ. ರಾಮಯ್ಯನವರಿಗೆ ತಮ್ಮ ವರ್ಗದವರ ದು:ಸ್ಥಿತಿಯ ಬಗೆಗಿದ್ದ ಕಾಳಜಿಯನ್ನು ಗಮನಿಸಿದ ಮಹಾರಾಜರು ಮತ್ತು ಸರ್ದಾರ್ ಕಾಂತರಾಜ ಅರಸರು ಒಕ್ಕಲಿಗರ ಜನಾಂಗದ ಏಳಿಗೆಗಾಗಿ ದುಡಿಯಲು ಪ್ರೋತ್ಸಾಹಿಸಿದರು. ಸಹಕಾರ ಇಲಾಖೆಯ ಸೇವೆಯಲ್ಲಿದ್ದ ರಾಮಯ್ಯನವರನ್ನು ಲಾ (ಬಾರ್-ಅಟ್-ಲಾ) ಪದವಿ ಪಡೆಯಲು ಇಂಗ್ಲೆಂಡ್‌ಗೆ ಕಳುಹಿಸಿ ಅವರಿಂದ ಹೆಚ್ಚು ಸೇವೆ ಪಡೆಯಲು ಮತ್ತು ಹಿಂದುಳಿದ ವರ್ಗಗಳಲ್ಲಿ ಜಾಗೃತಿ ಉಂಟು ಮಾಡಲು ಬಳಸಿಕೊಂಡರು. ರಾಜ್ಯ ಹಿಂದುಳಿದ ಜನತೆಯ

ಜಾಗೃತಿ ಆಂದೋಲನದ ವಿಶೇಷ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದ ರಾಮಯ್ಯ, ತಮ್ಮ ಸೇವೆಯನ್ನು ಈ ಉದ್ದೇಶಕ್ಕಾಗಿ ಮೀಸಲಿಟ್ಟರು.

ಒಕ್ಕಲಿಗರ ಸಂಘದ ಪ್ರಮುಖ ಸಂಸ್ಥಾಪಕರಲ್ಲೊಬ್ಬರಾದ ರಾಮಯ್ಯನವರು ತಮ್ಮ ಸಮುದಾಯದವರಿಗೆ ಒದಗಿಸಬಹುದಾದ ಎಲ್ಲಾ ಸನ್ನಿವೇಶಗಳನ್ನು, ಒಕ್ಕಲಿಗರನ್ನು ಜಾಗೃತಗೊಳಿಸಲು ಬಳಸಿಕೊಂಡರು. ಮೃದು ಸ್ವಭಾವದ ರಾಮಯ್ಯನವರು ಸಮಾಜದಲ್ಲಿನ ನತದೃಷ್ಟರ ಬಗ್ಗೆ ಹೊಂದಿದ್ದ ಅನುಕಂಪ ಅವರಿಂದ ಮಹತ್ತರ ಕಾರ್ಯಗಳನ್ನು ನಿರ್ವಹಿಸಲು ಹಾಗೂ ತಮ್ಮನ್ನು ತೊಡಗಿಸಿಕೊಳ್ಳಲು ಕಾರಣವಾಯಿತು. ಉತ್ಸಾಹದಿಂದ ಎಡೆ ಬಿಡದೆ ಈ ಕಾರ್ಯದಲ್ಲಿ ತೊಡಗಿಸಿಕೊಂಡ ಅವರೊಬ್ಬ ಪರಿವರ್ತನೆಯ ಹರಿಕಾರ. ಗ್ರಾಮಗಳಲ್ಲಿನ ಹಬ್ಬಗಳಾಗಲಿ, ಜಾತ್ರೆ, ಮದುವೆ ಮುಂತಾದ ಯಾವುದೇ ಸಮಾರಂಭಗಳಲ್ಲಾದರೂ ರಾಮಯ್ಯನವರು, ತಮ್ಮ ವಿಶಿಷ್ಟ ವಾಕ್ ಶೈಲಿಯಲ್ಲಿ ಭಾಷಣಮಾಡಿ ಜನಾಂಗದ ಮಕ್ಕಳಿಗೆ ಶಿಕ್ಷಣ ಕೊಡಿಸುವ ಸಲುವಾಗಿ, ವಿದ್ಯಾಭ್ಯಾಸದ ಮಹತ್ವವನ್ನು ತಿಳಿಹೇಳಿ ಜನರ ಮನವೊಲಿಸುವ ಪ್ರಯತ್ನವನ್ನಾರಂಭಿಸುತ್ತಿದ್ದರು. ಹೀಗೆ ಅತ್ಯಂತ ಹೀನ ಸ್ಥಿತಿಯಲ್ಲಿದ್ದ ಒಕ್ಕಲಿಗರ ಏಳಿಗೆಗಾಗಿ ದುಡಿಯಲಾರಂಭಿಸಿದರು.

ಇಂಗ್ಲೆಂಡ್‌ನಲ್ಲಿ ಕೆ.ಹೆಚ್. ರಾಮಯ್ಯ

ರಾಮಯ್ಯನವರ ನಿಷ್ಕಾಮ ಸಾರ್ವಜನಿಕ ಸೇವೆಯನ್ನು ಗುರುತಿಸಿದ ಸರಕಾರ ಇಂಗ್ಲೆಂಡಿಗೆ ಹೆಚ್ಚಿನ ವ್ಯಾಸಂಗಕ್ಕೆ ಅವರನ್ನು ಕಳುಹಿಸಿಕೊಟ್ಟಿತು. 1913ರಲ್ಲಿ ಲಾ ಪದವಿಗಾಗಿ ಹೋಗಿದ್ದ ರಾಮಯ್ಯ ಅಲ್ಲಿಯೂ ಸಹ ತಮ್ಮ ರಾಜ್ಯದಲ್ಲಿನ ಬಡ ರೈತರ ಬಗ್ಗೆ ಚಿಂತನೆ ಮಾಡಿದರು. ಲಂಡನ್ ನಗರದಲ್ಲಿನ ಭಾರತೀಯರ ಸಮ್ಮೇಳನದಲ್ಲಿ ಮಾತನಾಡುತ್ತಾ ರೈತರ ಪರಿಸ್ಥಿತಿಯನ್ನು ವಿವರಿಸಿ, ರೈತಾಪಿ ವರ್ಗದ ಜನರನ್ನು ಸಂಘಟಿಸಲು ನಾವು ಮಾಡುತ್ತಿರುವ ಪ್ರಯತ್ನಗಳನ್ನು, ಮಹಾರಾಜರ ಆಸಕ್ತಿಯನ್ನು ವರ್ಣಿಸಿ ಒಕ್ಕಲಿಗರ ಸಂಘದ ಸ್ಥಾಪನೆಯ ಹಿನ್ನೆಲೆಯನ್ನು ಈ ರೀತಿ ವಿವರಿಸಿದರು. "ರಾಜ್ಯದ ರೈತ ವರ್ಗ ಕೇವಲ ಬೆರಳೆಣಿಕೆಯಷ್ಟು ಶಿಕ್ಷಿತರನ್ನು ಪಡೆದಿದ್ದು ಹೀನಾಯ ಸ್ಥಿತಿಯಲ್ಲಿದ್ದಾರೆ. ಇಂತಹ ಸ್ಥಿತಿಯಿಂದ ಅವರನ್ನು ಕದಲಿಸುವುದು ಅವಶ್ಯಕವೆಂದು ತಿಳಿದ ನಾವು ನಮ್ಮಲ್ಲಿನ ಬಡವರಿಗೆ ಶಿಕ್ಷಣದ ಸೌಲಭ್ಯ ಒದಗಿಸಲು ಹಾಗು ಅವರಲ್ಲಿ ಪರಿವರ್ತನೆ ಉಂಟುಮಾಡಲು ನಿರ್ಧರಿಸಿದೆವು. ಅದರಂತೆ ಒಕ್ಕಲಿಗ ಸಮಾವೇಶ ನಡೆದು ಸಂಘ ಸ್ಥಾಪನೆಯಾಯಿತು" ಎಂದು ಹೇಳಿದರು. ರಾಮಯ್ಯನವರ ಇಂಗ್ಲೆಂಡಿನ ಭೇಟಿಯಿಂದಾಗಿ ಮೂರು ವರ್ಷ ರಾಜ್ಯದಿಂದ ದೂರವಿರಬೇಕಾದರೂ ಅವರು

ತಮ್ಮ ಜನರ ಏಳಿಗೆಯ ಉದ್ದೇಶದಿಂದ ವಿಮುಖರಾಗಿರಲಿಲ್ಲ. ಸದಾಕಾಲ ತಮ್ಮ ಜನರ ಏಳಿಗೆಯ ಬಗ್ಗೆ ಚಿಂತಿಸುತ್ತಾ ಅವರನ್ನು ಮೇಲ್ಮಟ್ಟಕ್ಕೇರಿಸುವ ಕಾರ್ಯದಲ್ಲಿ ತೊಡಗಿದ್ದರು. ಮೈಸೂರಿನ ಹಿಂದುಳಿದವರ ಚಳವಳಿಯಲ್ಲಿ ರಾಮಯ್ಯನವರನ್ನು ನೆನೆಯಬೇಕಾದದ್ದು ಅವಶ್ಯ. ಅದರಲ್ಲಿಯೂ ಚಳವಳಿಯ ಆರಂಭದ ಹಂತದಲ್ಲಿ ಅವರ ಕೊಡುಗೆ ಅಪಾರ. ರಾಮಯ್ಯನವರು ಹಳ್ಳಿ ಜನರ ಮೂಢ ಕಂದಾಚಾರಗಳನ್ನು, ಅನಿಷ್ಟ ಪದ್ಧತಿಗಳನ್ನು ಖಂಡಿಸಲು ಚಾಟಿಯ ಏಟಿನಂತೆಯೇ ಪರಿಣಾಮವಾಗುವಂತಹ ಮಾತುಗಳನ್ನಾಡುತ್ತಿದ್ದರು. ಜತೆಜತೆಗೆ ವಿಧಾಯಕವಾಗಿ ಶಿಕ್ಷಣದ ಮುನ್ನಡೆಗೆ ಅನಾಥಾಲಯಗಳನ್ನು ಶಾಲೆಗಳನ್ನು ಸ್ಥಾಪಿಸುವ ಕಾಯಕದಲ್ಲಿ ತೊಡಗಿದ್ದರು.

ರಾಮಯ್ಯನವರು ಮಹಾರಾಜರ ಆದೇಶದಂತೆ ತಮ್ಮ ಲಾ ಪದವಿ-ಯನ್ನು ಪಡೆಯಲು ಇಂಗ್ಲೆಂಡಿಗೆ ಹೋಗಿದ್ದರೂ, ಅಲ್ಲಿಯೂ ಅವರು ತಮ್ಮ ಜನರ ಏಳಿಗೆಯ ಬಗ್ಗೆ ಚಿಂತಿಸುತ್ತಿದ್ದರು. 1919ರಲ್ಲಿ ರಾಮಯ್ಯನವರನ್ನು ಅಲ್ಲಿನ ಓಚಿಣುಂಟಿಚಿಟ ಖಟಿಜುಚಿಟಿ ಂಠಿಭಿಚಿಣುಂಟಿ ಸಭೆಗೆ ಉಪನ್ಯಾಸಕ್ಕಾಗಿ ಆಮಂತ್ರಿಸಿತ್ತು. ರಾಮಯ್ಯನವರ ಭಾಷಣದ ವಿಷಯ "ಮೈಸೂರಿನ ರೈತರ ಸಹಾಯಕ್ಕಾಗಿ" ಎಂಬುದು. ಸಭೆಯಲ್ಲಿ ಮಾತನಾಡುತ್ತಾ, ರಾಜ್ಯದಲ್ಲಿ ಬ್ರಾಹ್ಮಣೇತರ ಚಳವಳಿ ನಡೆಯುತ್ತಿದ್ದು, ಅದಕ್ಕಾಗಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿದ್ದರೂ, ಒಕ್ಕಲಿಗರು ಗಾಢ ನಿದ್ದೆ ಮಾಡುತ್ತಾ, ಅವರಿವರ ಬಗ್ಗೆ ಇಲ್ಲ ಸಲ್ಲದ ಹರಟೆ ಹೊಡೆಯುತ್ತಾ, ಆಧುನಿಕತೆಯ ಅರಿವಿಲ್ಲದೆ ಮೌಢ್ಯದಲ್ಲೆ ಮುಳುಗಿ ಕಾಲಹರಣ ಮಾಡುತ್ತಿದ್ದಾರೆಂದು ವಿಷಾದಿಸಿ, ಒಕ್ಕಲಿಗರು ಎಚ್ಚೆತ್ತುಕೊಂಡು ವಿದ್ಯಾವಂತರಾದ ತಾವುಗಳು ಸಂಘದ ಸೇವೆಯಲ್ಲಿ ಭಾಗಿಗಳಾಗಬೇಕೆಂದು ಮನವಿ ಮಾಡಿಕೊಂಡರು. ಈ ಬಗ್ಗೆ ಲಂಡನ್‌ನ ಡೈಲಿ ಪ್ರೋಸ್ಟ್ ಪತ್ರಿಕೆ ವರದಿ ಮಾಡುತ್ತಾ, ರಾಮಯ್ಯನವರ ಮಾತುಗಳು ಅಲ್ಲಿ ನೆರೆದಿದ್ದವರ ಮನ ಕಲಕಿತ್ತೆಂದು ತಿಳಿಸಿದೆ. ರಾಮಯ್ಯನವರು ಉನ್ನತ ವ್ಯಾಸಂಗವನ್ನು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ನಡೆಸಿ, ಅಲ್ಲಿಯ ರೈತರು, ಭಾರತೀಯ ರೈತರ ಸ್ಥಿತಿಗಳನ್ನು ಅಭ್ಯಸಿಸಿ, ಭಾರತೀಯ ರೈತರು ಹಿಂದುಳಿಯಲು ವಿದ್ಯಾಭ್ಯಾಸವೇ ಕಾರಣವೆಂದು ತಿಳಿದಿದ್ದರು. ಪ್ರಾಶ್ಚಾತ್ಯರ ಅಭಿವೃದ್ಧಿಯಲ್ಲಿ ವಿದ್ಯೆ ಅಥವಾ ಶಿಕ್ಷಣ ವಹಿಸಬಹುದಾದ ಪಾತ್ರವನ್ನು ಮನಗಂಡು "ವಿದ್ಯೆ ಸಕಲ ಸಮಸ್ಯೆಗಳ ಸಂಜೀವಿನಿ" ಎಂಬ ಅಭಿಪ್ರಾಯಕ್ಕೆ ಬಂದರು. ಪದವಿ ಪಡೆದ ಯುವಕರಿಗೆ ಅಪಾರ ಬೇಡಿಕೆ ಇತ್ತು. ಭಾರತೀಯರ ಕುಲ ಕಸುಬು ವೃತ್ತಿಗಳಲ್ಲಿ ಶಿಕ್ಷಣದ ಅವಶ್ಯಕತೆ ಇತ್ತು. ವ್ಯವಸಾಯ ಗುಡಿಕೈಗಾರಿಕೆ ವ್ಯಾಪಾರ ಮುಂತಾದ ಕಸುಬುಗಳಿಗೆ ತಾಂತ್ರಿಕತೆಯನ್ನು ಬಳಸಿ ಅಭಿವೃದ್ಧಿ ಪಡಿಸಲು ಹಾಗು ಅಭಿವೃದ್ಧಿ ಕಾಣಲು ಶಿಕ್ಷಣವೇ ಮೂಲ ಮಂತ್ರ ಎಂದು ತಿಳಿದಿದ್ದ ಕೆ.ಹೆಚ್.

ರಾಮಯ್ಯನವರು ತಮ್ಮ ಓದು, ಪದವಿ ಬದಿಗಿರಿಸಿ ಜನಾಂಗದ ಉದ್ಧಾರಕ್ಕೆ ಶಿಕ್ಷಣವೇ ಮುಖ್ಯವೆಂದೂ, ಆ ನಿಟ್ಟಿನಲ್ಲಿ ತನ್ನ ಕಲ್ಪನಾ ವ್ಯವಸ್ಥೆಯನ್ನು ತಲೆಯಲ್ಲಿ ತುಂಬಿಕೊಂಡು ಭಾರತಕ್ಕೆ ಮರಳಿದಾಗ ಯಾವ ಯಾವ ಯೋಜನಾ ಕಾರ್ಯಕ್ರಮಗಳನ್ನು ನಿರ್ವಹಿಸಬೇಕೆಂದು ಮನದಲ್ಲೇ ಅದುಮಿಟ್ಟರು. ಲಂಡನ್‌ನಲ್ಲಿ ಒಂದು ಸಂಜೆ ವೇಳೆ ಲೋಕಾಭಿರಾಮರಾಗಿ ಮಾತಾಡುತ್ತಾ ಇರುವ ಸಂಧರ್ಭ. ಆತ್ಮೀಯಗೆಳೆಯರಾದ ಬಿ. ಪುಟ್ಟಯ್ಯ ಹಾಗೂ ಮೈಸೂರು ಸಂಸ್ಥಾನದ ಯುವರಾಜರಾದ ಶ್ರೀಕಂಠೀರವ ನರಸಿಂಹರಾಜ ಒಡೆಯರ್ (ನಾಲ್ವಡಿ ಕೃಷ್ಣರಾಜಒಡೆಯರ ಸಹೋದರರು) ಮೂವರು ಸೇರಿ ಚರ್ಚಿಸುತ್ತಿರುವಾಗ ನಿಮ್ಮ ಕೋಮಿನವರಿಗೆ ಏನು ಸಹಕಾರ ಬೇಕೋ ಸರಕಾರದ ವತಿಯಿಂದ ನಾನು ಮಾಡಿಸಿಕೊಡುತ್ತೇನೆ ಎಂಬ ಅಭಯ ಸಿಕ್ಕೊಡನೆ ಕೆ.ಹೆಚ್. ರಾಮಯ್ಯನವರು ಎಚ್ಚೆತ್ತು ಒಕ್ಕಲಿಗರ ವಿದ್ಯಾರ್ಜನೆಗೆ ಬೇಕಾದ ಒಕ್ಕಲಿಗರ ಸಂಘ ಮತ್ತು ಒಕ್ಕಲಿಗರ ಹಾಸ್ಟೆಲ್ ತೆರೆಯಲು ಅಂದೇ ಸಂಕಲ್ಪಮಾಡಿಕೊಂಡರು.

ಕೆ.ಹೆಚ್. ರಾಮಯ್ಯನವರ ಮನವಿ ಮೇರೆಗೆ ಒಕ್ಕಲಿಗರ ಸಂಘಕ್ಕೆ ಜಮೀನು ಮಂಜೂರು ಮಾಡಲು ದಿವಾನರು ವೈಯಕ್ತಿಕವಾಗಿ ಬಹಳ ಮುತುವರ್ಜಿ ವಹಿಸಿ, ಜಿಲ್ಲಾಧಿಕಾರಿಗಳಿಗೆ ಸೂಕ್ತ ಜಾಗ ನೀಡಲು ಸೂಚಿಸಿ ಮಹಾರಾಜರ ಜೊತೆ ಚರ್ಚಿಸಿ, ಒಕ್ಕಲಿಗರ ಸಂಘ ಸ್ಥಾಪನೆಯ ಧ್ಯೇಯೋದ್ದೇಗಳು, ಹಿಂದುಳಿದ ಜನಾಂಗಗಳ ಏಳಿಗೆಗೆ ಸರ್ಕಾರ ಮಾಡಬೇಕಾದ ಕರ್ತವ್ಯಗಳ ಬಗ್ಗೆ, ಸಾಮಾಜಿಕ ನ್ಯಾಯಗಳ ಬಗ್ಗೆ ಇದ್ದ ಮಹಾರಾಜ ಕಾಳಜಿಯಿಂದ ಒಕ್ಕಲಿಗರ ಸಂಘಕ್ಕೆ ಲಾಲ್‌ಬಾಗ್ ಫೋರ್ಟ್ ರಸ್ತೆಯ ಪಕ್ಕದಲ್ಲಿ 13 ಎಕರೆ, 26 ಗುಂಟೆ ಜಮೀನನನ್ನು ಕೊಡಿಸುವಲ್ಲಿ ದಿವಾನರ ಪಾತ್ರ ಬಹಳವಾದದು ಹಾಗು ಅಭಿನಂದನಾರ್ಹದದು.

1917ರಲ್ಲಿ ಬ್ಯಾರಿಸ್ಟರ್ ಪದವಿಯೊಂದಿಗೆ ತಾಯ್ನಾಡಿಗೆ ಮರಳಿದ ರಾಮಯ್ಯನವರು ವಿದೇಶದಲ್ಲಿದ್ದ ಕಾಲದಲ್ಲಿ ಅಲ್ಲಿಯ ಜನರ ಗಟ್ಟಿ ಮೌಲ್ಯಗಳನ್ನು ಮೆಚ್ಚಿದರು. ಅವರಂತೆ ನಾವೂ ಕೂಡ ಬೆಳೆಯಬೇಕೆಂದು ಹಂಬಲಿಸಿದರು. ಆಂಗ್ಲರ ಸ್ವಾತಂತ್ರ್ಯಪ್ರಿಯತೆ ರಾಮಯ್ಯನವರಿಗೆ ಬೇಗ ಸ್ಪೂರ್ತಿ ನೀಡಿದ ಸಂಗತಿಯಾಯಿತು. ಹೀಗೆ ವಿದೇಶ ವ್ಯಾಸಂಗ ಪ್ರವಾಸ ರಾಮಯ್ಯನವರಿಗೆ ಬಡವರ ಸೇವೆಗಾಗಿ ಹೊಸ ದೃಷ್ಟಿಕೋನವನ್ನು ನೀಡಿತು. ಇದೇ ಸಮಯಕ್ಕೆ ಸಂಸ್ಥಾನದ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರನ್ನಾಗಿ ರಾಮಯ್ಯನವರನ್ನು ನೇಮಿಸಿದರು. ರಾಮಯ್ಯನವರು ಪ್ರಾಮಾಣಿಕ ದುಡಿಮೆ, ಬದ್ಧತೆಯಿಂದ ಕೈಗಾರೀಕರಣಕ್ಕೆ ನೀಡಿದ

ಹೊಸ ಚಾಲನೆಯಿಂದ ಉಪ ನಿರ್ದೇಶಕರಾಗಿ ಬಡ್ತಿ ಪಡೆದರು. ರಾಮಯ್ಯನವರು ಜನಹಿತಾಕಾಂಕ್ಷಿ ಅಧಿಕಾರಿಯಾದುದರಿಂದ ಜತೆಗೆ ತಮ್ಮ ಪ್ರಾಮಾಣಿಕತೆ ಆಳವಾದ ಜ್ಞಾನಗಳಿಂದಾಗಿ ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್‌ರ ಆತ್ಮೀಯ ಗೆಳೆತನಕ್ಕೆ ಪಾತ್ರರಾದರು. ರಾಮಯ್ಯನವರು ತಮ್ಮ ಮಾತುಗಳಿಂದ ರೈತ ವರ್ಗವನ್ನು ಬಡಿದೆಬ್ಬಿಸುವ ಸಾಹಸ ಮಾಡಬೇಕಾಯಿತು. ಅವರ ಹರಿತವಾದ ಭಾಷಣಗಳಲ್ಲಿ ಕಠಿಣವಾದ ಮಾತುಗಳ ಬಳಕೆಗೂ ಹಿಂಜರಿಯಲಿಲ್ಲ. ಅವರನ್ನು ಛೇಡಿಸಲು ರೈತ ತನ್ನ ಎತ್ತುಗಳಿಗಿಂತ ಭಿನ್ನವಾಗಿಲ್ಲವೆಂದು "ಮುಂದೆ ಎರಡೆತ್ತು ಹಿಂದೆ ಒಂದೆತ್ತು", ಅಂದರೆ ಹೇರಿಗೆ ಮುಂದೆ ಕಟ್ಟಿದ ಎರಡೆತ್ತುಗಳಂತೆಯೇ ರೈತನೂ ಸಹ ಎತ್ತಿನಂತೆಯೇ ಅಸಹಾಯಕನಾಗಿದ್ದನೆಂದು ತಿಳಿದ್ದಿದ್ದರು. ತಮ್ಮ ಸಮುದಾಯದವರು ಒದಗಿಸಬಹುದಾದ ಎಲ್ಲಾ ಅವಕಾಶಗಳನ್ನು ಒಕ್ಕಲಿಗರ ಸಂಘದ ಏಳಿಗೆಗಾಗಿ ಬಳಸಿಕೊಂಡರು. ಹಬ್ಬ ಜಾತ್ರೆ ಮದುವೆ ಯಾವ ಸಂದರ್ಭವಾದರೂ ರಾಮಯ್ಯನವರದು ಒಂದೇ ಮಂತ್ರ, ಅದೇ ವಿದ್ಯೆಯ ಮಂತ್ರ. ರಾಮಯ್ಯನವರ ಜೊತೆಯಲ್ಲಿ ದುಡಿದ ಮಹನೀಯರ ಸಂಖ್ಯೆ ಬಹಳ. ಸ್ವಯಂ ಸೇವಕರಾಗಿ ಹಳ್ಳಿ-ಹಳ್ಳಿಗಳಲ್ಲಿ ಸಂಚರಿಸಿ ತಮ್ಮ ವೃತ್ತಿ ಬಾಂಧವರ, ಸಂಬಂಧಿಕರ ಮಕ್ಕಳಲ್ಲದೆ, ಅಲ್ಲಿನ ಉಳಿದ ಜನಾಂಗದ ಮಕ್ಕಳನ್ನು ಶಾಲೆಗೆ ಸೇರುವಂತೆ ಪ್ರೇರೇಪಿಸಿ, ಯಶಸ್ವಿಯಾದ ಈ ಮಹನೀಯರ ಪಾತ್ರವನ್ನು ಅಂದಿನ ಮೈಸೂರು ಸಂಸ್ಥಾನವೇ ಕೊಂಡಾಡಿತು. ಒಕ್ಕಲಿಗರ ಪತ್ರಿಕೆ ಮತ್ತೊಂದು ಕಡೆ ಬರೆದಿರುವಂತೆ ಶ್ರೀಯುತರಾದ ರಾಮಯ್ಯನವರು, ಸುಬ್ಬಯ್ಯ, ರಾವ್‌ಸಾಹೇಬ್ ಚನ್ನಯ್ಯನವರೂ ಅವಕಾಶ ದೊರಕಿದಾಗಲೆಲ್ಲಾ ಉತ್ಸಾಹಪೂರಿತವಾದ ಉಪನ್ಯಾಸಗಳನ್ನು ನೀಡುತ್ತಿದ್ದರು. ಅವರು ಸರ್ಕೀಟ್ ಹೋದಾಗಲೂ, ವಿವಾಹ ಸಮಾರಂಭಗಳಿಗೆ ಹೋದಾಗಲೂ, ತಾಲೂಕ್, ಡಿಸ್ಟ್ರಿಕ್ಟ್ ಬೋರ್ಡ್‌ಗಳಲ್ಲಿ ನಡೆಯುವ ಸಭೆಗಳಲ್ಲಿಯೂ, ವಿದ್ಯಾರ್ಥಿ ಸಭೆಗಳಲ್ಲಿಯೂ ಹೃದಯಂಗಮವಾದ ಉಪನ್ಯಾಸಗಳನ್ನು ಕೊಟ್ಟು ಜನತೆಗೆ ಸಂಘದ ಮೇಲೆ ಪರಿಪೂರ್ಣವಾದ ಅಭಿಮಾನ ಪ್ರೇಮ ಉಕ್ಕಿ ಬರುವಂತೆ ಮಾಡಿ ಸಫಲರಾಗಿದ್ದರು.

ರಾಮಯ್ಯನವರಂತೆ ಒಕ್ಕಲಿಗರ ಏಳಿಗೆಗೆ ದುಡಿದವರು ಬಿ. ಪುಟ್ಟಯ್ಯನವರು. ತಮ್ಮ ಹುದ್ದೆಯನ್ನು ತೊರೆದು ಒಕ್ಕಲಿಗರ ಪತ್ರಿಕೆಗೆ ಮೊದಲ ಸಂಪಾದಕರಾಗಿ ಪತ್ರಿಕೆ ನಡೆಸಲು ಅಪಾರ ಶ್ರಮಪಟ್ಟವರು. ಸದಾ ನಷ್ಟದಲ್ಲಿದ್ದ ಪತ್ರಿಕೆಗಾಗಿ ಸತತವಾಗಿ ತಮ್ಮ ತನು-ಮನ-ಧನವನ್ನು ಧಾರೆಯೆರೆಯಬೇಕಾಯಿತು. ದೇಶ ವಿದೇಶಗಳಲ್ಲಿ ಮುದ್ರಣ ಜ್ಞಾನದ ಬಗ್ಗೆ, ಪತ್ರಿಕೆಗಳ ವಿಷಯದ ಬಗ್ಗೆ, ಆಳವಾಗಿ ಅಧ್ಯಯನ ನಡೆಸಿ ಆ ಎಲ್ಲಾ ಅನುಭವ ಪರಿಶ್ರಮವನ್ನು ಒಕ್ಕಲಿಗರ ಪತ್ರಿಕೆಗೆ ಪ್ರಯೋಗಿಸಿದರು. ಒಕ್ಕಲಿಗರ ಪತ್ರಿಕೆ ಅರ್ಧ ಶತಮಾನದ ಕಾಲ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೆ ಅದಕ್ಕೆ ಪುಟ್ಟಯ್ಯನವರ ಅಮೂಲ್ಯ ನಿಸ್ವಾರ್ಥ ಸೇವೆ ಹಾಗೂ

ಪ್ರಾರಂಭದಲ್ಲೆ ಹಾಕಿದ್ದ ಭದ್ರ ಬುನಾದಿ ಕಾರಣವಷ್ಟೇ ಹೊರತು ಬೇರಾವ ಕಾರಣವೂ ಇಲ್ಲ.

ಸಹಕಾರ ಸಂಘಗಳ ರಿಜಿಸ್ಟ್ರಾರ್

ರೈತರು ಬೆಳೆಯುವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಿ ಬೆಲೆ ನಿಗದಿ ಪಡಿಸುವುದು, ದಲ್ಲಾಳಿಗಳಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ ಸಹಕಾರ ಸಂಘಗಳನ್ನು ಸ್ಥಾಪಿಸುವ ಕೆಲಸವನ್ನು ಸರಕಾರ ಆರಂಭಿಸಿತು. 1922ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ (Registrar of Co-Operative Societies) ಆಗಿ ರಾಮಯ್ಯನವರನ್ನು ಸರಕಾರ ನೇಮಿಸಿತು. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತೊಮ್ಮೆ ಸಹಕಾರ ತತ್ವದ ತಳಹದಿಯ ಮೇಲೆ ಸಂಘಟನೆ ಮಾಡುವ ಸದವಕಾಶ ತಮ್ಮನ್ನು ಹುಡುಕಿಕೊಂಡು ಬಂದದ್ದು ಸವಾಲಾಗಿ ತೆಗೆದುಕೊಂಡರು. ಅಧಿಕಾರಿ ಎನ್ನುವುದಕ್ಕಿಂತ ಸಮಾಜ ಸೇವಕರೆಂದೇ ಜನಮನವನ್ನು ಸೂರೆಗೊಂಡಿದ್ದ ರಾಮಯ್ಯನವರಿಗೆ ಜನರನ್ನು ಈ ಕೆಲಸಕ್ಕೆ ತೊಡಗಿಸುವುದು ಕಷ್ಟವೆನಿಸಿರಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಸಹಕಾರಿ ಆಂದೋಳನದ ಪ್ರವರ್ತಕರಾದರು.

ಆದಿಚುಂಚನಗಿರಿ ಮಠ ಮತ್ತು ಕೆ.ಹೆಚ್. ರಾಮಯ್ಯನವರು

ಸಹಕಾರ ಸಂಘಗಳ ಇಲಾಖೆಯ ಜೊತೆಗೆ ಮುಜರಾಯಿ ಇಲಾಖೆ ಕೆಲಸವನ್ನು ನೋಡಿಕೊಳ್ಳುತ್ತಿದ್ದ ರಾಮಯ್ಯನವರಿಗೆ ಧಾರ್ಮಿಕ-ದತ್ತಿ ಸಂಸ್ಥೆಗಳಲ್ಲೂ ತಲೆದೋರುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಬೇಕಾಗುತ್ತಿತ್ತು. ಅವುಗಳಲ್ಲಿ ಮುಖ್ಯವಾದವು ಶ್ರವಣಬೆಳಗೊಳದ ಜೈನಪೀಠ, ಆದಿಚುಂಚನಗಿರಿ ಮಠದ ಪೀಠಾಧಿಕಾರಿಯ ಆಯ್ಕೆ ಇನ್ನು ಮುಂತಾದ ವಿವಾದಗಳಲ್ಲಿ ರಾಮಯ್ಯನವರು ಪ್ರದರ್ಶಿಸಿದ್ದ ಕರ್ತೃತ್ವ ಶಕ್ತಿ, ವಿವೇಚನೆ ನ್ಯಾಯ ಪಕ್ಷಪಾತದಿಂದ ಕೈಗೊಂಡ ನಿಲುವುಗಳು ಅವರ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಸಾಕ್ಷಿಗಳಾಗಿವೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಬೆಳ್ಳೂರು ಹೋಬಳಿಯಲ್ಲಿರುವ ಆದಿಚುಂಚನಗಿರಿ ಮಠ ಒಕ್ಕಲಿಗ ಸಮುದಾಯದ ಅತ್ಯಂತ ಪ್ರಾಚೀನ ಏಕೈಕ ಧಾರ್ಮಿಕ ಕೇಂದ್ರವಾಗಿದೆ. ಅದು ಸುಮಾರು 1500 ವರ್ಷಗಳ ಇತಿಹಾಸ ಹೊಂದಿರುವುದಾಗಿ ಅನೇಕ ದಂತಕಥೆಗಳು, ಪುರಾಣ ಕಥೆಗಳು ಹಾಗೂ ವಿಪುಲವಾದ ಜಾನಪದ ಸಾಹಿತ್ಯ ಸ್ಥಳ ಮಹಿಮೆಯನ್ನು ವಿವರಿಸುತ್ತವೆ. ಇದಕ್ಕೆ ಪೂರಕವಾಗಿ ಕೆಲವು ಶಾಸನಗಳ ಸಾಕ್ಷ್ಯಾಧಾರಗಳು ಮಾಹಿತಿ ಒದಗಿಸುತ್ತವೆ. ಶೈವಧರ್ಮದ ನಾಲ್ಕು ಶಾಖೆಗಳಾದ ಪಾಶುಪತ, ಕಾಳಮುಖ, ಕಾಪಾಲಿಕ ಮತ್ತು ಲಕುಲೀಶ ಎಂಬ ಪಂಥಗಳು ಅಸ್ತಿತ್ವದಲ್ಲಿವೆ. ಆದಿಚುಂಚನಗಿರಿ ಮಠವು ಕಾಪಾಲಿಕ ಪಂಥಕ್ಕೆ ಸೇರಿದ್ದು, ಮಠದ ಗುರುಪರಂಪರೆ ನಾಥಪಂಥವನ್ನು ಅನುಸರಿಸಿ

ಕಾಲಕಾಲಕ್ಕೆ ಕಾಪಾಲಿಕ ಪಂಥದ ಆಚರಣೆಗಳನ್ನು ಮಠ ಸರಳಗೊಳಿಸಲಾರಂಭಿಸಿತು.

ಆದಿಚುಂಚನಗಿರಿ ಮಠದ 67ನೇ ಗುರುವಾದ ಶ್ರೀ ತೇಜನಾಥಸ್ವಾಮಿಗಳು ದೈವಾಧೀನರಾದ ಮೇಲೆ ಉತ್ತರಾಧಿಕಾರತ್ವದ ವಿಷಯದಲ್ಲಿ ದ್ವಂದ್ವ ಉಂಟಾಗಿ ಮಠ ಅಸಹಾಯಕ ಪರಿಸ್ಥಿತಿಯಲ್ಲೆ ಕಾಲ ದೂಡಬೇಕಾಯಿತು. ಆರಂಭದಲ್ಲಿ ಆದಿಚುಂಚನಗಿರಿ ಮಠವು ಯಾವುದೇ ಒಂದು ಸಮುದಾಯಕ್ಕಾಗಲೀ, ಧರ್ಮಕ್ಕಾಗಲೀ ಮೀಸಲಾಗಿರಲಿಲ್ಲ. ಈ ಕಾರಣಕ್ಕಾಗಿಯೇ 67ನೇ ಗುರು ಶ್ರೀ ತೇಜನಾಥಸ್ವಾಮಿಗಳು ಉತ್ತರಾಧಿಕಾರತ್ವದ ಬಗ್ಗೆ "ಇದು ಒಕ್ಕಲಿಗರ ಮಠ ಹೇಗೊ ನಮ್ಮ ಕೈಗೆ ಬಂದಿತು. ಸ್ವಲ್ಪ ಕಾಲ ಅಡಳಿತ ನಡೆಸಿದೆವು. ಮಠದ ಹಕ್ಕುದಾರರಾದ ಒಕ್ಕಲಿಗರೇ ಮುಂದಿನ ಗುರು ಪರಂಪರೆಯನ್ನು ಏರ್ಪಡಿಸಿಕೊಳ್ಳಲಿ" ಎಂದು ಹೇಳಿ 1924ರಲ್ಲಿ ನಿಧನರಾದರು. ಈ ಗೊಂದಲದ ಪರಿಸ್ಥಿತಿಯನ್ನು ಹೋಗಲಾಡಿಸಲು ಒಕ್ಕಲಿಗರ ಸಮುದಾಯದ ಮುಖಂಡರಾದ ಕೆ.ಹೆಚ್. ರಾಮಯ್ಯನವರು ಒಕ್ಕಲಿಗರ ಅನೇಕ ಗಣ್ಯರನ್ನು ಸಂಪರ್ಕಿಸಿ ಇದರ ಬಗ್ಗೆ ನಿರ್ಣಯ ತೆಗೆದುಕೊಂಡರು. ಮಠದ ಪೀಠಾಧಿಕಾರಿಯ ಆಯ್ಕೆಯ ಬಗ್ಗೆ ಪ್ರಯತ್ನ ಪ್ರಾರಂಭವಾಯಿತು. ಮಠವು ಎಲ್ಲಾ ಸಮುದಾಯಗಳಿಗೂ ಸೇರಿದ್ದರಿಂದ ಪೀಠಾಧಿಕಾರಿಯ ವಿಷಯದ ಬಗ್ಗೆ ಚರ್ಚಿಸಲು ಎಲ್ಲಾ ಸಮುದಾಯದ ಜನತೆ ಶ್ರೀಕ್ಷೇತ್ರದಲ್ಲಿ ಸಭೆ ಸೇರುವಂತೆ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು.

1925ರ ಫೆಬ್ರವರಿ 21 ರಂದು ಸಭೆ ನಡೆದು ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದವು. ಸುದೀರ್ಘ ಚರ್ಚೆಯ ನಂತರ ಅಂತಿಮ ನಿರ್ಣಯ ಕೈಗೊಳ್ಳಲಾಗದೆ 1926ರವರೆಗೂ ಇದೇ ಸ್ಥಿತಿ ಮುಂದುವರೆಯಿತು. ಈ ಸಮಸ್ಯೆಯ ಪರಿಹಾರಕ್ಕೆ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಸನ್ನಿಧಾನದಲ್ಲಿ ಮನವಿ ಮಾಡಲಾಯಿತು. ಮಹಾರಾಜರು ಮತ್ತು ದಿವಾನರಾದ ಮಿರ್ಜಾ ಇಸ್ಮಾಯಿಲ್ ಸಾಹೇಬರು ಈ ವಿಷಯುದ ಬಗ್ಗೆ ಚರ್ಚಿಸಿ ಉತ್ತರಾಧಿಕಾರಿಯನ್ನು ನೇಮಿಸಲು ಒಂದು ಸಮಿತಿ ನೇಮಕ ಮಾಡಿದರು. ಆದರೆ ಈ ಸಮಿತಿ ಧರ್ಮ ಮತ್ತು ನ್ಯಾಯಯುತವಾದ ವ್ಯಕ್ತಿಯನ್ನು ಮಾತ್ರ ನೇಮಿಸತಕ್ಕದೆಂದು ತಿಳಿಸಿತು. ಈ ಕಾರ್ಯವನ್ನು ನಿಯೋಜಿಸಲು ಪ್ರತಿನಿಧಿಯಾಗಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಮತ್ತು ಒಕ್ಕಲಿಗ ನಾಯಕರಾದ ಕೆ.ಹೆಚ್. ರಾಮಯ್ಯ ಮತ್ತು ಮದ್ದೂರಿನ ಎಂ.ಸಿ. ಲಿಂಗೇಗೌಡರು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಮಠದ ಪರಿಸ್ಥಿತಿ ಮತ್ತು ಸನಾತನ ಧರ್ಮದ ಬಗ್ಗೆ ಸನಾತನ ಮೌಲ್ಯಗಳನ್ನು ಎತ್ತಿಹಿಡಿದು ಜನಾಂಗ ಮತ್ತು ಲೋಕ ಕಲ್ಯಾಣವನ್ನು ಬಯಸುವ ವ್ಯಕ್ತಿಯನ್ನು ನೇಮಕ ಮಾಡುವಂತೆ ಜನತೆಯಲ್ಲಿ ಭಿನ್ನವಿಸಿಕೊಂಡರು. ವಕೀಲರಾದ

ಹೆಚ್.ಸಿ. ದಾಸಪ್ಪನವರು ಶ್ರೀ ಆದಿಚುಂಚನಗಿರಿ ಮಠಕ್ಕೆ ದರಸಗುಪ್ಪೆ ಗುರುರಾಮಪ್ಪನವರನ್ನು ಗುರುಗಳನ್ನಾಗಿ ಮಾಡಬೇಕೆಂದು ಸಲಹೆ ನೀಡಿದರು. ಇವರು 20 ವರ್ಷಗಳಿಂದಲೂ ಸನ್ಯಾಸ ಧರ್ಮವನ್ನು ಅನುಸರಿಸುತ್ತಾ ಉತ್ತಮ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಮೇಲುಕೋಟೆ ಜಾತ್ರೆಯ ಸಮಯದಲ್ಲಿ ಒಕ್ಕಲಿಗ ಜನರಿಗೆ ಅನ್ನೋದಕಗಳನ್ನು ಒದಗಿಸಿ ಸೇವೆ ಮಾಡುತ್ತಾ ಬಂದಿದ್ದಾರೆ. ಒಕ್ಕಲಿಗ ಸಮುದಾಯದವರಿಗೆ ಒಂದು ಛತ್ರವನ್ನು ಕಟ್ಟಿಸುತ್ತಲಿದ್ದಾರೆ. ಇವರು ಮಠದ ಗುರುಗಳಾಗುವುದಕ್ಕೆ ಅರ್ಹರೆಂದರು. ದಾಸಪ್ಪನವರ ಸಲಹೆಯನ್ನು ಕಾಂತರಾಜಪುರದ ಎಂ. ನಂಜಪ್ಪನವರು ಅನುಮೋದಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲಾಗಿ ಅಲ್ಲಿ ನೆರದಿದ್ದ ಜನರೆಲ್ಲರೂ ಇವರ ಆಯ್ಕೆಯನ್ನು ಒಪ್ಪಿದರು. 1928ರಲ್ಲಿ ಗುರು ರಾಮಪ್ಪನವರಿಗೆ ಶ್ರೀ ಭಕ್ತನಾಥಸ್ವಾಮಿ ಎಂಬ ನಾಮಾಂಕಿತದಲ್ಲಿ ಭಕ್ತ ಜನ ಸಮುದಾಯದ ಸಮ್ಮುಖದಲ್ಲಿ 68ನೇ ಗುರುಗಳಾಗಿ ಪಟ್ಟ ಕಟ್ಟಲಾಯಿತು. ಆದಿಚುಂಚನಗಿರಿ ಮಠವು ಆರ್ಥಿಕವಾಗಿ ತುಂಬಾ ದುಸ್ಥಿತಿಯಲ್ಲಿದ್ದುದನ್ನು ಮನಗಂಡು, ಹೊಸ ಸ್ವಾಮೀಜಿಯವರಿಗೆ ಅನುಕೂಲ ಮಾಡಿಕೊಡಲು ಮಠದ ಆಡಳಿತವನ್ನು ಸರಕಾರದವರೇ ಸ್ವಲ್ಪ ಕಾಲ ಆಡಳಿತ ವ್ಯವಸ್ಥೆಯನ್ನು ವಹಿಸಿಕೊಂಡು ಸರಿಪಡಿಸಿಕೊಡಬೇಕೆಂದು ಸೋಮನಹಳ್ಳಿ ಎಸ್.ಸಿ. ಮಲ್ಲಯ್ಯನವರು ಸಲಹೆಕೊಟ್ಟರು. ಮಠ ಮತ್ತು ಸರ್ಕಾರಕ್ಕೆ ಆಡಳಿತದಲ್ಲಿ ಸಹಾಯ ಮಾಡಲು ಒಂದು ಸಮಿತಿಯನ್ನು ರಚಿಸಿದರು. ಈ ಸಮಿತಿಯ ಭಿನ್ನವತ್ತಳೆ ಸ್ವೀಕರಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ಕಾರದಿಂದ ಧನ ಸಹಾಯ ನೀಡಿ ಆದಿಚುಂಚನಗಿರಿ ಮಠದ ಪುನಶ್ಚೇತನಕ್ಕೆ ಕಾರಣರಾದರು. ದಿವಾನರಾದ ಮಿರ್ಜಾ ಇಸ್ಮಾಯಿಲ್‌ರವರೂ ಕೂಡ ಮಠದ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿದ್ದರು.

ಕೆ.ಹೆಚ್. ರಾಮಯ್ಯನವರು ಮಠದ ಪೀಠಾಧಿಪತಿಯ ಆಯ್ಕೆಯ ನಂತರ ಸಭೆ ನಡೆಸಿ ಅಂದಿನ ಸಭೆಯಲ್ಲಿ ಮಠದ ಧಾರ್ಮಿಕ ವಿಷಯವನ್ನು ಕುರಿತು ಲೋಕೋತ್ತರ ಭಾಷಣ ಮಾಡಿದರು. ಭಕ್ತರೇ ಗುರುರಾಮಯ್ಯನವರನ್ನು ಆಯ್ಕೆ ಮಾಡಿಕೊಂಡಿದ್ದರಿಂದ ಶ್ರೀ ಭಕ್ತನಾಥಸ್ವಾಮಿ ಎಂಬ ಹೆಸರು ಇಟ್ಟಿದ್ದು ಶೋಭೆ ತರುವಂತಾಗಿದ್ದು ಮುಂದೆ ಇವರು ಶೈವಧರ್ಮದ ಕಾಪಾಲಿಕ ಪಂಥದ ಎಲ್ಲಾ ಕಟ್ಟುಪಾಡುಗಳನ್ನು ಸಂಪೂರ್ಣ ಸರಳಗೊಳಿಸಿ, ಕೇವಲ ದೇವತಾಕಾರ್ಯ ಮತ್ತು ಸಂಪ್ರದಾಯಕವಾಗಿ ಆಚರಣೆ ಮಾಡಬೇಕೆಂದು ಕೋರಿದರು.

ಆದಿಚುಂಚನಗಿರಿ ಮಠದ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಕೆ.ಹೆಚ್. ರಾಮಯ್ಯನವರ ಪಾತ್ರ, ದಿಟ್ಟನಿಲುವು ಶ್ರೀ ಆದಿಚುಂಚನಗಿರಿ ಮಠದ ಆಸ್ತಿ ಹೊಂದಿದ್ದರೂ ಮಠದ ವ್ಯವಹಾರ, ಆಡಳಿತ ನಿರ್ವಹಣೆ ಅಷ್ಟೇನು

ಹಿತಕರವಾಗಿರಲಿಲ್ಲ. ರಾಮಯ್ಯನವರು ಶ್ರದ್ಧೆವಹಿಸಿ ಸರ್ಕಾರದೊಡನೆ ವ್ಯವಹರಿಸಿ, ಮಠದ ಗುರುಪರಂಪರೆಯ ಹಕ್ಕನ್ನು ಮಠಕ್ಕೆ ಹಿಂತಿರುಗಿಸುವಂತೆ ಮಾಡಿ ಮಠದ ಆಡಳಿತವನ್ನು ಭದ್ರಪಡಿಸಿದರು. ಬಿಕ್ಕಟ್ಟು ಸೃಷ್ಟಿಯಾದಾಗ ನಿಸ್ವಾರ್ಥದಿಂದ ಮುಂದೆ ನಿಂತು ಬಗೆಹರಿಸಿದ ಅವರ ದಿಟ್ಟನಿಲುವು, ಸಹನೆ ಮಠಕ್ಕೆ ಭದ್ರಬುನಾದಿ ಹಾಕಿ ಸರ್ಕಾರದ ಅಧಿಕೃತತೆಗೆ ಸಾಕ್ಷಿಯಾಯಿತು.

ಕೆ.ಹೆಚ್. ರಾಮಯ್ಯನವರ ಶ್ರಮಕ್ಕೆ ಸಿಕ್ಕ ಪ್ರತಿಫಲವೆಂಬಂತೆ ಮುಂದೆ ಮಠವನ್ನು ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಎಂದು ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ಒಳಗೊಂಡಂತೆ 13 ಜನವರಿ 1974ರಲ್ಲಿ ಬೆಳ್ಳೂರು ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿ ಮಾಡಲಾಯಿತು. ಶ್ರೀ ರಮಾನಂದನಾಥ ಸ್ವಾಮೀಜಿ ಅಧ್ಯಕ್ಷರಾಗಿದ್ದು ಇತರೆ ಹನ್ನೆರಡು ಜನ ಸದಸ್ಯರಿದ್ದರು. ಈ ಸದಸ್ಯರುಗಳ ಪೈಕಿ ಕೆ.ಹೆಚ್. ರಾಮಯ್ಯನವರ ಪುತ್ರ ಹಾಗೂ ಐ.ಎ.ಎಸ್. ಅಧಿಕಾರಿ ಕೆ.ಆರ್. ಮರುದೇವೇಗೌಡರು ಇದ್ದುದು ವಿಶೇಷ.

ಒಕ್ಕಲಿಗರ ಸಾರ್ವಜನಿಕ ಹಾಸ್ಟೆಲ್‌ಗಳ ಸ್ಥಾಪನೆ ಮತ್ತು ಕೆ.ಹೆಚ್. ರಾಮಯ್ಯನವರ ಪಾತ್ರ

ಕೆ.ಹೆಚ್. ರಾಮಯ್ಯನವರು ತಮ್ಮ ಸರ್ಕಾರಿ ನೌಕರಿಗೆ ಹಾಗು ಕರ್ತವ್ಯಕ್ಕೆ ಅಪಚಾರವಾಗದಂತೆ ಕಾರ್ಯನಿರ್ವಹಿಸಿ, ಎಲ್ಲಾ ಜಿಲ್ಲೆಯಲ್ಲಿನ ಒಕ್ಕಲಿಗ ಜನಾಂಗದ ಮುಖಂಡರುಗಳ ಹಣವಂತರ, ಅಧಿಕಾರಿಗಳ ಮತ್ತು ಅಭಿಮಾನಿಗಳ ಸಂಪರ್ಕವನ್ನು ಬೆಳೆಸಿ, ಆಯಾ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಶಾಲೆಗಳಿರುವ ದೊಡ್ಡ ಊರುಗಳಲ್ಲಿ, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳುವಂತೆ ಪ್ರೇರೇಪಿಸತೊಡಗಿದರು. ಹಲವಾರು ಕಡೆಗಳಿಗೆ ಸ್ವತಃ ತಾವೇ ಹೋಗಿ ವ್ಯವಸ್ಥೆ ಮಾಡುವ ಕಾರ್ಯದಲ್ಲಿ ಹಗಲಿರುಳೆನ್ನದೆ ಸಾರಿಗೆ ಸಂಪರ್ಕವಿಲ್ಲದ ಸ್ಥಳಗಳಿಗೆ ಕಾಲ್ನಡಿಗೆಯಲ್ಲೆ ಹೋಗಿ ರೈತರ ಮಕ್ಕಳನ್ನು ಶಾಲೆಗೆ ಕಳಿಸುವಂತೆಯೂ ಶಾಲಾ ಅನುಕೂಲವಿಲ್ಲದ ಕಡೆ, ವಿದ್ಯಾರ್ಥಿಗಳನ್ನು ಕರೆತಂದು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿರುವ ಕಡೆಗಳಲ್ಲಿ ಶಾಲೆಗೆ ಸೇರಿಸಿ, ಊಟ ವಸತಿಗಳಿಗಾಗಿ ಸ್ಥಳೀಯವಾಗಿ ಹಾಲಿ ಸ್ಥಾಪಿಸಿರುವ ವಿದ್ಯಾರ್ಥಿ ನಿಲಯಗಳಲ್ಲಿ ಸೇರಿಸುತ್ತಿದ್ದರು.

ಇಷ್ಟಾದರೂ ರಾಮಯ್ಯನವರಿಗೆ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಅತಿ ಜರೂರಾಗಿ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಬೇಕೆಂಬ ಕಾತುರ ಎಷ್ಟಿತ್ತೆಂದರೆ ತಮ್ಮ ಮನ. ಮೈಯೆಲ್ಲಾ ತಾವು ಕೈ ಹಾಕಿದ ಒಕ್ಕಲಿಗ ಸಮಾಜದ ಉದ್ಧಾರದ ಬಗೆಗೇ ತುಂಬಿಕೊಂಡಿದ್ದರು. ಸರ್ಕಾರಿ ಕೆಲಸಕ್ಕೆ ರಾಜೀನಾಮೆಯನ್ನು ಸಲ್ಲಿಸಿದರು.

ಹಿಂದೊಮ್ಮೆ ದಿವಾನರಲ್ಲಿ ಪ್ರಸ್ತಾಪಿಸಿದಾಗ ದಿವಾನರು ರಾಮಯ್ಯನವರಿಗೆ ಇದೊಂದು ಪುಣ್ಯಕಾರ್ಯ ನಿಜ ನೀನು ಕೆಲಸದಲ್ಲಿದ್ದೇ, ರಜಾ ಪಡೆದು ಮಾಡು, ಸಂಘ ನೊಂದಣಿಯಾದ ಮೇಲೆ ನಾನೂ ನನ್ನಿಂದ ಸಾಧ್ಯವಾದದ್ದೆಲ್ಲಾ ಸಹಾಯ ಮಾಡುತ್ತೇನೆಂದು ಸಮಾಧಾನ ಪಡಿಸಿದ್ದರು. ಈ ವಿಷಯ ಶ್ರೀಮಾನ್ ಮಹಾರಾಜರವರೆಗೂ ಹೋಗಿತ್ತು. ಆಗ ದಿವಾನರನ್ನು ಕುರಿತು ಮಹಾರಾಜರು "ದಿವಾನರೆ ರಾಮಯ್ಯನವರ ವಿಚಾರದಲ್ಲಿ ನಿಮ್ಮ ನಿಲುವು ಸರಿ" ಎಂದಿದ್ದರು. ಈ ಭಾರಿ ದಿವಾನರಿಂದ ರಾಮಯ್ಯನವರು ತಮ್ಮ ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳಲು ಮಾಡಿದ ಸಾಹಸ ವಿಫಲವಾಯ್ತು.

ಮಹಾರಾಜರೊಡನೆ ಕೆ.ಹೆಚ್. ರಾಮಯ್ಯನವರ ಸಂವಾದ

ಶ್ರೀಮನ್ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರಾಮಯ್ಯನವರನ್ನು ಕರೆಸಿಕೊಂಡು ಏಕಾಂತದಲ್ಲಿ ಮಾತನಾಡಿದರು. ರಾಮಯ್ಯನವರು ಶ್ರೀಮನ್ ಮಹಾರಾಜರಿಗೆ ಭಾಗಿ ನಮಸ್ಕರಿಸಿ "ಬುದ್ಧಿಯವರು ನನ್ನನ್ನು ಬಂದು, ತಮ್ಮನ್ನು ಕಾಣಲು ಅಪ್ಪಣೆ ಕಳಿಸಿದ್ದಿರಿ", "ಹೌದು ನಮ್ಮ ರಾಜ್ಯದ ದಿವಾನರಿಂದ ಎಲ್ಲಾ ವಿಚಾರ ತಿಳಿಯಿತು. ನಿಮ್ಮ ಇಷ್ಟು ದಿವಸಗಳ ಸರ್ಕಾರಿ ಕೆಲಸದಲ್ಲಿ ನಾವು ಕಂಡುಕೊಂಡ, ನಿಮ್ಮ ನಿಷ್ಠೆ ಕಾರ್ಯತತ್ಪರತೆ, ಗುರಿಸಾಧನೆಯ ರೀತಿ, ಪ್ರಾಮಾಣಿಕತೆಯನ್ನು ಗುರುತಿಸಿ, ಮುಂದೊಂದು ದಿನ ನಿಮಗೆ ರಾಜ್ಯದ ಉನ್ನತ ಹುದ್ದೆಯನ್ನು ಕೊಡುವ ಆಲೋಚನೆ ಇದೆ. ಈಗಲೂ ನಿಮ್ಮ ಒಕ್ಕಲಿಗರ ಸಂಘದ ಕೆಲಸ ಕಾರ್ಯ ನೋಡಿಕೊಳ್ಳಲು ನಿಮ್ಮಷ್ಟೇ ಉತ್ಸಾಹ ಇರುವವರನ್ನು ಹುಡುಕಿ ಅವರಿಗೆ ಆ ಕಾರ್ಯವನ್ನು ವಹಿಸಿ ನೀವು ಮೇಲ್ವಿಚಾರಣೆ ನೋಡಿಕೊಳ್ಳಬಾರದೇಕೆ" ಎಂದು ಸ್ವತಹಃ ಪ್ರಭುಗಳು, ಕೇಳಿದಾಗ ಕೆ.ಹೆಚ್. ರಾಮಯ್ಯನವರು ಎರಡೂ ಕೈ ಜೋಡಿಸಿ ಶಿರಭಾಗಿ "ಮಹಾಸ್ವಾಮಿಯವರು ಅನ್ಯತಾ ಭಾವಿಸಬಾರದು. ನಾನು ಕಂಡುಕೊಂಡ ಗುಣವುಳ್ಳ ಸಹಸ್ರಾರು ಗುಣಶೀಲ ವಿದ್ಯಾವಂತರನ್ನು ತಯಾರಿಸಲು ಹೋಗುತ್ತಿದ್ದೇನೆ. ನನಗೆ ನಿಮ್ಮ ದಿವ್ಯಹಸ್ತದಿಂದ ಆಶೀರ್ವದಿಸಿ ಕಳಿಸಿಕೊಡಿ ಮಹಾಸ್ವಾಮಿ, ಎಂದು ದೀರ್ಘದಂಡ ವಂದಿಸಿದರು" ರಾಮಯ್ಯನವರ ಕಣ್ಣಲ್ಲಿ ಧಾರಾಕಾರ ನೀರು ಸುರಿಯುತ್ತಿತ್ತು. ಅದನ್ನು ಕಂಡ ಪ್ರಭುಗಳು ಕಣ್ಣಲ್ಲೂ ನೀರಾಡಿತ್ತು, ಆಗ ಪ್ರಭುಗಳು "ರಾಮಯ್ಯ ನಿನ್ನ ನಿರ್ಧಾರ ಅಚಲವಾಗಿದ್ದರೆ ಹಾಗೆಯೇ ಆಗಲಿ, ಸರ್ಕಾರವೇ ಮಾಡ್ಬುವ ಕೆಲಸವನ್ನು ನೀವುಗಳು ಮಾಡುತ್ತಿರುವುದು ಒಂದು ರೀತಿಯಲ್ಲಿ ಸಂತೋಷವೇ. ನಿಮ್ಮ ಕಾರ್ಯಕ್ಕೆ ಮಾತೆ ಚಾಮುಂಡೇಶ್ವರಿ ಸರ್ವ ಯಶಸ್ಸನ್ನು ನೀಡಲಿ, ಸದ್ಯದಲ್ಲಿಯೇ ಎಲ್ಲಾ ತಾಲ್ಲೂಕು ಮತ್ತು ಜಿಲ್ಲೆಯ ಅಧಿಕಾರಿಗಳಿಗೂ ನಿಮಗೆ ನೆರವಾಗುವಂತೆ

ಸುತ್ತೋಲೆಯನ್ನೂ, ನೀವು ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ಕಟ್ಟಲು ಅಪೇಕ್ಷಿಸುವ ಕಡೆಗಳಲ್ಲಿ ಸರ್ಕಾರಿ ಜಾಗವಿದ್ದಲ್ಲಿ ಮುಫತ್ತಾಗಿ ಕೊಡುವಂತೆ ಪರವಾನಗಿಯನ್ನು ಕಳಿಸಲು ದಿವಾನರು ಕ್ರಮ ಜರುಗಿಸುತ್ತಾರೆ. ನಿಮ್ಮ ಉದ್ದೇಶದ ಬಗೆಗೆ, ಯಾವುದೇ ಅಪೇಕ್ಷೆ ಇದ್ದರೂ "ಸಂಸ್ಥಾನದ ಆಸ್ಥಾನ" ನೆರವೇರಿಸಲು ಸಿದ್ಧವಿದೆ. ನಾವೂ ನಿಮ್ಮೊಡನಿದ್ದೇವೆ, ನಿಮ್ಮನ್ನು ಪಡೆದ ಒಕ್ಕಲಿಗ ಸಮಾಜ ಧನ್ಯ, ಒಳ್ಳೆಯದಾಗಲಿ" ಎಂದು ತುಂಬು ಹೃದಯದಿಂದ ಹರಸಿ ಬೀಳ್ಕೊಟ್ಟರು.

ಸಂಘದ ಶ್ರೇಯೋಭಿವೃದ್ಧಿಯ ಬಗೆಗೆ ಪ್ರಭುಗಳಾಡಿದ ಮಾತು ರಾಮಯ್ಯನವರಲ್ಲಿ ಮೇರೆ ಮೀರಿದ ಉತ್ಸಾಹ ತುಂಬಿತ್ತು, ಮೈಸೂರು ಸಂಸ್ಥಾನದ ಮೂಲೆ ಮೂಲೆಯನ್ನು ಬಿಡದೆ ಸಂಚರಿಸಿದರು. ಶಾಲೆಗಳಿರುವೆಡೆಯಲ್ಲಿ ತಂಗಿ, ಆ ಪ್ರಾಂತದಲ್ಲಿ ಶ್ರೀಮಂತರ ಮನೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ನಿಲಯ ಸ್ಥಾಪಿಸುವ ಬಗೆಗೆ, ಒಕ್ಕಲಿಗ ಸಮಾಜದ ಏಳಿಗೆಗೆ ಶಿಕ್ಷಣ ಒಂದೇ ಸೂಕ್ತ ಮಾರ್ಗವೆನ್ನುವ ಬಗೆಗೆ ಮನದಟ್ಟು ಮಾಡಿದರು. ಅಲ್ಲಿಯೇ ಒಂದು "ಆ ಊರಿನ" ಹೆಸರಿನಲ್ಲಿ ಒಕ್ಕಲಿಗರ ಸಂಘ ಹಾಸ್ಟೆಲ್ ಎಂದು ಘೋಷಿಸಿ, ಅದಕ್ಕೆ ಅಧ್ಯಕ್ಷರು ಉಪಾಧ್ಯಕ್ಷರು ಕಾರ್ಯದರ್ಶಿ ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಿ, ಒಂದು ಗೊತ್ತಾದ ದಿನ ಆ ಪ್ರಾಂತ್ಯದ ಧನಿಕರ, ಕೊಡುಗೈ ದಾನಿಗಳ, ಒಕ್ಕಲಿಗ ಸಮಾಜದ ಏಳಿಗೆಯ ಬಗೆಗೆ ಕಾಳಜಿಯುಳ್ಳವರ, ಆ ಕಾರ್ಯ ಸಾಧನೆಗೆ ನೆರವಾಗುವವರ, ಅಭಿಮಾನಿಗಳ ಸಭೆ ಕರೆದು, ಒಕ್ಕಲಿಗರ ಸಮಾಜದ ಉದ್ಧಾರವೇ "ಶಿಕ್ಷಣ ಕೊಡಿಸುವುದರ ಮೇಲೆ ಅವಲಂಬಿಸಿದೆ" ಎನ್ನುವುದನ್ನು ಮನಮುಟ್ಟುವಂತೆ ಮನಕರಗುವಂತೆ, ತಾವೂ ತಮ್ಮ ತಮ್ಮ ಕೈಲಾದ ಮಟ್ಟಿಗಾದರೂ ಸಮಾಜದ ಸೇವೆ ಮಾಡಲೇಬೇಕೆಂಬ ಹುಮ್ಮಸ್ಸು ಮೂಡುವಂತೆ ಹೃದಯಂಗಮವಾಗಿ ಮಾತನಾಡಿ ಎಲ್ಲರ ಮನ ಒಲಿಸಿಕೊಂಡು, ಆ ಭಾಗದ ಅನೇಕರು ಹೃತ್ಪೂರ್ವಕವಾಗಿ ಕಾರ್ಯ ಪ್ರವೃತ್ತರಾಗುವಂತೆ ಮಾಡುತ್ತಿದ್ದರು. ಹೀಗೆ ನಾಡಿನ ಎಲ್ಲ ಕಡೆ ಸುತ್ತಾಡಿ ಸಂಘಗಳನ್ನು ಕಟ್ಟಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟುವ ಕಾರ್ಯಕ್ಕೆ ಉಳ್ಳವರನ್ನು ಪ್ರೇರೇಪಿಸುತ್ತಲೇ ಮುಂದೆ ಮುಂದೆ ಸಾಗಿದರು. ಆಗಾಗ್ಗೆ ಮೈಸೂರು ಬೆಂಗಳೂರು ಹಾಸನ ತುಮಕೂರು ಮಂಡ್ಯ ಚಿತ್ರದುರ್ಗ ಕೊಪ್ಪ ಶೃಂಗೇರಿ ಶಿವಮೊಗ್ಗ ಚಿಕ್ಕಮಗಳೂರು ಚನ್ನರಾಯಪಟ್ಟಣ ಕಾಂತರಾಜಪುರ ಸಕಲೇಶಪುರ ಬೇಲೂರು ಕೋಲಾರ ಮುಂತಾದ ಕಡೆಗಳಿಗೆ ಹೋಗಿ ಬರುತ್ತಿದ್ದರು. ಒಮ್ಮೊಮ್ಮೆ ರಾಮಯ್ಯನವರ ಜೊತೆಯಲ್ಲಿ ಬಿ. ನಾಗಪ್ಪನವರೂ, ಕೃಷ್ಣಪ್ಪನವರೂ ಮತ್ತೊಮ್ಮೆ ಬಿ. ಪುಟ್ಟಯ್ಯನವರೂ ಒಡಗೂಡುತ್ತಿದ್ದರು.

ಜನ ಜಾಗೃತಿಮೂಡಿಸಲು ಒಮ್ಮೆ ಮಳವಳ್ಳಿ ತಾಲ್ಲೂಕಿನ ಕಾಡುಕೊತ್ತನಹಳ್ಳಿಯ ಪಂಚಮರ ಕೇರಿಗಳಿಗೆ ಹೋಗಿ ಸರ್ಕಾರದ ಬಗ್ಗೆ, ಸಮಾಜದ ಬಗ್ಗೆ, ಹರಿಜನರ ಸ್ಥಿತಿಗತಿಗಳ ಬಗ್ಗೆ ಭಾಷಣ ಮಾಡಿ ಎಲ್ಲರನ್ನು ತನ್ನತ್ತ ಸೆಳೆದುಕೊಂಡು ತಾವೆಲ್ಲರೂ ಮಾಡಬೇಕಾದ ಕೆಲಸ ಕಾರ್ಯಗಳೇನು, ಶಿಕ್ಷಣ ಎಂದರೇನು, ಮಕ್ಕಳಿಗೆ ಶಿಕ್ಷಣ ಕೊಡಿಸುವ ಅಗತ್ಯವೇನು ಅದರ ಪ್ರಾಮುಖ್ಯತೆ ಸರ್ಕಾರದ ಸವಲತ್ತುಗಳ ಬಗ್ಗೆ ತಿಳಿ ಹೇಳಿ ಶೋಷಿತ ಸಮುದಾಯದಲ್ಲಿ ಒಂದು ಹೊಸ ಆಸೆಯನ್ನು ಚಿಗುರಿಸಿದರು. "ಸ್ವಾಮಿ ನಮ್ಮ ಹೊಲೆಗೇರಿಗೆ, ಹೊಲೇರ ಮನೆಗೆ ಬಂದಿದ್ದೀರಿ ನಿಮಗೇನು ಅನ್ನಿಸುವುದಿಲ್ಲವೇ?" ಎಂದು ಕೇಳಿದಾಗ 'ನೋಡಿ ಹೊಲೆಯ, ಮಾದಿಗ ಎಂದು ಮಾಡಿಕೊಂಡಿದ್ದು ನಾವು ನೀವು ಸ್ವಚ್ಚತೆಗೆ ಶಿಸ್ತಿಗೆ ವಿದ್ಯೆಗೆ ಮಾನ್ಯತೆ ಕೊಡಿ, ನಾನು ಸ್ವಚ್ಚತೆಗೆ ಮಾನ್ಯತೆ ಕೊಡುತ್ತೇನೆ. ಶುಚಿತ್ವ ಇರುವ ಗುಡಿಸಲೇ ಆಗಲಿ ನಾನು ಊಟ ಮಾಡಬಲ್ಲೆ' ಎಂದು ಹಲವು ಭಾರಿ ಹರಿಜನರ ಮನೆಯಲ್ಲಿ ಊಟಮಾಡಿ ಇಡೀ ಸಮುದಾಯದಲ್ಲಿ ಭರವಸೆ ಮೂಡಿಸಿದ ಕೀರ್ತಿ ಕೆ.ಹೆಚ್. ರಾಮಯ್ಯನವರಿಗೆ ಸಲ್ಲುತ್ತದೆ.

ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಕೆ.ಹೆಚ್. ರಾಮಯ್ಯನವರು

ರಾಮಯ್ಯನವರ ದಕ್ಷತೆ, ಕೌಶಲ್ಯವನ್ನು ಮೆಚ್ಚಿಕೊಂಡ ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ರಾಮಯ್ಯರೊಡನೆ ನಿಕಟವಾದ ಸಂಪರ್ಕವನ್ನಿರಿಸಿಕೊಂಡಿದ್ದರು. ಸಂದರ್ಭ ದೊರೆತಾಗಲೆಲ್ಲಾ ಒಡೆಯರ್ ರಾಮಯ್ಯನವರನ್ನು ತಮ್ಮ ಆತ್ಮೀಯ ಸ್ನೇಹಿತ ಅಥವಾ ಆಧ್ಯಾತ್ಮಿಕ ಗುರು ಎಂದು ಪರಿಚಯಿಸುತ್ತಿದ್ದರು. ಉನ್ನತ ವ್ಯಾಸಂಗಕ್ಕೆ ಲಂಡನ್‌ಗೆ ಜೊತೆಯಾಗಿಯೇ ತೆರಳಿ ಅಲ್ಲಿ ಭಾರತೀಯ ಸಮಾಜದ ಬಗ್ಗೆ ಹಿಂದುಳಿದವರ ಬಗ್ಗೆ ವಿದ್ಯಾಭ್ಯಾಸ ಬಗ್ಗೆ ಮುಂದುವರಿದ ದೇಶಗಳ ಬಗ್ಗೆ ಚರ್ಚಿಸುತ್ತಾ ನಾವು ಕೂಡ ಪಾಶ್ಚಾತ್ಯರಂತೆ ಬೆಳೆಯಬೇಕು ಬೆಳೆಯಬೇಕಾದರೆ ಯಾವ ಯಾವ ಕಾರ್ಯಕ್ರಮ ರೂಪಿಸಿಕೊಳ್ಳಬೇಕೆಂಬ ಚಿಂತನೆ ಮಾಡುತ್ತಿದ್ದರು. ಉನ್ನತ ವರ್ಗದವರಿಂದ ಹಿಂದುಳಿದವರ್ಗದವರು ತುಳಿತಕ್ಕೊಳಪಟ್ಟಿದ್ದರು. ಅದರ ಪರಿಣಾಮ ಮತ್ತು ಅವರ ಉದ್ಧಟತನ ಸರಕಾರಕ್ಕೂ ತಟ್ಟಿತು. ಈ ವಿಷಯದ ಬಗ್ಗೆ ಚರ್ಚಿಸುತ್ತಾ ಏನಾದರೂ ಮಾಡಿ ಹಿಂದುಳಿದ ವರ್ಗದವರನ್ನು ಶಿಕ್ಷಣೀಕರಣಗೊಳಿಸಬೇಕು ಅದು ನಿಮ್ಮಂಥ ವ್ಯಕ್ತಿಗಳಿಂದ ಸಾಧ್ಯವೆಂದು ಯುವರಾಜರು ರಾಮಯ್ಯನವರಿಗೆ ಪದೇ-ಪದೇ ಹೇಳುತ್ತಿದ್ದುದು ಅವರಲ್ಲಿನ ಭಾವನೆಗಳು ಮತ್ತಷ್ಟು ಗಟ್ಟಿಯಾಗಿ ನೆಲೆಯೂರಿತು.

ಇಬ್ಬರೂ ಯೂರೋಪಿನ ಪ್ರವಾಸ ಕೈಗೊಂಡಾಗ ಕೈಗಾರಿಕಾ ಕ್ರಾಂತಿಯ ಬಗ್ಗೆ ಆಳವಾದ ಅಧ್ಯಯನ ನಡೆಸಿ ಕಚ್ಚಾ ಪದಾರ್ಥಗಳ ಪೂರೈಕೆ, ಸಾಗಾಣಿಕೆ, ಬಂಡವಾಳಶಾಹಿಗಳ ಮತ್ತು ಕಾರ್ಮಿಕರ ಪರಿಶ್ರಮ ಮಾರುಕಟ್ಟೆ ನೀತಿ ಮುಂತಾದ ವಿಷಯಗಳನ್ನು ಅರಿತು – ನಮ್ಮ ನಾಡನ್ನು ಅಭಿವೃದ್ಧಿ ಪಡಿಸಲು ಹೊಸ ಹೊಸ ರೂಪುರೇಷೆ ಯೋಜನೆಗಳನ್ನು ತಯಾರಿಸುವ ಉದ್ದೇಶದಿಂದಲೇ 2ನೇ ಭಾರಿ ಪ್ರವಾಸ ಕಾರ್ಯಕ್ರಮ ರೂಪಿಸಿದ್ದರು. ಪ್ರವಾಸದಿಂದ ಹಿಂತಿರುಗಿದ ಮೇಲೆ ಅದೇ ವರ್ಷ ಅಕ್ಟೋಬರ್‌ನಲ್ಲಿ ದಸರಾ ಕಾಲ – ಮೈಸೂರಿನಲ್ಲಿ ನಡೆಯುತ್ತಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಗವಹಿಸಲು ಬಂದಾಗ ತಮ್ಮ ವಿದೇಶ ಪ್ರವಾಸದಲ್ಲಿ ಗಮನಿಸಿದ ಅಭಿವೃದ್ಧಿ ಅನುಭವಗಳನ್ನು ಕುರಿತು ಭಾಷಣ ಮಾಡಬೇಕೆಂದು ಮೈಸೂರಿನ ತಾತಯ್ಯ (ವೆಂಕಟಕೃಷ್ಣಯ್ಯ)ನವರಿಂದ ರಾಮಯ್ಯನವರಿಗೆ ಆಹ್ವಾನ ಬಂದಿತು. ಬಿಡುವಿಲ್ಲದ ಕೆಲಸ ಕಾರ್ಯಗಳಿದ್ದರೂ ರಾಮಯ್ಯನವರು ತಾತಯ್ಯನವರೊಡನಿದ್ದ ಆತ್ಮೀಯ ಗೆಳೆತನಕ್ಕೆ ಕಟುಬಿದ್ದು ಅಕ್ಟೋಬರ್ 3 ರಿಂದ 7ರ ವರೆಗೆ ಭಾಷಣ ಮಾಡಲು ಒಪ್ಪಿದರು.

ಮೈಸೂರು ನಗರದ ರಂಗಾಚಾರ್ಲು ಸ್ಮಾರಕ ಪುರಭವನದಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ವೆಂಕಟಕೃಷ್ಣಯ್ಯನವರು ವಹಿಸಿದ್ದರು. ತನ್ನ ಅನುಭವ ಆಲೋಚನೆ ಕನಸಿನ ಕಾರ್ಯಗಳನ್ನೊಳಗೊಂಡ ವಿದ್ವತ್‌ಪೂರ್ಣ ಪ್ರಭಾವಿ ಭಾಷಣ ಒಂದು ಗಂಟೆಯ ಕಾಲ ಸಾಗುತ್ತಿತ್ತು. ಕಿಕ್ಕಿರಿದ ಜನಸ್ತೋಮ ನಿಶ್ಯಬ್ದವಾಗಿ ಭಾಷಣವನ್ನು ಆಲಿಸುತ್ತಿರುವ ಸಮಯ, ಭಾಷಣದ ನಡುವೆಯೇ ಆಯಾಸಭರಿತರಾಗಿ ನೀರು ಕುಡಿದು ಕುರ್ಚಿಯಲ್ಲೆ ಸುಸ್ತಾಗಿ ಕುಳಿತುಬಿಟ್ಟರು. ಸಭೆ ಮುಗಿಯಿತೆಂದು ಸಭಾಧ್ಯಕ್ಷರು ಘೋಷಣೆ ಮಾಡಿದರು. ನಜರ್‌ಬಾದಿನಲ್ಲಿದ್ದ ತನ್ನ ಅಳಿಯ ಹೆಚ್.ಸಿ. ದಾಸಪ್ಪ (ತನ್ನ ಮಗಳು ಯಶೋಧರಮ್ಮರವರ ಪತಿ) ಅವರ ಮನೆಗೆ ತೆರಳಿ ವಿಶ್ರಾಂತಿ ತೆಗೆದುಕೊಂಡರು. ಆಗ ರಾಮಯ್ಯನವರಿಗೆ ಲಘು ಹೃದಯಾಘಾತವಾಗಿತ್ತು. ವೈದ್ಯರು ವಿಶ್ರಾಂತಿ ತೆಗೆದುಕೊಳ್ಳುವಂತೆ ಸಲಹೆ ನೀಡಿದರು. ಮಾರನೇ ದಿನ ರಾಮಯ್ಯನವರು ಪೂರ್ವ ನಿಗದಿತ ಕಾರ್ಯಕ್ರಮದಂತೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಭೇಟಿಯಾದರು. ಭೇಟಿಯ ಸಂದರ್ಭದಲ್ಲಿ ರಾಜ್ಯದ ಮತ್ತು ಆಡಳಿತದ ಬಗ್ಗೆ ಚರ್ಚಿಸಿ ಮುಂದೆ ದಿವಾನ ಹುದ್ದೆಯನ್ನು ರಾಮಯ್ಯನವರು ಅಲಂಕರಿಸಬೇಕೆಂಬ ವಿಷಯ ಪ್ರಸ್ತಾಪವಾಯಿತು. ಮಾರನೆ ದಿನ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದಾಗ ಮತ್ತೊಮ್ಮೆ ಹೃದಯಾಘಾತ–ವಾಗಿ ರಾಮಯ್ಯನವರ ಪ್ರಾಣ–ಪಕ್ಷಿ ಹಾರಿಹೋಯಿತು (ದಿವಾನ ಹುದ್ದೆ ಸಹಿಸದ ಹೊಗಳು ಭಟರಿಂದ ಪಾಯಸದಲ್ಲಿ ವಿಷಪ್ರಾಷನವಾಯಿತೆ? ಉದ್ದೇಶ ಪೂರ್ವಕವೇ? ಇದಿಷ್ಟು ನಿಗೂಢ,

ಅನುಮಾನ ಸ್ಪಷ್ಟತೆ ಇಲ್ಲ). (5-10-1933). ಇವರ ಅಕಾಲಿಕ ಮರಣದ ಸುದ್ದಿ ಮಹಾರಾಜರು, ಯುವರಾಜರು ಸೇರಿದಂತೆ ಅಧಿಕಾರಿ ವರ್ಗ, ಇವರ ನೆರವು ಪಡೆದ ಹಾಗು ಶ್ರೀಸಾಮಾನ್ಯರಿಗೆ ಆಘಾತವಾಗಿ ಅಪ್ಪಳಿಸಿತು.

ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸುವ ಭಾಗ್ಯ ಹಾಗೂ ನಾಡಿನ ಸುದೈವ ಮಹಾರಾಜರ ಆಸೆ ಯಾವುದೂ ನೆರವೇರಲೇ ಇಲ್ಲ. ಅಸಾಧಾರಣ ಪ್ರತಿಭಾಸಂಪನ್ನ, ದಕ್ಷ ಅಧಿಕಾರಿ, ಯುವರಾಜರ ಆಪ್ತ ಮಿತ್ರ, ಎಷ್ಟೋ ಭರವಸೆ ಇಟ್ಟುಕೊಂಡು ರಾಜ್ಯಾಡಳಿತದಲ್ಲಿ ಅವರ ಸೇವೆ ಬಳಸಿಕೊಳ್ಳಲಾಗದ ಮಹಾರಾಜರು ಮಮ್ಮಲ ಮರುಗಿ ಕಂಬನಿ ಮಿಡಿದರು.

ಕೆ.ಹೆಚ್. ರಾಮಯ್ಯನವರ ಪಾರ್ಥೀವ ಶರೀರದ ಅಂತ್ಯಕ್ರಿಯೆಯನ್ನು ಮೈಸೂರಿನಲ್ಲಿ ಅರಮನೆಗೆ ಸೇರಿದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿಯೇ ಸಕಲ ರಾಜ ಮರ್ಯಾದೆಯೊಡನೆ ಅರಮನೆ ಆಡಳಿತವೇ ಏರ್ಪಡಿಸಿತು. ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರಿಗೆ ತಡೆಯಲಾಗದ ದು:ಖವುಂಟಾಗಿ, ತನ್ನ ಗಾಢ ಗೆಳೆತನದ ಸಂಕೇತವಾಗಿ ಅವರ ಸಮಾಧಿಯ ಮೇಲೆ ಮಂಟಪ ಕಟ್ಟಿಸಿ, ರಾಮಯ್ಯನವರ ಗುಣಕೊಂಡಾಡುವ ಶಾಸನ ಬರೆಯಿಸಿದ್ದಾರೆ. ರಾಜ ಕುಟುಂಬದ ಪ್ರೀತಿ ವಿಶ್ವಾಸದ ದ್ಯೋತಕವಾಗಿ, ರಾಜಮನೆ-ತನದವರಿಗಷ್ಟೆ ಮೀಸಲಾಗಿದ್ದ ಸ್ಮಶಾನದಲ್ಲಿ ಅಂತ್ಯಕ್ರಿಯಗೆ ಅನುವು ಮಾಡಿಕೊಟ್ಟಿರುವುದು ರಾಮಯ್ಯನವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಕೆ.ಹೆಚ್. ರಾಮಯ್ಯನವರದು ಆದರ್ಶ ಸಂಸಾರ. ಅಕ್ಕರೆಯ ಪತ್ನಿ ಎಲ್ಲಕ್ಕೂ ಮಿಗಿಲಾಗಿ ಹನ್ನೊಂದು ಮಕ್ಕಳ ತುಂಬು ಸಂಸಾರ. ಸಹಸ್ರಾರು ಜನ ಅಭಿಮಾನಿಗಳು, ಆಶ್ರಿತರು ಸ್ನೇಹಿತರು ಎಲ್ಲರಿಗೂ ಬರಸಿಡಿಲು ಬಡಿದಂತಾಯಿತು. ಮಕ್ಕಳಾರೂ ಉದ್ಯೋಗದಲ್ಲಿರಲಿಲ್ಲ. ಎಲ್ಲಾ ಹೊಣೆ ಪತ್ನಿ ರೇವಮ್ಮನವರಿಗೆ ಹೊರಲಾರದ ಹೊರೆಯಾಗಿ ದಿಕ್ಕು ತೋಚದಂತಾಗಿದ್ದ ಸಂದರ್ಭದಲ್ಲೇ ಗಾಯದ ಮೇಲೆ ಬರೆ ಎಳೆದಂತೆ ರಾಮಯ್ಯನವರು ಮಾಡಿದ ಸಾಲಕ್ಕಾಗಿ ವಿಶ್ವೇಶ್ವರಪುರದಲ್ಲಿನ ಮನೆ (ವಿ.ವಿ.ಪುರಂ ಕಲಾ ಕಾಲೇಜಿನ ಎಡಭಾಗ (ದಕ್ಷಿಣ)ಕ್ಕಿರುವ ಮೂರನೇ ಮನೆ ಇಂದಿಗೂ, ಅಂದಿನ ರಾಮಯ್ಯನವರ ಮನೆ ಬೇರೆಯವರ ಸುಪರ್ತಿಯಲ್ಲಿ ಯಥಾಸ್ಥಿತಿಯಲ್ಲಿಯೇ ಇದೆ) ಸಾಲಗಾರರ ಪಾಲಾಯಿತು. ಇಂತಹ ಸಂದರ್ಭದಲ್ಲೂ ಧೃತಿಗೆಡದ ರೇವಮ್ಮನವರು ಜಾಣತನದಿಂದ ಉಳಿಸಿದ್ದ ಹಣದಿಂದ ಗವಿಪುರಂನಲ್ಲಿ ಮನೆಯೊಂದನ್ನು ಕಟ್ಟಿಕೊಂಡು ಎಲ್ಲಾ ಮಕ್ಕಳಿಗೂ ಶಿಕ್ಷಣ ಮುಂದುವರಿಸಿ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಗಂಡು ಮಕ್ಕಳು ಉದ್ಯೋಗಸ್ತರನ್ನಾಗಿ ಮಾಡಿಸಿದರು. ಕೆ.ಹೆಚ್. ರಾಮಯ್ಯನವರ ನಿರಂತರ ಸೇವೆ

ಅವರ ಸುಪುತ್ರರಾದ ಐ.ಎ.ಎಸ್. ಅಧಿಕಾರಿ ಕೆ.ಆರ್. ಮರುದೇವೇಗೌಡರಿಂದಲೂ ಮುಂದುವರಿಯಿತು.

1906ರಲ್ಲಿ ಒಕ್ಕಲಿಗರ ಸಂಘವು ಸ್ಥಾಪಿತವಾದಾಗ ಶ್ರೀ ರಾಮಯ್ಯನವರಿಗೆ ತಾವು ಬೇಡುತ್ತಿದ್ದ ಅಪಾರವಾದ ಸೇವಾಸನ್ನಿಧಿಯು ದೊರಕಿದಂತಾಯಿತು. ಹಳ್ಳಿಗಾಡುಗಳಲ್ಲಿ ಬೇಸಾಯಗಾರರಾಗಿ ಜೀವಿಸುತ್ತಿರುವ ಒಕ್ಕಲಿಗರನ್ನು ಉದ್ಧಾರಮಾಡಬೇಕೆಂಬ ಅವರ ಆಕಾಂಕ್ಷೆಯು ಉತ್ಸಾಹದಿಂದಲೂ, ಶಕ್ತಿ ಸಾಹಸದಿಂದಲೂ ಪ್ರಜ್ವಲಿಸಿತು. ಅವರು ಈ ಮಹತ್ಕಾರ್ಯಕ್ಕೆ ಸಂಪೂರ್ಣ ಹೃದಯದಿಂದ ಕೈಹಾಕಿದರೂ, ತಮ್ಮ ಉತ್ಕಟಾಭಿಲಾಷೆಯನ್ನು ತೋರ್ಪಡಿಸಲು ತಾವು ಕೆಲವು ಸ್ನೇಹಿತರ ಬಲವಂತದಿಂದ ಒಪ್ಪಿದ್ದ ಸರ್ಕಾರಿ ನೌಕರಿಯನ್ನು ಬಿಟ್ಟು ಬರುವರಾಗಿಯೂ, ಕುಲ ಸೇವೆಗಾಗಿ ಸಂಸ್ಥಾನದ ಪ್ರತಿ ಹಳ್ಳಿಗೂ ಹೋಗಿ ಭಿಕ್ಷೆಬೇಡಿ ಸಂಘಕ್ಕಾಗಿ ಹಣವನ್ನು ಶೇಖರಿಸುವುದಾಗಿಯೂ ಮಾತುಕೊಟ್ಟರು. ಆಡಿದ ಮಾತಿನಂತೆ ನಡೆದರು. ಸರ್ಕಾರದಿಂದ ರಜ ಪಡೆದು ಹಳ್ಳಿ-ಹಳ್ಳಿಗಳಿಗೆ ಹೋಗಿ ಭಾಷಣ ಕೊಡುತ್ತ ಸಂಘ ಸೇವೆ ಮಾಡಲು ಉದ್ಯುಕ್ತರಾದರು. ಅವರ ಈ ವಿಶ್ವ ಪ್ರಯತ್ನವು ದೇಶದಲ್ಲೆಲ್ಲ ಹುರಿದುಂಬಿಸಿತು. ಆಗ ದಿವಾನ್‌ರಾಗಿದ್ದ ಶ್ರೀಮಾನ್ ವಿ.ಪಿ. ಮಾಧವರಾಯರ ಗಮನಕ್ಕೂ ಬಂತು. ಶ್ರೀ ರಾಮಯ್ಯನವರು ತಮ್ಮ ಧ್ಯೇಯವನ್ನು ದಿವಾನ್‌ರವರಿಗೆ ತಿಳಿಸಿದರು. ದಿವಾನರು, ಶ್ರೀ ರಾಮಯ್ಯನವರ ಸತ್ಯ ಸಂಧತೆ, ಶ್ರದ್ಧೆ ಉತ್ಸಾಹ ಶಕ್ತಿ ಸಾಹಸಗಳ ಮೆಚ್ಚಿ ಕೂಡಲೇ ಶ್ರೀ ರಾಮಯ್ಯನವರನ್ನು ಕೇಳಿದ ಸಹಾಯವನ್ನೆಲ್ಲಾ ಮಾಡಿಕೊಡುವುದಾಗಿ ವಾಗ್ದಾನ ಮಾಡಿದರು. ಅಲ್ಲದೆ ಈ ವಿಷಯವನ್ನು ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲೂ ಪ್ರಕಟಿಸಿ ಒಕ್ಕಲಿಗರ ಸೇವೆಯ ಕಾರ್ಯಕ್ಕೆ ಆರ್ಶೀವಾದ ಕೊಟ್ಟರು. ಇಷ್ಟೆಲ್ಲ ನಡೆದದು ಶ್ರೀ ರಾಮಯ್ಯನವರಿಂದಲೇ.

ಒಕ್ಕಲಿಗರ ಮಹಾಜನರ ಮೊದಲನೆಯ ಮಹಾಸಭೆಯು 1906ರಲ್ಲಿ ನಡೆಯಿತು. ಶ್ರೀ ರಾಮಯ್ಯನವರು ತಮ್ಮ ಆಯಾಸವನ್ನು ನೋಡದೆ ಘನತರವಾಗಿ ಹಳ್ಳಿಗಾಡುಗಳಲ್ಲಿ ಒಕ್ಕಲಿಗರ ಸೇವೆಯ ಕಾರ್ಯ ಗೌರವವನ್ನು ಧ್ವನಿಮಾಡಿ, ಕುಲಸ್ಥರಲ್ಲಿ ಹೇರಳವಾದ ನಂಬಿಕೆಯನ್ನು ಹುಟ್ಟಿಸಿದುದರ ಪ್ರತಿ ಫಲವಾಗಿ ಒಕ್ಕಲಿಗ ಜನಾಂಗದಲ್ಲಿ ಒಂದು ವಿಧವಾದ ನವಚೇತನವೂ, ಆತ್ಮಗೌರವೂ ಹೆಮ್ಮೆಯೂ ಉಕ್ಕಿ ಓಲಾಡಿಸಿಬಿಟ್ಟಿತು. ಇದುವರೆಗೂ ಒಬ್ಬರಿಗೊಬ್ಬರು ತಿಳಿಯದೆ ಇದ್ದ ಒಕ್ಕಲಿಗರು ಮುಂದೆ ದೇಶದ ನಾನಾ ಭಾಗಗಳಿಂದ ಬಂದು ಒಂದು ಕಡೆ ಸೇರಿ ಒಗ್ಗಟ್ಟಿನಿಂದ ನಡೆಯುವವೆಂಬ ಆವೇಶವು ಎಲ್ಲರ ಎದೆಯಲ್ಲೂ ತುಂಬಿ ತುಳುಕಿತು. ಒಕ್ಕಲಿಗರ ಮಹಾಸಭೆಗೆ ಗಣನೆಯಿಲ್ಲದಷ್ಟು ಜನರು ಸೇರಿದರು. ಈ ದಿನ ನಾವು

ಸೇರಿರುವ ಈ ಒಕ್ಕಲಿಗರ ಸಂಘದ ಸಭಾ ಮಂದಿರವು ಹಿಂದೆ ಶ್ರೀ ರಾಮಯ್ಯನವರು ಮಾಡಿದ ಅಖಂಡ ಕುಲಸೇವೆಯ ಹೆಗ್ಗುರುತು. ಅಲ್ಲದೆ ಇದು ಆ ಸಮಯಕ್ಕೆ ಧೈರ್ಯದಿಂದ ಕುಲಕಾಣಿಕೆಯನ್ನು ಕೊಟ್ಟ ಧರ್ಮಾತ್ಮರಾದ ಅನೇಕ ಒಕ್ಕಲಿಗ ಮಹಾಜನರ ಪುಣ್ಯ ಪರಿಪಾಕವೆಂದರೂ ಆಗುವುದು.

ಶ್ರೀಮಾನ್ ರಾಮಯ್ಯನವರ ಮಹಾಕಾರ್ಯವು ಅಷ್ಟೊಂದು ಅತ್ಯಂತ ಪ್ರಬಲ ಸಾಧನೆಯಾಗಿದ್ದುದರಿಂದ ಒಕ್ಕಲಿಗ ಜನಾಂಗದ ಉತ್ಸಾಹ ಯಾವ ಮಟ್ಟ ಮುಟ್ಟಿತೆಂದರೆ, ಅದರಿಂದ ಸರ್ಕಾರಿ ಅಧಿಕಾರಿಗಳು ಹಾಗೂ ಇತರೆ ಸಮುದಾಯದಲ್ಲಿದವರಲ್ಲಿ ಭೀತಿಯುಂಟುಮಾಡಿತು. ಆದರೆ ಈ ಪರಮೋದ್ಯಮವು ಒಕ್ಕಲಿಗರ ವಿದ್ಯಾಭ್ಯಾಸ ಮತ್ತು ನಾಗರಿಕ ಅಭಿವೃದ್ಧಿಯ ಕಾರ್ಯವೆಂದು ಸ್ಪಷ್ಟವಾಗಿದ್ದುದರಿಂದಲೂ, ಶ್ರೀಮಾನ್ ವಿ.ಪಿ. ಮಾಧವ ರಾಯರ ಪ್ರಾಮುಖ್ಯ ಸಹಾಯ ಸಂಪತ್ತಿನಿಂದಲೂ ಕೊನೆಗೆ ಎಲ್ಲರೂ ಇದೊಂದು ಶಾಂತಿಪೂರ್ವಕವಾದ ಕುಲಸೇವಾ ಕಾರ್ಯವೆಂದು ನಂಬಿದರು. ಶ್ರೀ ರಾಮಯ್ಯನವರು ತಮಗಿನ್ನೂ 27 ವರ್ಷ ವಯಸ್ಸಿರುವಾಗಲೇ ಶ್ರೀಮನ್ ಮಹಾರಾಜರವರನ್ನು ಭೇಟಿ ಮಾಡಿ, ತಮ್ಮ ಸಂಘದ ಸೇವಾಪೂರ್ವಕವಾದ ಮಹಾಕಾರ್ಯವನ್ನು ಖಾವಂದರಿಗೆ ಪರಾಂಬರಿಕೆ ಮಾಡಿದ್ದರು. ಖಾವಂದರವರು ಇದನ್ನು ತಿಳಿದು 1907ರಲ್ಲಿ ಮೈಸೂರಿನಲ್ಲಿ ನಡೆದ 2ನೇ ಒಕ್ಕಲಿಗರ ಮಹಾಸಭೆಗೆ ಅಧ್ಯಕ್ಷರಾಗಲು ಒಪ್ಪಿದರು. ಆ ಸಮಯದಲ್ಲಿ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ ಅಮೋಘ ವಾಕ್ಯಗಳು ಒಕ್ಕಲಿಗರ ಸಂಘದ ಇತಿಹಾಸದಲ್ಲಿ ಘನತರವಾಗಿ ಈಗಲೂ ನಿಂತಿವೆ. ನಾನು ಒಂದು ಸ್ವಂತ ವಿಚಾರವನ್ನು ಈ ಸಮಯದಲ್ಲಿ ತಿಳಿಸಬೇಕಾಗಿದೆ. ಒಕ್ಕಲಿಗರ ಮಹಾಜನರ ಮೊದಲನೆಯ ಮಹಾಸಭೆಯನ್ನು ನಡೆಸುವರೆಂಬ ವದಂತಿಯನ್ನು ತಿಳಿದು ನಾನು ಕೆಲವು ದಿನ ಮುಂಚಿತವಾಗಿ ಬೆಂಗಳೂರಿಗೆ ಬಂದೆನು. ಮಹಾಸಭೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಚಲಾವಣೆ ಮತ್ತು ಮೆರವಣಿಗೆಯ ಸಮಸ್ತ ಕಾರ್ಯವನ್ನೂ ನನಗೆ ಮಹಾಜನರು ಒಪ್ಪಿಸಿದರು. ಈ ಎಲ್ಲಾ ಕೆಲಸಗಳು ಮುಗಿದ ಮೇಲೆ ಕಾರ್ಯಕ್ರಮವನ್ನು ಪರಿಶೀಲಿಸುವಾಗ ನಾನು ಮಾಡಿದ ಸೇವೆಯು ಶ್ರೀ ರಾಮಯ್ಯನವರಿಗೂ ಇತರ ಕುಲ ಮುಖಂಡರಿಗೂ ಮೆಚ್ಚುಗೆಯನ್ನುಂಟು ಮಾಡಿತು. ಮುಂದೆ ನಾನು ಸಂಘದ ಕಾರ್ಯಕ್ಕೆ ಬೇಕಾಗುವುದಾಗಿ ಅವರು ತಿಳಿಸಿದರು. ಕೂಡಲೇ ಶ್ರೀ ರಾಮಯ್ಯನವರು ನನ್ನನ್ನು ಬೆಂಗಳೂರಿಗೆ ವರ್ಗಮಾಡಿಸುವ ಪ್ರಯತ್ನ ಮಾಡಿದರು. ದಿವಾನ್‌ರವರನ್ನು ಕಂಡು ನನಗೆ ಸೆಕ್ರಿಟೇರಿಯಟ್ಟಿನಲ್ಲಿ ಒಂದು ಸ್ಥಾನವನ್ನು ಕಲ್ಪಿಸಿ ಕೊಡುವುದಾಗಿ ಅರಿಕೆಮಾಡಲು ಅದರಂತೆ ನಡೆಸಿಕೊಟ್ಟರು. ನಾನು ಬೆಂಗಳೂರಿಗೆ ಬಂದ ಮೇಲೆ ಶ್ರೀ ರಾಮಯ್ಯನವರು ಒಂದು ಉತ್ತಮ ಸಲಹೆಯನ್ನು ಕೊಟ್ಟರು. ಅವರು

ದೇಶದಲ್ಲಿ ಸಂಚರಿಸಿ ಕುಲಸೇವೆಯನ್ನು ಮಾಡಿ ಸಭೆಗಳನ್ನು ಸೇರಿಸುವುದೆಂದೂ, ನಾನಾ ಆಫೀಸಿನಲ್ಲಿದ್ದು ಕೆಲಸ ಮಾಡುವುದೆಂದೂ, ಹೀಗೆ ಮಾಡಿದರೆ ನಾವಿಬ್ಬರೂ ಸಂಘವನ್ನು ಸ್ಥಿರವಾದ ಅಸ್ಥಿಭಾರದ ಮೇಲಿಟ್ಟು, ಅದು ಅಭಿವೃದ್ಧಿಗೆ ಬರುವಂತೆ ಕೆಲಸಮಾಡಲು ಸಾಧ್ಯವಾಗುವುದೆಂದು ತಿಳಿದರು. ಈ ಸಲಹೆಯನ್ನು ಕೂಲಂಕಷವಾಗಿ ಪರ್ಯಾಲೋಚನೆ ಮಾಡಿ, ಕಡೆಗೆ ನಾನು ಒಪ್ಪಿದ ಮೇಲೆ ಒಂದು ದಿನ ಅವರು ನನ್ನನ್ನು ತಮ್ಮ ಪ್ರಾರ್ಥನಾ ಮಂದಿರಕ್ಕೆ ಕರೆದು ಹತ್ತಿರದಲ್ಲಿ ಕುಳ್ಳಿರಿಸಿ, ತಮ್ಮ ಧ್ಯಾನವಾಣಿಯನ್ನು ಗಟ್ಟಿಯಾಗಿ ದೇವರೆದುರಿಗೆ ಉಚ್ಚರಿಸಿ, ಕುಲಸೇವೆಗಾಗಿ ದೀಕ್ಷಾಬದ್ಧರಾಗಿರುವ ನಮ್ಮಿಬ್ಬರನ್ನೂ ಕಾಪಾಡುವಂತೆ ಬೇಡಿಕೊಂಡರು. ಇವರ ಪ್ರಾರ್ಥನೆಯು ಆತ್ಮವನ್ನು ಹೊಕ್ಕು ಉಮ್ಮಳಿಸಿತು. ಕಂಬನಿಗಳು ನಮ್ಮಿಬ್ಬರ ಕಣ್ಣಿನಿಂದಲೂ ಹನಿತವು. ನಾವಿಬ್ಬರು ಸ್ತಬ್ಧರಾಗಿ ಪರಸ್ಪರ ತಬ್ಬಿಕೊಂಡು ಆನಂದದಿಂದ ಓಲಾಡಿದೆವು. ಆನಂತರ ಅವರು ನನ್ನನ್ನು ಶ್ರೀಮಾನ್ ವಿ.ಪಿ. ಮಾಧವರಾಯರ ಬಳಿಗೆ ಕರೆದೊಯ್ದು ನಡೆದ ವಿಚಾರವನ್ನೆಲ್ಲಾ ತಿಳಿಸಿ, ನನಗೆ ದೀರ್ಘಕಾಲ ಸಂಬಳವಿಲ್ಲದೆ ರಜಾ ಕೊಡುವಂತೆಯೂ, ಅದರಿಂದ ನಾನು ಚಿಂತೆಯಿಲ್ಲದೆ ಸಂಘ ಸೇವೆ ಮಾಡಿ ಒಕ್ಕಲಿಗರ ಪತ್ರಿಕೆಯ ಎಡಿಟರಾಗಿಯೂ, ಪ್ರೆಸ್ಸಿನ ಮೇಲ್ವಿಚಾರಕನಾಗಿಯೂ ಇರಬಹುದೆಂದು ಅರಿಕೆ ಮಾಡಿದರು. ದಿವಾನರು ಆ ಕೂಡಲೇ ನಮ್ಮ ಬಿನ್ನಹವನ್ನು ಲಾಲಿಸಿದರು. 1907ನೆಯ ಯುಗಾದಿ ಹಬ್ಬದ ದಿನ ಒಕ್ಕಲಿಗರ ಪತ್ರಿಕೆಯ ಮೊದಲನೆಯ ವಾರದ ಪತ್ರಿಕೆಯು ನನ್ನ ಸಂಪಾದಕತ್ವದಲ್ಲಿ ಹೊರಟಿತು. 1907ನೆಯ ನವೆಂಬರಿನಲ್ಲಿ ಒಕ್ಕಲಿಗರ ಸಂಘ ಪ್ರೆಸ್ ಸಹ ಸ್ಥಾಪಿತವಾಯಿತು. ನನ್ನ ಸಂಬಂಧವಾದ ಈ ವಿಷಯವನ್ನು ಇಲ್ಲಿ ಹೇಳಿಕೊಳ್ಳಲು ನನಗೆ ಹೆಮ್ಮೆಯಲ್ಲ, ಮುಖ್ಯವಾಗಿ ಶ್ರೀ ರಾಮಯ್ಯನವರಿಗೆ ಒಕ್ಕಲಿಗರ ಸಂಘದ ನಿಜವಾದ ಉದ್ಧಾರ ಕಾರ್ಯಕ್ಕಾಗಿ ಎಷ್ಟರ ಮಟ್ಟಿಗೆ ಉತ್ಸಾಹವೂ, ಭಕ್ತಿಶ್ರದ್ಧೆಯೂ ಇದ್ದಿತೆಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಶ್ರೀ ರಾಮಯ್ಯನವರು ನನಗೆ ಮಾಡಿದ ಸಹಾಯವು ಇಷ್ಟೇ ಅಲ್ಲ. ಅವರು ತಮ್ಮ ಮನೆಯಲ್ಲೇ ಭೋಜನಕ್ಕೆ ಏರ್ಪಡಿಸಿ, ನಾನು ಜೀವನಕ್ಕಾಗಿ ಮರುಗಿ ಕೊರಗದಂತೆ ಮಾಡಿ ಏಕಮನದಿಂದ ಸಂಘದ ಕೆಲಸವನ್ನು ನಡೆಸಲು ಅಣಿಮಾಡಿದರು. ಸಂಘ ಸೇವೆಗಾಗಿ ಅವರು ಯಾವುದನ್ನು ತ್ಯಾಗ ಮಾಡಲು ಸಿದ್ಧರಾಗಿದ್ದರು. ರಾಮಯ್ಯನವರಿಗೆ ಒಕ್ಕಲಿಗರು ನಾಗರಿಕರಾಗಿ ಮುಂದುವರಿದರೆ ಅಷ್ಟೇ ಸಾಕಾಗಿತ್ತು.

ಮೇಲ್ಕಂಡ ಹಿಂದಿನ ನೆನಪುಗಳು ಶ್ರೀ ರಾಮಯ್ಯನವರ ಮಹತ್ತಿನ ನಿಜಾಂಶವನ್ನು ವ್ಯಕ್ತಪಡಿಸುವುವು. ಅವರ ಮಹತ್ತಿಗೆ ತಳಹದಿಯು ಬಾಲ್ಯದಲ್ಲೇ ಭದ್ರವಾಗಿತ್ತು. ಅಂದಿನಿಂದಲೂ ಅವರು ಪ್ರಿಯಮತವುರಾಗಿಯೂ, ವಿನೋದಭಾಷಿಗಳಾಗಿಯೂ, ಉತ್ಸಾಹಶಾಲಿಗಳಾಗಿಯೂ ಇದ್ದರು. ಇದು

ನಮಗೆಲ್ಲಾ ತಿಳಿದೇ ಇದೆ. ಜನಸೇವೆಯ ಹಂಬಲವು ಇವರಲ್ಲಿ ತುಂಬಿತ್ತು. ಆದರಲ್ಲೂ ಯುವಕರ ಹಾಗೂ ಮಾನವ ಕುಲದ ಒಳಿತಿಗೆ ಭಾವಪೂರ್ಣ ತೊಡಗಿಸಿಕೊಂಡರು. ತಮ್ಮ ಕಂಠೀರವದಿಂದ ಮನಸ್ಸನ್ನು ಗೆಲ್ಲುತ್ತಿದ್ದಂತೆಯೇ ತಮ್ಮ ವಿನೋದ ವಿವಾಸದಿಂದ ಸಭಿಕರನ್ನು ಮೈಮೆರೆಯುವಂತೆ ನಗಿಸಿಬಿಡುತ್ತಿದ್ದರು. ಅವರಿಗೆ ಮೇರೆಯರಿಯದ ಸಾಹಸವಿತ್ತು. ಇದರಿಂದ ಅವರು ಎಷ್ಟೋ ಅಸಾಧ್ಯವೆನಿಸಿದ್ದ ಕಾರ್ಯಗಳನ್ನೆಲ್ಲಾ ಸಾಧಿಸಿರುವರು. ಅವರಿಗೆ ಎಲ್ಲರೂ ಮಿತ್ರರೇ; ಶತ್ರುಗಳೇ ಇಲ್ಲ. ಪಾಪವೆಂಬುದು ಅವರನ್ನು ಮುಟ್ಟಲಿಲ್ಲ. ತಾವು ಹೇಗೆ ಹಸನ್ಮುಖಿಗಳಾಗಿ ಜೀವಿಸಿದರೋ ಹಾಗೆಯೇ ಸುಖವಾಗಿ ಸುಪ್ರಶಾಂತರಾಗಿ, ಸತ್ಪುರುಷರಾಗಿ, ಸದ್ದೈವಭಕ್ತರಾಗಿ ಸಾಗಿಹೋದರು. ಅವರ ದಿವ್ಯ ಆತ್ಮಕ್ಕೆ ಶಾಂತಿಯುಂಟಾಗಲಿ.

ಅವರು ದೊಡ್ಡ ಸಂಸಾರವನ್ನು ಬಿಟ್ಟು ಹೋಗಿರುವವರು ಅವರನ್ನು ತಿಳಿದವರು ಅನೇಕರಿರುವರು. ಅವರನ್ನು ತಿಳಿಯದಿದ್ದವರಿಲ್ಲ. ಇವರೆಲ್ಲರಿಗೂ ಅವರ ನಷ್ಟವು ಸ್ವಂತನಷ್ಟವಾಗಿದೆ. ಬಹಳ ದು:ಖಕ್ಕೀಡಾಗಿರುವ ಈ ದುರ್ಘಟನೆಯಲ್ಲಿ ಶ್ರೀ ರಾಮಯ್ಯನವರ ಮರಣಕ್ಕಾಗಿ ನಮ್ಮ ಕಡು ಸಂತಾಪವನ್ನು ಸೂಚಿಸಿ. ಅವರ ಕುಟುಂಬಕ್ಕೆ ನಮ್ಮ ದು:ಖವಾದವನ್ನು ಕಳುಹಿಸುವುದು ನಮ್ಮ ಕರ್ತವ್ಯವಾಗಿದೆ.

"ಆಕರ್ಷಣೀಯರಾದ, ಅಚ್ಚುಕಟ್ಟಾದ ಉಣ್ಣೆಬಟ್ಟೆಯ ಸೂಟುಧಾರಿಗಳಾದ, ಜರಿ ಪೇಟಧರಿಸಿರುವ, ನಗುಮುಖದ, ಸ್ನೇಹಮಯರಾದ, ಯಾವಕೂಟದಲ್ಲೂ ಜನಾದರಣೀಯರಾದ ವ್ಯಕ್ತಿ, ಬೆಂಗಳೂರಿನಲ್ಲಿ ರಾಜಕೀಯವಲ್ಲದ ಅನೇಕಾನೇಕ ಸದ್ಗೃಹಸ್ಥರ ಕೂಟಗಳಲ್ಲಿ ಶ್ರೀರಾಮಯ್ಯನವರು ಹಾಜರು. ಮನಮುಟ್ಟುವ ತಮ್ಮ ಕಪಟವಿಲ್ಲದ ಭಾಷಣಗಳಿಂದ ಸಭಿಕರನ್ನು ಆಕರ್ಷಿಸುತ್ತಿದ್ದರು. ನಾನು ಅವರನ್ನು ನೋಡುತ್ತಿದ್ದುದು ಅವರು ಬಾರ್-ಅಟ್-ಲಾ ತೇರ್ಗಡೆಯಾಗಿ ಇಂಗ್ಲೆಂಡಿನಿಂದ ಹಿಂದಿರುಗಿ ಬೆಂಗಳೂರಿಗೆ ಬಂದ ಮೇಲೆ" – ಟಿ. ರಾಜಯ್ಯಂಗಾರ್

70 ವರ್ಷಗಳಿಂದ ಕೆ.ಹೆಚ್. ರಾಮಯ್ಯ ಕುಟುಂಬಕ್ಕೆ ಪರಿಚಿತರಾದ ಟಿ. ರಾಜಯ್ಯಂಗಾರ್‌ರು ಕೆ.ಹೆಚ್. ರಾಮಯ್ಯ-ನವರನ್ನು ಕುರಿತು ನೆನಪುಗಳನ್ನು ಲೇಖನದಲ್ಲಿ ಸ್ಮರಿಸಿಕೊಂಡಿದ್ದಾರೆ.

ಕೆ.ಹೆಚ್. ರಾಮಯ್ಯನವರ ಸಂದೇಶ

ಸೋಮಾರಿತನವೇ ನಮ್ಮ ಅಜಾಗೃತಿಗೆ ಕಾರಣ. ಸರಿಯಾದ ರೀತಿಯಲ್ಲಿ ವಿಮರ್ಶಿಸಿ ನೋಡಿದರೆ ನಮ್ಮ ಜೀವನವು ಜೀವನವೇ ಅಲ್ಲ. ಏನೋ ಒಂದು

ಮಾದರಿಯಲ್ಲಿ ನಾವು ಕಾಲವನ್ನು ತಳ್ಳುತ್ತಿದ್ದೇವೆ. ದಿನಗಳು ಕಳೆದವು. ವಾರ, ತಿಂಗಳುಗಳೂ ಕಳೆದವು – ಎಣಿಸಿಕೊಂಡು ಒಂದು ರೀತಿಯ ಹಾಳು ವಿಳಂಬದಿಂದ ನಮ್ಮ ಜೀವನವನ್ನೇ ವ್ಯರ್ಥಗೊಳಿಸುತ್ತಿದ್ದೇವೆ. ಲೆಕ್ಕಾಚಾರದಿಂದ ನನ್ನ ಜೀವನದಲ್ಲಿ ಲಭಿಸಿರುವ ಪುಣ್ಯ ಪುರುಷಾರ್ಥಗಳೇನು? ಹುಟ್ಟಿದ್ದಕ್ಕೆ ಏನಾದರು ಒಂದು ಮಹತ್ಕಾರ್ಯವನ್ನು ಮಾಡಲೇಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ನಾವು ಕೆಲಸ ಮಾಡುವ ಹಾಗೆ ಕಾಣುವುದಿಲ್ಲ. ನಮ್ಮವರ ಅಜಾಗೃತಿಗೆ ಇದೇ ಕಾರಣ. ಇಡೀ ಒಕ್ಕಲಿಗ ಜನಾಂಗವೇ ಲವಲವಿಕೆಯಿಂದಿರಬೇಕು. ಲವಲವಿಕೆ, ಎಚ್ಚರಿಕೆ ಸ್ಥೈರಣೆ ಈ ಸದ್ಗುಣಗಳು ಮೂಡಿ ಬರಬೇಕು. ಚಟುವಟಿಕೆಯುಳ್ಳ ಮನುಷ್ಯನನ್ನು ತಮ್ಮಂತೆಯೇ ಮಾಡಿಕೊಳ್ಳುವುದೇ ಹೊರತು ಇಂತಹ ಸೋಮಾರಿಗಳು ತಾವು ಬೇರೆ ಅವನಂತೆ ಆಗುವುದೂ ಇಲ್ಲ. ಆ ಬಗ್ಗೆ ಪ್ರಯತ್ನವೂ ಇಲ್ಲ. ತಾವು ಕೆಲಸ ಮಾಡದಿದ್ದರೆ ಚಿಂತೆಯಿಲ್ಲ, ಒಳ್ಳೆಯ ಕೆಲಸ ಮಾಡುವವರನ್ನಾದರೂ ಅವರ ದಾರಿಗೆ ಬಿಡಬಾರದೆ?

* "ಒಕ್ಕಲಿಗರು ನಾಗರಿಕರಾಗಿ ಮುಂದುವರಿದರಷ್ಟೇ ಸಾಕು."

* "ಒಕ್ಕಲಿಗರ ಸಮಾಜದ ಉದ್ಧಾರವೇ ಶಿಕ್ಷಣ ಕೊಡಿಸುವುದರ ಮೇಲೆ ಅವಲಂಬಿಸಿದೆ."

*ವಿದ್ಯೆಯಿಂದಲೇ ಎಂಥಹ ಅಸಹಾಯಕನೂ ಗೌರವಿಸಲ್ಪಡುವನು, ತಾನೂ ಗೌರವವನ್ನು ಪಡೆಯುವವನು.

"ಭಾರತೀಯ ಸಮಾಜದಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಇತರೆ ಎಲ್ಲಾ ವರ್ಗಗಳ ಎಲ್ಲರೂ ಮನಸ್ಸು ಕಳಕೊಂಡವರು. ಮೈಮಾರಿಕೊಂಡವರು. ಹುಟ್ಟಿನಿಂದ ಮೂಲ ನಿವಾಸಿಗಳೂ ಅಥವಾ ಸ್ವದೇಶಿಯರಾಗಿದ್ದರೂ ತಮ್ಮಗಳ ಬದುಕಿನಲ್ಲಿ ಎಲ್ಲರೂ ಪರದೇಶಿಗಳು. ರೈತರ ಶೂದ್ರರ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ಶೋಷಣೆಯ ಪಾಪದ ಸ್ಥಿತಿ. ಯಾವುದೇ ತಪ್ಪು ಮಾಡದಿದ್ದರೂ ತಾವೇ ನತದೃಷ್ಟರೆಂದು ಘೋಷಿಸಿಕೊಂಡಿರುವ ಬಹುಸಂಖ್ಯಾತರು. ತಾವು ಮಾಡುವ ಕೆಲಸ ತಿನ್ನುವ ಆಹಾರ ಬಾಳುವ ಬದುಕೆಲ್ಲ ಪಾಪದ ಕೆಲಸ ಎಂದು ತಿಳಿದುಕೊಂಡವರು. ಈ ಪಾಪಕ್ಕೆ ಕಾರಣ ಏನು? ಎಂಬ ಪ್ರಶ್ನೆಗೆ ಸೂಕ್ಷ್ಮವಾಗಿ ಉತ್ತರ ಹುಡುಕಕೊಂಡರೆ ಸಿಗುವ ಉತ್ತರ "ಪರಿಪೂರ್ಣ ಅಜ್ಞಾನ" ತಮ್ಮದೇ ಬದುಕನ್ನು ಸಂಸ್ಕೃತಿಯನ್ನು ರೂಪಿಸಿಕೊಳ್ಳದ ಜನ ಭೂಮಿಯಲ್ಲಿದ್ದರೂ ನರಕದ ಬದುಕು ಬದುಕುತ್ತಿದ್ದಾರೆ. ಕ್ರಿಶ್ಚಿಯನ್ನರು ಮುಸ್ಲಿಂರು ಬ್ರಾಹ್ಮಣರು ತಮ್ಮದೇ ಬದುಕನ್ನು ಸಂಸ್ಕೃತಿ ಮಾಡಿಕೊಂಡಿದ್ದಾರೆ. ಒಕ್ಕಲಿಗರು ತಮ್ಮದೇ ಆದ ಸಂಸ್ಕೃತಿ ಇಲ್ಲದ ನರಕದಲ್ಲಿ ಬದುಕುತ್ತಿದ್ದಾರೆ. ಸ್ವಂತ ಸಂಸ್ಕೃತಿ ಇಲ್ಲದವರು ಈ ಭೂಮಿಯ

ಮೇಲೆ ಬದುಕಿಲ್ಲ. ಒಂದು ಜನಾಂಗ ಭದ್ರವಾಗಿ ರಕ್ಷಿತವಾಗಿ ಸುಖವಾಗಿ ನೆಮ್ಮದಿಯಾಗಿ ಬದುಕಲು ಸಂಸ್ಕೃತಿಯೊಂದು ಬೇಕು. ಪ್ರಾಚೀನ ಕಾಲದಿಂದಲೂ ಬಹುಸಂಖ್ಯಾತ ಜನರು ಗುಲಾಮ ಸಂಸ್ಕೃತಿಗೆ ಈಡಾದವರು. ಭೂಮಿಗೆ ಅಂಟಿಕೊಂಡು ತಮ್ಮ ಬದುಕನ್ನೆ ಅಡವಾನವಿಟ್ಟರು. ಬೇಸಾಯದಿಂದ ಹೊರಬಂದು ತಾನಿರುವ ದೇಶದ ಎಲ್ಲಾ ಹುದ್ದೆ ವ್ಯಾಪಾರ ವ್ಯವಹಾರ ಇತರೆ ವೃತ್ತಿಗಳಲ್ಲಿ ಸಮಾನವಾಗಿ ಭಾಗವಹಿಸುವ ಅವಕಾಶ ಬೇಕೆಬೇಕು. ಇವೆಲ್ಲದರಲ್ಲಿ ಭಾಗವಹಿಸಬೇಕಾದರೆ ಒಕ್ಕಲಿಗರು ತಮ್ಮ ಜಾತಿಯಲ್ಲಿ ಅಂಟಿಚಿಕೊಂಡಿರುವ, ಹಮ್ಮು ಬಡಾಯಿ ಅಹಂ ಗತ್ತು, ದೌಲತ್ತು ಬಿಟ್ಟು ಹೊರ ಬಂದು ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರಿ ಶಿಕ್ಷಣದ ಕಡೆ ಗಮನ ಹರಿಸಬೇಕೆಂದು" ಕೆ.ಹೆಚ್. ರಾಮಯ್ಯನವರು ಊರೂರು ಅಲೆದು ತಮ್ಮ ಜನರನ್ನು ಜಾಗೃತಿಗೊಳಿಸಿದರು.

* * * * *



ಹೆಚ್.ಸಿ. ದಾಸಪ್ಪ

– ಡಾ. ಪ್ರಮಿಳಾದೇವಿ

ಭಾರತದ ಸ್ವಾತಂತ್ರ್ಯ ಹೋರಾಟ ನಡೆದ ಕಾಲದಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧ ಭಾರತೀಯರು ನಡೆಸಿದ ಹೋರಾಟ ವಿಶ್ವದ ಚರಿತ್ರೆಯ ಅಪೂರ್ವ ಘಟನೆ. ಭಾರತ ಅಂದಿನ ಬಲಿಷ್ಠ ರಾಷ್ಟ್ರ, ಸೂರ್ಯ ಮುಳುಗದ ಸಾಮ್ರಾಜ್ಯದೆದುರು ಅಹಿಂಸಾತ್ಮಕವಾಗಿ ಹೋರಾಡಿ 1947ರ ಆಗಸ್ಟ ಹದಿನೈದರಂದು ಸ್ವಾತಂತ್ರ್ಯವನ್ನು ಗಳಿಸಿಕೊಂಡಿತ್ತು. ದೇಶಪ್ರೇಮಕ್ಕೆ ವಶರಾಗಿದ್ದ ಭಾರತೀಯರ ತ್ಯಾಗ ಬಲಿದಾನಗಳು ಪ್ರಪಂಚದ ಅವಿಸ್ಮರಣೀಯ ಬೆಳವಣಿಗೆ. ದೇಶಕ್ಕೆ ತಮ್ಮ ತನು, ಮನ, ಧನಗಳನ್ನು ತ್ಯಾಗಮಾಡಿದ ಸಾವಿರಾರು ಭಾರತೀಯರಲ್ಲಿ ನಮ್ಮವರೇ ಆದ ಎಚ್. ಸಿ ದಾಸಪ್ಪನವರು ಒಬ್ಬರು.

ದಾಸಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಾಗಲೇ ವಕೀಲಿ ವೃತ್ತಿಯಲ್ಲಿ ಸಫಲತೆಯನ್ನು ಕಂಡದ್ದಲ್ಲದೆ, ಅಂದಿನ ಪ್ರಗತಿಪರ ರಾಜ್ಯ; ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಗಳ ಸದಸ್ಯರಾಗಿ ಪ್ರಖ್ಯಾತ ಸಂಸದೀಯ ಪಟುವೆಂದು ಹೆಸರಾಗಿದ್ದರು. ದಾಸಪ್ಪನವರಲ್ಲಿನ ಉಜ್ವಲ ರಾಷ್ಟ್ರಪ್ರೇಮದಿಂದಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ತಮ್ಮ ಯಶಸ್ವಿ ವಕೀಲಿ ವೃತ್ತಿಯನ್ನು, ತಾವು ಗಳಿಸಿಕೊಂಡಿದ್ದ ತಮ್ಮ ಕಕ್ಷಿದಾರರನ್ನು, ಸಮೃದ್ಧ ನೆಮ್ಮದಿಯ ಬದುಕನ್ನು ಬಿಟ್ಟು ಐದಾರು ಬಾರಿ ಸೆರೆಮನೆಯ ವಾಸವನ್ನು ಅನುಭವಿಸಿ. ವಕೀಲಿ ವೃತ್ತಿಯಿಂದ ಹೊರಹಾಕಲ್ಪಟ್ಟು, ಆರೋಗ್ಯವನ್ನು ಕಳೆದುಕೊಂಡಂತಹ ತ್ಯಾಗಮಯಿ. ಅವರಲ್ಲಿನ ರಾಷ್ಟ್ರೀಯತೆ, ಭಾರತಮಾತೆಯನ್ನು ಪರಕೀಯರ ದಾಸ್ಯದಿಂದ ಬಿಡಿಸಲು ಹೋರಾಡಿದ ಮಹಾ ತ್ಯಾಗಿಗಳಲ್ಲಿ ದಾಸಪ್ಪನವರ

ಹೆಸರು ಕಂಡುಬರುತ್ತದೆ. ಅನಾಯಕತ್ವ, ಗುರಿ ಇಲ್ಲದ ಬೆಳವಣಿಗೆ, ಕ್ರಮ ತಪ್ಪಿದ ರಾಜಕೀಯದ ಇಂದಿನ ದಿನಗಳಲ್ಲಿ ದಾಸಪ್ಪನವರಂತಹ ನಾಯಕರನ್ನು ನೆನೆಯುವುದರಿಂದ ಇಂದಿನ ಯುವ ಜನತೆಗೆ ಸೂಕ್ತ ಮರ್ಗದರ್ಶನ ದೊರೆಯಬಲ್ಲದು. ದಾಸಪ್ಪನವರ ಹೋರಾಟದ ಬದುಕಿನ, ಸ್ವಾತಂತ್ರ್ಯಾನಂತರ ದೇಶ ಕಟ್ಟುವ ಕೆಲಸದಲ್ಲಿ ಅವರ ಪಾತ್ರ ಹಾಗೂ ಗಾಂಧಿವಾದಿಗಳಾಗಿ ಅವರ ಅಪರಿಮಿತ ಸೇವೆಯ ಕಿರು ಪರಿಚಯ ಈ ಸಮಯಕ್ಕೆ ಸೂಕ್ತವೆನಿಸುತ್ತದೆ.

ದೇಶದ ಏಳಿಗೆಗಾಗಿ ಅವಿರತ ದುಡಿದ ದಾಸಪ್ಪನವರದು ಆದರ್ಶನೀಯ ಬದುಕು. ಅವರ ಕೌಟುಂಬಿಕ ಹಿನ್ನಲೆ ವಿಶಿಷ್ಟ ವ್ಯಕ್ತಿತ್ವದ ಅವರ ಬದುಕಿನ ತಳಹದಿ. ಅವರ ಕುಟುಂಬದ ಪೂರ್ವಭಾವಿ ಸ್ಥಿತಿಗಳು ಅವರನ್ನು ಈ ತ್ಯಾಗಮಯ ಜೀವನಕ್ಕೆ ಸಿದ್ಧಗೊಳಿಸಿದ್ದವೆನ್ನಬಹುದು. ಅಂದಿನ ಪ್ರತಿಭಾನ್ವಿತ ನಾಯಕರ-ಲೊಬ್ಬರಾದ ದಾಸಪ್ಪನವರು ಉನ್ನತ ಉದಾತ್ತ ನಡವಳಿಕೆ, ನೇರ ನಡೆನುಡಿಗಳಿಂದ ಜನರ ಪ್ರೀತಿ ಗೌರವಗಳನ್ನು ಗಳಿಸಿದ್ದರು. ರಾಜ್ಯದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದು ಗಾಂಧೀಜಿಯರಿಂದ ಮೆಚ್ಚುಗೆಯನ್ನು ಪಡೆದಿದ್ದ ತ್ಯಾಗಮಯಿ ಹಾಗೂ ಸೇವಾಜೀವಿ ದಾಸಪ್ಪ. ಸೇವೆಯೆ ಅವರ ಬಾಳಿನ ಹೆಗ್ಗುರುತು. ಅವರು ಮಾತ್ರವಲ್ಲದೆ ಅವರೊಂದಿಗೆ ದೇಶಕ್ಕಾಗಿ ತ್ಯಾಗಮಾಡಿದ್ದ ಅವರ ಪತ್ನಿ, ಯಶೋಧರಾ ದಾಸಪ್ಪ ಮಕ್ಕಳಾದ ರಾಮದಾಸ್ ಹಾಗೂ ತುಳಸಿದಾಸರಲ್ಲೂ ಉನ್ನತ ಆದರ್ಶಗಳು ಮೈಗೂಡುವಂತೆ ಮಾಡಿದ್ದರು.

ಕೊಡಗಿನ ಹಿರಳ್ಳಿ ಚೆನ್ನಯ್ಯನವರ ಮಗನಾಗಿ ಜನಿಸಿದ್ದ ದಾಸಪ್ಪನವರದು ಅಪೂರ್ವ ವ್ಯಕ್ತಿತ್ವ. ಅವರು ಹುಟ್ಟಿದ್ದು ಕೊಡಗಿನ ಮಡಿಕೇರಿಯಲ್ಲಿ. ಅವರ ತಂದೆ ಹಿರಳ್ಳಿ ಚೆನ್ನಯ್ಯ ಅಲ್ಲಿನ ಜಿಲ್ಲಾ ನ್ಯಾಯಲಯದ ನ್ಯಾಯಾಧೀಶರಾಗಿದ್ದರು. ಬರಗಾಲದ ಸಂದರ್ಭದಲ್ಲಿ ತುಮಕೂರಿನ ಬಳಿಯ ಹಿರಳ್ಳಿಯಿಂದ ವಲಸೆ ಹೋಗಿದ್ದ ಕಾರ್ಮಿಕರೊಬ್ಬರಾಗಿದ್ದು ಕ್ರಮೇಣ, ನಾಯಕರಾಗಿ, ಕಾಫೀ ತೋಟದ ಆಳುಗಳ ಮೇಸ್ತ್ರಿಯಾಗಿದ್ದ ಬೇಲೂರಯ್ಯನವರ ಮಗ. ಅವರ ಮಗನಾದ ಚೆನ್ನಯ್ಯ ಹೈಸ್ಕೂಲ್ ವಿದ್ಯಾಭ್ಯಾಸದಲ್ಲಿ ತೊಡಗಿರುವಾಗಲೇ ತಂದೆಯ ಮರಣದ ನಂತರ ಕುಟುಂಬದ ಜವಾಬ್ದಾರಿ ಹೊರಬೇಕಾಯಿತು. ಆದರೆ ತಮ್ಮ ವಿದ್ಯಾಭ್ಯಾಸವನ್ನು ಮೊಟಕು-ಗೊಳಿಸದೆ ಕೆಲಸದಲ್ಲಿದ್ದುಕೊಂಡೆ ಶಿಕ್ಷಣವನ್ನು ಮುಂದುವರೆಸಿ ಸರ್ಕಾರಿ ಇಲಾಖೆಯಲ್ಲಿ ಉನ್ನತ ಹುದ್ದೆಗೇರಿ, ಬ್ರಿಟಿಷ್ ಸರ್ಕಾರದಿಂದ ಮಾನ್ಯತೆ ಗಳಿಸಿ 'ರಾವ್‌ಸಾಹೇಬ್' ಎಂಬ ಬಿರುದನ್ನು ಗಳಿಸಿದರು. ಎಂತಹ ಕಷ್ಟದ ಪರಿಸ್ಥಿತಿಯಲ್ಲೂ ಎದೆಗುಂದದೆ ತಮ್ಮ ಗುರಿ ಮುಟ್ಟುವ ಛಲ ಚೆನ್ನಯ್ಯನವರದಾಗಿದ್ದರೆ, ಈ ಗುಣಗಳನ್ನೇ ಅವರ

ಮಕ್ಕಳು ಅಳವಡಿಸಿಕೊಂಡದ್ದರಲ್ಲಿ ಆಶ್ಚರ್ಯವಿಲ್ಲ. ಚೆನ್ನಯ್ಯನವರೇ ದಾಸಪ್ಪನವರನ್ನು ಪ್ರಭಾವಿತ-ಗೊಳಿಸಿದ ಮೊದಲ ವ್ಯಕ್ತಿ.

ಚೆನ್ನಯ್ಯನವರು ನಿವೃತ್ತಿಯ ನಂತರ ಮೈಸೂರಿಗೆ ತಮ್ಮ ಕಾರ್ಯಕ್ಷೇತ್ರವನ್ನು, ಕುಟುಂಬವನ್ನು ವರ್ಗಾಯಿಸಿದರು. 1915ರ ಹೊತ್ತಿಗೆ ಮೈಸೂರುನಲ್ಲಿ ಹಿಂದೂಳಿದ ವರ್ಗಗಳ ನಾಯಕರೆಂದು ಗುರುತಿಸಲ್ಪಟ್ಟ ಚೆನ್ನಯ್ಯ ಮಹಾರಾಜರು ಮತ್ತು ಜನರು ತಮ್ಮ ಮೇಲಿಟ್ಟಿದ್ದ ವಿಶ್ವಾಸವನ್ನು ಪೂರ್ಣಗೊಳಿಸುವಂತೆ ಅಂದು ಮೈಸೂರಿನಲ್ಲಿ ಪ್ರಬಲವಾಗಿದ್ದ ಹಿಂದುಳಿದ ವರ್ಗಗಳ ಚಳುವಳಿಯ ನಾಯಕರಾಗಿ, ಒಕ್ಕಲಿಗ ಸಮಾಜದ ಪ್ರಭಾವಶಾಲಿ ನಾಯಕರಾಗಿ ಗುರುತಿಸಲ್ಪಟ್ಟರು. ಹಿಂದುಳಿದ ಜನರನ್ನು ಮೇಲೆತ್ತಲು ಶ್ರಮಿಸುತ್ತಿದ್ದ ಮಹಾರಾಜರ ಬೆಂಬಲಕ್ಕೆ ನಿಂತ ಕೆ.ಎಚ್ ರಾಮಯ್ಯನವರೊಂದಿಗೆ ಚೆನ್ನಯ್ಯ ಒಕ್ಕಲಿಗ ಸಮಾಜದ ಏಳಿಗೆಗೆ ಹಾಗೂ ಹಿಂದುಳಿದ ವರ್ಗಗಳಿವರಿಗೆ ರಾಜಕೀಯ ಮಾನ್ಯತೆ ತಂದುಕೊಡಲು ಮುಂದಾದಾಗ ಚನ್ನಯ್ಯನವರು ಮದ್ರಾಸ್ಸಿನಿಂದ ಬಂದಿದ್ದ

ಸಿ. ಆರ್. ರೆಡ್ಡಿಯವರ ಪ್ರಭಾವದಿಂದ ಅಲ್ಲಿನ ಜಸ್ಟಿಸ್ ಪಕ್ಷದಂತೆ ಇಲ್ಲಿಯೂ ರಾಜಕೀಯ ಪಕ್ಷವನ್ನು ಕಟ್ಟಲು ಉಳಿದ ಹಿಂದುಳಿದ ನಾಯಕರೊಂದಿಗೆ ಸೇರಿ 1917ರಲ್ಲಿ ಮೈಸೂರಿನ ಪ್ರಥಮ ರಾಜಕೀಯ ಪಕ್ಷ ಪ್ರಜಾಮಿತ್ರಮಂಡಲಿಯನ್ನು ಸ್ಥಾಪಿಸಿದರು.

ಪ್ರಜಾಮಿತ್ರಮಂಡಲಿಯ ಸ್ಥಾಪನೆಯೊಂದಿಗೆ ಮೈಸೂರಿನಲ್ಲಿ ರಾಜಕೀಯ ಚಟುವಟಿಕೆ ಪ್ರಾರಂಭವಾಯಿತು. ಆದರೆ ಪ್ರಜಾಮಿತ್ರ-ಮಂಡಲಿ ಕೇವಲ ಹಿಂದುಳಿದ ವರ್ಗಗಳೊಂದಿಗೆ ಗುರುತಿಸಿ-ಕೊಂಡರೆ, 1920ರಲ್ಲಿ ಆರಂಭಗೊಂಡ ಮೈಸೂರು ಜಿಲ್ಲಾ ಕಾಂಗ್ರೆಸ್ ಕೇವಲ ಬ್ರಾಹ್ಮಣರಿಂದ ತುಂಬಿತ್ತು. ಆದರೆ ವಿಶಾಲ ಮನೋಭಾವದ ದಾಸಪ್ಪನವರಂತಹ ಯುವಕರಿಗೆ ಈ ಎರಡೂ ಪಕ್ಷಗಳ ನಡೆ ಸರಿ ಕಾಣದೆ ಅವರು ತಮ್ಮದೆ ಮಾರ್ಗ ಹುಡುಕಬೇಕಿತ್ತು. ಅಂದಿನ ಮೈಸೂರಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರೆಂಬ ವಿಂಗಡನೆಯಲ್ಲಿ ಬ್ರಾಹ್ಮಣರೇ ಹೆಚ್ಚಿದ್ದ ಮೈಸೂರು ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ಉಳಿದವರು ಸಂಶಯದಿಂದ ನೋಡುತ್ತಿದ್ದ ಕಾಲವದು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂಬ ಹಂಬಲವಿದ್ದ ದಾಸಪ್ಪ-ನವರಂತಹ ಯುವಕರಿಗೆ ಇದೊಂದು ವಿಷಮ ಸ್ಥಿತಿ.

ಯುವಕ ದಾಸಪ್ಪನವರು ಮೈಸೂರುನಲ್ಲಿನ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸಲಾರಂಬಿಸಿದರು. ಆಗ ಮೈಸೂರು ಹಿಂದುಳಿದ ವರ್ಗಗಳು ನಡೆಸುತ್ತಿದ್ದ

ಚಳುವಳಿಯಿಂದ ಪ್ರೇರಿತರಾದದಲ್ಲದೆ ಅಂದಿನ ಪ್ರಭಾವಶಾಲಿ ನಾಯಕ ಸಿ. ಆರ್. ರೆಡ್ಡಿ, ಮಹಾರಾಜ ಕಾಲೇಜಿನಲ್ಲಿ ತಮ್ಮ ಅಧ್ಯಾಪಕರಿಂದ ಪ್ರಭಾವಿತರಾದರು. ಮುಂದೆ ವಕೀಲಿ ಪದವಿಗಾಗಿ ಮದ್ರಾಸ್, ಬಾಂಬೆಗಳಿಗೆ ಹೋದಾಗ ರಾಷ್ಟ್ರೀಯ ಚಳುವಳಿಯ ಪ್ರಭಾವಕ್ಕೆ ಸಿಲುಕಿದ್ದಲ್ಲದೆ ಸಾವಿರಾರು ಯುವಕರನ್ನು ತಮ್ಮ ತಾಯ್ನಾಡಿನ ಸೇವೆಗೆ ಸಿದ್ಧಗೊಳಿಸಿದ ಮಾಂತ್ರಿಕ, 'ಸಬರಮತಿಯ ಸಂತ' ಮಹಾತ್ಮಗಾಂಧಿಯವರ ಸಮ್ಮೋಹನಕ್ಕೊಳಗಾದರು

ದಾಸಪ್ಪನವರ ಮೇಲೆ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿ ಮಹಾತ್ಮ ಗಾಂಧಿ. ಮಹಾತ್ಮರ ಸಂಪರ್ಕ ದಾಸಪ್ಪನವರ ಬದುಕಿನ ಹಾದಿಯನ್ನು ಬದಲಿಸಿ, ಅವರಲ್ಲಿ ಹುದುಗಿದ್ದ ರಾಷ್ಟ್ರಭಕ್ತಿಯನ್ನು, ಹೊರತಂದು, ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಗಾಂಧೀಜಿಯವರ ನಾಯಕತ್ವವನ್ನು ಒಪ್ಪಿಕೊಳ್ಳುವು-ದೆಂದರೆ ತಮ್ಮ ವೈಯಕ್ತಿಕ ಆಸೆ ಗುರಿಗಳು ಬಿಟ್ಟು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ತ್ಯಾಗ ಬಲಿದಾನಗಳಿಗೆ ಸಿದ್ಧರಾಗಬೇಕಿತ್ತು, ತಮ್ಮ ವಕೀಲಿ ಪದವಿ ಹಾಗೂ ತಮಗಿದ್ದ ಪ್ರಭಾವದಿಂದ ರಾಜ್ಯದ ಗೆಜೆಟೆಡ್ ಹುದ್ದೇಗೇರಲು ಸಿದ್ಧರಾಗುತ್ತಿದ್ದ ದಾಸಪ್ಪನವರನ್ನು ಅಂದಿನ ರಾಷ್ಟ್ರೀಯ ಚಳುವಳಿಯ ಕಡೆ ಆರ್ಕಷಿಸಿದ್ದಲ್ಲದೆ, ಅವರನ್ನು ಮೈಸೂರಿನ ರಾಜ್ಯ ವ್ಯವಸ್ಥೆಯನ್ನು ಬದಲಿಸುವ ಚಳುವಳಿಯಲ್ಲಿ ಹಾಗು ನಂತರ ರಾಷ್ಟ್ರದ ಏಳಿಗೆಗೆ ತಮ್ಮ ಕೊಡುಗೆ ನೀಡಲಾಗುವಂತೆ ಮಾಡಿದವರು ಮಹಾತ್ಮಗಾಂಧಿಯವರು ಮದ್ರಾಸಿನಲ್ಲಿದ್ದಾಗ ನಡೆದ ಕಾಂಗ್ರೆಸ್ಸಿನ ಸಮಾವೇಶಕ್ಕೆಂದು ಬಂದಿದ್ದ ಮಹಾತ್ಮರ ಭಾಷಣಗಳು ಸಾವಿರಾರು ಯುವಕರನ್ನು ತಮ್ಮ ಕಡೆ ಸೆಳೆದುಕೊಂಡಿದ್ದು, ಮಾಂತ್ರಿಕ ಗಾಂಧಿಯವರ ಆದರ್ಶಗಳ ಪಾಲನೆಗೆ ಸಿದ್ಧರಾದ ದಾಸಪ್ಪನವರು ತಮ್ಮ ಜೀವನವಿಡೀ ಗಾಂಧಿ ತತ್ವಗಳ ಪರಿಪಾಲನೆಯನ್ನು ತಮ್ಮ ಗುರಿಯಾಗಿಸಿಕೊಂಡರು. ಕುಟಂಬದ ಸದಸ್ಯರ ವಿರೋಧದ ನಡುವೆಯೂ ತಾವೆಣಿಸಿ-ಕೊಂಡಂತೆ ತಮ್ಮ ಕಳಂಕವಿಲ್ಲದ ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನದ ಪಯಣವನ್ನು ನಡೆಸಿದ, ದಾಸಪ್ಪನವರು ಇಂದಿನ ಮಾರ್ಗದರ್ಶಕರಿಲ್ಲದ ಯುವಕರಿಗೆ ಆದರ್ಶಪ್ರಾಯರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಪಾತ್ರಃಸ್ಮರಣೀಯ.

ರಾಜ್ಯದ ಪ್ರಥಮ ರಾಜಕೀಯ ಪಕ್ಷ ಪ್ರಜಾಮಿತ್ರಮಂಡಲಿಯ ಸೀಮಿತ ಗುರಿ ರಾಷ್ಟ್ರೀಯವಾದಿಗಳಾಗಿದ್ದ ದಾಸಪ್ಪನವರಿಗೆ ಸರಿ ಬರಲ್ಲಿಲ. ಸಾಕಷ್ಟು ಜನಪ್ರಿಯರಾಗಿದ್ದ ಅವರನ್ನು ಮೈಸೂರಿನ ಜನತೆ ಮೊದಲು ಪ್ರಜಾಪ್ರತಿನಿದಿ ಸಭೆಗೂ ಅಲ್ಲಿಂದ ನ್ಯಾಯವಿಧಾಯಕ ಸಭೆಗೂ ಸತತವಾಗಿ ಹತ್ತು ವರ್ಷಗಳ ಕಾಲ

ಚುನಾಯಿಸಿದ್ದರು. ತಮ್ಮ ಪ್ರಚಂಡ ಭಾಷಣಗಳಿಂದ ಆ ಸಭೆಗಳ ಕಲಾಪಗಳಿಗೆ ಜೀವ ತುಂಬಿದ್ದಲ್ಲದೆ ಅಲ್ಲಿ ಸಾಮಾಜಿಕ, ಮಹಿಳಾಪರ, ದಲಿತರ ಪರವಾಗಿದ್ದ ಅನೇಕ ಮಸೂದೆಗಳು ಹೊರ ಬರುವಲ್ಲಿ ದಾಸಪ್ಪನವರ ಪ್ರಮುಖ ಪಾತ್ರವಿದೆ. ದಾಸಪ್ಪನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದು ಅವರು 1937ರಲ್ಲಿ ಮೈಸೂರಿನ ಜಿಲ್ಲಾ ಕಾಂಗ್ರಸಿನಲ್ಲಿ ತಮ್ಮ ಪ್ರಜಾಪಕ್ಷವನ್ನು ವಿಲೀನಗೊಳಿಸಿದ್ದರ ಪರಿಣಾಮ, ಮೈಸೂರು ಕಾಂಗ್ರೆಸ್ಸ ಒಮ್ಮೆಲೆ ಪ್ರಾಬಲ್ಯವನ್ನು ಜನಪ್ರಿಯತೆಯನ್ನು ಪಡೆದು, ರಾಜ್ಯದ ಏಕೈಕ ರಾಜಕೀಯ ಪಕ್ಷವಾಯಿತು.

1938ರಿಂದ ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ದಿಟ್ಟ ಹೆಜ್ಜೆಗಳನ್ನು ಮೂಡಿಸಲಾರಂಭಿಸಿದ ಮೈಸೂರ್ ಕಾಂಗ್ರೆಸ್ ದಾಸಪ್ಪನವರಂತಹ ಸಮರ್ಥ ನಾಯಕರನ್ನು ಬಳಸಿಕೊಂಡು, ಬೆಂಗಳೂರು, ದಾವಣಗೆರೆ, ಶಿವಮೊಗ್ಗ ಮುಂತಾದ ಸ್ಥಳಗಳಲ್ಲಿನ ಕಾರ್ಮಿಕರನ್ನು, ಹಾಗೂ ರಾಜ್ಯದ್ಯಾಂತ ವ್ಯಾಪಿಸಿದ್ದ ಕೃಷಿಕರನ್ನು ಸಂಘಟಿಸುವ ಕೆಲಸವಾರಂಬಿಸಿದಾಗ ರಾಜ್ಯದ ಹೊರಗಡೆ ಮದ್ರಾಸ್, ಮುಂಬೈಗಳ ರಾಷ್ಟ್ರೀಯ ಹೋರಾಟದ ಬಿಸಿಯನ್ನು ಕಂಡಿದ್ದ ದಾಸಪ್ಪ ಮುಂತಾದ ಯುವ ನಾಯಕರ ಮಾರ್ಗದರ್ಶನದಿಂದ ರಾಜ್ಯದ ಜನಪ್ರಿಯ ಪಕ್ಷವಾಗಿ ಹೊರಹೊಮ್ಮಿ ತಮ್ಮನ್ನು ನಂಬಿದ ಜನತೆಯನ್ನು ಸ್ವಾತಂತ್ರ್ಯದ ಹೊಸ ದಿಗಂತದೆಡೆ ನಡೆಸಲು ಪೂರ್ಣ ಸಿದ್ಧತೆಗಳನ್ನು ಮಾಡಿಕೊಂಡಿತು. ಈಗಾಗಲೆ ಪ್ರಸಿದ್ಧ ವಕೀಲರಾಗಿ ಸಂಸದೀಯಪಟುವಾಗಿ ಜನಾನುರಾಗಿಯಾಗಿದ್ದ ವರ್ಚಸ್ವಿ ನಾಯಕ ದಾಸಪ್ಪನವರ ಸೇರ್ಪಡೆ ಕಾಂಗ್ರೆಸ್ಸಿಗೆ ಹೊಸ ಬಲವನ್ನು ನೀಡಿತು.

ಕಾಂಗ್ರೆಸನ ನಾಯಕತ್ವ ಸುಮ್ಮನೆ ಬಂದುದಲ್ಲ. ಅವರ ಎರಡು ದಶಕಗಳ ವಕೀಲಿವೃತ್ತೀಯಿಂದ ತಾವು ಗಳಿಸಿದ್ದ ಜನಾನೂರಾಗ, ಆರ್ಥಿಕ ಭದ್ರತೆಯ, ನೆಮ್ಮದಿಯ ಜೀವನವನ್ನು ತ್ಯಾಗಮಾಡಿ ಬಿಸಿಲು ನೆರೆಳನ್ನದೆ, ಉರೂರು ಸುತ್ತಿ ಪಕ್ಷವನ್ನು ಕಟ್ಟಬೇಕಿತ್ತು. ಗಾಂಧೀಜಿಯವರ ಅಭಿಪ್ರಾಯದಂತೆ ಸ್ವಾರ್ಥವನ್ನು ತ್ಯಜಿಸಿ, ತಮ್ಮ ಹೋರಾಟದಲ್ಲಿ ಎದುರಾಗಬಹುದಾದ ಎಂಥಹ ಸ್ಥಿತಿಯನ್ನು ಎದುರಿಸುವ ಧೈರ್ಯ ಸಾಮರ್ಥ್ಯ ಇದ್ದವರು, ಲಾಠಿ ಏಟು ತಿನ್ನಲು, ಸೆರೆಮನೆಗೆ ಹೋಗಬಹುದಾದ ಯಾವ ತ್ಯಾಗಕ್ಕೂ ಸಿದ್ಧರಾದಾಗ ಮಾತ್ರ ನಾವು ನಿಜ ದೇಶಭಕ್ತರೆನಿಸಿಕೊಳ್ಳುತ್ತಾರೆ. ಅಂದರೆ ದೇಶಭಕ್ತರೆನಿಸಿಕೊಳ್ಳುವುದು ಕೇವಲ ತೋರಿಕೆಗಾಗಿ ಅಥವಾ ದೇಶದಿಂದ ಲಾಭಮಾಡಿಕೊಳ್ಳಲು ಅಲ್ಲ!. ದೇಶಭಕ್ತಿಯ ಪರೀಕ್ಷೆ ದಾಸಪ್ಪನವರಿಗೆ ಬಲು ಬೇಗನೆ ಎದುರಾಯಿತು.. ಒಮ್ಮೆಯಲ್ಲ, ಎರಡು ಸಲವಲ್ಲ, ಐದು ಬಾರಿ ಸೆರೆಮನೆಗೆ ಹೋದದಲ್ಲದೆ, ತಮ್ಮ ವಕೀಲಿ ವೃತ್ತಿಯಿಂದಲೇ ಹೊರಬರಬೇಕಾದಂತಹ ಪರಿಸ್ಥಿತಿ, ಸ್ಥಿತಿವಂತಿಕೆಯ ಬದಲಿಗೆ ಬಡತನನ್ನು ಸಂತೋಷದಿಂದ ಸ್ವೀಕರಿಸಿದರು.

ದಾಸಪ್ಪನವರ ಈ ಮಾನಸಿಕ ಸಧೃಡತೆಗೆ ಪೂರಕವಾಗಿದ್ದವರು ಅವರ ಪತ್ನಿ ಯಶೋಧರಾ ದಾಸಪ್ಪ. ರಾಜ್ಯದ ಮತ್ತೊಂದು ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ್ದ ಶ್ರೇಷ್ಠ ಒಕ್ಕಲಿಗ ನಾಯಕ, ಒಕ್ಕಲಿಗ ಸಂಘವನ್ನು ಕಟ್ಟಿ ಬೆಳಸಿದ ಪರಿಶ್ರಮಿ ಕೆ.ಎಚ್. ರಾಮಯ್ಯನವರ ಮಗಳಾದ ಯಶೋಧರಾ ಬಾಲ್ಯದಿಂದಲೂ ಸಮಾಜಸೇವೆಯನ್ನು ಬಾಳಿನ ಗುರಿಯನಾಗಿಸಿಕೊಂಡಿದ್ದರು. ಕಾಲೇಜಿನಲ್ಲಿ ಓದುತ್ತಿದ್ದಾಗಲೆ ಮಹಾತ್ಮಗಾಂಧಿಯವರ ತತ್ವ ಸಿದ್ಧಾಂತಗಳಿಗೆ ತಮ್ಮನ್ನು ಒಪ್ಪಿಸಿಕೊಂಡಿದ್ದ ಯಶೋಧರಾ ದಾಸಪ್ಪನವರ ಧರ್ಮಪತ್ನಿಯಾಗಿ ದಾಸಪ್ಪನವರನ್ನು ಕಾಂಗ್ರೆಸ್ಸಿಗೆ ಕರೆತಂದವರು. ಮುಂದಿನ ದಿನಗಳಲ್ಲಿ ದಾಸಪ್ಪನವರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡರೆ, ಯಶೋಧರಾ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಮುಳುಗಿಹೋದರು. ರಾಜ್ಯವು ಕಂಡ ಈ ಆದರ್ಶ ದಂಪತಿಗಳು ಬಹುಕಾಲ ತಮ್ಮ ಬದುಕು ಹಾಗೂ ತಮ್ಮ ಸಿದ್ಧಾಂತಗಳ ಪರಿಪಾಲನೆಯಿಂದ ರಾಜ್ಯದ ಜನತೆಯ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದು ಆಕಸ್ಮಿಕವಲ್ಲ.

ಆಧುನಿಕ ರಾಜ್ಯವೆನಿಸಿದ್ದರೂ ಮೈಸೂರಿನ ಪರಿಸ್ಥಿತಿ ಅಸಹನೀಯವಾಗಿದ್ದು ರಾಜ್ಯದಲ್ಲಿನ ಆಳರಸರಿಗೆ ಜನಾಭಿಪ್ರಾಯದ ಆಳವರಿಯಲು ಸಾಧ್ಯವಾಗಿರಲಿಲ್ಲ. ಮೈಸೂರಿನ ಜನತೆಗೆ ರಾಷ್ಟ್ರೀಯ ಚಳುವಳಿಯ ಭಾಗವಾಗಲು, ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಏನ್ನನಾದರೂ ಮಾಡಬೇಕೆಂಬ ಹಂಬಲವಿದ್ದರೂ ಸರ್ಕಾರಕ್ಕೆ ಅದರ ಪರಿವೆಯಿರಲಿಲ್ಲ. ಜನ ಮತ್ತು ಆಳರಸರ ನಡುವಿನ ಸೇತುವೆ-ಯಾಗಲು, ರಾಜ್ಯದ ರಾಜಕೀಯವನ್ನು ಬದಲಿಸಲು ಮೈಸೂರ್ ಕಾಂಗ್ರೆಸ್ ಶ್ರಮಿಸಬೇಕಾಯಿತು. ಮಹಾರಾಜರ ಸರ್ಕಾರ ಉತ್ತಮ ಆಡಳಿತ ನೀಡುತ್ತಿದ್ದರೂ, ದಿವಾನ್ ಮಿರ್ಜಾರ ಕಾಲದಲ್ಲಿ ಜನರಿಗೆ ಆಡಳಿತದ ನಿರ್ಣಯಗಳಲ್ಲಿ ಪಾಲಿರಲಲ್ಲಿ.

ತನ್ನ ಸಿದ್ಧಾಂತಗಳನ್ನು ಜನರಿಗೆ ಪ್ರಕಟಿಸಲು ಹಾಗೂ ಜನಾಭಿಪ್ರಾಯವನ್ನು ತಿಳಿಯಲು ಮೈಸೂರ್ ಕಾಂಗ್ರೆಸ್, ಜನರಿಗೆ ತನ್ನ ಗುರಿಗಳನ್ನು ಪರಿಚಯಿಸಲು 1938ರಲ್ಲಿ ಅಧೀವೇಶನ-ವೊಂದನ್ನು ನಡೆಸಲು ನಿರ್ಧರಿಸಿತು. ಮದ್ದೂರಿನ ಬಳಿಯ ಶಿವಪುರದಲ್ಲಿ ತನ್ನ ಅಧಿವೇಶನ ನಡೆಸಲು ಕಾಂಗ್ರೆಸ್ ನಿಶ್ಚಯಿಸಿದ್ದರಿಂದ ಕಾಂಗ್ರೆಸ್‌ನ ನಾಯಕರಾದ ದಾಸಪ್ಪ ಮುಂತಾದವರು ಅಹರ್ನಿಶಿ ದುಡಿಯಬೇಕಾಗಿ, ಅದು ಮೊಟ್ಟಮೊದಲಿಗೆ ರಾಜ್ಯದಲ್ಲಿ ನಡೆದ ರಾಜಕೀಯ ಅಧಿವೇಶನ ಜನರ ಮಾನ್ಯತೆ ಪಡೆದು ಮೂವತ್ತರಿಂದ ಮೂವತ್ತೈದು ಸಾವಿರದವರೆಗೆ ಜನರು ಆಗಮಿಸಿದ್ದರಿಂದ ಇದೊಂದು ಅತ್ಯಂತ ಸಫಲವಾದ ಅಧಿವೇಶನವಾಯಿತು. ಆದರೆ ಸಮ್ಮೇಳನದ ನಾಯಕತ್ವ ವಹಿಸಿದ್ದ ದಾಸಪ್ಪ ಮುಂತಾದವರು ಸೆರೆಮನೆಯಲ್ಲಿದ್ದರು. ದಾಸಪ್ಪನವರು,

ಅಧಿವೇಶನದ ಎರಡನೆಯ ದಿನದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವಾಗ ಸರ್ಕಾರದ ಆದೇಶವನ್ನು ಕಡೆಗಣಿಸಿ ಸ್ವತಂತ್ರ ಭಾರತದ ಧ್ವಜವನ್ನು ಹಾರಿಸಿದ್ದಕ್ಕಾಗಿ ಬಂಧಿಸಲ್ಪಟ್ಟು, ಒಂದು ತಿಂಗಳ ಕಾಲ ಸೆರೆಮನೆಯಲ್ಲಿರಬೇಕಿತ್ತು.

ಸೆರೆಮನೆ ದಾಸಪ್ಪನವರಿಗೆ ಹೊಸದೇನೂ ಆಗಿರದೆ. ಈಗಾಗಲೆ ಕಾಂಗ್ರೆಸ್‌ನ ಸಿದ್ಧಾಂತದ ಪ್ರಚಾರದಲ್ಲಿ ತೊಡಗಿದ್ದಾಗ ರಾಮನಗರದ ಬಳಿ ಬಂಧಿಸಲ್ಪಟ್ಟು ಎರಡು ತಿಂಗಳ ಸೆರೆವಾಸ ಅನುಭವಿಸಿದ್ದರು. ಅದೇ ವೇಳೆಗೆ ಸಭೆಗೆ ಪ್ರಜಾಪ್ರತಿನಿಧಿ ಚುನಾವಣೆಗಳೂ ಘೋಷಿಸಲ್ಪಟ್ಟಾಗ ತಮ್ಮ ಸ್ಥಾನಕ್ಕೆ ಸ್ಪರ್ಧಿಸಲಾಗದೆ, ಅವರ ಬದಲಾಗಿ ಯಶೋಧರಮ್ಮನವರು ಮೈಸೂರಿನಿಂದ ಚುನಾವಣೆಗೆ ನಿಂತು ತಮ್ಮ ವಿರುದ್ಧ ಸ್ಪರ್ಧಿಸಿದ್ದ ಮುನಿವೆಂಕಟಪ್ಪನವರು ಠೇವಣಿ ಕಳೆದು-ಕೊಳ್ಳುವಂತೆ ಮಾಡಿದರು. ಮೈಸೂರಿನ ಸಭೆಗೆ ಚುನಾವಣೆಯ ಮೂಲಕ ಗೆದ್ದುಬಂದ ಮೊದಲ ಮಹಿಳೆ ಯಶೋಧರಾ.

ಶಿವಪುರದ ಅಧಿವೇಶನ ಮೈಸೂರು ಕಾಂಗ್ರೆಸ್ ಅನ್ನು ರಾಜ್ಯದ ಜನಪ್ರಿಯ ರಾಜಕೀಯ ಪಕ್ಷವಾಗಿಸಿದರೂ, ಅದು ಸರ್ಕಾರದ ವಿರೋಧವನ್ನು ತಂದುಕೊಟ್ಟು ಸಾಧಾರಣವಾಗಬಹುದಾಗಿದ್ದ ಒಂದು ಅಧಿವೇಶನ ಧ್ವಜ ಸತ್ಯಾಗ್ರಹವಾಗಿ ಮಹಾ ಚಳುವಳಿಯಾಗಿ ರಾಜ್ಯದ ಜನತೆ ರಾಷ್ಟ್ರೀಯ ಧ್ವಜ ಹಾರಿಸುವ ತಮ್ಮ ಹಕ್ಕಿಗಾಗಿ ವರ್ಷಾದ್ಯಂತ ಧ್ವಜ ಸತ್ಯಾಗ್ರಹವಾಗಿ ಆಚರಿಸುವಂತೆ ಮಾಡಿತು. ಸಮ್ಮೇಳನದ ಅಧ್ಯಕ್ಷ ಸಿದ್ದಲಿಂಗಯ್ಯನವರೂ, ದಾಸಪ್ಪನವರೂ, ಎಮ್.ಎನ್. ಜೋಯಿಸ್ ಮುಂತಾದವರು ಸೆರೆಮನೆಗೆ ಹಾಕಲ್ಪಟ್ಟು ಜನರ ಪ್ರೀತಿ ಗೌರವಕ್ಕೆ ಕಾರಣರಾದರು.

ದಿನೇದಿನೇ ಸರ್ಕಾರದ ದಬ್ಬಾಳಿಕೆ ಹೆಚ್ಚಾಗಿ ಜನರನ್ನು ಹತೋಟಿಯಲ್ಲಿಡಲು ಸರ್ಕಾರ ಹಲವಾರು ಕಡೆ ನಿಷೇದಾಜ್ಞೆಗಳನ್ನು ಹೇರಿ ತನ್ನ ಕ್ರೂರತ್ವವನ್ನು ಮೆರೆಯಿತು. ಅದರ ಪರಕಾಷ್ಠೆಯೆ ವಿದುರಾಶ್ವತದ ದುರಂತ. 1938ರಲ್ಲಿ ಕೋಲಾರ ಜಿಲ್ಲೆಯ ವಿದುರಾಶ್ವತ ಧಾರ್ಮಿಕ ಕ್ಷೇತ್ರ. ಅಲ್ಲಿನ ಜಾತ್ರೆಯ ಸಮಯದಲ್ಲಿ ಕೆಲ ಯುವಕರು ಕಾಂಗ್ರೆಸ್‌ನ ಬಾವುಟ ಹಿಡಿದು, ಮೆರವಣಿಗೆ ಹೊರಟದ್ದನ್ನೆ ನೆಪಮಾಡಿ ಪೋಲಿಸ್ ಅಧಿಕಾರಿಗಳು ಅಮಾಯಕ ಜನರ ಮೇಲೆ ಗುಂಡಿನ ಮಳೆಗೆರೆದರೆ ಹನ್ನೆರಡು ಜನ ಮರಣಹೊಂದಿ ಕೆಲವರು ಗಾಯಗೊಂಡರು. ಆದರೂ ಸರ್ಕಾರ ತನ್ನ ಶಕ್ತಿಯ ಕರಾಳ ಪ್ರದರ್ಶನ ನೀಡಿ, ಜನರ ಮನವೊಲಿಸಿಕೊಳ್ಳುವ ಬದಲು, ತನ್ನ ದರ್ಪದ ಮಾತುಗಳಿಂದ ಹೋರಾಟಗಾರರ ಮನ ನೋಯಿಸಿತು. ಪರಿಣಾಮ ಕಾಂಗ್ರೆಸ್ ನಾಯಕತ್ವದಲ್ಲಿ ಹೋರಾಟ ತೀವ್ರವಾಗಿ ಹಲವಾರು ಕಡೆಗಳಲ್ಲಿ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲು ನಿಷೇದಾಜ್ಞೆಗಳನ್ನು ಎದುರಿಸಲಾಯಿತು.

ದಾಸಪ್ಪನವರ ನಾಯಕತ್ವದ ಲಾಭ ಪಡೆದುಕೊಳ್ಳಲು ಮೈಸೂರ್ ಕಾಂಗ್ರೆಸ್ ದಾಸಪ್ಪನವರನ್ನು 1939ರ ಅವಧಿಗೆ ತನ್ನ ಅಧ್ಯಕ್ಷರಾಗಿ ಮಾಡಿತು. ದಾಸಪ್ಪನವರ ಅಧ್ಯಕ್ಷತೆ ಕಾಂಗ್ರೆಸ್‌ನ ಬೇಳವಣಿಗೆಯ ಪರ್ವಕಾಲ. 1939–40ರ ಅವಧಿಯನ್ನು ಮೈಸೂರು ಕಾಂಗ್ರೆಸ್ ಸಂಘರ್ಷದ ಪರ್ವವೆಂದು, ಪ್ರಚಾರಾಂದೋಲನದ ಕಾಲವೆಂದು ಕರೆಯಲಾಗಿದೆ. ಆ ಅವಧಿಯಲ್ಲಿ ದಾಸಪ್ಪನವರು ಸತತವಾಗಿ ರಾಜ್ಯದ ಮೂಲೆಮೂಲೆಗಳಲ್ಲಿ ಸಂಚರಿಸಿ, ಕಾಂಗ್ರೆಸ್‌ನ ತತ್ವಗಳನ್ನು ತಮ್ಮ ಹೋರಾಟದ ಗುರಿಯನ್ನು ಜನರಿಗೆ ತಿಳಿಸುತ್ತಾ ತಾವು ಮುಂದಿನ ಹೋರಾಟಕ್ಕೆ ಸಿದ್ಧರಾಗಬೇಕೆಂಬ ಜಾಗೃತಿಮೂಡಿಸಿದರು. ಅವರ ಪ್ರವಾಸಗಳು ನಗರ ಪಟ್ಟಣಗಳಲ್ಲಿ ಮಾತ್ರವಲ್ಲದೆ ಚಿಕ್ಕ ಹಳ್ಳಿಗಳೂ, ಹೊಸನಗರದ ಬಳಿಯ ಕೇವಲ ಹತ್ತುಹದಿನಾರು ಗುಡಿಸಲುಗಳಿದ್ದ ಬುಡಕಟ್ಟು ಜನರ ತಾಂಡಗಳಲ್ಲೂ ಕಾಂಗ್ರೆಸ್‌ನ ಸಂದೇಶವನ್ನು ಮುಟ್ಟಿಸಿದರು. ಅವರ ಪ್ರವಾಸಗಳು ಯಶಸ್ವಿಯಾಗಿ ಜನ ದಾಸಪ್ಪನವರ ಭಾಷಣಗಳಿಗೆ ಮುಗಿ ಬೀಳುತ್ತಿದ್ದರು. ಮಳೆಯಾಗಲಿ, ಉರಿವ ಬಿಸಿಲಾಗಲಿ ಸ್ತ್ರೀಪುರುಷರೆಲ್ಲಾ ಸಾವಿರಾರು ಸಂಖ್ಯೆಯಲ್ಲಿ ನೆರೆದು ಅವರ ಭಾಷಣ ಕೇಳುತ್ತಿದ್ದರು. ಚೆನ್ನಗಿರಿಯ ನಲ್ಲೂರಿನಲ್ಲಿ ದಾಸಪ್ಪನವರು ಸಾರ್ವಜನಿಕ ಸಭೆಯನ್ನುದ್ಧೆಶಿಸಲು ಬಂದಾಗ ಮಧ್ಯರಾತ್ರಿಯಾಗಿತ್ತು. ಆದರೂ ಸಾವಿರಾರು ಜನ ಸ್ತ್ರೀಪುರುಷರು ಅಲ್ಲಿ ನೆರೆದು ದಾಸಪ್ಪನವರ ಭಾಷಣ ಕೇಳಿದಾಗ ದಾಸಪ್ಪನವರು ಗದ್ಗದ ಕಂಠರಾದರು. ಹಲವು ಕಡೆ ಸುರಿವ ಮಳೆಯಲ್ಲು ದಾಸಪ್ಪನವರ ಭಾಷಣಕ್ಕೆ ನೂರಾರು ಜನ ಸೇರುತ್ತಿದ್ದರು. ಹಲವು ಸ್ಥಳಗಳಲ್ಲಿ ಕಾಂಗ್ರೆಸ್ ಅಧ್ಯಕ್ಷ ದಾಸಪ್ಪನವರನ್ನು ಅದ್ದೂರಿಯಾಗಿ ಸನ್ಮಾನಿಸಿದರು,

ಅವರ ಅಧ್ಯಕ್ಷತೆಯಲ್ಲಿ ಸರ್ಕಾರದ ದಬ್ಬಾಳಿಕೆಯಿಂದ ನೊಂದಿದ್ದ ವಿದುರಾಶ್ವತದಲ್ಲಿ ಮೈಸೂರು ಕಾಂಗ್ರೆಸ್ ತನ್ನ ಎರಡನೇ ಸಮ್ಮೇಳನ ನಡೆಸಿತು. ಸಮ್ಮೇಳನದ ಅದ್ಯಕ್ಷರಾಗಿದ್ದವರು ದಾಸಪ್ಪನವರೇ. ಅಲ್ಲಿನ ಜನತೆಯ ಮನಸ್ಸನ್ನು ಸಮಾಧಾನಗೊಳಿಸಲು ದಾಸಪ್ಪನವರೇ ಸೂಕ್ತ ವ್ಯಕ್ತಿ. ಮೃಧು, ಮಾತಿನ, ಉತ್ತಮ ವಾಗ್ಮಿ ದಾಸಪ್ಪ ಆ ಸಮ್ಮೇಳನದ ಪೂರ್ಣ ಜವಾಬ್ದಾರಿ ಹೊತ್ತರು. ಅವರ ಅಧ್ಯಕ್ಷ ಭಾಷಣದಲ್ಲಿ ಅವರು ಮೈಸೂರಿನ ಜನತೆಗೆ 'ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ' ತಂದುಕೊಡುವುದೇ ತಮ್ಮ ಪಕ್ಷದ ಗುರಿಯೆಂದು ಘೋಷಿಸಿದರು. ರಾಷ್ಟ್ರೀಯಾ ಕಾಂಗ್ರೆಸ್ ದೇಶವಿಮುಕ್ತಿಯ ಕೆಲಸಕ್ಕೆ, ತಾಯ್ನಾಡನ್ನು ದಾಸ್ಯದಿಂದ ಬಿಡಿಸಲು ಎಲ್ಲರ ಸಹಾಯ, ಪಾಲ್ಗೊಳ್ಳುವಿಕೆ ಅವಶ್ಯವಿದೆಯೆಂದು ಮನೋಜ್ಞವಾಗಿ ರಾಷ್ಟ್ರೀಯ ಹೋರಾಟವನ್ನು ಅದರೆಡೆ ಜನರ ಹೊಣೆಗಾರಿಕೆಯನ್ನು ಚಿತ್ರಿಸಿದರು. ಆ ಸಮ್ಮೇಳನದಲ್ಲಿ ದಾಸಪ್ಪನವರ ಜನಪ್ರಿಯತೆ, ಕಾಂಗ್ರೆಸ್‌ನ ಧೇಯ್ಯೋದ್ದೇಶಗಳು ಜನರಿಗೆ ಮನದಟ್ಟಾದವು.

ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಒಂದು ಕಡೆ ಸರ್ಕಾರದ ಮುಂದೆ ತಮ್ಮ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮಂಡಿಸುತ್ತಾ, ತಮ್ಮ ಹೋರಾಟಗಳು ಶಾಂತಿಯುತವಾಗಿರುವಂತೆ ನೋಡಿಕೊಳ್ಳುವ. ಕಾಂಗ್ರೆಸ್‌ನ ಮಹದ್ದುದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸಮಾಡಬೇಕಿತ್ತು. ದಾಸಪ್ಪನವರು ಮಹಾ ಸಂಘಟನಾಕಾರ. ಈಗಾಗಲೇ ಪ್ರಜಾಪಕ್ಷದ ಸಂಘಟನೆಯಲ್ಲಿ ರೈತಾಪಿ ಜನರ ಪರವಾಗಿ ತಮ್ಮನ್ನು ರೂಪಿಸಿಕೊಂಡಿದ್ದ ದಾಸಪ್ಪ ಈಗ ಎಲ್ಲಾ ವರ್ಗಗಳ ಮೆಚ್ಚಿನ ನಾಯಕರಾಗಿ ಮೈಸೂರಿನ ಜನರ ಗೌರವಾದರಗಳಿಗೆ ಪಾತ್ರರಾಗಿದ್ದದಲ್ಲದೆ, ರಾಷ್ಟ್ರಮಟ್ಟದ ನಾಯಕರ ಗಮನವನ್ನೂ ಸೆಳೆದರು. ತಮ್ಮೆಲ್ಲಾ ಸಾಮರ್ಥ್ಯವನ್ನು ಪಕ್ಷ ಬಲಸಂವರ್ಧನೆಯ ಕಡೆ ಹರಿಸಿ ಊರೂರು ಸುತ್ತಿ, ಹಗಲಿರುಳೆನ್ನದೆ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಮೈಸೂರು ಕಾಂಗ್ರೆಸ್ ರಾಜ್ಯಾದ್ಯಂತ ವ್ಯಾಪಿಸಲು ಶ್ರಮಿಸಿದರು. ಅವರು ಕೈಗೊಂಡ ಜನಾಂದೋಲನ ಯಶಸ್ವಿಯಾಗಿ ಕಾಂಗ್ರೆಸ್ ಈ ಅವಧಿಯಲ್ಲಿ ಕಾಂಗ್ರೆಸ್ ತನ್ನ ಸದಸ್ಯರ ಸರ್ಕಾರವಂತೂ ಕಾಂಗ್ರೆಸ್‌ನ ಎಲ್ಲಾ ಚಟುವಟಿಕೆಗಳನ್ನು ಸಂಶಯದಿಂದ ನೋಡುತ್ತಾ ಜನರ ಚಳುವಳಿಯನ್ನು ಬಗ್ಗುಬಡಿಯಲು ತನ್ನೆಲ್ಲಾ ಶಕ್ತಿಯನ್ನು, ಬಲಪ್ರಯೋಗವನ್ನು ಉಪಯೋಗಿಸಿತು. ದಿವಾನ್ ಮಿರ್ಜಾ ಸಾಹೇಬರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಾಂಗ್ರೆಸನ ಚಳುವಳಿಗಳು ಜನರ ಹಾದಿ ತಪ್ಪಿಸುತ್ತಿದೆಯೆಂಬಂತೆ ಹೇಳಿ, ಮಹಾರಾಜರ ಸರ್ಕಾರವೇ ಜನರಿಗೆ ಬೇಡಿದ್ದನ್ನೆಲ್ಲಾ ನೀಡುತ್ತಿದೆ-ಯೆಂದು ಹೇಳುತ್ತಿದ್ದರು. ಅವರ ವೈಶಿಷ್ಟ್ಯವೆಂದರೆ ದಿವಾನ ಸಾಹೇಬರಿಗೆ ಜನರ ಮನೋಭಿಲಾಷೆಯನ್ನು ತಿಳಿದುಕೊಳ್ಳುವ ಮನಸ್ಸಿರಲಿಲ್ಲ. ಒಮ್ಮೆಯಂತೂ ತಾವು ಕಂಡಂತೆ ಯೂರೋಪಿನಲ್ಲೆಲ್ಲಾ ಡೆಮಾಕ್ರಸಿಗಳು ವಿಫಲವಾಗಿ ನಿರಂಕುಶ ಪ್ರಭುಗಳು ಪ್ರಬಲರಾಗಿ-ದ್ದಾರೆಂದು ಸಾರಿದರು. ಬಹುಶಃ ಅವರ ಆದರ್ಶ ವ್ಯಕ್ತಿಗಳು ಹಿಟ್ಲರ್ ಮತ್ತು ಮುಸೋಲಿನಿ-ಯವರಾಗಿದ್ದಿರಬೇಕು.

ಅವರ ಸತತ ಪ್ರಯತ್ನ, ಉದಾತ್ತ ನಾಯಕತ್ವ, ಹಾಗೂ ಜನತೆ ಅವರ ಮೇಲಿಟ್ಟಿದ್ದ ವಿಶ್ವಾಸ ಕಾಂಗ್ರೆಸ್ ಪಕ್ಷಕ್ಕೆ ಸಾವಿರಾರು ಜನರನ್ನು ಕರೆತಂದು, ಅದರ ಚಳುವಳಿಗಳು ಅತ್ಯಂತ ಯಶಸ್ವಿಯಾಗಲು ಕಾರಣ. ಶಿವಪುರದ ಅಧಿವೇಶನವೂ ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ಚಳುವಳಿಗಳು ಶಾಂತಿಯುತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸ್ತ್ರೀಯರು, ಕೃಷಿಕರು, ಕಾರ್ಮಿಕರು ಪಾಲ್ಗೊಂಡಿದ್ದರು. ಇದರ ಕೀರ್ತಿ ಅಂದಿನ ಅಧ್ಯಕ್ಷರೂ ನಂತರ ಪ್ರಮುಖ ನಾಯಕರಾಗಿ ಮುಗ್ಧ ಜನರನ್ನು ತಮ್ಮ ಗುರಿಯಡೆಗೆ ನಡೆಸಿದ ದಾಸಪ್ಪನವರಿಗೆ ಸೇರುತ್ತದೆ. 1939-40ರ ಬೆಳವಣಿಗೆಗಳಲ್ಲಿ ದಾಸಪ್ಪನವರದು ಸಿಂಹಪಾಲು. ಕಾಂಗ್ರೆಸ್ ಇದುವರೆಗೆ ಕೇವಲ

ನಗರ ಪಟ್ಟಣಗಳಲ್ಲಿ ಜನಪ್ರಿಯವಾಗಿದ್ದರೆ, ದಾಸಪ್ಪನವರು ಅದರ ತತ್ವಗಳು ಗ್ರಾಮಾಂತರಗಳಲ್ಲೂ ಹರಡಲು ಶ್ರಮಿಸಿದರು. ಅಂದಿನ ಸಿಕ್ರೆಟ್ ಪೋಲಿಸ್ ದಾಖಲೆಗಳು ದಾಸಪ್ಪನವರು ಎಡಬಿಡದೆ ಕೈಗೊಂಡ ಪ್ರವಾಸಗಳು, ಚಳಿ, ಮಳೆ ಬಿಸಿಲೆನ್ನದೆ ನಡೆಸಿದ ಬಹಿರಂಗ ಸಭೆಗಳು, ಮಾಡಿದ ಭಾಷಣಗಳಲ್ಲಿ ಜನರನ್ನು ತಮ್ಮ ಕಡೆ ಆರ್ಕಷಿಸುವದರಲ್ಲಿ ಸಫಲರಾಗಿದ್ದರೆಂಬುದನ್ನ ದಾಖಲಿಸಿವೆ. ಹಗಲಿರುಳು ಅವರು ಕೈಗೊಂಡ ಪ್ರವಾಸದಿಂದಾಗಿ, ಅವರ ವೈಯಕ್ತಿಕ ವರ್ಚಸ್ಸಿನಿಂದಾಗಿ ಪಕ್ಷವು ತನ್ನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿತು.

ಕಾಂಗ್ರೆಸನ ಜನಪ್ರಿಯತೆ ಹೆಚ್ಚಿದಂತೆ ಸರ್ಕಾರದ ಕಿರುಕುಳವೂ ಹೆಚ್ಚಾಯಿತು. ಮಿರ್ಜಾರ ಹೇಳಿಕೆಗಳಿಗಿಂತ ಅವರ ದಮನ ಕಾರ್ಯ ಕಾಂಗ್ರೆಸಿಗರಿಗೆ ಅಪಾರ ನಷ್ಟವನ್ನುಂಟುಮಾಡಿತು. ಮಿರ್ಜಾರವರದು ದ್ವಂದ್ವ ನಡೆ. ರಾಷ್ಟ್ರಮಟ್ಟದ ಕಾಂಗ್ರೆಸ್ ನಾಯಕರನ್ನು ಓಲೈಸುತ್ತಾ ರಾಜ್ಯ ಮಟ್ಟದಲ್ಲಿ ಕಾಂಗ್ರಸೆನ್ನು ತುಳಿಯುತ್ತಿದ್ದರು. ಇದು ಹಲವು ಸಲ ರಾಜ್ಯದ ಕಾಂಗ್ರೆಸ್ಸಿಗರ ಬಗ್ಗೆ ಅಪಪ್ರಚಾರಕ್ಕೆ ಕಾರಣವಾಗಿ ಜನರಲ್ಲಿ ಅವರ ಬಗ್ಗೆ ಅಪನಂಬಿಕೆಯನ್ನುಂಟು ಮಾಡಿದ್ದುಂಟು. ಕಾಂಗ್ರೆಸ್ಸಿನ ಮುಂದಾಳತ್ವ ವಹಿಸಿದ್ದ ನಾಯಕರಿಗೆ ಅತ್ಯಂತ ಕಷ್ಟದ ಪರಿಸ್ಥಿತಿಯಿತ್ತು. ದಾಸಪ್ಪನವರು ಸತತವಾಗಿ ಕಾಂಗ್ರೆಸ್ಸಿನ ಪರವಾಗಿ ಸರ್ಕಾರದೊಂದಿಗೆ ಸಂವಾದ ನಡೆಸುತ್ತಾ ಜನರಲ್ಲಿ ಕಾಂಗ್ರೆಸ್ ತತ್ವಗಳು ಪ್ರಚಾರ ನಡೆಸುತ್ತಾ ಅವರಿಗೆ ಬೇಕಿದ್ದ ಮಾರ್ಗದರ್ಶನ ದೊರೆಯುವಂತೆ ನೋಡಿಕೋಳ್ಳುವುದು, ಗಾಂಧೀಜಿಯವರ ಮೆಚ್ಚಿನ ರಚನಾತ್ಮಕ ಕಾರ್ಯಗಳು ಮುಂದುವರೆಯುತ್ತಾ ಸಮಾಜದಲ್ಲಿನ ಪರಿವರ್ತನೆಗೆ, ಕೆಟ್ಟ ವ್ಯವಸ್ಥೆಗಳ ನಿರ್ಮೂಲನಕ್ಕೆ ಪ್ರಯತ್ನಿಸಿದರು. ಆದರೂ ಅವರ ಅಧ್ಯಕ್ಷತೆ , ಅವರು ಇಷ್ಟ ಪಟ್ಟು ಆರಿಸಿಕೊಂಡಿದ್ದ ಹಾಗೂ ಸಂಸದೀಯ ಕಾರ್ಯಗಳು ಒಮ್ಮೆಲೆ ಕೊನೆಗೊಳ್ಳುವಂತಾದದು ಆಕಸ್ಮಿಕವಲ್ಲದಿದ್ದರೂ ಮೈಸೂರು ಸರ್ಕಾರದ ಇಜ್ಜೋಡು ನೀತಿಗೆ ದಾಸಪ್ಪನವರಂತಹ ಶ್ರೇಷ್ಠನಾಯಕ ಬಲಿಯಾಗಬೇಕಾಯಿತು.

ಅದು ಆದದ್ದು ಹೀಗೆ. ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಕೋಲಾರ ಜಿಲ್ಲೆಯ ಕೆ.ಜಿ.ಎಫ್ ಬಳಿ ಸ್ವರ್ಣಕುಪ್ಪಂನ ಪ್ರವಾಸ ಕೈಗೊಂಡಿದ್ದಾಗ ಅಲ್ಲಿನ ಸ್ಥಳೀಯ ಅಧಿಕಾರಿಗಳು ವಿಧಿಸಿದ್ದ ನಿಷೇದಾಜ್ಞೆಯನ್ನು ತಿಳಿಯದೆ ಆ ಪ್ರದೇಶದಿಂದ ಹಾದುಹೋಗು–ವಾಗ 14–8–1939ರಲ್ಲಿ ಬಂಧಿಸಲ್ಪಟ್ಟರು. ಮುಂದೆ ನಡೆದ ವಿಚಾರಣೆಯ ನಾಟಕದಲ್ಲಿ ಶಿಕ್ಷೆಗೆ ಒಳಗಾಗಿ ಮೂರು ತಿಂಗಳ ಸೆರೆವಾಸಕ್ಕೆ ಒಳಗಾದರು. ಇದು ಸಾಲದೆಂಬಂತೆ ದಾಸಪ್ಪನವರು ಅಧ್ಯಕ್ಷರಾಗಿ ಕೇಂದ್ರ ಸಮಿತಿಯ ಸಲಹೆಯಂತೆ ರಾಜ್ಯದಲ್ಲಿನ ಕಾಂಗ್ರೆಸ್ಸಿಗರಿಗೆ ಇಲ್ಲಿನ ನ್ಯಾಯ ವಿಚಾರಣೆಯಲ್ಲಿ

ಸಹಕರಿಸದಂತೆ ಆದೇಶ ನೀಡಿದ್ದರು. ಆದರೆ ಮೈಸೂರು ಸರ್ಕಾರ ಇದರ ಬಗ್ಗೆ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿ ದಾಸಪ್ಪನವರ ವಕೀಲಿ ವೃತ್ತಿಯನ್ನು ರದ್ದುಗೊಳಿಸುವಂತೆ ಕೋರಿತು.

ವಿಚಾರಣೆ ರಾಜ್ಯದ ಜನತೆಯ ಕುತೂಹಲ ಹೆಚ್ಚಿಸಿ, ರಾಜ್ಯದ ಪತ್ರಿಕೆಗಳಲ್ಲಿ (ಸಂಯುಕ್ತ ಕರ್ನಾಟಕ, ಮದ್ರಾಸಿನ ಹಿಂದು, ವಿಶ್ವಕರ್ನಾಟಕ, ತಾಯಿನಾಡು) ಪತ್ರಿಕೆಗಳಲ್ಲಿ ವ್ಯಾಪಕ ಚರ್ಚೆಗೆ ಒಳಗಾಯಿತು. ದಾಸಪ್ಪನವರ ಭಾಷಣಗಳು, ನಡೆನುಡಿಗಳು ಜನರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತಾಯಿತು. ದಾಸಪ್ಪನವರ ಪರವಾಗಿ ಅವರಿಂದಲೇ ಪೋಷಿಸಲ್ಪಟ್ಟಿದ್ದ ಯುವ ವಕೀಲ ಕೆಂಗಲ್ ಹನಮುಂತಯ್ಯನವರು ಬಲವಾದ ವಾದ ಮಂಡಿಸಿ ದಾಸಪ್ಪನವರು ನಿರಪರಾಧಿಯೆಂದು ನಿರೂಪಿಸಿದರು. ಆದರೂ ಸರ್ಕಾರದ ಪರವಾಗಿ ತೀರ್ಪು ನೀಡಿದ ನ್ಯಾಯಾಧೀಶರು ದಾಸಪ್ಪನವರ ವಕೀಲಿ ಸನ್ನದನ್ನು ರದ್ದುಗೊಳಿಸಿದರು. ಇದೊಂದು ಅನ್ಯಾಯದ ತೀರ್ಪಾಗಿದ್ದು ದಾಸಪ್ಪನವರು ತಮ್ಮ ನೆಚ್ಚಿನ ವೃತ್ತಿ ತಮ್ಮ ಜೀವನಾಧಾರದ ವೃತ್ತಿಯಿಂದ ವಂಚಿತರಾದರು. ಅವರ ಪರವಾಗಿ ಮೈಸೂರಿನ ಜನ ಬಹಿರಂಗ ಸಭೆ, ಮೆರವಣಿಗೆಗಳನ್ನು ನಡೆಸಿ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಅಂದು ರಾಜ್ಯದ ದುಷ್ಟ ವ್ಯವಸ್ಥೆಗೆ ಕನ್ನಡಿಯಂತಿದ್ದ ಈ ಬೆಳವಣಿಗೆ ದಾಸಪ್ಪನವರಿಗೆ ದೊಡ್ಡ ಅಘಾತವನ್ನುಂಟುಮಾಡಿತ್ತು. ವಕೀಲಿವೃತ್ತಿಯನ್ನವಲಂಬಿಸಿದ್ದ ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಕುಸಿಯಿತು. ಆದರೂ ಅವರು ಧೃತಿಗೆಡದೆ ತಾವು ಬಲವಾಗಿ ನಂಬಿದ್ದ ಗಾಂಧಿತತ್ವಗಳನ್ನು ದೇಶಪ್ರೇಮದ ಕಾರ್ಯವನ್ನು ಮುಂದುವರೆಸಿದರು.

ದಾಸಪ್ಪನವರ ಈ ಮಹಾತ್ಯಾಗ ಸಂಪೂರ್ಣವಾಗಿ ವ್ಯರ್ಥವಾಗಲಿಲ್ಲ. ಜನರ ಅಪಾರ ಪ್ರೀತಿಗೌರವಗಳನ್ನು ತಂದುಕೊಟ್ಟ-ದಲ್ಲದೆ ದಾಸಪ್ಪನವರಿಗೆ ನೆಮ್ಮದಿ ತಂದುಕೊಟ್ಟದ್ದು; ಅವರ ಗುರು ಮಹಾತ್ಮಗಾಂಧೀಯವರು ಅವರ ತ್ಯಾಗವನ್ನು ಪರಿಗಣಿಸಿದ್ದು. ದಾಸಪ್ಪನವರನ್ನು ವಕೀಲಿ ವೃತ್ತಿಯಿಂದ ಕಿತ್ತುಹಾಕಿದ್ದನ್ನು ಟೀಕಿಸಿ ಗಾಂಧಿಯವರು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಈ ಬಗ್ಗೆ ಲೇಖನ ಬರೆದು ಅದನ್ನು 'ಮೈಸೂರ್ ಲಾಯರ್ಸ್' ಎಂದು ಉಲ್ಲೇಖಿಸಿ ದಾಸಪ್ಪನವರು ಮೈಸೂರು ರಾಜ್ಯಕ್ಕೆ, ಕಾಂಗ್ರೆಸ್ಸಿನ ಹೋರಾಟಕ್ಕೆ ಹಾಗೂ ಗಾಂಧೀವಾದದ ಪರಿಪಾಲನೆಗೆ ಸಲ್ಲಿಸಿದ ಸೇವೆಯನ್ನು, ಅವರು ಮಾಡಿದ ತ್ಯಾಗವನ್ನು ಸ್ಮರಿಸಿ ಅವರಿಗೆ ಗೌರವ ಸಲ್ಲಿಸಿದರು. ಈ ಲೇಖನ ದಾಸಪ್ಪನವರ ನಿಸ್ವಾರ್ಥ ಸೇವೆಯನ್ನು ಜನನಾಯಕರು ಮೆಚ್ಚಿದ್ದರಿಂದ ಅವರ ತ್ಯಾಗ ಬಲಿದಾನಗಳು ಜನಮನದಲ್ಲಿ ಬಹುಕಾಲ ಉಳಿದುಕೊಂಡವು.

ಘಟನೆಯಿಂದ ಇದುವರೆಗೂ ಗಾಂಧಿ ತತ್ವಗಳನ್ನು ಪರಿಪಾಲಿಸುತ್ತಿದ್ದ ದಾಸಪ್ಪ ಕುಟುಂಬ ಮಹಾತ್ಮರ ಆತ್ಮೀಯ ವರ್ಗದಲ್ಲಿ ಸೇರಿದರು. ದಾಸಪ್ಪ ಮತ್ತು ಯಶೋಧರಾ ದಾಸಪ್ಪ ಹಲವು ಬಾರಿ ಮಹಾತ್ಮರನ್ನು ಸಂದರ್ಶಿಸಿ ಅವರ ವಾರ್ಧಾ ಆಶ್ರಮದಲ್ಲಿ ಎರಡು ಮೂರು ಬಾರಿ ನೆಲೆಸಿ ಮಹಾತ್ಮರ ಮಾರ್ಗದರ್ಶನ ಪಡೆದರು.

ದಾಸಪ್ಪನವರ ಎರಡು ವರ್ಷದ ಸೆರೆವಾಸ ಅವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಗಾಂಧೀಜಿಯವರು ದಾಸಪ್ಪನವರ ಆರೋಗ್ಯ ಹದಗೆಟ್ಟಿರುವುದನ್ನು ತಿಳಿದು ಆರೋಗ್ಯ ಸುಧಾರಣೆಗಾಗಿ ತಮ್ಮ ಆಶ್ರಮಕ್ಕೆ ಬರುವಂತೆ ಆಮಂತ್ರಿಸಿದರು. ದಾಸಪ್ಪನವರು 1940ರಲ್ಲಿ ಆರು ತಿಂಗಳು ವಾರ್ಧಾ ಆಶ್ರಮದಲ್ಲಿ ನೆಲೆಸಿ ಮಹಾತ್ಮರಿಂದಲೇ ಚಿಕಿತ್ಸೆ ಪಡೆದರು. ದಾಸಪ್ಪನವರ ಬಾಳಿನಲ್ಲಿ ಇದೊಂದು ಅಮೂಲ್ಯ ಸಮಯ. ಮಹಾತ್ಮರ ಆತ್ಮೀಯ-ರೊಬ್ಬರಲ್ಲಾದ ದಾಸಪ್ಪನವರು ಮುಂದಿನ ಕಾರ್ಯ ಯೋಜನೆಗೆ ಮಹಾತ್ಮರಿಂದ ಸೂಕ್ತ ಸಲಹೆಗಳನ್ನು ಪಡೆದರು.

ವಾರ್ಧಾದಿಂದ ಹಿಂತಿರುಗಿದ ಮೇಲೆ ದಾಸಪ್ಪನವರು ರಾಜ್ಯದಲ್ಲಿ ಕಾಂಗ್ರೆಸ್ಸಿನ ಬಲಸಂವರ್ಧನೆಗೆ ಬೆಂಬಲ ನೀಡಿದರು. ಅಧಿಕಾರವಿರಲಿ, ಇಲ್ಲದಿರಲಿ ಜನರ ಸುಖದುಃಖಗಳಿಗೆ ಸ್ಪಂದಿಸುತ್ತಿದ್ದ ದಾಸಪ್ಪ ತಾವೆಂತಹ ಉತ್ತಮ ನಾಯಕರೆಂಬುದನ್ನು ತೋರಿಸಿಕೊಟ್ಟರು. 1939ರ ಯುದ್ಧ ಜನರ ಮೇಲೆ ಪ್ರತಿಕೂಲ ಪರಿಸ್ಥಿತಿಯನ್ನುಂಟು-ಮಾಡಿತು. ಅಂತಹ ಸಂಕಷ್ಟ ಸ್ಥಿತಿಯಲ್ಲಿ ಜನರ ಸಹಾಯಕ್ಕೆ ಧಾವಿಸಿ ಸರ್ಕಾರ ಅವರಿಗಾಗಿ ಪರಿಹಾರ ಒದಗಿಸುವಂತೆ ನೋಡಿಕೊಂಡರು. ಆಹಾರ ಧಾನ್ಯಗಳ ಕೊರತೆಯಿಂದಾಗಿ ಜನರಲ್ಲಿ ಈ ಬಗ್ಗೆ ಆಹಾರಧಾನ್ಯಗಳ ರೇಷನ್ ಸರಿಯಾಗಿ ವಿತರಣೆಯಾಗುವಂತೆ, ಧಾನ್ಯಗಳನ್ನು ಅಗತ್ಯ ವಸ್ತುಗಳನ್ನು ಪೋಲುಮಾಡದೆ ಸರ್ಕಾರದೊಂದಿಗೆ ಸಹಕರಿಸುವಂತೆ ಪ್ರಚಾರ ಕೈಗೊಂಡರು.

ಸಮಾಜಮುಖಿಯಾಗಿ, ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದ ದಾಸಪ್ಪ ದಂಪತಿಗಳು ನೂರಾರು ಜನರ ಬಾಳಿಗೆ ಮಾರ್ಗದರ್ಶ-ಕರಾಗಿ ಅವರ ಜೀವನದ ಗತಿಯನ್ನು ಬದಲಿಸಿ ಅವರಲ್ಲಿ ಹುಮ್ಮಸ್ಸು ತುಂಬಿದಂತಹವರು. ಅವರು ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಗಾಂಧಿ ಪ್ರಣೀತ, ರಚನಾತ್ಮಕ ಕಾರ್ಯ ಗಳಲ್ಲಿ ಭಾಗವಹಿಸಿ ಅನೇಕ ಸೇವಾ ಸಂಸ್ಥೆಗಳಲ್ಲಿ ತಮ್ಮನು ತೊಡಗಿಸಿಕೊಂಡಿದ್ದರು. ಜಾತಿಮತಗಳ ಭೇದವಿಲ್ಲದೆ ಎಲ್ಲರ ಒಳಿತಿಗಾಗಿ ಶ್ರಮಿಸುತ್ತಿದ್ದ ದಾಸಪ್ಪ ಮತ್ತು ಯಶೋಧರಾ ಕನ್ಯಾವಿದ್ಯಾಲಯವನ್ನು ಸ್ಥಾಪಿಸಿ, ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದರು. ಮೈಸೂರಿನ ತಮ್ಮ ಮನೆಯನ್ನೆ ಗ್ರಾಮಾಂತರಗಳ ಬಡ ಹೆಣ್ಣುಮಕ್ಕಳ ಹಾಸ್ಟೆಲ್ ಆಗಿ ಪರಿವರ್ತಿಸಿ ಇಂದಿಗೂ ಅದು ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿದೆ.. ಅನೇಕ

ಸೇವಾಸಂಸ್ಥೆಗಳ ಮಾರ್ಗದರ್ಶಕರಾಗಿ, ಪಿಂಜರಾಪೋಲ್, ಹಿಂದಿಪ್ರಚಾರ ಸಮಾಜೋದ್ಧಾರದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ–ಕೊಂಡವರು. ಇಂತಹ ನಾಯಕರು ಇಂದಿನ ದಿನಗಳಲ್ಲಿ ಅಪರೂಪ.

1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಲು ಸಿದ್ಧರಾಗಿದ್ದ ದಾಸಪ್ಪನವರನ್ನು ಸರ್ಕಾರ ಮತ್ತೊಮ್ಮೆ ಬಂಧಿಸಿತು. ಆಗಸ್ಟ ಎಂಟರಂದು ಮುಂಬೈನಲ್ಲಿ ನಡೆದ ಕಾಂಗ್ರೆಸ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿ ಅದರ ಸೂಚನೆಯಂತೆ ರಾಜ್ಯದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಸಲು ಸಿದ್ಧರಾಗಿ ಹಿಂತಿರುಗಿದ ದಾಸಪ್ಪನವರು ಬೆಂಗಳೂರಿನ ರೈಲ್ವೆ ಸ್ಟೇಶನಲ್ಲಿ ಬಂಧಿಸಲ್ಪಟ್ಟು ಮತ್ತೊಮ್ಮೆ ಸೆರೆಮನೆಯವಾಸ ಅನುಭವಿಸಿದರು. ಮತ್ತೊಮ್ಮೆ 1943ರಲ್ಲಿ ತಮ್ಮ ಭಾಷಣವೊಂದರಲ್ಲಿ ಬ್ರಿಟಿಷ್ ಸರ್ಕಾರವನ್ನು ಟೀಕಿಸಿದರೆಂದು ದೇಶದ್ರೋಹಿ ಆಪಾದನೆ ಮೇಲೆ ಬಂಧಿಸಲ್ಪಟ್ಟರು. ದಾಸಪ್ಪನವರಿಗೆ ಸೆರೆಮನೆಗೆ ಹೋಗಿ ಬರುವದು ಸಾಮಾನ್ಯವಾಗಿ ಹೋಯಿತು.

ಉತ್ತಮ ನಾಯಕರಾಗಿದ್ದ ದಾಸಪ್ಪನವರು ಸೆರೆಮನೆಯನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿ ಕೊಂಡದ್ದುಂಟು. ಒಮ್ಮೆ ರಾಮನಗರದ, ಒಮ್ಮೆ ಶಿವಮೊಗ್ಗದ, ಮಗದೊಮ್ಮೆ ಬೆಂಗಳೂರು, ಮೈಸೂರಿನ ಬಳಿಯ ಕಾರಾಗೃಹಗಳಲ್ಲಿದ್ದಾಗ ಅಲ್ಲಿಯೂ ಸಮಯ ವ್ಯರ್ಥಮಾಡದಂತೆ ತಮ್ಮ ಜೊತೆ ಖೈದಿಗಳಿಗೆ ಮಾರ್ಗದರ್ಶನ ನೀಡಿದ್ದುಂಟು. ಯುವ ಸತ್ಯಾಗ್ರಹಿಗಳನ್ನು ಸಂಘಟಿಸಿ ಅವರಿಗೆ ಗಾಂಧಿ ತತ್ವಗಳನ್ನು ಮತ್ತು ದೇಶದ ಮುಂದಿರುವ ವಿವಿಧ ಸವಾಲುಗಳನ್ನೂ ಚರ್ಚೆಯೇರ್ಪಡಿಸಿ ಅವರ ಜ್ಞಾನೋಭಿವೃದ್ಧಿಗೆ ಶ್ರಮಿಸಿದರು. ಬಂಧಿಗಳು ನಿರಾಶಾ–ಭಾವನೆಯನ್ನು ತಳೆಯದಂತೆ ಮಾಡಲು ಕಾರಾಗಹೃಗಳ ಲೈಬ್ರರಿಗಳಿಗೆ ಪುಸ್ತಕಗಳನ್ನು ತೆರೆಸಿ ಅದನ್ನು ಓದಲಿಕ್ಕೆ ಕೊಡುವಂತೆ ನೋಡಿಕೊಂಡರು. ತಮ್ಮ ಜೊತೆ ಸತ್ಯಾಗ್ರಹಿಗಳ ಮನೋರಂಜನೆಗೆ ಭಾಷಣ ಸ್ಪರ್ದೆಗಳನ್ನೇರ್ಪಡಿಸುತ್ತಿದ್ದರು. ಕ್ರಿಯಾಶೀಲರಾದ ವ್ಯಕ್ತಿಯೊಬ್ಬ ಎಂತಹ ಸಮಯದಲ್ಲಿ ತನ್ನ ಜೊತೆಯವರ ಸಹಾಯಕ್ಕೆ, ಮಾರ್ಗದರ್ಶನಕ್ಕೆ ಕಾರಣನಾಗುತ್ತಾನೆಂಬುದಕ್ಕೆ ದಾಸಪ್ಪನವರೇ ಉದಾಹರಣೆ.

1945ರ ಹೊತ್ತಿಗೆ ಸತ್ಯಾಗ್ರಹಗಳು ನಿಂತಿದ್ದರೂ, ದಾಸಪ್ಪನವರು ಉಳಿದ ಮೈಸೂರ್ ಕಾಂಗ್ರೆಸ್ಸಿಗರೊಂದಿಗೆ ಪಕ್ಷದ ಬಲ ಸಂವರ್ಧನೆಯಲ್ಲಿ ತೊಡಗಿದ್ದರು. 1947ರಲ್ಲಿ ಸ್ವಾತಂತ್ರ್ಯ ಬರುವ ಸೂಚನೆ ದೊರೆತೊಡನೆ ಮೈಸೂರು ಕಾಂಗ್ರೆಸ್ಸಿಗರು ತಮ್ಮ ಜವಾಬ್ದಾರಿಯಾಗಿದ್ದ ರಾಜ್ಯದ ಜನತೆ ಪ್ರಜಾಪ್ರಭುತ್ವವಾದಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಸಾಧ್ಯತೆಗಳ ಕಡೆ ಗಮನ ಹರಿಸಿ, ತಮ್ಮ ಬೇಡಿಕೆಯನ್ನು ಸರ್ಕಾರದ

ಮುಂದಿಟ್ಟರು. ಆದರೆ ಮೈಸೂರು ಸರ್ಕಾರ ತನ್ನ ಪಟ್ಟು ಬಿಡದೆ, ರಾಜ್ಯವನ್ನು ಭಾರತ ಡೋಮಿನಿಯನ್ ಸೇರುವ ಬಗ್ಗೆಯೂ ಮೀನಾಮೇಷ-ವೆಣಿಸುತ್ತಿದ್ದಾಗ, ದಾಸಪ್ಪನವರ ಹಾಗೂ ಉಳಿದ ನಾಯಕರ ನೇತೃತ್ವದಲ್ಲಿ ಜನಜಾಗೃತಿಯುಂಟು ಮಾಡಲು ತೊಡಗಿದರು.

1947ರ ಆಗಸ್ಟನಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರಿನಲ್ಲಿ ರಾಜ್ಯಾಡಳಿತ ಸ್ವಾತಂತ್ರ್ಯೋತ್ಸವನ್ನು ಆಚರಿಸಲು ಸಿದ್ಧವಿರಲಲ್ಲಿ. ಸ್ವತಂತ್ರ್ಯ ಭಾರತದಲ್ಲಿ ರಾಜ್ಯವನ್ನು ವೀಲಿನಗೊಳಿಸಿದರು ದಿವಾನ್ ಆರ್ಕಾಟ ರಾಮಸ್ವಾಮಿಯವರು ರಾಜ್ಯದಲ್ಲಿ ಪ್ರಜಾತ್ತಾತ್ಮಕ ಸರ್ಕಾರ ಅಸ್ಥಾಪಿಸಲು ಇಚ್ಚಿಸಲಲ್ಲಿ. ಮೈಸೂರಿನ ಜನರಿಗೆ ತುಂಬಾ ನಿರಾಶೆ ಉಂಟುಮಾಡಿದ ರಾಜ ಸರ್ಕಾರದ ನಡೆಯಿಂದ ಬೇಸತ್ತ ಕಾಂಗ್ರೆಸ್ಸಿಗರು ಮತ್ತೊಮ್ಮೆ ಸತ್ಯಾಗ್ರಹಕ್ಕೆ ಸಿದ್ಧರಾದರು. 1947ರ ಸೆಪ್ಟೆಂಬರ್ ತಿಂಗಳಿನಲ್ಲಿ 'ಮೈಸೂರು ಚಲೋ' ಚಳುವಳಿ ಘೋಷಣೆಯಾಗುತ್ತಿದ್ದಂತೆ ದಾಸಪ್ಪ ಮತ್ತೊಮ್ಮೆ ಬಂಧಿಸಲ್ಪಟ್ಟರು. ತಿಂಗಳ ಕಾಲ ಸೆರೆಯಲ್ಲಿದ್ದರೂ ಯಶೋಧರಮ್ಮನವರ ಮೂಲಕ ಮೈಸೂರಿನ ಚಳುವಳಿಗೆ ಮಾರ್ಗದರ್ಶನ ನೀಡಿದರು. ತಿಂಗಳ ಕಾಲ ನಡೆದ ಚಳವಳಿ 1947ರ ಅಕ್ಟೋಬರ್ 24ರಲ್ಲಿ ರಾಜ್ಯದಲ್ಲಿ ಪ್ರಜಾ ಸರ್ಕಾರ ಸ್ಥಾಪನೆಯೊಂದಿಗೆ ಕೊನೆಗೊಂಡಿತು. ದಾಸಪ್ಪನವರು 1938ರ ವಿಧುರಾಶ್ವತ ಕಾಂಗ್ರೆಸ್ ಅಧೀವೇಶನದ ಅಧ್ಯಕ್ಷ ಭಾಷಣದಲ್ಲಿ ನೀಡಿದ ವಾಗ್ದಾನದಂತೆ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ದೇಶದ ಸ್ವಾತಂತ್ರ್ಯಕ್ಕೆ ಸತತವಾಗಿ ಶ್ರಮಿಸಿದರು.

ಕೆ.ಸಿ. ರೆಡ್ಡಿಯವರ ನಾಯಕತ್ವದಲ್ಲಿ ಸ್ಥಾಪನೆಯಾದ ಮಂತ್ರಿಮಂಡಲದಲ್ಲಿ ದಾಸಪ್ಪನವರಿಗೆ ಎರಡನೆಯ ಸ್ಥಾನ, ಹಣಕಾಸು, ಬೃಹತ್ ಕೈಗಾರಿಕೆ ಮುಂತಾದ ಮುಖ್ಯ ಇಲಾಖೆಗಳ ಹೊಣೆಗಾರಿಕೆ ಹೊತ್ತದ್ದು ಅಧಿಕಾರದ ಫಲವನ್ನನುಭವಿಸಲು ಅಲ್ಲ. ಸ್ವಾತಂತ್ರ್ಯಾನಂತರ ದೇಶ ವಿಭಜನೆಯ ಘೋರ ಪರಿಣಾಮಗಳಿಂದ ದೇಶದ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುವುದು. ಮೈಸೂರು ಸ್ವತಂತ್ರ ಭಾರತದ ವಿಭಜನೆಯಿಂದಾದ ನಿರಾಶ್ರಿತರ ಸಮಸ್ಯೆ, ಕೈಗಾರಿಕೆಗಳ ಹಿನ್ನಡೆ, ಆರ್ಥಿಕ ಮುಗ್ಗಟ್ಟು ಆಹಾರ ಧಾನ್ಯಗಳ ಕೊರತೆಯ ಸಮಸ್ಯೆಗಳಲ್ಲದೆ ದೇಶದ ಸಂವಿಧಾನ ರಚನೆ, ಕಾನೂನು ನಿರ್ವಹಣೆ ಮುಂತಾದವುಗಳ ಕಡೆ ಗಮನ ಹರಿಸಿದಾಗ, ಸರಳ ಸಜ್ಜನ್ನಿಕೆಯ ನಾಯಕರೂ ಅದಕ್ಕೆ ಪೂರ್ಣವಾಗಿ ಸ್ಪಂದಿಸಿದರು. ದಾಸಪ್ಪನವರು ಮೈಸೂರು ರಾಜ್ಯದ ಹಣಕಾಸಿನ, ಕೈಗಾರಿಕೆಗಳ ಮಂತ್ರಿಯಾಗಿ ರಾಜ್ಯವೂ ಹಿಂದೆ ಗಳಿಸಿದ್ದ ಅಭಿವೃದ್ಧಿಶೀಲ ರಾಜ್ಯವೆಂಬ ಕೀರ್ತಿಯನ್ನುಳಿಸಿಕೊಳ್ಳುವದು, ಅಂತೆಯೇ ನವಭಾರತದ ಭಾಗವಾಗಿ ರಾಜ್ಯವನ್ನು

ವಿಲೀನಗೊಳಿಸಲು ಹಲವಾರು ತ್ಯಾಗಗಳಿಗೆ ಜನರನ್ನು ಸಿದ್ಧಗೊಳಿಸಬೇಕಾಯಿತು. ಅಂದಿನ ದಿನಗಳಲ್ಲಿ ಅಧಿಕಾರವೆಂದರೆ ಜನರ ಸಂಕಷ್ಟಗಳಿಗೆ ಸ್ಪಂದಿಸುವದು ರಾಜ್ಯದ ಪ್ರಗತಿಯ ದಿಶೆಯನ್ನು ರೂಪಿಸುವುದು, ಮುಂದಿನ ಬೆಳವಣಿಗೆಗೆ ದಾರಿಯನ್ನು ರೂಪಿಸುವುದು.

1953ರಲ್ಲಿ ಮತ್ತೊಮ್ಮೆ ದಾಸಪ್ಪನವರು ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್‌ಜನರಿಗೆ ಸ್ವಚ್ಛ ಆಡಳಿತ ನೀಡುವಂತೆ, ನೀಡಿದ ಭರವಸೆಗಳನ್ನು ಪೂರ್ಣಗೊಳಿಸುವ ಕಡೆ ಗಮನ ನೀಡಲು ರಚನಾತ್ಮಕವಾಗಿ ತನ್ನನ್ನು ತೊಡಗಿಸಿಕೊಳ್ಳುವಂತೆ ನೋಡಿ–ಕೊಂಡರು. ಅಧಿಕಾರದ ಅಮಲಿನಲ್ಲಿ ಕಾಂಗ್ರೆಸ್ ಸರ್ಕಾರಗಳು ಪ್ರಜೆಗಳ ಯೋಗಕ್ಷೇಮವನ್ನು ಕಡೆಗಣಿಸದಂತೆ ಎಚ್ಚರವಾಗಿ ಕಾರ್ಯ ನಿರ್ವಹಿಸಬೇಕೆಂದು ಕಾಂಗ್ರೆಸ್ ಸದಸ್ಯರನ್ನು ತರಬೇತಿಗೊಳಿಸಿದರು.

1954ರಲ್ಲಿ ದಾಸಪ್ಪನವರು ರಾಜ್ಯದಿಂದ ಕೇಂದ್ರ ರಾಜ್ಯಸಭೆಯ ಸದಸ್ಯರಾದರು. ಈಗಾಗಲೆ ಸಂಸದೀಯಪಟುವೆಂದು ಗುರುತಿಸಲ್ಪಟ್ಟಿದ್ದ ದಾಸಪ್ಪ ಪಂಡಿತ್ ನೆಹರುವರ ಸರ್ಕಾರ ಕೈಗೊಂಡಿದ್ದ ಸಾಮಾಜಿಕ ಬದಲಾವಣೆಗಳನ್ನು ತರಲು, ದುರ್ಬಲ ವರ್ಗಗಳ ಪರವಾಗಿ ಶಾಸನಗಳನ್ನು ರೂಪಿಸುವ ಕಾರ್ಯವನ್ನು ಕೈಗೊಂಡಿತ್ತು. ದಾಸಪ್ಪನವರು 1929–30ರಲ್ಲಿ ಮೈಸೂರು ಸರ್ಕಾರ ಜಾರಿಗೊಳಿಸಿದ ಮಹಿಳಾಪರ ಶಾಸನಗಳ ರೂವಾರಿ. ಇಂತಹ ಪರಿಣಿತರನ್ನು ಪ್ರಧಾನಿ ನೆಹರು ಸರಿಯಾಗಿ ಬಳಸಿಕೊಂಡರು. ದಾಸಪ್ಪನವರ ವಕೀಲಿ ವೃತ್ತಿಯ ಅನುಭವ, ಸಂಸದೀಯ ಕಾರ್ಯದ ಹಿನ್ನಲೆ, ದೀರ್ಘಕಾಲ ಜನಸಂಪರ್ಕದಲ್ಲಿದ್ದ ಅವರ ಜನಪರ ಕಾಳಜಿ ಈ ಸಮಯದಲ್ಲಿ ನೆಹರುವರಗೆ ನೆರವಾಯಿತು.

1957ರಲ್ಲಿ ಲೋಕಸಭೆಗೆ ಚುನಾಯಿತರಾದ ದಾಸಪ್ಪನವರನ್ನು ಪ್ರದಾನಿ ನೆಹರು ಕೇಂದ್ರದ ಎಸ್ಟಿಮೇಟ್ ಕಮಿಟಿಯ ಚೇರಮೆನ್‌ರಾಗಿ ನೇಮಿಸಿದರು. ನಂತರ 1962ರಲ್ಲಿ ಅವರನ್ನು ಕೇಂದ್ರ ಮಂತ್ರಿಮಂಡಲಕ್ಕೆ ಸೇರಿಸಿಕೊಂಡರು. ದಾಸಪ್ಪನವರು ರೈಲ್ವೆಮಂತ್ರಿಯಾಗಿ ಹಲವಾರು ಪ್ರಗತಿಪರ ಯೋಜನೆಗಳನ್ನು

ರೈಲ್ವೆಯ ಆಧುನೀಕರಣಕ್ಕೆ, ಸೌಕರ್ಯಗಳ ವಿಸ್ತರಣೆಗೆ ಗಮನ ಹರಿಸಿದರು. 1964ರ ಮೇ ತಿಂಗಳಲ್ಲಿ ಪಂಡಿತ್ ನೆಹರುವರ ಮರಣಾನಂತರ ಪ್ರದಾನಿಯಾದ ಪಂಡಿತ್ ಲಾಲ್ ಬಹದ್ದೂರ ಶಾಸ್ತ್ರಿಯವರು ದಾಸಪ್ಪನವರನ್ನು ತಮ್ಮ ಕ್ಯಾಬಿನೆಟ್ ಸಚಿವರಾಗಿಸಿಕೊಂಡರು. ದಾಸಪ್ಪನವರು ದೇಶದ ಅಭಿವೃದ್ಧಿಗೆ ದುಡಿಯುತ್ತಿದ್ದಾಗಲೆ 18–10– 1964ರಂದು ಹೃದಯಾಘಾತದಿಂದ ಮರಣಹೊಂದಿದ್ದರು.

ದಾಸಪ್ಪನವರದು ತ್ಯಾಗ ಬಲಿದಾನಗಳ ಜೀವನ ತಾವು ನಂಬಿದ್ದ ಮಹಾತ್ಮಗಾಂಧಿಯವರ ಸಿದ್ಧಾಂತಗಳ ಪರಿಪಾಲನೆಗೆ ತಮ್ಮ ಜೀವನವನ್ನೆ ಮುಡಿಪಾಗಿಟ್ಟು ಸೆರೆಮನೆಯಾಗಲಿ ಅರಮನೆಯಾಗಲಿ, ದೇಶದ ಏಳಿಗೆಗಾಗಿ ತಮ್ಮ ಅಮೂಲ್ಯ ಕೊಡುಗೆ ನೀಡಿದವರು ಎಚ್.ಸಿ. ದಾಸಪ್ಪ. ಅವರ ಹಾಗೂ ಅವರಂತೆ ದುಡಿದ ನಿಸ್ವಾರ್ಥ ನಾಯಕರ ಸೇವೆಯ ಫಲವನ್ನು ನಾವೀಗ ಉಣ್ಣುತ್ತಿದ್ದೇವೆ. ದಾಸಪ್ಪನಂತಹವರ ಹೋರಾಟ, ಶ್ರಮದ ಫಲವಾಗಿ ನಾವು ಪಡೆದುಕೊಂಡ ಸ್ವಾತಂತ್ರ್ಯದ ಉಳಿಯುವಿಕೆಗೆ ಎಲ್ಲರೂ ಗಮನ ನೀಡಿದರೆ ಮಾತ್ರ ಅವರುಗಳು ತಂದುಕೊಟ್ಟ ಸ್ವಾತಂತ್ರ್ಯ ಉಳಿಯುತ್ತದೆ. ದಾಸಪ್ಪನವರೇ ಒಂದು ಕಡೆ ಹೇಳಿರುವಂತೆ ಸದಾ ಜಾಗೃತಿಯೆ ನಾವು ಸ್ವಾತಂತ್ರ್ಯಕ್ಕೆ ಕೊಡಬೇಕಾದ ಬೆಲೆ. ಇದು ಸರ್ವಕಾಲಿಕ ಸತ್ಯ. ಆದರೆ ಇಂದಿನ ದಿನಮಾನಗಳ ಬೆಳವಣಿಗೆ ವಿಚಾರವಂತರಲ್ಲಿ, ಪ್ರಜ್ಞಾವಂತರಲ್ಲಿ ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ. ದಾಸಪ್ಪನವರಂತಹ ದೇಸಪ್ರೇಮಿ, ನಿಸ್ವಾರ್ಥ ನಾಯಕರೆಲ್ಲಿ? ಇಂದಿನ ಯುವಕರಿಗೆ ಇಂತಹ ನಾಯಕರ ಆದರ್ಶ, ಮಾರ್ಗದರ್ಶನದ ಅವಶ್ಯಕತೆ ಬಹಳಷ್ಟಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯ ನಾಯಕತ್ವದ ಗುಣ, ಸಂಘಟನಾ ಚಾತುರ್ಯದಿಂದ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ನಾಯಕತ್ವದ ಜನತಾ ಸರ್ಕಾರದ ಸ್ಥಾಪನೆಯಲ್ಲಿ ಯಶಸ್ವಿಯಾದ ರಾಜ್ಯ ನಾಯಕರಲ್ಲಿ ಅಗ್ರಗಣ್ಯ ಎಚ್.ಸಿ. ದಾಸಪ್ಪನವರು. ಕೇವಲ ಮಾತಿನ ಚತುರರಾಗಿರದೆ, ತಮ್ಮನ್ನು ಅವಲಂಬಿಸಿದ್ದ ಹಿಂಬಾಲಕರಿಗೆ, ತಮ್ಮ ನಾಯಕತ್ವದಲ್ಲಿ ವಿಶ್ವಾಸವಿಟ್ಟಿದ್ದ ಜನತೆಗೆ ಈಗ ತಮ್ಮ ಆಶ್ವಾಸನೆಗಳ ಪೂರೈಕೆಯ ಪರೀಕ್ಷೆ. ಕೆ.ಸಿ ರೆಡ್ಡಿಯವರ ನಾಯಕತ್ವದಲ್ಲಿ ಸರ್ಕಾರ ರಚಿಸಿದ ಕಾಂಗ್ರೆಸ್ಸಿಗರಿಗೆ, ಅಧಿಕಾರ ಹೂವಿನ ಹಾಸಿಗೆಯೇನೂ ಅಲ್ಲ ಎನ್ನುವ ಅನುಭವ ಬೇಗನೆ ಆಯಿತು. ಅಂದಿನ ದಿನಗಳ ಅಧಿಕಾರ ಕೊಳ್ಳೆಯನ್ನು ಹಂಚಿ ಕೊಂಡಂತಲ್ಲ, ಜನರ ಕಷ್ಟನಷ್ಟಗಳಿಗೆ ಸೂಕ್ತವಾಗಿ ಸ್ಪಂದಿಸುವ ಮಾನವೀಯತೆ ಇನ್ನು ಪ್ರಬಲವಾಗಿದ್ದು, ಸ್ವಲ್ಪಮಟ್ಟಿಗಾದರೂ ಗಾಂಧೀಜಿಯವರ ಕನಸಿನ ರಾಮರಾಜ್ಯದ ಸ್ಥಾಪನೆಗೆ ಪ್ರಯತ್ನಿಸುವುದು ಕಾಂಗ್ರೆಸ್ಸಿಗರ ಗುರಿ. ರಾಜ್ಯದ ಮಂತ್ರಿಮಂಡಲದಲ್ಲಿ ಎರಡನೆಯವರಾಗಿ ದಾಸಪ್ಪನವರು ಹಣಕಾಸು, ದೊಡ್ಡ ಕೈಗಾರಿಕೆ, ನಗರಾಭಿವೃದ್ಧಿ, ಅಂಚೆ ಮುಂತಾದ ಪ್ರಮುಖ ಖಾತೆಗಳ ನಿರ್ವಹಣೆ ಹೊರಬೇಕಾಯಿತು.

1947ರಲ್ಲಿ ರಾಜ್ಯದಲ್ಲಾಗಲಿ, ದೆಹಲಿಯಲ್ಲಾಗಲಿ ಅಧಿಕಾರವನ್ನು ಹಂಚಿ ಕೊಳ್ಳುವುದೆಂದರೆ ಸುಲಭದ ಮಾತಾಗಿರದೆ, ಅದು ಅವರ ಎಲ್ಲಾ ಸಾತ್ವಿಕ, ಬೌದ್ಧಿಕ ಶಕ್ತಿ ಸಾಮರ್ಥ್ಯದ ಸತ್ವಪರೀಕ್ಷೆಯ ಕಾಲ. ದಶಕಗಳ ಕಾಲ ತಾವು ಶ್ರಮವಹಿಸಿ,

ಲಕ್ಷಾಂತರ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಸ್ವಾತಂತ್ರ್ಯ ಸುಲಭವಾಗಿ ಬಂದದ್ದಲ್ಲ. ಸಾವಿರಾರು ಜನರ ತ್ಯಾಗ, ಪರಿಶ್ರಮದ ಫಲವದು. ಅಂತೆಯೇ 1947ರ ಸ್ವಾತಂತ್ರ್ಯ ಭಾರತೀಯರಲ್ಲಿ ಹತ್ತು ಹಲವಾರು ಕನಸುಗಳ ಕಲ್ಪನಾ ಲಹರಿಯನ್ನು ಬಿಚ್ಚಿಟ್ಟಿತು. ಆ ಕನಸುಗಳನ್ನು ನನಸು ಮಾಡುವುದು, ತಾವು ಹುಟ್ಟಿಸಿದ ಭರವಸೆಗಳನ್ನು ಪೂರೈಸುವ ದೊಡ್ಡ ಜವಾಬ್ದಾರಿ ಈಗ ಮಂತ್ರಿಗಳಾಗಲು ಬಂದವರ ಮೇಲಿತ್ತು. ಮೈಸೂರಿನಲ್ಲಿ ಮಹಾರಾಜರ ಸರ್ಕಾರವನ್ನು ಬದಲಿಸಿ ಪ್ರಜಾಪ್ರಭುತ್ವವಾದಿ ಸರ್ಕಾರದ ಘೋಷಣೆಯೊಂದಿಗೆ ಅಧಿಕಾರ ಹಿಡಿದ ಕಾಂಗ್ರೆಸ್ ಈಗ ಮೈಸೂರಿನಲ್ಲಿ ಮಹಾರಾಜರ ಅಧಿಪತ್ಯದಲ್ಲಿ ಸ್ವಲ್ಪಮಟ್ಟಿಗಾದರೂ ಸಂತೃಪ್ತಿಯಿಂದಿದ್ದ ಜನರನ್ನು, ಹಾಗೂ ತನ್ನ ಎಲ್ಲಾ ಚಟುವಟಿಕೆಗಳನ್ನು ಸಂಶಯದಿಂದ ನೋಡುತ್ತಿದ ಪ್ರಭುತ್ವವಾದಿಗಳನ್ನು ತೃಪ್ತಿಗೊಳಿಸುವ ಹೋಣೆಗಾರಿಕೆ ಹೊರಬೇಕಿತ್ತು. ಜನರ ಆಶೋತ್ತರಗಳನ್ನು ಈಡೇರಿಸುವ ಛಲ, ದೃಢ ಮನೋಭಾವ ಮಾತ್ರ ಅವರಿಂದ ಈ ಕೆಲಸಗಳನ್ನು ಮಾಡಿಸಬಹುದಿತ್ತು.

ಸ್ವಾತಂತ್ರ್ಯದೊಂದಿಗೆ ಉಂಟಾದ ಹಲವು ಬೆಳವಣಿಗೆಗಳು, ಸಮಸ್ಯೆಗಳು ಅಗಾಧ, ಆಕಸ್ಮಿಕವಾದರೂ ಘೋರ ಸಮಸ್ಯೆಗಳಿಗೆ ಕಾರಣವಾದ ದೇಶದ ವಿಭಜನೆ, ಗಡಿಸಮಸ್ಯೆ, ಸಾಲುಗಟ್ಟಿ ದೇಶಾಂತರಕ್ಕೆ ಸಿದ್ಧರಾದ ನಿರಾಶ್ರಿತರ ಪುರ್ನವಸತಿ, ಇಲ್ಲಿಂದ ಪಾಕಿಸ್ಥಾನಕ್ಕೆ, ಅಲ್ಲಿಂದ ಭಾರತಕ್ಕೆ ಬಂದ ನಿರಾಶ್ರಿತರ ದಾರುಣ ಸಮಸ್ಯೆ ಎಂಥಹವರನ್ನು ಎದೆಗೆಡಿಸುವಂತ್ತಿತು. ಗಡಿ ಸಮಸ್ಯೆ, ವಿಭಜನೆಯ ಒಂದು ಅಂಶವಾದರೆ, ಜೊತೆಯಲ್ಲಿ ಬಂದಿದ್ದ ಕೋಮುಗಲಭೆ ಎರಡೂ ದೇಶಗಳಲ್ಲಿ ಅಶಾಂತ ಸ್ಥಿತಿಗೆ ಕಾರಣವಾಗಿ ಶಾಂತಿ ಪಾಲನೆ ಕಾನೂನು ವ್ಯವಸ್ಥೆಗೆ ಆದ್ಯತೆ ನೀಡಬೇಕಾಯಿತು. ಅಂಕಿಸಂಖ್ಯೆಗಳ ಪ್ರಕಾರ 1947–49ರ ನಡುವೆ ಸರಿಸುಮಾರು ಹನ್ನೆರಡು ಲಕ್ಷ ಭಾರತೀಯರು ನಿರಾಶ್ರಿತರಾಗಿದ್ದು ಇದು ಅಂದಿನ ಆಸ್ಟ್ರೇಲಿಯಾ ಖಂಡದ ಜನಸಂಖ್ಯೆಯಷ್ಟು! ಇಷ್ಟು ದೊಡ್ಡ ಸಂಖ್ಯೆಯ ಜನರ ವಲಸೆ ಅಗಾಧವಾದ ಸಮಸ್ಯೆಗಳನ್ನುಂಟು ಮಾಡಿತು. ಈ ಸಮಸ್ಯೆಗಳನ್ನು ಪರಿಹರಿಸದಿದ್ದರೆ ದೇಶ ದಶಕಗಳ ಕಾಲ ಅಶಾಂತ, ಅನಾಯಕತ್ವದ ಸ್ಥಿತಿಯಲ್ಲಿರುವಂತ್ತಿತು. ಅದೃಷ್ಟವಶಾತ್ ದೇಶವನ್ನು ಮುನ್ನಡೆಸಲು ಕಾಂಗ್ರೆಸ್‌ನ ನಾಯಕರಿಗೆ ಈ ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ, ಮುಂದಾಲೋಚನೆ, ಇದ್ದದಲ್ಲದೆ, ಯಾವ ರೀತಿಯ ಹಿಂಜರಿತವೂ ದೇಶದ ಜನರನ್ನು ಕಾಡದಂತೆ ನಡೆಸಬಲ್ಲ ದಕ್ಷತೆ ಅಂದಿನ ಕಾಂಗ್ರೆಸ್ ನಾಯಕರಲ್ಲಿತ್ತು.

ಅಂಥಹ ಒಂದು ಉದಾಹರಣೆ ಎಚ್.ಸಿ ದಾಸಪ್ಪನವರದು. ಮೈಸೂರು ರಾಜ್ಯದ ಕ್ಯಾಬಿನೆಟ್‌ನಲ್ಲಿ ಪ್ರಮುಖ ನಾಯಕರಾಗಿ ರಾಜ್ಯದ ಹತ್ತು ಹಲವು

ಸಮಸ್ಯೆಗಳನ್ನು ಪರಿಹರಿಸಲು ಅವರು ತೋರಿದ ಚಾಕಚಾಕ್ಯತೆ, ದೂರದರ್ಶಿತ್ವ, ಎಂತಹ ಸ್ಥಿತಿಯಲ್ಲೂ ತಮ್ಮ ಧ್ಯೇಯೋದ್ದೇಶಗಳನ್ನು ಮರೆಯದೆ, ರಾಜ್ಯದ ಮುನ್ನಡೆಯನ್ನು ಕಾಯ್ದುಕೊಳ್ಳುವಂತಹ ನಾಯಕತ್ವ ದಾಸಪ್ಪನವರದು. ನಂತರ ಪಾರ್ಲಿಮೆಂಟ್‌ನ ಸದಸ್ಯರಾಗಿ ತೋರಿದ ಸಂಸದೀಯ ಪಟುತ್ವ, ಕೇಂದ್ರ ಮಂತ್ರಿಮಂಡಲದಲ್ಲಿ ಅವರ ಸಾಧನೆ ಗಮನಿಸಲರ್ಹ.

ನಿರಾಶ್ರಿತರ ವಸತಿ ಸಮಸ್ಯೆಯೆ, ನಿರುದ್ಯೋಗ ಅಲ್ಲದೆ, ಆಹಾರ ಧಾನ್ಯಗಳ ಸಮಸ್ಯೆ ಬೃಹದಾಕಾರವಾಗಿತ್ತು. ಹಿಂದಿನ ಕೆಲ ವರ್ಷಗಳ ಅನಾವೃಷ್ಟಿಯಿಂದ ಆಹಾರ ಧಾನ್ಯಗಳ ಕೊರತೆ ಹೆಚ್ಚಿತು. ಅಲ್ಲದೆ ಆಕಸ್ಮಿಕವಾಗಿ ಎದುರಾದ ನಿರಾಶ್ರಿತರ ಸಮಸ್ಯೆ, ಈಗಾಗಲೆ ಇದ್ದ ಧಾನ್ಯ ಸರಬರಾಜು ವ್ಯವಸ್ಥೆಯನ್ನು ಬುಡಮೇಲು ಮಾಡಿದ್ದಲ್ಲದೆ ಸದಾ ಅತೀವೃಷ್ಟಿ ಅಥವಾ ಅನಾವೃಷ್ಟಿಯನ್ನು ಎದುರಿಸುತ್ತಿದ್ದ ದೇಶದ ಹಣಕಾಸಿನ ಭದ್ರ ಬುನಾದಿಗೆ ದಕ್ಕೆ ತಂದಿತು. ಹೀಗಾಗಿ ಸ್ವತಂತ್ರ ಭಾರತದ ಸರ್ಕಾರದ ಪ್ರಾಶಸ್ತ್ಯ ಬದಲಾಗಿ ಮೊದಲಿನ ವರ್ಷಗಳು ಅಗತ್ಯತೆಗಳ ಪೂರೈಕೆಗೆ ಹರಸಾಹಸ ಮಾಡಬೇಕಿತ್ತು. ಅಂದಿನ ದಿನಗಳಲ್ಲಿದ್ದ ವಿಲಕ್ಷಣ ಪರಿಸ್ಥಿತಿಯೆಂದರೆ ಆಹಾರ ಧಾನ್ಯಗಳ ಕೊರತೆ, ದಕ್ಷಿಣದ ಪ್ರಾಂತಗಳಲ್ಲಿ ಅಕ್ಕಿಯ ಕೊರತೆ ಬಹಳವಾಗಿತ್ತು. ಜನರಿಗೆ ದುಡ್ಡಿದ್ದರೂ ಅಕ್ಕಿಯನ್ನು ಕೊಳ್ಳಲಾರದಂತಹ ಸ್ಥಿತಿ, ಹೋಟೆಲ್‌ಗಳು, ಖಾನಾವಳಿಗಳು ಇಡ್ಲಿ, ದೋಸೆಗಳನ್ನು ಮಾರುವಂತಿರಲಿಲ್ಲ. ಅಂದಿನ (1947–50ರವರೆಗೆ) ಪತ್ರಿಕೆಗಳಲ್ಲಿ ಬರುತ್ತಿದ್ದ ಸುದ್ಧಿಗಳಲ್ಲಿ, ಇಡ್ಲಿ ಮಾಡಿ ಮಾರಿದವರನ್ನು, ದೋಸೆ ಮಾರಲು ಪ್ರಯತ್ನಸಿದವರನ್ನು ಬಂಧಿಸಿದ, ಹೋಟೆಲ್‌ಗಳ ಮೇಲೆ ಪೋಲಿಸರ ದಾಳಿ ಮುಂತಾದ ಸುದ್ದಿಗಳಿದ್ದು, ಅಂದಿನ ಜನರು ಎದುರಿಸಿದ ಕಠಿಣ ಪರಿಸ್ಥಿತಿ ಕಣ್ಣಿಗೆ ಕಟ್ಟುವಂತಿದೆ. ನಿತ್ಯ ಬಳಕೆಯ ವಸ್ತುಗಳ ಬಳಕೆಯಲ್ಲಿ ಮಿತವ್ಯಯವಿರಬೇಕಿತ್ತು. ಜನರ ಸ್ಥಿತಿಯೇ ಹೀಗಾದರೆ ಸರ್ಕಾರದ ಸ್ಥಿತಿ ಹೇಗಿದ್ದಿರಬೇಕು?

ಮೈಸೂರು ಈಗ ಸ್ವತಂತ್ರ ಭಾರತದ ಭಾಗವಾಗಿ ಈ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಬೇಕಿತ್ತು. ಹಾಗಂತ ರಾಜ್ಯದ ನಾಯಕರ ಮುಂದೆ ಸಮಸ್ಯೆಗಳಿರಲ್ಲಿಲವೆಂದಲ್ಲ. ಇದುವರೆಗೂ ರಾಜಮನೆತನದ ಆಡಳಿತ ಹೊಂದಿದ್ದ ರಾಜ್ಯವೀಗ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಹೊಂದಿಕೊಳ್ಳಲು ಸಿದ್ಧವಾಗಬೇಕಿತ್ತು. ಜನರ ಅಪಾರ ಪ್ರೀತಿಗೌರವಗಳನ್ನು ಸಂಪಾದಿಸಿ, ದಶಕಗಳ ಕಾಲ ರಾಜ್ಯವನ್ನು ಪ್ರಗತಿಪಥದಲ್ಲಿ ನಡೆಸಿ, ಅದನ್ನು ದೇಶದ ಮಾದರಿ ರಾಜ್ಯವಾಗಿಸಿದ್ದ ಒಡೆಯರ ಮನೆತನದ ಆಡಳಿತ ವೈಖರಿ ಪ್ರಜೆಗಳ ಮೆಚ್ಚುಗೆ ಗಳಿಸಿದ್ದರಿಂದ ಅದರ ಜಾಗವನ್ನು ತುಂಬುವದು ಅಸಾಧ್ಯವೆಂಬ ಭಾವನೆ

ಜನರಲ್ಲಿತ್ತು. ಇಂತಹ ಹಿನ್ನೆಲೆ ಅಧಿಕಾರ ವಹಿಸಿಕೊಳ್ಳುವ ಕಾಂಗ್ರೆಸ್ಸಿಗರಲ್ಲಿ ಎಚ್ಚರಿಕೆಯನ್ನುಂಟುಮಾಡಿತ್ತು. ಜನರ ಭಕ್ತಿ ಗೌರವಗಳಿಗೆ ಭಾಧ್ಯರಾಗಿದ್ದ ಒಡೆಯರ ಮನೆತನದವರ ಸಾಧನೆಯನ್ನು ಸರಿಗಟ್ಟುವ ಕೆಲಸ ತಮ್ಮಿಂದಾಗಬೇಕೆಂಬುದು ಅವರಿಗೆ ತಿಳಿದಿತ್ತು.

ಅದಕ್ಕಾಗಿ ಅವರು ಅಪಾರ ಶ್ರಮ ಪಡಬೇಕಿತ್ತೆಂಬುದರಲ್ಲಿ ಸಂಶಯವಿಲ್ಲ.

ಮಂತ್ರಿಮಂಡಲದ ಪ್ರಮುಖ ಇಲಾಖೆಗಳ ಹೊಣೆಗಾರಿಕೆ ಹೊತ್ತಿದ್ದ ದಾಸಪ್ಪನವರಿಗೆದುರಾದ ಸಮಸ್ಯೆಗಳು ಮತ್ತಷ್ಟು ಜಟಿಲ. ಒಂದು ಕಡೆ ಯುದ್ಧದ ಸಮಯದಲ್ಲಿ ಬಳಲಿದ್ದ ರಾಜ್ಯದ ಹಣಕಾಸಿನ ಸ್ಥಿತಿಯ ಪುನಃಶ್ಚೇತನಕ್ಕೆ, ಕೈಗಾರಿಕೆಗಳ ನವೀಕರಣಕ್ಕೆ, ದೈನಂದಿನ ಅವಶ್ಯಕತೆಗಳ ಪೂರೈಕೆಗೆ ಆದ್ಯತೆ ನೀಡಬೇಕಿತ್ತು. ಅದಲ್ಲದೆ ಅವರ ಮೆಚ್ಚಿನ ಯೋಜನೆ; ಮಹಾತ್ಮರ ಗ್ರಾಮಸ್ವರಾಜ್ಯ ಕಲ್ಪನೆಯನ್ನಾಧರಿಸಿದ ಗ್ರಾಮಕೈಗಾರಿಕೆಗಳನ್ನು ಪುನರಾರಂಭಿಸಬೇಕೆಂದು ಅವರು ನಿರ್ಧರಿಸಿದ್ದರು. ಅಧಿಕಾರ ವಹಿಸಿಕೊಳ್ಳುವಾಗ ಅವರಿಗೆ ತಮ್ಮ ಇತಿಮಿತಿಗಳ ಅರಿವಿತ್ತು. ಉದ್ದೇಶಗಳ ಈಡೇರಿಕೆಗೆ ತಕ್ಕುದಾದ ಸಿದ್ಧತೆಗಳ ಕಲ್ಪನೆಯಿದ್ದುದರಿಂದ ದಾಸಪ್ಪನವರು ಆ ಜವಾಬ್ದಾರಿಗಳನ್ನು ಹೊರಲು ಸಿದ್ಧರಾದರು.

ಆದರೂ ಅವರ ಅಧಿಕಾರಾವಧಿಯಲ್ಲಿ (1947–1952) ಅವರು ತಮ್ಮ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಾಜ್ಯದ ಹಣಕಾಸಿನ ಸ್ಥಿತಿ ಅಷ್ಟೇನು ಉತ್ತಮವಾಗಿರಲಿಲ್ಲ. ರಾಜ್ಯ ಸರ್ಕಾರವು ಎರಡನೇ ಯುದ್ಧದಿಂದಾಗಿ ಹಣಕಾಸಿನ ಮುಗ್ಗಟ್ಟಿನಲ್ಲಿತ್ತು. ಸಮೃದ್ಧ ರಾಜ್ಯವೆಂದು ಹೆಸರು ಗಳಿಸಿದ್ದ ರಾಜ್ಯದಲ್ಲೀಗ ಮೊದಲಿನ ಸುಸ್ಥಿತಿ ಕಣ್ಮರೆಯಾಗಿ, ಭಾರತದ ಉಳಿದ ಭಾಗಗಳಂತೆ ಹಣಕಾಸಿನ ಸಮಸ್ಯೆಯೆದಿರುಸುತ್ತಿತ್ತು. ಈ ಸ್ಥಿತಿಗೆ ಕಾರಣ ಹಿಂದಿನ ಮಹಾರಾಜರ ಸರ್ಕಾರ ಯೋಜನಾ ಬದ್ಧವಾದ ರೀತಿಯಲ್ಲಿ ಖರ್ಚುಮಾಡದೆ, ಮುಂದಿನ ದಿನಗಳಿಗಾಗಿ ಕೂಡಿಟ್ಟ ನಿಧಿಯಿಂದ ಖರ್ಚು ಮಾಡುವಂತಹ ಸ್ಥಿತಿಯಿದ್ದು, ಇದೊಂದು ಗಂಭೀರ ಸಮಸ್ಯೆಯಾಗಿತ್ತು. ರಾಜಪ್ರೇಮಿಗಳು ಇಂದಿನ ಪ್ರಜಾಸರ್ಕಾರದ ರೀತಿನೀತಿಗಳನ್ನು ಸಂಶಯದಿಂದ ನೋಡುತ್ತಾ ಪ್ರತಿ ಯೊಂದನ್ನು ಟೀಕಿಸುತ್ತಿದ್ದರು. ಅವರುಗಳನ್ನು ಸಮಾಧಾನ ಗೊಳಿಸುವುದು ಕಷ್ಟಕರವೆಂಬುದು ದಾಸಪ್ಪನವರಿಗೆ ಮನವರಿಕೆ ಯಾಯಿತು.

ರಾಜ್ಯದ ಹಣಕಾಸಿನ ಹಿನ್ನೆಲೆ ಉತ್ತಮವಾಗಿದ್ದರೂ, ಸ್ವಾತಂತ್ರ್ಯದ ಆಜುಬಾಜಿನಲ್ಲಿ, ಮೈಸೂರು ಸರ್ಕಾರ ಹಣದ ಮುಗ್ಗಟ್ಟು ಎದುರಿಸುತ್ತಿತ್ತು. ಎರಡನೇ ಮಹಾಯುದ್ಧದಿಂದಾಗಿ, ರಾಜ್ಯದ ಸಂಪನ್ಮೂಲಕ್ಕೆ ದಕ್ಕೆ ಉಂಟಾಗಿ, ವ್ಯಾಪಾರದಲ್ಲಿ

ಹಿನ್ನಡೆ, ಹಣ ಚಲಾವಣೆಯ ಮುಗ್ಗಟ್ಟು ಮುಂತಾದ ಸಮಸ್ಯೆಗಳನ್ನೆದುರಿಸುತ್ತಿತು. ಬ್ರಿಟಿಷರು ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ್ದರಿಂದ, ಮೈಸೂರಿನ ಕೈಗಾರಿಕೆಗಳಲ್ಲಿ ಅವರ ಬೇಡಿಕೆಗನುಸಾರವಾಗಿ ಶಸ್ತ್ರಾಸ್ತ್ರಗಳ, ಯುದ್ಧೋಪಕರಣಗಳ ತಯಾರಿಕೆಯ ಕಡೆ ಆದ್ಯತೆ ನೀಡಬೇಕಾಗಿತ್ತು. ಕಬ್ಬಿಣ, ಉಕ್ಕು, ಮುಂತಾದ ಲೋಹಗಳ ವ್ಯಾಪಾರ ಅಧಿಕವಾಗಿದ್ದರೂ ಅದೇನಿದ್ದರೂ ಶಸ್ತ್ರಾಸ್ತ್ರ ತಯಾರಿಕೆಗೆ ಗಮನ ನೀಡಿ ಆ ವಸ್ತುಗಳ ಕೊರತೆ ಜನರನ್ನು ಕಾಡುತ್ತಿದ್ದು, ರಾಜ್ಯದ ಕೈಗಾರಿಕೆಗಳು ಹಣದ ಮುಗ್ಗಟ್ಟು ಅನುಭವಿಸುತ್ತಿದ್ದವು. ಯುದ್ಧಕ್ಕಾಗಿ ಉತ್ಪಾದಿಸಿದ ಶಸ್ತ್ರಾಸ್ತ್ರ ಗಳಿಗೆ ಈಗ ಬೇಡಿಕೆ ಇಲ್ಲದೆ ನಷ್ಟವುಂಟಾಗಿತ್ತು.

ದಾಸಪ್ಪನವರ ಮುಂದಿದ್ದ ಹಲವಾರು ಸಮಸ್ಯೆಗಳಲ್ಲಿ ಇದ್ದ ವಿಶಿಷ್ಟ ಸ್ಥಿತಿಯೆಂದರೆ ರಾಜ್ಯವನ್ನು ಭಾರತ ಸರ್ಕಾರದಲ್ಲಿ ವಿಲೀನಗೊಳಿಸ ಬೇಕಿತ್ತು. ಇದುವರೆಗೂ ದೇಶೀಯ ಸಂಸ್ಥಾನವಾಗಿದ್ದ ರಾಜ್ಯವೀಗ ಭಾರತ ಸರ್ಕಾರದ ರಾಜ್ಯಗಳಲ್ಲೊಂದಾಗ ಬೇಕಾಯಿತು. ಮೈಸೂರಿಗೆ ಹೋಲಿಸಿದರೆ ಭಾರತದ ಉಳಿದ ಭಾಗಗಳ ಆರ್ಥಿಕ ಹಿನ್ನೆಲೆ ದುಃಸ್ಥಿತಿಯಲ್ಲಿದ್ದ, ರಾಜ್ಯವು ಇದುವರೆಗೆ ಉಳಿಸಿಕೊಂಡಿದ್ದ ಅಮೂಲ್ಯ ಸಂಪನ್ಮೂಲಗಳನ್ನೀಗ ಭಾರತ ಸರ್ಕಾರದಲ್ಲಿ ವಿಲೀನಗೊಳಿಸುವ ಜವಾಬ್ದಾರಿ ದಾಸಪ್ಪನವರದು. ಇದಕ್ಕಾಗಿ ರಾಜಭಕ್ತರಿಂದ ಕಟು ಟೀಕೆಗಳು ಎದುರಾದವು. ಆದರೂ ದೇಶದ ಏಳಿಗೆಗೆ ಪೂರಕವಾದ ಕ್ರಮ ಕೈಗೊಳ್ಳಲಾಯಿತು. ಮೈಸೂರು ರೈಲ್ವೆ, ಮೈಸೂರು ಅಂಚೆ, ಮುಂತಾದ ಹಣ ಸಂಪನ್ಮೂಲಗಳು ಕೇಂದ್ರ ಸರ್ಕಾರದ ವಶಕ್ಕೆ ಸೇರಿದಾಗ ಪರ–ವಿರೋಧದ ಮಾತುಗಳು ಕೇಳಿಬಂದವು.

ವಾರ್ಷಿಕ ಬಡ್ಜೆಟ್ ಮಂಡನೆ ದಾಸಪ್ಪನವರ ಮತ್ತೊಂದು ದೊಡ್ಡ ಜವಾಬ್ದಾರಿ. ಆರ್ಥಿಕ ತಜ್ಞರಲ್ಲದಿದ್ದರೂ, ಹಣಕಾಸಿನ ವಿಷಯದಲ್ಲಿ ಚತುರರಾಗಿದ್ದ ದಾಸಪ್ಪನವರು ರಾಜ್ಯದ ಖರ್ಚುವೆಚ್ಚಗಳ ಸಮತೋಲನ ಸಾಧಿಸುವ ಕಷ್ಟಕರ ಕೆಲಸಕ್ಕೆ ಮುಂದಾದರು. ಬಡ್ಜೆಟ್ ಎಂದರೆ ಕೇವಲ ತೆರಿಗೆಗಳಿಂದ ಬರುವ ಹಣವನ್ನು ವ್ಯಯ ಮಾಡುವುದಲ್ಲ. ಮುಂದಿನ ದಿನಗಳಿಗೆ ಬೇಕಾದ ಹಣದಮೂಲವನ್ನು ಸಂಗ್ರಹಿಸುವುದು, ಅದನ್ನು ಯೋಗ್ಯ ರೀತಿಯಲ್ಲಿ ಖರ್ಚು ಮಾಡಲು, ಜನರ ಅವಶ್ಯಕತೆಗಳನ್ನು, ಆಡಳಿತಾತ್ಮಕ ಖರ್ಚುಗಳನ್ನು ಪರೀಶೀಲಿಸುವ ಹೊಣೆಗಾರಿಕೆ. ಸ್ವಲ್ಪ ಎಚ್ಚರ ತಪ್ಪಿದರೂ ರಾಜ್ಯದ ಜನತೆಯನ್ನು ಸಂಕಷ್ಟಕ್ಕೀಡು ಮಾಡುವಂತಹ ಸಮಸ್ಯೆ. ಎಲ್ಲವನ್ನು ಅಳೆದು ಸುರಿದು, ಲೆಕ್ಕ ಹಾಕಿ, ಆಯ–ವ್ಯಯಗಳ ಮಧ್ಯೆ ಸಮತೋಲನ ಸಾಧಿಸುವ ಹೊಣೆಗಾರಿಕೆ. ಅದರಲ್ಲೂ ಮುಖ್ಯವಾಗಿ ಮಹಾರಾಜರ ಸರ್ಕಾರ ಅನುಸರಿಸುತ್ತಿದ್ದ ಪ್ರಜಾಕಲ್ಯಾಣ ಕಾರ್ಯಕ್ರಮಗಳ ಮುಂದುವರಿಕೆ, ಇವೆಲ್ಲಾ

ದಾಸಪ್ಪನವರು ರಾಜ್ಯದ ಹಣಕಾಸಿನ ಮಂತ್ರಿಯಾಗಿ ಎದುರಿಸಿದ ಸಮಸ್ಯೆಗಳು. ದಾಸಪ್ಪನವರು ರಾಜ್ಯದ ಬೆಳವಣಿಗೆಯ ಮುಂದಾಲೋಚನೆಯಿಂದ ಉತ್ತಮ ಕಾರ್ಯಕ್ರಮ ಗಳನ್ನು ರೂಪಿಸಿ. ಮೊಟ್ಟಮೊದಲಿಗೆ ಖೋತಾ ಬಡ್ಜೆಟ್ ಮುಂದಿಟ್ಟಾಗ ಟೀಕೆಗಳ ಪ್ರವಾಹವೇ ಎದುರಾಯಿತು. ಆದರೆ ರಾಜ್ಯದ ಮುಂದಿನ ದಿನಗಳ ಬೆಳವಣಿಗೆಯ ದೃಷ್ಟಿಯಿಂದ ಅವರು ಈ ನಿರ್ಧಾರ ಕೈಗೊಂಡು ಸರ್ಕಾರ ಹಾಕಿಕೊಂಡಿದ್ದ ಯೋಜನೆಗಳೆಲ್ಲಾ ಮುಂದುವರಿ ಯುವಂತೆ, ಬೆಳವಣಿಗೆ ಕುಂಠಿತಗೊಳ್ಳದಂತೆ ನೋಡಿಕೊಂಡರು.

ಮೈಸೂರು ಮಾದರಿ ಕೈಗಾರಿಕಾ ನೀತಿ:

ಬಾಲ್ಯದ ದಿನಗಳಿಂದಲು ಸರ್. ಎಮ್. ವಿ ಯವರ ಮಹತ್ತರ ಸಾಧನೆಗಳ ಬಗ್ಗೆ ಕುತೂಹಲವಿದ್ದ ದಾಸಪ್ಪನವರು, ವಿಶ್ವೇಶ್ವರಯ್ಯನವರ 'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬ ಘೋಷಣೆಯಲ್ಲಿ ನಂಬಿಕೆಯಿಟ್ಟಿದ್ದರು. ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಆಧುನಿಕ ದೇವಾಲಯಗಳೆಂಬುದ್ದನ್ನು ನಂಬಿದ್ದ ದಾಸಪ್ಪನವರು ಮೈಸೂರಿನ ಹಿಂದಿನ ಕೀರ್ತಿಗೆ ಭಂಗ ಬರದಂತೆ ತಮ್ಮ ಕೈಗಾರಿಕಾ ನೀತಿ ಇರಬೇಕೆಂದು ಆಶಿಸಿದ್ದರು. ರಾಜ್ಯದ ಮುಂದಿನ ದಶಕಗಳ ಪ್ರಗತಿಯ ಬಗ್ಗೆ ಯೋಚಿಸುತ್ತಿದ್ದ ದಾಸಪ್ಪನವರಿಗೆ ಇದು ಸಹಜವೆ ಹೌದು. ಮೈಸೂರಿನ ಕೀರ್ತಿಗೆ ಕಾರಣವಾದುದು ಅಲ್ಲಿನ ಕೈಗಾರಿಕೆಗಳು. 1900ರಿಂದಲೂ ಮಹಾರಾಜರ ಸರ್ಕಾರ ತಾನೇ ಮುಂದಾಗಿ ಹಲವಾರು ಕೈಗಾರಿಕೆಗಳನ್ನು ಪ್ರಾರಂಭಿಸಿತ್ತು. ಅಲ್ಲಲ್ಲಿ ಖಾಸಗಿ ಪ್ರಾಯೋಜಕತ್ವವನ್ನು ಪ್ರೋತ್ಸಾಹಿಸಿ, ಇಲ್ಲಿನ ಸಿಲ್ಕ್‌ಉದ್ಯಮ, ಗಂಧದ ಎಣ್ಣೆ, ಸೋಪು, ಗಾಜಿನ ತಯಾರಿಕೆ ಕಬ್ಬಿಣ ಮುಂತಾದ ಅದಿರುಗಳ ಬಳಕೆಯಿಂದ ಹಲವಾರು ಕೈಗಾರಿಕೆಗಳು ನಡೆಯುತ್ತಿದ್ದು. ಈಗ ಕೆಲವು ಉದ್ಯಮಗಳು ನಷ್ಟದಲ್ಲಿ ನಡೆಯುತ್ತಿದ್ದು ಮುಚ್ಚುವ ಸ್ಥಿತಿಯಲ್ಲಿದ್ದವು.

ಭದ್ರಾವತಿಯಲ್ಲಿ ಸರ್. ಎಮ್. ವಿ ಯವರ ಆಸಕ್ತಿಯ ಫಲವಾಗಿ ಸ್ಥಾಪಿಸಿದ್ದ ರಾಜ್ಯದ ಪ್ರತಿಷ್ಠಿತ ಉಕ್ಕಿನ ಕಾರ್ಖಾನೆ ನಷ್ಟದಲ್ಲಿತ್ತು. ಅದರ ಪುನಃಶ್ಚೇತನಕ್ಕೆ ಆದ್ಯತೆ ನೀಡಿದ ದಾಸಪ್ಪನವರು ಅದರ ಜವಾಬ್ದಾರಿ ಹೊರಲು ವಿಶ್ವೇಶ್ವರಯ್ಯನವರನ್ನೆ ವಿನಂತಿಸಿಕೊಂಡರು. ವಿಶ್ವೇಶ್ವರಯ್ಯನವರು ಸಂತೋಷದಿಂದ ಮತ್ತೊಮ್ಮೆ ಸ್ವತಂತ್ರ್ಯ ಭಾರತದ ಪ್ರಗತಿಗೆ ಕಾರಣವಾಗುವ ಕೈಗಾರಿಕೆಗಳ ಪ್ರಗತಿಯ ಕಾರ್ಯದಲ್ಲಿ ತೊಡಗಿಸಿಕೊಂಡರು. ಅವರಿಬ್ಬರ ಆಸಕ್ತಿಯ ಫಲವಾಗಿ ಭದ್ರಾವತಿಯ ಉಕ್ಕಿನ ಕೈಗಾರಿಕೆ ಲಾಭ ಗಳಿಸಲಾರಂಬಿಸಿತು. ಅಂತೆಯೇ ಉಳಿದ ಕೈಗಾರಿಕೆಗಳಿಗೂ ಕಾಯಕಲ್ಪ ಮಾಡಲಾಯಿತು. ರಾಜ್ಯದ ಕೈಗಾರಿಕೆಗಳ ಅಭಿವೃದ್ಧಿ ಎಂದೂ ಕುಂದ ಬಾರದೆಂಬುದು ಅವರ ಅಭಿಪ್ರಾಯ. ಕೈಗಾರಿಕೆಗಳ ಬೆಳವಣಿಗೆಯ ಐತಿಹಾಸಿಕ

ಹಿನ್ನೆಲೆಯಿದ್ದ ರಾಜ್ಯದಲ್ಲಿಗ ಮತ್ತಷ್ಟು ಉತ್ತೇಜನ ನೀಡುವುದಲ್ಲದೆ, ಇಲ್ಲಿ ದೊರಕುವ ಕಬ್ಬಿಣ ಮುಂತಾದ ಅದಿರುಗಳ ಸರಿಯಾದ ಬಳಕೆ, ಸಂಪನ್ಮೂಲಗಳ ಕ್ರೂಡೀಕರಣ, ನಿರುದ್ಯೋಗ ನಿವಾರಣೆ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಕೈಗಾರಿಕೀಕರಣವೇ ಮದ್ದೆಂದು ದಾಸಪ್ಪ ಭಾವಿಸಿದ್ದರು.

ಮೊದಲಿನಿಂದಲೂ ಪ್ರಗತಿಯ ಪಕ್ಷಪಾತಿಯಾಗಿದ್ದ ದಾಸಪ್ಪನವರು ಈಗ ಮೈಸೂರ್ ರಾಜ್ಯ ಬದಲಾದಂತಹ ಸ್ಥಿತಿಯಲ್ಲಿ, ಮುಂದಿನ ದಶಕಗಳ ಬೆಳವಣಿಗೆಗೆ ತಕ್ಕಂತೆ ತನ್ನ ಕೈಗಾರಿಕಾ ನೀತಿಯನ್ನು ಹೊಂದಿರಬೇಕೆಂದು ನಿರ್ಧರಿಸಿ ಅದಕ್ಕಾಗಿ ಯೋಜಿತ ರೀತಿಯ ಪ್ಲಾನ್ ಸಿದ್ಧಪಡಿಸಿದರು. ಸರ್ ಎಮ್ ವಿಶ್ವೇಶ್ವರಯ್ಯವನರ ಸಹಾಯದಿಂದ ಆ ಯೋಜನೆಗಳ ಆರಂಭಕ್ಕೆ ಸೂಕ್ತ ಕ್ರಮಕೈಗೊಂಡರು. ಭಾರತ ಸರ್ಕಾರ ಪ್ರಧಾನಿ ಪಂಡಿತ್ ನೆಹರೂರವರ ನೇತೃತ್ವದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ ಮೊದಲೇ ದಾಸಪ್ಪನವರು ಮೈಸೂರಿನಲ್ಲಿ ಅಂತಹ ವಾರ್ಷಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದದ್ದು, ಯೋಜಿತ ರೀತಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಆಸ್ಪದ ಮಾಡಿಕೊಟ್ಟದ್ದು ಅವರ ಪ್ರಮುಖ ಸಾಧನೆ.

ಈ ವಾರ್ಷಿಕ ಯೋಜನೆಯಂತೆ ವರ್ಷಕ್ಕಿಷ್ಟು ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವ 'ಮಾಸ್ಟರ್ ಪ್ಲಾನ್' ಸಿದ್ಧವಾಯಿತು. ಕೆಲ ಕೈಗಾರಿಕೆಗಳನ್ನು ಸರ್ಕಾರದ ವಶದಲ್ಲಿಟ್ಟುಕೊಂಡರೆ ಕೆಲವು ಖಾಸಗಿ ಒಡೆತನಕ್ಕೆ ಬಿಟ್ಟುಕೊಟ್ಟು, ಮತ್ತೆ ಕೆಲವು ಉದ್ಯಮಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆ ಮುಂದೆ ಬರದಿದ್ದಾಗ ಅವುಗಳನ್ನು ಸರ್ಕಾರ ಮತ್ತು ಖಾಸಗಿಯವರ ಜಂಟಿ ಒಡೆತನದಲ್ಲಿ ಸ್ಥಾಪಿಸುವ ಯೋಜನೆ ಇದು. ಖಾಸಗಿಯವರಿಗೆ ಕೈಗಾರಿಕೆಗಳ ಸ್ಥಾಪನೆಗಾಗಿ ಅನುಕೂಲಗಳನ್ನು, ಪ್ರೋತ್ಸಾಹಧನವನ್ನು ನೀಡಲಾಯಿತು. ಈ ಯೋಜನೆಯ ಅನುಷ್ಠಾನಕ್ಕೆಂದು ರಾಜ್ಯ ಸರ್ಕಾರದ ಕಾಪು ನಿಧಿಯಿಂದ ಹಣ ಖರ್ಚುಮಾಡಲಾಯಿತು. ದಾಸಪ್ಪನವರ ಈ ದಿಟ್ಟ ನಿಲುವಿನಿಂದ ಮೈಸೂರಿನ ಕೈಗಾರಿಕಾ ಬೆಳವಣಿಗೆ ನಾಗಾಲೋಟದಿಂದ ಮುಂದುವರೆದು, ಮೈಸೂರಿಗೆ ಅಭಿವೃದ್ಧಿ ಹೊಂದಿದ ರಾಜ್ಯವೆಂಬ ಕೀರ್ತಿಗೆ ಚ್ಯುತಿಬರದಂತೆ, ರಾಜ್ಯದ ಬೆಳವಣಿಗೆ ಎಂತಹ ಸ್ಥಿತಿಯಲ್ಲೂ ಮುಂದುವರೆಯುವಂತೆ ನೋಡಿಕೊಂಡವರು ನಮ್ಮ ದಾಸಪ್ಪನವರು.

ದೊಡ್ಡ ಕೈಗಾರಿಕೆಗಳ ಉತ್ಪನ್ನವನ್ನು ಹೆಚ್ಚಿಸಲು ನೆರವಾಗುವಂತೆ ಬೆಂಗಳೂರಿನಲ್ಲಿ ಅನೇಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರಿಂದ. ಐ.ಟಿ.ಐ, ಎಚ್.ಎಮ್. ಟಿ ಮುಂತಾದ ಕೈಗಾರಿಕೆಗಳಿಗೆ ಬಿಡಿ ಭಾಗಗಳನ್ನು ತಯಾರಿಸುವ ಗೃಹ ಕೈಗಾರಿಕೆಗಳು, ಸ್ಥಾಪಿಸಲ್ಪಟ್ಟವು. ಅವುಗಳ ತಯಾರಿಕೆಯಲ್ಲಿ

ತೊಡಗುವಂತೆ ಬಡ ಹೆಣ್ಣುಮಕ್ಕಳಿಗೆ ತರಬೇತಿ ನೀಡಲು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತ್ತು.

ರಾಜ್ಯವೂ ಭಾರತ ಸರ್ಕಾರದ ಭಾಗವಾಗಿ ವಿಲೀನಗೊಳ್ಳುವಾಗ ಇಲ್ಲಿನ ಪ್ರತಿಷ್ಠಿತ ಕೆಲವು ಉದ್ಯಮಗಳು, ಪೋಸ್ಟ್, ರೈಲ್ವೆ ಮುಂತಾದವು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಸೇರಿದವು. ಆದರೆ ದಾಸಪ್ಪನವರು ಆ ನಷ್ಟವನ್ನು ತುಂಬಿಕೊಳ್ಳಲು ಬೆಂಗಳೂರಿನಲ್ಲಿ ಕೇಂದ್ರದ ದೊಡ್ಡ ಉದ್ಯಮಗಳು ಸ್ಥಾಪನೆಗೆ ಅವಕಾಶ ಮಾಡಿಕೊಟ್ಟರು. ಸ್ವತಂತ್ರ ಭಾರತದ ಪ್ರತಿಷ್ಠಿತ ಎಚ್. ಎ. ಎಲ್. ಇಂಡಿಯನ್ ಟೆಲಿಫೋನ್ ಇಂಡ್‌ಸ್ಟ್ರಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಲು ಕಾರಣಕರ್ತರಾದರು. ಕೇಂದ್ರ ಈ ಕೈಗಾರಿಕೆಗಳ ಸ್ಥಾಪನೆಯ ಬಗ್ಗೆ ಮೀನಾಮೇಷ ವೆಣಿಸುತ್ತಿದ್ದಾಗ ದಾಸಪ್ಪನವರು ಪ್ರಧಾನಿ ನೆಹರೂರವರನ್ನು ಸಂಪರ್ಕಿಸಿ ಅವೆರಡೂ ಬೆಂಗಳೂರಿನಲ್ಲಿ ಸ್ಥಾಪನೆಯಾದರೆ ರಾಜ್ಯವು ಕೆಲಮಟ್ಟಿನ ಬಂಡವಾಳ, ಭೂಮಿ ಮತ್ತಿತರ ಸೌಕರ್ಯಗಳನ್ನು ನೀಡುವುದಾಗಿ ಭರವಸೆ ನೀಡಿ ಬೆಂಗಳೂರು ಹಲವು ದೊಡ್ಡ ಕೈಗಾರಿಕೆಗಳ ಕೇಂದ್ರವಾಗಲು ಶ್ರಮಿಸಿದರು. ಅದರಿಂದ ಮೈಸೂರಿನ ಕೀರ್ತಿ ಹೆಚ್ಚಿದ್ದಲ್ಲದೆ, ಇಲ್ಲಿನ ಪ್ರತಿಭಾವಂತ ಯುವಕರನೇಕರಿಗೆ ಕೇಂದ್ರ ಸರ್ಕಾರದ ನೌಕರಿ ದೊರೆಯಿತು.

ಗ್ರಾಮಾಂತರಗಳ ಕೈಗಾರಿಕೀಕರಣ:

ದಾಸಪ್ಪನವರು ದೊಡ್ಡ ಕೈಗಾರಿಕೆಗಳ ಪಕ್ಷಪಾತಿ ಎನಿಸಿದರೂ ಅವರ ಅಂತರಾಳದಲ್ಲಿನ ಆದ್ಯತೆ, ಸಣ್ಣ ಕೈಗಾರಿಕೆ ಮತ್ತು ಗ್ರಾಮ ಕೈಗಾರಿಕೆ. ಮಹಾತ್ಮರ ಅನುಯಾಯಿಯಾಗಿದ್ದ ದಾಸಪ್ಪ ತೋರಿಕೆಯ ಗಾಂಧಿವಾದಿಯಾಗಿರದೆ, ತಾವು ಅಧಿಕಾರ ಹಿಡಿದಿದ್ದು ಗಾಂಧಿವಾದದ ಪರಿಪಾಲನೆಗೆ ಎಂಬುದನ್ನು ಸಾಬೀತು ಮಾಡಿದರು. ಅದಕ್ಕಾಗಿ ಮತ್ತೊಮ್ಮೆ ಸರ್. ಎಮ್.ವಿಶ್ವೇಶ್ವರಯ್ಯನವರ ಮಾರ್ಗದರ್ಶನ ಪಡೆದು ಗ್ರಾಮಕೈಗಾರಿಕೆಗಳ ಕರಡು ಪ್ರತಿ ಸಿದ್ಧಗೊಳಿಸಿದರು.

ದಾಸಪ್ಪನವರು ಸಣ್ಣ, ಹಾಗೂ ಗೃಹ ಕೈಗಾರಿಕೆಗಳನ್ನು ಗ್ರಾಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಇದ್ದ ಪ್ರಮುಖ ಅಂಶ, ಅವು ನಿರುದ್ಯೋಗವನ್ನು ನಿವಾರಿಸಿ, ಸಣ್ಣ ಪುಟ್ಟ ನಗರ, ಗ್ರಾಮಗಳನ್ನು ಬಿಟ್ಟು ದೊಡ್ಡ ನಗರಗಳ ಕಡೆ ಧಾವಿಸುತ್ತಿರುವವರನ್ನು ತಡೆಯುವದು. ಹಳ್ಳಿಗಳನ್ನು ತೊರೆದು ಕೆಲಸಕ್ಕಾಗಿ ನಗರಗಳಿಗೆ ಬರುವದರಿಂದ ನಗರಗಳ ನಾಗರೀಕ ಸೌಕರ್ಯಗಳ, ವಸತಿ ಸೌಕರ್ಯದ ಕೊರತೆ ಉಂಟಾಗುವುದಲ್ಲದೆ, ಅನವಶ್ಯಕ ಜನಜಂಗುಳಿಯಿಂದ ಕಾನೂನು ಪಾಲನೆ, ಶಾಂತಿ ವ್ಯವಸ್ಥೆ ಹದಗೆಡುವದು. ಈ ಸಮಸ್ಯೆಗಳನ್ನು ಪರಿಹರಿಸಿಲು ದಾಸಪ್ಪನವರು ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಅವಲಂಬಿಸಿ, ಗ್ರಾಮಗಳು ತಮಗೆ ಬೇಕಿದ್ದ ವಸ್ತುಗಳನ್ನು ತಾವೇ

ತಯಾರಿಸಿಕೊಳ್ಳುತ್ತಾ, ಅಲ್ಲಿ ದೊರೆಯುವ ಸಂಪನ್ಮೂಲ ಗಳಿಂದಲೇ ಸಣ್ಣಪುಟ್ಟ ಕೈಗಾರಿಕೆಗಳನ್ನು ಹೊಂದಿದ್ದರೆ, ಅವರುಗಳು ನಗರಗಳಿಗೆ ವಲಸೆ ಬರುವುದನ್ನು ತಡೆಯಬಹುದಿತ್ತು.

ಇಲ್ಲಿಯೂ ಅವರ ನೆರವಿಗೆ ಬಂದವರು ಸರ್. ಎಮ್. ವಿಶ್ವೇಶ್ವರಯ್ಯನವರು. ದಾಸಪ್ಪನವರು ತಮ್ಮ ಕನಸಿನ ಯೋಜನೆಗೆ ಮೂರ್ತಸ್ವರೂಪ ನೀಡಲು ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಅಧ್ಯಯನ ಸಮಿತಿಯೊಂದನ್ನು ನೇಮಿಸಿದರು. ಸರ್.ಎಮ್.ವಿ ಯವರು ಸಲ್ಲಿಸಿದ ವರದಿಯಂತೆ ಕೆಲವು ಉದ್ಯಮಗಳನ್ನು ಗ್ರಾಮ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳೆಂದು ವಿಂಗಡಿಸಿ, ಅವುಗಳ ಸ್ಥಾಪನೆಗೆ ಸರ್ಕಾರ ಸಾರ್ವಜನಿಕರಿಗೆ ಧನ ಸಹಾಯ, ತರಬೇತಿ ನೀಡುವದು. ಸಣ್ಣ ಮೊತ್ತದ ಬಂಡವಾಳ, ಉದ್ಯಮಿಯ ಕೌಶಲ್ಯ, ಅವನ ಕುಟುಂಬದ ಹಾಗೂ ಕೆಲ ಸಹಾಯಕರೊಂದಿಗೆ ತಯಾರು ಮಾಡಬಹುದಾದ ವಸ್ತುಗಳನ್ನು ಗುರುತಿಸಲಾಯಿತು, ಚಾಪೆ ಹೆಣೆಯುವಿಕೆ, ಬಿದಿರಿನ ವಸ್ತುಗಳ ತಯಾರಿಕೆ, ನೇಯ್ಗೆ, ಕುಂಬಾರಿಕೆ, ಲೋಹಗಾರಿಕೆ, ಮರಗೆಲಸದ ವಸ್ತುಗಳ (ನೇಗಿಲು, ಮನೆಯ ಚೌಕಟ್ಟು, ಬಾಗಿಲು, ಮುಂತಾದವುಗಳು), ಗಂಧದ ಕಡ್ಡಿ, ಕಾಗದ, ಸಾಬೂನು ತಯಾರಿಕೆಯನ್ನು ಸಣ್ಣ ಮಟ್ಟದ ಉದ್ಯಮಗಳೆಂದು ವಿಂಗಡಿಸಿ, ಕುಶಲಕರ್ಮಿಗಳಿಗೆ ಬೇಕಿದ್ದ ಕಚ್ಚಾವಸ್ತುಗಳ ಕೊಳ್ಳುವಿಕೆಗೆ ಬ್ಯಾಂಕಗಳು ಸಾಲ ನೀಡುವಂತೆ ಮಾಡಲಾಯಿತು.

ಈ ಯೋಜನೆ ಎರಡು ಪ್ರಮುಖ ಉದ್ದೇಶಗಳನ್ನ ಹೊಂದಿದ್ದು; ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಈಡೇರಿಸುವದು, ಮತ್ತೊಂದು, ಗ್ರಾಮಾಂತರಗಳಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿ ಅವರಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸುವದು. ಸರ್ಕಾರದ ಈ ಪ್ರಯತ್ನಗಳು ಫಲ ನೀಡಿ ರಾಜ್ಯದಲ್ಲಿ ನೂರಾರು ಸಣ್ಣ ಕೈಗಾರಿಕೆಗಳು, ಗುಡಿಕೈಗಾರಿಕೆಗಳು ಸ್ಥಾಪನೆಯಾದವು. ಆದರೆ ಇವರ ಈ ಪ್ರಯತ್ನಗಳಿಗೆ ಟೀಕೆ ಇಲ್ಲದಿರಲಿಲ್ಲ.

ಈ ಪ್ರಮುಖ ಇಲಾಖೆಗಳಲ್ಲದೆ, ದಾಸಪ್ಪನವರು ಅಂಚೆ ಮುಂತಾದ ಚಿಕ್ಕ ಇಲಾಖೆಗಳನ್ನು ವಹಿಸಿಕೊಂಡದ್ದರಿಂದ ಅವುಗಳ ನಿರ್ವಹಣೆಗೂ ಗಮನ ಹರಿಸಿದರು. ಮುಖ್ಯಮಂತ್ರಿಯವರ ಅನುಪಸ್ಥಿತಿಯಲ್ಲಿ, ರಾಜ್ಯದ ವ್ಯವಹಾರಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಅವರ ಐದು ವರ್ಷಗಳ ಆಡಳಿತ ಜನತೆಯ ಅಪೇಕ್ಷೆಯನ್ನು, ತಾವು ನೀಡಿದ್ದ ಆಶ್ವಾಸನೆಯನ್ನು ಪೂರೈಸಲು ಬಳಸಿಕೊಂಡ ಧೀಮಂತ ನಾಯಕ ದಾಸಪ್ಪನವರ ಅಧಿಕಾರ ರಾಜ್ಯದಲ್ಲಿ ಬದಲಾವಣೆಯ ಹೊಸ ಅಲೆಯನ್ನು ಮೂಡಿಸಲು ಕಾರಣ.

ನಗರಾಭಿವೃದ್ಧಿ ಇಲಾಖೆಯ ಮುಖ್ಯಸ್ಥರಾಗಿ ದಾಸಪ್ಪನವರು, ಬೆಂಗಳೂರಿನ ಜಯನಗರ ಮುಂತಾದ ಸುಸಜ್ಜಿತ ಬಡಾವಣೆಗಳನ್ನು ಸ್ಥಾಪಿಸಿದರು. ಜಯನಗರ ಬಡಾವಣೆ ಅವರ ಅಚ್ಚುಮೆಚ್ಚಿನ ಯೋಜನೆ, ವಿಶಾಲವಾದ ಈ ಬಡಾವಣೆ ಏಷ್ಯಾದ ದೊಡ್ಡ ಆಧುನಿಕ ಬಡಾವಣೆ ಎಂಬ ಕೀರ್ತಿ ಪಡೆಯುವಂತೆ ಮಾಡಿದರು. ಉಳಿದೆಡೆಯೂ ನಗರಗಳು ಯೋಜಿತವಾದ ರೀತಿಯಲ್ಲಿ ಬೆಳೆಯಲು ಮಾಸ್ಟರ್ ಪ್ಲಾನ್ ತಯಾರಾಯಿತು.

ಐದು ವರ್ಷಗಳ ರಾಜ್ಯದ ಸೇವೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ದಾಸಪ್ಪನವರು ತಮ್ಮ ವೈಯಕ್ತಿಕ ಬೆಳವಣಿಗೆಯನ್ನು ಕಡೆಗಣಿಸಿದರು. ಸದಾ ರಾಜ್ಯದ ಕೆಲಸದಲ್ಲಿ ತೊಡಗಿದ್ದು, ಒಂದಲ್ಲ ಒಂದು ಮಹತ್ವದ ಯೋಜನೆಯನ್ನು ಕೈಗೆತ್ತಿಕೊಂಡು ರಾಜ್ಯದ ಸರ್ವಾಂಗೀಣ ಬೆಳವಣಿಗೆಗೆ ದುಡಿದ ದಾಸಪ್ಪ, ರಾಜ್ಯದ ನೆಚ್ಚಿನ ನಾಯಕ. ಆದರೂ ರಾಜಕೀಯವೆಂಬುದು ಅನಿಶ್ಚಿತತೆಯ ಗೂಡು. ಇಲ್ಲಿಂದ ಏನೂ ಹೊರಬರುತ್ತದೆಂದು ಹೇಳಲಾಗುವುದಿಲ್ಲ. ಐದು ವರ್ಷಗಳ ಆಡಳಿತದಲ್ಲಿ ಅಂದಿನ ಮಂತ್ರಿಮಂಡಲದ ಹೆಚ್ಚು ಪ್ರವಾಸ ಕೈಗೊಂಡ ಕೀರ್ತಿಯೂ ದಾಸಪ್ಪನವರಿಗೆ ಸಲ್ಲುತ್ತದೆ. ತಮ್ಮ ಅಧಿಕಾರಾವಧಿಯಲ್ಲಿ ತಾರತಮ್ಯ ವಿಲ್ಲದೆ ರಾಜ್ಯದ ಎಲ್ಲಾ ಭಾಗಗಳನ್ನು ಸಂದರ್ಶಿಸಿ. ಜನರ ಕಷ್ಟಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿದ್ದ ದಾಸಪ್ಪ ತಮಗಾಗಿ ಯಾವುದೇ ಕ್ಷೇತ್ರವನ್ನು ಗುರುತಿಸಿಕೊಂಡಿರಲ್ಲಿಲ್ಲ. ರಾಜ್ಯದ ಎಲ್ಲಾ ಭಾಗಗಳನ್ನು ಒಂದಾಗಿ ಕಂಡ ದಾಸಪ್ಪನವರಿಗೆ 1952ರ ಚುನಾವಣೆ ದೊಡ್ಡ ಸವಾಲಾಗಬಹುದೆಂಬ ಅನಿಸಿಕೆ ಇರಲ್ಲಿಲ್ಲ. ದೇಶದ ಪ್ರಥಮ ಪಾರ್ಲಿಮೆಂಟ್‌ಗೆ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ದಾಸಪ್ಪನವರು ಲೋಕಸಭೆಗೆ ಸ್ಪರ್ಧಿಸಲು ನಿರ್ಧರಿಸಿ, ಮೈಸೂರು ಲೋಕಸಭಾ ಕ್ಷೇತ್ರವನ್ನು ಆಯ್ದುಕೊಂಡರು. ಆದರೆ ಅಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿ ಗುರುಪಾದಸ್ವಾಮಿಯವರು ದಾಸಪ್ಪನವರನ್ನು ಸೋಲಿಸಿದರು. ಅದು ದಾಸಪ್ಪನವರ ಮೊದಲ ಸೋಲು.

ಈ ಅವಧಿಯ ಮತ್ತೊಂದು ಸಂದಿಗ್ಧ ಬೆಳವಣಿಗೆ ಮೈಸೂರು ರಾಜ್ಯದೊಂದಿಗೆ ಉಳಿದ ಕನ್ನಡ ಭಾಷಾ ಪ್ರಾಂತಗಳ ವಿಲೀನಕ್ಕೆ ನಡೆದ ಚಳುವಳಿ. ಉತ್ತರದ ಭಾಗಗಳಲ್ಲಿ ನಡೆದ ವ್ಯಾಪಕ ಪ್ರಚಾರ, ಆಂದೋಲನ. ಅದರಂತೆ ಮುಂಬೈ ಪ್ರಾಂತ, ಮದ್ರಾಸ್ ಪ್ರಾಂತ. ಹಾಗೂ ನಿಜಾಮನ ವಶದಲ್ಲಿದ್ದ ಕನ್ನಡ ಮಾತನಾಡುವ ಪ್ರಾಂತಗಳು ಮೈಸೂರು ರಾಜ್ಯದಲ್ಲಿ ಸೇರಿಕೊಳ್ಳಲು ನಿರ್ಧರಿಸಿದ್ದವು. ನೆಹರೂವರು ನೇಮಿಸಿದ್ದ ಭಾಷಾವಾರು ರಾಜ್ಯ ಪುನರ್ ವಿಂಗಡನ ಸಮಿತಿಯೂ ಇದೇ ಅಭಿಪ್ರಾಯಹೊಂದಿದ್ದರಿಂದ ಅದು ಕೈಗೂಡುವ ಕಾಲ ಸಮೀಪವಾದಂತೆ

ಅನಿರೀಕ್ಷಿತವಾಗಿ ಸಮಸ್ಯೆಗಳು ಎದುರಾದವು. ಇಲ್ಲಿನ ಕೆಲವರಿಗೆ ಅದು ಇಷ್ಟವಿರಲಿಲ್ಲ. ಏಕೆಂದರೆ ಈಗಾಗಲೆ ಎಲ್ಲಾ ವಿಷಯಗಳಲ್ಲೂ ಮುಂದುವರೆದಿದ್ದ ಮೈಸೂರಿನೊಂದಿಗೆ ಹಿಂದುಳಿದ ಭಾಗಗಳನ್ನು ಸೇರಿಸುವುದಾದರೆ ರಾಜ್ಯದ ಪ್ರಗತಿಯ ಹಿನ್ನಡೆಯಾಗುವುದೆಂಬ ಭಯ. ಕೆಲ ಒಕ್ಕಲಿಗ ನಾಯಕರು ಅದನ್ನು ವಿರೋಧಿಸಿ ಮೈಸೂರು, ಬೆಂಗಳೂರುಗಳಲ್ಲಿ ಪ್ರತಿಭಟನಾ ಸಭೆ ನಡೆಸಿದ್ದರು. ಮೈಸೂರಿನ ಎ ರಾಮಣ್ಣ, ಮತ್ತು ಯಶೋಧರಾ ದಾಸಪ್ಪ ಈ ಚಳುವಳಿಯ ಮುಂದಾಳತ್ವ ಹೊಂದಿದ್ದರೂ, ದಾಸಪ್ಪನವರು ಮಾತ್ರ ಮೊದಲಿನಿಂದಲು ಆ ಭಾಗಗಳು ಮೈಸೂರಿನಲ್ಲಿ ವಿಲೀನವಾಗುವುದನ್ನು ಸ್ವಾಗತಿಸುತ್ತಾ ಕನ್ನಡ ಭಾಷಾ ಪ್ರಾಂತಗಳ ಏಕೀಕರಣದ ಪರವಾಗಿದ್ದರು. ಮನೆಯಲ್ಲೆ ದಂಪತಿಗಳಲ್ಲಿ ಈ ವಿಷಯವಾಗಿ ಭಿನ್ನಾಭಿಪ್ರಾಯವಿದ್ದರೂ ದಾಸಪ್ಪನವರೆಂದು ತಮ್ಮ ಕೌಟುಂಬಿಕ ಸಂಬಂಧ ಕೆಡದಂತೆ ನೋಡಿಕೊಂಡದ್ದಲ್ಲದೆ, ಈ ಆದರ್ಶವಾದಿ ತಮ್ಮ ಪತ್ನಿಗೆ ಸಾಕಷ್ಟು ವಿಚಾರ ಸ್ವಾತಂತ್ರ್ಯವನ್ನು ನೀಡಿದ್ದರು.

ಸಂಸದೀಯ ಕಾರ್ಯದಲ್ಲಿ ದಾಸಪ್ಪ:

ಸೋಲಿನಿಂದ ದೃತಿಗೆಡದ ದಾಸಪ್ಪ 1952–53ರಲ್ಲಿ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಪಕ್ಷದ ಏಳಿಗೆಗಾಗಿ ದುಡಿದರು. 1953ರಲ್ಲಿ ರಾಜ್ಯದಿಂದ ಕೇಂದ್ರದ ರಾಜ್ಯಸಭೆಗೆ ಆಯ್ಕೆಯಾದರು. ರಾಜ್ಯ ಸಭೆಯ ಸದಸ್ಯತ್ವ ಅವರ ಸೇವೆಯ ಇನ್ನೊಂದು ಮುಖವನ್ನು ಪರಿಚಯಿಸಿತು,. ರಾಜ್ಯಸಭೆಯ ಸ್ಥಾನವೆಂದು ಅದನ್ನು ಅಲಕ್ಷಿಸಿ, ಸ್ವಂತಕ್ಕಾಗಿ ಚಿಂತಿಸುವ ಮನೋಭಾವವಿಲ್ಲದ ದಾಸಪ್ಪ; ಅಲ್ಲಿ ತಮ್ಮ ಸಂಸದೀಯಪಟುತ್ವವನ್ನು ದೇಶದ ಸೇವೆಗೆ ವಿನಿಯೋಗಿಸಿದರು. ರಾಜ್ಯಸಭೆ ದಾಸಪ್ಪನವರ ಸಂಸದೀಯ ಬೆಳವಣಿಗೆಯ ಬಗ್ಗೆ ಅವರಿಗಿದ್ದ ಅಪಾರ ಜ್ಞಾನದ ಸದ್ಬಳಕೆಗೆ ಮತ್ತೊಂದು ಅವಕಾಶ ನೀಡಿದ್ದಲ್ಲದೆ ಹಲವಾರು ಬಾರಿ ಅವರ ಪಾಲ್ಗೊಳ್ಳುವಿಕೆಯಿಂದ ಚರ್ಚೆಗೆ ಬರುತ್ತಿದ್ದ ವಿಷಯಗಳಲ್ಲಿ ಸೂಕ್ತ ಮಾರ್ಪಾಡುಗಳಿಗೆ ಕಾರಣರಾಗುತ್ತಿದ್ದದುಂಟು. 1927ರಿಂದ 1937ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಪ್ರಗತಿಪರ ರಾಜ್ಯದ ಪ್ರಗತಿಪರ ಶಾಸನಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ದಾಸಪ್ಪನವರಿಗೆ ಈಗ ದೇಶದ ಶಾಸನಗಳ ಅಮೂಲಾಗ್ರ ಪರಿಶೀಲನೆಯ ಅವಕಾಶ ದೊರೆತದ್ದು ದಾಸಪ್ಪನವರ ಹಾಗೂ ಅವರು ಕಾರ್ಯ ನಿರ್ವಹಿಸಿದ ಸಭೆಯ ಅದೃಷ್ಟವೆನ್ನಬಹುದು.

1927ರಿದ 1937ರ ವರೆಗೆ ಮೈಸೂರಿನಲ್ಲಾದ ಸಾಮಾಜಿಕ ಪರಿವರ್ತನೆಯನ್ನು ಬೆಂಬಲಿಸಿದ್ದ ಶಾಸನಗಳನ್ನು ರಚಿಸಿ ಇಡೀ ದೇಶಕ್ಕೆ ಮಾದರಿಯಾಗಿತ್ತು. ಅಂದು ಕೈಗೊಂಡ ಹಲವಾರು ಶಾಸನಗಳು ರಾಜ್ಯದಲ್ಲಿನ ಅಶಕ್ತರಿಗೆ, ಮಕ್ಕಳಿಗೆ ದಲಿತರಿಗೆ

ಹಕ್ಕುಗಳನ್ನು ನೀಡಿದ್ದರಿಂದ ಅವರು ರಾಜ್ಯದ ಸರ್ವಾಂಗೀಣ ಬೆಳವಣಿಗೆಯಲ್ಲಿ ಪಾಲುದಾರರಾಗಲು ಸಾಧ್ಯವಾಗಿತ್ತು. ಮೈಸೂರು ಶಾಸನ ಸಭೆಯಲ್ಲಿ ನಡೆದ ಚರ್ಚೆಗಳಲ್ಲಿ ದಾಸಪ್ಪನವರದು ಸಿಂಹಪಾಲು. ವೈಯಕ್ತಿಕವಾಗಿ ದುರ್ಬಲರ, ಅಶಕ್ತ ಮಹಿಳೆಯರ, ಹಿಂದುಳಿದವರ ಏಳಿಗೆಗೆ ತಮ್ಮನ್ನು ತೊಡಗಿಸಿಕೊಂಡಿದ್ದ ದಾಸಪ್ಪ, ತಮ್ಮ ವಕೀಲಿವೃತ್ತಿಯ ಪರಿಣತಿ, ಶಾಸನ ರಚನಾಕೌಶಲ್ಯಗಳನ್ನು ಸಂಪೂರ್ಣವಾಗಿ ಬಳಸಿಕೊಂಡರು. ಶಾಸನಗಳ ಕರಡುಪ್ರತಿ ಸಭೆಗಳಲ್ಲಿ ಚರ್ಚೆಗೆ ಬಂದಾಗ ಅದರ ರೂಪುರೇಷೆಗಳನ್ನು, ಸಾಧಕ–ಬಾಧಕಗಳನ್ನು ತಮ್ಮ ತೀಕ್ಷ್ಣಮತಿ ಯಿಂದ ಒರೆಹಚ್ಚಿ ಅಲ್ಲಲ್ಲಿ ತಿದ್ದುಪಡಿ ಸೂಚಿಸಿ ಅವು ಪರಿಪಕ್ವವಾಗಲು ತಮ್ಮ ಕೊಡುಗೆಯನ್ನು ನೀಡಿದ್ದರು. ಈ ಅವಧಿಯಲ್ಲಿ ಈ ಸಭೆಗಳು ಕೈಗೊಂಡ ಮಹಿಳಾ ಪರ ಶಾಸನಗಳು ಮಹಿಳೆಯರ ಹಕ್ಕುಗಳನ್ನು ಚರ್ಚಿಸಿ, ದೀರ್ಘ ಪರಿಣಾಮ ಬೀರಬಲ್ಲ, 'ಹಿಂದೂ ಮ್ಯಾರಿಯೇಜ್ ಅಂಡ್ ಡೈವೋರ್ಸ್ ಲಾ', 'ಹಿಂದೂ ವಿಮೆನ್ ಸಕ್ಸೆಶನ್ ಅಮೆಂಡಮೆಂಟ್ ಲಾ' ದ ಮೂಲಕ ಅವರ ಸ್ಥಿತಿಯಲ್ಲಿ ಅಮೂಲಾಗ್ರ ಬದಲಾವಣೆ ತರಬಲ್ಲ ಶಕ್ತವಾಗಿದ್ದವು. ಅವಿವಾಹಿತ ಮಹಿಳೆಯರಿಗೆ, ಅನಾಥ ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ನೀಡಿದ್ದಲ್ಲದೆ, ವಿಧವೆಯರಿಗೆ, ವಿಚ್ಛೇದಿತ ಮಹಿಳೆಯರಿಗೆ ಗಂಡನ ಆಸ್ತಿಯಲ್ಲಿ ಪಾಲಿರುವಂತೆ ಶಾಸನಗಳ ಮೂಲಕ ಅವರ ಸ್ಥಾನಮಾನಗಳಿಗೆ ಮಾನ್ಯತೆ ದೊರೆಯುವಂತೆ ಮಾಡಲಾಗಿತ್ತು.

ದಾಸಪ್ಪನವರು ತಮ್ಮ ವಕೀಲಿ ವೃತ್ತಿಯ ಅನುಭವಗಳಲ್ಲದೆ, ಹಿಂದೂಧರ್ಮ ಹಾಗೂ ನ್ಯಾಯಶಾಸ್ತ್ರಗಳ ಉಲ್ಲೇಖದೊಂದಿಗೆ ಮಹಿಳೆಯರ ಹಕ್ಕುಗಳ ಪರವಾಗಿ ಹೋರಾಡಿದ್ದರು. ಅವರ ಪ್ರಕಾರ ಸಾಮಾಜಿಕ ಬದಲಾವಣೆಯಲ್ಲಿ ಸರ್ಕಾರದ ಮಾರ್ಗದರ್ಶನ ವಿರಬೇಕೆಂಬುದು. ಅದು ಸತ್ಯವೂ ಹೌದು!. ಶತಮಾನಗಳ ಕಾಲ ಸಮಾಜದ ಪರಿತ್ಯಕ್ತ ವರ್ಗಗಳು, ಶೋಷಣೆಗೊಳಗಾದ ವರ್ಗಗಳು. ಎಲ್ಲಾ ರೀತಿಯಲ್ಲೂ ದುರ್ಬಲವಾಗಿದ್ದ ಮಹಿಳಾ ವರ್ಗಗಳಿಗೆ ಕೇವಲ ಅನುಕಂಪ, ಸಮಾಜ ಸುಧಾರಣೆ, ಪರಿವರ್ತನೆಯಿಂದ ನ್ಯಾಯ ದೊರೆಯಲಾರದೆಂಬುದು; ಇದುವರೆಗೂ ನಡೆದ ಸಮಾಜ ಸುಧಾರಣ ಚಳುವಳಿಗಳ, ಸುಧಾರಕರ ಪ್ರಯತ್ನಗಳು ಸಾಕಷ್ಟು ಪರಿಣಾಮ ಬೀರಲಿಲ್ಲವೆಂಬುದನ್ನು ಗಮನಿಸಲಾಗಿದ್ದು, ಅಧಿಕಾರ ಯುಕ್ತವಾಗಿ ಶಾಸನಗಳನ್ನು ರೂಪಿಸದ ಹೊರತು ಈ ವರ್ಗಗಳಿಗೆ ನ್ಯಾಯ ದೊರೆಯಲಾರದೆಂಬುದು ದಾಸಪ್ಪನವರ ಅನುಭವ. ಅದಕ್ಕಾಗಿ ಸರ್ಕಾರದ ಪ್ರಯತ್ನಗಳಿಗೆ ಸಂಪೂರ್ಣ ಬೆಂಬಲ ನೀಡಿ ತಮ್ಮ ವಾಕ್ಚಾತುರ್ಯ, ಸಂಸದೀಯಪಟುತ್ವದಿಂದ ಹಿಂದೂ, ಇಸ್ಲಾಂ ಹಾಗೂ ಕ್ರೈಸ್ತಧರ್ಮ ಶಾಸ್ತ್ರಗಳು ಉಲ್ಲೇಖಿಸಿರುವದನ್ನು ತಮ್ಮ ಸಹೋದ್ಯೋಗಿ ಗಳಿಗೆ ಮನದಟ್ಟು ಮಾಡಿದರು.

ಅವರ ಭಾಷಣಗಳು ಆ ಶಾಸನಗಳ ರಚನೆಯನ್ನು ವಿರೋಧಿಸುತ್ತಿದ್ದವರ ಪ್ರಶ್ನೆಗಳಿಗೆ, ಸಂಶಯಗಳಿಗೆ ಸೂಕ್ತ ಉತ್ತರ ನೀಡಬಲ್ಲವಾಗಿದ್ದವು.

1954ರಲ್ಲಿ ರಾಜ್ಯಸಭೆ ಪಂಡಿತ್ ನೆಹರೂವರ ಸಮಾನತೆ ಯನ್ನಾಧರಿಸಿದ ಸೋಷ್ಯಲಿಸ್ಟ್ ಸಮಾಜ ನಿರ್ಮಾಣದ ಸಲುವಾಗಿ ಹಲವಾರು ಶಾಸನಗಳ ರಚನೆಯಲ್ಲಿ ತೊಡಗಿ, ದೇಶದ ಅಶಕ್ತ ವರ್ಗಗಳಿಗೆ, ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರೆಯುವಂತೆ ನೋಡಿಕೊಂಡರು. ದೇಶದಲ್ಲಿನ ಸಾಮಾಜಿಕ ಪರಿವರ್ತನೆಗೆ ಇದೊಂದು ಪರಿಪಕ್ವ ಕಾಲವಾಗಿತ್ತು. ಇಂತಹ ಶಾಸನಗಳನ್ನು ರಚಿಸಿ ಅಶಕ್ತರಿಗೆ ಬಲ ನೀಡುವದು ಸಾಮಾಜಿಕ ಹಾಗೂ ಅಧಿಕಾರಸ್ಥರ ಜವಾಬ್ದಾರಿಯೆಂಬುದು ದಾಸಪ್ಪನವರ ಅಭಿಮತ. ಪಂಡಿತ್ ನೆಹರೂರವರ ನಾಯಕತ್ವ ಈ ದಿಶೆಯಲ್ಲಿ ಮುಂದುವರೆದಿರುವ ರೀತಿ ಅವರಿಗೆ ಸಮಾಧಾನವಿತ್ತು.

1955ರಲ್ಲಿ ರಾಜ್ಯಸಭೆ ದಲಿತರ ಪರವಾಗಿ ಅಸ್ಪೃಶ್ಯತಾ ಆಚರಣೆಯನ್ನು ಅಪರಾಧವಾಗಿ ಘೋಷಿಸುವ ಶಾಸನ ತಂದಾಗ, ಶಾಸನವನ್ನು ಸ್ವಾಗತಿಸಿದ ದಾಸಪ್ಪ ದಲಿತರ ವಿರುದ್ಧ ಶತಮಾನಗಳಿಂದಲೂ ಆಚರಿಸಲಾಗುತ್ತಿದ್ದ ಈ ಘೋರ ಸಾಮಾಜಿಕ ಪದ್ಧತಿಯನ್ನು ತಡೆಗಟ್ಟಲು ಮಾಡಿದ ಈ ಶಾಸನ ಜಾರಿಗೆ ಬಂದದ್ದು ಭಾರತದ ಇತಿಹಾಸ ಮತ್ತು ನಮ್ಮ ಪಾರ್ಲಿಮೆಂಟನ ದಾಖಲೆಗಳಲ್ಲಿ ಇದೊಂದು ಮಹತ್ವದ ದಿನವಾಗುತ್ತದೆಂದರು.

ಪ್ರಸಿದ್ಧ 'ಶಾರದ ಆಕ್ಟಗಳು' ಚರ್ಚೆಯಾದಾಗ ದಾಸಪ್ಪನವರು ಶಾಸನ ರಚನೆಯ ತಮ್ಮ ಪರಿಣತಿ ಹಾಗೂ ತಮಗಿದ್ದ ಅಪಾರ ಅನುಭವದ ಮೂಲಕ ಪೂರ್ಣ ಮನಸ್ಸಿನಿಂದ ಪಾಲ್ಗೊಂಡರು. ರಾಜ್ಯಸಭೆಯಲ್ಲಿ ದಾಸಪ್ಪನವರ ನ್ಯಾಯವಿಧಾಯಕಗಳ ಜ್ಞಾನ ಪೂರ್ಣ ಉಪಯೋಗವಾಗಿ ಸಭೆಯಲ್ಲಿನ ಬಹುತೇಕರು ಅವರನ್ನು ತಮ್ಮ ಆದರ್ಶ ನಾಯಕನನ್ನಾಗಿಸಿಕೊಂಡರು.

ಶಾಸನಸಭೆಗಳಲ್ಲಿ ದಾಸಪ್ಪನವರ ಸಫಲತೆಗೆ ಕಾರಣ ಅವರ ಅಪಾರ ಕಾನೂನು ಜ್ಞಾನ, ಸಾಮಾಜಿಕವಾಗಿದ್ದ ನೈಜ ಕಳಕಳಿ. ಇವುಗಳು ಮಾತ್ರವಲ್ಲದೆ ದಾಸಪ್ಪನವರು ಎಂದೂ ಸಭೆಗಳ ಸದಸ್ಯತ್ವವನ್ನು ತೋರಿಕೆಗಾಗಿ, ಪ್ರತಿಷ್ಠೆಗಾಗಿ ಪರಿಗಣಿಸದೆ ಒಬ್ಬ ಸಾಮಾಜಿಕ ಪರಿವರ್ತನಕಾರನಿಗಿರಬೇಕಾದ ಕುತೂಹಲ, ಅವಕಾಶ ಸಿಂಧುತ್ವ ,ತತ್ವ ನಿಷ್ಠೆ, ವಿಷಯ ನಿಷ್ಠೆ, ನ್ಯಾಯ–ಅನ್ಯಾಯಗಳನ್ನು ಒರೆಹಚ್ಚುವ ತೀಕ್ಷ್ಣ ಬುದ್ಧಿವಂತಿಕೆಗಳು ಅವರನ್ನು ಉತ್ತಮ ನಾಯಕ ಹಾಗೂ ಖ್ಯಾತ ಸಂಸದೀಯ ಪಟುವಾಗಿಸಿದ್ದವು.

ದಾಸಪ್ಪನವರು ಈ ಸಭೆಗಳು ಜನರು ತಮಗೆ ನೀಡಿದ ಅಮೂಲ್ಯ ಅವಕಾಶವೆಂದು ತಿಳಿದು ಅದರ ಸಮಯವನ್ನು ವ್ಯರ್ಥಗೊಳಿಸ ಬಾರದೆಂದು ನಂಬಿದ್ದರು. ಅವರ ಮಗ ತುಲಸೀದಾಸ್ (ಇಂದು ನಮ್ಮೊಂದಿಗಿಲ್ಲ) ನನಗೆ ತಿಳಿಸಿದಂತೆ ಅವರು ಈ ಸಭೆಗಳಲ್ಲಿ ಭಾಗವಹಿಸಲು ವಹಿಸುತ್ತಿದ್ದ ಆಸಕ್ತಿಯನ್ನು ವಿವರಿಸುತ್ತಾ, ತಮ್ಮ ತಂದೆಯವರು ಪ್ರತಿಯೊಂದು ಶಾಸನ ಸಭೆಯ ಅವಧಿಯಲ್ಲೂ ತಮಗಾಗಿ ಹೊಸ ಸೂಟ್‌ಗಳನ್ನು ಮುಂಬೈಯಿಂದ ತರಿಸಿಕೊಳ್ಳುತ್ತಿದ್ದದಲ್ಲದೆ, ಜನರಿಂದ, ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಯಾವುದೇ ಸಮಸ್ಯೆಯನ್ನು ಪೂರ್ಣ ಪರಿಶೀಲನೆಯಿಲ್ಲದೆ, ಮಾಹಿತಿ ಇಲ್ಲದೆ ಸಭೆಯ ಮುಂದಿಡುತ್ತಿರಲಿಲ್ಲ. ತಮ್ಮ ವಿಷಯಕ್ಕೆ, ತತ್ವಕ್ಕೆ ಬದ್ಧರಾಗಿರುತ್ತಿದ್ದರು. ಅನುಷ್ಠಾನದಲ್ಲಿ ಸರ್ಕಾರವೇನಾದರು ವಿಫಲವಾಗಿದ್ದಲ್ಲಿ ಅದನ್ನು ತಮ್ಮ ಕಟು ಟೀಕೆಗಳಿಂದ, ಹಾಸ್ಯಭರಿತ ಮಾತುಗಳಿಂದ ಎಚ್ಚರಿಸುತ್ತಿದ್ದರು.

ಗಾಂಧಿವಾದದೊಂದಿಗೆ ಗುರುತಿಸಿಕೊಂಡಿದ್ದ, ತತ್ವನಿಷ್ಠ, ಜನಪ್ರಿಯ, ವರ್ಚಸ್ವಿ ನಾಯಕನಿಗೆ ಮತ್ತೊಮ್ಮೆ ಅಧಿಕಾರದ ಅವಕಾಶ ದೊರಕಿತು. 1957ರ ಚುನಾವಣೆಯಲ್ಲಿ ದಾಸಪ್ಪನವರು ಬೆಂಗಳೂರಿನಿಂದ ಲೋಕಸಭೆಗೆ ಆಯ್ಕೆಯಾದರು. ಪ್ರಧಾನಿ ಪಂಡಿತ್ ನೆಹರೂರವರು ದಾಸಪ್ಪನವರ ಸೇವೆಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಅವರನ್ನು ಕ್ಯಾಬಿನೆಟ್ ಮಟ್ಟದ ಎಸ್ಟಿಮೇಟ್ ಸಮಿತಿಯ ಚೇರಮೆನ್‌ರಾಗಿ ನೇಮಿಸಿ, ಸರ್ಕಾರದ ಎಲ್ಲಾ ಇಲಾಖೆಗಳ ಹಣ ಖರ್ಚುವೆಚ್ಚಗಳ ಪರಿಶೀಲನಾ ಅಧಿಕಾರ ನೀಡಿದರು. ಈ ಅವಕಾಶ ದಾಸಪ್ಪನವರ ಬುದ್ಧಿಮತ್ತೆಗೆ ಹಾಗೂ ಅವರ ಸೌಹಾರ್ದ ನಡವಳಿಕೆಗೆ ಪೂರಕವಾಗಿತ್ತು. ಅವರು ಎಲ್ಲಾ ಇಲಾಖೆಗಳ ಮಂತ್ರಿಗಳೊಂದಿಗೆ ನಡೆದುಕೊಂಡ ರೀತಿ ಮೆಚ್ಚುವಂತದ್ದು.

1962ರ ಚುನಾವಣೆಯಲ್ಲಿ ದಾಸಪ್ಪನವರು ಮತ್ತೊಮ್ಮೆ ಲೋಕಸಭೆಗೆ ಆಯ್ಕೆಯಾದ ಅವಕಾಶವನ್ನು ಬಳಸಿಕೊಂಡ ಪ್ರಧಾನಿಗಳು, ಈ ರಾಜಕೀಯ ಮುತ್ಸದಿಯನ್ನು ತಮ್ಮ ಮಂತ್ರಿಮಂಡಲದ ಕ್ಯಾಬಿನೆಟ್ ಮಂತ್ರಿಯಾಗಿಸಿಕೊಂಡು ಅವರನ್ನು ರೈಲ್ವೆ ಮಂತ್ರಿಯಾಗಿಸಿದರು. ಭಾರತೀಯ ರೈಲ್ವೆ ದೇಶದ ಹೆಚ್ಚಿನ ವರಮಾನ ತರುವ , ಆದರೆ ಇನ್ನೂ ಅಭಿವೃದ್ಧಿಯ ಅವಶ್ಯಕತೆಯಿದ್ದ ಇಲಾಖೆ.

ಅಂದು ಭಾರತೀಯ ರೈಲ್ವೆಯ ಜವಾಬ್ದಾರಿ ಹೊರುವದು ಸುಲಭವಾಗಿರಲಿಲ್ಲ. ಆಗ ತಾನೇ ಚೇತರಿಸಿಕೊಳ್ಳುತ್ತಿದ್ದ ದೇಶಕ್ಕೆ ಜನಸಾಮಾನ್ಯರ ಸಂಪರ್ಕ ಕೊಂಡಿಯಾಗಬಲ್ಲ, ವ್ಯಾಪಾರ ವಹಿವಾಟುಗಳಿಗೆ ಪೂರಕವಾಗಬಲ್ಲ ರೈಲ್ವೆಯನ್ನು ಅಭಿವೃದ್ಧಿ ಗೊಳಿಸುವ ಹೊಣೆಗಾರಿಕೆ. ದಾಸಪ್ಪನವರು ಈ ಜವಾಬ್ದಾರಿ ಹೊರಬಲ್ಲ

ಸೂಕ್ತ ವ್ಯಕ್ತಿಯಾಗಿದ್ದರು. ಅವರ ಆಡಳಿತದ ಕಾಲದಲ್ಲಿ ರೈಲ್ವೆಯ ನವೀಕರಣ ಮತ್ತು ರೈಲ್ವೆ ಮಾರ್ಗಗಳ ಆಧುನೀಕರಣ, ಹಾಗೂ ವಿದ್ಯುದೀಕರಣವನ್ನು ತ್ವರಿತವಾಗಿ ಕೈಗೊಳ್ಳಲಾಯಿತು. ರೈಲ್ವೆ ಸಂಪರ್ಕದಿಂದ ಹೊರಗುಳಿದಿದ್ದ ಪ್ರದೇಶಗಳಲ್ಲಿ ಹೊಸ ಮಾರ್ಗಗಳ ಪರಿಶೀಲನೆ ಕೈಗೊಳ್ಳಬೇಕಾಯಿತು. ಮೀಟರ್ ಗೇಜ್ ಮಾರ್ಗಗಳನ್ನು ಬ್ರಾಡ್ಗೇಜ್‌ಗಳಾಗಿ ಪರಿವರ್ತಿಸುವದರ ಮೂಲಕ ರೈಲ್ವೆ ಪ್ರಯಾಣದ ಸೌಲಭ್ಯವನ್ನು, ಅನುಕೂಲತೆಗಳನ್ನು ಹೆಚ್ಚಿಸಿದರು. ವೇಗದ ಜೊತೆಯಲ್ಲಿ ಸುರಕ್ಷತೆಗೆ ಆದ್ಯತೆ ನೀಡುವುದಕ್ಕೆ ಗಮನ ನೀಡಲಾಯಿತು.

ಮೈಸೂರು ಪ್ರಾಂತಕ್ಕೆ ದಾಸಪ್ಪನವರ ಕೋಡುಗೆ ಮಂಗಳೂರು–ಬೆಂಗಳೂರು ರೈಲ್ವೆ ಮಾರ್ಗ. 1964ರ ರೈಲ್ವೆ ಬಡ್ಜೆಟ್‌ನಲ್ಲಿ ಈ ಮಾರ್ಗವನ್ನು ಪ್ರಾರಂಭಿಸಲಾಯಿತು. ಇದು ಈ ಪ್ರಾಂತದ ಜನರಿಗೆ ಅತೀ ಅವಶ್ಯವಾಗಿ ಬೇಕಿದ್ದ ಮಾರ್ಗ. ನೂರಾರು ವರ್ಷಗಳಿಂದ ಮೈಸೂರು ಪ್ರಾಂತದ ಜನ ಮಂಗಳೂರು ಮತ್ತು ಸುತ್ತಲ ಸಮುದ್ರತೀರ ಪ್ರದೇಶಗಳೊಂದಿಗೆ ಸಂಪರ್ಕ ಹೊಂದಲು ಬಯಸುತ್ತಿದ್ದರು. ಮತ್ತು ಈ ಪ್ರದೇಶಗಳವರಿಗೆ ವಿದೇಶಿ ವ್ಯಾಪಾರದ, ಸರಕು ಸಾಗಾಣಿಕೆಗೆ ಅನುಕೂಲವಾಗುವಂತೆ ಈ ಮಾರ್ಗವನ್ನು ಮೊದಲೆ ಬ್ರಾಡ್ಗೇಜ್ ಮಾರ್ಗವಾಗಿ ಅನುಮತಿ ನೀಡಲಾಗಿ, ಅದರ ಮೊದಲ ಹಂತದ ಉದ್ಘಾಟನೆ ಮಂಗಳೂರಿನಿಂದ ಪೆರಂಬೂರ್‌ವರೆಗೆ ದಾಸಪ್ಪನವರಿಂದ ಉಧ್ಘಾಟಿಸಲ್ಪಟ್ಟಿತು. ಅಲ್ಲದೆ ಶ್ರೀರಂಗಪಟ್ಟಣದ ವೆಸ್ಲಿ ಬ್ರಿಡ್ಜನ್ನು ಬಲಗೊಳಿಸಲಾಯಿತು.

ಪ್ರಯಾಣಿಕರನ್ನು ಸುರಕ್ಷಿತವಾಗಿ ಊರಿಂದೂರಿಗೆ ಕೊಂಡೊಯ್ಯುವ ಕೆಲಸಗಾರರ ಹಿತ ಕಾಯುವದು ದಾಸಪ್ಪನವರ ಮುಖ್ಯ ಉದ್ದೇಶ ಅದರಂತೆ ರೈಲ್ವೆಯ ನೌಕರರೊಂದಿಗೆ ಚರ್ಚಿಸಿ ಅವರ ಅನುಕೂಲಕ್ಕಾಗಿ ವೇತನ ಭತ್ಯೆಗಳಲ್ಲದೆ, ಸುರಕ್ಷಾ ಕ್ರಮವಾಗಿ ಪ್ರಾವಿಡೆಂಟ್ ಫಂಡ್, ಅಲ್ಲದೆ ಪ್ರಥಮ ಬಾರಿಗೆ ರೈಲ್ವೆ ನೌಕರರಿಗೆ ಪೆನ್ಶನ್ ನೀಡಲು ನಿರ್ಧರಿಸಲಾಯಿತು. ಇದೊಂದು ಮಾನವೀಯ ಕಾರ್ಯ. ಏಕೆಂದರೆ ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ವೃದ್ಧಾಪ್ಯದಲ್ಲಿ ಯಾವ ರೀತಿಯ ಹಣಕಾಸಿನ ಭದ್ರತೆ ಇರುತ್ತಿರಲಿಲ್ಲ. ದಾಸಪ್ಪನವರ ಈ ಕೊಡುಗೆ ಲಕ್ಷಾಂತರ ರೈಲ್ವೆ ನೌಕರರ ಬದುಕಿನಲ್ಲಿ ಹೊಸ ಆಶಾಭಾವನೆ ಹುಟ್ಟಿಸಿತು.

1964ರಲ್ಲಿ ಪ್ರಧಾನಿ ನೆಹರುರವರ ಮರಣದಿಂದ ಉಂಟಾದ ಬದಲಾವಣೆಯಲ್ಲಿ, ಮತ್ತೊಬ್ಬ ಗಾಂಧೀವಾದಿ ಪಂಡಿತ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದೇಶದ ಪ್ರಧಾನಿಗಳಾದರು. ಶಾಸ್ತ್ರಿಗಳು ದಾಸಪ್ಪನವರನ್ನು ಮೊದಲಿನಿಂದಲೂ ಬಲ್ಲವರಾಗಿದ್ದು, ಅವರನ್ನು ತಮ್ಮ ಕ್ಯಾಬಿನೆಟ್ ಸಚಿವರಾಗಿ

ಅವರನ್ನು ದೇಶ ಸೇವೆಯ ಹುಮ್ಮಸ್ಸಿನಲ್ಲಿದ್ದಾಗಲೆ, 1964ರಲ್ಲಿ ಹಠಾತ್ ಹೃದಯಾಘಾತದಿಂದ ಮರಣ ಹೊಂದಿದ್ದರಿಂದ ರಾಜ್ಯದ ಅಮೂಲ್ಯ ನಾಯಕರೊಬ್ಬರು ಕಣ್ಮರೆಯಾದರು.

ದಾಸಪ್ಪನವರು ಆದರ್ಶಗಳಿಗಿಂತ ಉನ್ನತವಾದದ್ದನ್ನು ಸಾಧಿಸಿದ್ದರು. ಸಮಾಜಸೇವೆಯನ್ನು ಜೀವನದ ಎಲ್ಲಾ ಹಂತಗಳಲ್ಲೂ ಪಾಲಿಸಿ, ತಮ್ಮ ಸುತ್ತಲಿನವರಿಗೆ ತಮ್ಮ ಆದರ್ಶಗಳನ್ನು ಪಾಲಿಸುವಂತೆ ನೋಡಿಕೊಂಡರು. ಅವರ ಬದುಕೇ ಅವರ ಸುತ್ತಲಿನವರಿಗೆ ಆದರ್ಶ. ಸದಾ ಹಸನ್ಮುಖಿಯಾಗಿ ಬಡವ –ಬಲ್ಲಿದರೆಂಬ ಭೇದ ತೋರದೆ, ಸಹಾಯ ಅರ್ಚಿಸಿ ಬಂದವರಿಗೆ ಸಾಕಷ್ಟು ಮಟ್ಟಿನ ನೆರವು ನೀಡುವ, ಮನೋಸ್ಥೈರ್ಯ ತುಂಬುವ ಕೆಲಸವನ್ನು ಜೀವನವಿಡಿ ಅನು ಸರಿಸಿದರು. ಅವರ ಮನೆ ಸದಾ ಜನಜಂಗುಳಿಯಿಂದ ತುಂಬಿರುತ್ತಿತು.

ಪತ್ನಿ ಯಶೋಧರಾರನ್ನು ಪ್ರೋತ್ಸಾಹಿಸಿ ಅವರು ರಚನಾತ್ಮಕ ಕಾರ್ಯಗಳಲ್ಲಿ ತೊಡಗಲು, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕನ್ಯಾವಿದ್ಯಾಲಯ ಗಳನ್ನು ನಡೆಸಲು ಕಾರಣರಾಗಿದ್ದರು. ತಮ್ಮ ಮಾವನವರಾದ

ಕೆ. ಎಚ್. ರಾಮಯ್ಯನವರ ಸ್ಮರಣೆಯಲ್ಲಿ ಬಡ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ನಡೆಸುತ್ತಾ, ಯಶೋಧರ ಜೊತೆಯಲ್ಲಿ ಗಾಂಧಿಸ್ಮಾರಕ ಟ್ರಸ್ಟನ, ಕಸ್ತೂರ್ ಬಾ ಟ್ರಸ್ಟನ ಸೇವೆಯಲ್ಲಿ ಮನಃಪೂರ್ವಕವಾಗಿ ಪಾಲ್ಗೊಳ್ಳುತ್ತಾ, ರಾಜ್ಯದಲ್ಲಿನ ಸೇವಾ ಸಂಸ್ಥೆಗಳ ಬೆಂಬಲಿಗರಾಗಿದ್ದರು.

ದಾಸಪ್ಪನವರದು ತೋರಿಕೆಯ ಆದರ್ಶವಲ್ಲ. ತಮ್ಮ ಜೀವನವಿಡೀ ಆ ಆದರ್ಶಗಳನ್ನು ಪಾಲಿಸಿ, ಉಳಿದವರಿಗೆ ಅವುಗಳನ್ನು ಪಾಲಿಸುವಂತೆ ಹೇಳುತ್ತಿದ್ದ ದಾಸಪ್ಪನಂತಹವರು ಈಗ ಅಪರೂಪ. ಈ ಎರಡೂ ಲೇಖನಗಳಲ್ಲಿ ಗಮನಿಸಿದ ಹಾಗೆ ಎಚ್.ಸಿ. ದಾಸಪ್ಪ ರಾಜ್ಯದ ಪ್ರಮುಖ ನಾಯಕರಲೊಬ್ಬರು. ಅವರು ಸಮಾಜ ಸೇವೆಯಲ್ಲಿ, ಗಾಂಧಿವಾದದ ಅನುಸರಣೆಯಲ್ಲಿ, ವಕೀಲಿ ವೃತ್ತಿಯಲ್ಲಿ, ಶಾಸನಸಭೆಗಳಲ್ಲಿ ಸಫಲತೆ ಹೊಂದಿದ್ದ ಜನಪ್ರಿಯ ನಾಯಕ. ಸುಸಂಸ್ಕೃತ ನಡೆನುಡಿ, ನಾಯಕರಿಗೊಪ್ಪುವ ವರ್ಚಸ್ಸು ಹೊಂದಿದ್ದರು. ಈ ಎಲ್ಲಾ ಗುಣಗಳ ತಳಹದಿ ಉತ್ತಮವಾದ ಕೌಟುಂಬಿಕ ಹಿನ್ನಲೆ, ಹಾಗೂ ರಾಮಾಕೃಷ್ಣಾಶ್ರಮದೊಂದಿಗಿನ ಒಡನಾಟ. ಅವರು ತಮ್ಮ ತಂದೆಯಿಂದ ಉನ್ನತ ಧ್ಯೆಯಗಳನ್ನು, ಆದರ್ಶಗಳನ್ನು ಪರಿಪಾಲಿಸವ ಮನೋಭಾವವನ್ನು ಹೊಂದಿದ್ದರು.

ದಾಸಪ್ಪ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು: ರಾಮದಾಸ್ ಮತ್ತು ತುಲಸೀದಾಸ್. ತಮ್ಮ ಮಕ್ಕಳನ್ನು ಉತ್ತಮ ಪ್ರಜೆಗಳಾಗುವಂತೆ ಮಾಡಲು ಮೊದಲು

ತಾವೇ ಅವರಿಗೆ ಆದರ್ಶಪ್ರಾಯರಾಗಿದ್ದರು. ಪತ್ನಿಯ ಎಲ್ಲಾ ಕಾರ್ಯಗಳನ್ನು ಬೆಂಬಲಿಸಿ ಅವರಲ್ಲಿನ ನಾಯಕತ್ವ ಗುಣಗಳನ್ನು ಪ್ರೋತ್ಸಾಹಿಸಿದರು. ಗಾಂಧೀಜಿಯವರನ್ನು ಸಮೀಪದಿಂದ ಬಲ್ಲ ದಾಸಪ್ಪ, ಅವರ ಆದರ್ಶಗಳ ಪರಿಪಾಲನೆ ತಮ್ಮ ಜೀವನದ ಗುರಿಯೆಂದು ಬಗೆದಿದ್ದರು. ಒಟ್ಟಿನಲ್ಲಿ ಸಂತೃಪ್ತ ಜೀವನ ಅವರದು.

ಮೃದು ಹೃದಯಿಯಾದ ದಾಸಪ್ಪವರಲ್ಲಿ ಹೆಣ್ಣು ಮಕ್ಕಳ ಬಗ್ಗೆ ಅಪಾರ ಕಾಳಜಿ. ತಮಗೆ ಹೆಣ್ಣುಮಕ್ಕಳಿಲ್ಲವಲ್ಲಾ ಎಂಬ ಕೊರಗು ಆ ದಂಪತಿಗಳನ್ನು ಕಾಡಿರಬೇಕು. ಅದನ್ನು ದಾಸಪ್ಪನವರು ವ್ಯಕ್ತ ಪಡಿಸಿದ ರೀತಿ ಕುತೂಹಲಕಾರಿಯಾಗಿದೆ. 1954ರಲ್ಲಿ ರಾಜ್ಯಸಭೆಯಲ್ಲಿ ಮಹಿಳಾಪರ ಶಾಸನಗಳ ಬಗ್ಗೆ ನಡೆದಿದ್ದ ಚರ್ಚೆಯಲ್ಲಿ ಭಾಗವಹಿಸದ್ದ ದಾಸಪ್ಪ 'ಪ್ರೀತಿ ವಿಶ್ವಾಸಗಳ ಬಗ್ಗೆ ಹೇಳುವುದಾದರೆ, ಮತ್ತು ತಾತ್ವಿಕವಾಗಿಯೂ ಗಂಡು-ಹೆಣ್ಣು ಮಕ್ಕಳ ಮಧ್ಯೆ ಅಂತಹ ಭೇಧವೇನಿಲ್ಲ. ಆದರೆ ಬರೀ ಗಂಡು ಮಕ್ಕಳಿರುವ ನಮಗೆ ಹೆಣ್ಣು ಮಕ್ಕಳಿಲ್ಲದ ಕೊರತೆ ಇದ್ದೆ ಇರುತ್ತದೆ. ಆದರೆ ಸಮಾಧಾನ ಪಟ್ಟುಕೊಳ್ಳಲು ಮತ್ತು. ನಮಗಾಗಿ ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಳ್ಳಲು ನಾಡಿನಲ್ಲಿ ಅನೇಕ ಹೆಣ್ಣು ಮಕ್ಕಳಿವೆ ಎಂಬುದು ಸಂತೋಷಕರ' ಎಂದು ಹೇಳಿದರು. ಇದು ಕೇವಲ ಔಪಚಾರಿಕ ಮಾತಾಗಿರದೆ, ದಾಸಪ್ಪ ದಂಪತಿಗಳು ತಮಗೆ ಹೆಣ್ಣು ಮಕ್ಕಳಿಲ್ಲದ ಕೊರತೆಯನ್ನ ನೀಗಿಕೊಳ್ಳಲು ಬಡ ಕುಟುಂಬದ, ಕೆಳವರ್ಗದ ಹೆಣ್ಣು ಮಗುವನ್ನು ದತ್ತು ಪಡೆದು ಆ ಮಗುವಿಗೆ ಶಿಕ್ಷಣ ಕೊಡಿಸಿ, ಗಂಡು ಮಕ್ಕಳ ಸಮವಾಗಿ ಆಸ್ತಿಯಲ್ಲಿ ಪಾಲು ನೀಡಿದರು. ಇಂತಹ ಆದರ್ಶದ ನಡೆ ಅಪರೂಪ.

ಸಾತ್ವಿಕ ನಡತೆಯವರಾದ ದಾಸಪ್ಪನವರಿಗೆ ದೈವತ್ವದಲ್ಲಿ, ಪರಮಾತ್ಮನ ಇರುವಿಕೆಯಲ್ಲಿ ನಂಬಿಕೆ ಅಪಾರ, ಆದರೆ ಅದು ಎಂದೂ ಮೂಢನಂಬಿಕೆಗಳಿಗಾಗಲಿ, ಅರ್ಥವಿಲ್ಲದ ಆಚರಣೆಗಾಗಲಿ ದಾರಿ ಮಾಡಿಕೊಡುತ್ತಿರಲಿಲ್ಲ. ತಮ್ಮ ಜೊತೆಯಲ್ಲಿದ್ದವರನ್ನು ಅದೇ ರೀತಿ ನಡೆದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದುದುಂಟು. ಬಾಲ್ಯದಿಂದಲೂ ರಾಮಕೃಷ್ಣಾಶ್ರಮದ ಯತಿಗಳ ಪ್ರಭಾವಕ್ಕೊಳಗಾಗಿ ಆಧ್ಯಾತ್ಮಿಕ ಮಾರ್ಗದರ್ಶನ ಹೊಂದುತ್ತಿದ್ದ ದಾಸಪ್ಪ ಕುರುಡು ನಂಬಿಕೆಗಳನ್ನು ಸಹಿಸುತ್ತಿರಲ್ಲಿಲ.

ಈ ಎರಡೂ ಲೇಖನಗಳಲ್ಲಿ ಗಮನಿಸಿದ ಹಾಗೆ ಎಚ್.ಸಿ ದಾಸಪ್ಪ ರಾಜ್ಯದ ಪ್ರಮುಖ ನಾಯಕರಲ್ಲೊಬ್ಬರು. ಅವರು ಸಮಾಜ ಸೇವೆಯಲ್ಲಿ, ಗಾಂಧೀವಾದದ ಅನುಸರಣೆಯಲ್ಲಿ, ವಕೀಲಿ ವೃತ್ತಿಯಲ್ಲಿ, ಶಾಸನಸಭೆಗಳಲ್ಲಿ ಸಫಲತೆ ಹೊಂದಿದ್ದ ಜನಪ್ರಿಯ ನಾಯಕ. ಸುಸಂಸ್ಕೃತ ನಡೆನುಡಿ, ನಾಯಕರಿಗೊಪ್ಪುವ ವರ್ಚಸ್ಸು

ಹೊಂದಿದ್ದರು. ಈ ಎಲ್ಲಾ ಗುಣಗಳ ತಳಹದಿ ಉತ್ತಮವಾದ ಕೌಟುಂಬಿಕ ಹಿನ್ನಲೆ, ಹಾಗೂ ರಾಮಾಕೃಷ್ಣಾಶ್ರಮದೊಂದಿಗಿನ ಒಡನಾಟ. ಅವರು ತಮ್ಮ ತಂದೆಯಿಂದ ಉನ್ನತ ಧ್ಯೇಯಗಳನ್ನು, ಆದರ್ಶಗಳನ್ನು ಪರಿಪಾಲಿಸವ ಮನೋಭಾವವನ್ನು ಹೊಂದಿದ್ದರು.

ತಮ್ಮ ಸಾರ್ವಜನಿಕ ಸೇವೆಯ ಆರಂಭದಲ್ಲಿ ಅಂದಿನ ಹಿಂದುಳಿದ ವರ್ಗಗಳ ಚಳುವಳಿಯ ನಾಯಕರೊಂದಿಗೆ ಸಂಬಂಧ ಹೊಂದಿದ್ದು, ತಮ್ಮ ತಂದೆಯವರೊಂದಿಗೆ ಸಮಾಜ ಸೇವೆಯಲ್ಲಿ ಪಾಲ್ಗೊಂಡಿದ್ದರು. ಅವರ ಕುಟುಂಬ ಜೀವನ ಆದರ್ಶಮಯವಾಗಿದ್ದು, ಪತ್ನಿ ಯಶೋಧರಾ ಗಾಂಧಿ ಪ್ರಣೀತ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಆದರ್ಶ ಪರಿಪಾಲನೆಯನ್ನು ತಮ್ಮ ಜೀವನದ ಗುರಿಯಾಗಿಸಿಕೊಂಡಿದ್ದ ದಾಸಪ್ಪ ದಂಪತಿಗಳು ಸಾಮಾಜಿಕ ಅಥವಾ ರಾಜಕೀಯ ಬದಲಾವಣೆ ತ್ಯಾಗ ಪರಿಶ್ರಮಗಳಿಂದ ಬರುತ್ತದೆಂದು ನಂಬಿದ್ದರು. ತಮ್ಮ ತತ್ವ ಸಿದ್ಧಾಂತಗಳ ಪಾಲನೆಗಾಗಿ, ಕೆಳವರ್ಗದವರ, ಮಹಿಳೆಯರ ಏಳಿಗೆಗಾಗಿ ಸತತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ದಾಸಪ್ಪ ದಂಪತಿಗಳು ನಮ್ಮ ನಾಡಿನ ಆದರ್ಶಪ್ರಾಯರಾದ ನಾಯಕರಾಗಿ, ಇಂದಿನವರಿಗೆ ಸ್ಫೂರ್ತಿಯನ್ನು ನೀಡಬಲ್ಲರು.

* * * * *



ಕೆ.ಸಿ. ರೆಡ್ಡಿ

– ಡಾ. ರವೀಂದ್ರನಾಥ್

ಪ್ರಸ್ತಾವನೆ :– ಭಾರತ ಕಂಡ ಪ್ರಾಮಾಣಿಕ ಮತ್ತು ಪ್ರಬುದ್ಧ ರಾಜಕಾರಣಿ ಕೆ. ಚಂಗಲರಾಯ ರೆಡ್ಡಿ, ಸ್ವಾತಂತ್ರ್ಯ ಪೂರ್ವದ ಮೈಸೂರು ಸಂಸ್ಥಾನದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ, ಮೈಸೂರು ನ್ಯಾಯವಿಧಾಯಕ ಸಭೆ, ದಕ್ಷಿಣ ಭಾರತದ ಬಹುದೊಡ್ಡ ಬ್ರಾಹ್ಮಣೇತರ ಚಳುವಳಿಗಳ ರಾಜಕೀಯ ನಾಯಕರು, ಮೈಸೂರು ಕಾಂಗ್ರೆಸ್ ಪಕ್ಷದ ಸ್ಥಾಪಕರಲ್ಲೊಬ್ಬರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಂಸ್ಥಾನದ ಜನರು ಬಹುದೊಡ್ಡ ಪ್ರಮಾಣದಲ್ಲಿ ಭಾಗವಹಿಸುವಂತೆ ಮಾಡಿದ ಕೀರ್ತಿ, ನಾಲ್ಕುಬಾರಿ ಸೆರೆಮನೆವಾಸ, ರಾಜ್ಯದ ಕಾಂಗ್ರೆಸ್‌ನ ಮೊದಲ ಮುಖ್ಯಮಂತ್ರಿಯಾಗಿ ಮೈಸೂರು ರಾಜಕೀಯ ಇತಿಹಾಸದಲ್ಲಿ ಕೆ.ಸಿ.ರೆಡ್ಡಿ ಹೆಸರು ಬಹುಕಾಲ ಸ್ಮರಣೀಯವಾಗುವಂತೆ ಮಾಡಿವೆ.

ಜೀವನ :– ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿ (ಕೆ.ಸಿ.ರೆಡ್ಡಿ) ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿ ಗ್ರಾಮದ ವೆಂಕಟರೆಡ್ಡಿ ಮತ್ತು ಗಂಗೋಜಮ್ಮ ಇವರ ಮೂವರು ಮಕ್ಕಳಲ್ಲಿ ಎರಡನೆಯವರು. ಅಣ್ಣ ವೆಂಕಟರಾಮರೆಡ್ಡಿ, ತಂಗಿ ಮೀನಾಕ್ಷಮ್ಮ. ಇವರ ಪೂರ್ವಿಕರು ಸಾವಿರಾರು ಎಕರೆ ಜಮೀನಿನ ಒಡೆಯರಾದ ಆಗರ್ಭ ಶ್ರೀಮಂತರು. ಕೆ.ಸಿ.ರೆಡ್ಡಿ ಜನನ 1902 ಮೇ 5 ರಂದು ತಾಯಿ ಗಂಗೋಜಮ್ಮನವರ ಊರಾದ ರಾಜಪೇಟೆಯಲ್ಲಿ ಆಯಿತು. ಇದು ಇಂದಿನ ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿನಲ್ಲಿದೆ.

ಕೋಲಾರದ ಚಿನ್ನದ ಗಣಿಗಳನ್ನು ನಡೆಸುತ್ತಿದ್ದ ಇಂಗ್ಲೆಂಡ್ ಮೂಲದ ಜಾನ್‌ಟೇಲರ್ ಅಂಡ್ ಕಂಪನಿ ಬ್ರಿಟಿಷ್ ಕೆಲಸಗಾರರ ಮಕ್ಕಳಿಗೆಂದು ಪ್ರಾರಂಭಿಸಿದ್ದ ನರ್ಸರಿ ಲೋಯರ್ ಅಂಡ್ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ಕೆ.ಸಿ.ರೆಡ್ಡಿ ಪ್ರಾಥಮಿಕ

ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು 1914 ರಲ್ಲಿ ಏಳನೆಯ ತರಗತಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗುವುದರೊಂದಿಗೆ ಮುಗಿಸಿದರು. ನಂತರ ಬೆಂಗಳೂರು ನಗರದಲ್ಲಿದ್ದ ಲಂಡನ್ ಮಿಷನ್ ಹೈಸ್ಕೂಲ್‌ಗೆ (ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಎಂಟನೆಯ ತರಗತಿಗೆ ತನ್ನ ಅಣ್ಣ ವೆಂಕಟರಾಮರೆಡ್ಡಿ ಜೊತೆ ಸೇರಿದರು. ಇಲ್ಲಿ 1915 ಮತ್ತು 1918 ರ ಶೈಕ್ಷಣಿಕ ಅವಧಿಯಲ್ಲಿ ಕೆ.ಸಿ.ರೆಡ್ಡಿ ವಿದ್ಯಾಭ್ಯಾಸದ ಜೊತೆಗೆ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವುದರ ಮೂಲಕ ಹಲವಾರು ಬಹುಮಾನಗಳನ್ನು ಗೆದ್ದುಕೊಂಡು ಪ್ರಾಂಶುಪಾಲರಾದ ಎಡ್ವರ್ಡ್ ಪಿ.ರೈಸ್ ಅವರ ಮತ್ತು ಉಪಾಧ್ಯಾಯರೆಲ್ಲರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದರು. ಅಲ್ಲದೆ ಒಕ್ಕಲಿಗರ ವಿದ್ಯಾರ್ಥಿಗಳ ಸಂಘ (ಬೆಂ) ಸ್ಥಾಪನೆಗೆ ಕಾರಣರಾಗಿ, ಸಹಾಯಕ ಕಾರ್ಯದರ್ಶಿಯಾಗಿ ವಿ.ವೆಂಕಟಪ್ಪ ಮತ್ತು ಹೆಚ್.ಕೆ. ವೀರಣ್ಣಗೌಡರ ಜೊತೆ ಕಾರ್ಯ ನಿರ್ವಹಿಸಿದರು. 1918 ಅಕ್ಟೋಬರ್ 31 ರಂದು ಕೆ.ಸಿ. ರೆಡ್ಡಿ ತಂದೆ ವೆಂಕಟರೆಡ್ಡಿ ಮರಣ ಹೊಂದಿದ್ದರಿಂದ ಅಣ್ಣ ವೆಂಕಟರಾಮರೆಡ್ಡಿ ವಿದ್ಯಾಭ್ಯಾಸ ನಿಲ್ಲಿಸಿ, ಕ್ಯಾಸಂಬಳ್ಳಿಗೆ ಹಿಂತಿರುಗಿದರು. ಆದರೆ ಕೆ.ಸಿ.ರೆಡ್ಡಿ ವಿದ್ಯಾಭ್ಯಾಸ ಮುಂದುವರೆಸಿ 1917–1918 ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಇಡೀ ಮೈಸೂರು ಸಂಸ್ಥಾನಕ್ಕೆ ನಾಲ್ಕನೇ ರ್‍ಯಾಂಕ್ ಪಡೆದರಲ್ಲದೆ, ಸರ್ಕಾರ ತಿಂಗಳಿಗೆ ಹತ್ತು ರೂ. ಮೆರಿಟ್ ಸ್ಕಾಲರ್‌ಶಿಪ್ ನೀಡಿ ಗೌರವಿಸಿತು.

1918–19 ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮದ್ರಾಸ್ (ಚೆನ್ನೈ) ನ ಪಚ್ಚೆಯಪ್ಪ ಕಾಲೇಜಿಗೆ ಸೇರಿದರು. ಇಲ್ಲಿ ಡಾ॥ ಅನಿಬೆಸೆಂಟರು ಸ್ಥಾಪಿಸಿದ್ದ ಜ.ಒ.ಖ.ಂ. (ಜಔಗಿಟಲು ಒಂಟ ಖಟಿಆಖಂಟ ಂಖಖಔಅಖಂಖಿಖಔಟ) ನಲ್ಲಿ ವಸತಿ ಮಾಡಿದ್ದರು. ಈ ಸಂಸ್ಥೆ ಭಾರತೀಯ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯದ ಜೊತೆಗೆ ಉನ್ನತ ಆದರ್ಶ, ರಾಷ್ಟ್ರೀಯ ಮನೋಭಾವ, ದೇಶಾಭಿಮಾನ ಮೂಡಿಸುವ ವೇದಿಕೆಯಾಗಿತ್ತು. ಇಲ್ಲಿ ಅನಿಬೆಸೆಂಟರು ಸ್ಥಾಪಿಸಿದ ಸಭಾಂಗಣಕ್ಕೆ ಗೋಪಾಲಕೃಷ್ಣ ಗೋಖಲೆ ಅವರ ಹೆಸರಿಡಲಾಗಿತ್ತು. ಇಲ್ಲಿಗೆ ಪ್ರಖ್ಯಾತ ರಾಷ್ಟ್ರೀಯವಾದಿಗಳನ್ನು ಕರೆಯಿಸಿ ಭಾಷಣಗಳು ಮತ್ತು ಚರ್ಚೆಗಳನ್ನು ನಡೆಸುತ್ತಿದ್ದರು. ಇಲ್ಲಿ ಕೆ.ಸಿ.ರೆಡ್ಡಿ ಯುವಜನ ಸಂಘವನ್ನು ಸ್ಥಾಪಿಸಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. 1924 ರಲ್ಲಿ ಬಿ.ಎ. ಪದವಿಯಲ್ಲಿ ಇಡೀ ಮದ್ರಾಸ್ ಪ್ರಾಂತಕ್ಕೆ ಅತಿ ಹೆಚ್ಚು ಅಂಕ ಗಳಿಸುವುದರೊಂದಿಗೆ ರಾಜಾರಾಮಸ್ವಾಮಿ ಮೊದಲಿಯಾರ್ ಬಂಗಾರದ ಪದಕ ಪಡೆದುಕೊಂಡರು. ನಂತರ ಮದ್ರಾಸ್–ಲಾ–ಕಾಲೇಜಿಗೆ ಸೇರಿ 1926 ರಲ್ಲಿ ಬಿ.ಎಲ್. ಪದವಿ ಪಡೆದರು. ಈ ಪದವಿ ಎಲ್.ಎಲ್.ಬಿ. ಪದವಿಗಿಂತಲೂ ಕಷ್ಟದ ಪದವಿಯಾಗಿತ್ತು.

ವೈವಾಹಿಕ ಜೀವನ :– ಕೆ.ಸಿ. ರೆಡ್ಡಿ ರವರು ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ರಾಮರೆಡ್ಡಿಯ ಸಾಕು ಮಗಳಾದ ಕೌಸಲ್ಯಮ್ಮನನ್ನು 1927 ರಲ್ಲಿ ಮದುವೆಯಾದರು. ಆದರೆ ಮದುವೆಯಾದ ಆರೇ ತಿಂಗಳಿಗೆ ಕೌಸಲ್ಯಮ್ಮ ಆಗಿನ ಕಾಲದ ಭಯಂಕರ ಇನ್‌ಫ್ಲೋಯಿನ್ ಜ಼ಾ ಜ್ವರಕ್ಕೆ ತುತ್ತಾಗಿ 1927 ರ ನವೆಂಬರ್ 30 ರಂದು ತೀರಿಕೊಂಡರು. ಇದರಿಂದ ಆಘಾತಗೊಂಡ ಕೆ.ಸಿ. ರೆಡ್ಡಿ ದು:ಖವನ್ನು ಮರೆಯಲು ಮದ್ರಾಸ್‌ನಲ್ಲೀ ಎರಡು ವರ್ಷಗಳ ಕಾಲ ನೆಲೆಸಿದ್ದರು. ಬೆಂಗಳೂರಿನ ಪ್ರಸಿದ್ಧ ವ್ಯಕ್ತಿಯಾಗಿದ್ದ ಹೆಚ್.ಆರ್. ಗುರುವಾರೆಡ್ಡಿ ಅವರ ಮಗಳಾದ ಸರೋಜಮ್ಮನನ್ನು 1934ರ ಆಗಸ್ಟ್ 26ರಂದು ಕೆ.ಸಿ.ರೆಡ್ಡಿ ಮದುವೆ ಯಾದರು. ಇವರ ಆರು ಮಕ್ಕಳಲ್ಲಿ ಐದು ಗಂಡು, ಒಂದು ಹೆಣ್ಣು.

ರಾಜಕೀಯ ಜೀವನ ಸಾಧನೆ :– ಕರ್ನಾಟಕದಲ್ಲಿ ಅದರಲ್ಲೂ ಹಿಂದಿನ (ಸ್ವಾತಂತ್ರ್ಯ ಪೂರ್ವ) ಮೈಸೂರು ಸಂಸ್ಥಾನ ಕಂಡ ಪ್ರಬಲ ರಾಜಕೀಯ ಹೋರಾಟ ಎಂದರೆ ಬ್ರಾಹ್ಮಣೇತರ ಚಳುವಳಿ (1917–1937) ಸು. ಇಪ್ಪತ್ತು ವರ್ಷಗಳ ಕಾಲ ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಜನರ ಆಶೋತ್ತರಗಳ ಪರವಾಗಿ ದೊಡ್ಡ ಧ್ವನಿ ಎತ್ತುವ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು.

ಗಾಂಧೀಜಿ 1927 ರಲ್ಲಿ ಕೋಲಾರ (ಇಂದಿನ ಚಿಕ್ಕಬಳ್ಳಾಪುರ) ಜಿಲ್ಲೆಯ ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಭೇಟಿ ಮಾಡಿದ್ದನ್ನು ಸ್ವತ: ಕೆ.ಸಿ. ರೆಡ್ಡಿ "ಗಾಂಧೀಜಿ ಮಾರ್ಗದರ್ಶನ ಮತ್ತು ಬುದ್ಧಿವಾದ ಈಗಲೂ ನನಗೆ ಕಿವಿಯಲ್ಲಿ ಮೊರೆಯುತ್ತಿವೆ. ಅವರ ಪ್ರಗಲ್ಭ ಸೂಚನೆಯ ಮೇರೆ ನನ್ನ ಜೀವಿತನದ ವಿಷಯವಾಗಿ ಆಗ ಒಂದು ನಿರ್ಧಾರಕ್ಕೆ ಬಂದೆನು. ವಕೀಲ ವೃತ್ತಿಯನ್ನು ಬಿಟ್ಟು ಸಾರ್ವಜನಿಕ ಸೇವೆಗೆ ನನ್ನನ್ನು ಅರ್ಪಣೆ ಮಾಡಿಕೊಳ್ಳಲು ನಿರ್ಧರಿಸಿದೆನು" ಎಂದಿದ್ದಾರೆ.

ಕೆ.ಸಿ. ರೆಡ್ಡಿ ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅನಿಬೆಸೆಂಟ್, ಗಾಂಧೀಜಿ ಹಾಗೂ ಇತರೆ ರಾಷ್ಟ್ರೀಯವಾದಿಗಳ ಭಾಷಣಗಳನ್ನು ಕೇಳಿ ತನ್ನ ವೈಚಾರಿಕ ಪ್ರಜ್ಞೆಯ ಜೊತೆಗೆ ರಾಜಕೀಯ ಮಹತ್ವಾಕಾಂಕ್ಷೆ ರೆಡ್ಡಿಯವರಲ್ಲಿ ಮನೆಮಾಡಿತ್ತು. ಆಗಿನ ಕಾಲಕ್ಕೆ ಮದ್ರಾಸ್ ಬ್ರಾಹ್ಮಣೇತರ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿತ್ತು. ಇದನ್ನು ಬಹಳ ಹತ್ತಿರದಿಂದ ಕಂಡು, ಓದಿ ತಿಳಿದುಕೊಂಡಿದ್ದು, ಮದ್ರಾಸ್ ಮತ್ತು ಆಂಧ್ರನಾಯಕರ ವಿದ್ಯಾರ್ಥಿದೆಸೆಯ ಸಂಪರ್ಕ ಮತ್ತು ಸಂಬಂಧಗಳು, ಮೈಸೂರು ಸಂಸ್ಥಾನದ ಮೊದಲ ಬ್ರಾಹ್ಮಣೇತರ ರಾಜಕೀಯ ಪಕ್ಷವಾದ ಪ್ರಜಾಮಿತ್ರ ಮಂಡಲಿ ನಾಯಕರ ನಂಟು ರಾಜಕೀಯವಾಗಿ ಕೆ.ಸಿ.ರೆಡ್ಡಿ ಪ್ರಾಬಲ್ಯಕ್ಕೆ ಬರಲು

ಕಾರಣವಾಯಿತು. ಆರಂಭದಲ್ಲಿ ಪ್ರೋಗ್ರೇಸಿವ್ ಪಾರ್ಟಿಗೆ ಸೇರಿದರು. ಆದರೆ ಆ ಪಕ್ಷದಲ್ಲಿ ಬಹುಕಾಲ ಉಳಿಯಲಿಲ್ಲ. ಹಿಂದುಳಿದ ವರ್ಗಗಳ ಏಳಿಗೆಯನ್ನೇ ತಮ್ಮ ಗುರಿಯನ್ನಾಗಿರಿಸಿಕೊಂಡಿದ್ದ ಪ್ರಜಾಮಿತ್ರ ಮಂಡಳಿ ಪಕ್ಷವನ್ನು ಸೇರಿ, ಬಹುಬೇಗನೆ ಪಕ್ಷದ ನಿರ್ವಹಣೆಯ ಜವಾಬ್ದಾರಿ ಹೊತ್ತರು. 1928–29 ರ ಬೆಂಗಳೂರು ನಗರದಲ್ಲಿ ನಡೆದ ಸುಲ್ತಾನಪೇಟೆ ಗಣಪತಿ ಗಲಭೆಗಳಿಂದ ಪಕ್ಷದಲ್ಲುಂಟಾದ ರಾಜಕೀಯ ಏರು–ಪೇರುಗಳು ಹಲವು ತಿರುವುಗಳಿಗೆ ಕಾರಣವಾಗಿ ಬೇಸತ್ತು ಕೆ.ಸಿ.ರೆಡ್ಡಿ ಹಾಗೂ ಸ್ನೇಹಿತರು ಪ್ರಜಾಮಿತ್ರ ಮಂಡಲಿ ಪಕ್ಷದಿಂದ ಹೊರಬಂದರು.

ಪ್ರಜಾಪಕ್ಷ ಸ್ಥಾಪನೆ :– 1930ರಲ್ಲಿ ಪ್ರಜಾಪಕ್ಷ ಎಂಬ ಹೊಸ ರಾಜಕೀಯ ಪಕ್ಷ ಉದಯವಾಯಿತು. ಇದು ಕೂಡ ಬ್ರಾಹ್ಮಣೇತರ ರಾಜಕೀಯ ಪಕ್ಷವಾಗಿತ್ತು. ಇದರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಕೆ.ಸಿ.ರೆಡ್ಡಿ, ಎ. ವೆಂಕಟಪ್ಪ, ಹೆಚ್.ಬಿ. ಗುಂಡಪ್ಪಗೌಡ, ಬಿ.ಎನ್. ಗುಪ್ತ, ಡಿ.ಎಸ್. ಮಲ್ಲಪ್ಪ, ಹೆಚ್.ಸಿದ್ದಯ್ಯ, ಚೆನ್ನಯ್ಯ, ಸುಬ್ಬಯ್ಯನವರು. ಈ ಪಕ್ಷ 1930–1934 ರವರೆಗೆ ಸಂಸ್ಥಾನದಲ್ಲಿ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಪ್ರಜಾಪಕ್ಷ ಮೂರು ಅಧಿವೇಶನಗಳನ್ನು ಚನ್ನಪಟ್ಟಣ–1931, ಮೈಸೂರು–1932 ಮತ್ತು ತುಮಕೂರು–1933 ನಗರಗಳಲ್ಲಿ ಕ್ರಮವಾಗಿ ಡಿ.ಎಸ್.ಮಲ್ಲಪ್ಪ, ಹೆಚ್.ಬಿ.ಗುಂಡಪ್ಪಗೌಡ ಮತ್ತು ಪಾಮಡಿ ರಾಜಕೀಯ ಸುಧಾರಣೆ ಬಯಸುವವರನ್ನು ಅಪಹಾಸ್ಯ ಮಾಡಿ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ಕೊನೆಗೊಳ್ಳುತ್ತಿರುವಾಗ ಪ್ರಜಾಪಕ್ಷದ ನಾಯಕರು ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಪರವಾಗಿ ಹೋರಾಟ ನಡೆಸುತ್ತಿರುವುದನ್ನು ಲೇವಡಿ ಮಾಡಿದರು. ಇದು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಪಕ್ಷಗಳೆರಡು ಒಂದಾಗಿ ಮಿರ್ಜಾ ಇಸ್ಮಾಯಿಲ್‌ರ ಧೋರಣೆಯನ್ನು ಪ್ರತಿಭಟಿಸುವ ಉದ್ದೇಶದಿಂದ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಯ ದೃಷ್ಟಿಯಿಂದ "ಪ್ರಜಾಸಂಯುಕ್ತ ಪಕ್ಷ" ಎಂಬ ಹೊಸ ರಾಜಕೀಯ ಪಕ್ಷದ ಉಗಮಕ್ಕೆ ಕಾರಣವಾಯಿತು.

ಪ್ರಜಾ ಸಂಯುಕ್ತ ಪಕ್ಷ 1934–1937 ರ ಅವಧಿಯಲ್ಲಿ ಸಂಸ್ಥಾನದಲ್ಲಿ ಎರಡು ಅಧಿವೇಶನಗಳನ್ನು ನಡೆಸಿದೆ. ಹಾಸನ–1935 ಮತ್ತು ಕೋಲಾರ–1937 ಕ್ರಮವಾಗಿ ಕೆ.ಸಿ. ರೆಡ್ಡಿ ಮತ್ತು ವಿ. ವೆಂಕಟಪ್ಪ ಅವರುಗಳ ಅಧ್ಯಕ್ಷತೆಯಲ್ಲಿ ನಡೆದವು. ಈ ಪಕ್ಷ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಪ್ರಾತಿನಿಧ್ಯ, ಜವಾಬ್ದಾರಿ ಸರ್ಕಾರ ಸ್ಥಾಪನೆ, ಜನಸಾಮಾನ್ಯರ ತೆರಿಗೆ ಹೊರ ಕಡಿಮೆ ಒತ್ತಾಯ, ಶಾಸನಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳ ಸಲಹೆ, ಸೂಚನೆ, ಟೀಕೆಗಳಿಗೆ ಬೆಲೆ, ಆರ್ಥಿಕ ಸಂಕಷ್ಟದ ಹಿನ್ನೆಲೆ ರೈತರಿಗೆ ಪರಿಹಾರ, ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ಒತ್ತಾಯ,

ಕಮಲಾದೇವಿ, ಕೆ.ಟಿ.ಭಾಷ್ಯಂ, ತಗಡೂರು ರಾಮಚಂದ್ರರಾಯ ಬಿಡುಗಡೆಗೆ ಒತ್ತಾಯ, ದಿವಾನರ ಅಧಿಕಾರಾವಧಿ ಐದು ವರ್ಷಗಳಿಗೆ ಸೀಮಿತ. ಹೀಗೆ ಇನ್ನೂ ಮುಂತಾದವು.

ಕೆ.ಸಿ.ರೆಡ್ಡಿ ಅವರು "ಪ್ರಜಾಮಿತ್ರ ಮಂಡಲಿ ಮತ್ತು ಪ್ರಜಾಪಕ್ಷಗಳು ಒಂದಾದ ಸಂದರ್ಭ ಪ್ರಜಾ ಸಂಯುಕ್ತ ಪಕ್ಷದ ಗುರಿ, ಉದ್ದೇಶಗಳ ಬಗ್ಗೆ ಪ್ರಸ್ತಾಪಿಸಿ "ರಾಜ್ಯದಲ್ಲಿ ಮಹಾರಾಜರ ಕೃಪಾಶ್ರಯದಲ್ಲಿ ಶಾಂತಿಯುತವಾಗಿ, ನ್ಯಾಯಬದ್ಧವಾಗಿ ಹಾಗೂ ಸಂವಿಧಾನ ಮಾರ್ಗಗಳ ಮುಖಾಂತರ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವುದು. ಪ್ರಜಾಸಂಯುಕ್ತ ಪಕ್ಷದ ಗುರಿ, ಈ ಪಕ್ಷದಡಿಯಲ್ಲಿ ಬ್ರಾಹ್ಮಣರನ್ನು ಒಳಗೊಂಡಂತೆ ಎಲ್ಲಾ ಜಾತಿ ವರ್ಗಗಳಿಗೆ ಅವಕಾಶವಿದೆಯೆಂದು, ರಾಜ್ಯದ ಎಲ್ಲ ಜನರು ಒಂದೇ ರಾಜಕೀಯ ವೇದಿಕೆಯಡಿ ಹೋರಾಟ ನಡೆಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಮೈಸೂರು ಸಂಸ್ಥಾನದ ನೆರೆಯ ಹೈದರಾಬಾದ್, ತಿರುವಾಂಕೂರ್, ಕೊಚ್ಚಿನ್, ಬರೋಡ ಹಾಗೂ ಇತರ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಪ್ರಸ್ತಾಪಿಸಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಶಾಸನಸಭೆಯಲ್ಲಿ ಕುರಿತು ಮಾಡಿದ ಟೀಕೆಗಳನ್ನು ಖಂಡಿಸಿದರು".

ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷತೆ :- ಮೈಸೂರು ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡ್‌ಗಳು ಕಮೀಷನರ್‌ಗಳ ಆಳ್ವಿಕೆ ಕಾಲದಿಂದ ಅಸ್ತಿತ್ವಕ್ಕೆ ಬಂದಿದೆ. 1930 ರ ವೇಳೆಗೆ ಜಿಲ್ಲಾ ಬೋರ್ಡ್‌ಗಳು ಸ್ಥಳೀಯರಿಗೆ ರಾಜಕೀಯ ತರಬೇತಿ ನೀಡುವ ಹಾಗೂ ರಾಜಕೀಯ ನಾಯಕತ್ವ ಬೆಳಸಿಕೊಳ್ಳುವ ಒಂದು ಸಾಧನವಾಗಿತ್ತು. ಕೆ.ಸಿ.ರೆಡ್ಡಿಯವರು ಕೋಲಾರ ಜಿಲ್ಲಾ ಬೋರ್ಡ್ ಸದಸ್ಯರಾಗಿ ಮತ್ತು ಅಧ್ಯಕ್ಷರು ಆಗಿ 1933 ಮತ್ತು 1936 ರಲ್ಲಿ ಎರಡು ಬಾರಿ ಚುನಾಯಿತರಾಗಿದ್ದರು. ಕೋಲಾರ ಜಿಲ್ಲೆಯು ಹನ್ನೊಂದು ತಾಲ್ಲೂಕುಗಳನ್ನು ಒಳಗೊಂಡಿದ್ದು, ಕೆ.ಸಿ.ರೆಡ್ಡಿಯವರು ಅನೇಕ ಗ್ರಾಮಗಳಿಗೆ ರಸ್ತೆಗಳ ನಿರ್ಮಾಣ, ಸಾರ್ವಜನಿಕ ಆಸ್ಪತ್ರೆಗಳು, ಹೆರಿಗೆ ಆಸ್ಪತ್ರೆಗಳು, ರೇಷ್ಮೆ ಬಿತ್ತನೆ ಕೋಠಿ, ಖಾದಿ ಕೇಂದ್ರಗಳು, ಗ್ರಾಮಗಳಲ್ಲಿ ಸಂತೆಗಳ ಪುನಶ್ಚೇತನ ವ್ಯವಸ್ಥೆ, ಗ್ರಾಮಗಳಲ್ಲಿ ಚಾವಡಿ ನಿರ್ಮಾಣ, ಕುಡಿಯುವ ನೀರಿನ ಬಾವಿಗಳು, ಒಳಚರಂಡಿ ವ್ಯವಸ್ಥೆ, ಅಂಚೆ ವ್ಯವಸ್ಥೆ, ಕೆರೆಗಳ ಉಸ್ತುವಾರಿ, ಶಾಲೆಗಳ ನಿರ್ಮಾಣ ಮತ್ತು ನಿರ್ವಹಣೆ, ಗ್ರಾಮ ಅರಣ್ಯಗಳ ಸಂರಕ್ಷಣೆ, ರೈತರಿಗೆ ನೇಗಿಲು ಮತ್ತು ಕೃಷಿ ಉಪಕರಣ ವಿತರಣೆ, ಗ್ರಾಮಗಳಿಗೆ ವೈದ್ಯಕೀಯ ಸೇವೆ ಇತ್ಯಾದಿಗಳು. 1936 ರಲ್ಲಿ ದೆಹಲಿಯಲ್ಲಿ ನಡೆದ "ಅಖಿಲ ಭಾರತ ಸ್ಥಳೀಯ ಸರ್ಕಾರಗಳ ಸಮ್ಮೇಳನ"ದಲ್ಲಿ ಕೆ.ಸಿ.ರೆಡ್ಡಿಯವರು ಭಾಗವಹಿಸಿ ಈ ಸಂಘದ ಸದಸ್ಯತ್ವವನ್ನು ಜಿಲ್ಲಾ ಬೋರ್ಡ್ ಪಡೆಯುವಲ್ಲಿ ಯಶಸ್ವಿಯಾಯಿತು.

ಜನವಾಣಿ ಪತ್ರಿಕೆ ಸಂಪಾದಕತ್ವ :–

ಕೆ.ಸಿ.ರೆಡ್ಡಿ ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಅನಿಬೆಸೆಂಟ್ Y.M.I.A. ನಲ್ಲಿ ವಸತಿ ಮಾಡಿದ್ದರು. ಆಗ ಹಿಂದೂ ಪತ್ರಿಕೆಯ ಬರವಣಿಗೆಗಳಿಂದ ಪ್ರಭಾವಿತರಾಗಿ ತಾನು ಪತ್ರಕರ್ತ ನಾಗಬೇಕೆಂಬ ಬಯಕೆಯಿಂದ ಕೆಲಕಾಲ ವಿದ್ಯಾಭ್ಯಾಸ ತೊರೆದಿದ್ದರು. ಆದರೆ ಅನಿಬೆಸೆಂಟರ ಮಾತಿನಂತೆ ವಿದ್ಯಾಭ್ಯಾಸ ಮುಂದುವರೆಸಿದ್ದರು. 1937ರಲ್ಲಿ ಬಿ.ಎನ್. ಗುಪ್ತ ಹಾಗೂ ಬ್ರಾಹ್ಮಣೇತರ ಯುವನಾಯಕರು ತಮ್ಮ ಪ್ರಜಾ ಸಂಯುಕ್ತ ಪಕ್ಷದ ರಾಜಕೀಯ ಉದ್ದೇಶಗಳನ್ನು ಪ್ರಚಾರ ಮಾಡುವ ಹಿನ್ನೆಲೆಯಲ್ಲಿ ಜನವಾಣಿ ಪತ್ರಿಕೆಯ ಸಂಪಾದಕರಾಗಿ ಕೆ.ಸಿ.ರೆಡ್ಡಿಯವರು ಆರು ತಿಂಗಳುಗಳ ಕಾಲ ಕಾರ್ಯ ನಿರ್ವಹಿಸಿದರು. ಈ ಪತ್ರಿಕೆ ಬೆಂಗಳೂರು ನಗರದಿಂದ ಪ್ರಕಟವಾಗುತ್ತಿತ್ತು. ಇದು ಸಂಜೆ ಪತ್ರಿಕೆಯಾಗಿದ್ದು, ಅದರ ಬೆಲೆ ಕಡಿಮೆ. ಅದರಲ್ಲಿ ಸ್ಥಳೀಯ ವರ್ತಮಾನವೇ ಹೆಚ್ಚು, ಅದರ ಧೋರಣೆ ಸ್ವತಂತ್ರವಾಗಿತ್ತು. ಕೆ.ಸಿ.ರೆಡ್ಡಿ ಸಂಪಾದಕತ್ವದ ಜನವಾಣಿಯು ಸಂಸ್ಥಾನಗಳ ಪ್ರಜೆಗಳ ಹಕ್ಕುಬಾಧ್ಯತೆಗಳಿಗಾಗಿ ಹೊಡೆದಾಡುವ, ಸರ್ಕಾರದ ಅಧಿಕಾರಿಗಳಲ್ಲಿ ಕಂಡು ಬರುತ್ತಿದ್ದ ಲೋಪಗಳನ್ನು, ಅಸಭ್ಯ ಅನ್ಯಾಯ ವರ್ತನೆಗಳನ್ನು ಉಗ್ರವಾಗಿ ಟೀಕಿಸುತ್ತಿತ್ತು. ಪತ್ರಿಕೆಯ ಪ್ರಾಬಲ್ಯದ ಬಗ್ಗೆ ಚರ್ಚಿಸುವ ಸಮಕಾಲೀನ ನಾಯಕರೊಬ್ಬರು "ಸರ್ಕಾರದ ಉನ್ನತಾಧಿಕಾರಿಗಳು ಪ್ರತಿದಿನ ಜನವಾಣಿ ಪತ್ರಿಕೆಯನ್ನು ಓದದೇ ಮಲಗುತ್ತಿರಲಿಲ್ಲ" ಎಂದೂ ವೀರಕೇಸರಿ ಸೀತಾರಾಮಶಾಸ್ತ್ರಿಗಳ ಪ್ರಕಾರ "ಕೆ.ಸಿ.ರೆಡ್ಡಿ ಸಂಪಾದಕರಾಗಿದ್ದ ಕೆಲವು ತಿಂಗಳುಗಳು ಹೆಸರಿಗೆ ಮಾತ್ರವಲ್ಲ, ಪತ್ರಿಕಾಲಯದಲ್ಲಿ ಕುಳಿತು ರಾತ್ರಿ ಹಗಲು ಕೆಲಸ ಮಾಡುತ್ತಿದ್ದರು" ಎಂದು ಶ್ಲಾಘಿಸಿದ್ದಾರೆ.

ಗಣಿಕಾರ್ಮಿಕರ ನಾಯಕ :– ಕೋಲಾರ ಜಿಲ್ಲೆಯ ಕ್ಯಾಸಂಬಳ್ಳಿ ಯವರಾದ ಕೆ.ಸಿ. ರೆಡ್ಡಿಯವರಿಗೆ ಚಿನ್ನದಗಣಿ ಕಾರ್ಮಿಕರ ಸಮಸ್ಯೆಯನ್ನು ತಮ್ಮ ವಿದ್ಯಾರ್ಥಿದೆಸೆಯಿಂದಲೂ ಗಮನಿಸುತ್ತಿದ್ದರು. ಸು.ಮೂವತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದ ಕೋಲಾರದ ಚಿನ್ನದ ಗಣಿ ಉದ್ಯಮವು ಬ್ರಿಟಿಷರ ಖಾಸಗಿ ಬಂಡವಾಳಗಾರರ ಒಡೆತನದಲ್ಲಿದ್ದು, ಸರ್ಕಾರ ಗಣಿ ಮಾಲೀಕರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿತ್ತು. 1930 ರಲ್ಲಿ ಗಣಿ ಕಾರ್ಮಿಕರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳಿಂದ ರೋಸಿ ಹೋಗಿ ಗಣಿ ಮಾಲೀಕರಿಂದ ತಮಗಾಗುತ್ತಿರುವ ಕಿರುಕುಳ, ಅನ್ಯಾಯಗಳ ವಿರುದ್ಧ ಏಪ್ರಿಲ್ 7 ಮತ್ತು ಏಪ್ರಿಲ್ 24 ರಂದು ಗಲಭೆಗಳು ಆಗಿ ಗೋಲಿಬಾರ್ ಮಾಡಲಾಯಿತು. ಇದು ಅನೇಕ ಕಾರ್ಮಿಕರ ಸಾವಿಗೆ ಕಾರಣವಾದರೇ, ಹಲವರು ಗಾಯಗೊಂಡರು. ಇದೇ ಕಾಲಕ್ಕೆ ಕೆ.ಸಿ.ರೆಡ್ಡಿಯವರು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು

ನ್ಯಾಯವಿಧಾಯಕ ಸಭೆಗಳಿಗೆ ಏಕಕಾಲಕ್ಕೆ ಆಯ್ಕೆಯಾಗಿದ್ದರು. ಕೆ.ಜಿ.ಎಫ್. ಗಲಭೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕರ ಸಮಸ್ಯೆಗಳನ್ನು ಮೊದಲ ಬಾರಿಗೆ ಕೆ.ಸಿ.ರೆಡ್ಡಿಯವರು ಪ್ರಬಲವಾಗಿ ಪ್ರಸ್ತಾಪಿಸಿದರು. ಇದರಿಂದ ಎಚ್ಚೆತ್ತ ಸರ್ಕಾರ ಎಂ.ಎ. ಶ್ರೀನಿವಾಸನ್‌ರನ್ನು ಗಣಿ ಕಾರ್ಮಿಕರ ಸಮಸ್ಯೆಯನ್ನು ಅಧ್ಯಯನ ಮಾಡಲು ನೇಮಿಸಿದರು.

1936 ರಲ್ಲಿ ಗಾಂಧೀಜಿ ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಲು ಕೆ.ಸಿ.ರೆಡ್ಡಿ ಆಯೋಜಿಸಿದ್ದರು. ಗಾಂಧೀಜಿಯವರನ್ನು ಗಣಿ ಕಾರ್ಮಿಕರು ವಾಸಿಸುವ ಚಿನ್ನದ ಗಣಿ ಪ್ರದೇಶಕ್ಕೆ ಕರೆದುಕೊಂಡು ಬಂದರು. ಕಾರ್ಮಿಕರ ವಾಸದ ಸ್ಥಳಗಳು, ಕಡುಬಡತನ, ಗುಡಿಸಲುಗಳು ಬಹುಚಿಕ್ಕವು, ಚಾವಣಿ ತುಂಬಾ ತಗ್ಗು, ಸಾಕಷ್ಟು ಬೆಳಕಿಲ್ಲ, ಮನುಷ್ಯರ ವಾಸಕ್ಕೆ ಯೋಗ್ಯವಲ್ಲ. ಗಾಂಧೀಜಿ ನೋವನ್ನು ವ್ಯಕ್ತಪಡಿಸಿದರು.

ಕೆ.ಸಿ. ರೆಡ್ಡಿಯವರು ಗಣಿಪ್ರದೇಶದಲ್ಲಿದ್ದ ಕಾರ್ಮಿಕರ ಚಾಂಪಿಯನ್ ರೀಫ್ ಮೈನ್ಸ್ ಲೇಬರ್ ಅಸೋಸಿಯೇಷನ್, ಅಜಾದ್ ಯೂತ್ ಲೀಗ್, ಕೆ.ಸಿ.ಆರ್. ಯೂತ್ ಲೀಗ್, ಟಿಳಕ್ ವಾಲಿಬನ್ ಲೀಗ್ ಮುಂತಾದ ಸಂಘಗಳ ಅಧ್ಯಕ್ಷರು ಆಗಿದ್ದರು. 1946 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ "ಅಂತರಾಷ್ಟ್ರೀಯ ಗಣಿ ಕಾರ್ಮಿಕರ ಸಮ್ಮೇಳನ" ದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ ಭಾರತದಲ್ಲಿ ಗಣಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸುವ ಮೂಲಕ ವಿದೇಶಿಯರಲ್ಲಿ ಅರಿವು ಮೂಡಿಸಿದ್ದಾರೆ"

ಸಂಸದೀಯ ಪ್ರಬುದ್ಧ ನಾಯಕ :– ಮೈಸೂರು ಭಾರತದಲ್ಲಿಯೇ ಅತ್ಯಂತ ದೀರ್ಘಾವಧಿ ಸಂಸದೀಯ ಇತಿಹಾಸ ಹೊಂದಿರುವ ರಾಜ್ಯವಾಗಿತ್ತು. ಕೆ.ಸಿ.ರೆಡ್ಡಿ ಸು. ಇಪ್ಪತ್ತು ವರ್ಷಗಳ ಕಾಲ ಇದನ್ನು ಪ್ರತಿನಿಧಿಸಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆ (M.R.A.) ಗೆ 1930–1933, 1933–1936, 1941–1945, 1950–1952 ರ ಅವಧಿ ಗಳಲ್ಲಿ ಆಯ್ಕೆಯಾಗಿದ್ದಾರೆ. ಮೈಸೂರು ನ್ಯಾಯವಿಧಾಯಕ ಸಭೆ (M.L.C.) ಗೆ 1930–1932, 1932–1934, 1934–1936, 1936–1937, 1945–1949 ರ ಅವಧಿಗಳಲ್ಲಿ ಆಯ್ಕೆಯಾಗಿದ್ದಾರೆ. ಈ ಎರಡು ಸಭೆಗಳಲ್ಲಿ ಪ್ರಜಾಪಕ್ಷ, ಪ್ರಜಾಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರು ಆಗಿ ಆಯ್ಕೆಯಾಗಿದ್ದಾರೆ. ಈ ಅವಧಿಗಳಲ್ಲಿ ಸು. ಐವತ್ತಕ್ಕೂ ಹೆಚ್ಚು ಸಮಿತಿಗಳಲ್ಲಿ ಸದಸ್ಯರಾಗಿ ಆಯ್ಕೆಯಾಗಿ ಮೈಸೂರು ಸಂಸ್ಥಾನಕ್ಕೆ ದೀರ್ಘ ಸೇವೆ ಸಲ್ಲಿಸಿದ್ದಾರೆ. ಇದು ಕೆ.ಸಿ.ರೆಡ್ಡಿಯವರ ವ್ಯಕ್ತಿತ್ವ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕೆ.ಸಿ. ರೆಡ್ಡಿ : ಭಾರತದಲ್ಲಿ ಸ್ವಾತಂತ್ರಕ್ಕಾಗಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೇಸ್ ಹೋರಾಟವನ್ನು ಹೆಚ್ಚಿಸುತ್ತಾ ಬಂದಂತೆ, ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿದ್ದ ದೇಶೀಯ ಸಂಸ್ಥಾನ (ಸು. 600) ಗಳಲ್ಲೇ

ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಹೋರಾಟಕ್ಕಿಳಿದು ಇತರೆ ಸಂಸ್ಥಾನಗಳಿಗೆ ಮಾರ್ಗದರ್ಶಿಯಾಯಿತು.

ಸಂಸ್ಥಾನದಲ್ಲಿ ಗಾಂಧೀಜಿ ಆಗಮನಕ್ಕಿಂತ ಮೊದಲೇ ಗೋಖಲೆ, ತಿಲಕ್, ಅನಿಬೆಸೆಂಟ್‌ರ ಪ್ರಭಾವದಿಂದ ರಾಷ್ಟ್ರೀಯತೆ, ಸ್ವಾತಂತ್ರ್ಯ ಪರಿಕಲ್ಪನೆ ಮೂಡಿ ವಿದ್ಯಾವಂತರು, ವಿಚಾರವಂತರು ಭಾರತದಾದ್ಯಂತ ನಡೆಯುತ್ತಿದ್ದ ವಿದ್ಯಮಾನಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲು ಆರಂಭಿಸಿದರು. 1920 ರ ನಾಗಪುರ ಅಧಿವೇಶನದಲ್ಲಿ ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ "ದೇಶೀಯ ಸಂಸ್ಥಾನಗಳಲ್ಲೂ ಕಾಂಗ್ರೆಸ್ ಸಮಿತಿಗಳನ್ನು ರಚಿಸಿಕೊಳ್ಳಲು ಅನುಮತಿ ನೀಡಿತು". ಅದರಂತೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆ ಹುಟ್ಟಿಗೆ ಕಾರಣವಾಗಿ ಇದರ ಶಾಖೆ ಸಂಸ್ಥಾನದಲ್ಲಿ "ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ" 1921 ರಲ್ಲಿ ಎಸ್.ಎಸ್.ಸೆಟ್ಲೂರ್ [ನಿವೃತ್ತ ನ್ಯಾಯಾಧೀಶ] ರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಹೀಗೆ ಆರಂಭವಾದ ಕಾಂಗ್ರೆಸ್ ಪಯಣ ಮೈಸೂರು ಸ್ಟೇಟ್ ಕಾಂಗ್ರೆಸ್ (1928) ಆಗಿ, ಮೈಸೂರು ಕಾಂಗ್ರೆಸ್ ಬೋರ್ಡ್‌ಗೆ (1937) ಟಿ.ಸಿದ್ದಲಿಂಗಯ್ಯ ಮೊದಲ ಅಧ್ಯಕ್ಷರಾದರು.

1937 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್, ಬ್ರಾಹ್ಮಣೇತರ ಪಕ್ಷವಾದ ಪ್ರಜಾಸಂಯುಕ್ತ ಪಕ್ಷದ ಎದುರು ಹೀನಾಯ ಸೋಲು ಅನುಭವಿಸಿತು. ಇದರಿಂದ ಆತ್ಮಾವಲೋಕನಕ್ಕೆ ತುತ್ತಾದ ಕಾಂಗ್ರೆಸ್ ನಾಯಕರು ಪ್ರಜಾಸಂಯುಕ್ತ ಪಕ್ಷದ ನಾಯಕ ಕೆ.ಸಿ.ರೆಡ್ಡಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಜೊತೆ ಕೈಜೋಡಿಸಲು ಕೇಳಿಕೊಂಡರು. ಕೆ.ಸಿ.ರೆಡ್ಡಿ ಮೊದಲಿನಿಂದಲೂ ಗಾಂಧೀಜಿಯ ಅನುಯಾಯಿಯಾಗಿದ್ದು, ಅವರ ರಚನಾತ್ಮಕ ಕಾರ್ಯಕ್ರಮಗಳನ್ನು ತಮ್ಮ ಬ್ರಾಹ್ಮಣೇತರ ಪಕ್ಷದಲ್ಲೂ ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದರು. ರಾಷ್ಟ್ರೀಯವಾದಿ ಮನೋಭಾವ ಹೊಂದಿದ್ದ ಅತ್ಯಂತ ಸೂಕ್ಷ್ಮಮತಿ ಕೆ.ಸಿ.ರೆಡ್ಡಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಜನತೆಯನ್ನು ಪ್ರೇರೇಪಿಸಿ ಹೋರಾಟಕ್ಕೆ ಇಳಿಯಲು ದೊರೆತ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಇಡೀ ಪ್ರಜಾಸಂಯುಕ್ತ ಪಕ್ಷವೇ 1937 ಅಕ್ಟೋಬರ್ 16 ರಂದು ಕಾಂಗ್ರೆಸ್‌ನಲ್ಲಿ ವಿಲೀನವಾಗಲು ಕಾರಣರಾದರು.

ಕೆ.ಸಿ.ರೆಡ್ಡಿ 1937-1947 ರವರೆಗೆ ಕಾಂಗ್ರೆಸ್‌ನಲ್ಲಿ ಮುಂಚೂಣಿ ನಾಯಕರಾಗಿ "ಮೈಸೂರು ಕಾಂಗ್ರೆಸ್ ಪಕ್ಷ"ವನ್ನು ಸ್ಥಾಪಿಸಿ ಸಂಸ್ಥಾನದಾದ್ಯಂತ ಆರು ಧ್ವಜಸತ್ಯಾಗ್ರಹಗಳನ್ನು ಶಿವಪುರ-1938, ವಿಧುರಾಶ್ವತ್ಥ-1939, ಶಿವಮೊಗ್ಗ-1940,

ಹರಿಹರ–1941, ಚನ್ನಪಟ್ಟಣ–1942, ಬೆಂಗಳೂರು–1946 ಮತ್ತು ಮೂರು ವಿಶೇಷ ಅಧಿವೇಶನಗಳನ್ನು ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬಂಗಾರಪೇಟೆಗಳಲ್ಲಿ ಆಯೋಜಿಸಿ ಜನಸಾಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿ ಸ್ವಾತಂತ್ರ್ಯ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರು ಕಾಂಗ್ರೆಸ್ 1938 ಏಪ್ರಿಲ್ 11, 12, 13 ರಂದು ಇಂದಿನ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಧ್ವಜಸತ್ಯಾಗ್ರಹವನ್ನು ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರ ಐದು ಮೈಲಿ ವಿಸ್ತೀರ್ಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಏಪ್ರಿಲ್ 12 ರಂದು ಕೆ.ಸಿ.ರೆಡ್ಡಿ ವೇದಿಕೆಗೆ ಆಗಮಿಸಿ "ತಾವು ಧ್ವಜಾರೋಹಣ ಮಾಡುವುದಾಗಿ ಘೋಷಿಸಿ, ಧ್ವಜಾರೋಹಣವನ್ನು ಮಾಡಿದರು, ಧ್ವಜದಲ್ಲಿ ಕಟ್ಟಲಾಗಿದ್ದ ಬಣ್ಣ ಬಣ್ಣದ ಹೂಗಳು ಚೆಲ್ಲಿ ತ್ರಿವರ್ಣಧ್ವಜ ಹಾರಾಡಿದ ತಕ್ಷಣ ಮೂವತ್ತು ಸಾವಿರಕ್ಕೂ ಹೆಚ್ಚಾಗಿದ್ದ ಜನಸ್ತೋಮವು ಸಂತೋಷದಿಂದ ಕರತಾಡನ ಮಾಡಿದರು. ಜಯಘೋಷಣೆಗಳು ಮೊಳಗಿದವು. ಟಿ.ಸುನಂದಮ್ಮ ವಂದೇ ಮಾತರಂ ಗೀತೆ ಹಾಡಿದರು. ಆಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದಕ್ಕಾಗಿ ಕೆ.ಸಿ.ರೆಡ್ಡಿಯವರನ್ನು ಪೊಲೀಸರು ಬಂಧಿಸಿದರು. ನ್ಯಾಯಾಲಯ ಮೂರು ತಿಂಗಳು ಸಾದಾ ಸಜೆ ಹಾಗೂ ಇನ್ನೂರು ರೂ. ದಂಡ ವಿಧಿಸಿತು. ದಂಡ ತಪ್ಪಿದರೆ ಇಪ್ಪತ್ತು ದಿನಗಳ ಹೆಚ್ಚಿನ ಶಿಕ್ಷೆಯನ್ನು ಅನುಭವಿಸುವಂತೆ ಆದೇಶಿಸಲಾಯಿತು".

ಎಲ್.ಎಸ್. ರಾಜು ಅವರು ಶಿವಪುರ ಅಧಿವೇಶನ ಯಶಸ್ಸು ಪೂರ್ಣ ಗೌರವ ಕೆ.ಸಿ.ರೆಡ್ಡಿ ಅವರಿಗೆ ಸಲ್ಲಬೇಕು ಎಂದು ಹೇಳಿ "ಕೆ.ಸಿ.ರೆಡ್ಡಿ ಅವರು ಕಾಂಗ್ರೆಸ್‌ಗೆ ಅದ್ಭುತವಾದ ಸೇವೆ ಮಾಡಿದ್ದಾರೆ, ಅವರು ಮಾಡಿರುವ ಇನ್ನೊಂದು ದೊಡ್ಡ ಸೇವೆಗಾಗಿ ಮೈಸೂರು ರಾಜಕೀಯ ಇತಿಹಾಸದಲ್ಲಿ ಅವರು ಹೆಸರು ಬಹುಕಾಲ ಸ್ಮರಣೆಯಲ್ಲಿರುವುದು ಖಂಡಿತ. ಮೈಸೂರು ಸಂಸ್ಥಾನದ ಪ್ರಜಾಸಂಯುಕ್ತ ಪಕ್ಷವನ್ನು ಮೈಸೂರು ಸ್ಟೇಟ್ ಕಾಂಗ್ರೆಸ್‌ನೊಡನೆ ಸಂಗಮ ಮಾಡಿದವರೇ ಅವರು. ಈ ಸಂಗಮವು ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಸ್ಥಾಪನೆಯಾಗಬೇಕಾದ ಜವಾಬ್ದಾರಿ ಸರ್ಕಾರದ ಚಳುವಳಿಗೆ ಒಂದು ನೂತನ ರೂಪವನ್ನೂ, ಹುರುಪನ್ನು ಕೊಟ್ಟಿತು" ಎಂದು ಶ್ಲಾಘಿಸಿದ್ದಾರೆ.

ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರಿನ ವಿಧುರಾಶ್ವತ್ಥದಲ್ಲಿ 1938 ರ ಏಪ್ರಿಲ್ 25 ರಂದು ಗೋಲಿಬಾರ್ ನಡೆದ ಸಮಯದಲ್ಲಿ ಕೆ.ಸಿ.ರೆಡ್ಡಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಂಧಿತರಾಗಿದ್ದರು. ಗೋಲಿಬಾರ್ ವಿಚಾರಣಾ ಸಮಿತಿ

ಅಧ್ಯಕ್ಷರಾದ ವೇಪಾರಮೇಶಂ ವರದಿ (MAY-6) ಯಲ್ಲಿ "ಕೆ.ಸಿ.ರೆಡ್ಡಿಯವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ 1937 ನವೆಂಬರ್ 3 ರಿಂದ 1938 ಏಪ್ರಿಲ್ 3 ರವರೆಗೆ ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಕೋಲಾರ, ಮಾಲೂರು ನಗರಗಳಲ್ಲಿ ಪ್ರವಾಸ ಮಾಡಿ ಸರ್ಕಾರದ ವಿರುದ್ಧ ಮಾಡಿರುವ ಪ್ರಚೋದನಕಾರಿ ಭಾಷಣಗಳಿಂದ ಪ್ರೇರಿತಗೊಂಡ ಈ ಜಿಲ್ಲೆಗಳ ಜನತೆಯು ಈ ದುರಂತ ನಡೆಸಲು ಕಾರಣವಾಯಿತು" ಎಂದು ಆಪಾದಿಸಿದ್ದು, ಮೈಸೂರು ಕಾಂಗ್ರೆಸ್ ನಾಯಕರ ಕೋಪಕ್ಕೆ ಕಾರಣವಾಯಿತು. ಆ ನಂತರ ನಡೆದ ಬೆಳವಣಿಗೆಗಳಿಂದ ಮೈಸೂರು ಕಾಂಗ್ರೆಸ್ ನಾಯಕರಾದ ಕೆ.ಸಿ.ರೆಡ್ಡಿ 1938 ಆಗಸ್ಟ್ 5 ರಂದು ರಾಜಕೀಯ ಸುಧಾರಣಾ ಸಮಿತಿಗೆ ಪತ್ರ ಬರೆದು "ಮೈಸೂರು ಕಾಂಗ್ರೆಸ್, ಮೈಸೂರು ಸರ್ಕಾರ ಸ್ಥಾಪಿಸಿರುವ ರಾಜಕೀಯ ಸುಧಾರಣಾ ಸಮಿತಿಗೆ ಸರ್ಕಾರ ನೀಡಲು ಸಂಪೂರ್ಣ ಒಪ್ಪಿಕೊಂಡಿದೆ. ಈ ಸಮಿತಿಯು ರಾಜಕೀಯ ಸುಧಾರಣೆಗಳನ್ನು ಮಾಡಲು ಸಲಹೆಗಳನ್ನು ನೀಡುವುದರೊಂದಿಗೆ ಮೈಸೂರು ಮಹಾರಾಜರ ಅಧೀನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಲಹೆ ನೀಡುವುದೆಂದು ನಂಬಿದ್ದೇವೆ" ಎಂದಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನ ವಿಧುರಾಶ್ವತ್ಥದಲ್ಲಿ ಮೈಸೂರು ಕಾಂಗ್ರೆಸ್‌ನ ಎರಡನೆಯ ಧ್ವಜಸತ್ಯಾಗ್ರಹ ಹೆಚ್.ಸಿ.ದಾಸಪ್ಪ ಅಧ್ಯಕ್ಷತೆಯಲ್ಲಿ 1939 ಏಪ್ರಿಲ್ 15, 16, 17 ರಂದು ನಡೆಯಿತು. ಈ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕೃತವಾದ ಹದಿಮೂರು ನಿರ್ಣಯಗಳಲ್ಲಿ ಕೆ.ಸಿ.ರೆಡ್ಡಿಯ 7ನೇ ಮತ್ತು 13ನೇ ನಿರ್ಣಯದಂತೆ "ಮಹಾತ್ಮಗಾಂಧೀಜಿಯವರು ದೇಶೀಯ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳುವಳಿಯ ಮಾರ್ಗದರ್ಶತ್ವವನ್ನು ವಹಿಸಿಕೊಂಡಿರುವುದು ಬಹಳ ಉತ್ತೇಜಕರವಾದುದೆಂದು ಈ ಅಧಿವೇಶನ ಭಾವಿಸುತ್ತದೆ. ಅವರ ಮಾರ್ಗದರ್ಶಕತ್ವದಲ್ಲಿ ಶೀಘ್ರದಲ್ಲಿಯೇ ದೇಶೀಯ ಸಂಸ್ಥಾನಗಳಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗಿ ಸ್ವತಂತ್ರ ಭಾರತೋದಯಕ್ಕೆ ಸಹಾಯಕವಾಗುವುದೆಂದು ಈ ಅಧಿವೇಶನವು ಭರವಸೆಯುಳ್ಳದ್ದಾಗಿದೆ" ಎಂದಿದೆ. ಮುಂದುವರೆದು "ಜನಸಾಮಾನ್ಯರ ಸ್ಥಿತಿಗತಿಗಳು ಉತ್ತಮವಾಗಬೇಕಾದರೆ ಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗಬೇಕೆಂದು ಇದಕ್ಕಾಗಿ ಹನ್ನೆರಡು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿ, ನ್ಯಾಯವಾದ ತೆರಿಗೆಗಳಪದ್ಧತಿ, ಆಡಳಿತವೆಚ್ಚ ಕಡಿಮೆ, ಭೂ ಕಂದಾಯವನ್ನು ಕಡಿಮೆ ಮಾಡುವುದು, ಸಾಕಾದಷ್ಟು ಉತ್ಪನ್ನವಿಲ್ಲದ ಜಮೀನಿನ ಕಂದಾಯ ಮನ್ನಾ, ಮದ್ಯಪಾನ ವಿರೋಧ, ವ್ಯವಸಾಯ ಅಭಿವೃದ್ಧಿ, ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ, ಮೂಲ ಕೈಗಾರಿಕೆಗಳ ವೃದ್ಧಿ, ಹಳ್ಳಿಗಾಡಿನ ಜನರ

ಉದ್ಧಾರಕ್ಕಾಗಿ ಅನ್ಯಾಯವೂ, ಲಾಭದಾಯಕವಲ್ಲದ್ದೂ, ನಾನಾ ರೀತಿಯ ಅರಣ್ಯ ಶುಲ್ಕ ರದ್ದು ಮಾಡುವುದು, ಕಿರುಕುಳಗಳನ್ನು ಕೊಡುವ ನಿರ್ಬಂಧ ತೆಗೆದು ಹಾಕುವುದು, ಸಾಲದ ಮೊತ್ತವನ್ನು ತೀರಿಸಲು ಸೂಕ್ತ ಕ್ರಮ, ಪ್ರಾಥಮಿಕ ಶಿಕ್ಷಣ ಕಡ್ಡಾಯ, ಪ್ರಾಪ್ತ ವಯಸ್ಕರ ನಿರಕ್ಷರತೆ ನಿರ್ಮೂಲನೆ, ಆಡಳಿತ ಶಾಖೆಗಳಲ್ಲಿ ಲಂಚ ತೊಡೆದು ಹಾಕುವುದು. ಇತ್ಯಾದಿ"

ಮೈಸೂರು ಕಾಂಗ್ರೆಸ್ 1939 ರ ಆಗಸ್ಟ್ 1 ರಲ್ಲಿ ಸಂಸ್ಥಾನದ ನಾನಾ ಕಡೆ ರೈತರ ಸಭೆಗಳನ್ನು ನಡೆಸುತ್ತಿದ್ದ ವೇಳೆ ಕೆ.ಸಿ.ರೆಡ್ಡಿ, ಕೆ.ಸಂಪಂಗಿರಾಮಯ್ಯ, ಕೆ.ಹೆಂಜೆರಪ್ಪ ಮುಂತಾದ ಮುಖಂಡರನ್ನು ಚಳ್ಳಕೆರೆಯಲ್ಲಿ ರೈತರು ಮೆರವಣಿಗೆಯಲ್ಲಿ ಭಾಜಭಜಂತ್ರಿಗಳೊಂದಿಗೆ ಪ್ರತಿಬಂಧಕಾಜ್ಞೆಯನ್ನು ಧಿಕ್ಕರಿಸಿ ಕರೆದೊಯ್ದು ಸತ್ಕರಿಸಿದರು. ಇದೇ ತಿಂಗಳ 14 ರಂದು ಕೋಲಾರ ಜಿಲ್ಲೆ ಕೆ.ಜಿ.ಎಫ್. ನಲ್ಲಿ ಮೈಸೂರು ಕಾಂಗ್ರೆಸ್ ಸಭೆ ನಡೆಸಲು ನಿರ್ಧರಿಸಿದ್ದರಿಂದ ಜಿಲ್ಲಾ ನ್ಯಾಯಾಧೀಶರು ರಾಬರ್ಟ್‌ಸನ್‌ಪೇಟೆಯ ಐದು ಮೈಲಿ ಸರಹದ್ದಿನೊಳಗೆ ಪ್ರತಿ ಬಂಧಕಾಜ್ಞೆ ವಿಧಿಸಿತ್ತು. ಇದನ್ನು ಉಲ್ಲಂಘಿಸಿ ಕೆ.ಸಿ.ರೆಡ್ಡಿ, ಹೆಚ್.ಕೆ. ವೀರಣ್ಣಗೌಡ, ಹೆಚ್.ಸಿ.ದಾಸಪ್ಪ ಮುಂತಾದ ಹದಿಮೂರು ಜನರನ್ನು ದಸ್ತಗಿರಿ ಮಾಡಿ ಮೂರು ತಿಂಗಳು ಕಠಿಣಸಜೆ ವಿಧಿಸಿ, ಕೆ.ಜಿ.ಎಫ್. ಜೈಲಿಗೆ ಕಳುಹಿಸಲಾಯಿತು. ಇದನ್ನು ಹಿಂದೂ, ವಿಶ್ವಕರ್ನಾಟಕ, ತಾಯಿನಾಡು, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಸರ್ಕಾರದ ಕ್ರಮವನ್ನು ಟೀಕಿಸಿದೆವು.

1939 ರಲ್ಲಿ ಮೈಸೂರು ಕಾಂಗ್ರೆಸ್‌ನ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ ಮುಂತಾದವರು ಮಹಾತ್ಮಗಾಂಧೀಜಿ ಸಲಹೆ-ಸೂಚನೆ ಪಡೆಯಲು ವಾರ್ಧಾಕ್ಕೆ ಬೇಟಿ ನೀಡಿ ಸಂಸ್ಥಾನದ ರಾಜಕೀಯ ಬದಲಾವಣೆಗಳನ್ನು ವಿವರಿಸಿದ್ದರೂ ಒಪ್ಪದೆ, ಮಹದೇವ ದೇಸಾಯಿಯನ್ನು ಕಳುಹಿಸಿ ಪ್ರತ್ಯೇಕ್ಷ ವರದಿ ಸಲ್ಲಿಸಿದ ನಂತರ ಕಾಂಗ್ರೆಸ್ ನಾಯಕರ ಮಾತನ್ನು ಒಪ್ಪಿದ ಗಾಂಧೀಜಿ ಮೈಸೂರು ಕಾಂಗ್ರೆಸ್ ಪಕ್ಷಕ್ಕೆ ಜನಬೆಂಬಲ ಇಲ್ಲವೆಂದು ಸರ್ಕಾರದವರು ತಿಳಿದಿರುವುದರಿಂದ ಸತ್ಯಾಗ್ರಹ ಯಶಸ್ವಿಯಾಗಿ ನಡೆದಿರುವುದರಿಂದ ಅದನ್ನು ನಿಲ್ಲಿಸಿ ಚುನಾವಣೆಗಳಲ್ಲಿ ಭಾಗವಹಿಸುವುದು ಸೂಕ್ತವೆಂದು ಸಲಹೆ ಮಾಡಿದರು". 1940 ರ ಆರಂಭದಲ್ಲಿ ಕೆ.ಸಿ. ರೆಡ್ಡಿ ಮಾತಾಡಿ "ಗಾಂಧೀಜಿ ಅವರ ಸಲಹೆಯಂತೆ ಸಂಸ್ಥಾನದಲ್ಲಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಸಂಸದೀಯ ಚಟುವಟಿಕೆಗಳನ್ನು ಹಾಗೂ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ಸರ್ಕಾರವು ಕಾಂಗ್ರೆಸ್ ಬಗೆಗಿನ ಧೋರಣೆಯನ್ನು ಬದಲಿಸದಿರುವುದರಿಂದ ಕಾಂಗ್ರೆಸ್ ಅನ್ನು ಸಮರ್ಥವಾಗಿ ಮುನ್ನಡೆಸಬಲ್ಲ, ಕಾಂಗ್ರೆಸ್‌ನ ಜವಾಬ್ದಾರಿಯನ್ನು ಹೊರಬಲ್ಲವರೆಂದರೆ ಕೆ.ಟಿ.ಭಾಷ್ಯಂ ಅವರೊಬ್ಬರೇ ಆದ್ದರಿಂದ

ಕಾಂಗ್ರೆಸ್ ಅಧ್ಯಕ್ಷರ ಸ್ಥಾನಕ್ಕೆ ನಾನು (ಕೆ.ಸಿ.ರೆಡ್ಡಿ) ಕೆ.ಟಿ.ಭಾಷ್ಯಂ ಅವರ ಹೆಸರನ್ನು ಸೂಚಿಸುತ್ತೇನೆ" ಎಂದು ಹೇಳಿದರು. ಶಿವಮೊಗ್ಗದಲ್ಲಿ ನಡೆಸಲು ಉದ್ದೇಶಿಸಲಿದ್ದ ಮೈಸೂರು ಕಾಂಗ್ರೆಸ್‌ನ ಮೂರನೆ ಅಧಿವೇಶನಕ್ಕೆ ಕೆ.ಟಿ.ಭಾಷ್ಯಂ ಆಯ್ಕೆಗೊಂಡರು.

ಮೈಸೂರು ಸಂಸ್ಥಾನದಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಸರ್ಕಾರ ಹೆಜ್ಜೆ ಹೆಜ್ಜೆಗೂ ತೊಂದರೆಯನ್ನುಂಟು ಮಾಡಿದರೂ 173 ಸ್ಥಾನಗಳಿಗೆ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸಿ 119 ಸ್ಥಾನಗಳನ್ನು ಗೆದ್ದುಕೊಂಡಿತು. 39 ಸ್ಥಾನಗಳಿಗೆ ಪ್ರತಿಸ್ಪರ್ಧಿಗಳೇ ಇರಲಿಲ್ಲ. ನಂತರ ನಡೆದ ಪುರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನ ಪಡೆದಿದ್ದರಿಂದ ಕೋಪಗೊಂಡ ದಿವಾನ್ ಮಿರ್ಜಾ ಇಸ್ಮಾಯಿಲ್ ಗ್ರಾಮಾಧಿಕಾರಿಗಳಾದ ಶಾನುಭೋಗರು, ಪಟೇಲರು ಕೆಲವು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡರು ಅಲ್ಲದೆ ಕಾಂಗ್ರೆಸ್‌ನ ಕೆ.ಸಿ.ರೆಡ್ಡಿ, ಹೆಚ್.ಸಿ. ದಾಸಪ್ಪ, ಕೆ.ಟಿ. ಭಾಷ್ಯಂ ಕೆ.ಪಟ್ಟಾಭಿರಾಮನ್ ಮುಂತಾದ ಒಂಭತ್ತು ಜನರ ವಕೀಲರ ಸನ್ನದುಗಳನ್ನು "ಲೀಗಲ್ ಪ್ರಾಕ್ಟಿಷನರ್ ಕಾಯಿದೆ" ಪ್ರಕಾರ ಇವರ ಹೆಸರುಗಳನ್ನು ವಕೀಲರ ಪಟ್ಟಿಯಿಂದ ತೆಗೆಯಬೇಕೆಂದೂ, ಇವರು ಯಾವ ನ್ಯಾಯಾಲಯದಲ್ಲಿಯೂ ಯಾವುದೇ ವಕಾಲತ್ತು ವಹಿಸಕೂಡದೆಂದು ಹೈಕೋರ್ಟ್‌ನ ನ್ಯಾಯಾಧೀಶ ಸರ್.ಡಿ. ಅರ್ಸಿರೈಲಿ ಆದೇಶ ಹೊರಡಿಸಿದರು. ಸ್ವತಃ ಮಹಾತ್ಮ ಗಾಂಧೀಜಿ ನ್ಯಾಯಾದೀಶರ ಈ ಕ್ರಮವನ್ನು ಟೀಕಿಸಿ ಹರಿಜನ ಪತ್ರಿಕೆಯಲ್ಲಿ ಲೇಖನ ಬರೆದು "ಮೈಸೂರು ನ್ಯಾಯಸ್ಥಾನದ ನ್ಯಾಯಮೂರ್ತಿಗಳು ಮೈಮೇಲೆ ಪ್ರಜ್ಞೆ ಇಲ್ಲದೆ ತೀರ್ಮಾನ ಕೊಟ್ಟಿದ್ದಾರೆ. ಇದರಿಂದಾಗಿ ಮೈಸೂರು ಪ್ರಜೆಗಳ ದೃಷ್ಟಿಯಲ್ಲಿ ವಕೀಲರು ಮತ್ತಷ್ಟು ದೊಡ್ಡವರೆನಿಸಿಕೊಂಡಿದ್ದಾರೆ. ಪೂರ್ವಗ್ರಹ ಪೀಡಿತರಾದ ನ್ಯಾಯಮೂರ್ತಿಗಳ ಘನತೆ ನಷ್ಟವಾಗಿದೆ ಎಂದು ಧೈರ್ಯವಾಗಿ ಹೇಳುತ್ತೇನೆ." ಎಂದಿದ್ದಾರೆ.

1940 ರಲ್ಲಿ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಕೆ.ಸಿ. ರೆಡ್ಡಿ ಅವರನ್ನು ಸಂಸ್ಥಾನದಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಿಂದ ಉಂಟಾಗಿರುವ ರಾಜಕೀಯ ಉದ್ರಿಗ್ಧ ಪರಿಸ್ಥಿತಿಯನ್ನು ಮಹಾತ್ಮ ಗಾಂಧೀಜಿಗೆ ಕೂಲಂಕಷವಾಗಿ ತಿಳಿಸಿಸಲು ಕಳುಹಿಸಿತು. ಅದರಂತೆ "ನಾನು ಗಾಂಧೀಜಿಯ ಆಶ್ರಮದಲ್ಲಿ ಎರಡು ತಿಂಗಳು ಕಾಲ ಇದ್ದು, ಮಿರ್ಜಾ ಇಸ್ಮಾಯಿಲ್ ಅವರು ಗಾಂಧೀಜಿ ಅವರಲ್ಲಿ ಉಂಟು ಮಾಡಿದ್ದ ಅಭಿಪ್ರಾಯವನ್ನು ಬದಲಾಯಿಸಲು ಸಾಧ್ಯವಾಯಿತು" ಎಂದಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮರಣ ನಂತರ ಜಯಚಾಮರಾಜ ಒಡೆಯರ್ ಪಟ್ಟಾಭಿಷಕ್ತರಾದರು. ದಿವಾನ್ ಮಿರ್ಜಾ ಇಸ್ಮಾಯಿಲ್ ರಾಜೀನಾಮೆ

ನೀಡಿದರು. ಮೈಸೂರು ಕಾಂಗ್ರೆಸ್‌ನ ನಾಲ್ಕನೆಯ ಅಧಿವೇಶನ ಹರಿಹರದಲ್ಲಿ 1941 ರಲ್ಲಿ ಹೆಚ್.ಸಿದ್ದಯ್ಯ ಅವರ ಅಧ್ಯಕ್ಷತೆಯಲ್ಲೂ, ಐದನೆಯ ಅಧಿವೇಶನ ಚನ್ನಪಟ್ಟಣದಲ್ಲಿ 1942 ರಲ್ಲಿ ಟಿ.ಸುಬ್ರಮಣ್ಯಂ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

1942ರಲ್ಲಿ ಗಾಂಧೀಜಿ, ಸರ್‌ಸ್ಟಾಪರ್ಡ್‌ಕ್ರಿಪ್ಸ್ ನಿಯೋಗದ ವೈಪಲ್ಯದಿಂದ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಅಥವಾ ಕ್ವಿಟ್ ಇಂಡಿಯಾ ಚಳವಳಿ" ಕರೆ ನೀಡಿದರು. ಸಂಸ್ಥಾನದಲ್ಲಿ ಸರ್ಕಾರ ಕೆ.ಸಿ.ರೆಡ್ಡಿ ಹಾಗೂ ಇತರ ನಾಯಕರನ್ನು ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಟ್ಟರು. ಇದೇ ಕಾಲಕ್ಕೆ ಶಿವಮೊಗ್ಗದ ಈಸೂರು ಗ್ರಾಮದ ಜನರು ದಂಗೆಯೆದ್ದು ಅಮಲ್ದಾರ್ ಮತ್ತು ಇನ್ಸ್‌ಪೆಕ್ಟರ್‌ರನ್ನು ಕೊಲೆ ಮಾಡಿದ್ದರಿಂದ, ಶಿವಮೊಗ್ಗ ನ್ಯಾಯಾಲಯ ಐದು ಜನ ಪ್ರಮುಖ ಆರೋಪಿಗಳಿಗೆ ಗಲ್ಲುಶಿಕ್ಷೆ ವಿಧಿಸಿತು. ಅವರನ್ನು ಬೆಂಗಳೂರು ಜೈಲಿಗೆ ಕರೆತಂದಿದ್ದಾಗ, ಜೈಲಿನಲ್ಲಿದ್ದ ಕೆ.ಸಿ.ರೆಡ್ಡಿ ಮತ್ತಿತರ ನಾಯಕರು ಈಸೂರು ಆರೋಪಿಗಳಿಂದ ಹೈಕೋರ್ಟ್‌ಗೆ ಅಪೀಲು ಹಾಕಿಸಿದರು. ಆದರೂ ಗಲ್ಲುಶಿಕ್ಷೆಯಿಂದ ಪಾರು ಮಾಡಲಾಗಲಿಲ್ಲ.

1946ರಲ್ಲಿ ಅಮೇರಿಕದ ಪತ್ರಿಕೋದ್ಯಮಿ ಮಿ॥ಬ್ರೈಸ್‌ಫರ್ಡ್ ಮೈಸೂರು ಸಂಸ್ಥಾನಕ್ಕೆ ಆಗಮಿಸಿ "ಸಂಸ್ಥಾನದ ಕ್ಷಾಮ ಪ್ರದೇಶಗಳ ಪ್ರವಾಸ ಮಾಡಿ ಬಂದು ಮೈಸೂರು ಆಡಳಿತ ಮುರಿದು ಬಿದ್ದಿದೆ" ಎಂದು ಟೀಕೆ ಮಾಡಿದನ್ನು ಸಹಿಸದ ಸರ್ಕಾರ ಅಧಿಕಾರಿ ಅಲ್ಲಗೆಳೆದಾಗ, ಮೈಸೂರು ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ನಾಯಕ ಕೆ.ಸಿ. ರೆಡ್ಡಿ "ಮಿ॥ ಬ್ರೈಸ್‌ಫರ್ಡ್ ರಂತಹ ಮಹನೀಯರನ್ನೆ ಸರ್ಕಾರ ಅಲ್ಲಗೆಳೆಯುವುದು ಸರಿಯಲ್ಲ" ಎಂದರು.

ಮೈಸೂರಿನ ವಾಣಿವಿಲಾಸಮೊಹಲ್ಲಾದಲ್ಲಿ 'ತಿಲಕಸಂಘ'ದ ಆಶ್ರಯದಲ್ಲಿ ವಿದ್ಯಾರ್ಥಿಗಳು ಆಯೋಜಿಸಿದ್ದ ಗಾಂಧೀಜಿ ಜಯಂತೋತ್ಸವದಲ್ಲಿ ಕೆ.ಸಿ.ರೆಡ್ಡಿ ಮಾತನಾಡಿ "ಮೈಸೂರು ದೇಶದಲ್ಲಿ ನಿರಂಕುಶಾಧಿಕಾರ ಮಿತಿಮೀರಿ ಹೋಗುತ್ತಿದೆ, ಇನ್ನು ಸಹಿಸುವುದಕ್ಕಾಗುವುದಿಲ್ಲ. ಬಹುಬೇಗ ಇಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಗುತ್ತದೆ. ಅದಕ್ಕೆ ತಾವೆಲ್ಲ ನೆರವಾಗಬೇಕು, ಶೀಲ, ಶೌರ್ಯ, ತ್ಯಾಗ ತೋರಿಸಬೇಕು. ಈ ಅಪೂರ್ವ ದೇಶ ಸೇವೆಗಾಗಿ ನಿಮಗೆಲ್ಲ ಸ್ವಾಗತ ಕೋರುತ್ತಿದ್ದೇನೆ" ಎಂದರು.

ಮೈಸೂರು ಕಾಂಗ್ರೆಸ್‌ನ ಆರನೆಯ ಅಧಿವೇಶನ ಕೆ.ಸಿ.ರೆಡ್ಡಿ ಅಧ್ಯಕ್ಷತೆಯಲ್ಲಿ 1946 ನವೆಂಬರ್ 2 ಮತ್ತು 3 ರಂದು ಬೆಂಗಳೂರು ನಗರದ ಇಂದಿನ ಕೆಂಪೇಗೌಡ ಬಸ್‌ನಿಲ್ದಾಣ [ಕೆಂಪಾಂಬುಧಿ ಕೆರೆ]ದ ಅಂಗಳದಲ್ಲಿ, ಇದೇ ಕಾಲಕ್ಕೆ ಸುಭಾಷ್‌ಚಂದ್ರ

ಬೋಸ್ ಮರಣ ಹೊಂದಿದ್ದರಿಂದ ಅಧಿವೇಶನ ಸ್ಥಳಕ್ಕೆ ಸುಭಾಷ್ ನಗರ ಎಂದೇ ನಾಮಕರಣ ಮಾಡಲಾಗಿತ್ತು. ಕೆ.ಸಿ.ರೆಡ್ಡಿ ಮಾತಾಡಿ "ನಮ್ಮ ಧ್ಯೇಯ ಫಲಿಸುವವರೆಗೆ ಶಾಸನಸಭೆಗಳಲ್ಲಿ ಆಯಾಕಟ್ಟು ಸ್ಥಾನಗಳನ್ನು ನಾವು ಆಕ್ರಮಿಸಿಕೊಂಡು ಸಭೆಗಳ ಮುಖಾಂತರವಾಗಿಯೂ ನಮ್ಮ ಹೋರಾಟವನ್ನು ಮುಂದುವರೆಸುವುದು ಸೂಕ್ತವಾದ ಮಾರ್ಗ, ನಮ್ಮ ಚಳವಳಿ ಉಗ್ರವಾಗಬೇಕು. ನಮ್ಮ ಧ್ಯೇಯ ಸಾಧನೆಗಾಗಿ ಅಹಿಂಸೆಯ ಅಡಿಗಲ್ಲಿನ ಮೇಲೆ ಎಲ್ಲಾ ವಿಧವಾದ ತ್ಯಾಗ ಸಂಕಟಗಳಿಗೆ ನಾವು ಸಿದ್ಧರಾಗಬೇಕು. ಭಾರತದಲ್ಲಿ ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆಗಳನ್ನು ಮೈಸೂರು ಪ್ರಜೆಗಳು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಸ್ವತಂತ್ರ ಭಾರತದಲ್ಲಿ ಮೈಸೂರು ಸಹಾ ಸ್ವತಂತ್ರವಾಗಲು ಶ್ರಮಿಸಬೇಕು. ಸಾವು–ನೋವುಗಳನ್ನು ಸಹಿಸಬೇಕು. ಬಲಿದಾನಕ್ಕೆ ಸಿದ್ಧರಾಗಬೇಕು. ಸಂಸ್ಥಾನದ ಮಂತ್ರಿಮಂಡಲವು ಬೇಜವಾಬ್ದಾರಿ ಯಿಂದ ಕೂಡಿದ್ದು, ಪ್ರಜೆಗಳಿಗೆ ಅದರಲ್ಲಿ ನಂಬಿಕೆ ಇಲ್ಲವೆಂದೂ ಅದನ್ನು ಕೊನೆಗಾಣಿಸಲು ಸತ್ಯಾಗ್ರಹ ಚಳವಳಿ ಅವಶ್ಯಕವೆಂದೂ ಘೋಷಿಸಿದರು."

1946 ನವೆಂಬರ್‌ನಲ್ಲಿ ಮೈಸೂರು ಕಾಂಗ್ರೆಸ್, ಅಧ್ಯಕ್ಷರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಜನತೆಯನ್ನು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಸಂಘಟನೆ ಮಾಡಲು ನಿರ್ಧರಿಸಿತು. ಅದರಂತೆ ಕೆ.ಸಿ.ರೆಡ್ಡಿ "ಮೂರು ತಿಂಗಳುಗಳ ಕಾಲ ಪ್ರವಾಸ ಮಾಡಿ ಸು. 170ಕ್ಕೂ ಹೆಚ್ಚು ಊರುಗಳಿಗೆ ಬೇಟಿ ನೀಡಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಭೆಗಳನ್ನು ನಡೆಸಿದರಲ್ಲದೆ ಹರಿಜನಕೇರಿ, ಖಾದಿಕೇಂದ್ರಗಳು, ಕಸ್ತೂರಿ ಬಾ ಶಿಬಿರ, ಚರಕಸಂಘ ಹಾಗೂ ಹಲವಾರು ಕಾರ್ಮಿಕ ಸಂಘಗಳಿಗೂ ಭೇಟಿ ನೀಡಿ ಅವರ ಬೆಂಬಲ ಕೋರಿದರು". 1946 ಡಿಸೆಂಬರ್ 5 ರಂದು ಕೆ.ಸಿ.ರೆಡ್ಡಿಯ ಪ್ರವಾಸದ ಅವಧಿಯಲ್ಲಿ ಇಂದಿನ ರಾಮನಗರ ಜಿಲ್ಲೆಯ ಚನ್ನಪಟ್ಟಣಕ್ಕೆ ಭೇಟಿ ನೀಡಿದಾಗ ಸ್ಥಳೀಯ ಹೋರಾಟಗಾರರು ಪಟ್ಟಣದ ಕೊಲ್ಲಾಪುರದಮ್ಮ ದೇವಾಲಯದಿಂದ ಕೆ.ಸಿ.ರೆಡ್ಡಿಯವರನ್ನು ನಲವತ್ತು ಜೊತೆ ಎತ್ತುಗಳೊಂದಿಗೆ ಭಾರೀ ಮೆರವಣಿಗೆಯಲ್ಲಿ ಬೀದಿ ಬೀದಿಗಳಲ್ಲಿ ಕರೆದೊಯ್ದು ಸಂದರ್ಭದಲ್ಲಿ, ಮುಸ್ಲಿಂ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದಾಗ ಕೆಲವು ಮುಸ್ಲಿಂ ಯುವಕರು ಕಿಡಿಗೇಡಿ ತನದಿಂದ ಕೆ.ಸಿ.ರೆಡ್ಡಿ ಇದ್ದ ರಥಕ್ಕೆ ಕಟ್ಟಲಾಗಿದ್ದ ಎತ್ತಿಗೆ ಚಾಕು ಹಾಕಿದುದರಿಂದ ಇದು ಹಿಂದೂ–ಮುಸ್ಲಿಂ ಗಲಬೆಗೆ ಕಾರಣವಾಗಿ ಹೈಸ್ಕೂಲ್ ಹೆಡ್‌ಮಾಸ್ಟರ್ ಕೊಲೆಯಾದರು. ಗಲಭೆ ನಿಯಂತ್ರಿಸಲು ಗೋಲಿಬಾರ್ ನಡೆದಾಗ ಇಬ್ಬರು ಮೃತಪಟ್ಟರು. ಅನೇಕರು ಗಾಯಗೊಂಡರು. ಸ್ವತಃ ಕೆ.ಸಿ.ರೆಡ್ಡಿ, ಹೆಚ್.ಕೆ. ವೀರಣ್ಣಗೌಡ ಮುಂತಾದವರು ಹಲ್ಲೆಗೆ ತುತ್ತಾದರು.

ಸರ್ಕಾರ ಈ ಸಂದರ್ಭ ಬಳಸಿಕೊಂಡು ಕಾಂಗ್ರೆಸ್ ಒಗ್ಗಟ್ಟು ಮುರಿಯಲು ಕಾಂಗ್ರೆಸ್ ಸದಸ್ಯರಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಒಡಕನ್ನುಂಟು ಮಾಡಲು ಕಾಂಗ್ರೆಸ್‌ನ ಕೆಲವು ಪದಾಧಿಕಾರಿಗಳು ಮಂತ್ರಿಪದವಿಗಾಗಿ ಯತ್ನಿಸುತ್ತಿದ್ದಾರೆಂದು ಸುದ್ದಿ ಹಬ್ಬಿಸಿತು. ಈ ಹುನ್ನಾರ ಗ್ರಹಿಸಿದ ಕೆ.ಸಿ. ರೆಡ್ಡಿ "ಸಂಸ್ಥಾನದಲ್ಲಿ ಕೆಲ ಸ್ವಾರ್ಥಿಗಳು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಭೇದ ಕಲ್ಪಿಸಲು ಮತ್ತು ಕಾಂಗ್ರೆಸ್‌ನವರು ಮಂತ್ರಿ ಪದವಿ ಪಡೆಯಲು ಆಶಿಸುತ್ತಿರುವರೆಂದು ಹೇಳುತ್ತಿದ್ದು, ಇದು ಸಾಧ್ಯವಿಲ್ಲವೆಂದೂ, ಜನರೆಲ್ಲ ಒಗ್ಗಟ್ಟಿನಿಂದ, ಸೌಹಾರ್ದದಿಂದ ಬಾಳಬೇಕೆಂದು ಕಾಂಗ್ರೆಸ್ ಮೈಸೂರಿನ ಎಪ್ಪತ್ಮೂರುಲಕ್ಷ ಪ್ರಜೆಗಳಿಗೂ ಸುಖ-ಶಾಂತಿ ದೊರೆಯುವಂತೆ ಸಾಧಿಸುವುದೆಂದು" ಸ್ಪಷ್ಟಪಡಿಸಿದರು.

1947 ಜನವರಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ಮತ್ತು ಸಮಿತಿ ಮಹಾರಾಜ ಜಯಚಾಮರಾಜ ಒಡೆಯರ್‌ಗೆ ವಿಜ್ಞಾಪನಾ ಪತ್ರ ಕೊಟ್ಟರು, ಅದರಲ್ಲಿ "ಕ್ಯಾಬಿನೆಟ್ ಮಿಷನ್ ಸಂಸ್ಥಾನಗಳಿಗೆ ಸಂಬಂಧಪಟ್ಟಂತೆ ಮಾಡಿರುವ ಸಲಹೆಗಳು ತೃಪ್ತಿಕರವಾಗಿಲ್ಲ. ರಾಷ್ಟ್ರದ ಐಕ್ಯತೆಗೆ ಭಂಗ ತರುವಂತಿದೆ. ಭಾರತದ ಒಕ್ಕೂಟದಲ್ಲಿ ಸಂಸ್ಥಾನಗಳು ಸೇರಲೇಬೇಕು. ಅವು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಬೇಕು. ಈ ಪ್ರಾತಿನಿಧ್ಯ ಸಂಸ್ಥಾನದ ಪ್ರಜೆಗಳಿಗೆ ಇರಬೇಕು. ಚುನಾಯಿತ ಸದಸ್ಯರೇ ರಾಜ್ಯಾಂಗ ಸಭೆಯ ಸದಸ್ಯರಾಗಬೇಕು. ಈ ರೀತಿ ಶಿಫಾರಸ್ಸುಗಳ ತಿದ್ದುಪಡಿಯಾಗದೆ ಹೋದರೆ ಕ್ಯಾಬಿನೆಟ್ ಮಿಷನ್ ಸಲಹೆಗಳು ಅಂಗೀಕಾರ ಅರ್ಹವಲ್ಲ" ಎಂಬುದ್ದಾಗಿತ್ತು.

1947ರ ಫೆಬ್ರವರಿಯಲ್ಲಿ ಬ್ರಿಟನ್ ಪ್ರಧಾನಿ ಕ್ಲೆಮೆಂಟ್ ಆಟ್ಲಿ" ಬ್ರಿಟಿಷರು ಆಡಳಿತಾಧಿಕಾರವನ್ನು ಭಾರತೀಯರಿಗೆ ವಹಿಸಿ ಭಾರತದಿಂದ ತೆರಳುವುದಾಗಿ" ಘೋಷಿಸಿದಾಗ, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ರೆಡ್ಡಿ ಈ ಹೇಳಿಕೆಯನ್ನು ಸ್ವಾಗತಿಸಿ, ಈಗಲಾದರೂ ಮೈಸೂರು ಮಹಾರಾಜರು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಜಾರಿಗೆ ತರುತ್ತಾರೆಂದು ಆಶಿಸಿದರು. ಇದೇ ಕಾಲಕ್ಕೆ ದೇಶೀಯ ಸಂಸ್ತಾನಗಳು ಭಾರತದ ರಾಜ್ಯಾಂಗ ರಚನಾ ಸಭೆಗೆ ಸದಸ್ಯರನ್ನು ಕಳುಹಿಸುವಾಗ ಮೈಸೂರು ಸರ್ಕಾರ ಕಳಿಸದಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಕೆ.ಸಿ.ರೆಡ್ಡಿ " ಮೈಸೂರು ಸಂಸ್ಥಾನದಿಂದ ಕಾಂಗ್ರೆಸ್ ಸದಸ್ಯರು ಭಾರತದ ರಾಜ್ಯಾಂಗ ರಚನಾ ಸಭೆಗೆ ಹೋದರೆ ಅಲ್ಲಿ ಇತರೇ ಸಂಸ್ಥಾನಗಳ ಸದಸ್ಯರು ಹಾಗೂ ನಾಯಕರನ್ನು ಬೇಟಿಯಾಗಿ ಅವರಿಂದ ಪ್ರೇರಿತವಾಗಿ ಸಂಸ್ಥಾನದಲ್ಲಿಯೂ ಚಳವಳಿಗಳು ಹೆಚ್ಚಬಹುದೆಂಬ ಭೀತಿಯಿಂದ ಮೈಸೂರು ಸರ್ಕಾರವು ರಾಜ್ಯಾಂಗ ರಚನಾ ಸಭೆಗೆ ಸದಸ್ಯರನ್ನು ಕಳುಹಿಸಲಿಲ್ಲ" ಎಂದು ಅಪಾದಿಸಿದ್ದಾರೆ.

1947ರ ಮಾರ್ಚ್‌ನಲ್ಲಿ ಕೋಲಾರ ಜಿಲ್ಲೆ, ಬಂಗಾರಪೇಟೆಯಲ್ಲಿ ನಡೆದ ಕಾಂಗ್ರೆಸ್‌ನ ವಿಶೇಷ ಅಧಿವೇಶನದಲ್ಲಿ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ಮಾತಾಡಿ "ಸುಭಾಷ್‌ನಗರ [ಕೆಂಪೇಗೌಡ ಬಸ್ ನಿಲ್ದಾಣ] ಅಧಿವೇಶನದಿಂದೀಚೆಗೆ ದೇಶದಲ್ಲಿ ಮಹತ್ವಪೂರಿತ ಬದಲಾವಣೆ ಗಳಾಗಿವೆ. ಬ್ರಿಟಿಷರು ಭಾರತ ಬಿಟ್ಟು ಹೊರಡುವುದಾಗಿ ಘೋಷಿಸಿದ್ದಾರೆ. ಈ ಪ್ರಚಂಡ ಸಾಧನೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಾರಣವಾಗಿದೆ. ಈ ಹರ್ಷ ಸಂಗತಿಯ ನಡುವೆ ವಿಷಾದ ವಿಚಾರವೊಂದಿದೆ. ದೇಶದಲ್ಲಿ ಅಲ್ಲಲ್ಲಿ ಆಗುತ್ತಿರುವ ಕೋಮುವಾರು ಘರ್ಷಣೆಗಳಿಗಾಗಿ ನಾವೆಲ್ಲ ದುಃಖಿಸಬೇಕಾಗಿದೆ. ಇಂತಹ ಪರ್ವ ಸಮಯದಲ್ಲಿ ಸರ್ವರೂ ಭಾತೃಭಾವದಿಂದ ಇರಬೇಕಾದುದು ಅವಶ್ಯಕ. ಗಾಂಧೀಜಿ ಅವರು ಗ್ರಾಮ ಗ್ರಾಮಗಳಿಗೂ ಹೋಗಿ ಎಲ್ಲರ ಅನೋನ್ಯತೆಗಾಗಿ ದುಡಿಯುತ್ತಿದ್ದಾರೆ. ಬ್ರಿಟಿಷರು ಭಾರತ ಬಿಟ್ಟು ಹೊರಟ ಕೂಡಲೇ ಇಂಡಿಯಾ ಸರ್ಕಾರ ದೇಶೀಯ ಸಂಸ್ಥಾನಗಳ ಮೇಲೆ ಹೊಂದಿರುವ ಪರಮಾಧಿಕಾರ ಕೊನೆಗಾಣುತ್ತದೆ. ಇಲ್ಲಿಯವರೆಗೆ ಬ್ರಿಟಿಷರ ಅಧೀನದಲ್ಲಿದ್ದ ರಾಜರುಗಳಿಗೆ ಸ್ವಾತಂತ್ರ್ಯ ದೊರಕಿದಂತಾಗುತ್ತದೆ. ಇದೆಲ್ಲಾ ಜನತೆಯು ಹೂಡಿದ ಹೋರಾಟದ ಫಲ. ರಾಜರಿಗೆ ಈ ಸ್ವಾತಂತ್ರ್ಯವನ್ನು ಪ್ರಜೆಗಳು ಸಂಪಾದಿಸಿ ಕೊಟ್ಟಿದ್ದಾರೆ. ಆದರೆ ಜನತೆಯ ನಿತ್ಯಜೀವನ ದುರ್ಭರವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ವಿಶೇಷ ಅವಶ್ಯಕತೆ ಇದೆ. ಜವಾಬ್ದಾರಿ ಸರ್ಕಾರಕ್ಕಾಗಿ ಅವಶ್ಯಕವಿದ್ದರೆ ಸತ್ಯಾಗ್ರಹ ಕೂಡ ಹೂಡಬೇಕಾಗಿದೆ. ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ವಿಳಂಬನೀತಿ ಬುದ್ದಿವಂತಿಕೆ ಮಾತುಗಳಿಂದ ರಾಜಕೀಯ ಸುಧಾರಣೆಗಳೇನು ಸಾಧ್ಯವಿಲ್ಲ. ಈ ಮಧ್ಯೆ ಸರ್ಕಾರದ ಆಡಳಿತಯಂತ್ರ ತೀರಾ ಕೆಟ್ಟಿದೆ. ಲಂಚ, ರುಷವತ್ತುಗಳು ಉನ್ನತ ಸರ್ಕಾರಿ ಅಧಿಕಾರಿಗಳವರೆಗೂ ವ್ಯಾಪಿಸಿ ಬಿಟ್ಟಿದೆ. ಮಂತ್ರಿಗಳು, ಹೈಕೋರ್ಟ್ ನ್ಯಾಯಾಧೀಶರು ಕೂಡ ಅನುಮಾನಕ್ಕೆ ಒಳಗಾಗಿದ್ದಾರೆ" ಎಂದರು.

ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ನಡುವೆ 1947 ಏಪ್ರಿಲ್ 16 ರಿಂದ ಆಗಸ್ಟ್ 07 ರ ನಡುವೆ ಹಲವಾರು ಸುತ್ತಿನ ಮಾತುಕತೆಗಳು ನಡೆದಿದ್ದರ ಫಲವಾಗಿ " ಮೈಸೂರು ಸಂಸ್ಥಾನವು ಭಾರತದ ರಾಜ್ಯಾಂಗ ಸಭೆ ಸಂಸ್ಥಾನದಿಂದ ಕಳುಹಿಸಬೇಕಾದ ಸದಸ್ಯರ ಆಯ್ಕೆಗಾಗಿ ಚುನಾವಣೆಗಳು ನಡೆದವು. ಮೈಸೂರು ಪ್ರಜಾಪ್ರತಿನಿದಿ ಸಭೆಯಿಂದ ಕೆ.ಸಿ.ರೆಡ್ಡಿ ಚುನಾಯಿತರಾದರು". 1947 ಆಗಸ್ಟ್ 10 ರಂದು ಜಯಚಾಮರಾಜ ಒಡೆಯರ್ "ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರುವುದಾಗಿ ಸಹಿ ಹಾಕಿದರು". ಆಗಸ್ಟ್ 15

ರಂದು ಬ್ರಿಟಿಷರು ಭಾರತೀಯರಿಗೆ ಅಧಿಕಾರ ಹಸ್ತಾಂತರ ಮಾಡಿ ಭಾರತದಿಂದ ನಿರ್ಗಮಿಸುವುದರೊಂದಿಗೆ ಸ್ವಾತಂತ್ರ್ಯ ಪಡೆಯಿತು. ಸಂಸ್ಥಾನದಲ್ಲಿ ಜನರು ತ್ರಿವರ್ಣ ಧ್ವಜವನ್ನು ಆರಿಸುತ್ತಾ ಸಂತೋಷಪಡುತ್ತಿದ್ದರೆ ಮೈಸೂರು ಸರ್ಕಾರ ಸಂಭ್ರಮಿಸಲಿಲ್ಲ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ನಡೆದ ಸಂಧಾನಗಳು ವಿಫಲಗೊಂಡವು.

ಇದರಿಂದ ಅಸಮಾಧಾನಗೊಂಡ ಮೈಸೂರು ಕಾಂಗ್ರೆಸ್ ನಾಯಕರು ಸಭೆ ಸೇರಿ ಕೆ.ಸಿ. ರೆಡ್ಡಿಯವರನ್ನು "ಪ್ರಥಮ ಸರ್ವಾಧಿಕಾರಿ" ಯನ್ನಾಗಿ ನೇಮಿಸಿ ಸತ್ಯಾಗ್ರಹ ನಿಲ್ಲಿಸಲು ಸರ್ವಾಧಿಕಾರಿಗಲ್ಲದೆ ಬೇರೆ ಯಾರಿಗೂ ಅಧಿಕಾರವಿಲ್ಲ ಎಂದು ತೀರ್ಮಾನಿಸಿ ಸೆಪ್ಟೆಂಬರ್ 4 ಅರಮನೆ ಸತ್ಯಾಗ್ರಹ ಹಮ್ಮಿಕೊಳ್ಳ ಲಾಯಿತು. ಆದರೆ ಕಾಂಗ್ರೆಸ್ಸೇತರ ಸಾರ್ವಜನಿಕ ಮುಖಂಡರು ಮೈಸೂರು ಕಾಂಗ್ರೆಸ್ ಕೈಗೊಂಡ ಅರಮನೆ ಸತ್ಯಾಗ್ರಹ ವಿರುದ್ಧ ಆಗಸ್ಟ್ 28 ರ ಸಂಜೆ ಸರ್ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಮಾವೇಶ ಏರ್ಪಡಿಸಿದರಾದರೂ ಸಾರ್ವಜನಿಕರ ಆಕ್ರೋಶಕ್ಕೆ ಹೆದರಿ ಸಭೆ ನಡೆಯಲಿಲ್ಲ.

ಸೆಪ್ಟೆಂಬರ್ 1 ರಂದು ಬೆಂಗಳೂರು ನಗರದ ಧರ್ಮಾಂಬುದಿ ಕೆರೆ ಅಂಗಳದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಕಾರ್ಮಿಕರು, ಸಾರ್ವಜನಿಕರು, ಹೋರಾಟಗಾರರು ಸೇರಿದ್ದ ಸಭೆಯಲ್ಲಿ ಸರ್ವಾಧಿಕಾರಿ ಕೆ.ಸಿ.ರೆಡ್ಡಿ "ಮೈಸೂರು ಚಲೋ" ಘೋಷಣೆ ಮಾಡಿ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು. ಕೆ.ಸಿ.ರೆಡ್ಡಿ ಮಾತಾಡಿ "ಇದೀಗ ನಮ್ಮ ಸತ್ಯಾಗ್ರಹ ಆರಂಭವಾಗಿದೆ, ಇಲ್ಲಿಂದ ಹೊರಡುವ ಮೆರವಣಿಗೆಯಲ್ಲಿ ಸಮಸ್ತ ಮಹಾಜನರೂ ಭಾಗವಹಿಸಬೇಕಾಗಿ ಕೋರಿಕೆ. ಮೈಸೂರು ಧ್ವಜವನ್ನು ನಾವು ಗೌರವಿಸುವುದಿಲ್ಲ. ಏಕೆಂದರೆ ಆಗಸ್ಟ್ 15 ರಂದು ಸರ್ಕಾರಿ ಕಛೇರಿಗಳ ಮೇಲೆ ಧ್ವಜ ಹಾರಿಸಲಿಲ್ಲ. ಇಡೀ ಪ್ರಪಂಚವೇ ಭಾರತದ ಸ್ವಾತಂತ್ರ್ಯ ದಿನ ಆಚರಿಸುವಾಗ, ನಮ್ಮ ಮಹಾರಾಜರೇ ರಾಷ್ಟ್ರಧ್ವಜವನ್ನು ಹಾರಿಸಲಿಲ್ಲ? ಎಂದರು. ಅದೇ ದಿನ ಸಂಜೆ ಬನಪ್ಪ ಪಾರ್ಕ್‌ನಲ್ಲಿ ಕೆ.ಸಿ.ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಕೆ.ಸಿ.ರೆಡ್ಡಿ ಮಾತನಾಡಿ "ಬೆಂಗಳೂರಿನಲ್ಲೊಂದು ಇಂತಹ ಸಭೆ ಸೇರಿರಲಿಲ್ಲ ವೆಂದೂ, ಆಡಳಿತ ಪ್ರಮುಖರು ಈ ಸಭೆಯನ್ನು ಪ್ರತ್ಯಕ್ಷ ಕಂಡದ್ದೇ ಆದರೆ, ಮೈಸೂರಿನ ಜನ ಪ್ರಜೆಗಳು, ಕೇವಲ ತಮ್ಮ ಹಿಂದಿರುವ ಸ್ವಾರ್ಥಿಗಳಷ್ಟೇ ಅಲ್ಲ ಎಂಬುದು ಅರಿವಾಗುತ್ತಿತ್ತೆಂದೂ ಹೇಳಿ, ಮಾಡೋಣ ಇಲ್ಲವೇ ಮಡಿಯೋಣ, ಇಂದೇ ತ್ರಿವರ್ಣಧ್ವಜ ವನ್ನೇರಿಸಲು ನಾವೀಗ ಅರಮನೆ ಬಳಿಗೆ ಹೋಗೋಣ ದೊರೆಯ ತನಕ ದೂರು ಎಂಬ ನಾಣ್ನುಡಿಯನ್ನು ಸ್ಮರಿಸೋಣ 'ಮೈಸೂರು ಚಲೋ' ನಮ್ಮ ಘೋಷಣೆಯಾಗಲಿ, ಸೆಪ್ಟಂಬರ್ ನಾಲ್ಕರಂದು ಮನೆ ಬಿಟ್ಟು ಹೊರಡುವ ಸ್ವಾತಂತ್ರ್ಯವೀರರು ಪೂರ್ಣ ಜವಾಬ್ದಾರಿ

ಸರ್ಕಾರವನ್ನು ಪಡೆಯದೆ ತಮ್ಮ ಮನೆಗಳಿಗೆ ಹಿಂತಿರುಗಬಾರದು. ಜವಾಬ್ದಾರಿ ಸರ್ಕಾರ ಬಂದರೂ ಅರಮನೆ ಮುಂದೆ ಹೋಗಿ ಪ್ರಭುಗಳನ್ನು ಅಭಿನಂದಿಸಿ ಬರುತ್ತೇವೆ. ಗುರಿ ಸಾಧನೆ ಆಗಲಿ, ಆಗದಿರಲಿ ಮೈಸೂರು ಚಲೋ ಆಗಲೇಬೇಕು... ಎಂದು ಸ್ಪಷ್ಟಪಡಿಸಿದರು.

1947ರ ಸೆಪ್ಟಂಬರ್ 1 ರಿಂದ ಅಕ್ಟೋಬರ್ 12 ರ ವರೆಗೆ ಸಂಸ್ಥಾನದಲ್ಲಿ ನಡೆದ ಮೈಸೂರು ಚಲೋ ಸತ್ಯಾಗ್ರಹ 42 ದಿನಗಳು ಅವಿರತ ಹೋರಾಟದ ಫಲವಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮಹಾರಾಜರು ಒಪ್ಪಿಕೊಂಡರು. 1947 ಅಕ್ಟೋಬರ್ 24 ರ ವಿಜಯದಶಮಿಯೊಂದು ಕೆ.ಸಿ. ರೆಡ್ಡಿ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿದರು.

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ 1947–1952 :– ಭಾರತ ಸ್ವತಂತ್ರಗೊಂಡು ಎಪ್ಪತ್ತು ದಿವಸಗಳ ನಂತರ ಮೈಸೂರು ರಾಜ್ಯ ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ ಸ್ಥಾಪಿತವಾಯಿತು. [24–10–1947] ಈ ರಾಜ್ಯ ಒಂಭತ್ತು ಜಿಲ್ಲೆಗಳನ್ನು ಒಳಗೊಂಡ ಸು. ಹದಿನೆಂಟು ಸಾವಿರಕ್ಕೂ ಹೆಚ್ಚು ಗ್ರಾಮಗಳಿಂದ ಕೂಡಿದ 29,489 ಚದರ ಮೈಲಿ ವಿಸ್ತೀರ್ಣ ಹೊಂದಿತ್ತು.

ಕೆ.ಸಿ. ರೆಡ್ಡಿ ಸರ್ಕಾರದ ಮಂತ್ರಿ ಮಂಡಲದಲ್ಲಿ ಇವರೆಗೆ ಸಮಾಜದಲ್ಲಿ ಅತ್ಯಂತ ಗೌರವಯುತ, ಹಿರಿಯ ಮತ್ತು ಅನುಭವಿ ವ್ಯಕ್ತಿಗಳೇ ಇದ್ದರು, ಕಾಂಗ್ರೆಸ್‌ನಿಂದ ಆರು. ಕಾಂಗ್ರೆಸ್ಸೇತರ ಮೂವರು ಮಂತ್ರಿಗಳು ಸಚಿವರುಗಳಾಗಿದ್ದರು, ಮೈಸೂರು ರಾಜ್ಯದ ದಿವಾನರಾಗಿ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅಧಿಕಾರ ಸ್ವೀಕರಿಸಿದರು.

ಭಾರತ ಸ್ವಾತಂತ್ರಗೊಂಡಾಗ ಅನುಭವಿಸಿದ ಜಟಿಲ ಸೂಕ್ಷ್ಮ ಸಮಸ್ಯೆಗಳನ್ನೇ ಮೈಸೂರು ರಾಜ್ಯವೂ ಅನುಭವಿಸಬೇಕಾಗಿತ್ತು. ಕೆ.ಸಿ.ರೆಡ್ಡಿ ಅಧಿಕಾರ ವಹಿಸಿಕೊಂಡ ಕೂಡಲೇ ಕೋಮುಗಲಭೆ, ಪ್ರಾಂತ ರಚನೆ ಹಾಗೂ ಏಕೀಕರಣ ಸಮಸ್ಯೆ, ಆಹಾರ ಸಮಸ್ಯೆ, ನಿರಾಶ್ರಿತರ ಸಮಸ್ಯೆ, ಅರಮನೆ ಖಾಸಗಿ ಸ್ವತ್ತುಗಳ ಇತ್ಯರ್ಥ ಸಮಸ್ಯೆ, ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಸಮಸ್ಯೆ, ದಿವಾನರ ನೇಮಕ ಸಮಸ್ಯೆ, ಮೈಸೂರು ಸೈನ್ಯದ ವಿಲೀನ ಸಮಸ್ಯೆ, ಮಂತ್ರಿಮಂಡಲ ಪುನರ್ ರಚನೆ ಸಮಸ್ಯೆ, ಮೈಸೂರು ಸಂವಿಧಾನ ರಚನಾ ಸಮಸ್ಯೆ, ಮುಸ್ಲಿಂರ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಬೇಡಿಕೆ ಸಮಸ್ಯೆ, ಕಾರ್ಮಿಕರ ಸಮಸ್ಯೆ, ಹೊಸ ಸಂವಿಧಾನ ರಚನಾ ಸಮಸ್ಯೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ಮತ್ತು ಸಂಪನ್ಮೂಲ ಹಂಚಿಕೆ ಸಮಸ್ಯೆ ಮುಂತಾದ ಹಲವಾರು ಸಮಸ್ಯೆಗಳನ್ನು ಆರಂಭದಲ್ಲೇ ಎದುರಿಸಬೇಕಾಯಿತು.

ಕೆ.ಸಿ.ರೆಡ್ಡಿ ಸರ್ಕಾರ ಈ ಮೇಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾ, ಸರ್ಕಾರ ನೂತನ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿ ಕೊಳ್ಳಲು " ಮೂರು ವರ್ಷಗಳ ಯೋಜನೆ" ಜಾರಿಗೆ ತಂದರು. ಆದರೆ ಆ ನಂತರ ಕೇಂದ್ರ ಸರ್ಕಾರ ಭಾರತದಾದ್ಯಂತ ಸರ್ವತೋಮುಖ ಅಭಿವೃದ್ಧಿಗೆ" ಪಂಚವಾರ್ಷಿಕ ಯೋಜನೆ"ಯನ್ನು ಜಾರಿಗೆ ತಂದಿದ್ದರಿಂದ ರಾಜ್ಯ ಸರ್ಕಾರ ತನ್ನ ಯೋಜನೆಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ವಿದ್ಯಾಭ್ಯಾಸ, ವಸತಿ ಗೃಹ ನಿರ್ಮಾಣ, ಆರೋಗ್ಯ, ಸಹಕಾರ ಸಂಘಗಳು, ವಿದ್ಯುಚ್ಛಕ್ತಿ ಪ್ರಸಾರ, ಪಶುವೈದ್ಯ ಶಾಲೆಗಳು, ಮಧ್ಯಪಾನ ನಿರೋಧ, ಸಣ್ಣ ಮತ್ತು ದೊಡ್ಡ ಕೈಗಾರಿಕೆ, ಸಣ್ಣ ಮತ್ತು ದೊಡ್ಡ ನೀರಾವರಿ, ಗ್ರಾಮಾಭಿವೃದ್ಧಿ ಯೋಜನೆ ಅನುಷ್ಠಾನ, ಇಂಡಸ್ಟ್ರೀಯಲ್ ಕಾರ್ಪೋರೇಷನ್ ಸ್ಥಾಪನೆ, ಅಸಿಟಿಕ್ ಆಸಿಡ್ ದ್ರಾವಕ ಕಾರ್ಖಾನೆ, ರಸ್ತೆ ಸಾರಿಗೆ ರಾಷ್ಟ್ರೀಕರಣ, ಇಂಡಿಯನ್ ಟೆಲಿಪೋನ್ ಇಂಡಸ್ಟ್ರೀಸ್, ಸೆಂಟ್ರಲ್ ಪುಡ್ ಟೆಕ್ನಾಲಜಿಕಲ್ ಅಂಡ್ ರಿಸರ್ಚ್ ಇನ್ಸ್‌ಸ್ಟಿಟ್ಯೂಟ್, ಮಹಾತ್ಮಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್ ಇತ್ಯಾದಿಗಳ ಯಶಸ್ವಿಗೆ ಶ್ರಮಿಸಿದೆ. ಇಂದಿನ ಕರ್ನಾಟಕ ರಾಜ್ಯದ ಸರ್ವತೋಮುಖ ಬೆಳವಣಿಗೆಯಲ್ಲಿ ಅಂದಿನ ಕೆ.ಸಿ.ರೆಡ್ಡಿ ನಾಯಕತ್ವದಲ್ಲಿನ ಮಂತ್ರಿಮಂಡಲದ ಪ್ರತಿಭಾನ್ವಿತ ಸಚಿವರುಗಳ ನಿಸ್ವಾರ್ಥತೆ, ಪ್ರಾಮಾಣಿಕತೆ, ದೂರದೃಷ್ಠಿ, ರಾಜಕೀಯ ಇಚ್ಛಾಶಕ್ತಿಗಳನ್ನು ಆಡಳಿತದ ಎಲ್ಲಾ ಕ್ಷೇತ್ರಗಳಲ್ಲೂ ಅಳವಡಿಸಿ ಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

ಕೇಂದ್ರ ಸರ್ಕಾರದಲ್ಲಿ ಕೆ.ಸಿ. ರೆಡ್ಡಿ – 1952–1971

ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ [30–03–1952] ನೀಡಿದ ನಂತರ, ಭಾರತದ ಸಂವಿಧಾನಕ್ಕೆ ಅನುಗುಣವಾಗಿ ನಡೆದ ಮೊಟ್ಟಮೊದಲ ಚುನಾವಣೆಯಲ್ಲಿ, ಕೋಲಾರ ಜಿಲ್ಲೆ, ಬಂಗಾರಪೇಟೆಯಿಂದ ವಿಧಾನಸಭೆಗೆ [1952] ಆಯ್ಕೆಗೊಂಡರು. ಇದೇ ಅವಧಿಯಲ್ಲಿ ರಾಜ್ಯಸಭೆಯ ಸದಸ್ಯರಾಗಿ ರಾಜ್ಯದಿಂದ ಆಯ್ಕೆಗೊಂಡರು. ಕೋಲಾರದಿಂದ ಲೋಕಸಭಾ ಸದಸ್ಯರು [1957–61], ಚಿಕ್ಕಬಳ್ಳಾಪುರದಿಂದ ಲೋಕಸಭಾ ಸದಸ್ಯರಾಗಿ [1961–64] ಆಯ್ಕೆಗೊಂಡಿದ್ದರು. ಕೇಂದ್ರದಲ್ಲಿ ನೆಹರು ಸಂಪುಟದಲ್ಲಿ [1952–1964] ರವರೆಗೆ ಉತ್ಪಾದನೆ ಖಾತೆ, ಕಾಮಗಾರಿ, ಗೃಹ ನಿರ್ಮಾಣ ಮತ್ತು ಸರಬರಾಯಿ ಖಾತೆ, ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವರಾಗಿ ತೈಲ ಸಂಸ್ಕರಣಾ ಘಟಕಗಳು,

ಹಿಂದೂಸ್ಥಾನ್ ಮೆಷಿನ್ ಟೂಲ್ಸ್, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು, ಲಿಗ್ನೈಟ್ ಕಾರ್ಖಾನೆಗಳು, ಮಹಾತ್ಮಗಾಂದೀಜಿ ಸಮಾಧಿ ನಿರ್ಮಾಣ, ದೆಹಲಿ ಕರ್ನಾಟಕ ಭವನಕ್ಕೆ ನಿವೇಶನ, ಭಾರತ-ಶ್ರೀಲಂಕಾ ವ್ಯಾಪಾರ ಒಪ್ಪಂದ, ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್, ಭಾರತ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್ ಇತ್ಯಾದಿಗಳನ್ನು ಭಾರತದಾದ್ಯಂತ ಸ್ಥಾಪಿಸಿರುವ ಕೆ.ಸಿ.ರೆಡ್ಡಿಯವರು ಬ್ರಿಟನ್, ಅಮೇರಿಕಾ, ಸ್ವಿಜ್ಜರ್‌ಲ್ಯಾಂಡ್, ಪ್ಯಾರಿಸ್, ಸೋವಿಯತ್ ರಷ್ಯಾ ದೇಶಗಳಿಗೆ ಬೇಟಿ ನೀಡಿದ್ದಾರೆ. 1961 ರಲ್ಲಿ ಭಾರತದ ನಿಯೋಗದ ಅಧ್ಯಕ್ಷರಾಗಿ G.A.T.T.[General Agreement on Tariffs and Trade.] ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡಿದ್ದಾರೆ. ಲಾಲ್‌ಬಹುದ್ದೂರ್ ಶಾಸ್ತ್ರಿ ಅವಧಿಯಲ್ಲಿ ಕೆ.ಸಿ.ರೆಡ್ಡಿ ಮಧ್ಯ ಪ್ರದೇಶದ ರಾಜ್ಯಪಾಲರಾಗಿ [1965-71] ನೇಮಕಗೊಂಡಿದ್ದರು. ಕೆ.ಸಿ.ರೆಡ್ಡಿಯವರು ಲೋಕಸಭೆಯ ಉಪನಾಯಕರಾಗಿ ಆಯ್ಕೆ [1964-65]

ಕರ್ನಾಟಕ ರಾಜ್ಯದ ಮೈಸೂರು ವಿಶ್ವವಿದ್ಯಾಲಯ-1960 ರಲ್ಲಿ ಕೆ.ಸಿ.ರೆಡ್ಡಿಯ ಸಾಧನೆಗೆ "ಡಾಕ್ಟರ್ ಆಫ್ ಲಾಸ್" ಗೌರವ ಪ್ರಶಸ್ತಿ ನೀಡಿದೆ. ಹೀಗೆ ಕೆ.ಸಿ.ರೆಡ್ಡಿ ಐವತ್ತು ದಶಕಗಳ ರಾಜಕೀಯ ಜೀವನದಲ್ಲಿ ತಮ್ಮ ಧೀಮಂತ ಚಿಂತನಾ ವಿಚಾರಧಾರೆಗಳ ಮೂಲಕ ವ್ಯಕ್ತಿತ್ವವೊಂದರ ದರ್ಶನದ ಜೊತೆಗೆ ಸ್ವಾತಂತ್ರೋತ್ತರ ಭಾರತದ ನಾಲ್ವರು ಪ್ರಧಾನ ಮಂತ್ರಿಗಳಾದ ಜವಹರಲಾಲ್ ನೆಹರೂ, ಗುಲ್ಜಾರಿಲಾಲ್ ನಂದಾ (ಹಂಗಾಮಿ), ಲಾಲ್‌ಬಹದ್ದೂರ್ ಶಾಸ್ತ್ರಿ, ಶ್ರೀಮತಿ ಇಂದಿರಾ ಗಾಂಧಿ ಅವರ ಕಾಲಘಟ್ಟಗಳಲ್ಲಿ ದೇಶವೊಂದರ ಚಿತ್ರಣವನ್ನೂ ಬಿಂಬಿಸುವ ರೂಪಕವಾಗಿ, ಒಬ್ಬ ವ್ಯಕ್ತಿ ಸಲ್ಲಿಸಿರುವ ಸೇವೆ ಮತ್ತು ಸಾಧನೆ ನಮ್ಮನ್ನು ಬೆರಗುಗೊಳಿಸುತ್ತದೆ. ಇದು ಭಾರತ ದೇಶದ ಮಟ್ಟಿಗೆ ಬಹುದೊಡ್ಡದು. ಭಾರತ ಸರ್ಕಾರ ಮರಣೋತ್ತರವಾಗಿ ಕರ್ನಾಟಕದಲ್ಲಿ ಯಾರಿಗಾದರೂ ರಾಜಕೀಯವಾಗಿ "ಭಾರತ ರತ್ನ" ಪ್ರಶಸ್ತಿ ಕೊಡುವುದಾದರೆ ಅದು ನವ ಭಾರತದ ನಿರ್ಮಾಪಕರಲ್ಲೊಬ್ಬರಾದ ಕೆ.ಸಿ.ರೆಡ್ಡಿ [1976 ಫೆಬ್ರವರಿ 27] ಅವರಿಗೆ ಮಾತ್ರ ಎನ್ನುವುದನ್ನು ಯಾರೂ ಮರೆಯಬಾರದು.

* * * * *



ಕೆಂಗಲ್ ಹನುಮಂತಯ್ಯ

– ಡಾ. ಬಿ. ಪಾಂಡುಕುಮಾರ್

ಬಾಲ್ಯ ಜೀವನ ಮತ್ತು ಸಾಧನೆಗಳು :

ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ನೂರಾರು, ಸಾವಿರಾರು ನಾಯಕರುಗಳಿದ್ದಾರೆ. ಆದರೆ ಶ್ರೀ ಕೆಂಗಲ್ ಹನುಮಂತಯ್ಯನವರು ಇಂತಹ ನಾಯಕರುಗಳಲ್ಲೇ ನಾಯಕರಾಗಿ ನಮ್ಮ ಕಣ್ಮುಂದೆ ಬರುತ್ತಾರೆ. ಕೆಂಗಲ್ ಎಂದ ಕೂಡಲೆ ನಮ್ಮ ಕಣ್ಣಿಗೆ ರಾಚುವುದು ಅವರು ನಿರ್ಮಿಸಿದ ವಿಧಾನಸೌದ ಹಾಗೂ ನಾಡಿನ ಕೆಲವಾರು ಕಡೆ ಕಟ್ಟಿದ ಗುಡಿ ಗೋಪುರಗಳು. ಜನಪ್ರಿಯ ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಮೈಸೂರು ಚಲೋ ಚಳವಳಿಯ ನೇತಾರರಾಗಿ, ರಾಜ್ಯದ ಮುಖ್ಯ ಮಂತ್ರಿಯಾಗಿ, ಕೇಂದ್ರ ರೈಲ್ವೆ ಸಚೀವರಾಗಿ, ಶ್ರೇಷ್ಠ ಆಡಳಿತಗಾರರಾಗಿ ತಮ್ಮದೇ ಛಾಪು ಮೂಡಿಸಿದ್ದಾರೆ. ಬಡತನದಲ್ಲಿ ಹುಟ್ಟಿ ಬೆಳೆದರೂ ತಮ್ಮ ಇಡೀ ಜೀವಿತ ಕಾಲದಲ್ಲಿ ಪ್ರಾಮಾಣಿಕರಲ್ಲಿ ಪ್ರಾಮಾಣಿಕರಾಗಿ ನಮ್ಮ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ.

ಶ್ರೀ ಹನುಮಂತಯ್ಯನವರು ಬೆಂಗಳೂರು ಜಿಲ್ಲೆ ರಾಮನಗರ ತಾಲ್ಲೂಕು ಲಕ್ಕಪ್ಪನಹಳ್ಳಿ ಎಂಬಲ್ಲಿ 10–02–1908ರಲ್ಲಿ **ವೆಂಕಟೇಗೌಡ ಮತ್ತು** ನಂಜಮ್ಮ **ದಂಪತಿಗಳಿಗೆ ಜನಿಸಿದರು.** ದಂಪತಿಗಳಿಗೆ ಕೆಲವಾರು ಕಾಲ ಮಕ್ಕಳಿಲ್ಲದ ಕಾರಣ ಚನ್ನಪಟ್ಟಣ ಮತ್ತು ರಾಮನಗರ ಸಮೀಪದ ಕೆಂಗಲ್ ಛನುಮಂತರಾಯ ಸ್ವಾಮಿ ದೇವರಿಗೆ ಹರಕೆ ಹೊತ್ತ ಪರಿಣಾಮವಾಗಿ ಜನಿಸಿದ ಮಗುವಿಗೆ ಕೆಂಗಲ್ ಹನುಮಂತಯ್ಯ ಎಂದು ನಾಮಕರಣ ಮಾಡಿದರು. ಇವರ ಮೊದಲ ಹೆಸರು ದಾಸಪ್ಪ. ಮನೆಯಲ್ಲಿ ಬಡತನ, ರೈತರು ಎಂದರೆ ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಹನುಮಂತಯ್ಯನವರು ಹುಟ್ಟಿದ ತರುವಾಯ ಒಂದರ ನಂತರ ಒಂದು ಒಟ್ಟು ನಾಲ್ಕು ಜನ ಮಕ್ಕಳು ವೆಂಕಟಪ್ಪ ಮತ್ತು ನಂಜಮ್ಮ ದಂಪತಿಗಳಿಗೆ

ಜನಿಸಿದರು ಅವರೆ ಹನುಮಂತಯ್ಯ, ಗಿರಿಯಪ್ಪ, ಪುಟ್ಟಸ್ವಾಮಿ, ನಂಜಪ್ಪ. ದಂಪತಿಗಳಿಗೆ ಹೆಣ್ಣು ಮಕ್ಕಳಿಲ್ಲದ ಕಾರಣ ಅವರ ಬಂಧುವಾದ ಮುನೇಗೌಡರ ಮಗಳು 'ಗೌರಮ್ಮ' ಎಂಬಾಕೆಯನ್ನು ದತ್ತು ತೆಗೆದುಕೊಂಡರು. ಮನೆಯಲ್ಲಿ ಬಡತನವಿದ್ದರೂ ಮಕ್ಕಳಿಗೆ ಕೊರತೆ ಇರಲಿಲ್ಲ. ಇಂದು ಕೆಲವರ ಮನೆಯಲ್ಲಿ ಶ್ರೀಮಂತಿಕೆ ಇದ್ದರೂ ಒಂದು ಇಲ್ಲವೆ ಎರಡು ಮಕ್ಕಳನ್ನು ಮಾತ್ರ ಮಾಡಿಕೊಳ್ಳುತ್ತಾರೆ. ಈಗ ಇದೇ ಪ್ಯಾಷನ್ ಎಂದು ತಿಳಿದಿದ್ದಾರೆ. ನಾಲ್ಕು ಜನ ಮಕ್ಕಳಲ್ಲಿ ಓದಿನಲ್ಲಿ ಬಹಳ ಆಸಕ್ತಿ ಇದ್ದದ್ದು ದಾಸಪ್ಪ ಬಿನ್ ಹನುಮಂತಯ್ಯನವರಿಗೆ ಮಾತ್ರ. ಆಗ ಸರ್ಕಾರಿ ಶಾಲೆ ಇದ್ದದ್ದು ಕೆಂಗೇರಿ ಇಲ್ಲವೆ ಬೆಂಗಳೂರಿನಲ್ಲಿ ಮಾತ್ರ. ಲಕ್ಕಪ್ಪನಹಳ್ಳಿಯ ಹತ್ತಿರದ ಬನ್ನಿಕುಪ್ಪೆ ಆಂಜನೇಯ ಗುಡಿಯಲ್ಲಿದ್ದ ಸನ್ಯಾಸಿಯು ಹೊತ್ತು ಕಳೆಯಲು ಮಕ್ಕಳಿಗೆ ರಾಮಾಯಾಣ, ಮಹಾಭಾರತದ ಕಥೆಗಳನ್ನು, ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಇವೇ ಮುಂತಾದವುಗಳನ್ನು ಪಾರಾಯಣ ಮಾಡುತ್ತಿದ್ದರು. ಇದು ಬಾಲಕ ಹುಮಂತಯ್ಯನ ಮೇಲೆ ಪ್ರಭಾವ ಬೀರಿತು. ಮುಂದೆ ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಯಾದಾಗ 'ಕುಮಾರವ್ಯಾಸ ಭಾರತ'ವನ್ನು ಸರ್ಕಾರದ ಖರ್ಚಿನಲ್ಲಿ ಅಚ್ಚು ಹಾಕಿಸಿ ಕಡಿಮೆ ದರದಲ್ಲಿ ಮಾರಟ ಮಾಡಿದ್ದು ಈ ಕಾರಣವೇ ಇರಬಹುದು. ಒಟ್ಟಿನಲ್ಲಿ ಬಾಲಕ ದಾಸಪ್ಪ/ಹನುಮಂತಯ್ಯ ಬಹಳ ಚುರುಕಾಗಿದ್ದ. ದೈವಭಕ್ತಿ, ದೇಶಭಕ್ತಿ, ಭಾರತೀಯ ಕಲೆ, ಸಂಸ್ಕೃತಿ, ಸಾಹಿತ್ಯ ಜೀವನದಲ್ಲಿ ಶಿಸ್ತು ಇವೇ ಮುಂತಾದವುಗಳನ್ನು ರೂಡಿಸಿಕೊಂಡ.

ದಾಸಪ್ಪನಿಗೆ ಬಡತನ ಎಷ್ಟು ಕಾಡುತ್ತಿತ್ತು ಎಂದರೆ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದರೂ ಬಡತನದಿಂದಾಗಿ ಒಂದು ವರ್ಷ ಓದು ಮುಂದುವರಿಸಲಾಗಲಿಲ್ಲ. ಮಗನನ್ನು ಚನ್ನಾಗಿ ಓದಿಸಬೇಕೆಂದು ಹಂಬಲದಿಂದ ಬೆಂಗಳೂರಿನಲ್ಲಿದ್ದ ತಮ್ಮ ಬಂಧುವಾದ ಮುನಿಸ್ವಾಮಪ್ಪನವರಲ್ಲಿಗೆ ನಂತರ ನಾರಾಯಣಸ್ವಾಮಿಯವರ ಮನೆಯಲ್ಲಿ ಬಾಲಕ ಹನುಮಂತಯ್ಯ ಓದು ಮುಂದುವರಿಸಿದ. ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಾಲಕನಲ್ಲಿ ದಿನೇ ದಿನೇ ಓದಿನಲ್ಲಿ ಆಸಕ್ತಿ ಮೂಡಿತು ಜ್ಞಾನದಾಹ ಹೆಚ್ಚಿತು. ಬೆಂಗಳೂರಿನ ವೆಸ್ಲಿ ಹೈಸ್ಕೂಲಿನಲ್ಲಿ ಶಿಕ್ಷಣ ಮುಂದುವರಿಯಿತು. ಅದು ಸ್ವಾತಂತ್ರ್ಯ ಸಂಗ್ರಮದ ಕಾಲ ರಾಜ್ಯ ಮತ್ತು ರಾಷ್ಟ್ರದ ಸ್ವಾತಂತ್ರ್ಯ ಹೋರಾಟಗಾರರು ಬಿರುಸಿನ ಪ್ರಚಾರ ಮಾಡಿ ಜನರನ್ನು ಉರಿದುಂಬಿಸುತ್ತಿದ್ದರು. ಒಮ್ಮೆ ಚಕ್ರವರ್ತಿ ರಾಜ ಗೋಪಾಲಚಾರಿಯವರು ಇಂದಿನ ಕೆ.ಆರ್.ಮಾರುಕಟ್ಟೆಯ ಬಳಿ ಜನರನ್ನುದ್ದೇಶಿಸಿ ಇಂಗ್ಲಿಷ್‌ನಲ್ಲಿ ಭಾಷಣ ಮಾಡುತ್ತಿದ್ದುದನ್ನು ಬಾಲಕ ಹನುಮಂತಯ್ಯ ಕೇಳಿ ಪುಲಕಿತನಾದ. ನಾನೂಕೂಡ ಇದೇರೀತಿ ಇಂಗ್ಲಿಷನ್ನು ಚನ್ನಾಗಿ ಕಲಿತು ಭಾಷಣ ಮಾಡಬೇಕೆಂದು ತೀರ್ಮಾನಿಸಿದ.

ಕಂಡವರ ಮನೆಯಲ್ಲಿ ಓದುತ್ತಿದ್ದ ಬಾಲಕನಿಗೆ ಬಡತನ ಕಾಡುತ್ತಿದ್ದರೂ ಛಲದಲ್ಲಿ ಕಡಿಮೆ ಇರಲಿಲ್ಲ. ಓದಿನಲ್ಲಿ ಆಸಕ್ತಿ ಎಷ್ಟಿತ್ತೆಂದರೆ ಒಮ್ಮೆ ರಾತ್ರಿ ಲಾಲ್‌ಬಾಗ್ ರಸ್ತೆಯ ಲೈಟುಕಂಬದ ಕೆಳಗೆ ಓದುತ್ತಾ ಕುಳಿತಿದ್ದ ಬಾಲಕನನ್ನು ಅದೇ ರಸ್ತೆಯಲ್ಲಿ ಬರುತ್ತಿದ್ದ ಒಕ್ಕಲಿಗ ಜನಾಂಗದ ಅಗ್ರಮಾನ್ಯರು ಹಾಗೂ ಒಕ್ಕಲಿಗರ ಸಂಘದ ಹುಟ್ಟಿಗೆ ಕಾರಣ ಕರ್ತರಾದ ಶ್ರೀ ಕೆ.ಹೆಚ್. ರಾಮಯ್ಯನವರು ಆವೇಳೆಯಲ್ಲಿ ಶ್ರದ್ದೆ ಮತ್ತು ತದೇಕ ಚಿತ್ತದಿಂದ ಓದುತ್ತಿದ್ದ ಬಾಲಕನನ್ನು ನೋಡಿ "ಯಾರಪ್ಪ ನೀನು ಇಷ್ಟು ಹೊತ್ತಿನಲ್ಲಿ" ಇವೇ ಮುಂತಾದ ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡು ಮಾರನೆಯ ದಿನ ಬೆಳಗ್ಗೆ ತನ್ನನ್ನು ಕಾಣುವಂತೆ ಹೇಳಿ ಹೊರಟುಹೊದರು. ಬಹುಷಃ ಭಗವಂತನೇ ಕೆ.ಹೆಚ್. ರಾಮಯ್ಯನವರ ರೂಪದಲ್ಲಿ ಬಂದಿರಬೇಕು ಅಲ್ಲಿಂದಾಗಿ ಬಾಲಕ ಹನುಮಂತಯ್ಯನ ಅದೃಷ್ಟ ಕುಲಾಯಿಸಿತು.

ಬಾಲಕ ಹನುಮಂತಯ್ಯ ಕೆ.ಹೆಚ್. ರಾಮಯ್ಯನವರ ಮನೆಗೆ ಹೋಗಿ ಅವರನ್ನು ಕಾಣಲು ರಾಮಯ್ಯನವರು ಪ್ರೌಢ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಷಿಪಾರಸ್ಸು ಪತ್ರ ನೀಡಿ ಬಾಲಕನ ಓದಿಗೆ ಸಹಾಯವಾಗುವಂತೆ ವಿದ್ಯಾರ್ಥಿವೇತನ ಮಂಜೂರಾಗುವಂತೆ ಮಾಡಿದರು. ಇದು ಹನುಮಂತಯ್ಯನಿಗೆ ಆನೆ ಬಲ ಬಂದಂತಾಯ್ತು. ಬಾಲಕನ ಶ್ರದ್ದೆ, ಭಕ್ತಿ, ಓದಬೇಕೆಂಬ ಛಲ, ವಿನಯವನ್ನು ಕಂಡ ರಾಮಯ್ಯನವರು ಒಕ್ಕಲಿಗರ ಸಂಘದಲ್ಲಿ ಓದಲು ಅವಕಾಶ ಮಾಡಿಕೊಟ್ಟರು. ಅಂದು ಒಕ್ಕಲಿಗರ ಸಂಘವು ಒಕ್ಕಲಿಗರಿಗೆ ಮಾತ್ರ ಆಶ್ರಯತಾಣವಾಗಿರಲಿಲ್ಲ ಯಾವುದೇ ಜಾತಿಯ ಬಡವರಿಗೂ ಓದಲು ಅವಕಾಶ ನೀಡುತ್ತಿತ್ತು. ಶ್ರೀ ಕೆ.ಹೆಚ್.ರಾಮಯ್ಯನವರೇ ಬಾಲಕ ಹನುಮಂತಯ್ಯನಿಗೆ ಶ್ರೀರಕ್ಷೆಯಾಗಿ ನಿಂತಾಗ ಕೆಲಸ ಸಲೀಸಾಯಿತು. ವಿದ್ಯಾರ್ಥಿ ವೇತನದ ಜೊತೆಗೆ ಸಂಘದ ವಿದ್ಯಾರ್ಥಿನಿಲಯದಲ್ಲಿದ್ದು ಓದಲು ಅನುಕೂಲವಾಯಿತು. ಬಾಲಕ ಎಲ್ಲರಂತಲ್ಲ ಅಂದು ಒಕ್ಕಲಿಗರ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಶ್ರೀ ಹೆಚ್.ಕೆ. ವೀರಣ್ಣಗೌಡರೇ ಹೇಳುವಂತೆ (ಬದುಕು ಮೆಲಕು–ಹೆಚ್.ಕೆ.ವೀರಣ್ಣಗೌಡ ಪುಟ 222) ಹನುಮಂತಯ್ಯನವರು ಐದನೇ ಪಾರಂ ಇರಬಹುದು ನನ್ನಲ್ಲಿಗೆ ಬಂದು ನಾನು ಒಂದು ಇಂಗ್ಲಿಷ್ ಪತ್ರಕೆಯಲ್ಲಿದ್ದ ಪಂಡಿತ ಮದನ ಮೋಹನ ಮಾಳವೀಯರ ಲೇಖನವನ್ನು ಅನುವಾದಿಸಿದ್ದೇನೆ ಇದನ್ನು ಓದಿ ನೋಡಿ ನಿಮಗೆ ಸರಿಕಂಡರೆ ನಿಮ್ಮ ಪತ್ರಿಕೆಯಲ್ಲಿ ದಯವಿಟ್ಟು ಪ್ರಕಟಿಸಿರಿ ಎಂದನಂತೆ ಅದಕ್ಕೆ ವೀರಣ್ಣಗೌಡರು ಆಗಲಿ ಕೊಡಿ ನಾನು ಇದನ್ನು ಓದಿ ನೋಡುತ್ತೇನೆ ಪ್ರಕಟಿಸಬಹುದೆಂದು ಅನ್ನಿಸಿದರೆ ಮುಂದಿನ ವಾರದ ಸಂಚಿಕೆಯಲ್ಲಿ ಪ್ರಕಟಿಸುತ್ತೇನೆ ಎಂದರಂತೆ ವೀರಣ್ಣಗೌಡರು ಬಾಲಕನು ತರ್ಜುಮೆ ಮಾಡಿದ ಲೇಖನವು ಉತ್ತಮವಾಗಿದ್ದು ವಿದ್ಯಾರ್ಥಿಗಳನ್ನು ಅದರಲ್ಲೂ ಯುವ ಬರಹಗಾರರನ್ನು

ಪ್ರೋತ್ಸಾಹಿಸುವ ಉದ್ದೇಶದಿಂದ ಅವರ ಲೇಖನವನ್ನು ಪ್ರಕಟಿಸಿದರು. ಬಾಲಕ ಹನುಮಂತಯ್ಯನಿಗೆ ಸಂತೋಷವೇನೂ ಸರಿ ಆದರೆ ಆ ಪತ್ರಿಕೆಯನ್ನು ನೋಡಿದ ಸಂಘದ ಕಾರ್ಯದರ್ಶಿಗಳಾಗಿದ್ದ **ಬಿ. ಕೆಂಪಣ್ಣ** ರವರು ವೀರಣ್ಣಗೌಡರಿಗೆ ಪತ್ರ ಬರೆದು ನಿಮಗೆ ಸಂಬಳ ಕೊಡುವುದು ವಿದ್ಯಾರ್ಥಿಗಳು ಬರೆದಿರುವ ಲೇಖನವನ್ನು ಪ್ರಕಟಿಸುವುದಕ್ಕಲ್ಲ ನೀವೇ ಖುದ್ದು ಬರೆದು ಪ್ರಕಟಿಸಬೇಕು ಎಂದು ಎಚ್ಚರಿಸಿದರಂತೆ ವೀರಣ್ಣಗೌಡರ ಹಿಂದಿನ ಉದ್ದೇಶದ ಮೇಲೆ ಬರೆ ಎಳೆದಂತಾಯ್ತು.

ಸ್ವಾತಂತ್ರ್ಯದ ಪ್ರಭಾವ

ಇಂದಿನ ಯುವಕರು, ವಿದ್ಯಾರ್ಥಿಗಳು ಮೋಜು ಮಸ್ತಿಯಲ್ಲಿ ಕಾಲ ಕಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. 1927ರಲ್ಲಿ ಮದರಾಸಿನಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೆದಾಗ ಹನುಮಂತಯ್ಯ ವಿದ್ಯಾರ್ಥಿನಾಯಕನಾಗಿ ಮೈಸೂರು ರಾಜ್ಯವನ್ನು ಪ್ರತಿನಿಧಿಸಿದನು. ಯುವಕ ಹನುಮಂತಯ್ಯನಿಗೆ ದೇಶಪ್ರೇಮ ಹುಟ್ಟಿತು. ರಾಜ್ಯ ಮತ್ತು ರಾಷ್ಟ್ರದ ನಾಯಕರ ಪರಿಚಯುವಾಯ್ತು ಮಹತ್ಮಗಾಂಧಿಯವರ ಬಗ್ಗೆ ಕೇಳಿತಿಳಿದುಕೊಂಡ ಹನುಮಂತಯ್ಯ ಅಂತಹ ಮಹತ್ಮನನ್ನು ಒಮ್ಮೆ ನೋಡಬೇಕು ಮಾತನಾಡಬೇಕೆಂಬ ಹಂಬಲ ಹುಟ್ಟಿತು. ಖಾದಿ ವಸ್ತ್ರ ಧರಿಸಲು ಪ್ರಾರಂಬಿಸಿದ ಆತನ ಮನಸ್ಸು ಸ್ವಾತಂತ್ರ್ಯಕ್ಕಾಗಿ ತುಡಿಯುತ್ತಿತ್ತು. ಬಾಲಕನಾಗಿರುವಾಗಲೆ ತಪ್ಪದೇ ದಿನಚರಿ ಬರೆಯುವ ಅಬ್ಯಾಸವಿತ್ತು ಓದಿನಲ್ಲಿ ಅತೀವ ಆಸಕ್ತಿ ಮುಂದೊಮ್ಮೆ ರಾಷ್ಟ್ರ ನಾಯಕನಾಗಬೇಕೆಂಬ ಹಂಬಲ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉನ್ನತ ಶಿಕ್ಷಣ ಪಡೆಯಲು ಮೈಸೂರಿಗೆ ಹೋಗಬೆಕಾಗಿ ಬಂತು. ಮೈಸೂರಿಗೆ ಹೋಗಿ ವ್ಯಾಸಂಗ ಮಾಡಬೇಕಾದರೆ ಹೆಚ್ಚಿನ ಹಣಬೇಕು ವಾಸಕ್ಕೆ ಅನುಕೂಲ ಇರಬೇಕು ಇವೆ ಮುಂತಾದ ಸಮಸ್ಯೆಗಳು ಎದುರಾದವು. ಈಗಾಗಲೆ ತಿಳಿಸಿರುವಂತೆ ಶ್ರೀ ಕೆ.ಹೆಚ್.ರಾಮಯ್ಯನವರ ಮಗಳು ಶ್ರೀಮತಿ ಯಶೋಧರ ದಾಸಪ್ಪ ಮತ್ತು ಅವರ ಪತಿ ಶ್ರೀ ಹೆಚ್.ಸಿ.ದಾಸಪ್ಪನವರು ಯುವಕ ಹನುಮಂತಯ್ಯನವರಿಗೆ ಸಹಾಯ ಮಾಡಿದರು ಮೈಸೂರಿನ ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ, ವಸತಿ ದೊರೆಯಿತು. 1930ರಲ್ಲಿ ಬಿ.ಎ ಪದವಿಗಳಿಸಿದರು.

ತನಗೆ ಆಶ್ರಯ ನೀಡಿದ ಶ್ರೀ ದಾಸಪ್ಪ ಹಾಗೂ ಶ್ರೀಮತಿ ಯಶೋಧರ ದಾಸಪ್ಪನವರನ್ನು ಬಹಳ ಪ್ರೀತಿ ಮತ್ತು ಗೌರವದಿಂದ ಕಾಣುತ್ತಿದ್ದರು ಹೀಗಾಗಿ ಯುವಕ ಹನುಮಂತಯ್ಯನವರಿಗೆ ಎಲ್.ಎಲ್.ಬಿ ಓದುವಂತೆ ದಾಸಪ್ಪನವರು ಪ್ರೋತ್ಸಾಹಿಸಿದರು. ದಾಸಪ್ಪನವರಿಗೆ ಸ್ನೇಹಿತರಾಗಿದ್ದ ಸಾಹುಕಾರ್ ಚನ್ನಯ್ಯನವರಲ್ಲಿಗೆ ಕಳುಯಿಸಿ ಕೊಟ್ಟು ಧನ ಸಹಾಯ ಮಾಡುವಂತೆ ಷಿಫಾರಸ್ಸು ಮಾಡಿದರು

ಅದರಂತೆ ಚನ್ನಯ್ಯನವರು ಧನ ಸಹಾಯ ಮಾಡಲಾಗಿ ಪೂನಾದ ಫರ್ಗೂಸನ್ "ಲಾ" ಕಾಲೇಜಿನಲ್ಲಿ ವ್ಯಾಸಂಗ ಮಾಡತೊಡಗಿದರು. ವ್ಯಾಸಂಗ ಮಾಡುವ ಜೋತೆ ಜೊತೆಗೆ ಯೂರೋಪಿಯನ್ ಲೇಖಕರ ಗ್ರಂಥಗಳನ್ನು ಓದುತ್ತಿದ್ದರು ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ ಭಾಷೆಗಳನ್ನು ಕಲಿತು ಆಡುತ್ತಿದ್ದರು ಇಂಗ್ಲಿಷನ್ನು ಇಂಗ್ಲಿಷರಿಗಿಂತ ಉತ್ತಮವಾಗಿ ಮಾತನಾಡುತ್ತಿದ್ದರು. ಕನ್ನಡಕ್ಕಿಂತಲೂ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯವು ಉತ್ತಮವೂ ಶ್ರೇಷ್ಠವೂ ಆಗಿದೆ ಎನ್ನುತ್ತಿದ್ದರು.

ವಕೀಲರಾಗಿ ಹನುಮಂತಯ್ಯ

ಪೂನಾದಿಂದ ಬೆಂಗಳೂರಿಗೆ ಬಂದ ಮೇಲೆ ಅದೇ ಹಣದ ಸಮಸ್ಯೆ ಎದುರಾಯ್ತು ನ್ಯಾಯವಾದಿಯಾಗಬೇಕಾದರೆ ಲಾಬಾರ್‌ಕೌನ್ಸಿಲ್‌ನಲ್ಲಿ ದಾಖಲಾಗಬೇಕು ಅದಕ್ಕೆ ಹಣಬೇಕು, ಕಾನೂನು ಪುಸ್ತಕಗಳು, ಕೊಠಡಿ ಹೀಗೆ ನಾನಾ ವಿದವಾದ ಖರ್ಚು ಎದುರಾದವು. ಮತ್ತೆ ಹಣಕ್ಕಾಗಿ ಅವರಿವರನ್ನು ಕೇಳುವುದು ತಪ್ಪಲಿಲ್ಲ. ಹೇಗೂ ವಾಡಿ ಪುಸ್ತಕ, ಧಿರಿಸು ಇವೇ ಮುಂತಾದವುಗಳನ್ನು ಸಂಪಾದಿಸಿದರು. ತಿಟ್ಟಮಾರನಹಳ್ಳಿ ವಿ.ವೆಂಕಟಪ್ಪನವರೂ ಕೂಡ ಚನ್ನಪಟ್ಟಣದವರು ಹಾಗೂ ಸ್ವಾತಂತ್ರ್ಯ ಹೋರಾಟಗಾರರು, ಬಹಳ ಪ್ರಭಾವಿ ವ್ಯಕ್ತಿಯಾಗಿದುದರಿಂದ ಅವರನ್ನು ಕಂಡು ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ವೆಂಕಟಪ್ಪನವರು ಅಂದು ಬೆಂಗಳೂರಿನ ಸುಪ್ರಸಿದ್ದ ವಕೀಲರಾಗಿದ್ದ ಶ್ರೀ ಗುರುವಾರೆಡ್ಡಿ (ಕೆ.ಸಿ. ರೆಡ್ಡಿಯವರ ಮಾವ)ಯವರಲ್ಲಿ ಕರೆದುಕೊಂಡು ಹೋಗಿ ಪರಿಚಯಿಸಿ ಅವರ ಕಚೇರಿಯಲ್ಲಿ ಕಿರಿಯ ವಕೀಲರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದರು. ಜೀವನದಲ್ಲಿ ಕಷ್ಟವನ್ನೇ ತಿಂದು, ಉಂಡು, ಹಾಸಿ, ಹೊದ್ದಿದ್ದ ಕೆಂಗಲ್ ಹನುಮಂತಯ್ಯನವರು ಬಹಳ ಬೇಗ ಕೆಲಸ ಕಲಿತರು.

ಕ್ರಮೇಣ ಸ್ವತಂತ್ರ ವಾಗಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಸಾಮಾನ್ಯವಾಗಿ ವಕೀಲ ವೃತ್ತಿ ಆರಂಬಿಸುವವರಿಗೆ ಇಂಗ್ಲಿಷ್ ಭಾಷೆಯು ತೊಡಕಾಗುತ್ತದೆ. ಆದರೆ ಈಗಾಗಲೆ ತಿಳಿಸಿರುವಂತೆ ಹನುಮಂತಯ್ಯನವರಿಗೆ ಇಂಗ್ಲಿಷ್ ಭಾಷೆಯ ಪಾಂಡಿತ್ಯವಿದ್ದಿತು. ಕಾನೂನು ಪದವಿ ಅವರ ನೆರವಿಗೆ ಬಂತು. ನೂರು ರೂಪಾಯಿಯಿಂದ, ಐನೂರು ರೂಪಾಯಿ ನಂತರ ಸಾವಿರ ರೂಪಾಯಿ ಸಂಭಾವನೆಯನ್ನು ಪಡೆಯುವ ಹೆಸರಾಂತ ನ್ಯಾಯವಾದಿಗಳಾಗಿದ್ದರು. ಹಣಕ್ಕೆ ಎಷ್ಟು ಬೆಲೆ ಇದೆ ಹಣವಿಲ್ಲದಿದ್ದರೆ ಸಮಾಜದಲ್ಲಿ ಎಷ್ಟು ಪರದಾಡಬೇಕಾಗುತ್ತದೆ ಎಂದು ಪಾಠ ಕಲಿತ್ತಿದ್ದರು. ಹೆಚ್.ಕೆ. ವೀರಣ್ಣಗೌಡರೇ ಹೇಳುವಂತೆ ಹನುಮಂತಯ್ಯನವರು ಹಣಕಾಸಿನ ವಿಷಯದಲ್ಲಿ ಕಟ್ಟುನಿಟ್ಟಿನ ಆಸಾಮಿ ಕಕ್ಷಿದಾರರಿಂದ ನೇರವಾಗಿ ಹಣ ಪಡೆಯುತ್ತಿರಲಿಲ್ಲ. ತಮಗೆ ಬರಬೇಕಾದ

ಹಣವನ್ನು ಬ್ಯಾಂಕಿಗೆ ಸಂದಾಯಮಾಡಿ ರಷೀತಿಯನ್ನು ತಮ್ಮ ಕಚೇರಿಯ ಸಿಬ್ಬಂದಿಗೆ ತಂದೊಪ್ಪಿಸಬೇಕಿತ್ತು (ಬದುಕು ಮೆಲಕು– ಹೆಚ್.ಕೆ. ವೀರಣ್ಣಗೌಡ ಪುಟ 223) ತಿಪ್ಪಗೊಂಡನಹಳ್ಳಿ, ಮಾರ್ಕೋನಹಳ್ಳಿ, ಕಣ್ವ, ಕೂಡ್ಲು ಕೆರೆಗಳ ಮುಳುಗಡೆ ಇವೇ ಮುಂತಾದ ಮುಳುಗಡೆ ಪ್ರದೇಶದ ಕೇಸುಗಳು ಬರುತ್ತಿದ್ದವು ಹನುಮಂತಯ್ಯನವರು ಎಂದಿಗೂ ಹಣಕ್ಕಾಗಿ ಸುಳ್ಳುಕೇಸು, ಖೂನಿಕೇಸು, ದಗಾ, ವಂಚನೆ ಕೇಸುಗಳ ಪರ ನಿಲ್ಲುತ್ತಿರಲಿಲ್ಲ ಅನ್ಯಾಯವಾಗಿದ್ದರೆ ಮಾತ್ರ ಅವರ ಪರ ನಿಲ್ಲುತ್ತಿದ್ದರು ಅಕ್ರಮ ಕೇಸುದಾರರಿಗೆ ಬಾಗಿಲಿನಿಂದ ಹೊರಗೆ ಹೋಗುವಂತೆ ಹೇಳುತ್ತಿದ್ದರು. ತುಂಬಾ ಬಡವರಿಗೆ, ರೈತರಿಗೆ, ಅನ್ಯಾಯವಾಗಿದ್ದರೆ ಅಂತಹವರಿಗೆ ಉಚಿತವಾಗಿ ಕೇಸು ನಡೆಸಿ ಕೊಡುತ್ತಿದ್ದರು. ಈ ಮೊದಲು ತಮ್ಮ ಮಾವನವರ ಮನೆಯ ಸಮೀಪ ಅಂದರೆ ಸಿಲ್ವರ್ ಜೂಬಲಿ ಪಾರ್ಕ್ ರಸ್ತೆಯಲ್ಲಿ ನಂತರ ಅವೆನ್ಯೂ ರಸ್ತೆಯಲ್ಲಿ ತಮ್ಮ ಕಚೇರಿಯನ್ನು ಹೊಂದಿದ್ದರು. ಕೆಂಗಲ್ಲರು ಪ್ರಾಪ್ತವಯಸ್ಸಿಗೆ ಬರುತ್ತಲೆ ಬೆಂಗಳೂರು ಷಹರಿನ ಗೊಲ್ಲರಪೇಟೆಯ ಶ್ರೀಮಂತ ಪುಟ್ಟಯ್ಯನವರ ಕುಮಾರ್ತಿ ಪುಟ್ಟಮ್ಮನವರನ್ನು ವಿವಾಹವಾದರು ದಂಪತಿಗಳಿಗೆ ಎರಡು ಹೆಣ್ಣು ಮಕ್ಕಳು ಜನಿಸಿದವು (ವಿಜಯಲಕ್ಷ್ಮಿ ಪತಿ ಡಾ.ಟಿ. ತಿಮ್ಮಯ್ಯ, ವಸಂತಲಕ್ಷ್ಮಿ ಪತಿ ಬಿ. ಶಿವಲಿಂಗಯ್ಯ)

ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದ ಕೆಂಗಲ್

ಬ್ರಿಟೀಷರ ದಾಸ್ಯ ಶೃಂಕಲೆಯಿಂದ ಬಿಡಿಸಿಕೊಳ್ಳಲು ಇಡೀ ದೇಶವೆ ಹೋರಾಟಕ್ಕಿಳಿಯಿತು. ನಮ್ಮ ರಾಜ್ಯದಲ್ಲೂ ಸಾತಂತ್ರ್ಯ ಹೋರಾಟದ ಬಿಸಿ ತಟ್ಟತೊಡಗಿತು. ಅಂದು ಕರ್ನಾಟಕ ರಾಜ್ಯವೆಂದು ಒಂದು ರಾಜ್ಯವಾಗಿರಲಿಲ್ಲ ಮೈಸೂರು ಪ್ರಾಂತ್ಯವೆ ಅಂದು ಒಂದು ರಾಜ್ಯವಾಗಿತ್ತು. ಉತ್ತರ ಕರ್ನಾಟಕ ಭಾಗ, ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಹೀಗೆ ಇಂದಿನ ಕರ್ನಾಟಕ ರಾಜ್ಯ ಅಂದು ಚಿದ್ರಗೊಂಡಿತ್ತು. ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ತಮ್ಮ ಪುರೋಭಿವೃದ್ಧಿ ಕೆಲಸದಿಂದಾಗಿ ಇಡೀ ರಾಷ್ಟ್ರದಲ್ಲೆ ಮೈಸುರು ಹೆಸರು ವಾಸಿಯಾಗಿತ್ತು. ಮಹಾತ್ಮಗಾಂಧಿಯವರೇ ನಾಲ್ವಡಿ ಕೃಷ್ಣರಾಜರನ್ನು "ರಾಜಋಷಿ" ಎಂದು ಕರೆದರು.

ಅಂತಹ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿತ್ತು. 1917ರಲ್ಲಿ ಹಿರೇಹಳ್ಳಿ ಚನ್ನಯ್ಯನವರಿಂದಾಗಿ ಹಿಂದುಳಿದ ವರ್ಗಗಳ ಹೋರಾಟ ನಡೆದು ಆಳರಸರು ಇಡೀ ದೇಶದಲ್ಲೆ ಪ್ರಥಮ ಬಾರಿಗೆ "ಜಸ್ಟಿಸ್ ಲೆಸ್ಲೆ ಮಿಲ್ಲರ್ ಕಮಿಷನ್" ರಚಿಸಿ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಟ್ಟರು. 1937ರಲ್ಲಿ ಬ್ರಾಹ್ಮಣೇತರರೆಲ್ಲ ಸೇರಿ "ಪ್ರಜಾಮಿತ್ರ ಮಂಡಳಿ" ಎಂಬ ಪಕ್ಷವನ್ನು

ಹುಟ್ಟು ಹಾಕಿದರು. ಇದಕ್ಕೆ ಕಾರಣ ಮದ್ರಾಸ್‌ನಲ್ಲಿ ಪ್ರಾರಂಭವಾದ "ಜಸ್ಟೀಸ್ ಪಕ್ಷ" ಕರ್ನಾಟಕದಲ್ಲಿ ಹಿಂದುಳಿದ ಜನಾಂಗದ ಆಂದೋಲನವನ್ನು ಎಬ್ಬಿಸಿದವರು ಪ್ರೊ॥ ಸಿ.ಆರ್.ರೆಡ್ಡಿಯವರು.

ಪ್ರಜಾಮಿತ್ರ ಮಂಡಳಿಯ ನಂತರ ತಿಪಟೂರಿನ ಡಿ.ಎಸ್.ಮಲ್ಲಪ್ಪನವರ ನೇತೃತ್ವದಲ್ಲಿ(1928) "ಪ್ರಜಾಪಕ್ಷ" ನಂತರ "ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆ/ಪಕ್ಷ" ಸ್ಥಾಪನೆಯಾಯಿತು. 1935ರಲ್ಲಿ ಮೊದಲ ಅಧಿವೇಶನ ಹಾಸನದಲ್ಲಿ ನಡೆಯಿತು. ಕೆ.ಸಿ.ರೆಡ್ಡಿ, ವಿ. ವೆಂಕಟಪ್ಪ, ಹೆಚ್.ಸಿ. ದಾಸಪ್ಪ, ಗುಂಡಪ್ಪಗೌಡ ಇವರೆ ಮುಂತಾದವರು ಅಧಿವೇಶನಕ್ಕಾಗಿ ದುಡಿದರು. ಬೆಂಗಳೂರು ಸೇರಿದಂತೆ ಹಳೇ ಮೈಸೂರು ಪ್ರಾಂತ್ಯದಲ್ಲಿ ಟಿ. ಸಿದ್ದಲಿಂಗಯ್ಯ, ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂ, ತಗಡೂರು ರಾಮಚಂದ್ರರಾವ್, ಸಾಹುಕಾರ್ ಚನ್ನಯ್ಯ, ವೀರಕೇಸರಿ ಸೀತಾರಾಮಶಾಸ್ತ್ರಿ, ಹೆಚ್.ಕೆ. ವೀರಣ್ಣಗೌಡ, ಕಮಲಾದೇವಿ ಚಟ್ಟೋಪಾಧ್ಯಾಯ, ತಾಯಮ್ಮ, ವೀರಣ್ಣಗೌಡ, ಬಳ್ಳಾರಿಸಿದ್ದಮ್ಮ, ಯಶೋಧರದಾಸಪ್ಪ, ಎನ್.ಎಸ್. ಹಾರ್ಡಿಕರ್, ಎಸ್.ಕೆ. ವೆಂಕಟರಂಗಯ್ಯಂಗಾರ್, ಬಿ.ಎನ್. ಗುಪ್ತ, ಮಾದಯ್ಯಗೌಡ, ಎಸ್. ರಂಗರಾಮಯ್ಯ ಇನ್ನೂ ಮುಂತಾದ ನೂರಾರು ಸಾವಿರಾರು ಜನ ನಾಯಕರು ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿ ಆಂದೋಲನ ನಡೆಸುತ್ತಿದ್ದರು. 1938 ಫೆಬ್ರವರಿ 28ರಂದು ಮೈಸೂರು ಕಾಂಗ್ರೆಸ್ ಬೋರ್ಡ್ ಮೈಸೂರು ನಗರದಲ್ಲಿ ಸಭೆನಡೆಸಿ ಅಂದೇ "ಮೈಸೂರು ಕಾಂಗ್ರೆಸ್" ಎಂಬ ಸ್ವತಂತ್ರ ರಾಜಕೀಯ ಪಕ್ಷವನ್ನು ಅಸ್ತಿತ್ವಕ್ಕೆ ತಂದರು. ಮೈಸೂರು ಪ್ರಾಂತ್ಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸತೊಡಗಿತು. ಪೋಲೀಸರು ಮತ್ತು ಬ್ರಿಟೀಷ್ ಸೈನಿಕರು ಚಳವಳಿಗಾರರನ್ನು ಹತ್ತಿಕ್ಕತೊಡಗಿದರು. ಈಗಾಗಲೆ ತಿಳಿಸಿರುವಂತೆ ಹೋರಾಟದ ಕಣದಲ್ಲಿದ್ದ ಹೆಚ್.ಸಿ. ದಾಸಪ್ಪ, ಕೆ.ಸಿ.ರೆಡ್ಡಿ, ಗುರುವಾರೆಡ್ಡಿ ಇವರೇ ಮುಂತಾದವರು ಕೆಂಗಲ್ ಹನುಮಂತಯ್ಯನವರಂತ ಬುದ್ಧಿವಂತರು ಹೋರಾಟದ ಅಖಾಡಕ್ಕೆ ಕರತರಬೇಕೆಂದು ತೀರ್ಮಾನಿಸಿದರು. ಇದರ ಜೊತೆಗೆ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪುರುಷೋತ್ತಮ ದಾಸ್ ಟಂಡನ್‌ರವರು ಕೆಂಗಲರನ್ನು ಕುರಿತು "ನಿಮ್ಮಂತಹ ಪ್ರತಿಭಾವಂತರು ನ್ಯಾಯಾಲಯಕ್ಕೆ ಹೋಗಿ ನ್ಯಾಯಾಧೀಶರ ಮುಂದೆ ನಿಂತು ಮೈಲಾರ್ಡ್, ಮೈಹಾನರ್ ಎಂದು ಹೇಳುವುದು ಸರಿಕಾಣುವುದಿಲ್ಲ ಧೈರ್ಯ ಮತ್ತು ಶೌರ್ಯದಿಂದ ಬ್ರಿಟಿಷರನ್ನು ಬಗ್ಗು ಬಡಿಯೋಣ ಎಂದು ಹುರಿದುಂಬಿಸಿದರು. ಇಷ್ಟೇ ಅಲ್ಲದೆ ಹೋರಾಟದ ಮುಂಚೂಣಿಯಲ್ಲಿದ್ದ ಹೆಸರಾಂತ ನ್ಯಾಯವಾದಿ ಕೆ.ಸಿ.ರೆಡ್ಡಿಯವರು ಕೆಂಗಲ್ಲರಿಗೆ ಹೀಗೆ ಪತ್ರ ಬರೆದರು "ನಿಮ್ಮ ಭವಿಷ್ಯ ಉಜ್ವಲವಾಗಿದೆ ಮೈಸೂರು ಕಾಂಗ್ರೆಸ್ ಮುಖಂಡರೆಲ್ಲ ಬಂಧನಕ್ಕೊಳಾಗಾಗಿ ಸೆರೆಮನೆ ಸೇರುತ್ತಿದ್ದಾರೆ. ಕಾಂಗ್ರೆಸ್ ಕೆಲಸಕ್ಕೆ

ಮುಖಂಡರೇ ಇಲ್ಲದಂತಾಗಿದೆ. ನೀವು ವಕೀಲಿ ವೃತ್ತಿಯನ್ನು ತ್ಯಜಿಸಿ ಸಂಪೂರ್ಣವಾಗಿ ಕಾಂಗ್ರೆಸ್ ಕೆಲಸಕ್ಕೆ ಅರ್ಪಿಸಿಕೊಳ್ಳಬೇಕು ದೇಶದ ಹಿತದೃಷ್ಟಿಯಿಂದ ನಿಮ್ಮ ನಾಯಕತ್ವ ಅಗತ್ಯವಿದೆ ಸ್ವಲ್ಪ ಯೋಚಿಸಿ ಎಂದು ಪತ್ರ ಬರೆದರು.

ಕೆಂಗಲ್ಲರು ಜೀವನದಲ್ಲಿ ನೊಂದು ಬೆಂದಿದ್ದರು ಹಣದ ಮುಗ್ಗಟ್ಟು ಅವರನ್ನು ಹಿಂಡಿ ಹಿಪ್ಪೆಮಾಡಿತ್ತು. ವಕೀಲರಾದ ಮೇಲೆ ಸ್ವಲ್ಪ ಹಣ ಸಂಪಾದಿಸಿ ಚೇತರಿಸಿ ಕೊಳ್ಳುವಷ್ಟರಲ್ಲಿ ಕೆಲಸ ಬಿಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ದುಮಕುವುದು ಎಂದರೆ ಹತ್ತು ಭಾರಿ ಯೋಚಿಸಬೇಕಾದ ವಿಷಯ. ಒಮ್ಮೆ ಒತ್ತರಿಸಿ ಬಂದ ದುಖಃ ಮತ್ತೊಮ್ಮೆ ಸ್ವಾತಂತ್ರ್ಯವೆಂಬ ಪರಮ ಪವಿತ್ರ ಕೆಲಸಕ್ಕೆ ಕೈ ಹಾಕಬೇಕಾದದ್ದು ನನ್ನ ಆದ್ಯ ಕರ್ತವ್ಯ ಎಂದು ನಿರ್ಧರಿಸಿದರು ಚಳವಳಿಯು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಾದ್ಯಂತ ನಡೆಯುತ್ತಿತ್ತು. 1938 ಸ್ವಾತಂತ್ರ್ಯ ಚಳವಳಿಯಲ್ಲಿ ಬಹು ಮುಖ್ಯವಾದ ವರ್ಷ ಕಾರಣವೇನೆಂದರೆ ಅದೇ ವರ್ಷ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಶಿವಪುರದಲ್ಲಿ ಕಾಂಗ್ರೆಸ್ ಧ್ವಜಾರೋಹಣ ಮತ್ತೊಂದು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ನಡೆದ ಚಳವಳಿ. ಕಾಂಗ್ರೆಸ್ ನಾಯಕರಲ್ಲಿ ಬಂಧನವಾಗದೆ ಉಳಿದಿದ್ದ ನಾಯಕರುಗಳು ಬಂಧನಕ್ಕೊಳಗಾಗಿರಬೇಕಾದರೆ ತಾವು ಜೈಲಿನ ಹೊರ ಭಾಗದಲ್ಲಿರಬಾರದೆಂದು ತೀರ್ಮಾನಿಸಿದರು.

1939ರಲ್ಲಿ ತುಮಕೂರಿನಲ್ಲಿ ಚಳವಳಿಯ ಕಾವು ಏರತೊಡಗಿತು ಪೋಲಿಸರು ಮತ್ತು ಚಳವಳಿಗಾರರ ನಡುವೆ ಹೋರಾಟ ನಡೆದು ಪೋಲಿಸರು ತುಮಕೂರಿನಲ್ಲಿ ಪ್ರತಿಬಂಧಕಾಜ್ಞೆಯನ್ನು ಹೇರಿದರು. ಇಡೀ ಊರಿನಲ್ಲಿ ಬಿಗುವಿನ ವಾತಾವರಣ ಏರ್ಪಟ್ಟಿತು. ತುಮಕೂರಿನ ಜನರಿಗೆ ಆತ್ಮಸ್ಥೈರ್ಯ ತುಂಬಲು ಕೆಂಗಲ್ ಹನುಮಂತಯ್ಯ ಮತ್ತು ಟಿ. ಸಿದ್ದಲಿಂಗಯ್ಯನವರು ತೀರ್ಮಾನಿಸಿದರು. ತುಮಕೂರಿಗೆ ಈ ಇಬ್ಬರು ನಾಯಕರು ಬರುತ್ತಲೇ ಅಲ್ಲಿನ ಕಾಂಗ್ರೆಸ್ ನಾಯಕರಿಗೆ ಚಳವಳಿಗಾರರಿಗೆ ಧೈರ್ಯ ಬಂತು. ಚಳವಳಿಗಾರರನ್ನು ಊರಿನಲ್ಲೆಲ್ಲಾ ಮೆರವಣಿಗೆ ಮಾಡುವ ಮೂಲಕ ಪೋಲೀಸರ ಪ್ರತಿಬಂಧಕ ಆಜ್ಞೆಯನ್ನು ನಿಚ್ಚಳವಾಗಿ ಉಲ್ಲಂಘಿಸಿದರು ಇಷ್ಟು ಸಾಲದು ಎಂಬಂತೆ ಚಳುವಳಿಗಾರರನ್ನು ಕುರಿತು ಇಬ್ಬರು ನಾಯಕರು ಭಾಷಣ ಮಾಡತೊಡಗಿದರು. ಇದರಿಂದ ಕೆರಳಿ ಕೆಂಡವಾದ ಪೋಲೀಸರು ಕೆಂಗಲ್ ಹನುಮಂತಯ್ಯ ಹಾಗೂ ಟಿ. ಸಿದ್ದಲಿಂಗಯ್ಯನವರನ್ನು ಆ ಕೂಡಲೆ ಬಂಧಿಸಿದರು ನ್ಯಾಯಾಲಯವು ಮೂರು ತಿಂಗಳ ಕಾರಾಗೃಹ ಶಿಕ್ಷೆಯನ್ನು ಪ್ರಕಟಿಸಿತು.

ಈ ಇಬ್ಬರು ನಾಯಕರಿಗೂ ಈಗಾಗಲೆ ಜೈಲು ಶಿಕ್ಷೆಯ ಅನುಭವವಿದ್ದುದರಿಂದ ಇದು ಸಾಮಾನ್ಯ ಎನಿಸಿತು ಆದರೆ ಕೆಂಗಲ್ಲರು ದೇಶದ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋದರೆ ಅವರ ಮಾವನವರಾದ ಶ್ರೀರೈಸ್ ಮಿಲ್ ಪುಟ್ಟಯ್ಯನವರು ಅದೇ ಅಪರಾದವೆಂದು ಭಾವಿಸಿ ತಮ್ಮ ಮಗಳು (ಶ್ರೀಮತಿ ಕೆಂಗಲ್) ಹಾಗೂ ಮೊಮ್ಮಕ್ಕಳನ್ನು ತಮ್ಮ ಮನೆಗೆ ಕರೆಸಿಕೊಂಡು ಅದನ್ನೇ ದೊಡ್ಡದು ಮಾಡಿದ ಪುಟ್ಟಯ್ಯನವರು ಕೆಂಗಲರನ್ನು ಚೇಡಿಸಿದರು. ಕೆಂಗಲರು ಮತ್ತಷ್ಟು ಅಧೀರರಾದರು.

ಕೆಂಗಲರ ಜನಪ್ರಿಯತೆ

ಕೆಂಗಲರು ಜನಪ್ರಿಯರಾಗಲು ಎರಡು ಕಾರಣಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ ಒಂದು ತುಮಕೂರಿನಲ್ಲಿನ ಪ್ರತಿಬಂಧಕಾಜ್ಞೆಯನ್ನು ಉಲಂಘಿಸಿ ಯಶಸ್ವಿಯಾಗಿ ತುರಂಗವಾಸ ಅನುಭವಿಸಿ ಹೊರಬಂದದ್ದು ಎರಡನೆಯದಾಗಿ ಈಗಾಗಲೆ ಹಳೇ ಮೈಸೂರಿನ ಹೆಸರಾಂತ ಹಾಗೂ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ್ದ ವಕೀಲರೂ ಆಗಿದ್ದ ಹೆಚ್.ಸಿ.ದಾಸಪ್ಪನವರು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಸರ್ಕಾರದ ನಿಷೇದಾಜ್ಞೆಯನ್ನು ಉಲಂಘಿಸಿ ಬಂದನಕೊಳಗಾದರು ಇಷ್ಟು ಸಾಲದು ಎಂಬಂತೆ ವಕೀಲ ವೃತ್ತಿ ಮಾಡುವಂತಿಲ್ಲ ಎಂದು ನ್ಯಾಯಾಲಯವು ಪ್ರತಿಬಂಧಿಸಿತು. ಕೆಂಗಲ್‌ರವರು ದಾಸಪ್ಪನವಠ ಕೇಸನ್ನು ತಾವೇ ನಡೆಸಿ ದಾಸಪ್ಪನವರಿಗೆ ಗೆಲವು ತಂದುಕೊಟ್ಟರು. ದಾಸಪ್ಪನವರ ಮೇಲಿದ್ದ ಕೇಸು ವಜಾ ಆಯ್ತು. ಬೆಳಗಾಗುವಷ್ಟರಲ್ಲಿ ಕೆಂಗಲ್‌ರವರು ಜನಪ್ರಿಯರಾದರು ಇಷ್ಟು ಸಾಲದು ಮಹಾತ್ಮ ಗಾಂಧಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಕೆಂಗಲರ ಗುಣಗಾನ ಮಾಡಿ ಒಂದು ಲೇಖನವನ್ನು ಬರೆದರು. ಕೆಂಗಲರು ಎಷ್ಟರ ಮಟ್ಟಿಗೆ ಜನಪ್ರಿಯರಾದರೆಂದರೆ ಹೆಚ್.ಸಿ. ದಾಸಪ್ಪನವರೇ ಹೇಳುವಂತೆ ನಾವುಗಳು ಹತ್ತಿಪ್ಪತ್ತು ವರ್ಷ ಮಾಡಿರುವ ಸಾಧನೆಯನ್ನು ನೀವು ಕೆಲವೇ ದಿನಗಳಲ್ಲಿ ಮಾಡಿ ಬಹು ಜನಪ್ರಿಯರಾಗಿದ್ದೀರಿ ಎಂದು ಕೆಂಗಲರನ್ನು ಹೊಗಳಿದರು ಕೆಂಗಲರು ಭಾವುಕರಾದರು.

ಅಧಿಕಾರದ ಗದ್ದುಗೆಗೆ ಕೆಂಗಲ್

ಕೆಂಗಲರು ವಕೀಲರಾಗಿ ಕೆಲಸಮಾಡುವಾಗ ಹೆಸರಾಂತ ವಕೀಲರಾಗಿದ್ದರು ಅದೇರೀತಿ ಸ್ವಾತಂತ್ರ್ಯ ಚಳವಳಿಗೆ ದುಮುಕಿದಾಗ ಮತ್ತಷ್ಟು ಜನಪ್ರಿಯರಾದರು 1940ರಲ್ಲಿ ಬೆಂಗಳೂರು ನಗರ ಮುನ್ಸಿಪಲ್ ಕೌನ್ಸಿಲ್ ಸದಸ್ಯರಾಗಿ ಅವಿರೊಧವಾಗಿ ಆಯ್ಕೆಯಾದರು. ನಂತರ 1940ರಿಂದ 1944ರ ವರೆಗೆ ಪ್ರಜಾಪ್ರತಿನಿಧಿ

ಸಭಾಸದಸ್ಯರಾದರು ನಂತರ ಅದರ ಕಾರ್ಯದರ್ಶಿಯಾದರು. ಈ ಸಂಧರ್ಬದಲ್ಲಿ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಕರ್ನಾಟಕ ಭಾಷವಾರು ಪ್ರಾಂತ ರಚನೆಗೆ ಶ್ರಮಿಸಿದರು. ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಲಾಗಿ ದೇಶಪ್ರೇಮ, ಭಾಷಾಪ್ರೇಮ ಹಾಗೂ ಮಹಾತ್ಮಗಾಂಧಿಜೀಯವರ ಬಗ್ಗೆ ತುಂಬಾ ಗೌರವ ಉಂಟಾಯಿತು. 1942ರಲ್ಲಿ ಬೆಂಗಳೂರು ಮುನ್ಸಿಪಲ್ ಕೌನ್ಸಿಲ್ ಅಧ್ಯಕ್ಷರಾದರು. ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದರು.

ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸು ರಾಜ್ಯದಾದ್ಯಂತ ಬೆಳಗಾಗುವಷ್ಟರಲ್ಲಿ ಜನಪ್ರಿಯವಾಯ್ತು. ಓತಪ್ರೊತವಾಗಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಚಳವಳಿಯು ಬಿರುಸಿನಿಂದ ನಡೆಯ ತೊಡಗಿತು. ಅದರಲ್ಲಿ ಪ್ರಮುಖವಾದುದೆಂದರೆ ವಿದುರಾಶ್ವತ್ಥದ ದುರಂತ ಇದು ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿದೆ. ಕೊಲಾರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಟಿ. ರಾಮಾಚಾರ್ಯರ ನೇತೃತ್ವದಲ್ಲಿ 1938 ಏಪ್ರಿಲ್ 25ರಂದು ವಿದುರಾಶ್ವತ್ಥ ದೇವಾಲಯದ ಹಿಂಬದಿಯ ತೋಪಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಅಲ್ಲಿ ಕಾಂಗ್ರೆಸ್ ಧ್ವಜಾರೋಹಣ ವಾಯ್ತು. ನಾಗಯ್ಯರೆಡ್ಡಿ, ಕಲ್ಲೂರು ಸುಬ್ಬರಾವ್ ಇವರೇ ಮುಂತಾದವರು ವೀರಾವೇಷದಿಂದ ಭಾಷಣ ಮಾಡಿದರು. ಅಂದು ಸಂತೆಯಾದ್ದರಿಂದ ಜನ ಸಾಕಷ್ಟು ಜಮಾಯಿಸಿದ್ದರು. ಸಭೆಯನ್ನು ವಿಸರ್ಜಿಸುವಂತೆ ಪೋಲಿಸರು ಎಚ್ಚರಿಕೆ ನೀಡಿದರು ಜನ ಅದಕ್ಕೆ ಬೆಲೆ ಕೊಡದಿದ್ದಾಗ ಪೋಲಿಸರು ಅಮಾಯಕ ಜನರ ಮೇಲೆ ಲಾಠಿಛಾರ್ಜ್ ಮಾಡಿದುದೇ ಅಲ್ಲದೆ ಗೋಲಿಬಾರ್ ಮಾಡಿದರು. ಹತ್ತಾರು ಜನ ಸ್ಥಳದಲ್ಲೆ ಅಸುನೀಗಿದರೆ ಸಾಕಷ್ಟು ಮಂದಿಗೆ ಭಾರಿ ಪ್ರಮಾಣದ ಏಟುಗಳು ಬಿದ್ದವು. ಇಷ್ಟು ಸಾಲದು ಎಂಬಂತೆ ಹಲವಾರು ಜನರ ಮೇಲೆ ಪೋಲಿಸರ ಸುಳ್ಳು ಕೇಸುಗಳನ್ನಾಕ್ಕಿದ್ದರು. ಅಂತಹ ಸಮಯದಲ್ಲಿ ಇಂತಹ ಸಂತ್ರಸ್ತರ ಪರ ನಿಂತ ಕೆಂಗಲ್ ಹನುಮಂತಯ್ಯನವರು ಅಮಾಯಕರ ಪರವಾಗಿ ಪುಕ್ಕಟೆಯಾಗಿ ನ್ಯಾಯಾಲದಲ್ಲಿ ವಾದ ಮಂಡಿಸುತ್ತಿದ್ದರು. ಚಳವಳಿಗಾರರಿಗೆ ಕೆಂಗಲ್ಲರೇ ದಾರಿದೀಪವಾಗಿದ್ದರು.

ಜನಪ್ರತಿನಿಧಿಯಾಗಿ, ಹೋರಾಟಗಾರರಾಗಿ ಹೊರಹೊಮ್ಮಿದ ಕೆಂಗಲ್

ಈಗಾಗಲೆ ತಿಳಿಸಿರುವಂತೆ ಕೆಂಗಲ್ಲರು ರಾಜ್ಯಾದಂತ ಜನಪ್ರಿಯ ನಾಯುಕರಾಗಿ ಹೊರಹೊಮ್ಮಿದರು. 1941ರಿಂದ ಜನಪ್ರತಿನಿಧಿಯಾಗಿ ಆಯ್ಕೆಯಾಗುತ್ತಾ ಬಂದರು 1941ರಲ್ಲಿ ಬೆಂಗಳೂರು ಪುರಸಭೆ ಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿಸಭೆಗೆ ಚುನಾಯಿತರಾದರು. 1941ರಿಂದ 1962ರವರೆಗೆ

ಸತತವಾಗಿ ಶಾಸನಸಭಾಸದಸ್ಯರಾಗಿ ನಂತರ ಲೋಕಸಭಾಸದಸ್ಯರಾಗಿ ಆಯ್ಕೆಯಾಗುತ್ತಾ ಬಂದರು. ಈಗಾಗಲೆ ತಿಳಿಸಿರುವಂತೆ ಕೆಂಗಲ್ಲರು ಉತ್ತಮ ವಾಗ್ಮಿಮಾತ್ರವಲ್ಲ ಆಳರಸರನ್ನು, ಬ್ರಿಟಿಷರನ್ನು ಉಗ್ರವಾಗಿ ಖಂಡಿಸುತ್ತಿದ್ದರು. ಕೆಂಗಲ್ಲರು ವೃತ್ತಿಯಲ್ಲಿ ವಕೀಲರಾಗಿದ್ದುದರಿಂದ ಶಾಸನ ಸಭೆಗಳಲ್ಲಿ ಉತ್ತಮವಾಗಿ ವಾದ ಮಂಡಿಸುತ್ತಿದ್ದರು. ಅತ್ಯುತ್ತಮ ಸಂಸದೀಯಪಟು ಎಂದು ಹೆಸರುವಾಸಿಯಾಗಿದ್ದರು. 1941ರ ಜೂನ್‌ನಲ್ಲಿ ನಡೆದ ಪ್ರಥಮ ಅಧಿವೇಶನದಲ್ಲಿಯೇ ಅವರು ರಾಜ್ಯದ ಮುಖ್ಯ ಹುದ್ದೆಗಳಿಗೆ ವಿದೇಶಿಯರನ್ನು ನೇಮಿಸುವ ಪದ್ಧತಿಯನ್ನು ವಿರೋಧಿಸಿದರು. ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ದಿವಾನರನ್ನಾಗಿ ನೇಮಿಸಿದ ಬಗ್ಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಸ್ತಾಪಿಸಿ ಈ ರೀತಿ ಹೊರಗಿನವರನ್ನು ದಿವಾನ್ ಪದವಿಗೆ ತರುವುದು ಪ್ರಜಾಭಿಪ್ರಾಯಕ್ಕೆ ವಿರೋಧವಾದುದೆಂದು ಖಂಡಿಸಿದರು. ಮಹಾರಾಜರ ಆಳ್ವಿಕೆಯ ಮುಂದುವರಿಕೆಯ ಬಗ್ಗೆ ಅವರು ನಿಷ್ಠುರರಾಗಿದ್ದರೂ ಕೂಡ ಮಹಾರಾಜರ ಪುತ್ರಿಯ ಜನನವಾದಾಗ ಅಷ್ಟೇ ಹೃದಯ ವೈಶಾಲ್ಯ ತೋರಿ ಯಶ ಕೋರಿದರು. ಇದು ಅವರ ಸಭ್ಯತೆ, ಸೌಜನ್ಯತೆ, ವಿವೇಕವನ್ನು ತೋರುತ್ತದೆ. ನಾಯಕನಿಗಿರಬೇಕಾದ ಉನ್ನತ ಲಕ್ಷಣಗಳನ್ನು ತೋರುತ್ತದೆ (ಕೆ.ಹನುಮಂತಯ್ಯ ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ- ಪುಟ-7) 1944ರಿಂದ 1949ರವರಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು.

1942ರಲ್ಲಿ ಬೆಂಗಳೂರು ಪುರಸಭೆಯ ಅಧ್ಯಕ್ಷರಾಗಿ ಚುನಾಯಿತರಾದರು 1942 ಆಗಸ್ಟ್ ಒಂಬತ್ತನೆ ತಾರಿಖು ಮಹಾತ್ಮಗಾಂಧಿಯವರಿಂದ ಛಲೇಜಾವ್ ಚಳವಳಿ ಘೋಷಣೆಯಾಗಿ ಇಡೀ ಭಾರತದಾದ್ಯಂತ ಚಳವಳಿಯು ತೀವ್ರಗೊಂಡಿತು. ಕೆಂಗಲ್ಲರು ಅಧಿಕಾರಕ್ಕೆ ಅಂಟಿಕೊಳ್ಳದೆ ಬ್ರಿಟಿಷರನ್ನು ಹಾಗೂ ಆಳರಸರ ಸರ್ಕಾರವನ್ನು ತೀವ್ರವಾಗಿ ಖಂಡಿಸುತ್ತಿದ್ದರು. 10-08-1942ರಲ್ಲಿ ಕೆಂಗಲರ ಬಂಧನವಾಯ್ತು ಇದು ಮೂರನೆ ಭಾರಿ ಬಂಧನ ಜೈಲಿಗೆ ಹೋಗುವುದು ಬರುವುದು ಸರ್ವೇಸಾಮಾನ್ಯವಾಗಿತ್ತು. ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಎಂದೂ ಸರ್ಕಾರದ ಪರ ಇರುತ್ತಿರಲಿಲ್ಲ. ನೇತಾರರಾದ ಹೆಚ್.ಸಿ.ದಾಸಪ್ಪ, ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಟಿ.ಸುಬ್ರಮಣ್ಯಂ, ಎಸ್.ನಿಜಲಿಂಗಪ್ಪ, ಕೆ.ಟಿ.ಭಾಷ್ಯಂ, ಎಸ್.ಸಿ.ತಿಮ್ಮರೆಡ್ಡಿ, ಮಳವಳ್ಳಿ ವೀರಪ್ಪ, ಡಬ್ಲ್ಯೂ.ಎಚ್.ಹನುಮಂತಪ್ಪ, ಎಚ್.ಸಿದ್ದಯ್ಯ ಇನ್ನು ಮುಂತಾದವರಿಗೆ ಜೈಲುವಾಸ ಸರ್ವೇ ಸಾಮಾನ್ಯವಾಗಿತ್ತು.

ಅವರು ಎಂದೂ ಬ್ರಿಟಿಷರ ಪರ ನಿಲ್ಲುತ್ತಿರಲಿಲ್ಲ ಸಂಸಾರದಲ್ಲಿ ಎಷ್ಟೇ ಕಷ್ಟನಷ್ಟ ಅಪವಾದ ಬಂದರೂ ಸ್ವಾತಂತ್ರ್ಯ ಹೋರಾಟವನ್ನು ಮಾತ್ರ ಬಿಡಲಿಲ್ಲ ಹನುಮಂತಯ್ಯನವರನ್ನು ಬೆಂಗಳೂರು ಜೈಲಿನಿಂದ ಶಿವಮೊಗ್ಗ ಜೈಲಿಗೆ ವರ್ಗಾಯಿಸಿದರು ಅವರನ್ನು ಎಲ್ಲೆ ಹಾಕಿದರು ಹೋರಾಟವನ್ನು ಬಿಡುತ್ತಿರಲಿಲ್ಲ.

ಮುಖ್ಯಮಂತ್ರಿಯಾಗಿ ಕೆಂಗಲ್ ಹನುಮಂತಯ್ಯ

1952ರಲ್ಲಿ ಮೈಸೂರು ರಾಜ್ಯದಲ್ಲಿ ಮಹಾಚುನಾವಣೆ ನಡೆಯಿತು ಅಂದು ಕೊಡಗು ಪ್ರತ್ಯೇಕ ರಾಜ್ಯವಾಗಿದ್ದು ಶ್ರೀ ಪೂಣಚ್ಚರವರು ಕೊಡಗಿನ ಮುಖ್ಯಮಂತ್ರಿಯಾಗಿದ್ದರು. ಕೆಂಗಲ್‌ರವರು ಚುನಾವಣೆಯ ಮೇಲುಸ್ತುವಾರಿ ವಹಿಸಿಕೊಂಡಿದ್ದರು. ಕಾಂಗ್ರೆಸ್ ಜಯಭೇರಿ ಭಾರಿಸಿತು. ಕೆಂಗಲ್‌ರವರು ಶಾಸಕಾಂಗದ ನಾಯಕರಾಗಿ ಹೊರಹೊಮ್ಮಿದರು ಜಯಚಾಮರಾಜ ಒಡೆಯರ್‌ರವರು ರಾಜ್ಯದ ರಾಜಪಾಲರಾಗಿದ್ದರು. ಮಾರ್ಚ್ 18, 1952ರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲರಾಗಿದ್ದ ಒಡೆಯರ್ ಪ್ರಮಾಣವಚನ ಭೋದಿಸಿದರು. ಕೆಂಗಲರಿಗೆ ಆಗ ಕೇವಲ ನಲವತ್ತನಾಲ್ಕು ವರ್ಷದ ತರುಣರು. ಮೈಸೂರು ಪೇಟ ಕ್ಲೋಲ್ಸ್ಡ್ ಕಾಲರ್ ಕೋಟು ಅದಕ್ಕೊಪ್ಪುವ ಪ್ಯಾಂಟ್, ಕಪ್ಪು ಬಣ್ಣದ ಶಾಲು, ಗೌರವ ವರ್ಣ ನೂರು ಜನರ ಮಧ್ಯಯೂ ಗುರುತಿಸಬಹುದಾದಂತ ತೇಜಸ್ವಿ ನಾಯಕ ಕೆಂಗಲ್ ಹನುಮಂತಯ್ಯ. ಅಂದು ಇಂದಿನ ಕಾಲದಂತೆ ಮೂವತ್ತು ನಲವತ್ತು ಜನಮಂತ್ರಿಗಳ ದೊಡ್ಡಗಾತ್ರದ ಸಂಪುಟವನ್ನು ಹೊಂದಿರಲಿಲ್ಲ ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆ.ಸಿ. ರೆಡ್ಡಿಯವರೂ ಕೂಡ ಚೊಕ್ಕ ಹಾಗೂ ಚೂಕ್ಕ ಮಂತ್ರಿ ಮಂಡಲವನ್ನು ಹೊಂದಿದ್ದರು. ಅವರ ಸಂಪುಟದಲ್ಲಿದ್ದ ಮಂತ್ರಿಗಳು ಹಾಗೂ ಖಾತೆಗಳೆಂದರೆ

1. ಶ್ರೀ ಕೆ.ಸಿ. ರೆಡ್ಡಿ – ಮುಖ್ಯಮಂತ್ರಿ, ಆಹಾರ ಮತ್ತು ಕಂದಾಯ ಖಾತೆ
2. ಶ್ರೀ ಹೆಚ್. ಸಿದ್ದಯ್ಯ – ಲೋಕೋಪಯೋಗಿ ಮತ್ತು ಕೃಷಿ ಖಾತೆ
3. ಶ್ರೀ ಹೆಚ್.ಸಿ. ದಾಸಪ್ಪ – ಹಣಕಾಸು ಮತ್ತು ಕೈಗಾರಿಕಾ ಖಾತೆ
4. ಶ್ರೀ ಟಿ. ಮರಿಯಪ್ಪ ಗೃಹ, ರೈಲ್ವೆ ಮತ್ತು ಆಹಾರ ಖಾತೆ
5. ಶ್ರೀ ಕೆ.ಟಿ. ಭಾಷ್ಯಂ – ಕಾರ್ಮಿಕ ಮತ್ತು ಕಾನೂನು ಖಾತೆ

ಕಾಂಗ್ರೆಸೇತರ ಮಂತ್ರಿಗಳು

1. ಶ್ರೀ ಮಹಮದ್ ಷರೀಫ್ – ವೈದ್ಯಕೀಯ ಮತ್ತು ಆರೋಗ್ಯ ಖಾತೆ
2. ಶ್ರೀ ಡಿ.ಹೆಚ್.ಚಂದ್ರಶೇಖರಯ್ಯ – ಶಿಕ್ಷಣ ಖಾತೆ
3. ಶ್ರೀ ಸುಬ್ಬರಾಮಶೆಟ್ಟಿ – ಪುರಸಭಾ ಅಭಿವೃದ್ಧಿ ಖಾತೆ

ಈ ಮೇಲ್ಕಂಡ ಮಂತ್ರಿಗಳ ಪಟ್ಟಿಯಲ್ಲಿ ಕೆಂಗಲ್‌ರವರ ಹೆಸರಿರುವುದಿಲ್ಲ ಆದಕಾರಣ ಕೆ.ಸಿ. ರೆಡ್ಡಿಯವರಿಗೂ ಕೆಂಗಲರಿಗೂ ಒಂದು ರೀತಿಯ ಮುನಿಸು, ಮುಸುಕಿನ ಗುದ್ದಾಟಕ್ಕೆ ಕಾರಣವಾಯಿತು. 1952ರ ಚುನಾವಣೆಯಲ್ಲಿ ಕೆಂಗಲ್‌ರವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಚುನಾವಣೆಯನ್ನು ಎದುರಿಸಿ ಫಲಪ್ರದವಾಯಿತು.

ಕೆಂಗಲ್‌ರವರು ತಮ್ಮ ಮಂತ್ರಿಮಂಡಲದಲ್ಲಿ ಕೇವಲ ಆರು ಜನರ ಸಂಪುಟವನ್ನು ಹೊಂದಿತ್ತು. ಮಂತ್ರಿಗಳು ಹಾಗೂ ಅವರ ಖಾತೆಗಳು ಈ ಕೆಳಕಂಡಂತಿದೆ.

1. ಶ್ರೀ ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿ
2. ಶ್ರೀ ಟಿ. ಸಿದ್ದಲಿಂಗಯ್ಯ – ಕೈಗಾರಿಕಾ ಸಚಿವ
3. ಶ್ರೀ ಎ.ಟಿ. ರಾಮಚಂದ್ರರಾವ್ – ಶಿಕ್ಷಣ ಮತ್ತು ಕಾನೂನು ಸಚಿವ
4. ಶ್ರೀ ಟಿ. ಚನ್ನಯ್ಯ – ಸಾರ್ವಜನಿಕ ಆರೋಗ್ಯ ಮತ್ತು ಸ್ಥಳೀಯ ಸರ್ಕಾರ ಸಚಿವ
5. ಶ್ರೀ ಕಡಿದಾಳ್ ಮಂಜಪ್ಪ ಕಂದಾಯ ಮತ್ತು ಲೋಕಾಪಯೋಗಿ ಸಚಿವ
6. ಶ್ರೀ ಹೆಚ್. ಸಿದ್ದಲಿಂಗಯ್ಯ ಗೃಹ ಖಾತೆ ಮತ್ತು ಕೃಷಿ ಸಚಿವ.

ಶ್ರೀ ಕೆಂಗಲ್ ಹನುಮಂತಯ್ಯನವರ ನೇತೃತ್ವದ ಚಿಕ್ಕ ಚೊಕ್ಕ ಮಂತ್ರಮಂಡಲವು ಅಸ್ತಿತ್ವಕ್ಕೆ ಬಂದ ಮೇಲೆ ಅಠಾರ ಕಚೇರಿಯಲ್ಲಿ ಪ್ರಥಮ ಬಾರಿಗೆ ಶಾಸನಸಭೆ ಸೇರಿತು (ಆಗ ವಿಧಾನಸೌಧ ಇನ್ನ ನಿರ್ಮಾಣವಾಗಿರಲಿಲ್ಲ ಅಠಾರ ಕಚೇರಿಯೇ ವಿಧಾನಸೌಧವಾಗಿತ್ತು) ಸಭಾಪತಿಯಾಗಿ ಶ್ರೀ ಎಚ್. ಸಿದ್ದಯ್ಯನವರು ಸರ್ವಾನುಮತದಿಂದ ಆಯ್ಕೆಯಾದರು. ಇವರು ಈ ಮೊದಲೆ ಕೆ.ಸಿ. ರೆಡ್ಡಿಯವರ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಹಾಗೂ ಕೃಷಿ ಸಚೀವರಾಗಿ ಸೇವೆ ಸಲ್ಲಿಸಿದ್ದರು (ಕೆ.ಸಿ. ರೆಡ್ಡಿಯವರ ಮಂತ್ರಿಮಂಡಲ ನೋಡಿ) ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಅಗ್ರ ನಾಯಕರು ಕೆಂಗಲ್‌ರವರು ರಾಜ್ಯವನ್ನು ಅಭಿವೃದ್ದಿ ಮಾಡಬೇಕಾದರೆ ಏನು ಕ್ರಮ ಕೈಗೊಳ್ಳಬೇಕು ಮುಂದಿರುವ ಸವಾಲುಗಳೇನು ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಕೆಂಗಲ್‌ರವರು ಮುಖ್ಯಮಂತ್ರಿಯಾಗುವ ಮೂಲಕ ರಾಜ್ಯದ ಮೊದಲ ಚುನಾಯಿತ ಮುಖ್ಯಮಂತ್ರಿ ಎಂದೇಳಬಹುದು. ಅಂದು ಕೇವಲ ನೂರು ಜನ ಚುನಾಯಿತ ಶಾಸಕರೂ ನಲವತ್ತು ಜನ ವಿಧಾನ ಪರಿಷತ್ (ಮೇಲ್ಮನೆ) ಸದಸ್ಯರಿದ್ದರು.

ಆಡಳಿತ

ಮೇದಾವಿಯು ಅತ್ಯುತ್ತಮ ಆಡಳಿತಗಾರರು, ಪ್ರಾಮಾಣಿಕರಲ್ಲಿ ಬಹಳ ಪ್ರಾಮಾಣಿಕರಾದ ಕೆಂಗಲರು ಆಡಳಿತದಲ್ಲಿ ದಕ್ಷತೆ ತರುವ ದೃಷ್ಟಿಯಿಂದ ಅಧಿಕಾರಿಗಳ ಸಭೆ ಕರೆದು ಪರಿಚಯ ಮಾಡಿಕೊಳ್ಳುವ ನೆಪದಲ್ಲಿ ತಮ್ಮ ಧ್ಯೇಯೋದ್ದೇಶಗಳನ್ನು ಅವರಿಗೆ ಮನದಟ್ಟು ಮಾಡಿಕೊಟ್ಟರು. ಸರ್ಕಾರದ ಕೆಲಸ ದೇವರ ಕೆಲಸವೆಂದು ಭಾವಿಸಿದ ಮುಖ್ಯಮಂತ್ರಿಗಳಲ್ಲಿ ಕೆಂಗಲರೆ ಮೊದಲಿಗರು. ಬಡತನದ ಬೇಗೆಯಲ್ಲಿ ಬೆಂದು ತಮ್ಮ ಸ್ವಂತ ಶಕ್ತಿಯಿಂದ ಮೇಲೆ ಬಂದ ಕೆಂಗಲರು ಜನರ ಪರ ಆಡಳಿತ ನೀಡಬೇಕೆಂದು ತೀರ್ಮಾನಿಸಿದರು. ಯಾವುದೇ ಸಂದರ್ಭದಲ್ಲಿ ಯಾರ ಮರ್ಜಿಗೂ ಒಳಗಾಗುತ್ತಿರಲಿಲ್ಲ ಇಂದಿನಂತೆ ಅಂದು 'ಹೈಕಮಂಡ್' ಎಂಬ ಭೂತವಿರಲಿಲ್ಲ ಇದ್ದರೂ ಸಣ್ಣಪುಟ್ಟದಕ್ಕೆಲ್ಲ ಮೂಗು ತೂರಿಸುತ್ತಿರಲಿಲ್ಲ. ಇದರಿಂದಾಗಿ ಉತ್ತಮವಾದ ಆಡಳಿತ ನೀಡಲು ಸಾದ್ಯವಾಯ್ತು.

ದಿನಾಂಕ 18-6-1952ರಂದು ಎಚ್. ಸಿದ್ದಯ್ಯನವರು ವಿಧಾನಮಂಡಲದ ಅಧ್ಯಕ್ಷರಾದ ಮೇಲೆ ಒಂದು ಶಾಸಕಾಂಗ ಸಭೆ ಸೇರಿತು. ಸಂದಿನ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗಳಾದವು ಶಾಸಕರಾಗಿದ್ದ ಶ್ರೀ ಕೆ.ಪಟ್ಟಾಭಿರಾಮನ್‌ರವರು 'ಜನಗಣಮನ' ಹಾಡಿನ ಬದಲಿ 'ಕಾಯ್ಯಾಗೌರಿ' ಹಾಡುತ್ತಿದ್ದಾರೆ ಹಾಗೆಯೆ ಮೈಸೂರು ರಾಜ್ಯದಲ್ಲಿ ಎರಡು ಧ್ವಜಗಳು ಹಾರಾಡುತ್ತಿವೆ ಹಿಂದಿನಿಂದ ಬಂದ ಮೈಸೂರು ಧ್ವಜ, ಇನ್ನೊಂದು ರಾಷ್ಟ್ರಧ್ವಜ ಇವೆರಡರಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬೇಕು ಎಂದರು. ಅದಕ್ಕೆ ಉತ್ತರಿಸಿದ ಕೆಂಗಲ್‌ರವರು ಅರಮನೆಯ ಪ್ರಾರ್ಥನಾಗೀತೆಯಾದ 'ಕಾಯ್ಯಾಶ್ರೀಗೌರಿ' ಎಂಬ ಗೀತೆಯನ್ನು ಹಾಡುವ ಅಗತ್ಯವಿಲ್ಲ ಕೇವಲ ರಾಷ್ಟ್ರಗೀತೆಯನ್ನು ಮಾತ್ರ ಹಾಡಬೇಕೆಂದು ಆಜ್ಞೆ ಮಾಡಿದರು. ಮೈಸೂರು ಮಹಾರಾಜರ ಧ್ವಜವಾಗಿದ್ದ ಗಂಡಬೇರುಂಡ ಉಳ್ಳ ಧ್ವಜವನ್ನು ಹಾರಿಸಬೇಕಾಗಿಲ್ಲ ರಾಷ್ಟ್ರಧ್ವಜವಾದ ತ್ರಿವರ್ಣಧ್ವಜವನ್ನು ಮಾತ್ರ ಹಾರಿಸಬೇಕೆಂದು ಆಜ್ಞೆ ಮಾಡಿದರು. ಒಂದು ರಾಷ್ಟ್ರಗೀತೆ ಹಾಗೂ ಒಂದೇ ರಾಷ್ಟ್ರ ಧ್ವಜ ಹಾಕಬೇಕೇ ವಿನಹ ಎರಾಡೆರಡು ಧ್ವಜಗಳು ಹಾರಾಡಬಾರದು. ರಾಜತ್ವ ಹೋಗಿ ಪ್ರಜಾಪ್ರಭುತ್ವ ಬಂದಿದೆ ಈಗಲೂ ರಾಜತ್ವದ ಸಂಖೇತವಾದ ಗಂಡಬೇರುಂಡ ಧ್ವಜವನ್ನು ಅಬ್ಯಾಸದ ಮೇಲೆ ಹಾರಿಸುತ್ತಿದ್ದಾರೆ ಇನ್ನು ಮುಂದೆ ಅದರ ಅಗತ್ಯವಿಲ್ಲ ಎಂದು ಖಡಾಖಂಡಿತವಾಗಿ ಆಜ್ಞಾಪಿಸಿದರು.

ಸ್ವಾತಂತ್ರ್ಯ ಬಂದ ಹೊಸದರಲ್ಲಿ ಇಡೀ ಭಾರತದಲ್ಲಿ ಆಹಾರ ಸಮಸ್ಯೆ ಇದ್ದಿತು. ಮೈಸೂರು ರಾಜ್ಯವು ಇದರಿಂದ ಹೊರತಾಗಿರಲಿಲ್ಲ. ಆಹಾರ

ಪದಾರ್ಥಗಳು ಜನರ ಕೈಗೆಟಕುವಂತೆ ಮಾಡಲು ಕೆಂಗಲ್ಲರು ಆಹಾರ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿದ್ದರು. ಆಹಾರ ಹತೋಟಿ ವ್ಯವಸ್ಥೆಯನ್ನು ರದ್ದು ಮಾಡಬೇಕೆಂದು ವಿರೋಧ ಪಕ್ಷದ ಶಾಸಕರು ಸರ್ಕಾರವನ್ನು ಒತ್ತಾಯಿಸಿದರು. ಅದಕ್ಕೊಪ್ಪದ ಮುಖ್ಯಮಂತ್ರಿಯವರು ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುವುದೇ ಅಲ್ಲದೆ ಕಾಳಸಂತೆಕೋರರು ತಮ್ಮ ಕರಾಮತ್ತು ತೋರಿಸುತ್ತಾರೆ ಆಗ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ಪಡಿತರ ವ್ಯೆವಸ್ಥೆಯನ್ನು ಕಟ್ಟುನಿಟ್ಟಿನಿಂದ ಜಾರಿಗೆ ತರುವಂತೆ ಮಾಡಿದರು ಇದರಿಂದಾಗಿ ಆಹಾರ ಪದಾರ್ಥಗಳ ಬೆಲೆ ಕೆಂಗಲರ ಕಾಲದಲ್ಲಿ ಆದಷ್ಟು ಮಟ್ಟಿಗೆ ನಿಯಂತ್ರಣದಲ್ಲಿತ್ತು.

ಬಡವರ, ದೀನ ದಲಿತರ ಬಗ್ಗೆ ಬಹಳಷ್ಟು ಕಾಳಜಿಯಿತ್ತು ಕೆಂಗಲ್ಲರು ಪಾನಾ ನಿರೋಧವನ್ನು ಜಾರಿಗೆ ತಂದ್ದಿದ್ದರು. ಅವರ ಉದ್ದೇಶವೇನೆಂದರೆ ಗಾಂಧಿಯವರ ತತ್ವ ಆದರ್ಶವನ್ನು ಪಾಲಿಸಬೇಕು ಎಂಬುದಾಗಿತ್ತು. ಕಾಂಗ್ರೆಸ್ ಪಕ್ಷದ ಶಾಸಕರಲ್ಲಿ ಅನೇಕರು ಪಾನಾನಿರೋಧ ಜಾರಿಗೆ ತರದೆ ಅದನ್ನು ರದ್ದುಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತದೆ. ಅದನ್ನು ಬಿಟ್ಟು ಸಂಪ್ರಾದಾಯಸ್ಥರಂತೆ ಪಾನಾನಿರೋಧ ಮಾಡಿದರೆ ಸರ್ಕಾರಕ್ಕೆ ಲಾಭವಿಲ್ಲ ಎಂದು ಅರಿಕೆ ಮಾಡಿಕೊಂಡರು. ಇದರ ಜೊತೆಗೆ ಶಾಸಕರಾಗಿದ್ದ ಜನಾಬ್ ಇಮಾಂ ಸಾಹೇಬರು, ಶ್ರೀ ಎಂ. ಶಂಕರಲಿಂಗೇಗೌಡರು ಪಾನನಿರೋಧವನ್ನು ರದ್ದು ಮಾಡಬೇಕೆಂದು ಒತ್ತಾಯಿಸಿದರು. ಆದರೆ ಕೆಂಗಲ್ಲರು ಹೇಳುವುದೇನೆಂದರೆ ಷೆಡ್ಯೂಲ್ಡಕ್ಯಾಸ್ಟ್ ಜನರು ಎಂದರೆ ಒಡ್ಡರು, ಹರಿಜನರು, ಲಂಬಾಣಿಗಳೇ ಅಲ್ಲದೆ ಸ್ವಲ್ಪ ಸಂಖ್ಯೆಯಲ್ಲಿ ಸವರ್ಣೀಯರು ಕುಡಿತಕ್ಕೆ ದಾಸರಾಗಿ ಆರ್ಥಿಕವಾಗಿ ಸಮಾಜಿಕವಾಗಿ ಅವನತಿಗೆ ಇಳಿದು ಹೋಗುತ್ತಾರೆ ಎಂಬುದು (ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆ ಕೆ. ಹನುಮಂತಯ್ಯ ಪುಟ-74)

ಶಿಕ್ಷಣ ಸುಧಾರಣಾ ನೀತಿ

ಕೆಂಗಲ್ಲರು ಉತ್ತಮ ಶಿಕ್ಷಣವನ್ನು ಪಡೆದದ್ದು ಸರಿಯಷ್ಟೆ ಆದರೆ ಅಂತಹ ಕೆಳಸ್ತರದಿಂದ ಮೇಲೇರಬೇಕೆಂದು ಪಟ್ಟ ಕಷ್ಟ ಅಷ್ಟಿಷ್ಟಲ್ಲ ಎಂಬುದನ್ನು ಈಗಾಗಲೆ ತಿಳಿಸಲಾಗಿದೆ. ಇನ್ನು ಶ್ರೀ ಸಾಮಾನ್ಯನ ಗೋಳನ್ನು ಹೇಳತೀರದು. ಒಂದು ಕುಟುಂಬದಲ್ಲಿ ಒಬ್ಬ ವ್ಯೆಕ್ತಿಯು ಸುಶೀಕ್ಷಿತವಾಗಿ ಉದ್ಯೋಗ ಪಡೆದುಕೊಂಡರೆ ಇಡೀ ಕುಟುಂಬವು ಉದ್ದಾರವಾಗುತ್ತದೆ ಎಂದು ಅರಿತ್ತಿದ ಕೆಂಗಲ್ಲರು ಸಾರ್ವಜನಿಕ ಶಿಕ್ಷಣ ನೀಡಲು ಹೆಚ್ಚು ಗಮನ ನೀಡಿದ್ದರು. ಬೇರೆ ಸಂಸ್ಥಾನಗಳಿಗೆ ಹೋಲಿಸಿದರೆ ಮೈಸೂರು ಸಂಸ್ಥನವು ಒಡೆಯರಿಂದಾಗಿ (ನಾಲ್ವಡಿ ಕೃಷ್ಣರಾಜ

ಒಡೆಯರ್) ಶಿಕ್ಷಣ ಪ್ರಸರಣವಾಗಿತ್ತು. ಕೆಂಗಲ್ಲರು ಇನ್ನು ಉತ್ತಮವಾದ ಶಿಕ್ಷಣವನ್ನು ಉಚಿತವಾಗಿ ನೀಡಬೇಕೆಂದು ತೀರ್ಮಾನಿಸಿ ಶಿಕ್ಷಣ ಸುಧಾರಣೆಗೆ ಹೆಚ್ಚು ಗಮನ ನೀಡಿದರು. ತಮ್ಮ ಸುದೀರ್ಘ ಕಾಲದ ಆಲೋಚನೆಯ ಹಿನ್ನಲೆಯಲ್ಲಿ, ಪಾಶ್ಚಾತ್ಯ ದೇಶಗಳ ಶಿಕ್ಷಣ ಪದ್ದತಿಯ ಹಿನ್ನಲೆಯಲ್ಲಿ, ಮಂತ್ರಿಮಂಡಲದ ಸಹ ಚಿಂತಕರೊಡನೆ ವಿವರವಾಗಿ ಚರ್ಚಿಸಿದರು. ಅಧಿಕ ಜನಸಂಖ್ಯೆ ಇರುವ ದೇಶದಲ್ಲಿ ಜನತಾ ಶಿಕ್ಷಣದ ರೂಪುರೇಷೆಗಳ ಬಗೆಗೆ ಚಿಂತಿಸಿದರು. ಭಾರತ ಸಂವಿಧಾನದ ಹಿನ್ನಲೆಯಲ್ಲಿ ಶಿಕ್ಷಣದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದರು. ಮಹಾತ್ಮ ಗಾಂಧೀಜಿ ಅವರ ಮೂಲ ಶಿಕ್ಷಣ ಅವರಿಗೆ ಶ್ರೀರಕ್ಷೆಯಾಗಿತ್ತು. ಗಾಂಧೀಜಿ ಶಿಕ್ಷಣ ನೀತಿ ಇಂಗ್ಲೆಂಡಿನಲ್ಲೂ ಚರ್ಚೆಯಾಗುತ್ತಿದ್ದುದ್ದು ಕೆಂಗಲ್ಲರಿಗೆ ತಿಳಿದಿತ್ತು(ರಾಷ್ಟ್ರ ರತ್ನ ಕೆಂಗಲ್ ಹನುಮಂತಯ್ಯ, ಪ್ರೊ.ಡಿ. ಲಿಂಗಯ್ಯ ಪುಟ – 233)

ವಿಶ್ವವಿದ್ಯಾಲಯ ಉಪಕುಲಪತಿಗಳು, ಪ್ರಾಧ್ಯಾಪಕರು, ವೈದ್ಯರು, ಶಿಕ್ಷಣ ತಜ್ಞರು ಇವರೇ ಮುಂತಾದ ನಾಲವತ್ತು ಮಂದಿ ಸದಸ್ಯರು 'ವಿದ್ಯಾಭ್ಯಾಸ ಸುಧಾರಣಾ ಸಮಿತಿ'ಯನ್ನು ರಚಿಸಿದರು. ಕೆಂಗಲ್‌ರವರು ಶಿಕ್ಷಣದ ಬಗ್ಗೆ ಎಷ್ಟೊಂದು ಕಾಳಜಿಯನ್ನು ಹೊಂದಿದ್ದರು ಎಂದರೆ ಸಂಸ್ಥಾನದಲ್ಲಿ ಪ್ರತಿ ವರ್ಷವೂ ಸುಮಾರು ಒಂದು ಸಾವಿರದಷ್ಟು ಮಂದಿ ಬಿ.ಎ. ಎಂ.ಎ. ಮುಂತಾದ ಡಿಗ್ರಿಗಳನ್ನು ಪಡೆಯುತ್ತಿದ್ದಾರೆ. ಇವರು ತಮ್ಮ ವ್ಯಾಸಂಗ ಮುಗಿದ ನಂತರ ಒಂದು ವರ್ಷ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡದ ಹೊರತೂ ಅವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡುವುದಿಲ್ಲವೆಂದು ತೀರ್ಮಾನಿಸುವುದು ಸೂಕ್ತವೆಂದು ಷಿಫಾರಸ್ಸು ಮಾಡಿದರು. ಅದೇರೀತಿ ಎಂಜಿನಿಯರಿಂಗ್ ಇಲ್ಲವೆ ಮೆಡಿಕಲ್ ಡಿಗ್ರಿ ಪಡೆಯುವವರು ಪ್ರಾಕ್ಟಿಕಲ್ ಶಿಕ್ಷಣವನ್ನು ಪಡೆಯಲೇಬೇಕೆಂಬ ನಿಯಮವಿದೆ. ಈ ರೀತಿ ಪ್ರತಿ ಪದವೀಧರನೂ ವಿದ್ಯಾ ಪ್ರಸಾರ ಕೆಲಸಕ್ಕಾಗಿ ಒಂದು ವ್ಯವಸ್ಥೆ ಮಾಡಿ ಅವರು ಉತ್ಸಾಹದಿಂದ ಕೆಲಸಮಾಡುತ್ತಾರೆ ಎಂದು ಸಲಹೆ ನೀಡಿದರು (ಪ್ರತಿಬಾವಂತ ಸಂಸದೀಯ ಪಟುಗಳು – ಕೆ. ಹನುಮಂತಯ್ಯ ಪುಟ–55) ಈ ಮೇಲ್ಕಂಡ ಸಮಿತಿಯು ಸಕಾರಕ್ಕೆ ಸೂಕ್ತವಾದ ಸಲಹೆ ಸೂಚನೆಯನ್ನು ಣೆಡಬೇಕು. ಬಡವರಿಗೂ ಕೈಗೆಟಕುವಂತಹ ಶಿಕ್ಷಣ ನೀಡಬೇಕು ಅದು ಜನತಾ ಶಿಕ್ಷಣವಾಗಿರಬೇಕೆಂಬುದು ಅವರ ಆಶಯವಾಗಿತ್ತು. ಶ್ರೀ ಹನುಮಂತ್ಯನವರ ವಿದ್ಯಾಭ್ಯಾಸದ ಮುಖ್ಯಾಂಶಗಳು ಈ ಕೆಳಕಂಡಂತಿದೆ.

1. ಸರ್ವೊದಯ ದಿನಾಚಾರಣೆಯಿಂದ ಶಾಲಾ ವರ್ಷ ಆರಂಭ
2. ಕನ್ನಡ ಲಿಪಿಯ ಜೊತೆಗೆ ದೇವನಾಗರಿ ಲಿಪಿಯ ಕಲಿಕೆ
3. ಖಡ್ಡಾಯ ದೈಹಿಕ ಸಮಾಜ ಸೇವೆ

4. ನೈತಿಕ ಮತ್ತು ಸಾಂಸ್ಕೃತಿಕ ಶಿಕ್ಷಣ
5. ಮಹಿಳಾ ಶಿಕ್ಷಣದಲ್ಲಿ ಪ್ರಥಮ ಚಿಕಿತ್ಸೆ
6. ಸಂಗೀತ ಭರತನಾಟ್ಯ ಶಿಕ್ಷಣ
7. ಚರಕಕ್ಕೆ ಮಾತ್ರ ಸೀಮಿತವಾದ ಕ್ರಿಯಾತ್ಮಕ ವಿದ್ಯಾಭ್ಯಾಸ
8. ಭೂದಾನ
9. ವಿದ್ಯಾದಾನ ಇವೇ ಮುಂತಾದವು.

ಕೆಂಗಲ್ಲರ ಉದ್ದೇಶವೇನೆಂದರೆ ಯುವಕರು ವಿದ್ಯಾವಂತರಾಗಿ ಸ್ವಾವಲಂಬಿಗಳಾಗಿ ಅವರಿಂದ ಸ್ವಾಸ್ಥ್ಯ ಸಮಾಜ ಸೃಷ್ಟಿಯಾಗಲಿ ಎಂಬುದಾಗಿತ್ತು. ಹೆಣ್ಣು ಮಕ್ಕಳು ವಿದ್ಯಾವಂತರಾಗಬೇಕೆಂಬ ದೂರದೃಷ್ಟಿಯಿತ್ತು. ಅದಕ್ಕಾಗಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಆದ್ಯತೆ ನೀಡಿದರು. ಅಲ್ಲದೆ ಉಚಿತ ಹಾಗೂ ಖಡ್ಡಾಯ ಶಿಕ್ಷಣವನ್ನು ಜಾರಿಗೆ ತಂದರು. ವಿದ್ಯಾರ್ಥಿಗಳು ಮತ್ತು ಯುವಕರು ಸಮಾಜಸೇವೆ ಮತ್ತು ದೇಶಸೇವೆ ಮಾಡಬೇಕು ಹಾಗೂ ಸಮಾಜ ಮತ್ತು ದೇಶದ ಬಗ್ಗೆ ಕಾಳಜಿಯಿರಬೇಕು ಎನ್ನುವ ಉದ್ದೇಶದಿಂದ ಶಾಲಾ ಕಾಲೇಜುಗಳಲ್ಲಿ ಎನ್.ಸಿ.ಸಿ. ಎನ್.ಎಸ್.ಎಸ್, ಸ್ಕೌಟ್ ಮತ್ತು ಗೈಡ್ಸ್‌ಗೆ ಸೇರಲು ಪ್ರೋತ್ಸಾಹಿಸಿದರು ಅದಕ್ಕಾಗಿ ಹಣ ಮಂಜೂರು ಮಾಡಿದರು.

ಮಕ್ಕಳು ಶಾಲೆ ಬಿಡುತ್ತಿರುವ ವಿಷಯ ಕೆಂಗಲ್ಲರ ಗಮನಕ್ಕೆ ಬಂದಿತು. ಬಡತನದ ಜೊತೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಶಾಲೆ ಬಿಡುತ್ತಿದ್ದರು. ಆದಕಾರಣ ಮಾಧ್ಯಮಿಕ ಶಾಲೆಯ ಪಬ್ಲಿಕ್ ಪರೀಕ್ಷೆಯನ್ನು ರದ್ದು ಪಡಿಸಿದರು. ಸರ್ಕಾರಿ ಶಾಲಾಕಾಲೇಜುಗಳಿಗೆ ಭೂಮಿ ಇಲ್ಲವೆ ನಿವೇಶನ ನೀಡುವ ದಾನಿಗಳನ್ನು ಪ್ರೋತ್ಸಾಹಿಸಿದರು ಹಾಗೂ ಅಂತಹ ದಾನಿಗಳು ಶಿಕ್ಷಣ ಪ್ರಸರಣಕ್ಕೆ ಮುಂದೆ ಬರಬೇಕೆಂದು ಆಹ್ವಾನ ನೀಡಿದರು. ಕಾನಕಾನಹಳ್ಳಿ ಕರಿಯಪ್ಪನವರು ಶಾಲೆಯನ್ನು ಹಾಗೂ ವಸತಿ ಶಾಲೆಯನ್ನು ನಿರ್ಮಾಣ ಮಾಡಿ ಯಸಸ್ವಿಯಾಗುತ್ತಿರುವುದನ್ನು ಕಂಡು ಕೇಳಿ ಅವರನ್ನು ಪ್ರೋತ್ಸಾಹಿಸಿದರು. (ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ, ಪ್ರೊ.ಡಿ. ಲಿಂಗಯ್ಯ–ಪುಟ–236) ಕೆಂಗಲ್ಲರು ಎಂದೂ ಜಾತಿ ರಾಜಕೀಯ ಮಾಡಿದವರಲ್ಲ ತಮ್ಮದೇ ಜಾತಿಯ ಒಂದೊಮ್ಮೆ ತಮಗೆ ಆಶ್ರಯ ನೀಡಿದ "ಒಕ್ಕಲಿಗರ ಸಂಘ"ವು ತಾವು ನಡೆಸುತ್ತಿರುವ 'ಹಾಸ್ಟಲ್' ಮತ್ತು ಶಾಲಾ ಕಾಲೇಜುಗಳಿಗೆ ಸರ್ಕಾರದಿಂದ ಧನ ಸಹಾಯ ಕೊಡಿಸಬೇಕೆಂದು ಕೇಳಿಕೊಂಡಾಗ ಆ ಸಂಸ್ಥೆಯು 'ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ' ಎಂದು ಹೆಸರು ಬದಲಿಸಿಕೊಂಡು ಎಲ್ಲಾ ಜಾತಿಯವರಿಗೂ ಅಲ್ಲಿ ಅವಕಾಶ ನೀಡಿದರೆ ಮಾತ್ರ ಧನ ಸಹಾಯ ಮಾಡುವ ಷರತ್ತು ಹಾಕಿದರು. ಸಂಘವು ಧನ ಸಹಾಯಕ್ಕಾಗಿ ಮೇಲ್ಕಂಡ ಹೆಸರನ್ನು ಬದಲಿಸಿಕೊಂಡಿತು.

ಮೈಸೂರು ವಿಶ್ವವಿದ್ಯಾಲಯಕ್ಕೆ ಕುವೆಂಪುರವರನ್ನು ತಂದ ಕೆಂಗಲ್

ಕೆಂಗಲ್‌ರವರು ಸ್ವಾತಂತ್ರ್ಯ ಹೋರಾಟ ಮತ್ತು ಆಡಳಿತದಲ್ಲಿ ರಾಜ್ಯದ ಕಣ್ಮಣಿಯಾಗಿದ್ದರೆ ಶ್ರೀ ಕುವೆಂಪುರವರು ಸಾಹಿತ್ಯ ಕ್ಷೇತ್ರದ ದಿಗ್ಗಜರು 'ರಾಷ್ಟ್ರಕವಿಯು ಆಗಿದ್ದರು ಕೆಂಗಲ್‌ರವರಿಗಿಂತ ಕುವೆಂಪುರವರು ಕೇವಲ ನಾಲ್ಕೈದು ವರ್ಷಗಳು ಹಿರಿಯರು ಅಷ್ಟೇ ಕುವೆಂಪುರವರು ಅಧಿಕಾರ ಹಾಗೂ ಅಂತಸ್ಥಿಗಾಗಿ ಎಂದೂ ಆಸೆ ಪಟ್ಟವರಲ್ಲ ಅಧ್ಯಯನ, ಅಧ್ಯಾಪನ ಹಾಗೂ ಸಾಹಿತ್ಯಕ್ಕಾಗಿ ದುಡಿಯುತ್ತಿದ್ದರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು ಮೈಸೂರು ವಿಶ್ವ ವಿದ್ಯಾಲಯ ಇಡೀ ರಾಜ್ಯದಲ್ಲಿ ಸುಪ್ರಸಿದ್ದ ಹಾಗೂ ಪ್ರತಿಷ್ಠಿತ ವಿಶ್ವ ವಿದ್ಯಾಲಯವಾಗಿತ್ತು. ಶ್ರೀ ಹೆಚ್.ವಿ.ನಂಜುಡಯ್ಯನವವರೇ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಗಳು (1916–) ಹಲವಾರು ಜನ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು. 1950–54 ಶ್ರೀ ಬಿ.ಎಲ್. ಮಂಜುನಾಥ್ ರವರು, 1954–1956–ಎ.ಎಲ್. ಡಿಸೋಜರವರು ಉಪಕುಲಪತಿಗಳಾಗಿದ್ದರು. ಶ್ರೀ ಡಿಸೋಜರವರ ಕಾಲದಲ್ಲಿ ಕಾರಣಾಂತರದಿಂದ ಮೈಸೂರು ವಿಶ್ವವಿದ್ಯಾಲಯವು ತನ್ನ ಘನತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗತೊಡಗಿತು ಇದನ್ನೆಲ್ಲ ಗಮನಿಸುತ್ತಾ ಬಂದ ಕೆಂಗಲ್‌ರವರು ಶ್ರೀ ಕುವೆಂಪುರವರನ್ನು ಉಪಕುಲಪತಿಗಳನ್ನಾಗಿ ನೇಮಿಸಬೇಕೆಂದು ತೀರ್ಮಾನಿಸಿದರು. ಈ ಯೋಜನೆ ಹೊಳೆದದ್ದೇ ತಡ ಮೈಸೂರಿಗೆ ಹೋಗಿ ಕುವೆಂಪುರವರನ್ನು ಕಂಡು ವಿಷಯವನ್ನು ತಿಳಿಸಿದರು. ಕುವೆಂಪುರವರು ಅಷ್ಟು ಸುಲಭವಾಗಿ ಒಪ್ಪಲಿಲ್ಲ. ಕುವೆಂಪುರವರ ಷರತ್ತುಗಳನ್ನು ಪಾಲಿಸುವುದಾಗಿ ತಿಳಿಸಿ ಅವರನ್ನು ಒಪ್ಪಿಸಿದರು. ಶ್ರೀ ಕುವೆಂಪುರವರು 1956ರಿಂದ 1960ರ ತನಕ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯದ ಕಾರ್ಯಾಂಗ, ಭೋಧನಾಂಗ, ಪ್ರಸಾರಾಂಗಗಳಿಗೆ ಒಂದು ಹೊಸ ರೂಪವನ್ನು ನೀಡಿದರು. ಇವರ ಕಾಲದಲ್ಲೇ 'ಮಾನಸ ಗಂಗೋತ್ರಿ'ಯಂತ ಕ್ಯಾಂಪಸ್ ರೂಪಗೊಂಡಿತು. ಕುವೆಂಪುರವರು ಬಹುವಾಗಿ ಮೆಚ್ಚಿಕೊಂಡಿದ್ದು ಮಾನಸ ಗಂಗೋತ್ರಿ ಮತ್ತು ಅಲ್ಲಿಂದ ಕಾಣುವ ಕುಕ್ಕರಹಳ್ಳಿ ಕೆರೆ. ಈ ಕೆರೆಯನ್ನು ಅಭಿವೃದ್ಧಿ ಪಡಿಸುವ ಸಮಯದಲ್ಲಿ ಕೆಂಗಲ್ಲರ ಪ್ರಬಾವವನ್ನು ಬಳಸಿಕೊಂಡರು. ಕಳೆಗುಂದಿದ್ದ ಮೈಸೂರು ವಿಶ್ವವಿದ್ಯಾಲಯವು ಮತ್ತೆ ಕಳೆಕಟ್ಟಿತು.

ಸಾಹಿತ್ಯ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ

ಸಾಹಿತಿಗಳ ಸಜ್ಜನ ಸಹವಾಸದಲ್ಲೇ ಇರುತ್ತಿದ್ದ ಕೆಂಗಲ್ಲರು ಆಧುನಿಕ ಭೋಜರಾಜರೆಂದು ಅಂದು ಕರೆಯುತ್ತಿದ್ದರು. ನಾಡಿನ ಕಲೆ, ಸಂಗೀತ, ನಾಟಕ, ಗಮಕ, ನೃತ್ಯ ಇವೇ ಮುಂತಾದ ಕಲೆಗಳಿಗೆ ಬೆಲೆ ಕೊಡುತ್ತಿದ್ದರು. ಸಾಹಿತಿಗಳನ್ನು, ಕಲಾಕಾರರನ್ನು ಗೌರವಿಸುತ್ತಿದ್ದರು. ಆ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದ ಡಿ.ವಿ.ಗುಂಡಪ್ಪ, ಮಾಸ್ತಿವೆಂಕಟೇಶ ಅಯ್ಯಂಗಾರ್, ನರಸಿಂಹ

ಶಾಸ್ತ್ರಿ, ದೇವುಡು, ಅ.ನ.ಕೃ, ಸಿ.ಕೆ. ವೆಂಕಟರಾಮಯ್ಯ, ಬಿ. ಶಿವಮೂರ್ತಿಶಾಸ್ತ್ರಿ, ಡಿ.ಆರ್. ರಾಮಯ್ಯ, ಡಿ.ಎಲ್. ನರಸಿಂಹಚಾರ್, ಸಿದ್ದವನಹಳ್ಳಿ ಕೃಷ್ಣಶರ್ಮ, ಸುಬ್ಬರಾವ್, ಕೆ. ಸಂಪದ್ಗಿರಿ ರಾವ್, ಎಂ.ಪಿ.ಎಲ್.ಶಾಸ್ತ್ರಿ ಇವರೆ ಮುಂತಾದವರ ಸಲಹೆ ಸೂಚನೆಗಳನ್ನು ಕೇಳುತ್ತಿದ್ದರು. ನಾಡಿನ ಕಲೆ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದರು. ಸಾಹಿತಿಗಳ ಬಗ್ಗೆ ತುಂಬು ಗೌರವವನ್ನು ಹೊಂದಿದ್ದ ಕೆಂಗಲ್ಲರು ಒಮ್ಮೆ ಅ.ನ. ಕೃಷ್ಣರಾಯರ ಮನೆಗೆ ಸ್ವತಃ ತಾವೇ ತೆರಳಿ ಸಂಸ್ಕೃತಿ ಇಲಾಖೆಯ ಅಧ್ಯಕ್ಷರಾಗಬೇಕೆಂದು ಕೇಳಿಕೊಂಡದ್ದು ನಂತರ ಶ್ರೀ ಸಿ.ಕೆ. ವೆಂಕಟರಾಮಯ್ಯ ನವರನ್ನು ಸಂಸ್ಕೃತಿ ಇಲಾಖೆಯ ಅಧ್ಯಕ್ಷರನ್ನಾಗಿ ಮಾಡಿದ್ದು ಈಗ ಇತಿಹಾಸವಾಗಿ ಉಳಿದಿದೆ ಒಂದು ರಾಜ್ಯದ ಮುಖ್ಯಮಂತ್ರಿ ಸಾಹಿತಿಗಳ ಮನೆ ಬಾಗಿಲಿಗೇ ತೆರಳಿ ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಗೆ ಅಪಾರವಾದ ಕಾಳಜಿ ವಹಿಸಿದ್ದು ಇದೇ ಮೊದಲು.

ಕನ್ನಡಿಗರ ಮನೆಮಾತಾದ 'ಕುಮಾರವ್ಯಾಸ'

ಕೆಂಗಲ್ಲರು ಬಾಲಕರಾಗಿರುವಾಗಿನಿಂದಲೂ ಸಾಹಿತ್ಯ, ಕಲೆ, ಅನುವಾದದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು (ಈ ಹಿಂದೇಯೇ ತಿಳಿದಿದೆ) ಅವರು ಬಹುವಾಗಿ ಮೆಚ್ಚಿಕೊಂಡಿದ್ದು ಎಂದರೆ 'ಕುಮಾರವ್ಯಾಸ ಭಾರತ' ಇದರ ಸಂಪಾದನೆಯ ಕೆಲಸವನ್ನು ನಾಡಿನ ಹೆಸರಾಂತ ಕವಿಗಳಾದ ಶ್ರೀ ಕುವೆಂಪುರವರಿಗೆ ವಹಿಸಿದರು. ತಮಗೆ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸಿಕೊಟ್ಟರು. 'ಕುಮಾರವ್ಯಾಸ ಭಾರತ'ವನ್ನು ಇಪ್ಪತ್ತು ಸಾವಿರ ಪ್ರತಿಗಳನ್ನು ಅಚ್ಚು ಹಾರೈಸಿ ಕೇವಲ ಆರು ರೂಪಾಯಿ ಮುಖ ಬೆಲೆ ಇಡುವಂತೆ ಸರ್ಕಾರದ ಇಲಾಖೆಗೆ ಆಜ್ಞಾಪಿಸಿದರು. ಸರ್ಕಾರದ ಕಾಂರ್ಯದರ್ಶಿಯವರು ಮುಖ್ಯಮಂತ್ರಿಗಳ ಪತ್ರವನ್ನು ನೋಡಿ ಅವಕ್ಕಾಗಿ ಕಡಿಮೆ ಮುಖ ಬೆಲೆಯ ಈ ಕೃತಿಗೆ ಸಾಧಾರಣ ಕಾಗದವನ್ನು ಬಳಸಬಹುದೆಂದು ನೋಟ್ ಹಾಕಿದರು. ಇದನ್ನು ಕಂಡು ಕೆರಳಿದ ಕೆಂಗಲ್ಲರು ಕಾರ್ಯದರ್ಶಿಯನ್ನು ತಮ್ಮಲ್ಲಿಗೆ ಕರೆಸಿಕೊಂಡು ನೋಡಿ ಈ ಕೃತಿಯು ಭಾರತೀಯರ ಪವಿತ್ರವಾದ ಗ್ರಂಥ ಸಾಕಷ್ಟು ಕಾಲ ಉಳಿದಿರಬೇಕು ಆದ ಕಾರಣ ಒಳ್ಳೆಯ ಕಾಗದವನ್ನು ಬಳಸಿ ನಲವತ್ತು ಸಾವಿರ ಪ್ರತಿ ಅಚ್ಚಾಗಲಿ ಎರಡು ರೂಪಾಯಿ ಮುಖಬೆಲೆ ಇಡಿ ಎಂದು ಆಜ್ಞಾಪಿಸಿದರು. ಅದರಂತೆ 'ಕುಮಾರವ್ಯಾಸ ಭಾರತ' ಉತ್ತಮವಾಗಿ ಹೊರಬಂದು ನಾಡಿನಾದ್ಯಂತ ಹಂಚಿಕೆಯಾಯಿತು. ಇದರ ಯಶಸ್ಸಿನಿಂದ ಉತ್ತೇಜಿತರಾದ ಕೆಂಗಲ್ಲರು ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯಗಳನ್ನು ಸಂಪಾದಿಸಿ ಹಂಚಬೇಕೆಂದು ಹಂಬಲಿಸಿದರು.

ಕೆಂಗಲ್ಲರ ಕೈಗಾರಿಕಾ ನೀತಿ

ಕೆಂಗಲ್ಲರು ಜನತೆಗೆ, ನಾಡಿಗೆ ಅನ್ಯಾಯವಾಗುತ್ತಿದ್ದರೆ ಅದನ್ನು ಸಹಿಸಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ನಿಷ್ಠುರವಾಗಿ ನಡೆದು ಕೊಳ್ಳುತ್ತಿದ್ದರು. ನೀರಾವರಿ ಕೈಗಾರಿಕೆಗಳನ್ನು ಉತ್ತೇಜಿಸಿದರೆ ಜನ ಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದು ಅರಿತ್ತಿದ್ದ ಕೆಂಗಲ್ಲರು ತುಂಗಾ, ನಗುಅಣೆಕಟ್ಟೆಗಳ ಅಭಿವೃದ್ದಿಗೆ ಧನಸಹಾಯ ಮಾಡಿದರು. ಬೆಂಗಳೂರು ನಗರಾಭಿವೃದ್ದಿಗೆ ಒತ್ತುಕೊಟ್ಟರು. ಒಮ್ಮೆ ಭದ್ರಾವತಿ ಕಾರ್ಖಾನೆ ತನ್ನ ಸಿಮೆಂಟ್ ಉತ್ಪತ್ತಿ ಜಾಸ್ತಿಯಾಗಿ ಬೇಡಿಕೆ ಕಡಿಮೆಯಾಯಿತು. ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂದೊದಗಿತು. ಉತ್ಪಾದನೆಯನ್ನು ಏಕೆ ನಿಲ್ಲಿಸುತ್ತೀರಿ ಇರುವ ದಾಸ್ತಾನು ಬಳಸಿ ಟಾರ್ ರಸ್ತೆಗಳ ಬದಲಿ ಸಿಮೆಂಟ್ ರಸ್ತೆಗಳನ್ನು ಮಾಡಿ ಎಂದು ಆದೇಶಿಸಿದರು ಇದರಿಂದಾಗಿ ನೂರೈವತ್ತು ಮೈಲಿ ಸಿಮೆಂಟ್ ರಸ್ತೆಯು ಸಿದ್ದವಾಯಿತು. ದಾಸ್ತಾನು ಮುಗಿಯುತ್ತಲೆ ಕಾರ್ಖಾನೆಯು ಪುನಶ್ಚೇತನಗೊಂಡಿತು. ಕಾರ್ಖಾನೆಗೆ ಬಂದೊದಗಿದ ಕಷ್ಟ ಕೆಂಗಲ್ಲರ ದೂರದೃಷ್ಟಿಯ ಫಲವಾಗಿ ಸುಲಭವಾಗಿ ಪಾರಾಯಿತು.

ಕೋಲಾರ ಚಿನ್ನದ ಗಣಿಯು ಬ್ರಿಟೀಷರಿಂದ ಸ್ಥಾಪನೆಯಾಗಿ ಸ್ಥಳೀಯರ ಕೋಪಕ್ಕೆ ತುತ್ತಾಗಿ ಕೆಂಗಲ್ಲರ ಆಡಳಿತದ ಕಾಲದಲ್ಲಿ ರಾಷ್ಟ್ರೀಕರಣವಾದ ರೋಚಕತೆ ಹೀಗಿದೆ 1880ರಲ್ಲಿ ಇಂಗ್ಲೆಂಡಿನ ಜಾನ್ ಟೇಲರ್ ಕಂಪನಿಯು ಕೋಲಾರದಲ್ಲಿ ಚಿನ್ನದ ಗಣಿ ತೆಗೆಯಲು ಬ್ರಿಟೀಷರಿಂದ ಹಾಗೂ ಮೈಸೂರು ಒಡೆಯರಿಂದ ಪರವನಗಿ ಪಡೆಯಿತು. ಕೆಲವೇ ವರ್ಷಗಳಲ್ಲಿ ಗಣಿ ಕೆಲಸಕ್ಕೆ ವಿದ್ಯುತ್‌ಚ್ಛಕ್ತಿ ಪೂರೈಸಿದರು. ಅರಸರ ಕಣ್ಣೊರೆಸಲು ಬಂದಿದ್ದ ಕಂಪನಿ ಚಿಕ್ಕಾಸನ್ನು ನೀಡಿ ಅವರ ಬಾಯಿ ಮುಚ್ಚಿಸಿದರು. ಅಲ್ಲಿದ್ದ ಚಿನ್ನವನ್ನು ನಿರಾತಂಕವಾಗಿ ಅಲ್ಲಿಂದ ಇಂಗ್ಲೆಂಡ್‌ಗೆ ಸಾಗಿಸಿದರು. ಗಣಿಯು ಬರಿದಾಗುತ್ತಾ ಬಂತು. ಗಣಿ ಕಾರ್ಮಿಕರನ್ನು ನಿರಂತರವಾಗಿ ಶೋಷಣೆ ಮಾಡುತ್ತಾ ಬಂತು. ಗಣಿಯಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಅಲ್ಲೆ ಬಿಸಾಡಿತು. ಇಡೀ ಕೋಲಾರ ಜಿಲ್ಲೆಯ ಜನರಿಗೆ ಚಿನ್ನದ ಗಣಿ ತಲೆ ನೋವಾಗಿ ಪರಿಣಮಿಸಿತು. ಬಹಳಷ್ಟು ಕಾಲದಿಂದಲೂ ಗಣಿಯ ವಿರುದ್ದ ರತ್ನವೇಲು, ಎಂ.ಸಿ. ಪೆರುಮಾಳ್, ಕೆ.ಸಿ. ರೆಡ್ಡಿ, ಪಿ.ಆರ್.ಕೆ. ಶರ್ಮ, ರಾಮಲಿಂಗಮ್, ಲಕ್ಷ್ಮಣ್ ಮೊದಲಿಯಾರ್ ಇವರೇ ಮುಂತಾದವರು ಹೋರಾಡುತ್ತಾ ಬಂದರು. ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿಗಳಾದ ಮೇಲೆ ಕೋಲಾರದವರೇ ಆದ ರೆಡ್ಡಿಯವರು ಗಣಿಯನ್ನು ಪುನಃಶ್ಚೇತನ ಮಾಡಿ ಕಾರ್ಮಿಕರಿಗೆ ನ್ಯಾಯ ಒದಗಿಸಿದರು. ಕೆಂಗಲ್ಲರು ಮುಖ್ಯಮಂತ್ರಿಯವರಾದ ಮೇಲೆ ಗಣಿಯ ಬಗ್ಗೆ ಕಠಿಣ ನಿರ್ಧಾರ ಕೈಗೊಂಡರು. ಪ್ರಕೃತಿ ದತ್ತವಾದ ಖನಿಜ ಸಂಪತ್ತು, ಅರಣ್ಯ ಸಂಪತ್ತು ದೇಶದ ಆಸ್ತಿ, ಸ್ವಾತಂತ್ರ್ಯ ಬಂದ ಮೇಲೂ

ವಿದೇಶಿಯರ ಕಾರುಬಾರು ನಡೆಯಬಾರದು ಕಾರ್ಮಿಕರ ಹಿತಾಸಕ್ತಿ, ರಾಜ್ಯದ ಹಿತಾಸಕ್ತಿ ಕಾಪಾಡದ ಗಣಿ ಏಕೆ ಬೇಕು? ಎಂದು ಪ್ರಶ್ನಿಸಿದ ಕೆಂಗಲ್ಲರು 1955ರಲ್ಲಿ ಕೋಲಾರ ಚಿನ್ನದ ಗಣಿಯನ್ನು ರಾಷ್ಟ್ರೀಕರಣಗೊಳಿಸಿಯೇ ಬಿಟ್ಟರು. ಇದು ಅವರ ಧೈರ್ಯ, ಸ್ಥೈರ್ಯ, ಧೃಡನಿರ್ಧಾರ ಮೆಚ್ಚುವಂತದ್ದು. ಇನ್ನೂರು ವರ್ಷಗಳಿಂದ ಪರಕೀಯರ ಸ್ವತ್ತಾಗಿದ್ದ ಗಣಿಯನ್ನು ಅವರಿಂದ ಮುಕ್ತಗೊಳಿಸಿ ನಾಡಿನ ಸ್ವತ್ತಾನ್ನಾಗಿಸಿದ ಕೀರ್ತಿ ಕೆಂಗಲ್ಲರಿಗೆ ಸಲ್ಲುತ್ತದೆ. ಮುಂದಾಲೋಚನೆಯುಳ್ಳ ಕೆಂಗಲ್ಲರು ಬೆಂಗಳೂರು ನಗರಾಭಿವೃದ್ಧಿಗೂ ಗಮನ ನೀಡಿದರು. ಪ್ರಧಾನಮಂತ್ರಿಗಳಾಗಿದ್ದ ಜವಹರಲಾಲ್ ನೆಹರುರವರೊಂದಿಗೆ ಉತ್ತಮ ಭಾಂದವ್ಯ ಹೊಂದಿದ್ದ ಕೆಂಗಲ್ಲರು ಬೃಹತ್ ಕೈಗಾರಿಕೆಗಳಾದ ಹೆಚ್.ಎ.ಎಲ್. ಹೆಚ್.ಎಂ.ಟಿ. ಯಂತಹ ಕೈಗಾರಿಕೆಗಳು ಪೂರ್ಣ ಪ್ರಮಾಣದಲ್ಲಿ ಬೆಂಗಳೂರಿಗೆ ಬರಲು ಕಾರಣಕರ್ತರು. ಬೆಂಗಳೂರು ಕೈಗಾರಿಕಾ ನಗರಿಯಾಗಲು ಕೆ.ಸಿ. ರೆಡ್ಡಿಯವರಷ್ಟೇ ಕೆಂಗಲ್ಲರೂ ಕಾರಣಕರ್ತರು.

ಕರ್ನಾಟಕದ ಏಕೀಕರಣ ಮತ್ತು ಕೆಂಗಲ್

ಮೈಸೂರು ಸಂಸ್ಥಾನವು ಏಕೀಕರಣಗೊಂಡು ಬೃಹತ್ ಕರ್ನಾಟಕವಾಗಿ ಮಾರ್ಪಟಿದ್ದು ಒಂದು ರೋಚಕವಾದ ಕಥೆಯೇ ಸರಿ ಒಮ್ಮೆ ಬಾದಾಮಿ ಚಾಲುಕ್ಯರ (ಎರಡನೇ ಪುಲೀಕೇಶಿ) ಕಾಲದಲ್ಲಿ, ರಾಷ್ಟ್ರಕೂಟರ ಕಾಲದಲ್ಲಿ, ವಿಜಯನಗರ(ಕೃಷ್ಣದೇವರಾಯ)ದ ಕಾಲದಲ್ಲಿ ಈ ಮಂಗಳೂರಿನಿಂದ ಹಿಡಿದು ತಮಿಳುನಾಡು, ಆಂದ್ರ, ಕೇರಳ, ಮಹಾರಾಷ್ಟ್ರದ ಬಹುಭಾಗಗಳನ್ನು ಆಕ್ರಮಿಸಿ ಕನ್ನಡಿಗರ ಸಾಮ್ರಾಜ್ಯವನ್ನೇ ನಿರ್ಮಿಸಿದ್ದರು. ಹೈದಾರಲಿ ಟಿಪ್ಪು ಕಾಲದಲ್ಲೂ ತಮಿಳುನಾಡಿನ ದಿಂಡಿಗಲ್, ಕೇರಳದ ತಿರುವಂಕೂರೂ, ಮಲಬಾರ್‌ವರೆಗೂ ವ್ಯಾಪಿಸಿತ್ತು. ನಾಲ್ಕನೇ ಆಂಗ್ಲೊ ಮೈಸೂರು ಯುದ್ದದಲ್ಲಿ ಟಿಪ್ಪು ಸುಲ್ತಾನರು ಸೋತು ಮರಣ ಹೊಂದಲಾಗಿ (1799) ಕರ್ನಾಟಕ ನಾಲ್ಕು ಭಾಗಗಳಾಗಿ ವಿಂಗಡನೆಗೊಂಡಿತು. ಮೈಸೂರು ಒಡೆಯರಿಗೆ ಅಂದು ಬ್ರಿಟಿಷರು ಒಂಬತ್ತು ಜಿಲ್ಲೆಗಳನ್ನೊಳಗೊಂಡ ಮೈಸೂರು ಸಂಸ್ಥಾನವನ್ನು ನೀಡಿದರು.

ಕರ್ನಾಟಕವು ಈ ಕೆಳಕಂಡಂತೆ ಹರಿದು ಹಂಚಿ ಹೋಗಿತ್ತು

1. ಮೈಸೂರು ಸಂಸ್ಥಾನ– ಹಳೇ ಮೈಸೂರಿನ ಜಿಲ್ಲೆಗಳು (ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ, ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳು)

2. ಬಾಂಬೆ ಪ್ರಾಂತ್ಯ (ಬಾಂಬೆ ಪ್ರೆಸಿಡೆನ್ಸಿ) ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ, ದಕ್ಷಿಣ ಮತ್ತು ಉತ್ತರ ಸೊಲ್ಲಾಪುರ, ಮಂಗಳವೇಡ

3. ಕೊಡಗು – ಬ್ರಿಟೀಷ್ ಕಮಿಷನರ್ ನಿಯಂತ್ರಣದಲ್ಲಿತ್ತು.
4. ಹೈದರಾಬಾದ್ ಸಂಸ್ಥಾನ–ಗುಲ್ಬರ್ಗ, ಬೀದರ್, ರಾಯಚೂರು, ಕೊಪ್ಪಳ.
5. ಕೊಲ್ಲಾಪುರ ಸಂಸ್ಥಾನ – ರಾಯಭಾಗ, ಕಟಕೊಳ, ತೋರಗಲ್ಲು
6. ಸಾಂಗ್ಲಿ ಸಂಸ್ಥಾನ ತೇರವಾಳ, ರಹಾಪುರ, ದೊಡ್ಡವಾಡ, ಶಿರಹಟ್ಟಿ.
7. ಮೀರಜ್ ಸಂಸ್ಥಾನ – ಲಕ್ಷ್ಮೇಶ್ವರ
8. ಜಮಕಂಡಿ ಸಂಸ್ಥಾನ ಕುಂದಗೋಳ, ಚಿಪ್ಪಲಕಟ್ಟಿ.
9. ಮುಧೊಳ ಸಂಸ್ಥಾನ
10. ಸೊಂಡೂರು ಸಂಸ್ಥಾನ
11. ರಾಯದುರ್ಗ
12. ಸವಣೂರು
13. ಅಕ್ಕಲಕೋಟೆ
14. ಹಿರಿಯ, ಕಿರಿಯ ಕುರಂದವಾಡ
15. ವಡಗಾಂ
16. ಬ್ರಿಟೀಷರ ನಿಯಂತ್ರಣದಲ್ಲಿ – ಬೆಂಗಳೂರು ದಂಡು ಪ್ರದೇಶ, ಬಳ್ಳಾರಿ, ಬೆಳಗಾವಿ.

ಏಕೀಕರಣಕ್ಕಾಗಿ ನಡೆದ ಪ್ರಯತ್ನಗಳು

ಕರ್ನಾಟಕದ ಏಕೀಕರಣವು ಭಾರತ ಸ್ವಾತಂತ್ರ್ಯ ಹೋರಾಟಕ್ಕೂ ಮುನ್ನ ಪ್ರಾರಂಭವಾದದ್ದು ಎಂದರೆ ಆಶ್ಚರ್ಯವಾಗುತ್ತದೆ. ಇದು ತನ್ನದೇ ಆದ ರೋಚಕವಾದ ಇತಿಹಾಸನ್ನೊಂದಿದೆ. 1831ರಲ್ಲಿ ಬ್ರಿಟಿಷ್ ಅಧಿಕಾರಿ ಎಲಿಯಟ್ ಎಂಬುವವನು ಧಾರವಾಡದಲ್ಲಿ ಕನ್ನಡ ಶಾಲೆಯನ್ನು ತೆರೆದನು. ಅಲ್ಲಿಂದಾಗಿ ಕನ್ನಡ ಶಾಲೆಯ ಅಗತ್ಯ ಕಂಡುಬಂತು. 1875ರಲ್ಲಿ ಅದೇ ಧಾರವಾಡದಲ್ಲಿ ಶಿಕ್ಷಕರ ತರಬೇತಿ ಶಾಲೆ ಸ್ಥಾಪನೆಯಾಗಲಾಗಿ ವೆಂಕಟರಂಗೋ ಕಟ್ಟಿ, ಗಂಗಾಧರೇಶ್ವರ ತುರಮುರಿ, ರೊದ್ದ ಶ್ರೀನಿವಾಸ್‌ರಾವ್, ಡೆಪ್ಯೂಟಿ ಎಜುಕೇಶನ್ ಆಫಿಸರ್ ಆಗಿದ್ದ ಚನ್ನಬಸಪ್ಪ (ಡೆಪ್ಯೂಟಿ ಚನ್ನಬಸಪ್ಪ) ಗದಿಗಯ್ಯ ಹೊನ್ನಾಪುರಮಠ, ಮುದವೀಡು ಕೃಷ್ಣರಾವ್, ಗಳಗನಾಥ ಇನ್ನು ಮುಂತಾದವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಾಗಿ ಶ್ರಮಿಸ ತೊಡಗಿದರು. ಆ ಭಾಗಗಳಲ್ಲಿ (ಉತ್ತರ ಕರ್ನಾಟಕ) ಉರ್ದು, ಮರಾಠಿ, ಹಿಂದಿ, ತೆಲಗು ಭಾಷೆಗಳದ್ದೆ ಕಾರುಬಾರು ಬಾಂಬೆ ಪ್ರೆಸಿಡೆನ್ಸಿಯಲ್ಲಿ ಶಿಕ್ಷಣ ಮಾಧ್ಯಮ, ಪತ್ರಿಕೆಗಳು ಅಂಗಡಿ ಲೆಕ್ಕಪತ್ರ, ದಿನನಿತ್ಯದ ವ್ಯವಹಾರ ಇವೇ ಮುಂತಾದವು ಮರಾಠಿ ಭಾಷೆಯಲ್ಲಿತ್ತು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ತಮಿಳು

ಭಾಷಿಕರು ಒಂದೂ ಮುಕ್ಕಾಲು ಕೋಟಿ ಜನ ತಮಿಳಿನಲ್ಲಿ ವ್ಯವಹರಿಸುತ್ತಿದ್ದರು. ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು ಹೈದರಾಬಾದ್ ಸಂಸ್ಥಾನದಲ್ಲಿ ಹಿಂದಿ, ಉರ್ದು, ಇಂಗ್ಲಿಷ್ ಹಾಗೂ ಇತರ ಭಾಷೆಗಳ ಪ್ರಭಾವವಿದ್ದಿತು.

ಸಂಘ ಸಂಸ್ಥೆಗಳು ಮತ್ತು ಪತ್ರಿಕೆಗಳ ಪಾತ್ರ

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳಸಲು ಉತ್ತರ ಕರ್ನಾಟಕ ಸೇರಿದಂತೆ ಕೆಲವಾರು ಸಂಘ ಸಂಸ್ಥೆಗಳು ಹುಟ್ಟಿಕೊಂಡವು. 1890ರ ಸಮಯದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದಲ್ಲಿ ತಲೆ ಎತ್ತಿತು. 1915ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಂದಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಯತ್ನದಿಂದಾಗಿ ಜನ್ಮ ತಾಳಿತು. 1916ರಲ್ಲಿ ಧಾರವಾಡದಲ್ಲಿ ಕರ್ನಾಟಕ ಸಭಾ ತಲೆ ಎತ್ತಿತು. ಕನ್ನಡ ಭಾಷೆಗಾಗಿ ಕೂಗು ಎಷ್ಟು ತಾರಕಕ್ಕೇರಿತೆಂದರೆ 1924ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಮಹತ್ಮ ಗಾಂಧಿಯವರು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಈಗಾಗಲೆ ತಲೆಎತ್ತಿದ್ದ ಕರ್ನಾಟಕ ಏಕೀಕರಣ ಸಭದ ಅಧ್ಯಕ್ಷರಾಗಿದ್ದ ಶ್ರೀ ಸಿದ್ದಪ್ಪ ಕಂಬಳಿ ಸೇರಿದಂತೆ ಕೆಲವಾರು ಭಾಷಾಭಿಮುಖಿಗಳು ಮಹತ್ಮಗಾಂಧಿಯವರನ್ನು ಬೇಟಿ ಮಾಡಿ ಕರ್ನಾಟಕವನ್ನು ಏಕೀಕರಣಮಾಡಿ, ಭಾಷಾವಾರು ಪ್ರಾಂತ್ಯ ರಚನೆಮಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಉಳಿಸಿ ಎಂದು ಆಗ್ರಹಿಸಿದರು. ಅದಕ್ಕೆ ಗಾಂಧಿಯವರು "ಮೊದಲು ಸ್ವಾತಂತ್ರ್ಯಕ್ಕಾಗಿ ಹೋರಾಡೋಣ ನಂತರ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಯೋಚನೆ ಮಾಡೋಣ ನಿಮಗೆ ಶುಭವಾಗಲಿ" ಎಂದು ಹರಸಿದರು.

ಕರ್ನಾಟಕ ಏಕೀಕರಣಕ್ಕೆ ಒತ್ತುಕೊಟ್ಟ ಪತ್ರಿಕೆಗಳೆಂದರೆ ಕರ್ನಾಟಕಪತ್ರ, ಜ್ಞಾನಭೋದಕ, ಚಂದ್ರೋದಯ, ಧನಂಜಯ, ಕರ್ನಾಟಕ ವೃತ್ತ, ರಾಜಹಂಸ ವಾಗ್ಭೂಷಣ, ವಾಗ್ದೇವಿ ವಿಜಯ, ಶುಭೋದಯ, ಕರ್ಮವೀರ, ಪ್ರಬುದ್ಧ ಕರ್ನಾಟಕ, ವಿಶ್ವ ಕರ್ನಾಟಕ (ತೀ.ತ. ಶರ್ಮರ ಪತ್ರಿಕೆ) ವಿಶಾಲ ಕರ್ನಾಟಕ, ತರುಣ ಕರ್ನಾಟಕ, ಸ್ವಾತಂತ್ರ್ಯ ಕರ್ನಾಟಕ, ಇವೇ ಮುಂತಾದ ಪತ್ರಕೆಗಳು ಕನ್ನಡಿಗರನ್ನು ಹುರಿದುಂಬಿಸಿದವು. ನಾಡು ನುಡಿಗಾಗಿ ದುಡಿಯುವಂತೆ ಮಾಡಿದವು.

ಏಕೀಕರಣದ ಮುಂಚುಣಿಯಲ್ಲಿದ್ದ ಕೆಲವರನ್ನು ಇಲ್ಲಿ ಸ್ಮರಿಸಬೇಕು. ಆಲೂರು ವೆಂಕಟರಾಯ (ಕರ್ನಾಟಕ ಘತ ವೈಭವ ಕತೃ) ಕಡಪಾ ರಾಘವೇಂದ್ರ,

ಶಂ.ಭ. ಜೋಷಿ, ಮಂಗಳ ವೇಡ ಶ್ರೀನಿವಾಸರಾವ್, ಆರ್.ಆರ್. ದಿವಾಕರ್, ರಾಮರಾಯ ನರಗುಂದಕರ್, ಗದಿಗಯ್ಯ ಹೊನ್ನಪುರಮಠ, ಮುದವೀಡು ಗಂಗಾಧರ್‌ರಾವ್ ದೇಶಪಾಂಡೆ, ನಿವೃತ್ತ ನ್ಯಾಯಾದೀಶರಾಗಿದ್ದ ಸೆಟ್ಲೂರ್ ಇವರೇ ಮುಂತಾದವರು.

ಕೆಂಗಲ್ ಮತ್ತು ಏಕೀಕರಣ

ಕರ್ನಾಟಕದಲ್ಲಿ ನಡೆಯುತ್ತಿದ್ದ ಮುಷ್ಕರ, ಹರತಾಳಗಳನ್ನು ನಿಲ್ಲಿಸಿ ಶಾಂತರೀತಿಯಿಂದ ಇರಲು ಕೇಂದ್ರನಾಯಕರಿಗೆ ಸ್ವಲ್ಪ ಸಮಯದ ಅಗತ್ಯವಿತ್ತು. ಅದಕ್ಕಾಗಿ ಕೇಂದ್ರದ ನಾಯಕರುಗಳಾದ ಪಂಡಿತ್ ಜವಹರ್‌ಲಾಲ್ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಡಾ.ರಾಜೇಂದ್ರ ಪ್ರಸಾದ್, ಚಕ್ರವರ್ತಿ ರಾಜ ಗೋಪಾಲಚಾರಿ ಇವರೇ ಮುಂತಾದವರು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರಿಗೆ ದುಂಬಾಲು ಬಿದ್ದರು. 1951ರಲ್ಲಿ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ (ಪುಟ್ಟಣ್ಣ ಚೆಟ್ಟಿ ಭವನ) 'ಕರ್ನಾಟಕ ಪ್ರಾಂತರಚನಾಸಭೆ' ನಡೆಯಿತು. ಶ್ರೀ ಕೆ.ಸಿ. ರೆಡ್ಡಿಯುವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಕೆಂಗಲ್‌ರವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಕೆಂಗಲ್ಲರು ಚಳವಳಿಗಾರರ ಬೆಂಬಲಕ್ಕೆ ನಿಂತ್ತಿದ್ದರು. ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡದ್ದೆ ಅಲ್ಲದೆ ಎಲ್ಲ ರೀತಿಯ ಬೆಂಬಲ ನೀಡಿದರು. ಮತ್ತೊಂದು ಕಡೆ ಉತ್ತರ ಕರ್ನಾಟಕ ಭಾಗದಲ್ಲಿ ಏಕೀಕರಣ ಚಳವಳಿ ತೀರಾ ಗಂಭೀರ ಸ್ವರೂಪ ಪಡೆದುಕೊಂಡಿತು. ಆಂಧ್ರದ ಪುಟ್ಟಿ ಶ್ರೀರಾಮುಲುವಿನಂತೆ 1952ರ ಡಿಸಂಬರ್‌ನಲ್ಲಿ ಅಂದಾನಪ್ಪ ದೊಡ್ಡಮೇಟಿಯವರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಅವರ ಹೆಜ್ಜೆಯ ಗುರುತುಗಳನ್ನು ಅನುಸರಿಸಿ ಶಂಕರಗೌಡ ಪಾಟೀಲ್, ನಾರಾಯಣ ಪೈ ಇವರೇ ಮುಂತಾದವರು ಆಮರಣಾಂತ ಉಪವಾಸಕ್ಕಿಳಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿತು ಕೆಂಗಲ್ಲರಿಗೆ ದಿನೇ ದಿನೇ ಕೇಂದ್ರನಾಯಕರು ಹಾಗೂ ರಾಜ್ಯದ ಚಳವಳಿಗಾರರಿಂದ ಒತ್ತಾಯ ಬರತೊಡಗಿತು.

ಕೆಂಗಲ್ಲರ ನೇತೃತ್ವದಲ್ಲಿ ಬಳ್ಳಾರಿ ಸೇರ್ಪಡೆ

ಅಧಿಕಾರಿಗಳನ್ನು ಬಳ್ಳಾರಿಗೆ ಕಳುಹಿಸಿ ಅಲ್ಲಿನ ಜನರ ಆಶೋತ್ತರಗಳನ್ನು ತಿಳಿದುಕೊಂಡು ಕಾನೂನಿನ ತೊಡಕಾಗದಂತೆ 1-10-1953ರಲ್ಲಿ ವಿದ್ಯುಕ್ತವಾಗಿ ಬಳ್ಳಾರಿಯನ್ನು ಮೈಸೂರು ರಾಜ್ಯದೊಂದಿಗೆ ವಿಲೀನಗೊಳಿಸಿದರು ಇದು ಸುಲಭದ ಕೆಲಸವಾಗಿರಲಿಲ್ಲ. ಕಾರಣವೇನೆಂದರೆ ನೆರೆಯ ಆಂಧ್ರ ಇಲ್ಲವೆ

ತಮಿಳುನಾಡು ರಾಜ್ಯಗಳು ಮೈ ಮೇಲೆ ಬರಬಹುದಾದ ಸಾಧ್ಯತೆಗಳಿದ್ದವು. ಅಂತಹ ಸಂದರ್ಭದಲ್ಲಿ ಬಳ್ಳಾರಿಯನ್ನು ಸೇರಿಸಿಕೊಂಡಿದ್ದು ಕೆಂಗಲ್ಲರ ಸಾಹಸವೇ ಸರಿ ಕೆಂಗಲ್ಲರನ್ನು ಬಳ್ಳಾರಿಯ ಜನ ಮೆರೆಸಿದರು, ಕೊಂಡಾಡಿದರು, ಪೂಜಿಸಿದರು ಎಂದರೆ ತಪ್ಪಾಗಲಾರದು. ಕರ್ನಾಟಕವನ್ನು ಏಕೀಕರಣ ಮಾಡಲು ಇದು ಕೆಂಗಲ್ಲರಿಗೆ ಬಲ ನೀಡಿತು. ಚಳವಳಿಗಾರರು ಸಾಹಿತಿ ಸಜ್ಜನರು ಕೆಂಗಲ್ಲರ ದಿಟ್ಟಕ್ರಮವನ್ನು ಕೊಂಡಾಡಿದರು. ಕನ್ನಡದ ಪತ್ರಿಕೆಗಳು ಹಾಡಿ ಹೊಗಳಿ ಬರೆದವು. ಕೆಂಗಲ್ಲರು ಇದರಿಂದ ಉತ್ಸುಕರಾದರು. ಆಂಧ್ರದಲ್ಲಿ ಆದ ಅವಘಡ ಮೈಸೂರು ರಾಜ್ಯದಲ್ಲಿ ಮರುಕಳಿಸದಿರಲಿ ಎಂಬ ಕಾರಣಕ್ಕೆ 1953ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಜವಹಾರ್ ಲಾಲ್ ನೆಹರುರವರು ರಾಜ್ಯಗಳ ಪುನರ್ವಿಂಗಡಣಾ ಸಮಿತಿಯನ್ನು ರಚಿಸಿದರು. ಶ್ರೀ ಫಜಲ್ ಆಲಿ ನೇತೃತ್ವದ ಸಮಿತಿಯನ್ನು ರಚಿಸಿದರು. ಅಂದು ಆಲಿಯವರು ಒರಿಸ್ಸಾದ ರಾಜ್ಯಪಾಲರಾಗಿದ್ದರು. ಅಲ್ಲದೆ ಹೃದಯನಾಥ ಕುಂಜ್ರು ಮತ್ತು ಕೆ.ಎಂ. ಫಣಿಕ್ಕರ್‌ರವರು ಸಮಿತಿಯ ಸದಸ್ಯರಾಗಿದ್ದರು. ಈ ಮೇಲ್ಕಂಡ ಸಮಿತಿಗೆ ಭಾಷಾವಾರು ಪ್ರಾಂತ್ಯ ವಿಂಗಡಣೆಯ ಅಗತ್ಯವನ್ನು ಮನವರಿಕೆ ಮಾಡಿಕೊಡಲು ಕನ್ನಡದ ಹೆಸರಾಂತ ಸಾಹಿತಿಗಳು, ಮೇಧಾವಿಗಳು, ರಾಜಕಾರಣಿಗಳು ಒಂದು ಸಮಿತಿಯನ್ನು ರಚಿಸಿಕೊಂಡು ಸಮಿತಿಗೆ ಪೂರಕವಾಗಿ ಸಹಾಯಮಾಡಿದರು. ಕೆಂಗಲ್‌ರವರು ಮುಖ್ಯಮಂತ್ರಿಗಳಾಗುವ ಮೊದಲಿನಿಂದಲೂ ಏಕೀಕರಣಕ್ಕೆ ಬೆಂಬಲ ನೀಡುತ್ತಿದ್ದು ಮುಖ್ಯಮಂತ್ರಿಗಳಾದ ಮೇಲೆ ಏಕೀಕರಣ ಚಳವಳಿಗಾರರಿಗೆ ಮತ್ತಷ್ಟು ಬೆಂಬಲ ಸಿಕ್ಕಿದಂತಾಯ್ತು. ಏಕೀಕರಣಕ್ಕೆ ಕೆಂಗಲ್ಲರು ಕಾಯ, ವಾಚ, ಮನಸ ದುಡಿಯುತ್ತಿದ್ದರು. ಏಕೀಕರಣವಾಗಿ ತೀರಲೇಬೇಕೆಂಬ ಹಟಕ್ಕೆ ಬಿದ್ದರು. ಬಳ್ಳಾರಿಯನ್ನು ಏಕೀಕರಣಕ್ಕೆ ಒಳಪಡಿಸಿ ಯಶಸ್ವಿಯಾದ ಕೆಂಗಲ್ಲರು ನನ್ನ ಕಾಲದಲ್ಲಿ ಪೂರ್ಣಮಟ್ಟದಲ್ಲಿ ಏಕೀಕರಣಗೊಳ್ಳಬೇಕೆಂಬ ಕನಸು ಕಂಡರು. ಇದರ ಜೊತೆಗೆ ಈಗಾಗಲೆ ತಿಳಿಸಿರುವಂತೆ ಕೇಂದ್ರದನಾಯಕರು ಕೆಂಗಲ್ಲರಿಗೆ ದುಂಬಾಲು ಬಿದ್ದದ್ದು ಮತ್ತೊಂದು ಕಾರಣವಾಯಿತು.

ಏಕೀಕರಣಕ್ಕಾಗಿ ತ್ರಿಕರಣ ಶುದ್ಧರಾಗಿ ಕೆಂಗಲ್ಲರು ಬಾಂಬೆ ಕರ್ನಾಟಕ ಭಾಗದಲ್ಲಿ ಸುತ್ತಾಡಿ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ರಾಜ್ಯದ ಮುಖ್ಯಮಂತ್ರಿಗಳೇ ಏಕೀಕರಣದ ಬಗ್ಗೆ ಆಸಕ್ತಿಯನ್ನು ಹೊಂದಿ ಕನ್ನಡಿಗರನ್ನು ಒಂದು ಮಾಡುತ್ತಿರುವುದನ್ನು ಕಂಡ ಚಳವಳಿಗಾರರು ಕನ್ನಡಿಗರು ಆನಂದ ಪರವಶರಾದರು. ಸಾಹಿತಿಗಳಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳು, ಶ್ರೀ ಕೊ. ಚನ್ನಬಸಪ್ಪ, ಅ.ನ.ಕೃ, ಶ್ರೀ ಕುವೆಂಪು ಇವರೇ ಮುಂತಾದವರು ಕೆಂಗಲ್ಲರ ಬೆನ್ನಿಗೆ ನಿಂತು ಪ್ರೋತ್ಸಾಹಿಸುತ್ತಿದ್ದರು. ಹುರಿದುಂಬಿಸುತ್ತಿದ್ದರು ಕೆಂಗಲ್ಲರಿಗೆ ಆನೆ ಬಲ

ಬಂದಂತಾಯ್ತು. ಏಕೀಕರಣ ಕಷ್ಟವಾಗಲಾರದೆಂಬ ತೀರ್ಮಾನಕ್ಕೆ ಬಂದರು. ತುಂಬು ಉತ್ಸಾಹದಿಂದಲೆ ನಾಡಿನ ತುಂಬೆಲ್ಲ ಲಘು ಬಗೆಯಿಂದ ಓಡಾಡಿದರು. ಬಳ್ಳಾರಿ ವಿಲೀನ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿ ಸಭೆಯ ಒಪ್ಪಿಗೆಯನ್ನು ಏಕೀಕರಣಕ್ಕೆ ಆದ್ಯ ಪ್ರಾಮುಖ್ಯತೆಯನ್ನು ನೀಡುತ್ತೇನೆ ಎಂದು ಭರವಸೆ ನೀಡಿದರು.

ಏಕೀಕರಣಕ್ಕೆ ವಿರೋಧ ಕೆಂಗಲ್ಲರಿಗೆ ಧಿಕ್ಕಾರ

ತಾನೊಂದು ಬಗೆದರೆ ದೈವವೊಂದು ಬಗೆಯಿತು ಎನ್ನುವಂತೆ ಕೆಂಗಲ್ಲರು ಏಕೀಕರಣಕ್ಕಾಗಿ ಅಹರ್ನಿಷಿ ದುಡಿದರೆ ಹಳೇ ಮೈಸೂರು ಭಾಗದ ಜನರು, ರಾಜಕಾರಣಿಗಳು ಏಕೀಕರಣಕ್ಕೆ ವಿರುದ್ಧವಾಗಿ ಕೆಲಸಮಾಡತೊಡಗಿದರು. ಇದಕ್ಕೆ ಕಾರಣವೇನೆಂದರೆ ಹಳೇಮೈಸೂರು ಪ್ರಾಂತ್ಯವು ಮೈಸೂರು ಒಡೆಯರ ಹಾಗೂ ಹೈದಾರಲಿ, ಟಿಪ್ಪು ಸುಲ್ತಾನರಿಂದಾಗಿ ಸಮೃದ್ಧವಾಗಿತ್ತು. ಸರ್.ಎಂ.ವಿ.ಯವರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರಿಂದಾಗಿ ಕನ್ನಂಬಾಡಿ ಕಟ್ಟೆ ಕಟ್ಟಲಾಗಿ ಮತ್ತಷ್ಟು ಸಮೃದ್ಧವಾಗಿತ್ತು. ಏಕೀಕರಣವಾದರೆ ಅಭಿವೃದ್ಧಿ ಹೊಂದಿದ ಪ್ರದೇಶದ ಹಣ, ಐಶ್ವರ್ಯವನ್ನು ಹಿಂದುಳಿದ ಉತ್ತರ ಕರ್ನಾಟಕ ಭಾಗಕ್ಕೆ ಬಳಸುತ್ತಾರೆ ಖಜಾನೆಯನ್ನು ಬರಿದು ಮಾಡುತ್ತಾರೆ ಎಂಬುದು. ಇದರಿಂದಾಗಿ ಮೈಸೂರು ಪ್ರಾಂತ್ಯವು ತನ್ನ ಪ್ರತಿಷ್ಠೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಅಲ್ಲದೆ ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರು ಅಧಿಕ ಸಂಖ್ಯೆಯಲ್ಲಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯಿತರು ತುಂಬಿದ್ದು ಮುಂದೆ ಅವರ ಪ್ರಾಬಲ್ಯ ಜಾಸ್ತಿಯಾಗುತ್ತದೆ ಎಂಬ ಜಾತಿ ಲೆಕ್ಕಾಚಾರ ಮತ್ತೊಂದು ಕಡೆ. ಹೀಗೆ ಮೈಸೂರು ಪ್ರಾಂತ್ಯದ ನಾಯಕರು ಯೋಚಿಸಿದರು. ಏಕೀಕರಣ ಮಾಡಕೂಡದೆಂದು ಕೆಂಗಲ್ಲರ ಮೇಲೆ ಒತ್ತಾಯ ಹೇರತೊಡಗಿದರು

ಮೈಸೂರು, ಮಂಡ್ಯ ಭಾಗದಲ್ಲಿ ಸಭೆ, ಸಮಾರಂಭಗಳು, ಮುಷ್ಕರ ಹರತಾಳಗಳು ದಿನ ನಿತ್ಯ ನಡೆಯತೊಡಗಿದವು. ವಿರೋಧಿ ಬಣದಲ್ಲಿ ಕೆ.ವಿ. ಶಂಕರಗೌಡ, ಹೆಚ್.ಕೆ. ವೀರಣ್ಣಗೌಡ, ಸಾಹುಕಾರ್ ಚನ್ನಯ್ಯ, ಹುಚ್ಚಮಾಸ್ತಿಗೌಡ, ನಾಗಯ್ಯರೆಡ್ಡಿ, ತಿಟ್ಟಮಾರನಹಳ್ಳಿ ವಿ. ವೆಂಕಟಪ್ಪ, ಹಾಸನದ ಲಕ್ಕಪ್ಪಗೌಡ, ಮಂಡ್ಯದ ಪಿ.ಎನ್. ಜವರಪ್ಪಗೌಡ, ಡಿ. ದೇವರಾಜಅರಸ್ ಇವರೇ ಮುಂತಾದವರು. ಏಕೀಕರಣವನ್ನು ಕಟುವಾಗಿ ಟೀಕಿಸತೊಡಗಿದರು ಶತ್ರುವಿನ ಮಿತ್ರ ಶತ್ರು ಎಂಬಂತೆ ತಮಗೆ ಇಷ್ಟವಿಲ್ಲದನ್ನು ಕೆಂಗಲ್ಲರು ಮಾಡುತ್ತಿದ್ದಾರೆ ಕೆಂಗಲ್ಲರನ್ನೆ ಅಧಿಕಾರದಿಂದ ಇಳಿಸಬೇಕೆಂದು ಹೇಳುವ ಮಟ್ಟಕ್ಕೆ ಹೋಯಿತು. ಕೆಂಗಲ್ಲರು ಶಾಸನಸಭೆಯ

ಬೆಂಬಲವನ್ನು ಪಡೆದಿದ್ದರೂ ಪಕ್ಷದ ಬೆಂಬಲವನ್ನು ಪಡೆದಿದ್ದರೂ ಕಾಂಗ್ರೆಸ್ ಪಕ್ಷದಲ್ಲೇ ಇದ್ದ ಅತಿರಥ ಮಹಾರಥರು ಏಕೀಕರಣವನ್ನು ಖಂಡಿಸತೊಡಗಿದರು. ವಿರೋದಿಗಳು ಮೇಲುಗೈಸಾಧಿಸಿದರು. ಯಾವ ಮಟ್ಟಕ್ಕೆ ಹೊಯಿತೆಂದರೆ ಶಾಸನ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ತಂದು ಕೆಂಗಲ್ಲರನ್ನು ಅಧಿಕಾರದಿಂದ ಇಳಿಸಬೇಕೆಂಬ ಮಟ್ಟಕ್ಕೆ ಹೋಯಿತು. ಕೆಂಗಲ್ಲರೇನು ದಡ್ಡರಲ್ಲ ವಿರೋದಿಗಳ ಬಲ ಹೆಚ್ಚಾಗುತ್ತಿದೆ. ಇದೇ ರೀತಿ ಏಕೀಕರಣದ ಪರ ನಿಂತರೆ ನಾಳೆ ಅಧಿಕಾರವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಕೆಂಗಲ್ಲರು ತಮ್ಮನ್ನು ಬೆಂಬಲಿಸುತ್ತಿದ್ದ ಶಾಸಕರು, ಸಾಹಿತಿಗಳು, ಸಮಾಜದ ಬುದ್ಧಿಜೀವಿಗಳು, ಮೇಧಾವಿಗಳು, ಚಳವಳಿಗಾರರ ಬೆಂಬಲದಿಂದ ಏಕೀಕರಣ ಮಾಡಲು ಅರ್ಹನಿಷಿ ದುಡಿದರು. ಈಗಾಗಲೆ ತಿಳಿಸಿರುವಂತೆ 1953 ಡಿಸಂಬರ್ 23ರಂದು ಕೇಂದ್ರ ಸರ್ಕಾರವು ಫಜಲ್ ಅಲಿ ನೇತೃತ್ವದ ರಾಜ್ಯ ಪುನರ್ವಿಂಗಡಣ ಆಯೋಗವು ಕರ್ನಾಟಕದ ಏಕೀಕರಣವನ್ನು ಬೆಂಬಲಿಸಿತು. ಕಾಸರಗೊಡನ್ನು ದಕ್ಷಿಣ ಕನ್ನಡದಿಂದ ಬೇರ್ಪಡಿಸಿ ಕೇರಳಕ್ಕೆ ನೀಡಿತು. ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ತಾಲೋಕುಗಳು ಹಾಗೂ ತುಂಗಭದ್ರ ಅಣೆಕಟ್ಟು ಪ್ರದೇಶವನ್ನು ಆಂಧ್ರಕ್ಕೆ ಕೊಡಬೇಕೆಂದು ತಪ್ಪು ತೀರ್ಮಾನವನ್ನು ಕೈಗೊಂಡಿತ್ತು ಆಂದ್ರದ ಗಡಿ ಭಾಗವಾದ ಕೋಲಾರ ಕರ್ನಾಟಕದಲ್ಲೇ ಉಳಿಯಲಿ ಎಂದು ಆಯೋಗವು ತೀರ್ಮಾನಿಸಿತು ಈ ವಿಷಯ ತಿಳಿಯುತ್ತಲೆ ಬಳ್ಳಾರಿಯ ಜನ ತಿರುಗಿ ಬಿದ್ದರು ಈಗಾಗಲೆ ಕೆಂಗಲ್ ಹನುಮಂತಯ್ಯನವರು ಸರ್.ಶೇಷಾದ್ರಿ ಅಯ್ಯರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು ಫಜಲ್ ಅಲಿ ಸಮಿತಿಗೆ ಇದು ನೆರವಾಯಿತು ಎಂದರೆ ತಪ್ಪಾಗಲಾರದು.

ಏಕೀಕರಣಕ್ಕಾಗಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ಕೆಂಗಲ್

ಏಕೀಕರಣಗೊಳ್ಳುವ ಮೊದಲು ಕರ್ನಾಟಕವು ಹಲವು ಸ್ವಾತಂತ್ರ ಸಂಸ್ಥಾನಗಳಾಗಿದ್ದವು. ಉದಾಹರಣೆಗೆ ಬಾಂಬೆ ಕರ್ನಾಟಕದಲ್ಲಿ, ಶ್ರೀ ಮೇಲ್ಕೊಟೆಯವರು ಮದ್ರಾಸ್ ಕರ್ನಾಟಕದಲ್ಲಿ ಶ್ರೀ ಎ.ಬಿ. ಶೆಟ್ಟಿಯವರು, ಕೊಡಗಿನಲ್ಲಿ ಶ್ರೀ ಪುಣಚ್ಚರವರು ಮುಖ್ಯಮಂತ್ರಿಗಳಾಗಿದ್ದರು. ಕರ್ನಾಟಕವು ಹರಿದು ಹಂಚಿ ಹೋಗಿದ್ದಿತು ಇದನ್ನು ತೆಗೆದುಹಾಕಿ ಏಕೀಕೃತ ರಾಜ್ಯವನ್ನಾಗಿ ಮಾಡಬೇಕೆಂದು ಸಾಹಿತಿಗಳು, ಬುದ್ಧಿಜೀವಿಗಳು ಕೆಂಗಲ್ಲರನ್ನು ಬೆಂಬಲಿಸಿದರೆ. ಅದೇ ಆಡಳಿತರೂಢ ಕಾಂಗ್ರೆಸ್ ಪಕ್ಷದ ಅದರಲ್ಲೂ ಒಕ್ಕಲಿಗ ಸಮುದಾಯದ ನಾಯಕರುಗಳಾದ ಸಾಹುಕಾರ್ ಚನ್ನಯ್ಯ, ತಿಟ್ಟಮಾರನಹಳ್ಳಿ ವಿ. ವೆಂಕಟಪ್ಪ,


ಕಡಿದಾಳ್ ಮಂಜಪ್ಪ ಮೈಸೂರು ಪ್ರದೇಶ ಕಾಂಗ್ರೆಸ್‌ನ ಅಂದಿನ ಅಧ್ಯಕ್ಷರಾಗಿದ್ದ ಎಚ್.ಕೆ. ವೀರಣ್ಣಗೌಡ ಮಂಡ್ಯದ ಕೆ.ವಿ. ಶಂಕರಗೌಡ ಇವರೇ ಮುಂತಾದವರು ಕೆಂಗಲ್ಲರನ್ನು ವಿರೋದಿಸತೊಡಗಿದರು ಅವಿಶ್ವಾಸ ನಿರ್ಣಯ ತಂದರು. ಕೆಂಗಲ್ಲರ ಮಂತ್ರಿಮಂಡಲದಲ್ಲಿ ಸಚೀವರಾಗಿದ್ದ ಕಡಿದಾಳ್ ಮಂಜಪ್ಪ, ಎ.ಜಿ. ರಾಮಚಂದ್ರರಾವ್, ಟಿ. ಚನ್ನಯ್ಯನವರು ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದರು. ವಿರೋಧಿಗಳು ಕೆಂಗಲ್ಲರ ವಿರುದ್ದ ಇಲ್ಲ ಸಲ್ಲದ ಆಪಾದನೆ ಮಾಡತೊಡಗಿದರು. ವಿರೋದಿಗಳ ಕೈ ದಿನೇದಿನೆ ಮೇಲಾಗತೊಡಗಿತು. ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಜವಹರ್‌ಲಾಲ್ ನೆಹರೂರವರಿಗೆ ಕೆಂಗಲ್ಲರ ವಿರುದ್ದ ಕ್ರಮ ಕೈಗೊಳ್ಳುವಂತೆ ಉದ್ದುದ ಪತ್ರಗಳನ್ನು ಬರೆಯತೊಡಗಿದರು. ಕೆಂಗಲ್ಲರನ್ನು ಅಧಿಕಾರದಿಂದ ಕೆಳಗಿಳಿಸಲು ನೆಹರುರವರಿಗೆ ಇಷ್ಟು ಸಾಕಾಗಿತ್ತು. ನೆಹರೂರವರು ವಿರೊಧಿಗಳನ್ನು ಬಗ್ಗುಬಡಿದು ಕೆಂಗಲ್ಲರು ಅಧಿಕಾರದಲ್ಲಿ ಮುಂದುವರಿಯಲು ಸಹಾಯ ಮಾಡಬಹುದಿತ್ತು ಆದರೆ ಅದು ಹಾಗೆ ಆಗಲಿಲ್ಲ. ವಿರೋಧಿಗಳು ದಿನೇದಿನೇ ಪ್ರಬಲರಾಗಿ ಕೆಂಗಲ್ಲರನ್ನು ಅಧಿಕಾರದಿಂದ ಇಳಿಸಲು ಷಡ್ಯಂತ್ರ ರೂಪಿಸಿದರು. ಏಕೀಕರಣ ಮಾಡುವುದಾದರೆ ಅಧಿಕಾರದಿಂದ ಇಳಿದು ಚುನಾವಣೆಗೆ ನಿಂತು ಗೆದ್ದು ಬಂದು ಬೇಕಾದರೆ ಏಕೀಕರಣ ಮಾಡಲಿ ನಮ್ಮದೇನು ಅಭ್ಯಂತರವಿಲ್ಲ ಎಂದು ಹೇಳುತ್ತಿದ್ದರು. ಕಡೆಗೆ ಸದನದಲ್ಲಿ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ತಂದರು. ಅವಿಶ್ವಾಸ ನಿರ್ಣಯ ಗೆದ್ದಿತು. 18 ಆಗಸ್ಟ್ 1956ರಂದು ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ನೀಡಿದರು ಕರ್ನಾಟಕವನ್ನು ಏಕೀಕರಣ ಮಾಡಹೊರಟ ಕೆಂಗಲ್ ತಮ್ಮ ಅಧಿಕಾರವನ್ನು ಕಳೆದುಕೊಳ್ಳ ಬೇಕಾಯಿತು. ಇದು ಕೆಂಗಲ್ಲರಿಗೆ ಗೊತ್ತಿರಲಿಲ್ಲವೆಂದಲ್ಲ ಅಧಿಕಾರ ಹೋದರೂ ಚಿಂತೆಯಿಲ್ಲ ಏಕೀಕರಣ ಮಾಡೇ ತೀರುತ್ತೇನೆ ಎಂದು ತೀರ್ಮಾನಿಸಿದ್ದರು.

ಸಾಹಿತಿಗಳಿಗೆ, ಬುದ್ದಿಜೀವಿಗಳಿಗೆ, ಏಕೀಕರಣ ಹೋರಾಟಗಾರರಿಗೆ ಇದು ಸರಿಕಾಣಲಿಲ್ಲ ಕೆಂಗಲರ ಪರಿಸ್ಥಿತಿಯನ್ನು ಕಂಡು ಮಮ್ಮಲ ಮರುಗಿದರು. ಅಂತಹವರಲ್ಲಿ ಕೆಲವರ ಪ್ರತಿಕ್ರಿಯೆ ಈ ಕೆಳಕಂಡಂತಿದೆ. ಕರ್ನಾಟಕದ ಇತಿಹಾಸದ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ ಡಾ.ಸುರ್ಯನಾಥ್. ಯು.ಕಾಮತ್‌ರವರು "ಏಕೀಕರಣದ ಅಮೃತ ಬರುವ ಮೊದಲೇ ವಿರೋಧದ ವಿಷ ಬಂತು. ಅದನ್ನು ಕೆಂಗಲ್ಲರೇ ಕುಡಿದರು ಸಮುದ್ರ ಮಥನದ ಕಾಲಕ್ಕೆ ಶಿವ ವಿಷ ಉಂಡು ನೀಲಕಂಠನಾದಂತೆ ಹನುಮಂತಯ್ಯ ಅವರು ವಿರೋಧದ ವಿಷವುಂಡು ಮುಖ್ಯಮಂತ್ರಿ ಪದವಿ ಕಳೆದುಕೊಂಡರು ಎಂದು ಹೇಳಿರುವ ಮಾತು ನಿತ್ಯ ಸತ್ಯ.

ಮೈಸೂರು ರಾಜ್ಯವೆಂದು ಘೋಷಣೆ

ಭಾಷಾವಾರು ಪ್ರಾಂತ್ಯವಾಗಿ ವಿಂಗಡಣೆ ಮಾಡಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ದಿಗೆ ಒತ್ತುಕೊಡಬೇಕೆಂಬ ಕನ್ನಡಿಗರ ಆಸೆ ನೆರವೇರುತ್ತ ಬಂತು 10-06-1956ರಲ್ಲಿ ಲೋಕಸಭೆಯಲ್ಲೂ 25-8-1956ರಲ್ಲಿ ರಾಜ್ಯಸಭೆಯಲ್ಲೂ ಈ ಮಸೂದೆಯು ಮಂಡನೆಯಾಯಿತು. 31-8-1956ರಲ್ಲಿ ರಾಷ್ಟ್ರಪತಿಗಳ ಅಂಕಿತದೊರೆಯಿತು (ಡಾ. ರಾಜೇಂದ್ರ ಪ್ರಸಾದ್) ನವಂಬರ್ 01 1956ರಂದು ಬೆಂಗಳೂರಿನಲ್ಲಿ ಅದ್ದೂರಿ ಸಮಾರಂಭ ಏರ್ಪಾಡಾಯಿತು. ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ.ರಾಜೇಂದ್ರ ಪ್ರಸಾದ್‌ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರೆ. ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಮುಖ್ಯ ಅತಿಥಿಗಳಾಗಿಯು ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ನಾಡಿನ ದೊಡ್ಡದುರಂತವೆಂದರೆ ಏಕೀಕರಣಕ್ಕಾಗಿ ದುಡಿದ ಕೆಂಗಲ್ಲರನ್ನು ಹೊರಗಿಟ್ಟು ನಿಜಲಿಂಗಪ್ಪನವರ ಕಾಲದಲ್ಲಿ ಏಕೀಕರಣಗೊಂಡಿದ್ದು. ಯಾರೋ ನೆಟ್ಟ ಗಿಡದ ಫಲವನ್ನು ಯಾರೋ ಅನುಭವಿಸುವುದು ಪ್ರಕೃತಿ ಸಹಜ ನಿಯಮ ಎನ್ನುವಂತ್ತಿತ್ತು. ಹೊಸರಾಜ್ಯಕ್ಕೆ 'ಮೈಸೂರು ರಾಜ್ಯ'ವೆಂದು ನಾಮಕರಣ ಮಾಡಲಾಯ್ತು. ಶ್ರೀ ನಿಜಲಿಂಗಪ್ಪನವರೇ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ. ಏಕೀಕೃತ ರಾಜ್ಯಕ್ಕೆ 'ಮೈಸೂರು ರಾಜ್ಯ'ವೆಂದು ನಾಮಕರಣ ಮಾಡಲಾಗಿ ಮೈಸೂರಿಗರು ಸಂತೋಷಗೊಂಡರು. ಆದರೆ ಉತ್ತರ ಕರ್ನಾಟಕದ ಜನ ಇದರಿಂದ ಸಂತೃಪ್ತರಾಗಲಿಲ್ಲ ಅತೃಪ್ತರಾದರು. ಹೊಸರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಬೇಕಿತ್ತು ಎಂದು ತಮ್ಮ ಅಸಮದಾನ ವ್ಯಕ್ತಪಡಿಸಿದರು.

* * * * *



ಹೆಚ್.ಕೆ. ವೀರಣ್ಣಗೌಡ

– ಡಾ. ಪದ್ಮ

ಹೆಚ್.ಕೆ. ವೀರಣ್ಣಗೌಡರು ಒಕ್ಕಲಿಗ ಕುಟುಂಬದ ಪಟೇಲ್ ಕೆಂಚೇಗೌಡ ಮತ್ತು ಕೆಂಪಮ್ಮ ಎಂಬ ದಂಪತಿಗಳ ಹಿರಿಯ ಪುತ್ರನಾಗಿ 1899ರ ಮೇ 1ರಂದು ಚನ್ನಪಟ್ಟಣದ ಸಾದಹಳ್ಳಿಯಲ್ಲಿ ಜನಿಸಿದರು. ಚೊಚ್ಚಲ ಮಗುವಾಗಿದ್ದ ವೀರಣ್ಣಗೌಡರನ್ನು ಅಪಾರ ಪ್ರೀತಿವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರು. ಬೇಸಿಗೆ ಕಾಲದಲ್ಲಿ ನಿಂಬೆಹುಳಿ ಪಾನಕಕ್ಕೆ ಬೆಲ್ಲ ಹಾಕಿದರೆ ಉಷ್ಣವಾಗಬಹುದೆಂದು ಬತಾಸ್‌ಗಳನ್ನು ಪುಡಿ ಮಾಡಿ ಹಾಕಿಕೊಡುತ್ತಿದ್ದರಂತೆ. ಮಗುವಿಗೆ ಶಿಸ್ತು, ಸಂಯಮ, ಸಂಸ್ಕಾರವನ್ನು ಕಲಿಸುವಲ್ಲಿ ತಂದೆ ತಾಯಿಗಳಿಗೆ ತಮ್ಮ ಪ್ರೀತಿ ಅಡ್ಡಬರಲಿಲ್ಲ. ವೀರಣ್ಣಗೌಡರ ಬಾಲ್ಯ ಹೆಚ್ಚಾಗಿ ಅವ್ವೇರಹಳ್ಳಿ ಮತ್ತು ಹೊಸಹಳ್ಳಿಯಲ್ಲಿ ಕಳೆಯಿತು. ಬಾಲ್ಯದಲ್ಲಿ ವೀರಣ್ಣಗೌಡರು ಮಾಡುತ್ತಿದ್ದ ತಪ್ಪುಗಳನ್ನು ತಿದ್ದುವಲ್ಲಿ ತಂದೆ ತಾಯಿ, ಗುರು ಹಿರಿಯರು ವಹಿಸಿದ ಪಾತ್ರ ಬಹಳ ಮುಖ್ಯವಾದುದು. ಎಳೆವಯಸ್ಸಿನಲ್ಲಿ ರೂಢಿಸಿಕೊಂಡ ಅಭ್ಯಾಸಗಳೇ ದೊಡ್ಡವರಾದ ಮೇಲೆ ಹೆಮ್ಮರವಾಗಿ ಬೆಳೆಯುತ್ತವೆ ಎಂಬುದಕ್ಕೆ ಮಹಾತ್ಮಗಾಂಧಿ, ಅಂಬೇಡ್ಕರರು ತಮ್ಮ ಚಿಕ್ಕಂದಿನಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವ ಮೂಲಕ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಂಡ ಫಲವಾಗಿ ಮುಂದೆ ದೇಶವೇ ಹೆಮ್ಮೆ ಪಡುವಂತಹ ಬದುಕು ಸಾಗಿಸಿದರು. ಅದರಂತೆ ಹೆಚ್.ಕೆ.ವೀರಣ್ಣಗೌಡರು ಸಹ ತಮ್ಮ ಜೀವನವನ್ನು ರೂಪಿಸಿಕೊಂಡರು.

'ತಾಯಿ ಮಾಡಿದ ಹೊಟ್ಟೆ ಊರು ಮಾಡಿದ ಕೊಳಗ' ಎಂಬ ಗಾದೆಯಂತೆ ಗೌಡರ ತಾಯಿ ದೈವಭಕ್ತೆಯಾಗಿದ್ದುದರ ಜೊತೆಗೆ ಸಾಧ್ವಿಯಾಗಿದ್ದರು. ಹೀಗಾಗಿ ಊಟದ ವಿಚಾರದಲ್ಲಿ ಮಿತಹಾರಿಯಾಗಿದ್ದು, ವಾರಕ್ಕೆ ಒಂದು ದಿನ ಉಪವಾಸ

ಮಾಡುತ್ತಿದ್ದರು. ತಮ್ಮಂತೆ ತಮ್ಮ ಮಕ್ಕಳಿಗೂ ಊಟೋಪಚಾರದ ವಿಷಯದಲ್ಲಿ ಉತ್ತಮ ಸಂಸ್ಕಾರವನ್ನು ಕಲಿಸಿದ್ದರು. ಪರಿಣಾಮವಾಗಿ ವೀರಣ್ಣಗೌಡರು ಮಿತಾಹಾರಿ ಹಾಗು ಸಸ್ಯಹಾರಿಯಾಗಲು ಸಹಾಯಕವಾಯಿತು ಎನ್ನಬಹುದು. ಒಮ್ಮೆ ಬಾಲಕ ವೀರಣ್ಣಗೌಡ ತಮ್ಮ ಹೊಲದಲ್ಲಿ ಹುಲ್ಲು ಕೊಯ್ದು ಬಡ ಹೆಂಗಸಿನ ಕುಡುಗೋಲನ್ನು ಕಿತ್ತುಕೊಂಡು ನಾಲ್ಕಾಣೆ ದಂಡ ನೀಡುವಂತೆ ಒತ್ತಾಯಿಸಿದ್ದನ್ನು ಕಂಡು ಸಂಕಟ ಪಟ್ಟುಕೊಂಡ ಗೌಡರ ತಾಯಿ 'ನೀನು ದೊಡ್ಡವನಾದ ಮೇಲೆ ಬಡಬಗ್ಗರನ್ನು ಹುರಿದು ಮುಕ್ಕಿಬಿಡುತ್ತಿಯೇ' ಬಡವನಾದವನು ತನ್ನಲ್ಲಿಲ್ಲದ ವಸ್ತುವಿಗೆ ಇರುವೆಡೆಗೆ ಕೈ ಚಾಚುತ್ತಾನೆ. ಹೀಗಾಗಿ ಉಳ್ಳವರು ಇಲ್ಲದವರ ಬಗ್ಗೆ ಉಪಕಾರ ಮನೋಭಾವವನ್ನು ಹೊಂದಿರಬೇಕು ಎಂಬರ್ಥದಲ್ಲಿ ಹೇಳಿದ ಮಾತು ಗೌಡರಿಗೆ ಬಡಬಗ್ಗರ ಬಗ್ಗೆ ಅನುಕಂಪ, ಪರೋಪಕಾರದ ಮನೋಭಾವನೆಯನ್ನು ಮೂಡಿಸಿತು. ವೀರಣ್ಣಗೌಡರ ತಪ್ಪುಗಳನ್ನು ತಿದ್ದುವಲ್ಲಿ ತಾಯಿಯ ಬುದ್ಧಿವಾದ ಗೌಡರ ಸ್ವಭಾವದ ದಿಕ್ಕನ್ನೇ ಬದಲಿಸಿತು.

ಒಮ್ಮೆ ಹೆಚ್.ಕೆ.ವೀರಣ್ಣಗೌಡರ ತಂದೆಯವರು ಹಬ್ಬಕ್ಕಾಗಿ ಮಗನನ್ನು ಕರೆದುಕೊಂಡು ಸಂತೆಯಲ್ಲಿ ದಿನಸಿಯನ್ನು ಕೊಂಡು ತರುವಾಗ ಅವರ ಸ್ನೇಹಿತರೊಬ್ಬರು ಮೂಟೆಗಟ್ಟಲೆ ದಿನಸಿಯನ್ನು ಕೊಂಡು ಹೋಗುತ್ತಿದ್ದರು. ಅದನ್ನು ಕಂಡು ವೀರಣ್ಣಗೌಡರಿಗೆ ಅವರ ತಂದೆ ನಮ್ಮಷ್ಟೆ ಆಸ್ತಿ ಇದ್ದರೂ ಇಷ್ಟೊಂದು ದಿನಸಿಯನ್ನು ಕೊಂಡುಕೊಳ್ಳಲು ಅವರು ತೆಗೆದುಕೊಳ್ಳುವ ಲಂಚದ ಹಣವೇ ಕಾರಣ. ಯಾವತ್ತಿದ್ದರೂ ಲಂಚ ತಿಂದವನ ಮನೆ ಹಾಳು. ಆದ್ದರಿಂದ ಅಂತಹ ಕೆಲಸವನ್ನು ಎಂದಿಗೂ ಮಾಡಬಾರದು ಎಂಬರ್ಥದಲ್ಲಿ ಮಗನಿಗೆ ತಿಳಿಹೇಳಿದರು. ತಂದೆತಾಯಿಯರ ಈ ಮಾತುಗಳು ವೀರಣ್ಣಗೌಡರ ಜೀವನದಲ್ಲಿ ಎಚ್ಚರಿಕೆಯ ಗಂಟೆಗಳಾಗಿ ಸನ್ಮಾರ್ಗದಲ್ಲಿ ನಡೆಯಲು ಸಹಕಾರಿಯಾಯಿತು.

ವೀರಣ್ಣಗೌಡರ ತಂದೆ ಕೆಂಚೇಗೌಡರು ಸುತ್ತಮುತ್ತಲಿನ ನಾಲ್ಕಾರು ಹಳ್ಳಿಗಳಿಗೆ ಪಟೇಲರಾಗಿದ್ದರಿಂದ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದರು. ಹೀಗಾಗಿ ಒಮ್ಮೆ ಊರಿನವರಿಗೆ ಮಾಡಿದ ಉಪಕಾರಕ್ಕಾಗಿ ಜನರು ನೀಡಿದ ಕಾಣಿಕೆಯನ್ನು ಲಂಚವೆಂದು ಭಾವಿಸಿ, ಸ್ವೀಕರಿಸದೆ ಅದನ್ನು ಊರಿನ ದೇವಾಲಯ ದುರಸ್ಥಿಗಾಗಿ ಉಪಯೋಗಿಸಿದರು. ಇದು ಅವರ ಪ್ರಾಮಾಣಿಕತೆ ಮತ್ತು ಜನಪರಕಾಳಜಿಗೆ ಒಂದು ಸಾಕ್ಷಿಯಾಗಿತ್ತು. ಹೀಗೆಯೇ ವೀರಣ್ಣಗೌಡರ ವಂಶಸ್ಥರುಗಳಲ್ಲಿ ಒಬ್ಬರು ಶೇಕದಾರಿಕೆ ನಡೆಸಿ ಜನಸೇವೆ ಮಾಡಿದ್ದು, ಮತ್ತೊಬ್ಬರು ತಮ್ಮ ಆತ್ಮ ಸ್ವಾಭಿಮಾನಕ್ಕೆ ಧಕ್ಕೆ ತಂದ ತೋಟವನ್ನೇ ಬೆಂಕಿಗೆ ಆಹುತಿ ಕೊಟ್ಟ ಪ್ರಕರಣಗಳಿಂದ ಅವರುಗಳ ಹಿರಿಮೆ ಗರಿಮೆಗಳ ಬಗ್ಗೆ ಅರಿವಿದ್ದ ಬಾಲಕ ವೀರಣ್ಣಗೌಡರಿಗೆ ಕಣ್ಣೆದುರಿನ

ತಂದೆಯ ಕೋಪ, ಗತ್ತು, ಗಾಂಭೀರ್ಯ, ಉದಾರಗುಣ, ಪ್ರಾಮಾಣಿಕತೆ, ಹೆಚ್ಚಿನ ಪ್ರಭಾವ ಬೀರಿದ್ದವು. ಹಾಗಾಗಿಯೇ ವೀರಣ್ಣಗೌಡರ ಪ್ರತಿಯೊಂದು ಕಾರ್ಯದಲ್ಲೂ ಗತ್ತು, ಗಾಂಭೀರ್ಯ, ಯಜಮಾನಿಕೆ ಎದ್ದು ಕಾಣುತ್ತಿದ್ದವು.

ವ್ಯಕ್ತಿಯ ಅಂತರಂಗದ ವಿಕಾಸಕ್ಕೆ ಸಂಸ್ಕಾರ, ಸಹವಾಸ, ಪರಿಸರ ಹಾಗೂ ಗುರುಗಳ ಮಾರ್ಗದರ್ಶನ ಅವಶ್ಯಕ. ಕೂಲಿ ಮಠದಲ್ಲಿ ತಮ್ಮ ವಿದ್ಯಾಭ್ಯಾಸ ಪ್ರಾರಂಭಿಸಿದ ವೀರಣ್ಣಗೌಡರು ತಮ್ಮ ಚುರುಕುತನದಿಂದ ಮತ್ತು ತಂದೆಯ ವಿದ್ಯಾಸಕ್ತಿಯಿಂದ ಲೋಕಜ್ಞಾನ ವೃದ್ಧಿಸಿಕೊಂಡರು. ತಂದೆಯವರ ಸಂಗ್ರಹಣೆಯಲ್ಲಿದ್ದ ಹಲವಾರು ಪುಸ್ತಕಗಳು, ದೈನಿಕ, ಮಾಸಿಕ ಪತ್ರಿಕೆಗಳು ವೀರಣ್ಣಗೌಡರ ಸಾಮಾನ್ಯಜ್ಞಾನ ಹೆಚ್ಚಲು ಕಾರಣವಾದವು. ಕೂಲಿಮಠದ ನಂತರ ಲೋಯರ್ ಸೆಕೆಂಡರಿ ಶಾಲೆಗೆ ಸೇರಿದ ಬಾಲಕ ವೀರಣ್ಣಗೌಡ ಗುರುಗಳ ಅಚ್ಚುಮೆಚ್ಚಿನ ಶಿಷ್ಯನಾದ. ಆದರೆ ಒಮ್ಮೆ ಶಾಲೆಯಲ್ಲಿ ಗುರುಗಳು ಪ್ರಶ್ನೆಯೊಂದಕ್ಕೆ ವೀರಣ್ಣಗೌಡ ನೀಡಿದ ಉತ್ತರವನ್ನು ಸರಿಯಾಗಿ ಅರ್ಥೈಸದೆ ವಿನಾಕಾರಣ ಏಟು ಕೊಟ್ಟರು. ಇದನ್ನು ಅನ್ಯಾಯವೆಂದು ಪ್ರತಿಭಟಿಸಿದ ವೀರಣ್ಣಗೌಡ ದಿಟ್ಟತನದಿಂದ ತಾನೇಸ್ವತಃ ಖಾಸಗಿಯಾಗಿ ಓದಿ ಪರೀಕ್ಷೆ ಕಟ್ಟುವುದಾಗಿ ಶಾಲೆ ಬಿಟ್ಟು ಬಂದ ಘಟನೆಯಿಂದ ಚಿಕ್ಕವಯಸ್ಸಿನಲ್ಲಿಯೇ ವೀರಣ್ಣಗೌಡರಲ್ಲಿ ಅನ್ಯಾಯವನ್ನು ಪ್ರತಿಭಟಿಸುವ ಗುಣವನ್ನು ಗುರುತಿಸಬಹುದು

1914ರ ಸಂದರ್ಭದಲ್ಲಿ ಮೈಸೂರಿಗೆ ಬ್ರಿಟಿಷ್ ವೈಸರಾಯ್ ಲಾರ್ಡ ಹರ್ಡಿಂಜರ್ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಯ ಉಪಾಧ್ಯಾಯರ ಅನುಮತಿ ಪಡೆಯದೆ ಗೌಡರು ಮೈಸೂರಿಗೆ ಭಾರತದ ಬ್ರಿಟಿಷ್ ಚಕ್ರವರ್ತಿಯನ್ನು ನೋಡಲು ಹೋಗಿದ್ದರು. ಇದರಿಂದ ವೀರಣ್ಣಗೌಡರಿಗೆ ರಾಜಪ್ರಭುತ್ವದ ಬಗ್ಗೆ ಗೌರವ ಮತ್ತು ಒಲವು ಇದ್ದಿರಬಹುದೆಂದು ಗಮನಿಸಬಹುದು. ಅನುಮತಿ ಪಡೆಯದೆ ಹೋಗಿದ್ದ ವೀರಣ್ಣಗೌಡರ ಹೆಸರನ್ನು ಮುಖ್ಯೋಪಾಧ್ಯಾಯರು ಶಾಲೆಯ ಪುಸ್ತಕದಿಂದ ತೆಗೆದಿದ್ದರು. ಇದರಿಂದ ಶಾಲೆಯ ಹೆಡ್‌ಮಾಸ್ಟರ್ ಆರ್.ವಿ.ಕೃಷ್ಣಸ್ವಾಮಿ ಅಯ್ಯರ್ (ಖ್ಯಾತರಾದ ಕಾದಂಬರಿಗಾರ ಆರ್.ಕೆ.ನಾರಾಯಣ್ ಮತ್ತು ಪ್ರಸಿದ್ಧ ಚಿತ್ರಗಾರ ಆರ್.ಕೆ.ಲಕ್ಷ್ಮಣ್ ಅವರ ತಂದೆ) ಇವರ ಬಳಿ ಹೆಚ್.ಕೆ.ವೀರಣ್ಣಗೌಡರು ತಪ್ಪಾಯಿತೆಂದು ಕ್ಷಮೆ ಕೇಳಿ ತರಗತಿಗೆ ಮರಳಿದರು. 1918ರಲ್ಲಿ ಇಂಗ್ಲೀಷ್ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತಾಗ ಹೆಚ್.ಕೆ.ವೀರಣ್ಣಗೌಡರ ಬಲಗಾಲಿನಲ್ಲಿ

ಕಲ್ಲೋತ್ತಾಗಿ ಬಹಳ ಸಂಕಟಪಟ್ಟರು. ಆ ಸಂದರ್ಭದಲ್ಲಿ ಕಠಿಣವಾಗಿ ಕಂಡರೂ ಮೃದು ಹೃದಯಿಯಾದ ಆರ್.ವಿ.ಕೃಷ್ಣಸ್ವಾಮಿಯವರು ವೀರಣ್ಣಗೌಡರನ್ನು ಬುದ್ದಿವಂತ ವಿದ್ಯಾರ್ಥಿಯೆಂದು ಗುರುತಿಸಿದ್ದರಿಂದ ಅವರಿಗೆ ಪರೀಕ್ಷೆ ಬರೆಯಲು

ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟರು. ಇದರಿಂದ ವೀರಣ್ಣಗೌಡರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೈಸೂರು ಸಂಸ್ಥಾನಕ್ಕೆ 8ನೇ ರ‍್ಯಾಂಕ್ ಗಳಿಸಿದರು. ಇದು ಇವರ ಪರಿಶ್ರಮಕ್ಕೆ ಸಂದ ಮನ್ನಣೆಯಾಗಿತ್ತು. ಚನ್ನಪಟ್ಟಣ ಹೈಸ್ಕೂಲಿಗೆ ಸೇರುವುದಕ್ಕೆ ಮೊದಲೇ ಅಂಚೆಯಲ್ಲಿ 'ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ' ಎಂಬ ಪುಸ್ತಕವನ್ನು ತರಿಸಿಕೊಂಡು ಇಂಗ್ಲಿಷ್ ಅಕ್ಷರಗಳನ್ನು ಬರೆಯುವುದನ್ನೂ ವೀರಣ್ಣಗೌಡರು ತಿಳಿದುಕೊಂಡಿದ್ದರು. ಹೀಗೆ ವಾರ್ಷಿಕ ಪರೀಕ್ಷೆಯಲ್ಲಿ ಇಂಗ್ಲಿಷ್ ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ನೂರಕ್ಕೆ ಎಪ್ಪತ್ತು-ಎಂಬತ್ತು ಅಂಕಗಳಿಸಿದ್ದರು. ಕಲಿಕೆಯುದ್ದಕ್ಕೂ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಿದ್ದ ವೀರಣ್ಣಗೌಡರ ವಿದ್ಯಾಭಿರುಚಿ ಆಸಕ್ತಿಯುತವಾಗಿತ್ತು. ಆದ್ದರಿಂದ ಬಾಲಕನ ಚುರುಕು ಬುದ್ದಿ ಕಂಡು ಅಧ್ಯಾಪಕರು ಡಬಲ್ ಪ್ರಮೋಷನ್ ಕೊಡುತ್ತೇವೆಂದರೂ ಒಪ್ಪದೆ ವೀರಣ್ಣಗೌಡರು ಹಂತ ಹಂತವಾಗಿ ಕಲಿಯಲು ಇಚ್ಛೆ ಪಟ್ಟರು.

ಡಾ.ಅಂಬೇಡ್ಕರರು ತಮ್ಮ ಶಾಲಾ ಜೀವನದಲ್ಲಿ ಅನುಭವಿಸಿದ ಅವಮಾನದ ರೀತಿಯಲ್ಲಿಯೇ ವೀರಣ್ಣಗೌಡರೂ ಸಹ ಚನ್ನಪಟ್ಟಣ ಹೈಸ್ಕೂಲಿನಲ್ಲಿದ್ದಾಗ ಹಿಂದುಳಿದ ವರ್ಗಕ್ಕೆ ಸೇರಿದವರೆಂಬ ಕಾರಣಕ್ಕಾಗಿ ಅವಮಾನವನ್ನು ಅನುಭವಿಸಬೇಕಾಗಿ ಬಂದಿತು. ಚನ್ನಪಟ್ಟಣ ಹೈಸ್ಕೂಲಿನ 3ನೇ ತರಗತಿಯಲ್ಲಿ ಕನ್ನಡ, ಉರ್ದು, ಸಂಸ್ಕೃತ ಭಾಷೆಗಳಲ್ಲಿ ಯಾವುದಾದರೂ ಒಂದು ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಹಾಗಾಗಿ ವೀರಣ್ಣಗೌಡರು ಸಂಸ್ಕೃತದ ತರಗತಿಗೆ ಹೋಗಿ ಕುಳಿತುಕೊಂಡಾಗ "ಏನಯ್ಯ ನೀನು ಸಂಸ್ಕೃತ ಕಲಿಯಬೇಕೆ? ಚೆನ್ನಾಗಿ ಕನ್ನಡ ಕಲಿತುಕೊಂಡರೆ ಸಾಲದೆ? ನಿನಗೇಕೆ ಸಂಸ್ಕೃತ?" ಎಂಬ ಸಂಸ್ಕೃತ ಪಂಡಿತರ ಹೀಯಾಳಿಕೆಯ ಮಾತು ವೀರಣ್ಣಗೌಡರ ಮನಸ್ಸನ್ನು ಹೆಚ್ಚು ಘಾಸಿಗೊಳಿಸಿತು. ನೊಂದ ಮನಸ್ಸಿನಿಂದ ಕನ್ನಡ ತರಗತಿಗೆ ಹೋಗಿ ಕುಳಿತರು. ಕನ್ನಡ ಪಂಡಿತರ ಮಾರ್ಗದರ್ಶನ ವೀರಣ್ಣಗೌಡರಿಗೆ ಬೆಂಗಳೂರು ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದವರು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿಕೊಡುವುದರ ಜೊತೆಗೆ ಕುವೆಂಪು ಅವರ ಗುರುಗಳಾದ ಟಿ.ಎಸ್.ವೆಂಕಣ್ಣಯ್ಯನವರ ಪ್ರಶಂಸೆಗೆ ಪಾತ್ರವಾಗುವಂತೆ ಮಾಡಿತ್ತು.

ಹೈಸ್ಕೂಲಿನಲ್ಲಿದ್ದಾಗ ವೀರಣ್ಣಗೌಡರು ತಮ್ಮ ಸ್ನೇಹಿತ ತಿಟ್ಟಮಾರನಹಳ್ಳಿ ವಿ.ವೆಂಕಟಪ್ಪನವರ ಸಹಕಾರದಿಂದ ಶೈಕ್ಷಣಿಕೇತರ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡರು. 1914ರಲ್ಲಿ ಒಕ್ಕಲಿಗರ ವಿದ್ಯಾರ್ಥಿಸಂಘವನ್ನು ಸ್ಥಾಪಿಸಿದರು. ಶಾಲೆಯಲ್ಲಿ ತಾವು ಸ್ಥಾಪಿಸಿದ್ದ ಒಕ್ಕಲಿಗರ ವಿದ್ಯಾರ್ಥಿ ಸಂಘದ ಆಡಿಯಲ್ಲಿಯೇ ವಿದ್ಯಾರ್ಥಿನಿಲಯವನ್ನು, ಒಕ್ಕಲಿಗರ ಪತ್ರಿಕೆಯನ್ನು ಪ್ರಾರಂಭಿಸಿದರು. ಒಕ್ಕಲಿಗರ

ಪತ್ರಿಕೆಯ ಮೊದಲ ಸಂಚಿಕೆಗೆ ಸಂದೇಶ ಕೇಳಲು ಕೆ.ಎಚ್.ರಾಮಯ್ಯನವರನ್ನು ಭೇಟಿ ಮಾಡಿದರು. ಉದಾತ್ತ, ಜನಪರ ಕಾಳಜಿಯುಳ್ಳ ನಾಯಕರಾಗಿದ್ದ ಕೆ.ಎಚ್.ರಾಮಯ್ಯನವರು ಒಕ್ಕಲಿಗರ ಪತ್ರಿಕೆ ಪ್ರಾರಂಭಿಸುವ ವಿಚಾರದಲ್ಲಿ 'ಉದಾರಭಾವನೆ ನಮ್ಮಲ್ಲಿ ಬೆಳೆಯಬೇಕಾದರೆ ಜಾತಿಮತ ಸ್ಥಳ ಭಾವನೆ ಹೋಗಬೇಕು' ಎಂದರು. ಒಕ್ಕಲಿಗ ವಿದ್ಯಾರ್ಥಿ ಸಂಘ, ಒಕ್ಕಲಿಗ ವಿದ್ಯಾರ್ಥಿನಿಲಯ, ಒಕ್ಕಲಿಗರ ಪತ್ರಿಕೆಯನ್ನು ಪ್ರಾರಂಭಿಸಿದ ವೀರಣ್ಣಗೌಡರಲ್ಲಿ ಜಾತೀಯತೆಯ ಭಾವನೆ ಇದ್ದಿರಬಹುದಾದರೂ ಕೆ.ಎಚ್.ರಾಮಯ್ಯನವರ ಈ ಮಾತುಗಳು ಅವರಲ್ಲಿ ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಿತು.

ಹಾಗಾಗಿ ಪತ್ರಿಕೆಯ ಹೆಸರನ್ನು ಬದಲಿಸಿ 'ಕರ್ನಾಟಕ ವಿದ್ಯಾರ್ಥಿ' ಎಂಬ ಹೆಸರಿನಲ್ಲಿ ಮುನ್ನಡೆಸಿದರು. ಈ ಪತ್ರಿಕೆ ಒಂದು ಕೈಬರಹದ ಪತ್ರಿಕೆಯಾಗಿ ವಿದ್ಯಾರ್ಥಿಗಳ ಅಭಿವ್ಯಕ್ತಿ ಮಾಧ್ಯಮವಾಗಿ ಹೊರಹೊಮ್ಮಿದ್ದಲ್ಲದೆ ಅವರ ಲೇಖನ ಕಲೆ ವೃದ್ಧಿಗೊಳ್ಳಲು ಸಹಕಾರಿಯಾಯಿತು.

ಒಮ್ಮೆ ವೀರಣ್ಣಗೌಡರು ಯಾವುದೋ ವಿಷಯಕ್ಕೆ ಕನ್ನಡ ಉಪಾಧ್ಯಾಯರೊಂದಿಗೆ ಗಟ್ಟಿಯಾಗಿ ವಾದಸಿದ್ದನ್ನು ಕೇಳಿಸಿಕೊಂಡ ವಿಜ್ಞಾನ ಉಪಾಧ್ಯಾಯರಾದ ಟಿ.ಕೃಷ್ಣಮೂರ್ತಿಯವರು ವೀರಣ್ಣಗೌಡರನ್ನು ತರಗತಿಯ ನಂತರ ತಮ್ಮೊಂದಿಗೆ ಕರೆದುಕೊಂಡು 'ಏನೇ ಆದರೂ ಅವರು ಗುರುಗಳು; ನೀನು ವಿದ್ಯಾರ್ಥಿ, ಹಾಗಿದ್ದೂ ಗುರುಗಳನ್ನು ಗದರಿಸಿ ಮಾತಾಡುವುದು ವಿದ್ಯಾರ್ಥಿಯಾದವನಿಗೆ ತಕ್ಕುದಲ್ಲ' ಎಂದು ಬುದ್ಧಿವಾದ ಹೇಳಿದರು. ಈ ಸಂದರ್ಭದಿಂದ ವೀರಣ್ಣಗೌಡರು ವಾದಿಸುವ ಗುಣ ಹೊಂದಿದವರಾಗಿ ಕಂಡು ಬಂದರೂ ಉಪಾಧ್ಯಾಯರ ಈ ರೀತಿಯ ಮಾರ್ಗದರ್ಶನವು ವೀರಣ್ಣಗೌಡರಲ್ಲಿ ಗುರುಹಿರಿಯರ ಬಗ್ಗೆ ಮತ್ತಷ್ಟು ವಿನಯವಂತಿಕೆಯನ್ನು ಬೆಳೆಸಿತು ಎನ್ನಬಹುದು. ಒಕ್ಕಲಿಗ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿಕೊಂಡಿದ್ದ ವೀರಣ್ಣಗೌಡರು ವಾರಕ್ಕೊಮ್ಮೆ ಒಬ್ಬೊಬ್ಬ ಉಪಾಧ್ಯಾಯರುಗಳ ಅಧ್ಯಕ್ಷತೆಯಲ್ಲಿ ಚರ್ಚಾಕೂಟಗಳನ್ನೇರ್ಪಡಿಸಿ ವಿದ್ಯಾರ್ಥಿಗಳು ಭಾಷಣ ಮಾಡುವ ಶಕ್ತಿ ರೂಢಿಸಿಕೊಳ್ಳುವುದಕ್ಕೆ ಮತ್ತು ಅವರ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾದ ವಾತಾವರಣವನ್ನು ಸೃಷ್ಟಿಸಿದರು. ಈ ರೀತಿಯಾಗಿ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ವೀರಣ್ಣಗೌಡರಲ್ಲಿ ಸಂಘಟನಾ ಶಕ್ತಿ ಹಂತ ಹಂತವಾಗಿ ಅಗಾಧ ಪ್ರಮಾಣದಲ್ಲಿ ರೂಪು ತಳೆಯುತ್ತಿತ್ತು. ಇವರಲ್ಲಿದ್ದ ಈ ಸಾಮರ್ಥ್ಯವನ್ನು ಗುರುತಿಸಿದ ಬೆಂಗಳೂರಿನಲ್ಲಿ ಅಡ್ವೋಕೇಟ್ ಆಗಿದ್ದ ಬ್ರಾಹ್ಮಣೇತರ ಪಂಗಡಗಳ ನಾಯಕರಲ್ಲೊಬ್ಬರಾಗಿದ್ದ ಶ್ರೀಯುತ ಜೀ.ಪರಮಶಿವಯ್ಯನವರು ವೀರಣ್ಣಗೌಡರು ಚನ್ನಪಟ್ಟಣದಲ್ಲಿ ಅನೇಕ

ಸಮಾರಂಭಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದನ್ನು ಗಮನಿಸಿ ಒಮ್ಮೆ "ನೀವು ಮೈಸೂರು ಸಂಸ್ಥಾನದ ಪಟೇಲರ ಸಭೆಯನ್ನು ಏಕೆ ನಡೆಸಬಾರದು?" ಎಂದು ಕೇಳಿದರು. ಅವರ ಸಲಹೆ ಸೂಚನೆಯ ಮೇರೆಗೆ ಹೆಚ್.ಕೆ. ವೀರಣ್ಣಗೌಡರು ತಮ್ಮ ಸ್ನೇಹಿತರೊಂದಿಗೆ ಸೇರಿ ಚನ್ನಪಟ್ಟಣದಲ್ಲಿ ಮೊದಲಿಗೆ ಪಟೇಲರ ಸಭೆಯನ್ನು ಯಶಸ್ವಿಯಾಗಿ ನಡೆಸಿದರು. ಇದರಿಂದ ಉತ್ತೇಜಿತರಾಗಿ ನಂತರ ಶ್ರೀರಂಗಪಟ್ಟಣ ಮತ್ತು ಬೆಂಗಳೂರಿನಲ್ಲೂ ಸಭೆಗಳನ್ನು ನಡೆಸಿದರು. ಈಗ ಕರ್ನಾಟಕ ಸರ್ಕಾರ ಪ್ರತಿ ಗ್ರಾಮದಲ್ಲೂ ಗ್ರಾಮಸಭೆಯನ್ನು ನಡೆಸುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಗ್ರಾಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಆ ಸಭೆಯಲ್ಲಿಯೇ ಸಾಧ್ಯವಾದಷ್ಟು ಇತ್ಯರ್ಥಗೊಳಿಸಿಕೊಳ್ಳಬೇಕು ಎಂಬುದೇ ಗ್ರಾಮ ಸಭೆಯ ಮೂಲ ಉದ್ದೇಶ. ಇಂತಹ ಸಭೆಯನ್ನು ಸಂಘಟಿಸುವುದು ಆಯೋಜಕರಿಗೆ ಒಂದು ದೊಡ್ಡ ಸಮಸ್ಯೆಯೇ ಸರಿ. ಬಹಳ ಹಿಂದೆಯೇ ಇದೇ ಗ್ರಾಮೋದ್ಧಾರದ ಉದ್ದೇಶವನ್ನಿಟ್ಟುಕೊಂಡು ಪಟೇಲರ ಸಭೆಯನ್ನು ನಡೆಸಬೇಕೆಂಬ ಸೂಚನೆ ಕೊಟ್ಟ ಪರಮಶಿವಯ್ಯನವರ ಸಲಹೆಯಂತೆ ಅದನ್ನು ಕಾರ್ಯರೂಪಕ್ಕೆ ತಂದ ವೀರಣ್ಣಗೌಡರ ಆಸಕ್ತಿಯನ್ನು ಇಲ್ಲಿ ನಾವು ಸ್ಮರಿಸಬೇಕಾಗುತ್ತದೆ. ಹಳ್ಳಿಗಾಡಿನಲ್ಲಿ ಬೆಳೆದು ರೂಪುಗೊಂಡ ವ್ಯಕ್ತಿತ್ವ ವೀರಣ್ಣಗೌಡರದು. ಅಂತಹ ಹಳ್ಳಿಯ ಮುಖ್ಯಸ್ಥರಾದ ಪಟೇಲರ ಮನೆತನದಲ್ಲಿ ಜನಿಸಿದ ಇವರಲ್ಲಿ ಪಟೇಲರ ಜವಾಬ್ದಾರಿ, ಗ್ರಾಮೋದ್ಧಾರದಲ್ಲಿ ಅವರ ಪಾತ್ರ ಇವುಗಳ ಬಗ್ಗೆ ತಿಳುವಳಿಕೆ ಇದ್ದಿತು. ಪಟೇಲರೆಂದರೆ ಜಮೀನ್ದಾರಿ ಪದ್ಧತಿಯ ಒಂದು ಮುಖ, ಪಟೇಲರೆಂದರೆ ಕೇವಲ ಹಕ್ಕುಗಳನ್ನು ಚಲಾಯಿಸಲು ಅರ್ಹತೆ ಪಡೆದವರು ಎಂಬ ನಂಬಿಕೆ ಜನರಲ್ಲಿತ್ತು. ಅಂತಹ ಸಂದರ್ಭದಲ್ಲಿ ವೀರಣ್ಣಗೌಡರು ತಾವು ಸಂಘಟಿಸಿದ್ದ ಪಟೇಲರ 5

ಸಭೆಯಲ್ಲಿ ಪಟೇಲರ ಹಕ್ಕು ಬಾಧ್ಯತೆಗಳು ಅಷ್ಟೆ ಅಲ್ಲ. ಅವರ ಕರ್ತವ್ಯಗಳು ; ಮುಖ್ಯವಾಗಿ ಸರ್ಕಾರಿ ಆಡಳಿತದಲ್ಲಿ ಪಟೇಲರ ಪಾತ್ರ ಎಷ್ಟು ಮುಖ್ಯವಾದುದ್ದು ಎಂಬ ವಿಚಾರಗಳನ್ನು ಸಭೆಯಲ್ಲಿ ಭಾಷಣದ ಮೂಲಕ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದರು. ಹೀಗೆ ಪಟೇಲರ ಕರ್ತವ್ಯಗಳನ್ನು ನೆನಪಿಸಿ ಆ ಮೂಲಕ ಗ್ರಾಮದ ಅಭ್ಯುದಯವನ್ನು ತಮ್ಮ ಕನಸನ್ನಾಗಿಸಿಕೊಂಡಿದ್ದ ಮನೆತನ ಈ ವೀರಣ್ಣಗೌಡರದು.

ಹೆಚ್.ಕೆ.ವೀರಣ್ಣಗೌಡರು ತಮ್ಮ ಅಧ್ಯಯನದ ಜೊತೆಗೆ ಕುಟುಂಬದ ವೃತ್ತಿಯಾದ ವ್ಯವಸಾಯದ ಬಗ್ಗೆ ಹೆಚ್ಚು ಗಮನ ನೀಡುತ್ತಿದ್ದರು. ಅಂದರೆ ಶಾಲೆಯ ರಜಾ ದಿನಗಳಲ್ಲಿ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ವ್ಯವಸಾಯದ ಕೆಲಸದೊಂದಿಗೆ ವಿರಾಮ ಕಾಲದಲ್ಲಿ ಪತ್ರಿಕೆಗಳಿಗೆ ಲೇಖನವನ್ನು

ಬರೆಯುತ್ತಿದ್ದರು. ಲೋಕ ವಿಖ್ಯಾತ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿದ್ದಾಗ 1911ರಲ್ಲಿ 'ಎಕನಾಮಿಕ್ಸ್ ಕಾನ್ಫರೆನ್ಸ್"ಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಏರ್ಪಡಿಸುತ್ತಿದ್ದರು. ಈ ವೇಳೆಗಾಗಲೇ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವೀರಣ್ಣಗೌಡರು ತಾಲ್ಲೂಕು ಕಾನ್ಫರೆನ್ಸ್‌ನಲ್ಲಿ 'ವ್ಯವಸಾಯಗಾರನಿಗೆ ವಿದ್ಯೆ ಅವಶ್ಯಕ' ಎಂಬ ವಿಷಯದಲ್ಲಿ ಭಾಷಣ ಮಾಡಿದ್ದರು. ಹೀಗೆ ರೈತನಿಗೆ ಅವಶ್ಯಕವಾಗಿ ಬೇಕಾಗಿರುವ ಅಕ್ಷರಜ್ಞಾನ ಹಾಗು ವಿದ್ಯಾವಂತನೊಬ್ಬ ಸ್ವಲ್ಪ ಮಟ್ಟಿಗಾದರೂ ಹೊಂದಿರಬೇಕಾದ ತನ್ನ ಕುಟುಂಬದ ವೃತ್ತಿಯ ಜ್ಞಾನ ಶಿಸ್ತು, ಇವೆರಡೂ ವ್ಯಕ್ತಿತ್ವದ ವಿಕಸನಕ್ಕೆ ಅವಶ್ಯಕ ಎಂಬುದನ್ನು ಇವರು ಮನಗಂಡಿದ್ದರು. ಅಂತೆಯೇ ದೇಶಭಕ್ತಿ, ಜನಸೇವೆ, ಸ್ವಾವಲಂಬನೆ, ಶಿಸ್ತನ್ನು ಕಲಿಸುವ ಸ್ಕೌಟ್‌ನಂತಹ ಶಿಕ್ಷಣ ವೀರಣ್ಣಗೌಡರಿಗೆ ದೊರತಿದ್ದು, ಗೌಡರು ಶಿಸ್ತುಬದ್ಧ ಜೀವನ ನಡೆಸಲು ಮತ್ತು ದೇಶಸೇವೆಗೆ ಪಣತೊಟ್ಟು ನಿಲ್ಲುವಂತೆ ಮಾಡಿತು. ಸ್ಕೌಟ್‌ನಲ್ಲಿ ತನ್ನ ಕೆಲಸ ತಾನು ಮಾಡುವುದು ಅವಮಾನಕರವಲ್ಲವೆಂಬ ಶಿಕ್ಷಣವನ್ನು ಗೌಡರು ಪಡೆದಿದ್ದರು. ಈ ಹಿನ್ನೆಲೆಯಲ್ಲಿ ಶಿಸ್ತುಬದ್ಧ ಜೀವನಕ್ಕೆ, ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸ್ಕೌಟ್ ತರಬೇತಿ ಉಪಯುಕ್ತವಾದುದೆನಿಸುತ್ತದೆ. ಸ್ಕೌಟಿನ ಬಗ್ಗೆ ಹೆಚ್ಚಿನ ಆಸಕ್ತಿಯಿದ್ದ ಗೌಡರು ಚಿಕ್ಕ ವಯಸ್ಸಿನಲ್ಲಿಯೇ ಸ್ಕೌಟ್ ಮಾಸ್ಟರ್ ತರಬೇತಿಯನ್ನು ಪಡೆದಿದ್ದರು.

ಮುಂದೆ ಕಾಲೇಜು ಶಿಕ್ಷಣಕ್ಕೆಂದು ಮೈಸೂರಿನ ವೆಸ್ಲಿಯನ್ ಮಿಷನ್ ಕೊಲಜಿಯೇಟ್ ಹೈಸ್ಕೂಲಿನಲ್ಲಿ ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಗೆ ಸೇರಿದರು. ಆದರೆ ವೀರಣ್ಣಗೌಡರ ಶೈಕ್ಷಣಿಕೇತರ ಕಾರ್ಯ ಚಟುವಟಿಕೆಗಳು ಅಲ್ಲಿಯೂ ಮುಂದುವರಿದುವು. ಸ್ಕೌಟ್ ಚಳುವಳಿಯ ಬಗ್ಗೆ ಇದ್ದ ವಿಶೇಷ ಆಸಕ್ತಿಯಿಂದ ಸ್ಕೌಟ್ ಟ್ರೂಪ್‌ಗಳನ್ನು ಸಂಘಟಿಸಿ ಸ್ಕೌಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಅಲ್ಲದೆ ಮೈಸೂರು ಸಂಸ್ಥಾನದ ಒಕ್ಕಲಿಗರ ವಿದ್ಯಾರ್ಥಿಗಳ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿದರು. ಈ ಮಹಾಸಭೆಗೆ ಅಂದಿನ ಮೈಸೂರು ಸಂಸ್ಥಾನದ ಬ್ಯಾರಿಸ್ಟರ್ ಬಿ.ನಾಗಪ್ಪನವರು ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ನೇಮಕವಾದ 'ಮೈಸೂರು ಸಂಸ್ಥಾನದ ಒಕ್ಕಲಿಗ ವಿದ್ಯಾರ್ಥಿಗಳ ಸ್ಥಾಯಿಸಮಿತಿ'ಯ ಸೆಕ್ರೆಟರಿಯಾಗಿ ಹೆಚ್.ಕೆ.ವೀರಣ್ಣಗೌಡರು ಆಯ್ಕೆಯಾದರು. ಇದರಿಂದ ಹಾಸನ, ನೆಲಮಂಗಲ, ತುಮಕೂರು ಮುಂತಾದ ಸ್ಥಳಗಳಲ್ಲಿ ಒಕ್ಕಲಿಗ ವಿದ್ಯಾರ್ಥಿ ನಿಯಲಗಳನ್ನು ಸ್ಥಾಪಿಸಲು ಓಡಾಡಿದರು. ಹಾಸನದಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಅಲ್ಲಿನ ಹಿರಿಯ ವಿದ್ಯಾರ್ಥಿಗಳು ಸಹಕರಿಸದಿದ್ದರೂ ಕಾರ್ಯೋನ್ಮುಖರಾದ ವೀರಣ್ಣಗೌಡರ ಪ್ರಯತ್ನವನ್ನು ವಿದ್ಯಾರ್ಥಿನಿಲಯದ

ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಅಲ್ಲಿನ ವಕೀಲರಾಗಿದ್ದ ಮುದ್ದಪ್ಪನವರು ತಮ್ಮ ಭಾಷಣದಲ್ಲಿ "ನೀವಿನ್ನೂ ತರುಣರಾದರೂ, ನಮ್ಮ ಮುಂದಿನ ಪೀಳಿಗೆಯಾದರೂ ವಿದ್ಯಾವಂತರಾಗಿ ಮುಂದೆ ಬರಲಿ ಎಂಬ ಮಹದಾಶೆಯಿಂದ ಬಡ ಒಕ್ಕಲಿಗ ಹುಡುಗರ ಸಹಾಯಾರ್ಥ ಇಂತಹ ಒಂದು ಕಾರ್ಯ ಮಾಡುತ್ತಿರುವುದು ಸಂತೋಷ" ಎಂದು ಹೇಳಿದರು. ಅವರ ಈ ಪ್ರೋತ್ಸಾಹದಾಯಕ ನುಡಿಗಳು ಹೆಚ್.ಕೆ.ವೀರಣ್ಣಗೌಡರಿಗೆ ಸಾರ್ವಜನಿಕ ಕೆಲಸಗಳಲ್ಲಿ ತಮ್ಮ ಚಟುವಟಿಕೆ ಮುಂದುವರಿಸಲು ಮತ್ತಷ್ಟು ಸ್ಫೂರ್ತಿ ನೀಡಿದವೆಂದು ಹೇಳಬಹುದು. ಈ ರೀತಿಯ ಕೆಲಸಗಳ ಫಲವಾಗಿ ವೀರಣ್ಣಗೌಡರಿಗೆ ತರಗತಿಯ ಪಠ್ಯಕ್ರಮಗಳ ಬಗ್ಗೆ ಗಮನ ನೀಡಲು ಸಾಧ್ಯವಾಗಲಿಲ್ಲ. ಇದರಿಂದ ಆ ವರ್ಷ ಅನುತ್ತೀರ್ಣರಾಗಿ ಮನೆ ಸೇರ ಬೇಕಾಯಿತು. ಹೀಗೆ ವಿದ್ಯಾರ್ಥಿ ದೆಸೆಯಲ್ಲಿಯೇ ಅವರಲ್ಲೊಬ್ಬ ಸಂಘಟಕ, ಹೋರಾಟಗಾರ ಅವರಿಗೆ ತಿಳಿಯದಂತೆಯೇ ರೂಪುಗೊಳ್ಳುತ್ತಿದ್ದ. ಈ ಪ್ರತಿ ಕೆಲಸದಲ್ಲಿಯೂ ಹೊಣೆಗಾರಿಕೆ ಅವರ ಜೊತೆಯಾಗಿತ್ತು. ಹೆಸರಿಗಾಗಿ ಇಂದು ಮುಖಂಡರಾಗಿ ಮಿಂಚುವ ಜನರಿಗೆ ಹೋಲಿಸಿದಾಗ ಪ್ರತಿಫಲಾಪೇಕ್ಷೆ ಇಲ್ಲದ ಇವರ ನಿಸ್ವಾರ್ಥ ಸೇವೆ ವಿಶಿಷ್ಟವೆನಿಸುತ್ತದೆ.

ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಪುನಃ ಪರೀಕ್ಷೆ ಕಟ್ಟಲು ಬೆಂಗಳೂರಿಗೆ ವೆಸ್ಲಿಯನ್ ಮಿಷನ್ ಕೊಲಿಜಿಯೇಟ್ ಹೈಸ್ಕೂಲಿಗೆ ಸೇರಿದರು. ಅಲ್ಲಿ ವೀರಣ್ಣಗೌಡರು ಒಕ್ಕಲಿಗ ವಿದ್ಯಾರ್ಥಿ ನಿಲಯಕ್ಕೆ ಸೇರಿರದಿದ್ದರೆ ಒಬ್ಬ ಪದವಿಧರರಾಗುತ್ತಿದ್ದರೋ ಏನೋ? ಆದರೆ ಬೆಂಗಳೂರಿನ ಒಕ್ಕಲಿಗ ವಿದ್ಯಾರ್ಥಿಗಳ ಹಾಸ್ಟೆಲಿಗೆ ಸೇರಿ ಅಲ್ಲಿಯೂ ಹಾಸ್ಟೆಲಿನ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದರಿಂದ ಆ ವರ್ಷವೂ ಉತ್ತೀರ್ಣರಾಗದೆ ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ ಉಂಟಾಯಿತು. ಆ ವೇಳೆಗಾಗಲೇ 1924ರಲ್ಲಿ ಮಹಾತ್ಮ ಗಾಂಧೀಜಿಯವರ ಅಸಹಕಾರ ಚಳುವಳಿ ಪ್ರಾರಂಭವಾಗಿತ್ತು. ಹಾಗಾಗಿ ಮತ್ತೊಮ್ಮೆ ಪರೀಕ್ಷೆ ಕಟ್ಟಲು ವೀರಣ್ಣಗೌಡರಿಗೆ ಸಾಧ್ಯವಾಗದೇ ಹೋಯಿತು. ಇಂತಹ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ಬ್ರಿಟೀಷರ ನೇರ ಆಳ್ವಿಕೆಗೆ ಒಳಪಟ್ಟಿರದ ಕಾರಣ ಅಸಹಕಾರ ಚಳುವಳಿಯ ಕಾವು ಮೈಸೂರು ಸಂಸ್ಥಾನದಲ್ಲಿ ಅಷ್ಟಾಗಿ ಕಂಡು ಬಂದಿರಲಿಲ್ಲ. ಇದರಿಂದ ಊರು ಸೇರಿದ ವೀರಣ್ಣಗೌಡರು ವ್ಯವಸಾಯದ ಕಡೆ ಗಮನಹರಿಸಿದರು. ತದನಂತರ ಶಿಕ್ಷಕ ವೃತ್ತಿಯನ್ನು ಕೈಗೊಂಡರು. ಅಲ್ಪಕಾಲದಲ್ಲಿಯೇ ಅದನ್ನು ಬಿಟ್ಟು ಪತ್ರಿಕಾ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಈ ವೇಳೆಗಾಗಲೇ 32 ವರ್ಷ ತುಂಬಿದ ವೀರಣ್ಣಗೌಡರಿಗೆ ಮನೆಯಲ್ಲಿ ವಿವಾಹದ ಪ್ರಸ್ತಾಪ ತೀವ್ರಗೊಂಡಿತು.

ಥಿಯೋಸಾಫಿಕಲ್ ಸೊಸೈಟಿಯಂತಹ ಸಾಮಾಜಿಕ ಸುಧಾರಣೆಯ ಧ್ಯೇಯ ಹೊಂದಿದ್ದ ಸಂಸ್ಥೆಯ ಸಂಪರ್ಕ ವೀರಣ್ಣಗೌಡರನ್ನು ಹಲವಾರು ಸಮಾಜ ಚಿಂತಕರ ಪ್ರಭಾವಕ್ಕೆ ಒಳಗು ಮಾಡಿತ್ತು. ಹೀಗಾಗಿ ರಾಜಾರಾಮ್ ಮೋಹನ್‌ರಾಯ್ ಮತ್ತು ಜ್ಯೋತಿಬಾ ಪುಲೆ, ಅನಿಬೆಸೆಂಟ್, ಗೋಪಾಲಕೃಷ್ಣ ಗೋಖಲೆಯವರಂತಹ ಸಮಾಜಸುಧಾರಕರ ವಿಚಾರಧಾರೆಗಳ ಬಗ್ಗೆ ಪ್ರಭಾವಿತರಾಗಿದ್ದ ಗೌಡರು ಬಾಲವಿಧವೆ ತಾಯಮ್ಮನನ್ನು ವಿವಾಹವಾದರು. ಇವರ ವಿವಾಹ 1930ರ ದಶಕದ ಅಂದಿನ ಜನಸಮುದಾಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಹೀಗೆ ವಿಧವೆಯನ್ನು ಮದುವೆಯಾಗುವುದರ ಮೂಲಕ ಸ್ತ್ರೀ ಶೋಷಣೆಯ ನಿವಾರಣೆಗೆ ತಾವೇ ಮುಂದಾದರು. ವೈವಾಹಿಕ ಜೀವನಕ್ಕೆ ಅಡಿಯಿಡುವ ಮೊದಲು ಹಲವಾರು ರೀತಿಯ ಶ್ರೀಮಂತ ಸಂಬಂಧಗಳು ಕೂಡಿ ಬಂದರೂ ತಮ್ಮ ಆದರ್ಶಕ್ಕೆ ಬದ್ಧರಾಗಿ ನಿಂತ ಹೆಚ್.ಕೆ. ವೀರಣ್ಣಗೌಡರ ನಿಲುವು ಶ್ಲಾಘನೀಯವಾದುದು. ಹಾಗೆಯೇ ಸಮಾಜದ ರೀತಿನೀತಿಗಳ ವಿರುದ್ಧ ಸರಳವಾಗಿ ಶಾಸ್ತ್ರೋಕ್ತವಾಗಿ ವಿವಾಹವಾಗುವ ಮೂಲಕ ಸ್ತ್ರೀಸ್ಥಾನಮಾನಕ್ಕೆ ಹೆಚ್ಚಿನ ಮಹತ್ವವನ್ನು ಕಲ್ಪಿಸಿಕೊಡುವ ಹಾದಿಯಲ್ಲಿ ಮುನ್ನಡೆದರು. ಸ್ತ್ರೀಪರ ಕಾಳಜಿಯುಳ್ಳವರಾಗಿದ್ದ ವೀರಣ್ಣಗೌಡರು ತಮಗೆ ಮಕ್ಕಳಿಲ್ಲದಿದ್ದರೂ ಸಂಬಂಧಿಕರ ಹೆಣ್ಣು ಮಕ್ಕಳನ್ನು ತಂದು ಪ್ರೀತಿಯಿಂದ ಸಾಕಿ ಸಲುಹಿ ವಿವಾಹ ಮಾಡಿಕೊಟ್ಟಿರುವ ಸಂದರ್ಭಗಳಿವೆ. ಲಿಂಗಸಮಾನತೆಯ ದೃಷ್ಟಿಯಿಂದ ಪತ್ನಿಯ ಎಲ್ಲಾ ಕೆಲಸಗಳಲ್ಲಿ ಸಹಕರಿಸುತ್ತಿದ್ದರು. ತಮ್ಮ ಸಾರ್ವಜನಿಕ ಚಟುವಟಿಕೆಗಳ ಬಗ್ಗೆ ಪತ್ನಿಯೊಂದಿಗೆ ಚರ್ಚಿಸಿ ಅವರ ಸಲಹೆ ಸೂಚನೆಗಳಿಗೆ ಆದ್ಯತೆ ನೀಡುತ್ತಿದ್ದುದ್ದನ್ನು ಗಮನಿಸಿದರೆ ಅವರ ಸ್ತ್ರೀಪರ ಕಾಳಜಿ ಗೋಚರವಾಗುತ್ತದೆ. ಇಂತಹ ಮನಃಸ್ಥಿತಿಯ ವೀರಣ್ಣಗೌಡರಿಗೆ ರಷ್ಯಾ ದೇಶದ ಒಬ್ಬ ಸುಂದರ ಸುಸಂಪನ್ನ ಮಹಿಳೆಯ ಜೀವನದ ಏಳುಬೀಳುಗಳ ಸುತ್ತ ಎಣೆದ ಕಥೆಯನ್ನೊಳಗೊಂಡ ಟಾಲ್‌ಸ್ಟಾಯ್‌ರವರ 'ಅನ್ನಕರೇನಿನಾ' ಕೃತಿ ಮನಸೆಳೆದಿದ್ದು ಸಹಜವಾಗಿತ್ತು. ಹೀಗಾಗಿ ಆ ಕೃತಿಯನ್ನು ಗೌಡರು ಹಲವಾರು ಬಾರಿ ಓದಿಕೊಂಡಿದ್ದರು.

ಮಹಾತ್ಮಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳುವವರೆಗೆ ಗೋಖಲೆಯವರ ನೇತೃತ್ವದಲ್ಲಿ ಮುನ್ನಡೆದಿದ್ದ ಸ್ವಾತಂತ್ರ್ಯ ಹೋರಾಟ ಅಂದಿನ ಯುವ ಮನಸ್ಸುಗಳಲ್ಲಿ ಗೋಖಲೆಯವರ ಬಗ್ಗೆ ಒಂದು ರೀತಿಯ ಪೂಜ್ಯ ಭಾವನೆ ಮೂಡಿಸಿತ್ತು. ಯುವಜನಾಂಗದ ಮೇಲೆ ಗೋಖಲೆಯವರಿಗಿದ್ದ ಅಪಾರ ನಂಬಿಕೆಯೇ ಯುವ ಮನಸ್ಸುಗಳಲ್ಲಿ ಗೋಖಲೆಯವರು ಬೇರೂರಲು ಕಾರಣವೆಂದು ಹೇಳಬಹುದು. ಹೀಗಾಗಿ

ಚಿಕ್ಕಂದಿನಲ್ಲಿಯೇ ಗೋಖಲೆಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ವೀರಣ್ಣಗೌಡರು ತಮ್ಮ ಪುಸ್ತಕಗಳ ಪೆಟ್ಟಿಗೆಯ ಮೇಲೆ ಗೋಖಲೆಯವರ ಫೋಟೋವನ್ನು ಅಂಟಿಸಿಕೊಂಡಿದ್ದರ ಮೂಲಕ ಗೋಖಲೆಯವರ ಆರಾಧಕರಾಗಿದ್ದರು ಎಂಬುದು ತಿಳಿದು ಬರುತ್ತದೆ. ಗಾಂಧೀಜಿಯವರ ಅಹಿಂಸಾತ್ಮಕ ತತ್ವ ಹೆಚ್.ಕೆ.ವೀರಣ್ಣಗೌಡರ ಮೇಲೆ ಅಪಾರ ಪ್ರಭಾವ ಬೀರಿತ್ತು. ಹೀಗಾಗಿ ಅವರ ಜೀವನದ ಹೋರಾಟಗಳೆಲ್ಲಾ ಅಂದರೆ ಇರ್ವಿನ್ ನಾಲಾ ರೈತರ ಚಳುವಳಿ, ಶಿವಪುರ ಧ್ವಜ ಸತ್ಯಾಗ್ರಹ ಇವೆಲ್ಲವು ಅಹಿಂಸಾತ್ಮಕ ಹೋರಾಟಗಳಾಗಿದ್ದವು. ಹೀಗೆ ಸಮಕಾಲೀನ ರಾಜ್ಯ ನಾಯಕರುಗಳಾದ ಹೆಚ್.ಸಿ.ದಾಸಪ್ಪ, ಟಿ.ಸಿದ್ದಲಿಂಗಯ್ಯ, ಎಸ್.ನಿಜಲಿಂಗಪ್ಪ, ಕೆ.ಟಿ.ಭಾಷ್ಯಂ, ವಿ.ವೆಂಕಟಪ್ಪ, ಎಸ್.ಚನ್ನಯ್ಯ, ಕೆ.ಸಿ.ರೆಡ್ಡಿ ಮುಂತಾದವರ ಗುಣಸ್ವಭಾವ, ವರ್ಚಸ್ಸು, ವಿಚಾರಧಾರೆಗಳು ಒಂದೊಂದು ರೀತಿಯಲ್ಲಿ ಹೆಚ್.ಕೆ.ವೀರಣ್ಣಗೌಡರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಹಾಗೆಯೇ ರಾಷ್ಟ್ರನಾಯಕರುಗಳಾದ ಜವಹರಲಾಲ ನೆಹರು, ಸರ್ದಾರ್ ವಲ್ಲಭಾಯ್ ಪಟೇಲ್, ಲಾಲ್ ಬಹದ್ದೂರ್ ಶಾಸ್ತ್ರಿ, ನೀಲಂ ಸಂಜೀವರೆಡ್ಡಿ, ಸುಭಾಷ್‌ಚಂದ್ರ ಭೋಸ್ ಮುಂತಾದವರು ವೀರಣ್ಣಗೌಡರ ರಾಜಕೀಯದ ಆದರ್ಶಗಳಾಗಿದ್ದರು. ಸಮಾಜದ ಎಲ್ಲಾ ವರ್ಗವನ್ನು ಸಮಾನ ರೀತಿಯಲ್ಲಿ ಕಾಣುವ 'ಕಮ್ಯೂನಿಸಂ' ಬಗ್ಗೆ ಗೌಡರಿಗೆ ಹೆಚ್ಚು ಒಲವಿತ್ತು. ಮಾರ್ಕ್ಸ್‌ನ ಸಿದ್ಧಾಂತ ಕುರಿತು ಸೊಗಸಾಗಿ ಮಾತನಾಡಬಲ್ಲವರಾಗಿದ್ದರು. ಜೊತೆಗೆ ವೆಂಕಣ್ಣಯ್ಯ, ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಡಿ.ವಿ.ಜಿ. ಮುಂತಾದವರ ಸಾಹಿತ್ಯ ಬರಹಗಳು ಮತ್ತು ಪ್ರೋತ್ಸಾಹ ಗೌಡರ ಮನದಲ್ಲಿ ಹುದುಗಿದ್ದ ಸಾಹಿತ್ಯಾಸಕ್ತಿಯನ್ನು ಮತ್ತಷ್ಟು ವೃದ್ಧಿಸಿದವೆಂದು ಹೇಳಬಹುದು.

ಈ ರೀತಿ ಚಿಕ್ಕಂದಿನಲ್ಲಿ ದೊರೆತ ಪುಸ್ತಕಗಳ ಸಹವಾಸ ಮತ್ತು ಗಣ್ಯರುಗಳ ಪ್ರಭಾವಕ್ಕೆ ಒಳಪಟ್ಟು ತಮ್ಮ ವ್ಯಕ್ತಿತ್ವದಲ್ಲಿ ಒಂದು ಮೆರುಗನ್ನು ಕಂಡುಕೊಂಡಿದ್ದ ವೀರಣ್ಣಗೌಡರು ಸಮಾಜ ಸುಧಾರಣೆಯ ಬಗ್ಗೆ ತಮ್ಮ ಬಾಲ್ಯದಿಂದಲೂ ಯೋಚಿಸುತ್ತಿದ್ದರು. ಹಾಗಾಗಿ ತಮ್ಮ ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿ ಮನೆ ಸೇರಿದ ವೀರಣ್ಣಗೌಡರು ಪತ್ರಿಕೆಗಳ ಮೂಲಕ ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ವಿದ್ಯಾಮಾನಗಳನ್ನು ತಿಳಿದುಕೊಳ್ಳುತ್ತಿದ್ದರು. ಇದಕ್ಕೆ ಅನುಗುಣವಾಗಿ ಇತರ ಪತ್ರಿಕೆಗಳಿಗೆ ಕ್ರಾಂತಿಕಾರಕ ನಿಲುವಿನ ತಮ್ಮ ವಿಚಾರಧಾರೆಗಳನ್ನು ಲೇಖನಗಳ ರೂಪದಲ್ಲಿ ಕಳುಹಿಸುವ ಮೂಲಕ ತಾವು ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಪರೋಕ್ಷವಾಗಿ ಪಾಲ್ಗೊಂಡಿದ್ದರು.

ಮೈಸೂರು ಸಂಸ್ಥಾನವು ಬ್ರಿಟೀಷರ ನೇರ ಆಡಳಿತಕ್ಕೆ ಒಳಪಡದ ಕಾರಣ 1920ರ ದಶಕದಲ್ಲಿ ರಾಷ್ಟ್ರೀಯ ಹೋರಾಟದ ಚಟುವಟಿಕೆಗಳು ಮೈಸೂರಿನಲ್ಲಿ ಅಷ್ಟಾಗಿ ಕಂಡು ಬಂದಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವೀರಣ್ಣಗೌಡರು ತಮ್ಮ ಲೇಖನಗಳನ್ನು ಬರೆಯುವ ಜೊತೆಗೆ ವ್ಯವಸಾಯದ ಕಡೆ ಗಮನ ಹರಿಸಿದರು. ನಂತರ ಸರ್ಕಾರದ ಪ್ರಕಟಣೆಗಳನ್ನು ಗಮನಿಸಿ ಶೇಖದಾರ ಹುದ್ದೆ ಮತ್ತು ಉಪಾಧ್ಯಾಯ ಹುದ್ದೆ ಎರಡಕ್ಕೂ ಅರ್ಜಿ ಹಾಕಿಕೊಂಡರು. ಎರಡೂ ಕೆಲಸಗಳಿಗೆ ತಾವು ಆಯ್ಕೆಯಾದಾಗ ಈಗಾಗಲೇ ತಮ್ಮ ಪೂರ್ವಿಕರು ನಿಭಾಯಿಸಿದ್ದ ಶೇಖದಾರ ಹುದ್ದೆಯನ್ನು ತ್ಯಜಿಸಿ ಉಪಾಧ್ಯಾಯ ಹುದ್ದೆಯನ್ನು ಆರಿಸಿಕೊಂಡರು. ಜಾಲಮಂಗಲದಲ್ಲಿ ಉಪಾಧ್ಯಾಯರಾಗಿ ವೃತ್ತಿ ಜೀವನ ಆರಂಭಿಸಿದರು. ಒಮ್ಮೆ ಆಡು ಮೇಯಿಸುವ ಹುಡುಗನ ವಿದ್ಯಾಸಕ್ತಿಯನ್ನು ಗುರುತಿಸಿದ ಗೌಡರು ಆತನ ಜೀವನಕ್ಕೊಂದು ಬೆಳಕು ತೋರಿದರು. ಆ ಆಡು ಮೇಯಿಸುವ ಹುಡುಗನೇ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ದೇ.ಜವರೇಗೌಡರು. ಹೀಗೆ ಗೌಡರ ಉದಾರ ಹೃದಯ ಕನ್ನಡನಾಡಿಗೆ ಡಾ.ದೇ.ಜವರೇಗೌಡರಂತಹ ಸಾಹಿತ್ಯ ರತ್ನವನ್ನು ಕಾಣಿಕೆಯಾಗಿ ನೀಡಿತೆಂದರೆ ಅತಿಶಯೋಕ್ತಿಯಲ್ಲ. ದೇಶದ ಅಭಿವೃದ್ಧಿಗೆ ವಿದ್ಯೆ ಮೂಲಾಧಾರವೆಂದು ತಿಳಿದಿದ್ದ ಗೌಡರು ಕಡ್ಡಾಯ ಶಿಕ್ಷಣಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತ ತನ್ನ ಸುತ್ತಲಿನ ಗ್ರಾಮಸ್ಥರಿಗೆ ವಿದ್ಯೆಯ ಮಹತ್ವದ ಅರಿವನ್ನುಂಟು ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ದೇಶಾಭಿಮಾನದ ಬಗ್ಗೆ ತಿಳಿಸಿಕೊಡುವಲ್ಲಿ ಖಾದಿಧಾರಿಗಳಾಗಿ ಸ್ವತಃ ಮಾದರಿಯಾಗಿದ್ದರು. ಜೊತೆಗೆ ದೇಶೀಯತೆಯ ಬಗ್ಗೆಯೂ ಹುಡುಗರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ದೇಶೀಯ ಆಟ ಪಾಠಗಳ ಅಭ್ಯಾಸ ಮಾಡಿಸುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ದೃಢಕಾಯರಾಗಿ, ಬುದ್ದಿವಂತರಾಗಿ ಬೆಳೆಯಲು ಕಾರಣಕರ್ತರಾದರು. ಶಿಸ್ತಿನ ಸಿಪಾಯಿಯಂತಿದ್ದ ಗೌಡರು ಒಬ್ಬ ಉತ್ತಮ ಗುರುವಿನ ಆದ್ಯ ಕರ್ತವ್ಯಗಳ ಬಗ್ಗೆ ಅರಿವನ್ನೊಂದಿದ್ದರು. ಹಾಗಾಗಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಸಮಾಜದ ಪ್ರಗತಿಗೆ ಪೂರಕವಾದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಮಧ್ಯೆ ಗೌಡರು ಜಾಲಮಂಗಲದಿಂದ ಚಕ್ಕೆರೆಗೆ ವರ್ಗಾವಣೆಯಾದ ಸುದ್ದಿ ಜಾಲಮಂಗಲದ ತುಂಬ ಕಾಳ್ಗಿಚ್ಚಿನಂತೆ ಹಬ್ಬಿತು. ಇದರಿಂದ ವಿಚಲಿತರಾದ ಊರಿನ ಜನ ವೀರಣ್ಣಗೌಡ ಮೇಸ್ಟ್ರನ್ನು ತಮ್ಮ ಊರಿನಲ್ಲೆ ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸಿದರಂತೆ. ಇದರಿಂದ ವೀರಣ್ಣಗೌಡರು ಒಬ್ಬ ಜನಾನುರಾಗಿ ಉತ್ತಮ ಶಿಕ್ಷಕ ಮಾತ್ರವಲ್ಲದೆ, ಸಾಮಾಜಿಕ ಕಳಕಳಿ ಹೊತ್ತ ಮತ್ತು ಹೊಸ ಸಮಾಜ ಪರಿವರ್ತನೆಯ ಕನಸು ಕಂಡ ವ್ಯಕ್ತಿತ್ವವಾಗಿಯೂ ಕಂಡು ಬರುತ್ತಾರೆ. ಆಗಿನ ನಿಯಮದಂತೆ ವೀರಣ್ಣಗೌಡರನ್ನು

ಚಿಕ್ಕೆರೆಯಿಂದ ಅಂಡರ್‌ಗ್ರ್ಯಾಜುಯೇಟ್ಸ್ ಟ್ರೈನಿಂಗ್‌ಗಾಗಿ ಮೈಸೂರು ಟ್ರೈನಿಂಗ್ ಕಾಲೇಜಿಗೆ ವರ್ಗಮಾಡಿದರು. ಸ್ವಲ್ಪ ಕಾಲ ಅಲ್ಲಿದ್ದು ಶಿಕ್ಷಣ ಪದ್ಧತಿಯ ವಿಷಯಗಳನ್ನು ಮನನ ಮಾಡಿದರು. ಅಷ್ಟರಲ್ಲಿ ಬೆಂಗಳೂರು ಒಕ್ಕಲಿಗರ ಸಂಘದ ಪದಾಧಿಕಾರಿಗಳು ವೀರಣ್ಣಗೌಡರನ್ನು ಒಕ್ಕಲಿಗರ ಪತ್ರಿಕೆಯ ಸಂಪಾದಕನನ್ನಾಗಿ ಆಯ್ಕೆ ಮಾಡಿದ ವಿಷಯ ಹೊರಬಿತ್ತು. ಪತ್ರಿಕೋದ್ಯಮಿಯಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ತೀವ್ರತರವಾಗಿ ತುಂಬಿಕೊಂಡಿದ್ದ ವೀರಣ್ಣಗೌಡರು ಶಿಕ್ಷಣ ತರಬೇತಿಯನ್ನು ಪೂರ್ಣಗೊಳಿಸದೆ ಬೆಂಗಳೂರಿಗೆ ಬಂದು ಒಕ್ಕಲಿಗರ ಪತ್ರಿಕೆಯ ಸಂಪಾದಕ ವೃತ್ತಿಯನ್ನು ಪ್ರಾರಂಭಿಸಿದರು.

ಉಪಾಧ್ಯಾಯ ವೃತ್ತಿಯಿಂದ ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಪತ್ರಿಕಾರಂಗ ಪ್ರವೇಶಿಸಿದ ಹೆಚ್.ಕೆ.ವೀರಣ್ಣಗೌಡರು ಮೊದಲಿಗೆ ಸೀಮಿತ ಸಂಖ್ಯೆಯಲ್ಲಿ ಕೆಲವೇ ವ್ಯಕ್ತಿಗಳಿಗೆ ತಲುಪುತ್ತಿದ್ದ ಒಕ್ಕಲಿಗರ ಪತ್ರಿಕೆಯನ್ನು ಜನಸಾಮಾನ್ಯರ ಕೈಗೆ ತಲುಪುವಂತೆ ಮಾಡುವುದಕ್ಕೆ ಆದ್ಯತೆ ನೀಡಿದರು. ಈ ಹಿನ್ನೆಲೆಯಲ್ಲಿ ಪತ್ರಿಕೆಯಲ್ಲಿ ಅರ್ಥಪೂರ್ಣ ಲೇಖನಗಳ ಪ್ರಕಟಣೆ ಕಡೆಗೆ ಗಮನಹರಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರದ ಆಳ್ವಿಕೆಯಲ್ಲಿ ಧೈರ್ಯದಿಂದ ಮುಕ್ತವಾಗಿ ಪತ್ರಿಕೆ ನಡೆಸುವುದು ಸವಾಲಿನ ಪ್ರಶ್ನೆಯಾಗಿತ್ತು. ಅಂತಹ ಸಂದರ್ಭದಲ್ಲಿ ಪತ್ರಿಕಾರಂಗಕ್ಕೆ ಪ್ರವೇಶಿಸಿದ ಗೌಡರು ನಿರ್ಭೀಡೆಯಿಂದ ಕೆಲಸ ಪ್ರಾರಂಭಿಸಿದರು.

ಹೆಚ್ಚಿನ ವಿದ್ಯಾಭ್ಯಾಸ ಹೊಂದಿರದ ಹೆಚ್.ಕೆ.ವೀರಣ್ಣಗೌಡರು ಒಕ್ಕಲಿಗರ ಪತ್ರಿಕೆಯ ಸಂಪಾದಕ ಹುದ್ದೆಗೆ ಅರ್ಜಿಸಲ್ಲಿಸಿದಾಗ ಉನ್ನತ ಶಿಕ್ಷಣ ಪಡೆದಿದ್ದ ಅಭ್ಯರ್ಥಿಗಳಿಂದ ಸ್ಪರ್ಧೆಯನ್ನು ಎದುರಿಸಬೇಕಾಗಿತ್ತು. ಆದರೂ ಸಂಪಾದಕ ಹುದ್ದೆ ಗೌಡರಿಗೇ ದೊರೆಯಿತು. ಕಾರಣ ಅವರಿಗಿದ್ದ ಅನುಭವ, ಪತ್ರಿಕಾ ಸಂವೇದನೆ, ಮತ್ತು ಪತ್ರಿಕೆಗೆ ಮೊದಲಿನಿಂದಲೂ ಲೇಖನಗಳ ಮೂಲಕ ಸಲ್ಲಿಸಿದ ಸೇವೆ ಪರಿಗಣಿಸಲ್ಪಟ್ಟಿದ್ದವು.

ಚಿಕ್ಕಂದಿನಲ್ಲಿಯೇ 'ಕರ್ನಾಟಕ ವಿದ್ಯಾರ್ಥಿ' ಎಂಬ ಪತ್ರಿಕೆಯೊಂದನ್ನು ಪ್ರಾರಂಭಿಸಿ ನಿರ್ವಹಿಸಿದ ಅನುಭವ ಹೆಚ್.ಕೆ.ವೀರಣ್ಣಗೌಡರಿಗೆ ಪತ್ರಿಕಾರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಅನುವು ಮಾಡಿಕೊಟ್ಟಿತು ಎಂದರೆ ತಪ್ಪಾಗಲಾರದು. ಆ ಪತ್ರಿಕೆಗೆ ಅಂದಿನ ಪ್ರಸಿದ್ಧ ಸಾಹಿತಿಗಳು, ಲೇಖಕರಾದ ಸಾಲಿ ರಾಮಚಂದ್ರರಾವ್, ಕಡೆಂಗೋಡ್ಲು ಶಂಕರಭಟ್ಟರು ತಮ್ಮ ಲೇಖನಗಳನ್ನು ನೀಡಿ ಸಹಕರಿಸುತ್ತಿದ್ದರು. ಇದರಿಂದ ಆ ಪತ್ರಿಕೆಯ ಗುಣಮಟ್ಟದ ಬಗ್ಗೆ ಅರಿಯಬಹುದಾಗಿದೆ. ಇದೇ ಸಮಯದಲ್ಲಿ ಅಂದರೆ 'ಕರ್ನಾಟಕ ವಿದ್ಯಾರ್ಥಿ'

ಪತ್ರಿಕೆ ತನ್ನ ಮೊದಲ ವರ್ಷ ಪೂರೈಸಿದ ಸಂದರ್ಭದಲ್ಲಿ ವೀರಣ್ಣಗೌಡರು ಬರೆದಿದ್ದ 'ಆಶಾ' ನೀಳ್ಗತೆಯ ಪುಸ್ತಕವನ್ನು ಎಲ್ಲಾ ಚಂದಾದಾರರಿಗೂ ಉಚಿತವಾಗಿ ವಿತರಿಸಲಾಯಿತು. 'ಕರ್ನಾಟಕ ವಿದ್ಯಾರ್ಥಿ' ಪತ್ರಿಕೆಯು ವೀರಣ್ಣಗೌಡರ ವಿದ್ಯಾಭ್ಯಾಸದ ನಂತರ ಅಂದರೆ ಮೂರು ವರ್ಷಗಳು ನಡೆದು ನಿಂತು ಹೋಯಿತು. ಕಾರಣ ವೀರಣ್ಣಗೌಡರಂತಹ ಸಾಮಾಜಿಕ ಕಾಳಜಿಯನ್ನು ಹೊತ್ತ ಯಾವೊಬ್ಬ ವಿದ್ಯಾರ್ಥಿಯು ಪತ್ರಿಕೆಯ ನಿರ್ವಹಣೆಗೆ ಮುಂದೆ ಬರದೆ ಹೋದದ್ದು. ವಿದ್ಯಾಭ್ಯಾಸದ ನಂತರ ಒಕ್ಕಲಿಗರ ಪತ್ರಿಕೆಯ ಸಂಪಾದಕರಾದ ಹೆಚ್.ಕೆ.ವೀರಣ್ಣಗೌಡರು ಕನ್ನಡ ಪತ್ರಿಕಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಎಂದರೆ 1928ರ ವಾರ್ಷಿಕ ವಿಶೇಷ ಸಂಚಿಕೆಯನ್ನು ತಂದಿದ್ದು. ಈ ಸಂಚಿಕೆಯಲ್ಲಿ ನಾಡು ನುಡಿಗೆ ಸಂಬಂಧಿಸಿದಂತೆ, ರೈತರಿಗೆ ಅನುಕೂಲಕರವಾದ ಲೇಖನಗಳು, ಬಡತನ, ಮನೆಬೇಸಾಯ ಹೀಗೆ ಜಾನಪದ ಚಿಂತನೆಗಳನ್ನು ಒಳಗೊಂಡ ಮತ್ತು ಸ್ಕೌಟ್, ನಗರೀಕರಣದಂತಹ ವರ್ತಮಾನದ ವಿಶೇಷ ಸಂಗತಿಗಳ ಬಗ್ಗೆ ಪ್ರಬುದ್ಧ ಲೇಖನಗಳು, ಅಲ್ಲದೆ ಗೌಡರು ರಚಿಸಿದ್ದ ಬುದ್ಧ ದೇವ, ಶಿವಾಜಿ ವಿಜಯ ನಾಟಕಗಳು ಪ್ರಕಟವಾಗಿದ್ದವು. ಮಹಿಳೆಯರು ಪತ್ರಿಕೆಗಳಲ್ಲಿ ಬರೆಯುವುದೇ ಅಸಂಭವ ಎನ್ನುವ ಕಾಲದಲ್ಲಿ ಶ್ರೀಮತಿ ಬಿ.ಇಂದಿರಮ್ಮ, ಶ್ರೀಮತಿ ಆರ್.ಕಲ್ಯಾಣಮ್ಮನವರಿಂದ ಸ್ತ್ರೀವಿದ್ಯಾಭ್ಯಾಸ, ಸ್ತ್ರೀಯರಿಗೆ ಅನುಕೂಲವಾದ ಸಮಾಜಸೇವೆಯಂತಹ ಸಂಗತಿಗಳ ಬಗ್ಗೆ ಲೇಖನ ಬರೆಸಿ ಪ್ರಕಟ್ಟಿಸಿದ್ದು ಶ್ಲಾಘನಾರ್ಹವಾದುದು. ಈ ನೂರು ವರ್ಷಗಳಲ್ಲಿ ಪತ್ರಿಕೋದ್ಯಮ ಮತ್ತು ಮುದ್ರಣ ಕಲೆಯಲ್ಲಿ ಸಾಕಷ್ಟು ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಆದರೆ ಹೆಚ್.ಕೆ.ವೀರಣ್ಣಗೌಡರು ಹಾಕಿಕೊಟ್ಟ ಪರಂಪರೆ ಇಂದಿನ ಯುಗಾದಿ, ದೀಪಾವಳಿ ವಿಶೇಷ ಸಂಚಿಕೆಗಳ ಮುಂದುವರಿಕೆಗೆ ನಾಂದಿಯಾಗಿದೆ.

1920ರ ದಶಕದ ಸುಮಾರಿಗೆ ಕನ್ನಡದ ಯಾವುದೇ ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿರುವುದು ಕಂಡುಬರುವುದಿಲ್ಲ ಎಂಬುದು ಹಿರಿಯ ಪತ್ರಿಕೋದ್ಯಮಿಗಳ ಅನುಭವ. ಹಾಗಾಗಿ ಒಕ್ಕಲಿಗರ ಪತ್ರಿಕೆಯ ಮೂಲಕ ವಿಶೇಷ ಸಂಚಿಕೆಗಳ ಆರಂಭಕ್ಕೆ ಮುನ್ನುಡಿ ಹಾಡಿದವರಲ್ಲಿ ಹೆಚ್.ಕೆ.ವೀರಣ್ಣಗೌಡರೇ ಮೊದಲಿಗರೆನ್ನಬಹುದು. ಮೌಢ್ಯತೆಯಿಂದ ಕೂಡಿದ ಸಂಪ್ರದಾಯಗಳ ಪರಿಣಾಮವನ್ನು ವಿಡಂಬನಾತ್ಮಕವಾಗಿ ಬರೆಯುವ ಮೂಲಕ ಸಮಾಜದಲ್ಲಿ ಬದಲಾವಣೆಯ ಸಂಚಾರವನ್ನುಂಟು ಮಾಡಿದ್ದರು. ಉದಾಹರಣೆಗೆ ಶೃಂಗೇರಿ ಸ್ವಾಮೀಜಿಗಳ ಮೆರವಣಿಗೆಯಲ್ಲಿ ವೈಶ್ಯೆಯರನ್ನು ಅಲಂಕಾರಿಕವಾಗಿ ಬಳಸಿಕೊಂಡಿದ್ದರ ಬಗ್ಗೆ ಟೀಕಿಸಿ ಬರೆದ ಲೇಖನ ಜನರಲ್ಲಿ ಪರ ವಿರೋಧದ ಗದ್ದಲವನ್ನೇ ಉಂಟುಮಾಡಿತ್ತು. ಇಂತಹ ವಿಡಂಬನ ಅಂಕಣ ಪರಂಪರೆಯನ್ನು

ಇತರ ಪತ್ರಿಕೆಗಳು ಅನುಸರಿಸಿದವು ಎಂಬುದು ಗಮನಾರ್ಹವಾದುದು. ಇಂದಿಗೂ ಇಂತಹ ವಿಡಂಬನ ಲೇಖನಗಳ ಅಂಕಣವನ್ನು ಬಹಳಷ್ಟು ಪತ್ರಿಕೆಗಳಲ್ಲಿ ಕಾಣಬಹುದಾಗಿದೆ.

ವೀರಣ್ಣಗೌಡರು ಪತ್ರಿಕೆಯಲ್ಲಿ ಪ್ರಚಲಿತ ವಿದ್ಯಾಮಾನಗಳೊಂದಿಗೆ ಅಂದಿನ ಸರ್ಕಾರದ ಲೋಪದೋಷಗಳನ್ನು ನಿರ್ಭಯವಾಗಿ ಟೀಕಿಸುತ್ತಿದ್ದರು. ಇದರಿಂದಾಗಿ ಒಕ್ಕಲಿಗರ ಸಂಘದ ಅಧ್ಯಕ್ಷರ ಮೇಲೆ ದಿವಾನರು ಒತ್ತಡ ತಂದರು. ಸರ್ಕಾರವನ್ನು ಆಶ್ರಯಿಸಿಕೊಂಡು ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದ ಅಧ್ಯಕ್ಷರು ಹೆಚ್.ಕೆ.ವೀರಣ್ಣಗೌಡರ ಮೇಲೆ ನಿರ್ಬಂಧಗಳನ್ನೇರಲು ಪ್ರಯತ್ನಿಸಿದರು. ಪತ್ರಿಕಾ ಸ್ವಾತಂತ್ರ್ಯ ಮತ್ತು ಸಂಪಾದಕನ ಜವಾಬ್ದಾರಿಯ ಬಗ್ಗೆ ಸ್ಪಷ್ಟವಾದ ಅರಿವು ಹೊಂದಿದ್ದ ಸ್ವಾಭಿಮಾನಿಯಾದ ಹೆಚ್.ಕೆ.ವೀರಣ್ಣಗೌಡರು ಅದನ್ನು ಬಲಿಕೊಡಲು ಇಚ್ಛಿಸದೆ ತಮ್ಮ ಸಂಪಾದಕ ವೃತ್ತಿಯನ್ನು ತ್ಯಜಿಸಿ ಹೊರ ನಡೆದರು. ತದನಂತರದ ವರ್ಷಗಳಲ್ಲಿ ವೀರಣ್ಣಗೌಡರಂತಹ ಸಮರ್ಥ, ವೃತ್ತಿಪರ ಶ್ರದ್ದೆಯುಳ್ಳ,ಬದ್ಧತೆಯಿಂದ ಕಾರ್ಯ ನಿರ್ವಹಿಸುವ ಸಂಪಾದಕರ್‍ಯಾರೊಬ್ಬರು ಒಕ್ಕಲಿಗರ ಪತ್ರಿಕೆಗೆ ದೊರೆಯದೇ ಹೋದರು. ಸಂಪಾದಕರಾಗಿ ಬಂದವರೆಲ್ಲಾ ಪತ್ರಿಕೆಯಲ್ಲಿ ಯಾವುದೇ ರೀತಿಯ ವಿಶೇಷತೆಗಳ ಕಡೆ ಗಮನ ಹರಿಸದೇ ಯಾಂತ್ರಿಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಸಾಗಿದರು. ಹೀಗಾಗಿ ಹೆಚ್.ಕೆ.ವೀರಣ್ಣಗೌಡರು ಸಂಪಾದಕರಾಗಿದ್ದ ಅವಧಿಯಲ್ಲಿ ತನ್ನ ಉತ್ಕರ್ಷವನ್ನು ಕಂಡಿದ್ದ ಒಕ್ಕಲಿಗರ ಪತ್ರಿಕೆಯು 1970ರ ದಶಕದಲ್ಲಿ ತನ್ನ ಅಂತ್ಯವನ್ನು ಕಂಡಿದ್ದು ವಿಷಾಧನೀಯ.

ಒಕ್ಕಲಿಗರ ಪತ್ರಿಕೆಯಿಂದ ಹೊರಬಂದ ವೀರಣ್ಣಗೌಡರು ಗ್ರಾಮಸೇವಾ ಮುದ್ರಣಾಲಯವನ್ನು ಆರಂಭಿಸಿ ಕೆಲಸ ಮಾಡುತ್ತಿದ್ದರು. ನಂತರ 1929ರ ಸುಮಾರಿಗೆ ತಮ್ಮದೇ ಆದ ಚಿತ್ರಗುಪ್ತ ಪತ್ರಿಕೆಯನ್ನು ಪ್ರಾರಂಭಿಸಿದರು. ಯಮಕಿಂಕರನಾದ ಚಿತ್ರಗುಪ್ತ ಪ್ರತಿಯೊಬ್ಬನ ಆಯುಶ್ ನಿರ್ಧರಿಸುವಲ್ಲಿ ತೋರುವ ನಿರ್ದಾಕ್ಷಿಣ್ಯತೆಯಂತೆ ತಮ್ಮ ಪತ್ರಿಕೆಯು ನಿರ್ದಾಕ್ಷಿಣ್ಯ, ನಿರ್ಭಯದಿಂದ ಸತ್ಯಸಂಧತೆಯಿಂದ ಕೂಡಿರಬೇಕೆಂಬ ವಿವೇಚನೆಯಿಂದ ಹೆಚ್.ಕೆ.ವೀರಣ್ಣಗೌಡರು ತಮ್ಮ ಪತ್ರಿಕೆಗೆ 'ಚಿತ್ರಗುಪ್ತ' ಎಂಬ ಹೆಸರಿಟ್ಟಿರಬಹುದೆನಿಸುತ್ತದೆ. ತಮ್ಮ ಸಂಕಲ್ಪಿತ ಆಲೋಚನೆಯಂತೆ ಸಾಹಸಮಯವಾಗಿ ಪತ್ರಿಕೆ ನಡೆಸಿದ್ದರಿಂದ ಅತ್ಯಲ್ಪಕಾಲದಲ್ಲಿಯೇ ಪತ್ರಿಕೆ ಜನಾದರಣೀಯವಾಯಿತು. 1929ರ ಗಣಪತಿ ಪೂಜೆಯ ವಿಚಾರವಾಗಿ ಹಿಂದೂ ಮುಸ್ಲಿಮ್ ನಡುವೆ ಗಲಭೆಯುಂಟಾಗಿ ಉಗ್ರರೂಪತಾಳಿತು. ಗಲಭೆಯ ವಿಚಾರವಾಗಿ ಸರ್ಕಾರವು ಸರ್.ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸಲ್ಲಿಸಿದ ವರದಿಯು

ಜನಪರವಾಗಿದ್ದರಿಂದ ಸರ್ಕಾರವು ಪ್ರಕಟಿಸದೆ ಮುಚ್ಚಿಟ್ಟಿತು. ಈ ವರದಿಯನ್ನು ಹೇಗಾದರೂ ಮಾಡಿ ಜನರಿಗೆ ತಲುಪಿಸಬೇಕೆಂಬ ಬಯಕೆಯಿಂದ ಗೌಡರು ಸಾಹಸಮಯವಾಗಿ ಆ ವರದಿಯನ್ನು ಪತ್ತೆ ಮಾಡಿ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಯಶಸ್ವಿಯಾದರು. ಅಂದಿನ ಸಂದರ್ಭದಲ್ಲಿ ಯಾವ ಪತ್ರಿಕೆಗಳೂ ಸರ್ಕಾರವನ್ನು ಎದುರಿಸಿ ಇಂತಹ ಸಾಹಸಕ್ಕೆ ಮುಂದಾಗುತ್ತಿರಲಿಲ್ಲ. ಆಳುವ ಸರ್ಕಾರದ ವಿರುದ್ಧವಾದವರ ಉಳಿವು ಕಷ್ಟವಾಗಿದ್ದ ಸಮಯ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹೆಚ್.ಕೆ.ವೀರಣ್ಣಗೌಡರ ಈ ತನಿಖಾ ಕಾರ್ಯ ಪತ್ರಿಕಾ ಇತಿಹಾಸದಲ್ಲಿ ತನಿಖಾ ವರದಿಗಳ ಪರಂಪರೆಯ ಆರಂಭಕ್ಕೆ ಕಾರಣಕರ್ತರನ್ನಾಗಿ ಮಾಡಿತು. ಹೆಚ್.ಕೆ.ವೀರಣ್ಣಗೌಡರಿಗೆ ಅಂದಿನ ಪ್ರಭುತ್ವದ ವ್ಯವಸ್ಥೆಯಲ್ಲಿನ ಕುಂದುಕೊರತೆಗಳ ಬಗ್ಗೆ ಆಕ್ರೋಶವಿತ್ತೇ ಹೊರತು ವ್ಯವಸ್ಥೆಯ ಬಗ್ಗೆ ಒಲವು ಮತ್ತು ಗೌರವವಿತ್ತು. ಸರ್ಕಾರದ ಟೀಕೆ ಟಿಪ್ಪಣಿಗಳ ಮಾಡುತ್ತಿದ್ದ ಪತ್ರಿಕೆಯ ವಿರುದ್ಧ ಉಗ್ರರಾಗಿದ್ದ ದಿವಾನರು ಹೇಗಾದರೂ ಮಾಡಿ ವೀರಣ್ಣಗೌಡರನ್ನು ತಮ್ಮ ಕಡೆ ಒಲಿಸಿಕೊಳ್ಳಲು ನಾನಾ ಪ್ರಯತ್ನಗಳನ್ನು ಮಾಡಿದರು. ತಮ್ಮನ್ನು ಬಂದು ಕಾಣುವಂತೆ ಹೇಳಿದರು. ಆದರೆ ತಮ್ಮ ಆತ್ಮಸ್ವಾಭಿಮಾನಕ್ಕೆ ಮತ್ತು ತನ್ನ ಧ್ಯೇಯೋದ್ದೇಶಗಳಿಗೆ ಧಕ್ಕೆಯುಂಟಾಗಬಹುದೆಂಬ ಕಾರಣದಿಂದ ವೀರಣ್ಣಗೌಡರು ದಿವಾನರ ಕಡೆ ತಿರುಗಿ ಸಹ ನೋಡದೆ ಹೋದರು. ಇದರಿಂದ ದಿವಾನರ ಕಿರುಕೂಳ ಮತ್ತಷ್ಟು ಹೆಚ್ಚುತ್ತಲೇ ಹೋಯಿತು.

ನಿಷ್ಠಾವಂತ ದೇಶಾಭಿಮಾನಿಗಳಾದ ಹೋರಾಟಗಾರರೆಲ್ಲರಿಗೆ ವೀರಣ್ಣಗೌಡರು ತಮ್ಮ ಪತ್ರಿಕೆಯ ಮೂಲಕ ಪ್ರೋತ್ಸಾಹ ನೀಡುತ್ತಿದ್ದಂತೆ ಹೊಸಕೊಪ್ಪ ಕೃಷ್ಣರಾಯರ ಭಾಷಣವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇದರಿಂದ ಚಿತ್ರಗುಪ್ತ ಪತ್ರಿಕೆಯ ಹಣಕಾಸು ವ್ಯವಸ್ಥೆಗೆ ಸಹಾಯಹಸ್ತ ನೀಡುತ್ತಿದ್ದ ಬ್ರಾಹ್ಮಣೇತರ ಪಕ್ಷದವರಾದ ನೀಲಗಿರಿ ಸಂಜೀವಯ್ಯನವರು ಕೃಷ್ಣರಾಯರು ಬ್ರಾಹ್ಮಣರೆಂಬ ಕಾರಣಕ್ಕಾಗಿ ಗೌಡರು ಅವರ ಭಾಷಣವನ್ನು ಪ್ರಕಟಿಸಿದ್ದು ಸರಿಯಲ್ಲವೆಂದು ಭಾವಿಸಿ ಪತ್ರಿಕೆಗೆ ನೀಡುತ್ತಿದ್ದ ಸಹಾಯವನ್ನು ನಿಲ್ಲಿಸಿದರು. ಹೀಗೆ ಚಿತ್ರಗುಪ್ತ ಪತ್ರಿಕೆಯ ಮೇಲಿನ ಸರ್ಕಾರದ ವಕ್ರದೃಷ್ಟಿ ಮತ್ತು ಸ್ನೇಹಿತರ ಅಸಹಕಾರದಿಂದ ಗೌಡರು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ತಮ್ಮ ಪತ್ರಿಕೆಯನ್ನು ನಿಲ್ಲಿಸಬೇಕಾದ ಸಂದರ್ಭ ಎದುರಾಯಿತು. ಇಂತಹ ಸಂದರ್ಭದಲ್ಲೂ ವೀರಣ್ಣಗೌಡರು ಯಾವುದೇ ಕಾರಣಕ್ಕೂ ತಮ್ಮ ಸ್ವಾಭಿಮಾನ ಬಿಟ್ಟುಕೊಡದೆ ಸರ್ಕಾರಕ್ಕೆ ಮಣಿಯದೇ ತಮ್ಮ ಎದೆಗಾರಿಕೆಯನ್ನು ತೋರಿದ್ದು ಗಮನಾರ್ಹವಾದುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂದು ಇಂತಹ ಅನೇಕ ನಿರ್ಭೀತ ಪತ್ರಿಕೆಗಳು ನಮ್ಮ ಮಧ್ಯೆ ಇರಬಹುದು. ಆದರೆ ಪರಕೀಯರ ಆಳ್ವಿಕೆ ಇದ್ದಂತಹ ಸಂದರ್ಭದಲ್ಲಿ ಯಾವ ರಾಜಕೀಯ

ವಶೀಲಿಯೂ ಇಲ್ಲದೆ ನಿರ್ಭೀತ, ನಿರ್ದಾಕ್ಷಿಣ್ಯವಾಗಿ ಪತ್ರಿಕೆ ನಡೆಸಿದ್ದು ವೀರಣ್ಣಗೌಡರ ಎದೆಗಾರಿಕೆಯನ್ನು ತೋರ್ಪಡಿಸುತ್ತದೆ.

ಹೆಚ್.ಕೆ.ವೀರಣ್ಣಗೌಡರಿಗೂ ಪತ್ರಿಕಾರಂಗಕ್ಕೂ ಬಿಡಿಸಲಾಗದ ಸಂಬಂಧ. ವಿಶಿಷ್ಟ ಶೈಲಿಯ ವೀರ ಅಭಿವ್ಯಕ್ತಿಯ ಜನಪ್ರಿಯ ದಿನ ಪತ್ರಿಕೆಯಾಗಿದ್ದ 'ಚಿತ್ರಗುಪ್ತವನ್ನು ಸಾಲ ಸೋಲಗಳಿಂದ ನಿಲ್ಲಿಸಿದರೂ ಪತ್ರಿಕಾ ಸಂಬಂಧ ಕಡಿದು ಹೋಗಲಿಲ್ಲ. 1949ರಲ್ಲಿ "ವಾರ್ತಾ"ಎಂಬ ಸಂಜೆ ದಿನಪತ್ರಿಕೆಗೆ ಸಂಪಾದಕರಾಗಿ ಸುಮಾರು 2 ವರ್ಷ ನಡೆಸಿದರು. ಅದು ಕಂಪನಿಯೊಂದರ ಪತ್ರಿಕೆ. ಜವಾಬ್ದಾರಿ ಸರ್ಕಾರ ಸ್ಥಾಪಿಸುವ ನಿಟ್ಟಿನಲ್ಲಿ ತನ್ಮೂಲಕ ಜನಜಾಗೃತಿ ಮೂಡಿಸಲು ಕಾಂಗ್ರೆಸ್‌ನ ಧ್ಯೇಯ ಧೋರಣೆಗಳನ್ನು ಪ್ರಚಾರ ಪಡಿಸುವುದು, ರಾಷ್ಟ್ರೀಯ ಭಾವನೆಗಳನ್ನು ಬಿತ್ತುವುದು, ಜವಾಬ್ದಾರಿ ಸರ್ಕಾರ ಲಭ್ಯವಾಗುವವರೆಗೆ ನಿರಂತರವಾಗಿ ಹೋರಾಡುವುದು ವಾರ್ತಾ ಪತ್ರಿಕೆಯ ಉದ್ದೇಶವಾಗಿತ್ತು. ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಜೋರಾದಂತೆ 'ವಾರ್ತಾ' ಪತ್ರಿಕೆಯ ಮೇಲೆ ಸರ್ಕಾರದ ಕ್ರೂರ ದೃಷ್ಟಿ ಬಿತ್ತು. ಸಂಪಾದಕರಾದ ವೀರಣ್ಣಗೌಡರನ್ನು ದಸ್ತಗಿರಿ ಮಾಡಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇಟ್ಟರು. ಆದರೆ ಸರ್ಕಾರದ ದಮನಕಾರಿ ನೀತಿಗೆ ಬೆದರದ ವೀರಣ್ಣಗೌಡರು ಆರ್ಥಿಕ ಮುಗ್ಗಟ್ಟಿನಲ್ಲಿಯೂ ಪತ್ರಿಕೆಯನ್ನು ನಡೆಸಿದರು. ಕೊನೆಗೆ ಮುದ್ರಣದ ಪೇಪರ್ ಕೊಳ್ಳಲೂ ಆಗದೇ ಹೋದಾಗ ಪತ್ರಿಕೆಯನ್ನು ನಿಲ್ಲಿಸಿದರು. ಹೀಗೆ ಸಮಾಜ ಸೇವೆಯ ಸ್ಪಷ್ಟವಾದ ಗುರಿಯನ್ನಿಟ್ಟುಕೊಂಡು ವೀರಣ್ಣಗೌಡರು ಪತ್ರಿಕಾರಂಗದಲ್ಲಿ ಕೆಲಸ ಮಾಡಿದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯಾಗ್ರಹಿಗಳು ಎಷ್ಟು ಮುಖ್ಯವೋ ಪತ್ರಿಕೆಗಳೂ ಅಷ್ಟೇ ಮುಖ್ಯ ಎನ್ನುವುದನ್ನು ವೀರಣ್ಣಗೌಡರು ತೋರಿಸಿ ಕೊಟ್ಟರು. ಹಾಗಾಗಿ ವೀರಣ್ಣಗೌಡರು ತಮ್ಮ ಪತ್ರಿಕಾ ಸಂಪಾದಕೀಯಗಳಿಗೆ ಹೆಚ್ಚು ಗಮನಕೊಡುತ್ತಿದ್ದರು. ತನ್ಮಯತೆಯಿಂದ ಬರೆಯುತ್ತಿದ್ದರು. ಅವುಗಳಲ್ಲಿ ಆತ್ಮವಿಶ್ವಾಸ, ನಿರ್ಭಯ, ವಿಷಯ ಬಾಹುಳ್ಯ, ವಿವೇಚನಾ ತೀಕ್ಷ್ಣತೆ, ಬಹುಜನ ಮನದ ಇಂಗಿತ, ಸಮಾಜದ ಸ್ವಾಸ್ಥ್ಯ, ಜನರ ಏಳಿಗೆ ಪ್ರಧಾನವಾಗಿರುತ್ತಿದ್ದವು. ಬರೆಯುವುದನ್ನು ಸ್ಫುಟವಾಗಿ, ಅಸ್ಖಲಿತವಾಗಿ ಬರೆಯುತ್ತಿದ್ದರು. ಬರೆದ ಮೇಲೆ ತಿದ್ದುವುದು, ಬದಲಾಯಿಸಿ ಬರೆಯುವುದೂ ಮಾಡದೆ ಅತ್ಯಂತ ಏಕಾಗ್ರವಾಗಿ, ಪ್ರಜ್ಞಾಪೂರ್ವಕವಾಗಿ ಬರೆಯುತ್ತಿದ್ದರು. ಅವರ ಮನದಾಳದಿಂದ ಮೂಡಿಬಂದ ಸಂಪಾದಕೀಯಗಳು ನೇರವಾಗಿ, ಸರಳವಾಗಿ, ಸ್ಪಷ್ಟವಾಗಿ ಅಭಿವ್ಯಕ್ತಿಗೊಂಡು ಓದುಗರನ್ನು ತಲುಪುತ್ತಿದ್ದವು. ಆಗ ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಕನ್ನಡ ಪತ್ರಿಕೆಗಳಲ್ಲಿ ಗಮನಿಸಲೇಬೇಕಾದಂತಹ ಸಂಪಾದಕೀಯಗಳಲ್ಲಿ ವೀರಣ್ಣಗೌಡರ ಸಂಪಾದಕೀಯಗಳು ಆದರ್ಶಪ್ರಾಯವಾಗಿದ್ದವು ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಶಿಕ್ಷಕರಾಗಿ, ಪತ್ರಿಕೋದ್ಯಮಿಯಾಗಿ ಹೆಚ್.ಕೆ.ವೀರಣ್ಣಗೌಡರು ಸಾಮಾಜಿಕ ಸೇವೆಯನ್ನು ನಿರ್ವಂಚನೆಯಿಂದ ಮಾಡಿದಂತೆ ಅವರೊಬ್ಬ ಸಾಹಿತಿಯಾಗಿಯೂ ತಮ್ಮ ಬರಹಗಳಲ್ಲಿ ದೇಶಭಕ್ತಿ, ಸಾಮಾಜಿಕ ಕಾಳಜಿಗಳನ್ನು, ಪ್ರಗತಿಗಾಮಿಯ ಅಂಶಗಳಿಗೆ ಹೆಚ್ಚು ಆದ್ಯತೆ ನೀಡಿರುವುದು ಕಂಡು ಬರುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಇವರ ಲೇಖನಗಳಲ್ಲಿ ಸಾಹಿತ್ಯಾಂಶ ಇರುತ್ತಿತ್ತಾದರೂ ವೈಚಾರಿಕ ಚಿಂತನೆಗೆ ಹೆಚ್ಚು ಇವರು ಆದ್ಯತೆ ಕೊಡುತ್ತಿದ್ದರು. ವಿವಿಧ ವಸ್ತು ವಿಷಯಗಳಿಗೆ. ಸಂಬಂಧಿಸಿದ ಗ್ರಂಥಗಳನ್ನು ಇವರು ಸಾಕಷ್ಟು ಓದುತ್ತಿದ್ದ ಕಾರಣ ಲೋಕಜ್ಞಾನ ಚೆನ್ನಾಗಿತ್ತು. ಈ ಲೋಕಜ್ಞಾನ ದೊಂದಿಗೆ ತಮ್ಮ ಸೃಜನಶೀಲತೆಯನ್ನು ಮೇಳೈಸಿಕೊಂಡು ನಾಟಕ, ಕಥೆ, ಪ್ರಬಂಧಗಳನ್ನು ಬರೆಯುವ ಪ್ರವೃತ್ತಿಯನ್ನು ಬಳಸಿಕೊಂಡದ್ದು ಸಹಜವಾಗಿತ್ತು.

ಗೌಡರು ಮಾಸ್ತಿ, ಡಿ.ವಿ.ಜಿ., ಕುವೆಂಪು ಮುಂತಾದ ಸಾಹಿತಿಗಳ ಬಗ್ಗೆ ಅಭಿಮಾನ ಮತ್ತುಮೆಚ್ಚುಗೆ ಹೊಂದಿದ್ದರು. ಈ ಸಾಹಿತಿಗಳ ಸಾಹಿತ್ಯದ ಬಗ್ಗೆ ಹೆಚ್ಚು ಆಕರ್ಷಿತರಾಗಿದ್ದರು. ಹೀಗೆ ಸಾಹಿತಿಗಳ ಒಡನಾಟದಿಂದ ಮದ್ದೂರಿನ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾದ 'ಇಕ್ಷುಗಂಗ' ಹೊತ್ತಿಗೆಗೆ 'ಪ್ರಗತಿಶೀಲ ಮಂಡ್ಯಜಿಲ್ಲೆ' ಎಂಬ ವಿಶೇಷ ಲೇಖನವನ್ನು ಬರೆದುಕೊಟ್ಟಿದ್ದರು. ಹಾಗೆಯೇ ಒಕ್ಕಲಿಗರ ಪತ್ರಿಕೆಯ ವಿಶೇಷ ವಾರ್ಷಿಕ ಸಂಚಿಕೆಯಲ್ಲಿ ಇವರು ಪ್ರಕಟಿಸಿದ ಕೆಲವು ಲೇಖನಗಳು, ಕವನ, ನಾಟಕ, ಕತೆ ಇತ್ಯಾದಿ ಇವರ ಸಾಹಿತ್ಯಾಸಕ್ತಿಯನ್ನು ಪರಿಚಯಿಸುತ್ತವೆ. ಇವೆಲ್ಲವನ್ನು ಗಮನಿಸಿದಾಗ ಇವರ ಪ್ರಕಾರ ಸಾಹಿತ್ಯವೆಂಬುದು ಕೇವಲ ಮನರಂಜನೆಗೆ ಅಲ್ಲ, ಸೌಂದರ್ಯದ ಅನಾವರಣಕ್ಕಾಗಿಯೂ ಅಲ್ಲ, ಅದು ಒಂದು ಉದ್ದೇಶಕ್ಕಾಗಿ ಎಂಬ ತತ್ವವನ್ನು ಅರಿತವರಂತೆ ಹೆಚ್.ಕೆ.ವೀರಣ್ಣಗೌಡರ ಬರಹಗಳು ಚಿಂತನಶೀಲ ಸಾಹಿತ್ಯವೆನಿಸುವಂತಹವು. ಸಾಹಿತಿಗಿರಬೇಕಾದ ಸಾಮಾಜಿಕ ಜವಾಬ್ದಾರಿ ಇವರಿಗಿತ್ತು.

ಸಾಹಿತ್ಯವೆಂದರೆ ಸಮಸ್ತ ಸಂಗತಿಗಳನ್ನು ಒಳಗೊಳ್ಳುವಂತಹದು ಎಂದಾಗುತ್ತದೆ. ಸಾಹಿತಿಯಾದವ ತನ್ನ ಅನುಭವಕ್ಕೆ ನಿಲುಕದ ಸಂಗತಿಯನ್ನು ಹೇಳುವ ವಿಧಾನ ವಿಶಿಷ್ಟವಾದುದಾಗಿರುತ್ತದೆ. ಇಲ್ಲಿ ಭಾಷೆಯ ಕಲಾತ್ಮಕವಾದ ಬಳಕೆ ರಸಾನುಭೂತಿಗೆ ಕಾರಣವಾಗುತ್ತದೆ. ಪ್ರತಿಭೆಯಿದ್ದವ ಮಾತ್ರ ಇಂತಹವುದನ್ನು ರಚಿಸಬಲ್ಲ. ಹಾಗೇ ಹೊಸ ವಿಚಾರ ಶಕ್ತಿ ಓದುಗನಲ್ಲಿ ಸಂಚಯಿಸುವಂತೆ ಮಾಡಬಲ್ಲ. ಇವೆಲ್ಲವು ಸಾಹಿತ್ಯಕ್ಕಿರುವ ಸಾಧ್ಯತೆಗಳು. ಹಾಗಾಗಿ ವೀರಣ್ಣಗೌಡರು ರಚಿಸಿರುವ ನಾಟಕಗಳಲ್ಲಿ 'ಶಿವಾಜಿ ವಿಜಯ' ಒಂದು. ಶಿವಾಜಿ ಒಬ್ಬ ಅಪ್ರತಿಮ ದೇಶ ಭಕ್ತ, ಪರಕೀಯರ ಅದಿಪತ್ಯಕ್ಕೆ ನಾಡನ್ನು ಒಪ್ಪಿಸಬಾರದೆಂದು ಅಹರ್ನಿಶಿ

ಹೆಣಗಿದ ವ್ಯಕ್ತಿ. ದೇಸೀಯ ಪ್ರಜ್ಞೆ ಇತನಲ್ಲಿ ಸದಾ ಜಾಗೃತವಾಗಿರುತ್ತಿತ್ತು. ದೇಸೀಯವಾದ ರೈತ ಚಳುವಳಿಗಳನ್ನು ಹುಟ್ಟಿ ಹಾಕಿ ಸರ್ಕಾರದ ಅನ್ಯಾಯಗಳನ್ನು ವಿರೋಧಿಸಿ ಧೈರ್ಯದಿಂದ ಪ್ರತಿಭಟಿಸಿ ನ್ಯಾಯಕ್ಕಾಗಿ ಹೋರಾಟ ಮಾಡಿದವರು. ಈ ಕಾರಣದಿಂದಾಗಿಯೇ ಶಿವಾಜಿಯಂತಹ ಅಪ್ರತಿಮ ದೇಶಭಕ್ತ ವೀರಣ್ಣಗೌಡರಿಗೆ ಇಷ್ಟವಾಗಿ ಆತನ ಮೌಲ್ಯ, ಆತನ ಆಲೋಚನಾ ವಿಧಾನ, ಕಾರ್ಯತಂತ್ರಗಳನ್ನು ವಿವರಿಸಲು ಸಾಧ್ಯವಾಗುವಂತೆ ನಾಟಕದಲ್ಲಿ ಅದನ್ನು ನಿರ್ವಹಿಸಿದ್ದಾರೆ. ನಾಟಕ ಪ್ರಕಾರದಲ್ಲಿ ಬಳಕೆಗೊಳ್ಳುವ ಶೈಲಿ ಸಂಭಾಷಣಾಯುಕ್ತವಾದುದು. ಎಲ್ಲಿಯೂ ನೀರಸ ಎನಿಸದಂತೆ ಕೃತಕವಾಗದಂತೆ ಸಹಜವೆನಿಸುವಂತೆ ಓದುಗನ ಮುಂದೆ ದೃಶ್ಯವನ್ನು ಕಟ್ಟಿಕೊಡುವುದರಲ್ಲಿ ಗೌಡರ ಪ್ರಯತ್ನ ವಿಶಿಷ್ಟವಾದುದು. ನಾಟಕದ ಆವರಣದೊಳಗೆ ಓದುಗ/ಪ್ರೇಕ್ಷಕನನ್ನೇ ಪ್ರೇರೇಪಿಸುವಂತೆ ಮಾಡಿ ಅಲ್ಲಿಯೇ ಹಿಡಿದಿಡುವುದರಲ್ಲಿ ನಾಟಕಕಾರನ ಸಾಮರ್ಥ್ಯ ಅಡಗಿರುತ್ತದೆ. ಪ್ರತಿಭೆ ಇರುವ ನಾಟಕಕಾರ ಮಾತ್ರ ಇದನ್ನು ಸಾಧ್ಯವಾಗಿಸಬಲ್ಲ. ಹೆಚ್.ಕೆ.ವೀರಣ್ಣಗೌಡರು ಇಂತಹ ಪ್ರತಿಭೆಯನ್ನು ಪಡೆದಿದ್ದರೆಂಬುದೊಂದು ವಿಶೇಷವಾದ ಸಂಗತಿ.

ಹಾಗೆಯೇ ಸ್ವತಃ ಮೌಲ್ಯಯುತ ಜೀವನವನ್ನಪ್ಪಿಕೊಂಡಿದ್ದ, ಮೌಲ್ಯಾಧಾರಿತ ರಾಜಕಾರಣ ಮಾಡುತ್ತಿದ್ದ ಜನಪರ ಕಾಳಜಿ ಇದ್ದ ಹೆಚ್.ಕೆ.ವೀರಣ್ಣಗೌಡರು ಬುದ್ಧನ ತತ್ವಗಳಿಂದ ಪ್ರಭಾವಿತರಾದದ್ದರಲ್ಲಿ ಆಶ್ಚರ್ಯವಿಲ್ಲ. ಹಾಗಾಗಿ ಬುದ್ಧದೇವ ನಾಟಕವನ್ನು ರಚಿಸಿದರು. ಜಗತ್ತು ಕಂಡ ಒಬ್ಬ ಶ್ರೇಷ್ಠ ಮಾನವತಾವಾದಿ ಬುದ್ಧ. ಜನರ ತಲ್ಲಣ, ನೋವುಗಳಿಗೆ ಮರುಗಿದ, ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಲು ಪ್ರಯತ್ನಿಸಿದ ಸಹೃದಯಿ. ಆತನ ವಿಚಾರಧಾರೆ ಜನಮನವನ್ನು ತಲುಪಲಿ ಎಂಬ ಉದ್ದೇಶ ಕಾರಣವಾಗಿಯೇ ಗೌಡರು ಬುದ್ಧನನ್ನು ಕುರಿತಾದ ನಾಟಕ ಬರೆದಿರಬಹುದೆನಿಸುತ್ತದೆ. ಇನ್ನು ಗೌಡರು ರಚಿಸಿದ 'ಭೂತದ ಭಯ' ಒಂದು ಶುದ್ಧ ವೈಚಾರಿಕ ಮನಸ್ಸಿನ ಆಲೋಚನೆಯಿಂದ ಕಟ್ಟಿದ ಕತೆಯಾಗಿದೆ. ಭೂತ ಪ್ರೇತದ ಹೆಸರಿನಲ್ಲಿ ಮುಗ್ಧ ಜನರಲ್ಲಿ ಭಯವನ್ನೇ ಭಿತ್ತಿ ಅವರ ಅಜ್ಞಾನ ಮೌಢ್ಯದ ದುರ್ಬಳಕೆ ಮಾಡಿಕೊಂಡು ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುವ ದುರುಳರ ಚಿತ್ರಣವನ್ನೇ ಈ ಕತೆಯಲ್ಲಿ ಹೆಚ್.ಕೆ.ವೀರಣ್ಣಗೌಡರು ಕಟ್ಟಿಕೊಡುತ್ತಾರೆ. ಮಾಯಮಂತ್ರ, ತಂತ್ರ–ಮಾಟಗಳ ಹೆಸರಿನಿಂದ ಜನರಲ್ಲಿ ಭಯ ಭಿತ್ತಿ ತಮ್ಮ ಕಾರ್ಯಸಾಧನೆ ಮಾಡುವುದು ಗ್ರಾಮೀಣ ಪರಿಸರದಲ್ಲಿ ಸಾಮಾನ್ಯ. ಬಹುಶಃ ಹೀಗೆ ತಾವು ಕಂಡ ಘಟನೆಗಳೇ ಅವರಿಗೆ ಈ ಬಗೆಯ ಕತೆ ರಚಿಸಲು ಪ್ರೇರಣೆ ಒದಗಿಸಿರಬಹುದು. ಈ ಮೂಲಕ ಜನರ ಅಜ್ಞಾನ ನಿವಾರಿಸಿ ಅಲ್ಲಿ ಆರೋಗ್ಯಕರವಾದ ಚಿಂತನೆಗಳನ್ನು ಬೆಳೆಸಲು ಈ ಕತೆಯನ್ನು

ಹೆಚ್.ಕೆ.ವೀರಣ್ಣಗೌಡರು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಸೃಜನಶೀಲ ಸಾಹಿತಿಯೊಬ್ಬ ತನ್ನ ಸುತ್ತಣ ಜಗತ್ತಿನಲ್ಲಿ ತಾನು ಪಡೆಯುವ ಅನುಭವಗಳನ್ನೇ ಬಳಸಿಕೊಂಡು ಮತ್ತೆ ಆ ಜಗತ್ತಿಗೆ ವೈಚಾರಿಕವಾಗಿ ಆಲೋಚಿಸಬಲ್ಲಂತಹ ತಿಳುವಳಿಕೆಯನ್ನು ತನ್ನ ಬರಹದ ಮೂಲಕ ನೀಡಬಲ್ಲನೆಂಬುದಕ್ಕೆ ಈ ಕತೆ ಉದಾಹರಣೆಯಾಗುತ್ತದೆ.

ವಿವಾಹದ ನಂತರ ಮದ್ದೂರಿನ ತಮ್ಮ ಮಾವನವರ ಮನೆಯಲ್ಲಿ ಕೆಲವು ಕಾಲ ಇದ್ದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ನಡೆದ ವಿದ್ಯಾಮಾನಗಳು ಗೌಡರಿಗೆ ಮದ್ದೂರು ತಮ್ಮ ಭವಿಷ್ಯದ ಕಾರ್ಯಕ್ಷೇತ್ರವಾಗಿ ಮಾರ್ಪಡಲು ಕಾರಣವಾಯಿತೆನ್ನಬಹುದು. ಕ್ರಾಂತಿಕಾರಕ ಮನೋಭಾವನೆಯಿಂದ ಪತ್ರಿಕೆಯ ಮೂಲಕ ಆಳುವ ವರ್ಗದ ಶೋಷಣೆಯ ವಿರುದ್ಧ ಶ್ರಮಿಕ ವರ್ಗದ ಪರವಾಗಿ ಹೋರಾಟ ಮಾಡುತ್ತಿದ್ದ ವೀರಣ್ಣಗೌಡರನ್ನು ಮದ್ದೂರು ರೈತ ಮಿತ್ರರು ಗುರುತಿಸಿದರು. ಈ ವೇಳೆಗಾಗಲೇ ಕೃಷ್ಣರಾಜ ಸಾಗರ ಅಣೆಕಟ್ಟೆಯಿಂದ ರೈತರ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ನಿರ್ಮಿಸಿದ ಮೂರು ನಾಲೆಗಳಲ್ಲಿ ಇರ್ವಿನ್ ನಾಲೆ ಪ್ರಮುಖವಾದುದು. ಈ ಪ್ರದೇಶದ ರೈತರಿಗೆ ಸರ್ಕಾರ ಕಂದಾಯದ ಜೊತೆಗೆ ಕಾಂಟ್ರಿಬ್ಯೂಷನ್ ಶುಲ್ಕವನ್ನು ಹಾಕಿದ್ದರು. ಅಲ್ಲದೆ ಬ್ಲಾಕ್ ಸಿಸ್ಟಂ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು. ಇದು ರೈತರಿಗೆ ಹೆಚ್ಚಿನ ಹೊರೆಯಾಗಿ ಮತ್ತು ತೊಂದರೆಯಾಗಿ ಪರಿಣಮಿಸಿತ್ತು. ರೈತರಿಗೆ ಒದಗಿದ ಈ ಕಷ್ಟವನ್ನು ನಿವಾರಣೆ ಮಾಡುವ ಸಲುವಾಗಿ ರೈತ ಮುಖಂಡರಾದ ಹೆಚ್.ಹೊನ್ನಯ್ಯ ಮತ್ತು ಕೆ.ಪುಟ್ಟಣ್ಣನವರು ಹೆಚ್.ಕೆ.ವೀರಣ್ಣಗೌಡರನ್ನು ಸಂಪರ್ಕಿಸಿದರು. ನೇಗಿಲಯೋಗಿಯ ನಿಸ್ಪೃಹವಾದ ಸೇವೆಯಿಂದ ದೇಶ ಅನ್ನವನ್ನು ಪಡೆದರೂ ಅವನನ್ನು ಸರ್ಕಾರ ಕಡೆಗಣಿಸುತ್ತಿರುವ ಬಗ್ಗೆ ಗೌಡರಿಗೆ ವಿಷಾದವಿತ್ತು, ನೋವಿತ್ತು. ತಮ್ಮ ಪತ್ರಿಕಾ ಚಟುವಟಿಕೆಯಿಂದ ಸರ್ಕಾರದ ವಕ್ರದೃಷ್ಟಿಗೆ ಬಿದ್ದಿದ್ದ ಗೌಡರು ತನ್ನ ನಿಮಿತ್ತವಾಗಿ ರೈತರಿಗೆ ಅನ್ಯಾಯ ಆಗಬಹುದೆಂದು ಪರಿಗಣಿಸಿ ಮೊದಲಿಗೆ ರೈತರ ಮುಖಂಡತ್ವ ವಹಿಸಲು ನಿರಾಕರಿಸಿದರು. ಆದರೆ ಮಿತ್ರರ ವಿಷಯದ ಗಂಭೀರತೆಯನ್ನು ಅರಿತ ವೀರಣ್ಣಗೌಡರು ತಾನು ಒಬ್ಬ ರೈತ ಕುಟುಂಬದಿಂದ ಬಂದವನೇ ಎಂದು, ತಾನು ಸ್ಥಳೀಯನಲ್ಲದಿದ್ದರೂ ರೈತ ಎಲ್ಲಿದ್ದರೂ ರೈತನೇ ಆದಕಾರಣ ಅವರ ಹಿತರಕ್ಷಣೆಗೆ ಮುಂದಾಗುವುದು ತನ್ನ ಕರ್ತವ್ಯವೆಂದು ಮುನ್ನಡಿಯಿಟ್ಟರು. ಶಿಸ್ತಿನ ಸಿಪಾಯಿಯಾದ ವೀರಣ್ಣಗೌಡರು ಚಳುವಳಿ ರೂಪಿಸುವುದಕ್ಕೆ ಪೂರ್ವಭಾವಿಯಾಗಿ ಹಲವಾರು ಕರಾರುವಕ್ಕಾದ ವಿಷಯ ಸಂಗ್ರಹಣೆಗೆ ಮುಂದಾದರು. ನಂತರ ಇದರ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಿ ಅವರ ಬೆಂಬಲವನ್ನು ಪಡೆದುಕೊಂಡು ನಂತರದಲ್ಲಿ ಜಾಥಾವನ್ನು

ಸಂಘಟಿಸಿದರು. ಇಲ್ಲಿ ವಿರೋಧಿಗಳ ಯಾವುದೇ ಆಪಾದನೆಗಳಿಗೆ ಎಡೆಕೊಡದಂತೆ ಮುನ್ನೆಚ್ಚರಿಕೆಯನ್ನು ವಹಿಸಿದರು. ಸರ್ಕಾರ ವೀರಣ್ಣಗೌಡರನ್ನು ಚಳುವಳಿಗಾರನೆಂದು ಮೊದಲೇ ಅವರ ಪತ್ರಿಕಾ ಕಾರ್ಯದಿಂದ ನಿರ್ಧರಿಸಿದ್ದರಿಂದ ಅವರು ಸಂಘಟಿಸುವ ಜಾಥಾವನ್ನು ಹೇಗಾದರೂ ಮಾಡಿ ಚದುರಿಸಬೇಕೆಂದು ನಿರ್ಧರಿಸಿತ್ತು. ಹಾಗಾಗಿ ಪೋಲೀಸರಿಂದ ಬೆದರಿಸುವ ಹುನ್ನಾರ ಮಾಡಿತ್ತು. ಆದರೆ ಸಫಲವಾಗಲಿಲ್ಲ. ವೀರಣ್ಣಗೌಡರು ಶಿಸ್ತು ಅರಿಯದ ಮಣ್ಣಿನ ಮಕ್ಕಳನ್ನು ಶಿಸ್ತುಬದ್ಧವಾಗಿ ಒಂದೆಡೆ ಸೇರಿಸಲು ಬಹಳ ಪ್ರಯಾಸ ಪಡಬೇಕಾಯಿತು. ದಾರಿಯಲ್ಲಿ ಯಾವುದೇ ರೀತಿಯ ತೊಂದರೆಗಳು ತಲೆದೋರದಿರಲೆಂದು ಸುವ್ಯವಸ್ಥಿತವಾಗಿ ಅವಶ್ಯಕ ಸಾಮಗ್ರಿಗಳನ್ನು ಕೊಂಡೊಯ್ಯುವುದು ಸೂಕ್ತವೆಂದು ಮನಗಂಡರು. ಈ ರೀತಿಯಾಗಿ ನಾಲ್ಕು ಸಾವಿರ ರೈತರನ್ನು ಮದ್ದೂರಿನಿಂದ ಬೆಂಗಳೂರಿನೆಡೆಗೆ ಅಹಿಂಸಾತ್ಮಕವಾಗಿ ಶಾಂತ ರೀತಿಯಲ್ಲಿ ಕರೆತರುತ್ತಿದ್ದನ್ನು ಕೇಳಿದ ದಿವಾನರು ದಾರಿಯಲ್ಲಿ ಯಾವುದೇ ತೊಂದರೆಯಾಗದಂತೆ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದರು. ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ವೀರಣ್ಣಗೌಡರು ಈ ಜಾಥಾವನ್ನು ಅಹಿಂಸಾ ತತ್ವಗಳ ಆಧಾರದ ಮೇಲೆ ಸುವ್ಯವಸ್ಥಿತವಾಗಿ ರೂಪಿಸಿ ನಿಭಾಯಿಸಿದರು. ದಿವಾನರ ಬಳಿ ಬಂದ ರೈತರ ದಂಡು ಶಾಂತ ರೀತಿಯಲ್ಲಿ ಅಠಾರ ಕಛೇರಿಯ ಮುಂದೆ ಸೇರಿತು. ರೈತ ಮುಖಂಡರನ್ನು ದಿವಾನರು ಬರ ಹೇಳಿದರು. ಆದರೆ ಹೆಚ್.ಕೆ.ವೀರಣ್ಣಗೌಡರು ಇಲ್ಲಿ ಯಾರೂ ರೈತ ಮುಖಂಡರಿಲ್ಲ, ನಾವೆಲ್ಲರೂ ರೈತರು 'ತಾವು ರೈತರ ಬಳಿಗೆ ಬನ್ನಿ' ಎಂದರು. ಈ ಸನ್ನಿವೇಶವನ್ನು ಗೌಡರು ತಮ್ಮ ಲಾಭಕ್ಕಾಗಿ ಬಳಸಿಕೊಂಡು ರಾಜಕೀಯ ದೂರದೃಷ್ಟಿತನದಿಂದ ಮುಖಂಡರಾಗಿ ಬಿಂಬಿಸಲ್ಪಡಬಹುದಿತ್ತು. ಆದರೆ ಜನಸೇವೆಯನ್ನೇ ಮನಸ್ಸಿನಲ್ಲಿಟ್ಟುಕೊಂಡವರಿಗೆ ಯಾವ ಸನ್ನಿವೇಶವಾದರು ಸೇವೆಯ ವಿನಃ ಬೇರೆ ಯೋಚನೆಗಳಿಗೆ ಆಸ್ಪದ ನೀಡಲಾರರು ಎಂಬುದಕ್ಕೆ ಹೆಚ್.ಕೆ.ವೀರಣ್ಣಗೌಡರೇ ಉದಾಹರಣೆಯಾಗಿದ್ದಾರೆ. ಇದು ಅವರ ನಿಸ್ವಾರ್ಥತೆಗೆ ಒಂದು ನಿದರ್ಶನ. ಪ್ರತ್ಯಕ್ಷವಾಗಿ ರೈತರ ಅಹವಾಲುಗಳನ್ನು ಕೇಳಿದ ದಿವಾನರು ಕೆಲವು ರಿಯಾಯಿತಿಗಳನ್ನು ರೈತರಿಗೆ ಒದಗಿಸಿದರು. ಇದರೊಂದಿಗೆ ಹೆಚ್.ಕೆ.ವೀರಣ್ಣಗೌಡರ ಜಾಥಾದ ಉದ್ದೇಶ ಯಶಸ್ವಿಯಾಗಿ ಪೂರ್ಣಗೊಂಡಿತು. ಆದರೆ ಆಳುವ ವರ್ಗ ತನ್ನ ನಿರಂಕುಶತೆಗೆ ಅಡ್ಡಿ ಪಡಿಸುವ ಯಾವ ವಿಚಾರವನ್ನು ಮಟ್ಟಹಾಕುವವರೆಗೆ ಪ್ರಯತ್ನಿಸುತ್ತಲೇ ಇರುತ್ತದೆ. ಹಾಗಾಗಿ ಹೆಚ್.ಕೆ.ವೀರಣ್ಣಗೌಡರಿಗೆ ಸರ್ಕಾರ ತದನಂತರದಲ್ಲಿ ಕಿರುಕೂಳ ಕೊಡುವುದನ್ನು ಬಿಡಲಿಲ್ಲ. ಸಂಚು ರೂಪಿಸಿ ಗೌಡರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡಿದರು. ಆದರೆ ರೈತ ಹಿತಾಸಕ್ತಿಯನ್ನೇ

ತನ್ನ ಜೀವನದ ಗುರಿಯಾಗಿ ಹೊಂದಿದ್ದ ಗೌಡರು ಯಾವ ಕಷ್ಟಗಳಿಗೂ ಹೆದರದೆ ತಮ್ಮ ನಿಲುವಿಗೆ ಬದ್ಧರಾಗಿ ಉಳಿದರು. ದಿವಾನರು ಜನರ ಮುಂದೆ ಕಣ್ಣೊರಸುವ ಭರವಸೆ ನೀಡಿದರೂ ಒಳಗೊಳಗೆ ಜನವಿರೋಧಿ ಕಾನೂನಿನ ಅನುಷ್ಠಾನಕ್ಕೆ ಸಾಕಷ್ಟು ಪ್ರಯತ್ನ ಮಾಡಿದರು. ಈ ನಿಟ್ಟಿನಲ್ಲಿ ದಿವಾನರು ಜನರಿಗೆ ತಿಳಿಸದಂತೆ ಮದ್ದೂರಿಗೆ ಆಗಮಿಸಿದಾಗ ಇದನ್ನರಿತ ಹೆಚ್.ಕೆ.ವೀರಣ್ಣಗೌಡರು ಹತ್ತು ಸಾವಿರಕ್ಕೂ ಹೆಚ್ಚು ರೈತರನ್ನು ಮಂಡ್ಯದಲ್ಲಿ ಸೇರಿಸಿ ದಿವಾನರಿಗೆ ದಿಗ್ಭ್ರಮೆಯನ್ನುಂಟು ಮಾಡಿ, ಅವರ ಪ್ರಯತ್ನವನ್ನು ವಿಫಲಗೊಳಿಸಿದರು. ಇಂತಹ ಸಾಹಸವನ್ನು ಮಾಡಲು ಅಪಾರ ಧೈರ್ಯ, ಚಾಣಾಕ್ಷತೆ, ದೂರದೃಷ್ಟಿತ್ವ ಇರಬೇಕು. ಅವು ವೀರಣ್ಣಗೌಡರಲ್ಲಿ ಇದ್ದುದರಿಂದಲೇ ಅವರ ಪ್ರಯತ್ನ ಫಲ ನೀಡಿತು. ಇದು ವೀರಣ್ಣಗೌಡರ ವ್ಯವಸ್ಥಾಪಕ ಶಕ್ತಿಗೆ ಒಂದು ನಿದರ್ಶನ. ಇರ್ವಿನ್ ನಾಲಾ ಚಳುವಳಿ ರೈತರಲ್ಲಿ ನಿರಂಕುಶ ಪ್ರಭುತ್ವದ ವಿರುದ್ಧ ಧ್ವನಿ ಎತ್ತುವ ಶಕ್ತಿ ನೀಡಿತು. ರಾಜಕೀಯ ಪ್ರಜ್ಞೆಯನ್ನು ಬೆಳೆಸಿತು ಎನ್ನಬಹುದು. ಇದು ಹೆಚ್.ಕೆ.ವೀರಣ್ಣಗೌಡರ ಸಂಘಟನಾ ಸಾಮರ್ಥ್ಯವನ್ನು ಮತ್ತು ಅವರಿಗಿದ್ದ ರೈತಪರ ಕಾಳಜಿಯನ್ನು ಅನಾವರಣಗೊಳಿಸಿತು. ಇದರಿಂದ ಹೆಚ್.ಕೆ.ವೀರಣ್ಣಗೌಡರು ಮುಂದೆ ಭವಿಷ್ಯದಲ್ಲಿ ರೈತಮುಖಂಡರಾಗಿ, ಜನಪ್ರತಿನಿಧಿಯಾಗಿ ಬೆಳೆಯಲು ಒಂದು ವೇದಿಕೆಯಾಯಿತು. ಇಷ್ಟೆಲ್ಲಾ ಕಷ್ಟಗಳನ್ನು ಅನುಭವಿಸಿ ರೈತರಿಗೆ ಸ್ವಲ್ಪ ಮಟ್ಟಿಗಾದರೂ ನ್ಯಾಯ ದೊರಕಿಸಿಕೊಟ್ಟ ವೀರಣ್ಣಗೌಡರನ್ನು ಮದ್ದೂರಿನ ಜನರು 1932 ರಲ್ಲಿ ನಡೆದ ಚುನಾವಣೆಯಲ್ಲಿ ಸ್ಥಳೀಯರಲ್ಲ ಎಂಬ ಒಂದೇ ಕಾರಣಕ್ಕೆ ಕೈಬಿಟ್ಟದ್ದು ಒಂದು ವಿಪರ್ಯಾಸವೆಂದೇ ಹೇಳಬೇಕು.

ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ದೇಶದಲ್ಲೆಲ್ಲಾ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಂತೆ ಮೈಸೂರು ಸಂಸ್ಥಾನದಲ್ಲೂ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಪಡೆಯಲು ಕಾಂಗ್ರೆಸ್ ನಿರ್ಧರಿಸಿತು. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಅಗತ್ಯವನ್ನು ಮನಗಾಣಿಸಲು, ಸತ್ಯಾಗ್ರಹಿಗಳ ಪಡೆಯನ್ನು ಸಂಘಟಿಸಲು ಬೃಹತ್ ಅಧಿವೇಶನದ ಅಗತ್ಯವಿತ್ತು. ಅಧಿವೇಶನ ನಡೆಸಲು ಶಿವಪುರ ಸೂಕ್ತ ಸ್ಥಳವೆಂದು ನಿರ್ಧರಿಸಿದ ನಂತರ ಹೆಚ್.ಕೆ.ವೀರಣ್ಣಗೌಡರು ಕಾಂಗ್ರೆಸ್ಸಿನ ಕಟ್ಟಾ ಅಭಿಮಾನಿಯಾಗಿದ್ದರಿಂದ 1938ರ ಕಾಂಗ್ರೆಸ್ ಅಧಿವೇಷನ ನಡೆಸಲು ಇತರ ನಾಯಕರು ಮುಂದಾಗದ ಕಾರಣ ತಾವೇ ಅಧಿವೇಶನದ ಹೊಣೆಯನ್ನು ಮುಂದೆ ಬಂದು ವಹಿಸಿಕೊಂಡರು. ಇದರಿಂದ ಮುಂದಿನ ಕಾಂಗ್ರೆಸ್ ಅಧಿವೇಶನಗಳಿಗೆಲ್ಲ ಒಂದು ಮೇಲುಪಂಕ್ತಿಯನ್ನೆ ಹಾಕಿದರು. ಒಂದು ಅಧಿವೇಶನವೆಂದರೆ ಎಷ್ಟು ವ್ಯವಸ್ಥೆ ಆಗಬೇಕೆಂದು ರಾಷ್ಟ್ರೀಯ ಮಹಾಧಿವೇಶನವನ್ನು ನೋಡಿ ಬಂದವರಿಗೇ ಗೊತ್ತು. ಸಾವಿರಾರು ಜನರಿಗೆ

ತಾತ್ಕಾಲಿಕವಾಗಿ ಆಧುನಿಕ ನಗರವೇ ನಿರ್ಮಾಣವಾಗಬೇಕಾಗುತ್ತದೆ. ಆಹಾರ, ಮತ್ತು ವಸತಿ ಸೇರಿದಂತೆ ಎಲ್ಲದರಲ್ಲೂ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು. ಅಧಿವೇಶನಕ್ಕೆ ಬರುವ ಜನರನ್ನು ಅತಿಥಿಗಳಂತೆ ಸತ್ಕರಿಸಬೇಕು. ಖರ್ಚುವೆಚ್ಚದ ಬಾಬ್ತನ್ನು ಅಪಾರ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಇಂತಹ ಜವಾಬ್ದಾರಿಯನ್ನು ಹೊರಲು ಜಾಣ್ಮೆ, ಕುಶಲತೆ, ಸಾಮರ್ಥ್ಯ ಅತಿಮುಖ್ಯ. ಈ ಎಲ್ಲ ಲಕ್ಷಣಗಳು ವೀರಣ್ಣಗೌಡರಲ್ಲಿ ಇದ್ದುದರಿಂದಲೇ ಈ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಯಿತು ಎನ್ನಬಹುದು. ಯಾವುದೇ ಒಂದು ಸಭೆ ಯಶಸ್ವಿಯಾಗಬೇಕೆಂದರೆ ಅದರ ಹಿಂದೆ ಸಾಕಷ್ಟು ತಯಾರಿ ಇರಬೇಕಾಗುತ್ತದೆ. ಅನೇಕ ಮಂದಿ ಇಲ್ಲಿ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಆದರೆ ಈ ಅನೇಕ ಮಂದಿಯನ್ನು ಕಾರ್ಯತತ್ಪರರನ್ನಾಗಿಸಲು ಒಬ್ಬ ಸಮರ್ಥ ಮಾರ್ಗದರ್ಶಕನ ಅವಶ್ಯಕತೆ ಇರುತ್ತದೆ. ಇಂತಹ ಮಾರ್ಗದರ್ಶಕನ ಸ್ಥಾನವನ್ನು ತುಂಬಿದವರು ಹೆಚ್.ಕೆ.ವೀರಣ್ಣಗೌಡರು. ತಮ್ಮ ಈ ಕೆಲಸಕ್ಕೆ ಎಂತಹವರ ಸಹಕಾರ ಪಡೆದರೆ ತಮ್ಮ ಹಾದಿ ಸುಗಮವಾಗುತ್ತದೆ ಎಂಬ ಅರಿವು ಹೊಂದಿದ್ದ ವೀರಣ್ಣಗೌಡರು ಆಗರ್ಭ ಶ್ರೀಮಂತರಾಗಿದ್ದ ಮತ್ತು ಪರೋಕ್ಷವಾಗಿ ರಾಜಕೀಯದಲ್ಲಿ ತೊಡಗಿದ್ದ ವರ್ತಕರಾದ ಸಾಹುಕಾರ್ ಚನ್ನಯ್ಯನವರನ್ನು ಶಿವಪುರ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುವಲ್ಲಿ ಹೆಚ್.ಕೆ.ವೀರಣ್ಣಗೌಡರು ಯಶಸ್ವಿಯಾದರು. ಹೀಗೆ ಹೆಚ್.ಕೆ.ವೀರಣ್ಣಗೌಡರಿಂದ ಗುರುತಿಸಲ್ಪಟ್ಟು ಶಿವಪುರ ಅಧಿವೇಶನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಸಾಹುಕಾರ ಚನ್ನಯ್ಯನವರು ಮುಂದೆ ಕರ್ನಾಟಕ ರಾಜಕಾರಣದಲ್ಲಿ ಪ್ರಭಾವಿ ರಾಜಕಾರಣಿಯಾಗಿ ಬೆಳೆದರು. ಸಾಹುಕಾರ ಚನ್ನಯ್ಯನವರನ್ನು ಕೂಡಿಕೊಂಡು ಮದರಾಸು, ಬೊಂಬಾಯಿ, ಮೈಸೂರುಗಳನ್ನು ತಿರುಗಿ ಚಂದಾ ಹಣವನ್ನು ಸಂಗ್ರಹಣೆ ಮಾಡಿದರು. ಆದರೆ ಎಲ್ಲವೂ ಹಣದಿಂದಲೇ ಸಾಗುವುದಿಲ್ಲ. ಹೀಗಾಗಿ ಹೆಚ್.ಕೆ.ವೀರಣ್ಣಗೌಡರು ಮನೆ ಮನೆಗೂ ಬಿಡುವಿಲ್ಲದೆ ಸುತ್ತಾಡಿ ಹಣದ ಜೊತೆಗೆ ದವಸಧಾನ್ಯಗಳನ್ನು ಸಂಗ್ರಹಣೆ ಮಾಡಿದರು. ಅಧಿವೇಶನಕ್ಕಾಗಿ ಹೆಚ್.ಕೆ.ವೀರಣ್ಣಗೌಡರ ಸಿದ್ದತೆಗಳನ್ನು ಗಮನಿಸುತ್ತಿದ್ದ ಸರ್ಕಾರ ಹೇಗಾದರೂ ಮಾಡಿ ಅಧಿವೇಶನವನ್ನು ತಡೆಗಟ್ಟಬೇಕೆಂದು ಹವಣಿಸಿ ವೀರಣ್ಣಗೌಡರೊಂದಿಗೆ ಲೇವಾದೇವಿ ಮಾಡುತ್ತಿದ್ದವರನ್ನು ಎತ್ತಿಕಟ್ಟಿ ಗೌಡರಿಗೆ ಸಿವಿಲ್ ವಾರೆಂಟ್ ಕೊಡಿಸಲು ಪ್ರಯತ್ನ ಮಾಡಿದರು. ಆದರೆ ದಕ್ಷರೆಂದು ಪ್ರಸಿದ್ಧರಾಗಿದ್ದ ಹೆಚ್.ಕೆ.ವೀರಣ್ಣಗೌಡರು ಚಾಣಾಕ್ಷರಾಗಿದ್ದುದರಿಂದ ಹಳ್ಳಿಯ ರೈತರನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದುದರಿಂದ ಅವರನ್ನು ಕಾರ್ಯ ವಿಮುಖರನ್ನಾಗಿ ಮಾಡಲು ಆಗಲಿಲ್ಲ.

ಅಧಿವೇಶನದ ತಯಾರಿಯಲ್ಲಿ ಸಮಯಕ್ಕೆ ಸರಿಯಾಗಿ ಎಲ್ಲಾ ತಯಾರಿಗಳು ನಡೆಯುವಂತೆ ಸಮಯ ಸ್ಫೂರ್ತಿಯಿಂದ ಅಗತ್ಯಕ್ರಮಗಳನ್ನು ಕೈಗೊಂಡು ನಿಭಾಯಿಸಿದರು. ಇದಕ್ಕೊಂದು ಉದಾ; ಕುಟೀರಗಳ ಮತ್ತು ಚಪ್ಪರದ ನಿರ್ಮಾಣಕ್ಕೆ ಹೆಣೆದ ಗರಿಗಳು ಸಮಯಕ್ಕೆ ಸರಿಯಾಗಿ ಬಾರದೇ ಹೋದಾಗ ಸಮಯ ಸ್ಫೂರ್ತಿಯಿಂದ ತಮ್ಮ ಮಿತ್ರರನ್ನು ಬೆಂಗಳೂರಿಗೆ ಕಳುಹಿಸಿ ರೈಲ್ವೆ ವ್ಯಾಗಿನ್‌ನಲ್ಲಿ ಬಿದಿರಿನ ತಟ್ಟೆಗಳನ್ನು ತರಿಸಿದ್ದನ್ನು ಕಾಣಬಹುದು. ಐವತ್ತು ಸಾವಿರಕ್ಕೂ ಹೆಚ್ಚಿನ ಜನರಿಂದ ಕೂಡಿದ್ದ ಈ ಅಧಿವೇಶನವನ್ನು ನಿಭಾಯಿಸಲು ಕಷ್ಟಸಾಧ್ಯವೇ ಆಯಿತು. ಮೂರು ದಿನಗಳಿಗೆಂದು ಸಿದ್ದಪಡಿಸಿದ ಅಧಿವೇಶನ ಸರ್ಕಾರದ ನಿರ್ಬಂಧಕ ಧೋರಣೆಯಿಂದ ಒಂದು ತಿಂಗಳ ಕಾಲ ಧ್ವಜ ಸತ್ಯಾಗ್ರಹ ನಡೆಸಬೇಕೆಂದು ಮುಂದುವರಿಯಿತು. ಈ ಸಂದರ್ಭದಲ್ಲಿ ಊಟದ ವ್ಯವಸ್ಥೆಗೆ ಮತ್ತೆ ಹೆಚ್.ಕೆ.ವೀರಣ್ಣಗೌಡರು ಗ್ರಾಮಗಳಲ್ಲಿ ದವಸಧಾನ್ಯ ಸಂಗ್ರಹಣೆ ಮಾಡಬೇಕಾದ ಪ್ರಸಂಗ ಎದುರಾಯಿತು. ಅಲ್ಲದೆ ಪ್ರತಿದಿನ ಮುಖಂಡರು ಒಬ್ಬೊಬ್ಬರಾಗಿ ದಸ್ತಗಿರಿಯಾಗುತ್ತಿದ್ದರೂ ಸತ್ಯಾಗ್ರಹದಲ್ಲಿ ವೀರಣ್ಣಗೌಡರು ಭಾಗವಹಿಸುವಂತಿರಲಿಲ್ಲ. ಕಾರಣ ಎಲ್ಲಾ ರೀತಿಯ ವ್ಯವಹಾರಗಳನ್ನು ನಿಭಾಯಿಸಬೇಕಾದ ಹೊಣೆ ಇವರ ಮೇಲೆಯೇ ಇದಿದ್ದರಿಂದ ಪರೋಕ್ಷವಾಗಿ ಈ ಸತ್ಯಗ್ರಹ ಯಶಸ್ವಿಯಾಗಲು ನೇಪಥ್ಯದಲ್ಲೇ ನಿಂತು ಶ್ರಮಿಸಬೇಕಾಯಿತು. ಇಲ್ಲಿ ಹೆಚ್.ಕೆ.ವೀರಣ್ಣಗೌಡರಿಗಿಂತಲೂ ಸಮರ್ಥರೂ, ಚಾಣಾಕ್ಷ ಮುಖಂಡರಿದ್ದರೂ ಅವರ್‍ಯಾರು ತಮ್ಮ ಸ್ವಂತ ವ್ಯವಹಾರಗಳನ್ನು ಬಿಟ್ಟು ಸಂಪೂರ್ಣವಾಗಿ ಕಾಂಗ್ರೆಸ್ ಕಾರ್ಯಕ್ಕೆ ನಿಲ್ಲುವ ಮನಸ್ಸು ಮಾಡದೆ ಹೋದುದರಿಂದ ಈ ಕಾರ್ಯ ಇವರ ಹೆಗಲ ಮೇಲೆ ಬಿತ್ತು. ಇಂತಹ ಸಂದರ್ಭದಲ್ಲಿ ತಿಂಗಳಾನುಗಟ್ಟಲೆ ಮನೆಯಿಂದ ದೂರವಿದ್ದ ತಮ್ಮೆಲ್ಲ ಕೆಲಸಕಾರ್ಯಗಳನ್ನು ಬಿಟ್ಟು ಸಂಪೂರ್ಣವಾಗಿ ಕಾಂಗ್ರೆಸ್ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಹೆಚ್.ಕೆ.ವೀರಣ್ಣಗೌಡರ ಬಗ್ಗೆ ಅಂದಿನ ಅಧಿವೇಶನದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಅಭಿಮಾನ, ಗೌರವ ಮೂಡಿ ಅವರ ಕಾರ್ಯದ ಬಗ್ಗೆ ಶ್ಲಾಘನೆ ಮಾಡಿರುವುದು ಕಂಡುಬರುತ್ತದೆ. ಶಿವಪುರದಲ್ಲಿ ನಡೆದ ಕಾಂಗ್ರೆಸ್‌ನ ಅಧಿವೇಶನ ಒಂದು ಚಾರಿತ್ರಿಕ ದಾಖಲೆಯಾಗಿ ಮತ್ತು ಘಟನೆಯಾಗಿ ಉಳಿಯುವಂತೆ ಮಾಡುವಲ್ಲಿ ಹೆಚ್.ಕೆ.ವೀರಣ್ಣಗೌಡರ ಸತತ ಕಠಿಣ ಪರಿಶ್ರಮವೇ ಕಾರಣವೆನ್ನಬಹುದು. ಈ ಅಧಿವೇಶನದ ನಂತರ ಕೋಲಾರದ ವಿದುರಾಶ್ವತ್ಥದಲ್ಲಿ ಅಧಿವೇಶ ನಡೆಸಲು ಮುಂದಾದರು. ಇದಕ್ಕಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದವರನ್ನು ಕೋಲಾರಕ್ಕೆ ಪ್ರವೇಶಿಸದಂತೆ ತಡೆಗಟ್ಟುವ ನಿಷೇದಾಜ್ಞೆಯನ್ನು ಸರ್ಕಾರ ಹೊರಡಿಸಿತು. ಹೆಚ್.ಕೆ.ವೀರಣ್ಣಗೌಡರು ಸೇರಿದಂತೆ ಇದನ್ನು

ಉಲ್ಲಂಘಿಸಿದ ಮುಖಂಡರನ್ನು ದಸ್ತಗಿರಿ ಮಾಡಲಾಯಿತು. ನಂತರ ವಿದುರಾಶ್ವತ್ಥದ ದುರಂತದ ಬಗ್ಗೆ ವಿಚಾರಣೆ ನಡೆಸಲು ನೇಮಿಸಿದ ಸಮಿತಿಯುಲ್ಲಿ ಹೆಚ್.ಕೆ.ವೀರಣ್ಣಗೌಡರು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. ವಸ್ತುನಿಷ್ಠವಾಗಿ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿದರು.

ಸ್ವಾತಂತ್ರ್ಯ ಹೋರಾಟದ ಪರ್ವಕಾಲದಲ್ಲಿ ಹೆಚ್.ಕೆ.ವೀರಣ್ಣಗೌಡರು ತುರಂಗವಾಸವನ್ನು ಅನುಭವಿಸಬೇಕಾಗಿ ಬಂತು. ಗುಪ್ತಗಾಮಿನಿಯಾಗಿ ಸಭೆಗಳಲ್ಲಿ ಭಾಷಣ ಮಾಡುವ ಮೂಲಕ ಜನರಲ್ಲಿ ರಾಷ್ಟ್ರೀಯತೆಯ ಬಗ್ಗೆ ಅರಿವು ಮೂಡಿಸುವ ಮೂಲಕ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಿದ್ದರು. ಕೋಲಾರದಲ್ಲಿ ನಿಷೇದಾಜ್ಞೆ ಉಲ್ಲಂಘಿಸಿ ದಸ್ತಗಿರಿಗೊಳಗಾದ ಹೆಚ್.ಕೆ.ವೀರಣ್ಣಗೌಡರು ಮೂರು ತಿಂಗಳ ಕಠಿಣ ಶಿಕ್ಷೆಯುನ್ನು ಅನುಭವಿಸಬೇಕಾಯಿತು. ಜೈಲಿನ ಅವ್ಯವಸ್ಥೆಯ ವಾತಾವರಣದಲ್ಲಿ ಇದ್ದು ರಾಗಿಬೀಸುವುದು, ಬಟ್ಟೆಹೊಲೆಯುವುದು ಮುಂತಾದ ಕೆಲಸಗಳನ್ನು ಮಾಡಬೇಕಾಗಿ ಬಂತು. ಈ ಅವ್ಯವಸ್ಥೆಯ ವಾತಾವರಣದಿಂದಾಗಿ ಜ್ವರಕ್ಕೆ ತುತ್ತಾಗಿ ನರಳಿದರು. ದೇಶಸೇವೆಗಾಗಿ ಅಂದಿನ ಎಷ್ಟೋ ಮಂದಿ ದೇಶಭಕ್ತರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಟ ಮಾಡಿದರು. ಅವರುಗಳಲ್ಲಿ ಹೆಚ್.ಕೆ.ವೀರಣ್ಣಗೌಡರು ಸಹ ಒಬ್ಬರಾಗಿದ್ದರು. ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಜವಾಬ್ದಾರಿ ಸರ್ಕಾರದ ಬಗ್ಗೆಯೂ ಹೋರಾಟವನ್ನು ಮುಂದುವರೆಸಿದ್ದ ಮುಖಂಡರುಗಳಲ್ಲಿ ಒಬ್ಬರಾಗಿ ಹೆಚ್.ಕೆ.ವೀರಣ್ಣಗೌಡರು ತಮ್ಮ ಊರು ಮನೆಮಠ ಬಿಟ್ಟು ಅಂದಿನ ಹೋರಾಟಕ್ಕಿಳಿದಿದ್ದರು. ಕ್ವಿಟ್ ಇಂಡಿಯಾ ಸಂದರ್ಭದಲ್ಲಿ ಜೈಲು ಶಿಕ್ಷೆಗೆ ಒಳಗಾದ ಹೆಚ್.ಕೆ.ವೀರಣ್ಣಗೌಡರು ಜೈಲಿನಲ್ಲಿಯೂ ತಮ್ಮ ಜಾಗೃತಿಯನ್ನುಂಟುಮಾಡುವ ಕಾರ್ಯವನ್ನು ಮುಂದುವರಿಸಿದರು. ಜೈಲಿನಲ್ಲಿ ಇತರ ಯುವಕರನ್ನು ಸಂಘಟಿಸಿ ಒಂದೆಡೆ ಸೇರಿಸಿ ಅವರಲ್ಲಿ ಜವಾಬ್ದಾರಿ ಸರ್ಕಾರವೆಂದರೇನು? ಅದರ ರೂಪುರೇಖೆಯೇನು? ಎಂಬ ವಿಚಾರ ಕುರಿತು ದಿನವೂ `Liberty in the Modern State' ಎಂಬ ಇಂಗ್ಲಿಷ್ ಪುಸ್ತಕವನ್ನು ಓದಿ ಅನುವಾದ ಮಾಡಿ ಹೇಳುತ್ತಿದ್ದರು. ಹೀಗೆ ಜವಾಬ್ದಾರಿ ಸರ್ಕಾರವೆಂದರೇನು? ಎಂಬ ವಿಚಾರ ಕುರಿತು ಜವಾಬ್ದಾರಿಯ ಭಾಷಣ ಮಾಡಬಲ್ಲ ಯುವಕರ ತಂಡವನ್ನು ನಿರ್ಮಾಣ ಮಾಡಿದರು. ಇದರಿಂದ ಹೆಚ್.ಕೆ.ವೀರಣ್ಣಗೌಡರು ಎಲ್ಲೆ ಇದ್ದರೂ ದೇಶ ಸೇವೆಯ ಬಗ್ಗೆಯೇ ಚಿಂತಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ. ಹಾಗೆಯೇ ಜೈಲಿನಲ್ಲಿಯೇ ನಿತ್ಯವೂ ಜೈಲರು ವಹಿಸಿದ ಕೆಲಸಗಳನ್ನು ಶಿಸ್ತಿನಿಂದ ನಿರ್ವಹಿಸಿ ಉಳಿದ ಸಮಯದಲ್ಲಿ ಚರಕದಿಂದ ನೂಲುವ ಕೆಲಸವನ್ನು ಮಾಡುತ್ತಿದ್ದರು.

ಜವಾಬ್ದಾರಿ ಸರ್ಕಾರ ಸ್ಥಾಪನೆ ಚಳುವಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಚಾರ ಸಭೆಗಳನ್ನು ಕೈಗೊಳ್ಳಲಾಗಿತ್ತು. ಹಾಗೆ ನಡೆಸಲಾದ ಸಭೆಗಳಲ್ಲಿ ಚನ್ನಪಟ್ಟಣದ ಅಧಿವೇಶನದ ಸಭೆಯ ಸಂದರ್ಭದಲ್ಲಿ ಒಂದು ಘಟನೆ ನಡೆಯಿತು. ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಮಾಡಿದ ಕುತಂತ್ರದಿಂದ ಗಲಭೆಯುಂಟಾಗಿ ಹೆಚ್.ಕೆ.ವೀರಣ್ಣಗೌಡರು ಹಲ್ಲೆಗೊಳಗಾಗಬೇಕಾಯಿತು. ಇಷ್ಟೆಲ್ಲ ಕಷ್ಟಗಳನ್ನು ಸಹಿಸಿದರೂ ಹೋರಾಟದ ಹುರುಪು ಮಾತ್ರ ಅವರಿಂದ ದೂರವಾಗಲಿಲ್ಲ. ಜವಾಬ್ದಾರಿ ಸರ್ಕಾರದ ಬಗ್ಗೆ ಮಹಾರಾಜರು ಒಲವು ತೋರದೆ ಹೋದಾಗ ಕೊನೆಯ ಅಸ್ತ್ರವಾಗಿ ಮೈಸೂರು ಚಲೋ ಚಳುವಳಿಯ ಸತ್ಯಾಗ್ರಹಕ್ಕೆ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ.ರೆಡ್ಡಿಯವರು ಮುಂದಾದರು. ಈ ಸಂದರ್ಭದಲ್ಲಿ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಮ್, ಟಿ.ಸಿದ್ದಲಿಂಗಯ್ಯನವರಂತಹ ಮುಖಂಡರುಗಳಂತೆಯೇ ವೀರಣ್ಣಗೌಡರೂ ಮೈಸೂರು ಚಲೋ ಚಳುವಳಿಗೆ ಸನ್ನದ್ಧರಾಗಿ ನಿಂತರು. ಕಾಂಗ್ರೆಸ್‌ನ ಪ್ರಕಟಣಾ ಕಾರ್ಯದರ್ಶಿಯಾದ ಗೌಡರು ಈ ಸತ್ಯಾಗ್ರಹವನ್ನು ಜನತೆ ಅಹಿಂಸಾತ್ಮಕವಾಗಿ ನಡೆಸಬೇಕೆಂದು ಮತ್ತು ಸತ್ಯಾಗ್ರಹ ಕೈ ಬಿಡುವ ಅಧಿಕಾರ ಮೊದಲ ಸತ್ಯಾಗ್ರಹಿಯಾದ ಅಧ್ಯಕ್ಷರಿಗೆ ಮಾತ್ರ ಇದೆ ಎಂದು ಪ್ರಕಟಣೆ ಹೊರಡಿಸಿದರು. ಹೋರಾಟಕ್ಕೆ ವೀರಣ್ಣಗೌಡರು ಸೇರಿದಂತೆ ಅಂದಿನ ಎಲ್ಲಾ ಮುಖಂಡರು ಅಹಿಂಸಾ ತತ್ವಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಹೆಚ್.ಕೆ.ವೀರಣ್ಣಗೌಡರು ಆಲೋಚನೆಯಲ್ಲಿ ಕ್ರಾಂತಿಕಾರಕರಾದರೂ ಆಚರಣೆಯಲ್ಲಿ ಮಾತ್ರ ಅಹಿಂಸಾ ತತ್ವಕ್ಕೆ ಬದ್ಧರಾಗಿದ್ದರು ಎಂಬುದು ಅವರ ಎಲ್ಲ ಚಳುವಳಿಗಳಲ್ಲಿ ಕಂಡು ಬರುತ್ತದೆ. ಅವರಿಗೆ 'ಬದಲಾವಣೆ ಬಲವಂತದಿಂದ ಆಗುವ ಬದಲಾಗಿ ಮನ ಪರಿವರ್ತನೆಯಿಂದಾಗಬೇಕೆಂಬುದರ ಮೇಲೆ ಹೆಚ್ಚಿನ ವಿಶ್ವಾಸವಿತ್ತು. 1947ರಲ್ಲಿ ಕಾಂಗ್ರೆಸ್ ನಾಯಕರು ಭಾಷಣಗಳನ್ನು ಮಾಡದಂತೆ ಸರ್ಕಾರ ನಿಷೇದಾಜ್ಞೆ ಹೊರಡಿಸಿದ್ದ ಸಂದರ್ಭದಲ್ಲಿ ಹೆಚ್.ಕೆ.ವೀರಣ್ಣಗೌಡರು ಮೈಸೂರಿನಲ್ಲಿ ಭಾಷಣ ಮಾಡಿ ದಸ್ತಗಿರಿಯಾದರು. ಹೀಗೆ ಅನೇಕ ಕಾಂಗ್ರೆಸ್ ನಾಯಕರು ಬಂಧನಕ್ಕೆ ಒಳಗಾದರು. ಮೈಸೂರು ಚಲೋ ಚಳುವಳಿಯ ಕಾವು ತೀವ್ರಗೊಂಡಂತೆ ನಾಡಿನ ಎಲ್ಲಾ ವರ್ಗದ ಜನತೆ ಚಳುವಳಿಯಲ್ಲಿ ಪಾಲ್ಗೊಂಡು ಅರಮನೆಗೆ ಮುತ್ತಿಗೆ ಹಾಕಿದರು. ಜನಶಕ್ತಿಯ ಮುಂದೆ ಅಧೀರರಾದ ಮಹಾರಾಜರು ಜವಾಬ್ದಾರಿ ಸರ್ಕಾರವನ್ನು 1947ರ ಅಕ್ಟೋಬರ್ 24 ರಂದು ಘೋಷಣೆ ಮಾಡಿದರು. ಇಂಥಹ ಜನಶಕ್ತಿಯನ್ನು ರೂಪಿಸುವಲ್ಲಿ ಆ ವೇಳೆಗೆ ಹೆಚ್.ಕೆ. ವೀರಣ್ಣಗೌಡರು ಎರಡು ರೀತಿಯಾಗಿ ಶ್ರಮಿಸಿದರು. ಒಂದು 'ವಾರ್ತಾ'ಎಂಬ ಸಂಜೆ ಪತ್ರಿಕೆಯನ್ನು ಪ್ರಾರಂಭಿಸಿ ಜವಾಬ್ದಾರಿ ಸರ್ಕಾರದ ಬಗ್ಗೆ ಜನ ಜಾಗೃತಿ ಮೂಡಿಸುವ,

ರಾಷ್ಟ್ರೀಯ ಭಾವನೆಗಳನ್ನು ಮೂಡಿಸುವ, ಕಾಂಗ್ರೆಸ್ ಧ್ಯೇಯಧೋರಣೆಗಳನ್ನು ಪ್ರಚಾರ ಮಾಡುವ ಲೇಖನಗಳನ್ನು ಪ್ರಕಟಿಸುತ್ತಿದ್ದರು.

ಮಹಾರಾಜರಿಂದ ಜವಾಬ್ದಾರಿ ಸರ್ಕಾರದ ಘೋಷಣೆಯಾದ ನಂತರ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ 9 ಜನ ಮಂತ್ರಿಗಳ ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಇದೇ ಸಂದರ್ಭದಲ್ಲಿ ಸಂವಿಧಾನ ರಚನಾ ಸಭೆಗೆ ಆಯ್ಕೆಗೊಂಡಿದ್ದ ಹೆಚ್.ಕೆ.ವೀರಣ್ಣಗೌಡರು ಆ ಸಂವಿಧಾನಸಭೆ ಶಾಸನ ಸಭೆಯಾಗಿ ಪರಿವರ್ತಿತವಾದಾಗ ಜನಪ್ರತಿನಿಧಿಯಾಗಿ ಶಾಸಕಾಂಗದಲ್ಲಿ ಕಾರ್ಯನಿರ್ವಹಿಸಿದರು. ಇದೇ ಸಮಯದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗಾಗಿ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಒತ್ತಾಯ ಹೆಚ್ಚುತ್ತಾ ಹೋಯಿತು. ಆಗ ಕರ್ನಾಟಕದ ಏಕೀಕರಣವನ್ನು ಬೆಂಬಲಿಸಿ ಒಂದು ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಆದರೆ ಹೆಚ್.ಕೆ.ವೀರಣ್ಣಗೌಡರು ಕರ್ನಾಟಕ ಏಕೀಕರಣದ ಕೂಗು ಆರಂಭಗೊಂಡಿನಂದಿನಿಂದ ಅದಕ್ಕೆ ಪರವಾಗಿಯೇ ಇದ್ದರು. ಆದರೆ ಕರ್ನಾಟಕದ ಏಕೀಕರಣ ಕೂಗು ಏರುತ್ತಿದ್ದಂತೆ ಕೂಲಂಕುಷವಾಗಿ ಆಲೋಚಿಸಿದ ನಂತರ ಮೈಸೂರು ಸಂಸ್ಥಾನಕ್ಕೂ ಇತರ ಉತ್ತರ ಕರ್ನಾಟಕದ ಭಾಗಗಳಿಗೂ ಬಹಳಷ್ಟು ವ್ಯತ್ಯಾಸಗಳು ಕಂಡುಬರುವುದರಿಂದ ಒಟ್ಟಾರೆ ಪ್ರದೇಶಕ್ಕೆ ಒಂದೇ ರೀತಿಯ ಆಡಳಿತ, ಕಾನೂನು ಅನ್ವಯಿಸುವುದು ಕಷ್ಟವಾಗಬಹುದು ಮತ್ತು ವಿಸ್ತಾರವಾದ ಭೂಪ್ರದೇಶ ಉತ್ತಮ ಆಡಳಿತಕ್ಕೆ ಧಕ್ಕೆಯಾಗಬಹುದು ಎಂಬುದಾಗಿ ತಿಳಿದುಕೊಂಡು ಇದೇ ಕಾರಣಗಳನ್ನೇ ಮುಂದಿಟ್ಟುಕೊಂಡು ವಿರೋಧ ವ್ಯಕ್ತಪಡಿಸುತ್ತಿದ್ದರು. ಇದೇ ಅಭಿಪ್ರಾಯವನ್ನು ಬಹುತೇಕ ಸಾಹಿತಿಗಳು, ನಾಯಕರು ವ್ಯಕ್ತಪಡಿಸುತ್ತಿದ್ದರು. ಆದರೆ ಕೆಲವು ಒತ್ತಡಗಳಿಂದಾಗಿ ಈ ನಾಯಕರು ಮತ್ತು ಸಾಹಿತಿಗಳು ತದನಂತರದಲ್ಲಿ ಏಕೀಕರಣಕ್ಕೆ ಬೆಂಬಲ ಸೂಚಿಸಿದ್ದರು. ಆದರೆ ಹೆಚ್.ಕೆ.ವೀರಣ್ಣಗೌಡರು ಸತ್ಯವೆಂದು ಕಂಡಿದ್ದರ ಪರ ನಿಷ್ಠೂರವಾದರೂ ಸರಿ ಅದಕ್ಕೆ ಬದ್ಧರಾಗಿ ನಿಲ್ಲುವವರಾಗಿದ್ದುದರಿಂದ ತಮ್ಮ ನಿಲುವಿನಿಂದ ದೂರ ಸರಿಯಲಿಲ್ಲ. ಇದು ಅವರ ನಿಷ್ಠೆಗೆ ಮತ್ತು ಮೈಸೂರಿನ ಮೇಲಿನ ಅಭಿಮಾನಕ್ಕೆ ಸಾಕ್ಷಿಯಾದುದು. ರಾಜಕೀಯವಾಗಿ ಬಲಪಡೆಯಲು ಉತ್ತರ ಕರ್ನಾಟಕದಲ್ಲಿ ಬ್ರಾಹ್ಮಣೇತರ ಪರಿಷತ್ತು ಆರಂಭವಾದ ಸಂದರ್ಭದಲ್ಲೇ ದಕ್ಷಿಣದಲ್ಲಿ ಒಕ್ಕಲಿಗರ ಪ್ರಾಬಲ್ಯ ಹೆಚ್ಚಿತ್ತು. ಹೆಚ್ಚು ಅಧಿಕಾರಗಳನ್ನು ಒಕ್ಕಲಿಗರು ಪಡೆದ ಸಂದರ್ಭದಲ್ಲಿ ರಾಜಕೀಯವಾಗಿ ಕರ್ನಾಟಕದ ಏಕೀಕರಣ ಪ್ರಸ್ತಾಪವಾಯಿತು. ಅಧಿಕಾರ ಕೈತಪ್ಪಿ ಹೋಗುವ ಭಯದಿಂದ ಮೈಸೂರು ಸಂಸ್ಥಾನದ ಕೆಲವು ಮುಖಂಡರು ಏಕೀಕರಣದ ಬಗೆಗೆ ವಿರೋಧ ವ್ಯಕ್ತಪಡಿಸಿದರು. ಇದು ಸತ್ಯಕ್ಕೆ ದೂರವಾದ ಮಾತಾಗಿರಲಿಲ್ಲ. ಈ ನಿಟ್ಟಿನಲ್ಲಿ ಆಲೋಚಿಸಿದರೆ ಹೆಚ್.ಕೆ.ವೀರಣ್ಣಗೌಡರು

ಏಕೀಕರಣಕ್ಕೆ ವಿರೋಧ ವ್ಯಕ್ತಪಡಿಸಿದರಲ್ಲಿ ಈ ಅಂಶವೂ ಒಂದಾಗಿತ್ತು ಎಂಬುದು ಕಂಡು ಬರುತ್ತದೆ. ಆದರೂ ಏಕೀಕರಣಗೊಂಡ ಮೈಸೂರು ರಾಜ್ಯದ ಮಂತ್ರಿಗಳಾಗಿ ಕಾರ್ಯ ನಿರ್ವಹಿಸುವಾಗ ಯಾವುದೇ ಭೇದವನ್ನು ಮಾಡದೆ ಕಾರ್ಯನಿರ್ವಹಿಸಿರುವುದು ಕಂಡು ಬರುತ್ತದೆ. ಇದು ಗೌಡರ ನಿಸ್ಪಕ್ಷಪಾತತೆಗೆ ಸಾಕ್ಷಿಯಾಗಿದೆ. ಏಕೀಕರಣಕ್ಕೆ ವಿರೋಧ ವ್ಯಕ್ತಪಡಿಸುವ ನಾಯಕರಿಗೆ ಬುದ್ಧಿವಾದದಂತೆ ಮಾಸ್ತಿಯವರು ತಮ್ಮ 'ಜೀವನ' ಪತ್ರಿಕೆಯಲ್ಲಿ ಲೇಖನವೊಂದನ್ನು ಪ್ರಕಟಿಸ್ಸಿದ್ದರು. ತಮ್ಮ ಲೇಖನದಲ್ಲಿ ಹೆಚ್.ಕೆ.ವೀರಣ್ಣಗೌಡರನ್ನೇ ನಿರ್ದಿಷ್ಟವಾಗಿ ಉಲ್ಲೇಖಿಸಿದ್ದರಿಂದ ವೀರಣ್ಣಗೌಡರು ಮಾಸ್ತಿಯವರಿಗೆ ಬರೆದ ಪತ್ರದಲ್ಲಿ ತಮ್ಮ ಅಭಿಪ್ರಾಯದ ನಿಲುವನ್ನು ವ್ಯಕ್ತಪಡಿಸಿದರು. ಹಾಗೇ ಅದರಲ್ಲಿ ವೀರಣ್ಣಗೌಡರು ಏಕೀಕರಣದ ವಿರೋಧಕ್ಕೆ ನೀಡಿರುವ ಕಾರಣಗಳಲ್ಲಿ ಸ್ಪಷ್ಟವಾದ ವೈಜ್ಞಾನಿಕ ನಿಲುವು ಕಂಡು ಬರುತ್ತದೆ. ಹನುಮಂತಯ್ಯನವರು ನೇಮಿಸಿದ ಶೇಷಾದ್ರಿಯವರ ನೇತೃತ್ವದ ಪರಿಶೀಲನಾ ಸಮಿತಿಯ ಸಮೀಕ್ಷೆಯಿಂದ ಕೂಡಿದ ವರದಿಯೂ ಸಹ ವೀರಣ್ಣಗೌಡರ ಅಭಿಪ್ರಾಯವನ್ನೇ ಹೋಲುವ ಅಂಶಗಳನ್ನು ಹೊರಹಾಕಿತು. ಅಂದರೆ ಹೊಸ ಮೈಸೂರು ಭಾಗಗಳು ಮೈಸೂರಿಗೆ ಸೇರುವುದರಿಂದ ಮೈಸೂರಿನ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳಬಹುದು ಹಾಗು ಹೊಸ ಭಾಗಗಳು ಬಹಳ ಹಿಂದುಳಿದಿರುವುದರಿಂದ ಅವುಗಳ ಅಭಿವೃದ್ಧಿಗೆ ಅಪಾರ ಹಣದ ಅವಶ್ಯಕತೆ ಇರುತ್ತದೆ. ಇವುಗಳ ಅಭಿವೃದ್ಧಿಗೆ ಬಹಳಷ್ಟು ವರುಷಗಳು ಹಿಡಿಯುತ್ತವೆ. ಅಲ್ಲದೆ ಕಾನೂನುಗಳ ದೃಷ್ಟಿಯಿಂದ ಮೈಸೂರಿನ ಜನತೆ ಕೆಲವು ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂಬ ಅಂಶಗಳು ಹೊರಬಿದ್ದವು. ಆದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಅಭಿಪ್ರಾಯದಂತೆ ಭಾಷಾವಾರು ಪ್ರಾಂತ್ಯ ರಚನೆಗೆ ಮುಂದಾಗಿ ಕರ್ನಾಟಕ ಏಕೀಕರಣಕ್ಕೆ ಅಂಗೀಕಾರ ನೀಡಿತು. ಆದರೆ ಹೆಚ್.ಕೆ.ವೀರಣ್ಣಗೌಡರು ಅಭಿಪ್ರಾಯಪಟ್ಟಂತೆ ಸಹಸ್ರಾರು ಜನರು ಮೈಸೂರಿನ ಮೇಲಿನ ಕಾಳಜಿಯಿಂದ ಮತ್ತು ತಮ್ಮ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳಬಹುದೆಂಬ ಶಂಕೆಯ ದೃಷ್ಟಿಯಿಂದ ಏಕೀಕರಣವನ್ನು ವಿರೋಧಿಸುತ್ತಿದ್ದರು ಎಂಬುದಕ್ಕೆ ಮಂಡ್ಯದಲ್ಲಿ ಸೇರಿದ್ದ ಸಹಸ್ರಾರು ಜನರ ಏಕೀಕರಣ ವಿರೋಧಿ ಸಭೆಯೇ ಸಾಕ್ಷಿಯಾಗಿದೆ.

ಏಕೀಕರಣ ವಿರೋಧದ ನಿಲುವಿನಲ್ಲಿ ಅಧಿಕಾರದಲ್ಲಿ ಪ್ರಾಬಲ್ಯವನ್ನು ಕಾಯ್ದುಕೊಳ್ಳಬೇಕೆಂಬ ಸ್ವಾರ್ಥಪರ ನಿಲುವು ಒಂದು ನಿಜವಾದರೂ ಉಳಿದ ಇತರ ಅಂಶಗಳಾದ ಸುಗಮ ಆಡಳಿತಕ್ಕೆ ಧಕ್ಕೆಯಾಗುತ್ತದೆ ಎಂಬುದು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಮುಂದುವರೆದ ಪ್ರದೇಶಗಳ ಜನರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ ಎಂಬ ಅಂಶಗಳು ಅಕ್ಷರಶಃ ಸತ್ಯವಾಗಿ ಕಂಡುಬರುತ್ತವೆ. ಇಷ್ಟೇಲ್ಲಾ ಸಮಸ್ಯೆಗಳನ್ನು ಗರ್ಭದಲ್ಲಿ ಹೂತಿಟ್ಟು 1956ರಲ್ಲಿ ಕರ್ನಾಟಕ ಏಕೀಕರಣ ಸಾಧಿತವಾಯಿತು. ಆ ಕ್ಷಣಕ್ಕೆ

ಹೂತಿಟ್ಟ ಸಮಸ್ಯೆಗಳು ಇಂದು ಬೃಹದಾಕಾರವಾಗಿ ತಲೆ ಎತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಆ ಸಮಸ್ಯೆಗಳ ಜೊತೆಗೆ ಮತ್ತಷ್ಟು ಸಮಸ್ಯೆಗಳು ಪೂರಕವೆಂಬಂತೆ ಇಂದು ವಿಜೃಂಭಿಸುತ್ತಿವೆ. ಅದರಲ್ಲಿ ನಕ್ಸಲ್ ಸಮಸ್ಯೆ ಗಂಭೀರವಾದುದಾಗಿದೆ. ಇಂದಿನ ಜನಪ್ರತಿನಿಧಿಗಳ ಬೇಜವಾಬ್ದಾರಿತನ, ಮತದಾರರ ಅಜ್ಞಾನ ಇವೆರಡೂ ಸೇರಿ ರಾಜ್ಯದ ಹಲವು ಪ್ರದೇಶಗಳು ಆರ್ಥಿಕ ಅಸಮಾನತೆಯಿಂದ ನರಳುತ್ತಿರುವುದಕ್ಕೆ, ಅವುಗಳ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣವಾಗಿದೆ. ಅಲ್ಲದೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿಯೂ ಸಮಾನ ಹಂಚಿಕೆಯಾಗದ ಕಾರಣ ಪ್ರತ್ಯೇಕತೆಯ ಕೂಗು ಮತ್ತೆ ಬುಗಿಲೆದ್ದಿದೆ. ಇಂದು ಕೊಡಗು ಪ್ರದೇಶ ತಾವು ಪ್ರತ್ಯೇಕವಾಗಿ ಉಳಿಯಲು ಬಯಸುತ್ತಿದೆ. ಇಂತಹ ಸಮಸ್ಯೆಗಳು ಎದುರಾಗಬಹುದೆಂದು ದೂರ ದೃಷ್ಟಿಯುಳ್ಳವರಾಗಿದ್ದ ಗೌಡರು ಅಂದೇ ಎರಡು ಕನ್ನಡ ನಾಡು ಆಗಬೇಕೆಂದು ಬಯಸಿದರು. ಇದರಿಂದ ಆಡಳಿತ ಸುಗಮ ನಿರ್ವಹಣೆ ಮತ್ತು ಆಯಾಯ ಪ್ರದೇಶಗಳಿಗೆ ತಕ್ಕಂತೆ ಕಾನೂನುಗಳ ಸ್ವರೂಪ ರಚನೆ ಹಾಗು ಎಲ್ಲಾ ಪ್ರದೇಶಗಳ ಅಭಿವೃದ್ಧಿಗೆ ಗಮನ ನೀಡಬಹುದಾದ ಅವಕಾಶ ಇವುಗಳಲ್ಲದೆ ಹಿಂದಿ ರಾಜ್ಯಗಳಂತೆ ಕನ್ನಡ ರಾಜ್ಯಗಳು ಕೇಂದ್ರದಲ್ಲಿ ತಮ್ಮ ಪ್ರಭಾವವನ್ನು ಬೀರಬಹುದೆಂದು ಗೌಡರು ಶಾಸನ ಸಭೆಯಲ್ಲಿ ಏಕೀಕರಣ ವಿರೋಧದ ಮೇಲೆ ಮಾಡಿದ ಭಾಷಣದಲ್ಲಿ ನಮೂದಿಸಿದ್ದರು. ಇವುಗಳು ಇಂದು ಬಹಳಷ್ಟು ಮಟ್ಟಿಗೆ ಸತ್ಯವಾಗಿ ಗೋಚರಿಸುತ್ತಿವೆ. ಇನ್ನು ಮುಂದಾದರೂ ಎರಡು ಕನ್ನಡ ರಾಜ್ಯಗಳಾಗಬಾರದೆಂದು ಏಕ ಕರ್ನಾಟಕವೇ ಅಸ್ತಿತ್ವದಲ್ಲಿ ಇರಬೇಕೆಂದು ಬಯಸುವುದಾದರೆ ರಾಜಕೀಯ ವಲಯದಲ್ಲಿ ಬಹಳಷ್ಟು ಸುಧಾರಣೆಗಳು ಆಗಬೇಕಾಗಿರುವುದು ಸೂಕ್ತವಾಗಿದೆ. ಎಲ್ಲಾ ಪ್ರದೇಶಗಳಿಗೂ ಸಮನಾದ ಆದ್ಯತೆ ನೀಡಿ ಜನಪ್ರತಿನಿಧಿಗಳು, ನೌಕರಶಾಹಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಏಕೀಕರಣ ಕರ್ನಾಟಕಕ್ಕೆ ದುಡಿದ ಮಹನೀಯರ ಶ್ರಮ ಸಾರ್ಥಕವಾಗುತ್ತದೆ ಎಂದೇಳಬಹುದು.

ಈ ಮೇಲಿನ ಎಲ್ಲಾ ಚಳುವಳಿಗಳಲ್ಲಿ ಹೆಚ್.ಕೆ.ವೀರಣ್ಣಗೌಡರು ತಮ್ಮನ್ನು ತೊಡಗಿಸಿಕೊಂಡಿದ್ದರ ಹಿನ್ನೆಲೆಯಲ್ಲಿ ಅವರೊಬ್ಬ ನಿಷ್ಠಾವಂತ ಕಾಂಗ್ರೆಸ್ ಕಟ್ಟಾಳುವಾಗಿದ್ದರೆಂಬುದನ್ನು ಮತ್ತು ದೇಶಭಕ್ತರಾಗಿದ್ದರು ಎಂಬುದನ್ನು ಗುರುತಿಸಬಹುದು. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದ ಮೊದಲ ನಾಯಕರ ಸಾಲಿನಲ್ಲಿ ಒಬ್ಬರಾಗಿ ದುಡಿದವರು ಹೆಚ್.ಕೆ.ವೀರಣ್ಣಗೌಡರು ಎಂದು ನಿಸ್ಸಂಶಯವಾಗಿ ಹೇಳಬಹುದು. 1920ರ ದಶಕದಲ್ಲಿ ನಾಲ್ಕಣೆಯ ಕಾಂಗ್ರೆಸ್ ಸದಸ್ಯರಾದ ವೀರಣ್ಣಗೌಡರು ತಮ್ಮ ಬದುಕಿನ ಸಂಧ್ಯಾಕಾಲದವರೆಗೂ ಕಾಂಗ್ರೆಸ್ಸಿಗರಾಗಿಯೇ ಉಳಿದಿದ್ದು ಅವರ ನಿಷ್ಠೆಗೆ ಸಾಕ್ಷಿಯಾಗಿದೆ. ಪಕ್ಷಾಂತರ ಹೆಚ್ಚಾಗಿರುವ ಈ ದಿನಗಳಲ್ಲಿ ಹೆಚ್.ಕೆ.ವೀರಣ್ಣಗೌಡರಂತಹ ನಾಯಕರ ಬದುಕು ಒಂದು ಮಾದರಿಯಾಗಿದೆ.

ಸ್ವಾತಂತ್ರ್ಯ ಹೋರಾಟಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಜಾಪಕ್ಷವನ್ನು ಕಾಂಗ್ರೆಸ್ಸಿನಲ್ಲಿ ವಿಲೀನಗೊಳಿಸಲು ಹೆಚ್.ಕೆ.ವೀರಣ್ಣಗೌಡರು ಸಾಕಷ್ಟು ಶ್ರಮಿಸಿದರು. ಇವರ ಕಾರ್ಯ ಕೌಶಲ್ಯತೆಯಿಂದ ಕಾಂಗ್ರೆಸ್ಸಿನಲ್ಲಿ ಕಾರ್ಯದರ್ಶಿಯ ಸ್ಥಾನವನ್ನು ಪಡೆದಿದ್ದರು. ಕಾರ್ಯದರ್ಶಿಯಾದ ಸಂದರ್ಭದಲ್ಲಿ ಹೆಚ್.ಕೆ.ವೀರಣ್ಣಗೌಡರು ಅವ್ಯವಸ್ಥೆಯ ಆಗರವಾಗಿದ್ದ ಕಾಂಗ್ರೆಸ್ ಕಚೇರಿಯನ್ನು ಒಂದು ಹಂತಕ್ಕೆ ತರಲು ಜಿ.ನಾರಾಯಣರ (ಬೆಂಗಳೂರಿನ ಮಾಜಿ ಮೇಯರ್) ಸಹಾಯವನ್ನು ಪಡೆದುಕೊಂಡರು. ಆರ್ಥಿಕ ಮುಗ್ಗಟ್ಟಿನಿಂದ ಎಷ್ಟೋ ವೇಳೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕಾರ್ಯಕರ್ತನಿಗೆ ಸೇರಿ ಎರಡು ಪ್ಲೇಟ್ ಮೊಸರನ್ನವನ್ನು ತಂದು ಹಂಚಿಕೊಂಡು ತಿಂದ ಸನ್ನಿವೇಶಗಳು ಉಂಟು. ಇಂತಹ ಸಂಕಷ್ಟದ ಪರಿಸ್ಥಿತಿಯಿಂದ ಕಾಂಗ್ರೆಸ್ಸನ್ನು ಮೇಲೆತ್ತಲು ಹೆಚ್.ಕೆ.ವೀರಣ್ಣಗೌಡರು ಊರು ಊರುಗಳಲ್ಲಿ ಚಂದಾಹಣವನ್ನು ಸಂಗ್ರಹಿಸಿದರ ಜೊತೆಗೆ ಸದಸ್ಯತ್ವದ ಶುಲ್ಕದಿಂದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದರು. ತಾವು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದಾಗಲೂ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಡಕುಗಳುಂಟಾಗದಂತೆ ಎಚ್ಚರ ವಹಿಸಿ ಕೆಲಸ ಮಾಡಿಸುತ್ತಿದ್ದದ್ದು ಅವರ ಕೌಶಲ್ಯತೆಗೆ ನಿದರ್ಶನವಾಗಿದೆ. ಹಾಗೆಯೇ ಕಾಂಗ್ರೆಸ್ ಪ್ರಚಾರಕ್ಕಾಗಿ ತಮ್ಮ ಪತ್ನಿಯ ಸಮೇತ ತಿಂಗಳು ಗಟ್ಟಲೆ ರಾಜ್ಯವನ್ನು ಸುತ್ತಿ ಸಭೆಗಳನ್ನು ನಡೆಸಿ ಕಾಂಗ್ರೆಸ್ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಿದರು. ಕಾಂಗ್ರೆಸ್ ಪಕ್ಷದಿಂದಲೇ ಜನಪ್ರತಿನಿಧಿಯಾಗಿ ಆಯ್ಕೆಗೊಂಡ ಹೆಚ್.ಕೆ.ವೀರಣ್ಣಗೌಡರು ಶಾಸನ ಸಭೆಯಲ್ಲಿ ಜವಾಬ್ದಾರಿಯುತವಾಗಿ ಪ್ರಮುಖ ವಿಷಯಗಳ ಮೇಲೆ ಪ್ರತಿಭಾನ್ವಿತವಾಗಿ ಭಾಷಣ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದರು. 1956ರಲ್ಲಿ ಎಸ್.ನಿಜಲಿಂಗಪ್ಪನವರ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಆ ಸರ್ಕಾರದಲ್ಲಿ ಹೆಚ್.ಕೆ.ವೀರಣ್ಣಗೌಡರು ಲೋಕೋಪಯೋಗಿ ಮಂತ್ರಿಗಳಾಗಿ ಆಯ್ಕೆಯಾದರು. ಅಲ್ಲದೆ ಬಿ.ಡಿ.ಜತ್ತಿಯವರ ಸಚಿವ ಸಂಪುಟದಲ್ಲೂ ಸಚಿವ ಸ್ಥಾನ ಪಡೆದ ಗೌಡರು ಇದೇ ಖಾತೆಯನ್ನು ನಿರ್ವಹಿಸಿದರು. ಈ ಎರಡು ಅವಧಿಯಲ್ಲಿ ಆದಷ್ಟು ಜನೋಪಯೋಗಿ ಕಾರ್ಯಗಳಿಗೆ ಆದ್ಯತೆ ನೀಡಿದರು. ನೀರಾವರಿ ಕಾಮಗಾರಿಗಳಿಗೆ, ರಸ್ತೆ ನಿರ್ಮಾಣ, ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳಿಗೆ ಹೆಚ್ಚಿನ ಗಮನ ಹರಿಸಿ ಉತ್ತಮ ರೀತಿಯ ಕಾರ್ಯಗಳನ್ನು ಮಾಡಿಸಿದರು. ಏಕೀಕರಣ ವಿರೋಧದ ಹಿನ್ನೆಲೆಯಲ್ಲಿ ಗೌಡರು ಸಚಿವರಾದಾಗ ಯಾವುದೇ ತಾರತಮ್ಯವನ್ನು ಮಾಡದೆ ಎಲ್ಲಾ ಪ್ರದೇಶದಲ್ಲಿ ಸಮಾನ ರೀತಿಯ ಕೆಲಸ ಕಾರ್ಯಗಳು ಜರುಗುವಂತೆ ನೋಡಿಕೊಂಡಿದ್ದು ಅವರಲ್ಲಿನ ಕರ್ತವ್ಯನಿಷ್ಠೆಗೆ, ನಿಷ್ಪಕ್ಷಪಾತತೆಗೆ ಸಾಕ್ಷಿಯಾಗಿದೆ. ಪೊಳ್ಳುತನ, ವಂಚಕತನ, ಭ್ರಷ್ಟತೆ, ಪಕ್ಷಪಾತತೆಯ ಲಕ್ಷಣಗಳು ಕಂಡು ಬಂದ ಕಡೆ ನಿಷ್ಠೂರವಾಗಿ ನಡೆದುಕೊಳ್ಳುತ್ತಿದ್ದರು. ಹಾಗಾಗಿ ಬದಲಾದ ರಾಜಕೀಯ

ವಾತಾವರಣಕ್ಕೆ ಅವರು ಅಪ್ರಸ್ತುತವಾಗುತ್ತ ಸಾಗಿದರು. ಆದರೆ ಎಷ್ಟೋ ನಾಯಕರು ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುತ್ತಾ ಹೋದಂತೆ ಅಧಿಕಾರದ ಗದ್ದುಗೆಗಳನ್ನು ಏರಿ ಕುಳಿತರು. ಆದರೆ ಪರಿಣಾಮಕಾರಿ ಜನಸೇವೆಗೆ ಅಧಿಕಾರದ ಅಗತ್ಯವನ್ನು ಮನಗಂಡಿದ್ದ ಹೆಚ್.ಕೆ.ವೀರಣ್ಣಗೌಡರು ಅಧಿಕಾರದಾಸೆಯಿದ್ದರೂ ತಮ್ಮ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲಾಗದ ಮನಃಸ್ಥಿತಿಯಿಂದಾಗಿ ದೂರ ಸರಿಯುತ್ತಾ ಹೋದರು. ಅಲ್ಲದೆ 1966ರ ಚುನಾವಣೆಯಲ್ಲಿ ಗುಂಪುಗುಳಿತನದಿಂದ ಕಾಂಗ್ರೆಸ್ ಪಕ್ಷದಿಂದ ಟಿಕೇಟ್ ದೊರೆಯದೆ ಹೋದಾಗ ಸ್ವಾಭಿಮಾನ ಬಿಟ್ಟುಕೊಡಲಾಗದೆ ಸ್ನೇಹಿತರ ಸಲಹೆಯ ಮೇರೆಗೆ ಕಿರುಗಾವಲು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದರು. ಮೊದಲಿನಿಂದಲೂ ಉದಾತ್ತವಾಗಿ, ತತ್ವಬದ್ಧವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ವೀರಣ್ಣಗೌಡರು ಈ ಚುನಾವಣೆಯಲ್ಲಿ ಹಠಕ್ಕೆ ಬಿದ್ದು ಇದ್ದುಬದ್ದ ಹಣವನ್ನು ವ್ಯಯಿಸಿ ಹೀನಾಯ ಸೋಲನ್ನು ಕಂಡರು. ಇತರರ ಮಾತಿಗೆ ಬಲಿಬಿದ್ದು ತಮ್ಮ ಆದರ್ಶಗಳಲ್ಲಿ ಆ ಮಟ್ಟಿಗೆ ಬದಲಾವಣೆ ಕಂಡುಕೊಂಡಿದ್ದು ವಿಷಾಧಕರ ಸಂಗತಿ.

ಹೆಚ್.ಕೆ.ವೀರಣ್ಣಗೌಡರು ತಮ್ಮ ತಂದೆಯವರಂತೆ ಕೋಪಿಷ್ಟರಾಗಿದ್ದರೂ, ಶಿಸ್ತಿನ ಸಿಪಾಯಿಯಂತೆ ನಡೆದುಕೊಳ್ಳುತ್ತಿದ್ದರು. ಇವರ ಕೋಪ ಮತ್ತು ನಿಷ್ಠೂರ ಗುಣಗಳೇ ಇವರು ಎಷ್ಟೇ ದೇಶಸೇವೆ, ಜನಸೇವೆಗೆ ದುಡಿದಿದ್ದರೂ ಹೆಚ್ಚಿನ ಜನಪ್ರಿಯತೆಯನ್ನು ತಂದುಕೊಡಲಿಲ್ಲವೆನ್ನಬಹುದು.


ಪತ್ರಿಕಾ ಮಾಧ್ಯಮದ ಮೂಲಕ ದೇಶಸೇವೆಯನ್ನು ಕೈಗೊಂಡಂತೆ ಹೆಚ್.ಕೆ.ವೀರಣ್ಣಗೌಡರು ಸಮುದಾಯ ಸಂಘಟನೆಯಲ್ಲೂ ತಮ್ಮ ಸಮಾಜ ಸೇವೆಯನ್ನು ಮುಂದುವರೆಸಿದ್ದರು. ಹಾಗಾಗಿ ಅವರು ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ನಿರ್ವಂಚನೆಯಿಂದ ಶ್ರಮಿಕ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ದುಡಿದಿರುವುದು ಕಂಡು ಬರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಸಮುದಾಯದ ಬಗ್ಗೆ ಅಭಿಮಾನವಿರುವಂತೆ ಹೆಚ್.ಕೆ.ವೀರಣ್ಣಗೌಡರು ಇದಕ್ಕೆ ಹೊರತಾದವರಲ್ಲ. ಅದರೆ ವೀರಣ್ಣಗೌಡರು ಒಕ್ಕಲಿಗ ಎಂಬ ಪದವನ್ನು ಜಾತಿವಾಚಕವಾಗಿ ನೋಡದೆ ಒಂದು ವೃತ್ತಿವಾಚಕವಾಗಿ ನೋಡುತ್ತಿದ್ದುದರಿಂದ ಒಟ್ಟಾರೆ ರೈತಾಪಿ ವರ್ಗದ ಪರವಾಗಿ ಕೆಲಸ ಮಾಡಿರುವುದನ್ನು ಗಮನಿಸಬಹುದು. ಗೌಡರ ಶಕ್ತಿ ಸಾಮರ್ಥ್ಯ ಮತ್ತು ಅನುಭವವನ್ನು ಪರಿಗಣಿಸಿ ಒಕ್ಕಲಿಗರ ಸಂಘದವರು ವೀರಣ್ಣಗೌಡರನ್ನು 1961ರಲ್ಲಿ ದಕ್ಷಿಣ ಭಾರತದ ಒಕ್ಕಲಗರ ಮಹಾಧಿವೇಶನ ನಡೆಸುವ ಜವಾಬ್ದಾರಿಯ ಹೊಣೆ ಹೊರಬೇಕಾಗಿ ಕೇಳಿಕೊಂಡಿದ್ದರು. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ ಹೆಚ್.ಕೆ.ವೀರಣ್ಣಗೌಡರು 1962ರಲ್ಲಿ ಒಕ್ಕಲಿಗರ ಅಧ್ಯಕ್ಷರಾಗಿ ಆಯ್ಕೆಯಾದರು. ಮೊದಲಿಗೆ ಸಂಘದ ಆರ್ಥಿಕ ಸುಭದ್ರತೆಗೆ ಮುಂದಾದರು.

ಸಂಘದ ಸ್ವತ್ತುಗಳನ್ನು ಕಬಳಿಸಲು ಕಾಯುತ್ತಿದ್ದವರಿಗೆ ಅವಕಾಶ ಮಾಡಿಕೊಡದೆ ಸಂಘದ ಸ್ವತ್ತುಗಳನ್ನು ಉಳಿಸಿ ಬೆಳೆಸಿದರು.

ಒಂದು ಸಮುದಾಯದ ಶೈಕ್ಷಣಿಕ ಬೆಳವಣಿಗೆ ಆ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದನ್ನರಿತಿದ್ದ ಹೆಚ್.ಕೆ. ವೀರಣ್ಣಗೌಡರು ಸಂಘವನ್ನು ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಕೊಂಡೊಯ್ದರು. ಈ ಪ್ರಯತ್ನದ ಫಲವಾಗಿ ಮೊದಲ ಬಾರಿಗೆ 1966ರಲ್ಲಿ ವಿ.ವಿ.ಪುರಂ ವಿಜ್ಞಾನ ಕಾಲೇಜು ಅಸ್ಥಿತ್ವಕ್ಕೆ ಬಂದಿತು. ನಂತರದಲ್ಲಿ ಕಲೆ, ವಾಣಿಜ್ಯ ಕಾಲೇಜು ಪ್ರಾರಂಭಿಸಲ್ಪಟ್ಟವು. ಇಂದು ಇನ್ನು ಹಲವಾರು ವಿಷಯಗಳಿಗೆ ಸಂಬಂಧಿಸಿದ ವೈದ್ಯಕೀಯ, ದಂತವೈದ್ಯಕೀಯ, ಇಂಜಿನಿಯರಿಂಗ್, ಕಾನೂನು ಮುಂತಾದ ಕಾಲೇಜುಗಳು ತಲೆಯೆತ್ತಿವೆ. ಇವುಗಳೆಲ್ಲದರ ಹಿಂದೆ ಹೆಚ್.ಕೆ.ವೀರಣ್ಣಗೌಡರ ಪ್ರಾಮಾಣಿಕ ದುಡಿಮೆ ಇದೆ. ಕಾಂಗ್ರೆಸ್‌ನಂತಹ ರಾಷ್ಟ್ರೀಯ ಸಂಸ್ಥೆಯಲ್ಲಿ ಜವಾಬ್ದಾರಿ ಸ್ಥಾನ ಹೊಂದಿದ್ದು ಜಾತೀಯ ಸಂಘಗಳಲ್ಲೂ ಹೊಣೆಗಾರಿಕೆಯ ಕೆಲಸ ವಹಿಸಿಕೊಂಡಿರುವುದು ತಾತ್ವಿಕವಾಗಿ ತಪ್ಪಲ್ಲವೇ? ಎಂಬ ಪ್ರಶ್ನೆಯೇಳಬಹುದು. ಬ್ರಾಹ್ಮಣೇತರರ ಸಂಘದ ಅನೇಕ ಸದಸ್ಯರಿಗೆ ಬ್ರಾಹ್ಮಣರನ್ನು ನಿಂದಿಸುವುದೇ ಒಂದು ಗುರಿಯಾಗಿದ್ದ ಸಂದರ್ಭದಲ್ಲಿ ವೀರಣ್ಣಗೌಡರು ಈ ಗುಂಪಿಗೆ ಸೇರಿದವರಾಗಿರಲಿಲ್ಲ. ತಾವು ಒಕ್ಕಲಿಗರ ಅಧ್ಯಕ್ಷರಾದ ಸಂದರ್ಭದಲ್ಲಿ ಸ್ನೇಹಿತರು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡುತ್ತಾ ಗೌಡರು 'ನಾನು ಒಕ್ಕಲಿಗರ ಅಧ್ಯಕ್ಷನಾದ ಮಾತ್ರಕ್ಕೆ ನನ್ನಲ್ಲಿ ಜಾತೀಯತೆ ಸುಳಿದಿದೆ ಎಂದು ಯಾರೂ ಭಾವಿಸಬಾರದು. ಒಕ್ಕಲಿಗರು ಎಂದರೆ ರೈತರು ಹಾಗಾಗಿ ಅವರ ಉದ್ಧಾರವಾದರೆ ದೇಶದ ಉದ್ಧಾರವಾದಂತೆ. ರೈತರಿಗೆ ಅನುಕೂಲವಾಗುವ ಕೆಲಸಗಳನ್ನು ಮಾಡುವ ಸಲುವಾಗಿ ತಾನು ಅಧ್ಯಕ್ಷನಾಗಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ವೀರಣ್ಣಗೌಡರದು ಹೋರಾಟದ ಬದುಕು. ಯಾರಿಗೂ ಎಂದೂ ತಲೆಬಾಗದೆ ಬದುಕಿದ್ದರು. ಅವರು ತಲೆಬಾಗಿದ್ದು ಮಹಾವ್ಯಕ್ತಿಗಳಿಗೆ, ಮಹಾತ್ಮರಿಗೆ. ವ್ಯಕ್ತಿಗತ ಪ್ರತಿಷ್ಠೆ ಕೊನೆಯಲ್ಲಿ ಅವರ ಅಭಿವೃದ್ಧಿಯನ್ನು ಕುಂಠಿತಗೊಳಿಸಿತು. ಗೌಡರು ಜನಾನುರಾಗಿಯಾಗಿದ್ದರೂ ಬಹುಜನಪ್ರಿಯ ವ್ಯಕ್ತಿಯಲ್ಲ. ಅವರನ್ನು ಕಂಡರೆ ಜನರಿಗೆ ಭಯಮಿಶ್ರಿತ ಭಕ್ತಿ ಗೌರವ. ಅದಕ್ಕೆ ಕಾರಣ ಅವರಿಗೆ ಮುಂಗೋಪ ಹೆಚ್ಚು. ಬೇಗನೆ ಕಿರಿಕಿರಿಗೊಳಗಾಗುತ್ತಿದ್ದರು. ಹೆಚ್ಚು ಮಾತು, ಕಡಿಮೆ ಕೆಲಸ, ಅತಿ ನಿಧಾನ ಅಪ್ರಾಮಾಣಿಕತೆಗಳನ್ನು

* * * * *



ಕೆ.ವಿ. ಶಂಕರಗೌಡ

– ಡಾ. ಶಿವರಾಂ

ವ್ಯಕ್ತಿ ಸಮಾಜದ ಅವಿಭಾಜ್ಯ ಅಂಗ, ಆ ವ್ಯಕ್ತಿ ಸಮಾಜದಲ್ಲಿ ಮಾಡಿದ ಸಾಧನೆಗಳಿಂದ ಉನ್ನತಕ್ಕೇರಿರುತ್ತಾನೆ. ಅಂತಹ ವ್ಯಕ್ತಿಗಳ ಬದುಕು ನಮಗೆ ಆದರ್ಶವಾಗಿರುತ್ತದೆ. ಅಂತಹವರ ಬದುಕಿನ ದಾರಿಯುನ್ನು ನಾವು ನೆನೆಯಬೇಕಾದುದು ನಾಗರೀಕ ಸಮಾಜದ ಆದ್ಯಕರ್ತವ್ಯವಾಗಿದೆ. ಈ ರೀತಿಯ ಅನುಕರಣೀಯ ಬದುಕು ನಡೆಸಿದ ಮಂಡ್ಯದ ಮಹಾಚೇತನವೇ ಕೆ.ವಿ. ಶಂಕರಗೌಡರು. ಕಲಾವಿದ, ನಾಟಕಗಾರ, ಸಹಕಾರಿ ದುರೀಣ ಹಾಗೂ ಶುದ್ಧಹಸ್ತದ ರಾಜಕಾರಣಿಯಾಗಿ ಜಿಲ್ಲೆಯಲ್ಲೇ ಅಲ್ಲದೇ ಕರ್ನಾಟಕ ರಾಜಕೀಯ ರಂಗದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದರು.

ಶಂಕರಗೌಡರದು ಬಹುಮುಖ ವ್ಯಕ್ತಿತ್ವ, ತಾನು ಕೈಗೊಂಡ ಯಾವ ರಂಗದಲ್ಲೇ ಆದರೂ ಅಚ್ಚುಕಟ್ಟುತನವಿರುತ್ತಿತ್ತು. ತನಗೆ ಸರಿಹೊಂದದ ಯಾವ ಕಾರ್ಯಯೋಜನೆ ಯಾದರೂ ಅವರು ಮಾಡುತ್ತಿರಲಿಲ್ಲ. ಕೈಗೊಂಡ ಕೆಲಸಗಳಲ್ಲೂ ದೂರದೃಷ್ಟಿ ಇರುತ್ತಿತ್ತು. ಅಂದು ಅವರ ದೂರದೃಷ್ಟಿಯಿಂದ ಮಂಡ್ಯ ಜಿಲ್ಲೆಯಲ್ಲಿ ಕಾರ್ಯಗತ ಗೊಳಿಸಿದ ಯೋಜನೆಗಳಾದ ಜಿಲ್ಲಾ ಸಹಕಾರ ಬ್ಯಾಂಕ್, ರೈತರ ವ್ಯವಸಾಯೋತ್ಪನ್ನ ಸೊಸೈಟಿ, ರೈತಸಭಾಂಗಣ, ಜನತಾಶಿಕ್ಷಣ ಟ್ರಸ್ಟ್ ಹಲವು ಕೈಗಾರಿಕೆಗಳು ಮಂಡ್ಯ ಜನರ ಆರ್ಥಿಕ ಬದುಕನ್ನು ಉತ್ತಮಗೊಳಿಸಿದವಲ್ಲದೇ ಅವರುಗಳ ಆರ್ಥಿಕಮಟ್ಟವನ್ನೂ ಉತ್ತಮಗೊಳಿಸಿವೆ. ಲೇವಾದೇವಿಗಾರರ ಕಪಿಮುಷ್ಠಿಯಿಂದ ರೈತರನ್ನು ಬಿಡುಗಡೆಗೊಳಿಸಿ ರೈತಮಕ್ಕಳಿಗೆ ಶಿಕ್ಷಣದ ಅನುಕೂಲತೆ ಮಾಡಿದ್ದಾರೆ. ಈ ಎಲ್ಲಾ ಕಾರ್ಯ ಯೋಜನೆಗಳಿಂದ ರೈತರ ಬದುಕಿನ ಹೊಂಗಿರಣವಾಗಿದ್ದಾರೆ.

ಶಂಕರಗೌಡರು ಅಧಿಕಾರದಲ್ಲಿರಲಿ, ಇಲ್ಲದಿರಲಿ ಜನಸೇವೆಗೋಸ್ಕರ ತಮ್ಮ ಬದುಕನ್ನು ಮೀಸಲಿರಿಸಿದ್ದರು. ಆದ್ದರಿಂದಲೇ ಕುವೆಂಪು ಅವರಿಂದ "ನಿತ್ಯಸಚಿವ" ಎಂಬ ಬಿರುದಿಗೆ ಭಾಜನರಾಗಿದ್ದರು. ಮಂಡ್ಯದ ಆಧುನಿಕತೆಗೆ ತಮ್ಮ ಇಡೀ ಬದುಕನ್ನೇ ಸವೆಸಿರುವ ಜೀವವೇ ಶಂಕರಗೌಡರು.

ಜನನ

ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಕೀಲಾರವೇ ಗೌಡರ ಹುಟ್ಟೂರು. ಜಿಲ್ಲಾ ಕೇಂದ್ರವಾದ ಮಂಡ್ಯ ನಗರದಿಂದ 14 ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಬೋಚಿವೀರಪ್ಪ ಮತ್ತು ವೀರಮ್ಮ ಎಂಬ ದಂಪತಿಗಳೇ ಗೌಡರ ಮಾತಾಪಿತೃಗಳು, ಗೌಡರು 1915ರ ಜುಲೈ 15ನೇ ತಾರೀಖಿನಂದು ಜನ್ಮತಾಳಿದರು. ತಮ್ಮ ಪ್ರಾರ್ಥನೆಗೆ ಓಗೊಟ್ಟು ಶಿವನೇ ತಮ್ಮ ಹೊಟ್ಟೆಯಲ್ಲಿ ಜನಿಸಿದರೆಂದು ಆ ದಂಪತಿಗಳು ಹರ್ಷಚಕಿತರಾದರು. ಇವನಿಂದ ಲೋಕಕ್ಕೆ ಶಂಕರಪ್ಪ ಲಭಿಸಲೆಂದು "ಶಂಕರ" ಎಂದು ಹೆಸರಿಟ್ಟರು. ಕೂಡು ಕುಟುಂಬದಲ್ಲಿ ತಂದೆ ತಾಯಿಯವರ ಸೂಕ್ತ ಮಾರ್ಗದರ್ಶನದಲ್ಲಿ ಇವರ ಬಾಲ್ಯ ರೂಪುಗೊಂಡಿತು.

ವಿದ್ಯಾಭ್ಯಾಸ

ಬೋಚಿವೀರಪ್ಪನವರು ಅಕ್ಷರಸ್ಥರಾದ್ದರಿಂದ ತಮ್ಮ ಮಗನನ್ನು ವಿದ್ಯಾಭ್ಯಾಸಕ್ಕೆ ತೊಡಗಿಸಿದ್ದರು. ಕೀಲಾರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೇ ಶಿಕ್ಷಣ ಆರಂಭವಾಯಿತು. ಬಾಲ್ಯದಲ್ಲೇ ಚುರುಕು ಬುದ್ಧಿಯವರಾದ ಗೌಡರು ಉಪಾಧ್ಯಾಯರು ಅಕ್ಷರಾಭ್ಯಾಸ ಮಾಡುವಾಗ ತದೇಕ ಚಿತ್ತದಿಂದ ಆಲಿಸುತ್ತಿದ್ದರು. ಸುಲಲಿತವಾಗಿ ಅದನ್ನು ಗ್ರಹಿಸಿ ಮನೆಯಲ್ಲಿಯೂ ಆ ಅಭ್ಯಾಸವನ್ನು ಮುಂದುವರಿಸುತ್ತಿದ್ದರು. ಇವರ ಕುಟುಂಬ ಕಲಾವಿದರ ಕುಟುಂಬವಾಗಿತ್ತು. ಬಾಲ್ಯದಲ್ಲೇ ಅವರಿಗೆ ನಾಟಕದ ಗೀಳು ಹಚ್ಚಲು ಇದುವೇ ಕಾರಣವಾಗಿತ್ತು. ತಂದೆ ಪೂಜೆ ಮಾಡುತ್ತಿದ್ದಾಗ ಹೇಳುತ್ತಿದ್ದ ದೇವರ ಶ್ಲೋಕಗಳನ್ನು ಆಲಿಸಿ ಅದನ್ನು ಕಂಠಪಾಠ ಮಾಡುತ್ತಿದ್ದರು. ಭೂತನಹೊಸೂರು ಮರೀಗೌಡರು ಇವರಿಗೆ ಉಪಾಧ್ಯಾಯರಾಗಿದ್ದರು. ಶಾಲೆಯಲ್ಲಿ ಚೂಟಿಯಾಗಿದ್ದ ಗೌಡರನ್ನು ಕಂಡರೆ ಇವರಿಗೆ ತುಂಬಾ ಅಚ್ಚುಮೆಚ್ಚು. ಮರೀಗೌಡರು ಒಳ್ಳೆಯ ಉಪಾಧ್ಯಾಯರು ಮಾತ್ರವಲ್ಲದೇ ಭಾಷಾಪಂಡಿತರು ಹಾಗೂ ಸಾಹಿತ್ಯದಲ್ಲಿ ಅಪಾರಪ್ರೇಮವಿರಿಸಿಕೊಂಡಿದ್ದವರು. ಇವರಿಂದಲೇ ಶಂಕರಗೌಡರಿಗೆ ಸಾಹಿತ್ಯಾಭಿರುಚಿ ಹಾಗೂ ಭಾಷಾ ಪ್ರೌಢಿಮೆ ಇವರಿಂದಲೇ ಬೆಳೆಯಿತೆನ್ನಬಹುದು. 1928ರಲ್ಲಿ ಖಾಸಗಿಯಾಗಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತು

ಇಡೀ ರಾಜ್ಯಕ್ಕೆ ಎರಡನೆಯವರಾಗಿ ಉತ್ತೀರ್ಣರಾದರು. ಕ್ರೀಡಾಪ್ರೇಮಿಯಾಗಿದ್ದ ಗೌಡರಿಗೆ ಗ್ರಾಮೀಣ ಕ್ರೀಡೆಗಳಾದ ಬುಗುರಿ, ಗುಡುಗಾಟ, ಈಜು, ಚಂಡಾಟ ಅತ್ಯಂತ ಪ್ರಿಯವಾಗಿದ್ದವು.

ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ಗೌಡರು ಪ್ರೌಢಶಾಲೆಗೆ ಸೇರಿದರು. ಗ್ರಾಮೀಣ ಪ್ರದೇಶದ ಹುಡುಗನೊಬ್ಬ ಪ್ರೌಢಶಾಲೆಯ ಪ್ರವೇಶವನ್ನು ಪಡೆದದ್ದು ಆ ದಿನಗಳಲ್ಲಿ ಒಂದು ಮಹತ್ವದ ಹಂತ. ಆ ವೇಳೆಯಲ್ಲಿ ಮಂಡ್ಯದಲ್ಲಿ ಪ್ರೌಢಶಾಲೆ ಇರಲಿಲ್ಲ. ಆದ್ದರಿಂದ ಶಂಕರಗೌಡರು 1930ರಲ್ಲಿ ಚನ್ನಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಮುಂದುವರಿಸಿದರು. ಪ್ರೌಢಶಾಲಾ ಹಂತದಲ್ಲೇ ಗೌಡರು ತಮಗೆ ಇಚ್ಚೆಯೆನಿಸಿದ ವಿಜ್ಞಾನವನ್ನು ಐಚ್ಚಿಕ ವಿಷಯವನ್ನಾಗಿ ಆಯ್ದುಕೊಂಡರು. ಚನ್ನಪಟ್ಟಣದ ಒಕ್ಕಲಿಗ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡೇ ವಿದ್ಯಾಭ್ಯಾಸ ಮುಂದುವರಿಸಿದರು. ಚನ್ನಪಟ್ಟಣದ ಅಂದಿನ ಪ್ರೌಢಶಾಲೆಯಲ್ಲಿ ಶಂಕರಗೌಡರ ಸಹಪಾಠಿಗಳೆಂದರೆ ಎಚ್.ಎಲ್. ನಾಗೇಗೌಡ, ಎನ್. ಹುಚ್ಚಿಮಾಸ್ತಿಗೌಡ, ಡಾ. ರಾಮಚಂದ್ರ ಮೊದಲಾದವರಾಗಿದ್ದರು.

ಶಂಕರಗೌಡರಿಗೆ ಹುಟ್ಟಿನಿಂದಲೇ ಬಂದ ನಾಟಕಕಲೆ ಅವರೆಲ್ಲೇ ಹೋದರೂ ಹಿಂಬಾಲಿಸುತ್ತಿತ್ತು. ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ 'ಸಾವಿನ ಸಮಸ್ಯೆ" ಎಂಬ ನಾಟಕವನ್ನು ಪ್ರದರ್ಶಿಸಲೂ ಪ್ರಯತ್ನಿಸಿದಾಗ ಗೌರಿ ಎಂಬ ಸ್ತ್ರೀ ಪಾತ್ರಧಾರಿಯಾಗಿ ಹಾಗೂ ಹೆಚ್.ಎಲ್. ನಾಗೇಗೌಡರು ನಾಗಪ್ಪನೆಂಬ ಕುಡುಕನ ಪಾತ್ರದಲ್ಲಿ ಅಭಿನಯಿಸಿದರು. ಶಂಕರಗೌಡರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡಿದ್ದರು. ಶಾಕುಂತಲ, ಮೃಚ್ಛಕಟಿಕ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರ ಗಳನ್ನು ಬಿ. ವೆಂಕಟಾಚಾರ್ ಮತ್ತು ಗಳಗನಾಥರ ಕಾದಂಬರಿ ಗಳನ್ನು "ಟ್ರೆಜರ್ ಐಲೆಂಡ್, ರಾಬಿನ್‌ಸನ್ ಕ್ರೂಸೋ ಮೊದಲಾದ ಆಂಗ್ಲ ಕೃತಿಗಳನ್ನು ಓದಿ ಕರಗತ ಮಾಡಿಕೊಂಡಿದ್ದರು. ಶಾಲೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ನಡೆಯುತ್ತಿದ್ದ ಚರ್ಚಾಸ್ಪರ್ಧೆ, ಕಾವ್ಯವಾಚನ, ಪ್ರಬಂಧ ಸ್ಪರ್ಧೆ, ನಾಟಕ ಸ್ಪರ್ಧೆಗಳಲ್ಲಿ ಗೌಡರಿಗೆ ಬಹುಮಾನಗಳು ಬರುತ್ತಿದ್ದವು. ಆ ಕಾಲದಲ್ಲಿ ಪ್ರಸಿದ್ಧ ದಿನಪತ್ರಿಕೆಯಾದ 'ತಾಯಿನಾಡು' ಪತ್ರಿಕೆಯಲ್ಲಿನ ಸಂಪಾದಕೀಯ ಲೇಖನಗಳನ್ನು ತಪ್ಪದೇ ಓದುತ್ತಿದ್ದರು. ಗಾಂಧೀಜಿಯವರ ಅಪ್ಪಟ ಅಭಿಮಾನಿಯಾದ ಗೌಡರು ಗಾಂಧೀಜಿಯವರ ಬಗ್ಗೆ ಯಾವೊಂದು ಲೇಖನವನ್ನು ತಪ್ಪದೇ ಓದುತ್ತಿದ್ದರು. ಅಲ್ಲದೇ 1931ರಲ್ಲಿ ಗಾಂಧೀಜಿ ಚನ್ನಪಟ್ಟಣಕ್ಕೆ ಬಂದಿದ್ದಾಗ ಅವರನ್ನು ನೋಡಿ

ಅವರಿಂದ ಪ್ರಭಾವಿತರಾಗಿದ್ದರು. ಆ ವೇಳೆಯಲ್ಲಿ ದೇಶದಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಿಂದ ಪ್ರಭಾವಗೊಂಡು ವಿದ್ಯಾರ್ಥಿನಿಲಯದಲ್ಲಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ರಾಷ್ಟ್ರೀಯತೆಯನ್ನು ತಮ್ಮ ದಮನಿಗಳಲ್ಲಿ ಬೆಳೆಸಿಕೊಂಡರು.

1932ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರ ಗೌಡರು ಮೈಸೂರಿನ ಇಂಟರ್‌ಮೀಡಿಯೆಟ್ (ಈಗಿನ ಯುವರಾಜ) ಕಾಲೇಜನ್ನು ಸೇರಿದರು. ಅವರು ಐಚ್ಚಿಕವಿಷಯವಾಗಿ ವಿಜ್ಞಾನವನ್ನು ಆಯ್ಕೆಮಾಡಿಕೊಂಡರು. ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಗಣಿತ ವಿಜ್ಞಾನಗಳು ಅವರು ಕಾಲೇಜಿನಲ್ಲಿ ಆರಿಸಿಕೊಂಡ ವಿಷಯಗಳು. ಕುವೆಂಪು ಎಸ್.ವಿ. ಲಿಂಗಣ್ಣ, ತ್ಯಾಗರಾಜನ್ ಮುಂತಾದ ಖ್ಯಾತನಾಮರು ಇವರ ಅಧ್ಯಾಪಕರಾಗಿದ್ದರು. ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್ ನಾಟಕಗಳು, ಜೂಲಿಯಸ್ ಸೀಸರ್, ಆಂಟೋನಿ ಕ್ಲಿಯೋಪಾತ್ರರ ಸಂಭಾಷಣೆಯನ್ನು ಕರಗತಮಾಡಿ ಕೊಂಡಿದ್ದರು. ಇಂಟರ್ ಮೀಡಿಯೆಟ್‌ನಲ್ಲಿದ್ದಾಗ ವಿದ್ಯಾರ್ಥಿವೇತನ ಅವರಿಗೆ ದೊರಕಿತು. 1935ರಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವಿಜ್ಞಾನ ವಿದ್ಯಾರ್ಥಿಯಾಗಿದ್ದುದರಿಂದ ಬಿ.ಎಸ್ಸಿ ತರಗತಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಆ ವೇಳೆಗೆ ಚನ್ನಪಟ್ಟಣದ ವಿದ್ಯಾರ್ಥಿಗಳೆಯರೆಲ್ಲರೂ ಮತ್ತೆ ಒಂದೆಡೆ ಸೇರಿದ್ದರಿಂದ ನಾಟಕ, ಚರ್ಚೆ, ಭಾಷಣ ಸಂಗೀತ ಮತ್ತೆ ಅವರ ಹವ್ಯಾಸಗಳಾದವು. ಇದರ ಜೊತೆಗೆ ಭಾರತದಾದ್ಯಂತ ಆವರಿಸಿಕೊಂಡಿದ್ದ ಸ್ವಾತಂತ್ರ್ಯ ಸಮರದ ಬಿರುಗಾಳಿ ಬೆಂಗಳೂರಿನಲ್ಲಿಯೂ ಬೀಸುತ್ತಿತ್ತು. ಸ್ವಾತಂತ್ರ್ಯಯೋಧರು ಹಾಗೂ ರಾಷ್ಟ್ರೀಯ ನಾಯಕರು ರಾಜ್ಯ ಮುಖಂಡರು ಮಾಡುತ್ತಿದ್ದ ಭಾಷಣಗಳಿಗೆ ಗೌಡರು ಹಾಜರಾಗುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಪತ್ರಿಕೆಗಳಲ್ಲಿ ಬರುತ್ತಿದ್ದ ಬರಹಗಳನ್ನು ಸತತವಾಗಿ ಓದುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಗಾಂಧೀಜಿ ಉಪವಾಸವ್ರತ ಕೈಗೊಂಡಾಗ ಗೌಡರು ತಮ್ಮ ಸಹ ಮಿತ್ರರೊಡನೆ ಸಾಂಕೇತಿಕವಾಗಿ ಒಂದು ದಿನ ಉಪವಾಸ ಕೈಗೊಂಡರು. ವಿದ್ಯಾರ್ಥಿನಿಲಯದಲ್ಲಿ ನಡೆಯುವ ಪಠ್ಯೇತರ ಚಟುವಟಿಕೆಯಲ್ಲಿ ಅವರು ಭಾಗವಹಿಸುತ್ತಿದ್ದುದರಿಂದ ಈ ಚಟುವಟಿಕೆಯು ಮುಂದೆ ಒಬ್ಬ ಆದರ್ಶ ವ್ಯಕ್ತಿಯಾಗಿ ಬೆಳೆಯಲು ಅನುವಾಯಿತು. ಹೀಗೆ ಬಾಲ್ಯದಲ್ಲಿ ಕಿಡಿಯಾಗಿ ಸೇರಿದ ಪ್ರತಿಭಾಶಕ್ತಿ ಅವರ ಕಾಲೇಜು ದಿನಗಳಲ್ಲಿ ಉಜ್ವಲ ಜ್ಯೋತಿಯಾಯಿತು.

ಶಂಕರಗೌಡರು ಯಾವಾಗಲೂ ಯಾವ ವಿಷಯದಲ್ಲೂ ಅಜಾಗರೂಕರಾದವರಲ್ಲ. ಬಿ.ಎಸ್ಸಿ ಅಂತಿಮಪರೀಕ್ಷೆಯ ವೇಳಾಪಟ್ಟಿಯಲ್ಲಾದ

ವ್ಯತ್ಯಾಸದಿಂದ ಗೈರುಹಾಜರಾಗ ಬೇಕಾಯಿತು. ಇದರ ಪರಿಣಾಮವಾಗಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು. ಬಿಎಸ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರಿಂದ ಕಾಲೇಜಿಗೆ ಹೋಗಬೇಕಾದ ಪ್ರಮೇಯ ಇರಲಿಲ್ಲ. ಸಾಕಷ್ಟು ಸಮಯ ಅವರಿಗೆ ದೊರೆಯಿತು. ಆ ಸಮಯವನ್ನು ವ್ಯರ್ಥ ಮಾಡದೇ ಬೆಂಗಳೂರು ನಗರಸಭೆಯ ಕಂದಾಯ ವಿಭಾಗದಲ್ಲಿ ಗುಮಾಸ್ತ ಹುದ್ದೆಗೆ ಸೇರಿಕೊಂಡರು. ಆ ಕಛೇರಿಯ ಮೇಲ್ವಿಚಾರಕರ ನಡತೆಯಿಂದ ಬೇಸತ್ತು ಆ ಹುದ್ದೆಗೆ ರಾಜಿನಾಮೇ ನೀಡಿ ಹೊರಬಂದರು. ಸ್ವಲ್ಪಸಮಯ ಮಂಡ್ಯದಲ್ಲಿ ತಾವು ಕಲಿತ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ಕೈಗೊಂಡರು. ಶಿಕ್ಷಕರಾಗಿ ತಾವು ಕಂಡುಂಡ ನೋವು ನಲಿವುಗಳು ಮುಂದೆ ವಿದ್ಯಾಮಂತ್ರಿಯಾಗಿ ಅವರಿಗೆ ಸ್ಪಂದಿಸಲು ಸಹಕಾರಿಯಾಯಿತು. ಇಷ್ಟೆಲ್ಲಾ ಸಂಕಷ್ಟಗಳ ನಡುವೆಯೂ 1940ರಲ್ಲಿ ಬಿ.ಎಸ್ಸಿ ಪದವಿ ಪಡೆದರು.

ಶಿವಪುರ ಧ್ವಜಸತ್ಯಾಗ್ರಹದಲ್ಲಿ ಶಂಕರಗೌಡರು

ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಶಿವಪುರದಲ್ಲಿ ಸಮಾವೇಶಗೊಂಡಿದುದರಿಂದ ಶಿವಪುರವು ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಸ್ಥಾನಗಳಿಸಿದೆ. ನಿಜವಾಗಿಯೂ ಮೈಸೂರಿನಲ್ಲಿ ಆರಂಭವಾದ ಉಗ್ರರೂಪ ಚಳುವಳಿಗೆ ಶಿವಪುರ ಕಾಂಗ್ರೆಸ್ ಅಧಿವೇಶನವೇ ನಾಂದಿ ಯಾಯಿತು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಅಂದಿನಿಂದಲೇ ಆರಂಭವಾಯಿತೆನ್ನಬಹುದು. ಶಿವಪುರವು ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಶಿಂಷಾ ನದಿಯ ದಡದಲ್ಲಿರುವ ಒಂದು ಚಿಕ್ಕಗ್ರಾಮ. ಈ ಊರಿನಲ್ಲಿ 1938 ಏಪ್ರಿಲ್ 9,10,11 ರಂದು ಸಂಸ್ಥಾನದಾದ್ಯಂತ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಬಂದಿದ್ದ ಭಾರಿ ಜನಸ್ತೋಮವೇ ಸೇರಿತ್ತು. ಶಂಕರಗೌಡರು 1938ರಲ್ಲಿ ನಡೆದ ಈ ಶಿವಪುರ ರಾಷ್ಟ್ರಕೂಟದಲ್ಲಿ ಎಂ.ಎನ್. ಜೊಯಿಸ್‌ರವರ ಸ್ವಯಂ ಸೇವಕ ಪಡೆಯಲ್ಲಿ ಶಿಸ್ತಿನ ಸಿಪಾಯಿಯಂತೆ ಭಾಗವಹಿಸಿ ನಾಡಿನಾದ್ಯಂತ ಬಂದು ಪಾಲ್ಗೊಂಡಿದ್ದ ಹಿರಿಯ ನಾಯಕರ ಯುವಕ ಮುಂದಾಳುಗಳ ನಿಕಟ ಪರಿಚಯ ಮತ್ತು ದರ್ಶನವನ್ನು ಪಡೆದರು. ಶಿವಪುರ ರಾಷ್ಟ್ರಕೂಟದಲ್ಲಿ ನಡೆದ ಹರಿಯರ ಭಾಷಣಗಳು ಅವರ ಮೇಲೆ ಅಗಾಧ ಪರಿಣಾಮ ಬೀರಿತು. ಟಿ. ಸುಬ್ರಹ್ಮಣ್ಯಂ ಅವರ ಭಾಷಣ ಶಂಕರಗೌಡರ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಬೀರಿತು. ಬಂಧನಗೊಂಡ ಮುಖಂಡರು ಪೋಲೀಸ್ ಗಾಡಿಯಲ್ಲಿ ಹೋಗುತ್ತಿದ್ದ ದೃಶ್ಯಗಳು ಕಾಂಗ್ರೆಸ್ ಧ್ವಜಾರೋಹಣ ಮತ್ತು ರಾಷ್ಟ್ರಗೀತೆಯ ಸಾಮೂಹಿಕ ಗಾಯನ ಒಂದೊಂದು

ಅವರ ಸ್ಮೃತಿಕೋಶದಲ್ಲಿ ಹಸಿರಾಗಿದ್ದು. ರಾಷ್ಟ್ರಕೂಟದ ಮುಂದಾಳುತನ ವಹಿಸಿದ್ದ ಜಿಲ್ಲೆಯ ನಾಯಕರುಗಳಾದ ಎಸ್. ಚನ್ನಯ್ಯ ಮತ್ತು ವೀರಣ್ಣಗೌಡರ ಸೇವಾ ಮನೋಭಾವ ಗೌಡರ ಮೇಲೆ ಪರಿಣಾಮವನ್ನುಂಟು ಮಾಡಿತು. ತಾವೂ ಅವರಂತೆ ಆಗಬೇಕೆಂಬ ಹಂಬಲ ಅವರಲ್ಲಿ ಮೂಡಿತು. ತಾನೂ ರಾಷ್ಟ್ರದ ಈ ಯೋಜನಾ ಯಜ್ಞದಲ್ಲಿ ಪಾಲುಗೊಳ್ಳಬೇಕೆಂಬ ದೃಢ ನಿರ್ಧಾರ ಅವರಲ್ಲಿ ಮೊಳಕೆಯೊಡೆಯಿತು.

ವಿದುರಾಶ್ವತ್ಥ ಧ್ವಜಾಸತ್ಯಾಗ್ರಹದಲ್ಲೂ ಶಂಕರಗೌಡರು ಪಾಲ್ಗೊಂಡಿದ್ದರು. ಗೌರಿಬಿದನೂರಿನ ವಿದುರಾಶ್ವತ್ಥಕ್ಕೆ ಗೌಡರು ತಮ್ಮ ಅಣ್ಣನೊಡನೆ ಹೋಗಿ ಬಂದಿದ್ದರಿಂದ ಅಲ್ಲಿನ ವಿದ್ಯಮಾನ ಅವರ ನೆನಪಿನಾಳದಲ್ಲಿ ನಾಟಿಕೊಂಡಿತು. ಅವರು ವಿದ್ಯಾರ್ಥಿಯಾಗಿದ್ದಾಗಲೇ ಇಂತಹ ಚಳುವಳಿಗಳ ಅನುಭವ ಅವರಿಗಾಗುತ್ತದೆ. ಈ ಸ್ವಾತಂತ್ರ್ಯಾನುಭವ ಮುಂದೆ ಅವರು ಒಬ್ಬ ಉಜ್ವಲ ರಾಷ್ಟ್ರನಾಯಕರಾಗುವಲ್ಲಿ ಅನುವು ಮಾಡಿಕೊಟ್ಟಿತು ಎಂದು ದೇಜಗೌ ಅಭಿಪ್ರಾಯಪಟ್ಟಿದ್ದಾರೆ.

ಕಾನೂನು ವಿದ್ಯಾಭ್ಯಾಸ

1940ರಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದನಂತರ ಗೆಳೆಯರಾದ ಡಾ. ಎಂ.ಹೆಚ್ ಮರೀಗೌಡ ಮತ್ತು ಡಿ. ಲಿಂಗೇಗೌಡರ ಸಲಹೆ ಸೂಚನೆ ಒತ್ತಾಸೆಯಿಂದ ಬೆಳಗಾವಿಗೆ ತೆರಳಿ ಅಲ್ಲಿ ಕಾನೂನು ಕಾಲೇಜಿನಲ್ಲಿ ನ್ಯಾಯಶಾಸ್ತ್ರ ವ್ಯಾಸಂಗವನ್ನು ಮುಂದುವರಿಸಿದರು. 1944ರಲ್ಲಿ ಕಾನೂನು ಪದವಿಯನ್ನು ಪಡೆದು ನಂತರ 1944ರಲ್ಲಿ ಸುಶೀಲಮ್ಮ ಎಂಬ ವಧುವನ್ನು ವಿವಾಹವಾದರು. ಬೆಳಗಾವಿಯಿಂದ ವಾಪಸ್ ಆದ ನಂತರ ಮಂಡ್ಯದ ಸುಪ್ರಸಿದ್ಧ ನ್ಯಾಯವಾದಿ ಎಚ್. ಹೊಂಬೇಗೌಡರ ಮಾರ್ಗದರ್ಶನದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ವೃತ್ತಿಯಲ್ಲಿ ವಕೀಲರಾದರೂ ಇವರ ಮನಸ್ಸು ರಾಜಕೀಯ, ಸಾಮಾಜಿಕ ರಂಗದತ್ತ ತುಡಿಯುತ್ತಲೇ ಇತ್ತು. ಅಂತಿಮವಾಗಿ ರಾಜಕೀಯವನ್ನೇ ತಮ್ಮ ಬದುಕಿನ ಕ್ಷೇತ್ರವನ್ನಾಗಿಸಿಕೊಳ್ಳುವ ದೃಢ ನಿಶ್ಚಯ ಮಾಡಿದ ಗೌಡರು 1946ರಲ್ಲಿ ಜಿಲ್ಲಾ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ಮಂಡ್ಯ ತಾಲ್ಲೂಕಿನಿಂದ ಸ್ಪರ್ಧಿಸಿ ವಿಜಯಿಯಾದರು. ಮುಂದೆ 1947ರಲ್ಲಿ ರಾಜ್ಯಾಂಗ ಸಭೆಗೂ ಚುನಾಯಿತರಾದರು.

ಸಮಾಜ ಸೇವಾ ಕಾರ್ಯಾರಂಭ

ಶಂಕರಗೌಡರು ಮಹಾತ್ಮಗಾಂಧೀಜಿಯವರ ಆದರ್ಶ ಹಾಗೂ ಗ್ರಾಮ ನೈರ್ಮಲ್ಯೀಕರಣ ಮುಂತಾದ ವಿಚಾರಗಳಿಗೆ ಮನಸೋತು ಅವುಗಳನ್ನು ತಮ್ಮ

ಬದುಕಿನಲ್ಲಿ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಆ ಉದಾತ್ತ ವಿಚಾರಗಳನ್ನು ಅಳವಡಿಸಿಕೊಳ್ಳಲು ಮುಂದಾದರು. ಮಂಡ್ಯಕ್ಕೆ 1932ರಲ್ಲಿ ಕೆ.ಆರ್.ಎಸ್. ನಿಂದ ಬಂದ ಜಿಲ್ಲೆಯ ಜನರು ಹಲವಾರು ರೀತಿಯ ರೋಗಗಳಿಂದ ಬಳಲುತ್ತಾರೆ. ಅಲ್ಲದೇ ಅವರಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಗ್ರಾಮನೈರ್ಮಲ್ಯ ಹಾಗೂ ಸ್ವಚ್ಚತೆಯ ಕಡೆಗೆ ಗಮನ ನೀಡಿರಲಿಲ್ಲ. ಊರಿಂದೂರಿಗೆ ರಸ್ತೆಗಳಿರಲಿಲ್ಲ. ಬೀದಿಯಲ್ಲಿ ಹಳ್ಳಕೊಳ್ಳಗಳು, ಊರಸುತ್ತ ತಿಪ್ಪೆ ಗುಂಡಿಗಳು ಅವುಗಳಲ್ಲಿ ಸದಾನೀರು ನಿಂತು ರೋಗರುಜಿನ ಗಳ ಕಾರಸ್ಥಾನವಾಗಿರುತ್ತದೆ. ಈ ಸ್ಥಿತಿಯು ಗೌಡರ ಸ್ವಗ್ರಾಮ ಕೀಲಾರದಲ್ಲೂ ಇದ್ದುದನ್ನು ಮನಗಂಡು ಇದರ ನಿರ್ಮೂಲನೆಯ ದೃಢ ನಿರ್ಧಾರವನ್ನು ಕೈಗೊಂಡರು.

ಎಲ್ಲಾ ಹಳ್ಳಿಗಳಂತೆ ಕೀಲಾರದಲ್ಲೂ ಗುಂಪುಗಾರಿಕೆ ಇತ್ತು. ಹಳ್ಳಿಯ ರಾಜಕೀಯ ಗುಂಪುಗಾರಿಕೆ ಕೆಲವೊಮ್ಮೆ ಎಷ್ಟು ತೀವ್ರವಾಗಿತ್ತೆಂದರೆ ಜಗಳ, ಕಚ್ಚಾಟ, ಸಾವು – ನೋವು ಸಂಭವಿಸುವ ನಿದರ್ಶನಗಳು ಉಂಟು. ಗ್ರಾಮಗಳಲ್ಲಿನ ಗುಂಪುಗಾರಿಕೆ ಹಾಗೂ ಒಳಪಂಗಡಗಳಿಂದ ಊರಿನ ನೈರ್ಮಲ್ಯ ಸ್ವಚ್ಚತೆಯನ್ನು ನಿರ್ಲಕ್ಷಿಸಿದರು. ಇದನ್ನು ಮನಗಂಡ ಗೌಡರು ವಿದ್ಯಾವಂತರಾದ ನಾವು ಹಳ್ಳಿಯ ಗ್ರಾಮನಿರ್ಮಲೀಕರಣ ಕಾರ್ಯದಲ್ಲಿ ತೊಡಗದಿದ್ದರೆ ನಾವು ಹಾಳಾದಂತೆ ಎಂದು ತಿಳಿದು ನಿಶಕ್ತರಾದ ಹಳ್ಳಿಯ ಜನರನ್ನು ಒಂದು ಕಡೆ ಸಭೆ ಸೇರಿಸಿ ಗ್ರಾಮನೈರ್ಮಲ್ಯ, ಸ್ವಚ್ಚತೆಯ ಅವಶ್ಯಕತೆ ಹಾಗೂ ಗ್ರಾಮಕ್ಕೊದಗಿಸಿಕೊಳ್ಳಬೇಕಾದ ಸೌಕರ್ಯಗಳ ಬಗ್ಗೆ ತಿಳಿವಳಿಕೆ ನೀಡಿದರು. ಇದರ ಫಲವಾಗಿ ಕೀಲಾರದಲ್ಲಿ ಬೀದಿಯ ಮಧ್ಯದಲ್ಲಿನ ಹೊಂಡಗಳು ಸಮನಾಗಿ, ರಸ್ತೆಗಳು ದುರಸ್ತಿಗೊಳಿಸಿ ಊರಿಗೆ ಹೊಸಕಳೆಯನ್ನು ತಂದುಕೊಟ್ಟರು. ಶಂಕರಗೌಡರು ಊರಿನ ಎಲ್ಲರ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿ 1945ರಲ್ಲಿ ಅವರೇ ಕೀಲಾರ ಗ್ರಾಮಪಂಚಾಯಿತಿಯ ಅಧ್ಯಕ್ಷರಾದರು. ಆ ವೇಳೆಗೆ ಕರ್ನಾಟದಲ್ಲೇ ಮೊಟ್ಟಮೊದಲ ಪದವೀಧರ ಪಂಚಾಯಿತಿ ಅಧ್ಯಕ್ಷರೆಂಬ ಹೆಗ್ಗಳಿಕೆಗೂ ಕಾರಣರಾಗಿದ್ದರು. ಇವರ 8 ತಿಂಗಳ ಕಾಲದ ಅಧ್ಯಕ್ಷರ ಅವಧಿಯಲ್ಲಿ ಕೀಲಾರದಲ್ಲಿ ಹಲವಾರು ನೂತನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು.

ವೃತ್ತಿ ಜೀವನ

ನ್ಯಾಯಶಾಸ್ತ್ರ ಪದವೀಧರರಾದ ನಂತರ ಕೆ.ವಿ. ಶಂಕರಗೌಡರು ಮಂಡ್ಯದಲ್ಲಿ ಆ ವೇಳೆಯಲ್ಲಿ ಕರ್ನಾಟಕದ ಉಚ್ಚನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರಾಗಿದ್ದ ಎಚ್. ಹೊಂಬೇಗೌಡರು ನ್ಯಾಯಶಾಸ್ತ್ರದಲ್ಲಿ ಪರಿಣಿತರಾಗಿದ್ದು,

ಮಂಡ್ಯದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು. ಶಂಕರಗೌಡರು ಅವರ ಬಳಿಯಲ್ಲಿ ಕಿರಿಯ ವಕೀಲರಾಗಿ ಸೇರಿಕೊಂಡರು. ಪಿ. ಮಲ್ಲಯ್ಯ, ಎಂ.ಕೆ. ಶಿವನಂಜಪ್ಪ ಈ ಮೊದಲಾದವರು ಆ ವೇಳೆಯಲ್ಲಿ ವಕೀಲರಾಗಿ ಸೇರಿಕೊಂಡರು. ಶಂಕರಗೌಡರು ಸಹ ನ್ಯಾಯಶಾಸ್ತ್ರದ ಅಭ್ಯಾಸದಲ್ಲಿ ನಿರತರಾದರು. ಆದರೆ ಶಂಕರಗೌಡರ ಮನಸ್ಸು ಸದಾ ಸಾರ್ವಜನಿಕ ಸೇವೆ ಮತ್ತು ರಾಜಕೀಯದತ್ತ ತುಯ್ಯುತಿತ್ತು. ಗೌಡರು ವಕೀಲಿ ವೃತ್ತಿ ಕೈಗೊಂಡದ್ದು ಒಂದೆರಡು ವರ್ಷಗಳು ಮಾತ್ರ. ಸಂಪೂರ್ಣವಾಗಿ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದತ್ತ ಅವರ ಮನಸ್ಸು ಹರಿಯಿತು. ನ್ಯಾಯಾಲಯದಲ್ಲಿ ತಮ್ಮ ಕಕ್ಷಿದಾರನ ಪರವಾಗಿ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಅನ್ಯಾಯದ ತೀರ್ಪಿಗೆ ಕಾರಣರಾಗಿ ಅಪರಾಧಿ ನಿರಪರಾಧಿಯಾಗಿ, ನಿರಪರಾಧಿ ಅಪರಾಧಿಯಾಗುವಂತೆ ಮಾಡುವ ಈ ಪರಿಯನ್ನು ಕಣ್ಣಾರೆಕಂಡ, ಸೂಕ್ಷ್ಮ ಸಂವೇದನಾಶೀಲ ರಾದ ಗೌಡರ ಮನಸ್ಸು ರೋಸಿಹೋಗಿ ವಕೀಲ ವೃತ್ತಿಯೇ ಬೇಡವೆಂದು ನಿರ್ಧರಿಸಿದರು. ಅಂತಿಮವಾಗಿ ಶಂಕರಗೌಡರು ವಕೀಲ ವೃತ್ತಿಯನ್ನು ನಿರ್ವಹಿಸಲಾಗದೇ ಶಾಶ್ವತವಾಗಿ ಆ ವೃತ್ತಿಗೆ ವಿದಾಯ ಹೇಳಿದರು.

ಮೈಸೂರು ಚಲೋ ಚಳುವಳಿಯಲ್ಲಿ ಕೆ. ವಿ. ಶಂಕರಗೌಡರು

1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರವಾದರೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಲಿಲ್ಲ. ಜವಾಬ್ದಾರಿ ಸರ್ಕಾರದ ಕಾಂಗ್ರೆಸ್ಸಿನ ಬೇಡಿಕೆಯನ್ನು ಸರ್ಕಾರ ಒಪ್ಪಿಕೊಳ್ಳದಿದ್ದುದರಿಂದ ಸೆಪ್ಟೆಂಬರ್ 1 ರಂದು ಬನಪ್ಪಪಾರ್ಕಿನಲ್ಲಿ ಒಂದು ಸಭೆ ಸೇರಿ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ರೆಡ್ಡಿಯವರು ಸರ್ಕಾರದ ಕ್ರಮವನ್ನು ಉಗ್ರವಾಗಿ ಖಂಡಿಸಿದರು. ಮೈಸೂರು ಕಾಂಗ್ರೆಸ್ ಚಲೋ ಮೈಸೂರು ಘೋಷಿಸಿದರು. ಇದರ ಅನ್ವಯ ಮೈಸೂರು ಅರಮನೆ ಸತ್ಯಾಗ್ರಹ ನಡೆಸಲು 4ನೇ ತಾರೀಖು ಜಾಥಾ ಹೊರಡುವುದೆಂದು ತೀರ್ಮಾನಿಸಿದರು.

ಈ ತೀರ್ಮಾನದ ಪರಿಣಾಮವಾಗಿ ಸಂಸ್ಥಾನದಾದ್ಯಂತ ಸತ್ಯಾಗ್ರಹ ಚಳುವಳಿ ವ್ಯಾಪಕವಾಗಿ ಹಬ್ಬಿತು. ಎಲ್ಲ ಜಿಲ್ಲೆಗಳಿಂದಲೂ ಸತ್ಯಾಗ್ರಹಿಗಳು ತಂಡ ತಂಡವಾಗಿ 'ಮೈಸೂರು ಚಲೋ' ಘೋಷಣೆಯನ್ನು ಕೂಗುತ್ತಾ ಅರಮನೆಯತ್ತ ಧಾವಿಸಿದರು. ಮಂಡ್ಯದಲ್ಲಿ ಕಾಂಗ್ರೆಸ್ ನಾಯಕರಾದ ಎಚ್. ಹೊನ್ನಯ್ಯ, ಪಿ.ಎನ್. ಜವರಪ್ಪಗೌಡ, ಕೆ.ವಿ. ಶಂಕರಗೌಡ ಮೊದಲಾದವರು ಚಳುವಳಿಯ ಪ್ರಚಾರಕ್ಕಾಗಿ ಜಿಲ್ಲಾದ್ಯಂತ ಪ್ರವಾಸ ಮಾಡಿದರು.

ಸೆರೆಮನೆ ವಾಸ

ಅರಮನೆ ಚಳುವಳಿಯನ್ನು ತೀವ್ರಗೊಳಿಸಲು ಗೌಡರು ಹಳ್ಳಿಹಳ್ಳಿಗೂ ಭೇಟಿ ನೀಡಿ ಚಳುವಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ಮಂಡ್ಯದ ಸಮೀಪದ ಗರುಡನಹಳ್ಳಿ ಬಳಿ ಪ್ರಚಾರ ಮಾಡುತ್ತಿದ್ದಾಗ ಪೊಲೀಸ್ ಪೇದೆಯೊಬ್ಬರಿಂದ ಶಂಕರಗೌಡ ಹಾಗೂ ಜವರಪ್ಪಗೌಡರನ್ನು ದಸ್ತಗಿರಿ ಮಾಡಲು ವಾರೆಂಟ್ ಸಿದ್ದವಾಗಿದೆ ಎಂಬ ವಿಷಯವನ್ನು ತಿಳಿದರು. ಬಂಧನವಾದರೆ ಚಳುವಳಿಯ ಪ್ರಚಾರ ಕಾರ್ಯ ನಿಂತು ಹೋಗುತ್ತದೆಂದು ತಿಳಿದು ಅಲ್ಲೇ ಹತ್ತಿರವಿದ್ದ ನೀರಿನ ಪೈಪಿನೊಳಗೆ ಅವಿತುಕೊಂಡರು. ಪೋಲಿಸರು ಇವರ ಸುಳಿವು ತಿಳಿದು ದಿನಾಂಕ : 05.09.1947ರಂದು ಕಾಂಗ್ರೆಸ್ ನಾಯಕರುಗಳಾದ ಹೆಚ್. ಹೊನ್ನಯ್ಯ, ಪಿ.ಎನ್. ಜವರಪ್ಪಗೌಡ, ಡಿ. ವಿದ್ಯಾಧರಪ್ಪ, ಕೆ.ವಿ. ಶಂಕರಗೌಡರನ್ನು ದಸ್ತಗಿರಿ ಮಾಡಿದರು. ಈ ನಾಯಕರಲ್ಲದೆ ಜಿಲ್ಲೆಯ ಹಲವು ಸತ್ಯಾಗ್ರಹಿಗಳಾದ ಕೆ.ಸಿ. ಚನ್ನಯ್ಯ, ಗೌಡಗೆರೆ ನಾಗಪ್ಪ, ಕೆ. ಬೆಟ್ಟಶೆಟ್ಟಿ ಇವರನ್ನೂ ಸಹ ಬಂಧಿಸಿದರು. ಮಂಡ್ಯ ಜೈಲಿನಲ್ಲಿ ಶಂಕರಗೌಡರು 5.9.1947ರಿಂದ 19.9.1947 ರವರೆಗೆ 15 ದಿವಸಗಳು ಬಂಧಿಯಾಗಿದ್ದು, ನಂತರ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ವರ್ಗಾವಣೆ ಗೊಂಡರು. ಶಂಕರಗೌಡರು ಒಟ್ಟು 49 ದಿನಗಳು ಸ್ವಾತಂತ್ರ್ಯ ಚಳುವಳಿಯ ಬಂಧಿಯಾಗಿ ಮಂಡ್ಯ ಹಾಗೂ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ ನಂತರ ಬಿಡುಗಡೆಗೊಂಡರು.

ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕೆ.ವಿ. ಶಂಕರಗೌಡರು

1947ರ ಅಂತ್ಯದಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕೆ.ವಿ. ಶಂಕರಗೌಡರು ಅವಿರೋಧವಾಗಿ ನೇಮಕಗೊಂಡರು. ಪ್ರಧಾನ ಕಾರ್ಯದರ್ಶಿಯಾಗಿ ಪಿ.ಎನ್. ಜವರಪ್ಪಗೌಡ, ವ್ಯವಸ್ಥಾಪಕ ಕಾರ್ಯದರ್ಶಿಯಾಗಿ ಎ.ಡಿ. ಬಿಳಿಗೌಡ ಖಜಾಂಚಿಯಾಗಿ ಪಿ. ಶ್ರೀನಿವಾಸಯ್ಯನವರೂ ಅವಿರೋಧವಾಗಿ ಚುನಾಯಿತರಾಗಿ ಜಿಲ್ಲೆಯಾದ್ಯಂತ ಕಾಂಗ್ರೆಸ್ ವರ್ಚಸ್ಸು ಮುಗಿಲು ಮುಟ್ಟುವಂತೆ ಮಾಡಿದರು. 1958ರ ತನಕ ಗೌಡರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ 11 ವರ್ಷಗಳ ಕಾಲ ಆ ಅವಧಿಯಲ್ಲಿದ್ದು ನಂತರ ಹೊರಬಂದರು.

ಮಂಡ್ಯ ಜಿಲ್ಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ಕೆ.ವಿ. ಶಂಕರಗೌಡರು

1948ರಲ್ಲಿ ಗ್ರಾಮಾಭಿವೃದ್ಧಿಯನ್ನು ಚುರುಕುಗೊಳಿಸುವ ಸಲುವಾಗಿ ನಾಗಮಂಗಲ ತಾಲ್ಲೂಕಿನವರಾದ ಟಿ. ಮರಿಯಪ್ಪ ಗ್ರಾಮಾಭಿವೃದ್ಧಿ ಸಚಿವರಾಗಿದ್ದು

ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳ ರಚನೆ ಮಾಡಲು ಯೋಜನೆಯೊಂದನ್ನು ಸಿದ್ಧಗೊಳಿಸಿದರು. ಜಿಲ್ಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ಕೆ.ವಿ. ಶಂಕರಗೌಡರು ನಾಮಕರಣ ಮಾಡಿದರು. ಇದೇ ಕಾಲಕ್ಕೆ ವಿಶ್ವೇಶ್ವರಯ್ಯ ನಾಲಾ ಬಯಲು ಅಭಿವೃದ್ಧಿ ಕಾರ್ಯಗಳಿಗೆ ಸಕ್ಕರೆ ಕಂಪನಿ ರೈತರಿಂದ ಕೊಳ್ಳುವ ಕಬ್ಬಿಗೆ ಟನ್ 1 ಕ್ಕೆ 6 ರೂಪಾಯಿಯಂತೆ ಸೆಸ್ ವಿಧಿಸಿ ಆ ನಿಧಿಯನ್ನು ಖರ್ಚು ಮಾಡಲು ಪ್ರತ್ಯೇಕ "ಷುಗರ್ ಕೇನ್ ಸೆಸ್ ಡಿವಿಜನ್ ಕಮಿಟಿ" ಯನ್ನು ನೇಮಿಸಿ ಆ ಸಮಿತಿಗೂ ಶಂಕರಗೌಡರನ್ನೇ ಅಧ್ಯಕ್ಷರನ್ನಾಗಿ ಸರ್ಕಾರ ನಾಮಕರಣ ಮಾಡಿತು. ಈ ಸಮಿತಿಯಲ್ಲಿ ಸದಸ್ಯರಾಗಿ ಎಚ್.ಕೆ. ವೀರಣ್ಣಗೌಡ, ಎ.ಜಿ. ಬಂದಿಗೌಡ, ಆಲಕೆರೆ ಇನಾಂದರ್ ಬಿ.ವಿ. ವೆಂಕಟಚಾರ್ ಜಿಲ್ಲೆಯ ನೀರಾವರಿ ಪ್ರದೇಶದ ಶಾಸಕರುಗಳು ಸದಸ್ಯರಾಗಿದ್ದರು. ಈ ರೀತಿ ಸಂಗ್ರಹವಾದ ಹಣವನ್ನು ನಾಲಾ ರಸ್ತೆಗಳ ಅಭಿವೃದ್ಧಿಗಾಗಿ ಉಪಯೋಗಿಸಬೇಕೆಂಬ ಮುಖ್ಯ ಧ್ಯೇಯವನ್ನು ಈ ಸಮಿತಿ ಹೊಂದಿತ್ತು. ಶಂಕರಗೌಡರು ಅಧಿಕಾರ ವಹಿಸಿಕೊಂಡ 2 ವರ್ಷಗಳ ಅವಧಿಯಲ್ಲಿ ಎಲ್ಲಿ ನಾಲೆಗಳು ಹರಿಯುತ್ತಿದ್ದು ರಸ್ತೆಗಳು ಸುರಕ್ಷಿತವಾಗಿರಲಿಲ್ಲವೋ ಅಲ್ಲೆಲ್ಲಾ ಅಚ್ಚುಕಟ್ಟಾದ ರಸ್ತೆಗಳನ್ನು ನಿರ್ಮಿಸಿದರು.

ಕೆ.ಆರ್.ಎಸ್. ವರ್ಕಿಂಗ್ ಕಮಿಟಿಯ ಕಾರ್ಯದಲ್ಲಿ ಕೆ.ವಿ. ಶಂಕರಗೌಡರು

ಟಿ. ಮರಿಯಪ್ಪ ಅವರ ಅಧ್ಯಕ್ಷತೆಯಲ್ಲಿ ಕೃಷ್ಣರಾಜಸಾಗರ ವರ್ಕಿಂಗ್ ಸಮಿತಿಯೊಂದು ಅಸ್ತಿತ್ವಕ್ಕೆ ಬಂದಿತು. ಈ ಸಮಿತಿಯು ಕೆ.ಆರ್.ಎಸ್. ನೀರಾವರಿ ಅಭಿವೃದ್ಧಿ ಹಾಗೂ ಆರೋಗ್ಯ ಶಿಕ್ಷಣಕ್ಕೆ ಉತ್ತೇಜನ ನೀಡುವುದಕ್ಕೆ ಸೀಮಿತವಾಗಿತ್ತು. ಈ ಕಮಿಟಿಯಲ್ಲಿ 2 ವಿಭಾಗಗಳಿದ್ದು ಕೆ.ಆರ್.ಎಸ್. ನೀರಾವರಿ ಅಭಿವೃದ್ಧಿ ಸಮಿತಿ ಮತ್ತು ಕೃಷ್ಣರಾಜಸಾಗರ ಆರೋಗ್ಯಸಮಿತಿ ಮುಖ್ಯವಾಗಿದ್ದು ಇವರ ಜೊತೆಗೆ ಬೆಳೆ ಯೋಜನಾ ಕಮಿಟಿ ಇತ್ತು. ಈ ಸಮಿತಿಯ ಒಬ್ಬ ಸದಸ್ಯರಾಗಿದ್ದ ಗೌಡರು ಜಿಲ್ಲೆಯ ರೈತಾಪಿ ವರ್ಗದವರ ಸಮಸ್ಯೆಗಳನ್ನು ಅರಿತು ಸಮಿತಿಯ ಮೂಲಕ ಪರಿಹಾರ ಒದಗಿಸಲು ಮುಂದಾದರು. ಕೃಷ್ಣರಾಜಸಾಗರ ನಾಲಾ ಬಯಲ ರೈತರ ನಾನಾ ಸಮಸ್ಯೆಗಳನ್ನು ಅರಿತ ಗೌಡರು ಮದ್ದೂರು ನಾಲೆಯ ಕೊನೆಯ ಹಂತದ ರೈತರ ಬೆಳೆಗಳನ್ನು ರಕ್ಷಿಸಲು ಮುಂದಾಗಿ ಬೆಳೆದುನಿಂತ ಬೆಳೆಯನ್ನು ರಕ್ಷಿಸಲು ಬಾವಿಗಳನ್ನು ತೆಗೆಸಿ ಅದರ ಮೂಲಕ ನೀರನ್ನು ಬಳಸುವುದು. ಈ ಬಾವಿಗಳ ಖರ್ಚು 6.46.000 ರೂಗಳಾಗಿದ್ದು, ಈ ಬಾವಿಗಳಿಂದ 7,000 ಎಕರೆಗೆ ನೀರನ್ನು ಒದಗಿಸಿದರು. ಶಂಕರಗೌಡರು ರೈತರ ಏಳಿಗೆಗಾಗಿ ಹಾಗೂ ಅವರಿಗೆ

ಆಗಬಹುದಾದ ಕಾರ್ಯಗಳ ಬಗ್ಗೆ ಚಿಂತಿಸಿ ಉತ್ತಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಮಂಡ್ಯ ಜಿಲ್ಲೆಯ ಸಹಕಾರಿ ರಂಗದ ದೀಪದರ್ಶಿ ಕೆ.ವಿ. ಶಂಕರಗೌಡರು

ಮಂಡ್ಯ ಜಿಲ್ಲೆಯ ರೈತರನ್ನು ದಲ್ಲಾಳಿಗಳ ಹಾಗೂ ವರ್ತಕರ ಶೋಷಣೆಯಿಂದ ಪಾರು ಮಾಡುವ ಬಗೆ ಹಾಗೂ ಶ್ರೀಮಂತರ ಸುಲಿಗೆಯ ಕ್ರೂರ ದಂಧೆಯಿಂದ ಅವರನ್ನು ರಕ್ಷಿಸುವ ಬಗ್ಗೆ ಅವರು ಬೆಳೆದ ಧಾನ್ಯಗಳಿಗೆ ನ್ಯಾಯವಾದ ಬೆಲೆ ದೊರಕಿಸಿಕೊಳ್ಳಬಹುದಾದ ಪೇಟೆಯ ವಸ್ತುಗಳಿಗೆ ಪರಸ್ಪರಾನುಗುಣವಾದ ಬೆಲೆಗಳು ನಿಗದಿಯಾಗುವುದು ಹೇಗೆ ಮುಂತಾದ ಪ್ರಶ್ನೆಗಳು ಅವರಲ್ಲಿ ಮೂಡುತ್ತವೆ. ಆದ್ದರಿಂದ ಜಿಲ್ಲೆಯ ರೈತರನ್ನು ರಕ್ಷಿಸಲು ಒಂದು ಸಹಕಾರ ಸಂಘವನ್ನು ತೆರೆಯಲು ಮಿತ್ರರೊಡನೆ ಚರ್ಚಿಸಿ ಮುಂದಾಗುತ್ತಾರೆ. ಭಾರತದ ಎರಡನೆಯ ಸ್ವಾತಂತ್ರ್ಯ ದಿನಾಚರಣೆಯಂದು ಅಂದರೆ 15.08.1948ರಂದು "ಇರ್ವಿನ್ ನಾಲಾ ರೈತರ ಪರಸ್ಪರ ಸಹಾಯ ಸಂಘ" ಎಂಬುದನ್ನು ಸ್ಥಾಪಿಸಿದರು. ಮಧ್ಯಸ್ಥಗಾರರಾದ ದಳ್ಳಾಳಿಗಳನ್ನು ತೆಗೆದುಹಾಕಿ, ರೈತರ ಜೀವನ ಮಟ್ಟವನ್ನು ಸಾಮಾಜಿಕವಾಗಿಯೂ ಮತ್ತು ಆರ್ಥಿಕವಾಗಿಯೂ ಉತ್ತಮಪಡಿಸುವುದೇ ಈ ಸಂಸ್ಥೆಯ ಮುಖ್ಯಗುರಿ. ಈ ಸೊಸೈಟಿಯ ಕಾರ್ಯಕ್ರಮ 7.10.1948ರಂದು ಎಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಎಚ್. ಸಿದ್ದಯ್ಯನವರು ಪ್ರಾರಂಭಿಸಿದರು. ನಂತರ ಸಹಕಾರಿ ಚಳುವಳಿಯ ಸರ್ವತೋಮುಖವಾದ ಪ್ರಗತಿಯ ಮತ್ತು ರೈತರ ಅಭಿವೃದ್ಧಿಯ ಸದುದ್ದೇಶದಿಂದ ಈ ಸಂಘದ ಹೆಸರನ್ನು 24.01.1949ರಲ್ಲಿ "ರೈತರ ವಿವಿದೋದ್ದೇಶ ಸಹಕಾರಿ ಸಂಘ ಲಿಮಿಟೆಡ್" ಎಂದು ಬದಲಾಯಿಸಲಾಯಿತು. ಶ್ರೀಮಾನ್ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಮತ್ತು ಆಗಿನ ಮುಖ್ಯಮಂತ್ರಿಗಳಾಗಿದ್ದ ಕೆ.ಸಿ. ರೆಡ್ಡಿಯವರೂ 15.08.1951ರಲ್ಲಿ ಈ ಸಂಘಕ್ಕೆ ಭೇಟಿಯಿತ್ತು ಸೂಕ್ತ ಪ್ರೋತ್ಸಾಹವಿತ್ತರು. ಈ ಸಂಘದ ವ್ಯಾಪಾರ ವ್ಯವಹಾರ ವರ್ಷಕ್ಕೆ 15 ಲಕ್ಷ ರೂಪಾಯಿಗಿಂತಲೂ ಹೆಚ್ಚಿದ್ದು ವರ್ಷಕ್ಕೆ ಏನಿಲ್ಲವೆಂದರೂ ಲಕ್ಷಾಂತರ ರೂಪಾಯಿ ತರುತ್ತದೆ. ಕಂಟ್ರೋಲ್‌ಗೆ ಒಳಪಟ್ಟ ವಸ್ತುಗಳಾದ ವ್ಯವಸಾಯದ ಉಪಕರಣಗಳು ಬಿತ್ತನೆ ಬೀಜ, ಮಿಲ್‌ಬಟ್ಟೆ, ಸಿಮೆಂಟ್, ಸಕ್ಕರೆ, ಜಂಕ್‌ಷೀಟುಗಳು, ಕೃತಕ ಗೊಬ್ಬರ ಇತ್ಯಾದಿಗಳನ್ನು ಮಾತ್ರವಲ್ಲದೆ ಕಂಟ್ರೋಲ್‌ಗೆ ಒಳಪಡದೆ ಕೈಮಗ್ಗ ಬಟ್ಟೆ, ಉಪ್ಪು, ಎಣ್ಣೆ, ದ್ವಿದಳ ಧಾನ್ಯಗಳು, ಖಾದಿಬಟ್ಟೆ ಹೊಲೆದುಸಿದ್ಧಪಡಿಸಿದ ಉಡುಪು ಮುಂತಾದವು ನಂತರ ರೈತರ ನಿತ್ಯಬಳಕೆಯ ಪದಾರ್ಥಗಳನ್ನು ಉತ್ಪನ್ನ

ಕೇಂದ್ರಗಳಿಂದಲೇ ನೇರವಾಗಿ ಒಟ್ಟಾಗಿ ತರಿಸಿಕೊಂಡು ಎಲ್ಲಾ ಸಹಕಾರ ಸಂಸ್ಥೆಗಳಿಗೂ, ವರ್ತಕರಿಗೂ ಮಾರುತ್ತಿದ್ದುದು ಮಾತ್ರವಲ್ಲದೆ ಚಿಲ್ಲರೆಯಾಗಿಯೂ ಮಾರಾಟ ಮಾಡಲಾಗುತ್ತಿತ್ತು.

ಈ ರೀತಿ ಶಂಕರಗೌಡರ ಮಿತ್ರರ ಅಪೂರ್ವ ಸಂಘಟನಾ ಶಕ್ತಿಕಾರ್ಯ ಚತುರತೆ ಈ ಸಂಸ್ಥೆಗಳನ್ನು ಸರ್ವತೋಮುಖವಾಗಿ ಬೆಳೆಸಿ ಇಂದು ರೈತರ ಕಾಮಧೇನುವಾಗಿಸಿದೆ. ಸಹಕಾರ ವಿಷಯದಲ್ಲಿ "ಇಂಡಿಯಾ ಮಂಡ್ಯದಂತಾಗಬೇಕು" ಎಂದು ನಿವೃತ್ತ ರಾಷ್ಟ್ರಾಧ್ಯಕ್ಷ ವಿ.ವಿ. ಗಿರಿಯವರು ಈ ಸೊಸೈಟಿಯನ್ನು ಕುರಿತು ಹೇಳಿದ ಮಾತು ಔಚಿತ್ಯಪೂರ್ಣವಾಗಿದೆ.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು (MDCC – 1953)

1953ರ ಸುಮಾರಿನಲ್ಲಿ ಕೆ.ವಿ. ಶಂಕರಗೌಡರು ಜಿಲ್ಲಾ ಕೇಂದ್ರ ಬ್ಯಾಂಕ್ ತೆರೆಯಲು ನಿರ್ಧರಿಸಿ ಕಾರ್ಯೋನ್ಮುಖ ರಾದರು. ಈ ಬ್ಯಾಂಕ್ ತೆರೆಯಲು ಸ್ಫೂರ್ತಿ ದೊರೆತದ್ದೆ ರೈತರ ಸೊಸೈಟಿಯಿಂದ. ಮಂಡ್ಯ ನಗರದಲ್ಲಿ ಒಂದು ಜಿಲ್ಲಾ ಸಹಕಾರಿ ಬ್ಯಾಂಕನ್ನು ತೆರೆದು ತಾನೇ ಅನೇಕ ವರ್ಷಗಳ ಕಾಲ ಸಂಸ್ಥಾಪಕ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ದಿನಾಂಕ : 24.12.1953ರಲ್ಲಿ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಕೆಲಸ ಪ್ರಾರಂಭಿಸಿತು. ಸಹಕಾರ ತತ್ವದಲ್ಲಿ ಹುದುಗಿರುವ ಸಂಜೀವಿನಿಯನ್ನು ಸರ್ವರ ಅಭಿವೃದ್ಧಿಗಾಗಿ ಮತ್ತು ಅಭ್ಯುದಯಕ್ಕಾಗಿ ವಿನಿಯೋಗಿಸಿ ಜನತೆಯ ಆರ್ಥಿಕ ಅಸಮಾನತೆಯನ್ನು ನಿರ್ಮೂಲ ಮಾಡಬೇಕು ಎಂಬುದೇ ಈ ಸಂಸ್ಥೆಯ ಮೂಲೋದ್ದೇಶ.

ವ್ಯವಸಾಯವನ್ನು ಉತ್ತಮವಾಗಿ, ಲಾಭದಾಯಕವಾಗಿ ನಡೆಸಿಕೊಂಡು ಹೋಗಲು ಇದ್ದ ದೊಡ್ಡ ತೊಡಕೆಂದರೆ ಸರಿಯಾದ ಆರ್ಥಿಕ ನೆರವು ಇಲ್ಲದೆ ಇದ್ದದ್ದು, ರೈತರಿಗೆ ಬೇಕಾಗಿದ್ದು ಸಕಾಲದಲ್ಲಿ ಸುಲಭ ಬಡ್ಡಿ ದರದಲ್ಲಿ ದೊರಕುವ ಆರ್ಥಿಕ ನೆರವು, ಇದನ್ನು ತಜ್ಞರು ಗುರುತಿಸಿ ಇದನ್ನು ಪೂರೈಸಲು ಸಲಹೆ ಮಾಡಿದ್ದರು. ಈ ಗುರಿಯನ್ನು ಸಾಧಿಸಲು ಜಿಲ್ಲಾ ಬ್ಯಾಂಕುಗಳು ಜನ್ಮತಾಳಿದವು. ಇದರಂತೆ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾದ ಬ್ಯಾಂಕುಗಳಲ್ಲಿ ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕು ಒಂದು.

ಕೋಲಾರ ಬರಪರಿಹಾರಕ್ಕೆ ಮಂಡ್ಯ ಜನರ ನೆರವು ಕಾರ್ಯದಲ್ಲಿ ಶಂಕರಗೌಡರು (1952)

1952ರಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲುಂಟಾದ ಘೋರಕ್ಷಾಮದಿಂದಾಗಿ ಜನಜಾನುವಾರುಗಳಿಗೆ ಆಹಾರ ಮತ್ತು ಕುಡಿವ ನೀರಿನ ಸಮಸ್ಯೆ ಉಲ್ಬಣ ವ್ಯವಸ್ಥೆಗೆ ಏರಿತ್ತು. ಈ ಸಮಯದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಗೌಡರು ಜಿಲ್ಲೆಯಾದ್ಯಂತ ರೈತರಿಗೆ ಕರೆನೀಡಿ ತಮ್ಮ ಸ್ನೇಹಿತರನ್ನು ಬರವಮಾಡಿಕೊಂಡು ವಿಶ್ವೇಶ್ವರಯ್ಯ ನಾಲಾ ಬಯಲು ರೈತರಿಂದ ಕ್ಷಾಮನಿವಾರಣೆಗಾಗಿ ದವಸ ಮತ್ತು ಹುಲ್ಲನ್ನು ಶೇಖರಿಸಿ ತುಮಕೂರು ಮತ್ತು ಕೋಲಾರದ ಜನರಿಗೆ ಒದಗಿಸಲು ತೀರ್ಮಾನಿಸಿ ಅದರಂತೆ ಜಿಲ್ಲೆಯಾದ್ಯಂತ ಗೌಡರು ಮತ್ತು ಅವರ ಮಿತ್ರರು ಸಂಚರಿಸಿದಾಗ ಹಳ್ಳಿಯ ರೈತರು ತಮ್ಮಲ್ಲಿದ್ದ ದಾಸ್ತಾನಿನಿಂದ ಹುಲ್ಲು ಮತ್ತು ದವಸವನ್ನು ಮಂಡ್ಯದಲ್ಲಿ ಒಂದು ಕಡೆ ಶೇಖರಿಸಿ ಈ ಮಂಡ್ಯ ಜಿಲ್ಲೆಯ ಜನರ ಕೊಡುಗೆಯನ್ನು ಸ್ವೀಕರಿಸಲು ಆಗ ಮುಖ್ಯಮಂತ್ರಿಯಾಗಿದ್ದ ಕೆ. ಹನುಮಂತಯ್ಯ ಮತ್ತು ರಾಜಪ್ರಮುಖರಾದ ಶ್ರೀಜಯಚಾಮರಾಜ ಒಡೆಯರು 25.06. 1952ರಂದು ಪ್ರವಾಸ ಕೈಗೊಂಡು ಮಂಡ್ಯ ಜನರಿತ್ತ ದವಸಧಾನ್ಯಗಳನ್ನು ಕೋಲಾರ ಜಿಲ್ಲೆಯ ತಾಯಲೂರಿನಲ್ಲಿ ಹಂಚಿ ಮಂಡ್ಯ ಜನತೆ ಹಾಗೂ ಕೆ.ವಿ. ಶಂಕರಗೌಡರ ಈ ಸಹಾಯವನ್ನು ಪ್ರಶಂಸಿಸಿದರು.

ಮಂಡ್ಯ ಶಾಸಕರಾಗಿ ಕೆ.ವಿ. ಶಂಕರಗೌಡರು (1951)

1951ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಕೆ.ವಿ. ಶಂಕರಗೌಡರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇವರ ಪ್ರತಿಸ್ಪರ್ಧಿಯಾಗಿ ಎಂ.ಬಿ. ಬೋರೇಗೌಡರು ಸ್ಪರ್ಧಿಸಿದರು. ಶಂಕರಗೌಡರು ಜಿಲ್ಲೆಯಾದ್ಯಂತ ಜನಮನ್ನಣೆ ಗಳಿಸಿದ್ದರಿಂದ ಮೊದಲಿಗೆ ಶಾಸಕರಾಗಿ ಆಯ್ಕೆಗೊಂಡರು. ಕೆಂಗಲ್ ಹನುಮಂತಯ್ಯನವರು ಅವರಿಗೆ ಮಂತ್ರಿಯಾಗಲು ಆಹ್ವಾನ ನೀಡಿದರು. "ನಾನಿನ್ನು ಚಿಕ್ಕವನು ನನಗಿಂತಲೂ ಹಿರಿಯವರಾದ ಕಡಿದಾಳ್ ಮಂಜಪ್ಪನವರಿಗೆ ಸಚಿವ ಸ್ಥಾನನೀಡಿ" ಎಂದು ಸೌಜನ್ಯದಿಂದಲೇ ಅದನ್ನು ತಿರಸ್ಕರಿಸಿದರು. ಆದರೆ ಅಧಿಕಾರ ಬಗೆಗಿನ ದಿವ್ಯನಿರ್ಲಕ್ಷ್ಯ ಅವರ ವ್ಯಕ್ತಿ ಶ್ರೀಮಂತಿಕೆಗೆ ಜ್ವಲಂತ ಸಾಕ್ಷಿಯಾಗಿದೆ. ರೈತರ ಬಗ್ಗೆ ಕಾಳಜಿ ಹೊಂದಿದ್ದ ಗೌಡರು ರೈತರಿಗೆ ಅನ್ಯಾಯವಾದರೆ ಸಹಿಸುತ್ತಿರಲಿಲ್ಲ ಅಲ್ಲದೇ ರೈತ ವಿರೋಧಿ ನಿಲುವಿನ ಜೊತೆ ರಾಜಿಗೂ ತಯಾರಿರಲಿಲ್ಲ. ಶಾಸನ ಸಭೆಯಲ್ಲಿ ಮುಖಂಡರೊಬ್ಬರ ಔದಾರ್ಯರಹಿತ ಟೀಕೆಯಿಂದ ಮನನೊಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಪತ್ರಿಕೋದ್ಯಮಿಯಾಗಿ ಗೌಡರು : (1956)

ಶಂಕರಗೌಡರು ಬಹುಮುಖ ಪ್ರತಿಭೆಯುಳ್ಳವರಾಗಿದ್ದು, ಎಲ್ಲಾ ರಂಗದಲ್ಲೂ ಗಣನೀಯವಾದ ಕಾರ್ಯಗಳನ್ನು ಮಾಡಿ ಹೆಸರುಗಳಿಸಿದ್ದರು. ಅಂತೆಯೇ ಪತ್ರಿಕೋದ್ಯಮದಲ್ಲೂ ಹೆಸರುಗಳಿಸಿದ್ದರು. ಸಮಾಜದಲ್ಲಿರುವ ಭ್ರಷ್ಟಾಚಾರ ಅನೀತಿ ಅಧರ್ಮಗಳನ್ನು ಮಾಧ್ಯಮಗಳ ಮೂಲಕ ಪ್ರಚುರಪಡಿಸಿ ಸಮಾಜವನ್ನು ಪರಿಶುದ್ಧಗೊಳಿಸಲು 1956ನೆಯ ವರ್ಷದ ಕೊನೆಯ ಭಾಗದಲ್ಲಿ ತಮ್ಮ ಬಂಧು – ಮಿತ್ರರೊಡನೆ ಮುದ್ರಣಾಲಯವನ್ನು ತೆರೆದರು. "ಜನಮನ" ಎಂಬ ಉನ್ನತಮಟ್ಟದ ವಿಚಾರಧಾರೆಯ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯ ಮೂಲಉದ್ದೇಶ ಜನತೆಯ ಆಶೋತ್ತರಗಳನ್ನು ತೋರಿಸಿ, ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವುದೇ ಆಗಿತ್ತು. ಈ ಪತ್ರಿಕೆಯು ಕೆಲಸಿನಗಳಲ್ಲಿ ಕರ್ನಾಟಕದಾದ್ಯಂತ ಜನಮನ್ನಣೆಯನ್ನು ಗಳಿಸಿತ್ತು. ಆ ಕಾಲದ ಹಲವಾರು ಸಾಹಿತಿಗಳು, ಪತ್ರಿಕೋದ್ಯಮಿಗಳು ಹಾಗೂ ಚಿಂತಕರು ಲೇಖನಗಳನ್ನು ಬರೆಯುತ್ತಿದ್ದರು. ತಮ್ಮಲ್ಲಿ ಹಣದ ಕೊರತೆಯಿದ್ದರೂ ಸಾಲ ಮಾಡಿಯಾದರೂ ಲೇಖಕರಿಗೆ ಸಂಭಾವನೆಯನ್ನು ಕೊಡುತ್ತಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಅವರು ನಷ್ಟಕ್ಕೆ ಒಳಗಾದರು, ಸುಮಾರು 9 ತಿಂಗಳು ಕಳೆದ ನಂತರ ವಿಧಿಯೇ ಇಲ್ಲದೆ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಅದೇ ಸಮಯದಲ್ಲಿ ಹೋಟೆಲ್ ಉದ್ಯಮದಲ್ಲೂ ನಿರತರಾಗಿದ್ದರು ಈ ಎಲ್ಲ ಯೋಜನೆಗಳು ಅವರ ಜಾಯಮಾನಕ್ಕೆ ಒಗ್ಗುವಂಥದಲ್ಲವಾದರೂ ಅವರ ಆಸಕ್ತಿ ವೈವಿಧ್ಯಕ್ಕೆ ಹಾಗೂ ಅವರ ಕ್ರಿಯಾಶೀಲತೆಗೆ ಸಾಕ್ಷಿಗಳಾಗಿವೆ.

ವಯಸ್ಕರ ಶಿಕ್ಷಣ ಸಮ್ಮೇಳನ : ಕೆ.ವಿ. ಶಂಕರಗೌಡರು (1954)

ಮಂಡ್ಯ ಜಿಲ್ಲೆಯ ರೈತರ ಅನಕ್ಷರತೆ ಹಾಗೂ ಬಡತನವನ್ನು ಕಣ್ಣಾರೆ ಕಂಡ ಗೌಡರು ಮಂಡ್ಯ ಜಿಲ್ಲೆಯಲ್ಲೊಂದು ವಯಸ್ಕರ ಶಿಕ್ಷಣ ವತಿಯಿಂದ ವಿದ್ಯಾಪೀಠವನ್ನು ತೆರೆಯಲು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ತೀರ್ಮಾನವನ್ನು ಸ್ವಾಗತಿಸಿ ಶಿವಾರಗುಡ್ಡದ ಬಳಿ ಒಂದು ಸುಂದರವಾದ ಸ್ಥಳವನ್ನು ಆರಿಸಿಕೊಂಡು ಮೈಸೂರು ಸಂಸ್ಥಾನದ 5ನೆಯ ರಾಜ್ಯವಯಸ್ಕರ ಶಿಕ್ಷಣ ಸಮ್ಮೇಳನವನ್ನು 1954ರಲ್ಲಿ ನಡೆಸಲು ತೀರ್ಮಾನಿಸಿ ತಾವೇ ಖುದ್ದು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ದುಡಿದಿದ್ದಾರೆ. ಡಾ.ಎಸ್. ರಾಧಾಕೃಷ್ಣನ್ ಸಮ್ಮೇಳನವನ್ನು ಉದ್ಘಾಟಿಸಿದರು. ಸಂಸ್ಥಾನದ ವಯಸ್ಕರ ಶಿಕ್ಷಣದ ಬೆಳವಣಿಗೆಯಲ್ಲಿ ಈ ಸಮ್ಮೇಳನ ಮತ್ತೊಂದು ಐತಿಹಾಸಿಕ ಘಟನೆಯಾಗಿದೆ. ಈ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ

ಇಲ್ಲಿ ಸೇರಿರುವ ಕಾರ್ಯಕರ್ತರು, ಉಪಾಧ್ಯಾಯರು, ಶಿಕ್ಷಣವೇತ್ತರು, ನಾನಾ ಸಮಸ್ಯೆಗಳನ್ನು ಕುರಿತು ಯೋಚಿಸಿ ತಮ್ಮ ತಮ್ಮ ಅನುಭವಗಳಿಂದ ಸರಿಯಾದ ಹಲವಾರು ನಿರ್ಣಯಗಳನ್ನು ಕೈಗೊಂಡು ವಯಸ್ಕರ ಶಿಕ್ಷಣಕ್ಕೆ ತುಂಬಾ ಉಪಯುಕ್ತವಾಗಿದ್ದವು. ಇಂತಹ ಒಂದು ಸಮ್ಮೇಳನ ಅದುವರೆಗೂ ಮಂಡ್ಯದಲ್ಲಿ ನಡೆದಿರಲಿಲ್ಲ ಇಂತಹ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಕೆ. ವಿ. ಶಂಕರಗೌಡರಿಗೆ ಸಲ್ಲುತ್ತದೆ.

ಮೈಸೂರು ವಿಲೀನ ವಿರೋಧ ಚಳವಳಿ (1955)

1955ರಲ್ಲಿ ಭಾರತದಾದ್ಯಂತ ಭಾಷಾವಾರು ಪ್ರಾಂತ ರಚನಾ ಆಂದೋಲನವು ಬಿರುಗಾಳಿಯಂತೆ ಬೀಸತೊಡಗಿತು. ಶಂಕರಗೌಡರು ಮಂಡ್ಯದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ವಿರುದ್ಧದ ಸಮ್ಮೇಳನಕ್ಕೆ ಸ್ವಾಗತಸಮಿತಿ ಅಧ್ಯಕ್ಷರಾದರು. ಸಂಯುಕ್ತ ಕರ್ನಾಟಕದಲ್ಲಿ ಮೈಸೂರು ಐಕ್ಯವಾಗುವುದದನ್ನು ವಿರೋಧಿಸಿದರು. ಹೈದರಾಬಾದು ಮತ್ತು ವಿದರ್ಭಗಳಿಗೆ ಕೊಟ್ಟಿರುವ ಸೌಲಭ್ಯವನ್ನು ಮೈಸೂರಿಗೆ ತಪ್ಪಿಸಲಾಗಿದೆಯೆಂದೂ ಆ ಎರಡು ಸಂಸ್ಥಾನಗಳ ಜನಸಂಖ್ಯೆಯು ಮೈಸೂರಿನದಕ್ಕಿಂತ ಕಡಿಮೆಯೆಂದೂ, ಸಂಸ್ಥಾನದ ಆಳರಸರು ಅನೇಕ ವರ್ಷಗಳಿಂದಲೂ ಒಂದೇ ಸಮನೆ ಶ್ರಮಿಸಿ ಮಹಾಸಂಸ್ಥಾನವನ್ನಾಗಿ ಮಾಡಿರುವ ಮೈಸೂರನ್ನು ಭಾರತದ ಚಿತ್ರದಿಂದ ಈಗ ತೆಗೆದುಹಾಕಲಾಗಿದೆ ಎಂದು ಮೈಸೂರನ್ನು ಅದಕ್ಕಿಂತಲೂ ಹಿಂದೆ ಬಿದ್ದ ಪ್ರದೇಶದಲ್ಲಿ ಐಕ್ಯಗೊಳಿಸಲಾಗಿದೆ. ಮೈಸೂರಿನ ಪ್ರಗತಿ ಮತ್ತು ಅಭಿವೃದ್ಧಿಯು ಇದರಿಂದ ಕುಂಠಿತವಾಗುವುದು ಮೈಸೂರಿನ ಪ್ರಗತಿಗೆ ಅದರ ಈಗಿನ ಅಚ್ಚುಕಟ್ಟು ಮುಖ್ಯ ಕಾರಣವಾಗಿದೆ. ಮೈಸೂರಿನ ಜನರು ಸಂಸ್ಥಾನದ ಪೂರ್ವ ಮತ್ತು ಪಶ್ಚಿಮ ಕಡೆ ಇರುವ ಕನ್ನಡ ಪ್ರದೇಶಗಳುಳ್ಳ ಮತ್ತು ಸಂಸ್ಥಾನಕ್ಕೆ ಉತ್ತರ ಭಾಗದಲ್ಲಿರುವ ಕನ್ನಡ ಪ್ರದೇಶಗಳುಳ್ಳ ಎರಡು ಸಂಸ್ಥಾನಗಳನ್ನು ರಚಿಸುವಂತೆ ಒತ್ತಾಯಿಸಿ ಹಾಗೂ ಮೈಸೂರಿನ ಅಸ್ತಿತ್ವವನ್ನು ಉಳಿಸಬೇಕೆಂದು ನೆಹರು, ಕೇಂದ್ರಗೃಹಮಂತ್ರಿ ಪಂಡಿತ್ ವಿದ್ಯಾಮಂತ್ರಿ ಮೌಲಾನಾ ಅಜಾದ್ ಮುಂತಾದ ನಾಯಕರಲ್ಲು ಒತ್ತಾಯಮಾಡಲು ರಾಜ್ಯಶಾಸನಸಭಾ ಸದಸ್ಯರಾದ ಎನ್. ಹುಚ್ಚಮಾಸ್ತಿಗೌಡ, ದೇವರಾಜ ಅರಸು, ನಾಗಪ್ಪಶೆಟ್ಟಿ, ಆರ್.ಕೆ. ಪ್ರಸಾದ್, ಎಲ್.ಟಿ. ಕಾರ್ಲೆಯವರ ನಿಯೋಗದ ಜೊತೆ ಕೆ.ವಿ. ಶಂಕರಗೌಡರು ಸಹ ದೆಹಲಿಗೆ ಹೋಗಿದ್ದರು.

ಈ ನಿಟ್ಟಿನಲ್ಲಿ ಮಂಡ್ಯದಲ್ಲಿ ಜನವರಿ 1ನೇ ತಾರೀಖು 1956ರಂದು ಮೈಸೂರು ವಿಲೀನ ವಿರೋಧಿ ಸಮ್ಮೇಳನಾರಂಭವಾಯಿತು. ಸಂಸ್ಥಾನದ ನಾನಾ

ಭಾಗಗಳಿಂದ ಸುಮಾರು 2000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಎಚ್.ಕೆ. ವೀರಣ್ಣಗೌಡರು ಮೈಸೂರು ಕರ್ನಾಟಕದಲ್ಲಿ ಐಕ್ಯವಾಗುವುದು ಸರಿಯಿಲ್ಲವೆಂದು ಸೂಚಿಸಿದರು. ಪ್ರದರ್ಶನದಲ್ಲಿ ಪ್ರತಿಭಟನಾಕಾರರು 65 ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಭಾರತಮಾತೆ, ಶ್ರೀಮನ್ಮಾಹರಾಜರ ಭಾವಚಿತ್ರಗಳನ್ನಿಟ್ಟು ಮುಖ್ಯ ಬೀದಿ ಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಶಂಕರಗೌಡರು ಮಾತನಾಡಿ ಮೈಸೂರಿನ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಇಂತಹ ಸಮ್ಮೇಳನ ನಡೆಯುತ್ತಿರುವುದಾಗಿಯೂ ಹಾಗೂ ಸಮ್ಮೇಳನದ ಧ್ಯೇಯಗಳನ್ನು ವಿವರಿಸಿ ಮೈಸೂರು ವಿಲೀನವಾಗುವುದನ್ನು ವಿರೋಧಿಸಿದರು. ಆದರೆ ಅಂತಿಮವಾಗಿ ಎಷ್ಟೇ ಎಡರು ತೊಡರುಗಳಿದ್ದರೂ ಕೂಡ ಮೈಸೂರು ಕರ್ನಾಟಕದ ವಿಲೀನವಾಯಿತು.

ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ಶಂಕರಗೌಡರು

ಮಂಡ್ಯ ಜಿಲ್ಲೆ ಹಳ್ಳಿಗಳ ಪ್ರದೇಶ. ಈ ಜಿಲ್ಲೆಯ ಜನರಲ್ಲಿ ನೂರಕ್ಕೆ ತೊಂಬತ್ತು ಜನ ವ್ಯವಸಾಯದಿಂದ ಜೀವಿಸುವ ರೈತರು. ಈ ಜನ ತಮ್ಮ ಮಕ್ಕಳಿಗೆ ಸರಿಯಾಗಿ ಶಿಕ್ಷಣ ಕೊಡಿಸಲು ಅಸಮರ್ಥರಾಗಿದ್ದರು. ಹಳ್ಳಿಗಳಿಂದ ನಗರಗಳಿಗೆ ಬಂದು ವಾಸ ಮಾಡಲು ಅವರಿಗೆ ಯಾವ ರೀತಿಯ ಅನುಕೂಲಗಳೂ ಇರಲಿಲ್ಲ. ತಮ್ಮ ಬಾಲ್ಯದಲ್ಲಿ ಶಂಕರಗೌಡರಿಗೂ ಇಂಥದೆ ಸಮಸ್ಯೆ ಎದುರಾಗಿತ್ತು. ಆಗ ತೊಂದರೆಯನ್ನು ಅನುಭವಿಸಿದ ಶಂಕರಗೌಡರಿಗೆ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು ಕಷ್ಟವಾಗಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು. ಅದಕ್ಕಾಗಿ ಬೇಕಾದ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ತಮ್ಮ ಮಿತ್ರರನ್ನು ಕೂಡಿಕೊಂಡು ಶಂಕರಗೌಡರು ನಾಟಕ ಪ್ರದರ್ಶನ ನಡೆಸಿದರು.

ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ಸಹಾಯಾರ್ಥ ನಾಟಕ ಪ್ರದರ್ಶನ

ಮಂಡ್ಯ ಜಿಲ್ಲೆಯ ರೈತಾಪಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರಕಬೇಕೆಂದು ಗೌಡರು ಬಯಸಿದ್ದರು. ಹಳ್ಳಿಗಾಡಿನ ಮಕ್ಕಳಿಗೆ ನಗರದಲ್ಲಿ ಒಳ್ಳೆಯ ವಿದ್ಯಾರ್ಥಿನಿಲಯಗಳು ಬೇಕು. ಅದಕ್ಕಾಗಿ ವಿದ್ಯಾರ್ಥಿನಿಲಯಗಳ ನಿರ್ಮಾಣವಾಗ ಬೇಕಾದರೆ ಸಾಕಷ್ಟು ಹಣವಿರದಿದ್ದಾಗ ಶಂಕರಗೌಡರು ಬಣ್ಣಹಚ್ಚಿ ನಾಟಕವಾಡಿ ಬಂದ ಹಣದಿಂದ ಈ ಕಾರ್ಯ ಯೋಜನೆಯನ್ನು ಪೂರ್ಣಗೊಳಿಸಲು ಮುಂದಾದರು. ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ನಾಟಕವಾಡಿದರು. ದಾನಶೂರಕರ್ಣ ಮತ್ತು ಪಾದುಕಾ ಕಿರೀಟ ಈ ಬಳಗ ಆಡಿದ ಎರಡು

ಜನಪ್ರಿಯ ನಾಟಕಗಳು. ಶಂಕರಗೌಡರು ಕರ್ಣನ ಪಾತ್ರವನ್ನು ಅಭಿನಯಿಸಿದರು. ಇದರಿಂದ 37,000 ರೂಗಳಷ್ಟು ಹಣಸಂಗ್ರಹವಾಯಿತು. ಇದರಿಂದ ಬಂದ ಹಣದಲ್ಲಿ ಮಂಡ್ಯ ಮತ್ತು ನಾಗಮಂಗಲದಲ್ಲಿ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು.

ಶಂಕರಗೌಡರು ಅಷ್ಟಕ್ಕೆ ತೃಪ್ತಿ ಪಡದೆ ಜಿಲ್ಲೆಯ ರೈತ ಮಕ್ಕಳ ಶೈಕ್ಷಣಿಕ ಸಮಸ್ಯೆಯನ್ನು ನೀಗಿಸಲು ಒಂದು ಶಿಕ್ಷಣ ಟ್ರಸ್ಟ್ ಸ್ಥಾಪಿಸಲು ನಿರ್ಧರಿಸಿದರು. ಇದರ ಫಲವಾಗಿ "ಜನತಾ ಶಿಕ್ಷಣ ಸಂಸ್ಥೆ (People Education Society)" 1958ರಲ್ಲಿ ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಸ್ಥಾಪಿಸಿದರು. ಈ ಟ್ರಸ್ಟ್‌ನ ಮೂಲಕ ಶಂಕರಗೌಡರು ಮಂಡ್ಯ ಜಿಲ್ಲೆಯ ಉನ್ನತ ಶಿಕ್ಷಣದ ಪ್ರಗತಿಯನ್ನು ಸಾಧಿಸಿದರು.

1. ಗ್ರಾಮೀಣ ಮಕ್ಕಳ ಪ್ರಾಥಮಿಕ ಹಾಗೂ ಶಿಶು ಶಿಕ್ಷಣವನ್ನು ಪ್ರೋತ್ಸಾಹಿಸುವುದರ ಮೂಲಕ ಶಿಕ್ಷಣ ವ್ಯವಸ್ಥೆ ಕಲ್ಪಿಸುವುದು, ವಯಸ್ಕರಿಗೆ ಹಾಗೂ ಗ್ರಾಮೀಣ ಮಹಿಳೆಯರಿಗೆ ಗೃಹವಿಜ್ಞಾನ, ಗುಡಿ ಕೈಗಾರಿಕೆಗೆ ಹಾಗೂ ಕರಕುಶಲ ಕಸುಬುಗಳಿಗೆ ತರಬೇತಿ ನೀಡುವುದು.

2. ಜನರಶಕ್ತಿ ಮತ್ತು ಸಂಪನ್ಮೂಲಗಳನ್ನು ಪ್ರೋತ್ಸಾಹಿಸಿ, ನಾಗರಿಕ ಜೀವನಕ್ಕೆ ಹಾಗೂ ಸಾಮಾಜಿಕ ಸೇವೆಗೆ ಅವರ ಅಮೂಲ್ಯ ಜ್ಞಾನವನ್ನು ತೊಡಗಿಸುವುದು.

3. ಆಡಳಿತ ಮಂಡಲಿಯ ವತಿಯಿಂದ ಅಥವಾ ಈ ಸೊಸೈಟಿಯ ವತಿಯಿಂದ ಮುಖ್ಯ ಸ್ಥಳಗಳಲ್ಲಿ ಶಾಲೆ ಕಾಲೇಜುಗಳನ್ನು ಸ್ಥಾಪಿಸುವುದು.

4. ಈ ಸಮಿತಿಯ ವತಿಯಿಂದ ಮೇಲಿನ ಚಟುವಟಿಕೆ ಯುಳ್ಳ ಸಂಘ ಸಂಸ್ಥೆಗಳಿಗೆ ಅನುದಾನ ನೀಡುವುದು ಆಶ್ರಮ ಮುಂತಾದ ಸಂಸ್ಥೆಗಳ ಬೆಳವಣಿಗೆಗೆ ಉತ್ತೇಜನ ನೀಡುವುದು.

5. ಗ್ರಾಮೀಣ ಬಡಹೆಣ್ಣು ಮಕ್ಕಳ ಹಾಗೂ ಹೆಂಗಸರಿಗೆ ಪ್ರಸೂತಿ, ಮಕ್ಕಳ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲು ಅನುದಾನ ನೀಡುವುದು ಅಥವಾ ಸಂಸ್ಥೆಯೇ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗುವುದು.

6. ಅನುದಾನಿತ ಕಾಲೇಜುಗಳು, ಶಾಲೆಗಳು, ವಿದ್ಯಾರ್ಥಿನಿಲಯಗಳು ಮುಂತಾದ ಸಂಸ್ಥೆಗಳು ಬೇರೆಯವರಿಂದ ನಡೆಯುತ್ತಿದ್ದರೂ ಅಥವಾ ಸಂಘಸಂಸ್ಥೆಯ ವತಿಯಿಂದ ನಡೆಯುತ್ತಿದ್ದರೂ ಅವುಗಳನ್ನು ಆಡಳಿತ ಮಂಡಲಿಯ ವಶಕ್ಕೆ ತೆಗೆದುಕೊಂಡು ನಡೆಸುವುದು.

ಇಂತಹ ಉನ್ನತ ಮಟ್ಟದ ಉದ್ದೇಶಗಳನ್ನು ಹೊಂದಿದ್ದ ಜನತಾಶಿಕ್ಷಣ ಸೊಸೈಟಿಯ ವತಿಯಿಂದ ಹಲವಾರು ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದಾರೆ. ಪದವಿಪೂರ್ವ ಕಾಲೇಜು ಶಿಕ್ಷಣ ಮಹಾವಿದ್ಯಾಲಯ, ಪ್ರೌಢಶಾಲೆ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಮಂಡ್ಯ ಜಿಲ್ಲೆಯ ತಾಂತ್ರಿಕ ಶಿಕ್ಷಣ ರೂವಾರಿ ಶಂಕರಗೌಡರು

ಶಂಕರಗೌಡರು ಮಂಡ್ಯ ಜಿಲ್ಲೆಯ ರೈತ ಮಕ್ಕಳಿಗೆ ಸಂಪ್ರದಾಯದ ಶಿಕ್ಷಣದ ಜೊತೆಗೆ ಎಂಜಿನಿಯರಿಂಗ್ ಶಿಕ್ಷಣವನ್ನು ಕೊಡಲು ನಿರ್ಧರಿಸಿ ಜನತಾ ಶಿಕ್ಷಣ ಸಂಸ್ಥೆಯ ವತಿಯಿಂದ ಒಂದು ಇಂಜಿನಿಯರಿಂಗ್ ಕಾಲೇಜು ತೆರೆಯಲು ನಿರ್ಧರಿಸಿದರು. ಎಂಜಿನಿಯರಿಂಗ್ ಕಾಲೇಜು ತೆರೆಯಲು ನಿವೇಶನ ಬೇಕಾಗಿತ್ತು. 1962ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್. ನಿಜಲಿಂಗಪ್ಪನವರಿಗೆ ಕಾಲೇಜು ತೆರೆಯಲು ನಿವೇಶನವೊಂದನ್ನು ನೀಡುವಂತೆ ಮನವಿ ಸಲ್ಲಿಸಿದರು. ಇಂಡುವಾಳು ಹಾಗೂ ಮೋಳೆಕೊಪ್ಪಲು ಬಳಿ ಸರ್ಕಾರಿ ಅರಣ್ಯ ಭೂಮಿಯನ್ನು ಪಿ.ಇ.ಎಸ್. ಶಿಕ್ಷಣ ಸಂಸ್ಥೆಗೆ ಕೊಡಿಸಿಕೊಡುವಂತೆ ಶಂಕರಗೌಡರು ಪದೇ ಪದೇ ಒತ್ತಾಯತಂದರು. ಶಂಕರಗೌಡರ ಮೇಲಿನ ಅಭಿಮಾನದಿಂದ ನಿಜಲಿಂಗಪ್ಪನವರು ಪಿ.ಇ.ಎಸ್. ಸಂಸ್ಥೆಗೆ ಸದರಿ ಜಮೀನನ್ನು ಮಂಜೂರು ಮಾಡಿದರು. ಆದರೆ ಅಲ್ಲಿ ಕಾಲೇಜು ತೆರೆಯುವುದು ಸೂಕ್ತವಲ್ಲವೆಂದು ಪ್ರಸ್ತುತ ಇಂದು ಇರುವ ಕಾಲೇಜಿನ ನಿವೇಶನ ಹಿಂದೆ ಇಂಡುವಾಳು, ಕ್ಯಾತುಂಗೆರೆ, ಮೋಳೆಕೊಪ್ಪಲಿನ ರೈತರ ಜಮೀನುಗಳಾಗಿದ್ದವು. ಶಂಕರಗೌಡರು ಇದನ್ನು ಮನಗಂಡು ಸರ್ಕಾರದಿಂದ ತಮಗೆ ಮಂಜೂರಾಗಿದ್ದ ಜಮೀನನ್ನು ಆ ಊರಿನ ಜನರಿಗೆ ಬಿಟ್ಟುಕೊಟ್ಟು ಅವರಿಗೆ ಸೇರಿಸ ಪ್ರಸ್ತುತ ಕಾಲೇಜು ಇರುವ ನಿವೇಶನವನ್ನು ವಿನಿಮಯ ಮಾಡಿಕೊಂಡರು.

ಕಾಲೇಜು ಕಟ್ಟಡ ನಿಧಿಗಾಗಿ ಗೌಡರು ಸಹಾಯಾರ್ಥ ನಾಟಕ ಪ್ರದರ್ಶಿಸಲು ಮುಂದಾದರು. ಗೌಡರು ದಶರಥನ ಪಾತ್ರದಲ್ಲಿ ಹಾಗೂ ಮಿತ್ರರಾದ ಜಿ.ಎಸ್. ಬೊಮ್ಮೇಗೌಡ, ಕೆ.ಎಂ. ವೀರಪ್ಪ, ಶಿವಲಿಂಗಯ್ಯ, ಕೆ. ಬೆಟ್ಟಶೆಟ್ಟಿ ಮೊದಲಾದವ ರೊಡನೆ ಪಾದುಕಕಿರೀಟಿ ನಾಟಕ ಪ್ರದರ್ಶಿಸಿ ನಿಧಿ ಸಂಗ್ರಹಿಸಿದರು. ಈ ನಿಧಿಯಿಂದ ಒಂದು ಸುಸಜ್ಜಿತ ಪ್ರಯೋಗಾಲಯವುಳ್ಳ ತಾಂತ್ರಿಕ ಕಾಲೇಜನ್ನು, ಯೋಗ್ಯತೆಯುಳ್ಳ ಪ್ರಾಧ್ಯಾಪಕರನ್ನು ನೇಮಿಸಿಕೊಂಡು. ಕಾಲೇಜಿಗೆ ಉತ್ತಮ ಪ್ರಾಂಶುಪಾಲರನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಆದರೆ ಅದು ತಡವಾದ್ದರಿಂದ ಶಂಕರಗೌಡರೇ ಮೊದಲ ಪ್ರಾಂಶುಪಾಲರಾಗಿಯೂ ಅವರ

ಒಡನಾಡಿಗಳಾದ ಎಲ್. ನಾರಾಯಣ ಮೊದಲ ಕಛೇರಿ ಅಧೀಕ್ಷಕರಾಗಿಯೂ ಕಾರ್ಯನಿರ್ವಹಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಖಾಸಗಿಯಾಗಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದ ಕೀರ್ತಿ ಪಿ.ಇ.ಎಸ್. ಸಂಸ್ಥೆಗೆ ಸಲ್ಲುತ್ತದೆ. ತಾಂತ್ರಿಕ ಶಿಕ್ಷಣಕ್ಕೆ ಅಂದು ದೇಶಾದ್ಯಂತ ಬೇಡಿಕೆಯಿದ್ದ ಅವಶ್ಯಕತೆಯನ್ನು ಪೂರೈಸಲು ಈ ಸಂಸ್ಥೆ ಶ್ರಮಿಸಿತು.

ಮಂಡ್ಯ ಜಿಲ್ಲೆಯಲ್ಲಿ ಶಂಕರಗೌಡರ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಜಿಲ್ಲಾ ಕೇಂದ್ರದ ಜನರು ಹಾಗೂ ಗ್ರಾಮಾಂತರ ಪ್ರದೇಶದ ಜನರು ಸೇರಿ ಶಂಕರಗೌಡ ಶಿಕ್ಷಣ ಕಾಲೇಜನ್ನು ತೆರೆದರು. ಈ ಕಾಲೇಜಿನ ಶಂಕು ಸ್ಥಾಪನೆಯನ್ನು ರಾಷ್ಟ್ರಕವಿ ಕುವೆಂಪು 15.07.1975ರಂದು ನೆರವೇರಿಸಿದರು. ಹೀಗೆ ಶಂಕರಗೌಡರು ಮಂಡ್ಯ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ನಿಸ್ವಾರ್ಥ ಸೇವೆಯಿಂದ ಜಿಲ್ಲೆಯ ರೈತರ ಬದುಕನ್ನು ಬೆಳಗುವ ನಂದಾದೀಪವಾಗಿದ್ದಾರೆ.

1962ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಗೌಡರು ರಾಜಕೀಯ ಗುಂಪುಗುಳಿತನದಿಂದ ಕೇವಲ 300 ಮತಗಳಿಂದ ಇವರ ಪ್ರತಿಸ್ಪರ್ಧಿಯಾಗಿದ್ದ ಜೆ. ದೇವಯ್ಯನವರ ವಿರುದ್ಧ ಸೋತರು. ಶಂಕರಗೌಡರು ರಾಜಕೀಯದಲ್ಲಿ ಗೆಲ್ಲಲಿ, ಸೋಲಲಿ ಎಂದೂ ಜನಹಿತವನ್ನು ಮರೆತವರಲ್ಲ ಮತ್ತು ಸೋಲಿನಿಂದ ಧೃತಿಗೆಟ್ಟವರು ಅಲ್ಲ. 1963–64ರಲ್ಲಿ ಬೆಂಗಳೂರು ಕಂಠೀರವ ಸ್ಟುಡಿಯೋದ ಸ್ಥಾಪಕ ಅಧ್ಯಕ್ಷರಾಗಿದ್ದರು.

ವಿಧಾನಪರಿಷತ್ ಸದಸ್ಯರಾಗಿ ಗೌಡರು

1966ರಲ್ಲಿ ಮಂಡ್ಯ ಕ್ಷೇತ್ರದಿಂದ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಕೆ.ವಿ. ಶಂಕರಗೌಡರು 190 ಮತಗಳನ್ನು ಗಳಿಸಿ ತಮ್ಮ ಪ್ರತಿಸ್ಪರ್ಧಿ ಜನತಾಪಕ್ಷದ ಚಿಕ್ಕಲಿಂಗಯ್ಯನವರನ್ನು ಸೋಲಿಸಿ ವಿಧಾನ ಪರಿಷತ್ತಿಗೆ ಆಯ್ಕೆಗೊಂಡರು. ಚಿಕ್ಕಲಿಂಗಯ್ಯನವರಿಗೆ 92 ಮತಗಳು ಬಂದಿದ್ದು ಗೌಡರು ಈ ಚುನಾವಣೆಯಲ್ಲಿ ವಿಜಯಿಯಾದರು.

ವಿದ್ಯಾಮಂತ್ರಿಯಾಗಿ ಕೆ.ವಿ. ಶಂಕರಗೌಡರು

1967ರಲ್ಲಿ ಎಸ್. ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಕೆ.ವಿ. ಶಂಕರಗೌಡರು ನಿಸ್ಪೃಹತೆಯನ್ನು ಮತ್ತು

ಕಾರ್ಯದಕ್ಷತೆಯನ್ನು ಮನಗಂಡಿದ್ದ ಮುಖ್ಯಮಂತ್ರಿಗಳು ಗೌಡರನ್ನು ತಮ್ಮ ಸಚಿವ ಸಂಪುಟಕ್ಕೆ ಸೇರಿಸಿಕೊಂಡರು. ನಿಜಲಿಂಗಪ್ಪನವರಿಗೆ ಸಮಾನ ಮನೋಭಾವದ ಗೌಡರಲ್ಲಿ ತುಂಬಾ ವಿಶ್ವಾಸ. ಆದ್ದರಿಂದಲೇ ನಿಜಲಿಂಗಪ್ಪನವರು ಅವರಿಗೆ ವಿದ್ಯಾ ಇಲಾಖೆಯ ಜವಾಬ್ದಾರಿಯನ್ನೊಪ್ಪಿಸಿದರು. 13.03.1967ರಂದು ಶಿಕ್ಷಣ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಶಂಕರಗೌಡರು ಶಿಕ್ಷಣ ಇಲಾಖೆಯ ಸಚಿವರಾದಾಗ ಸಾಹಿತಿ ಬಸವರಾಜಕಟ್ಟೀಮನಿಯವರು ನಮ್ಮ ರಾಜ್ಯ ಸರ್ಕಾರದಲ್ಲಿ ಪ್ರಥಮವಾಗಿ ಆಖಾತೆಗೆ ನೂರಕ್ಕೆ ನೂರರಷ್ಟು ಅರ್ಹರಾದ ಮಂತ್ರಿ ಲಭಿಸಿದರು ಎಂದು ಅಭಿನಂದಿಸಿದರು. ಶಿಕ್ಷಣ ಇಲಾಖೆ ಬಲು ದೊಡ್ಡದು ಪೂರ್ವ ಪ್ರಾಥಮಿಕ, ಮಾಧ್ಯಮಿಕ, ಹೈಯರ್ ಸೆಕೆಂಡರಿ, ವಿಶ್ವವಿದ್ಯಾಲಯ, ತಾಂತ್ರಿಕ, ಅತಾಂತ್ರಿಕ ಇತ್ಯಾದಿಯಾಗಿ ಶಾಖೋಪಶಾಖೆಯಾಗಿ ಹೆಮ್ಮರವಾಗಿ ಬೆಳೆದಿದೆ. ಕನ್ನಡ ಅಭಿವೃದ್ಧಿ, ಸಾಹಿತ್ಯ, ಸಂಗೀತ, ಲಲಿತಾಕಲಾ ಅಕಾಡೆಮಿಗಳೂ ಅದೇ ಇಲಾಖೆಗೆ ಸೇರಿಕೊಂಡಿದ್ದವು. ಇರುವರೆಗೂ ಈ ಇಲಾಖೆಯು ಜಡತ್ವದಿಂದ ಕೂಡಿದ್ದು ಶಂಕರಗೌಡರು ಸಚಿವರಾದ ನಂತರ ಈ ಇಲಾಖೆಯನ್ನು ಚುರುಕುಗೊಳಿಸಲು ತಮ್ಮ ಎಲ್ಲ ಸಮಯವನ್ನು ಅವರು ವಿನಿಯೋಗಿಸಿದರು.

ಶಿಕ್ಷಕರಿಗೆ ಚೆಕ್ ಮೂಲಕ ಸಂಬಳ

ಶಿಕ್ಷಣ ಸಚಿವರಾಗಿ ಅವರು ಕೈಗೊಂಡ ಮೊಟ್ಟ ಮೊದಲ ದಿಟ್ಟ ಕ್ರಮವೆಂದರೆ ಖಾಸಗಿ ಶಾಲಾ ಅಧ್ಯಾಪಕರಿಗೆ ಸರ್ಕಾರದಿಂದಲೇ ಸಂಬಳ ಪಾವತಿಸುವುದು. ಅಂದರೆ ರಾಜ್ಯದ ಖಾಸಗಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಪ್ರೌಢಶಾಲೆಗಳ ಅಧ್ಯಾಪಕರುಗಳಿಗೆ ವೇತನವನ್ನು ಸರ್ಕಾರದಿಂದಲೇ ನೇರವಾಗಿ ಚೆಕ್ ಮೂಲಕ ಪಾವತಿಸುವ ಪದ್ದತಿಯನ್ನು ಜಾರಿಗೆ ತಂದರು. ಈ ಏರ್ಪಾಡಿನಿಂದ ಶಿಕ್ಷಣ ವ್ಯಾಪಾರವು ಮಾಯವಾಗುತ್ತದೆಂದು ಭಾವಿಸಲಾಯಿತು. ಅದುವರೆಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ನೌಕರರಿಗೆ ಸರಿಯಾಗಿ ಸಂಬಳ ಪಾವತಿಸದೇ ಹಲವಾರು ಅವ್ಯವಹಾರಗಳು ನಡೆಯುತ್ತಿದ್ದವು. ಈ ಕ್ರಮದಿಂದ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿದ್ದ ಅವ್ಯವಹಾರವು ಮಾಯವಾಯಿತಾದರೂ ಪ್ರತಿತಿಂಗಳೂ ವೇತನವನ್ನು ಸರ್ಕಾರವೇ ನೇರವಾಗಿ ಚೆಕ್‌ನ ಮೂಲಕ ನೀಡುವ ನಿರ್ಧಾರವನ್ನು ಖಾಸಗಿ ಶಾಲೆಗಳ ಆಡಳಿತವರ್ಗದವರು ಒಪ್ಪಿದರಾದರೂ 'ಆಡಳಿತ ವರ್ಗದವರ ಕೈತಪ್ಪಿಸಿ' ನೀಡುವ ಪದ್ಧತಿಯನ್ನು ವಿರೋಧಿಸಿದರು. ಚೆಕ್‌ನ ಮೂಲಕ ಉಪಾಧ್ಯಾಯರಿಗೆ ವೇತನ ನೀಡುವ ವಿಷಯದ ಬಗ್ಗೆ ದೀರ್ಘವಾದ

ಚರ್ಚೆ ನಡೆಯಿತು. ಈ ಕ್ರಮದಿಂದ ಯಾವುದೇ ತೊಂದರೆ ಯಾಗುವುದಿಲ್ಲವೆಂದು ತಿಳಿಸಿದಾಗ ಈ ನಿರ್ಧಾರವನ್ನು ಒಪ್ಪಿಕೊಂಡರು. ಈ ನಿರ್ಧಾರದಿಂದ ಹಲವು ಆಡಳಿತ ಮಂಡಲಿಯವರು ಸಂಬಳ ನೀಡುವಾಗ ನೀಡುತ್ತಿದ್ದ ಕಿರುಕುಳ ತಪ್ಪಿ ಯಾವುದೇ ತೊಂದರೆ ಇಲ್ಲದೇ ಅವರು ಕಾರ್ಯನಿರ್ವಹಿಸುವಂತಾಯಿತು. ಈ ಪದ್ಧತಿಯನ್ನು ಮೊಟ್ಟ ಮೊದಲಿಗೆ ಮಂಡ್ಯ ಜಿಲ್ಲೆಯ ಶಾಲೆಯಲ್ಲಿ ಸಾಂಕೇತಿಕವಾಗಿ 1967 ಜೂನ್ 13ರಂದು ಜಾರಿಗೆ ತರಲಾಯಿತು.

ಶಿಕ್ಷಣ ಅವಧಿಯ ನಿಗದಿ

ಶಂಕರಗೌಡರು ವಿದ್ಯಾಮಂತ್ರಿಯಾದಾಗ ಶಿಕ್ಷಣದ ಅವಧಿಯಲ್ಲಿ ಗೊಂದಲವಿತ್ತು. ಈ ಗೊಂದಲವನ್ನು ಕೊನೆಗಾಣಿಸಲು ಮುಂದಾದರು. ದೆಹಲಿಯಲ್ಲಿ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿನ ತೀರ್ಮಾನದಂತೆ 10 ವರ್ಷಗಳ ಅವಧಿಯ ಸಾಮಾನ್ಯ ಶಿಕ್ಷಣ ಹಾಗೂ ಐಚ್ಛಿಕ ವಿಷಯಗಳನ್ನು ತೆಗೆಯಬೇಕು ಆನಂತರ 2 ವರ್ಷಗಳ ಪಿ.ಯು.ಸಿ. ಶಿಕ್ಷಣ ದೊರಕಬೇಕು ಪದವಿಶಿಕ್ಷಣ ಮೂರು ವರ್ಷ ಅವಧಿಗಳೆಂದು ಅಂದರೆ 10+2+3 ಆಗಿರಬೇಕೆಂದು ನಿರ್ಧರಿಸಿತ್ತು. ಮಾನಸಿಕ ವಿಕಾಸ ಅವರು ಅಭ್ಯಸಿಸುವ ಹಲವು ವಿಷಯಗಳನ್ನು ಚಿಂತಿಸಿ, ಮಂಥಿಸಿ, ಜೀರ್ಣಿಸಿ ವಿಮರ್ಶಿಸಿದಾಗ ಅದರಲ್ಲಿ ಬದಲಾವಣೆ ಅಗತ್ಯವೆಂದು ತೋರಿತು. ಅದರಂತೆ ಈ ಕೆಳಗಿನ ಬದಲಾವಣೆಗಳು ಅನುಷ್ಠಾನಕ್ಕೆ ಬಂದವು.

1. 7 ವರ್ಷಗಳ ಪ್ರಾಥಮಿಕ ಶಿಕ್ಷಣ

2. ಮೂರು ವರ್ಷಗಳ ಪ್ರೌಢಶಿಕ್ಷಣ

3. ಈ ಹತ್ತು ವರ್ಷಗಳ ಅವಧಿಯಲ್ಲಿ ಎಲ್ಲರಿಗೂ ಸಾಮಾನ್ಯ ಶಿಕ್ಷಣ ಕೊಡುವ ವ್ಯವಸ್ಥೆ.

4. ಪ್ರೌಢಶಾಲೆಯ ಹಂತದಲ್ಲಿ ಐಚ್ಛಿಕ ವಿಷಯಗಳನ್ನು ಕೈಬಿಡುವುದು

5. ಪಿ.ಯು.ಸಿ ಶಿಕ್ಷಣದ ಅವಧಿಯನ್ನು 2 ವರ್ಷದ ಅವಧಿಯನ್ನಾಗಿ ಮಾಡುವುದು

6. ಅದು ಮುಕ್ತಾಯ ಘಟಕವೂ ಆಗಿರುವುದರ ಜೊತೆಗೆ ಮುಂದುವರಿದ ಶಿಕ್ಷಣಕ್ಕೆ ತಯಾರಿಕೆಯೂ ಆಗಿರಬೇಕು.

7. ವೃತ್ತಿ ಶಿಕ್ಷಣವನ್ನು ಆ ಹಂತದಲ್ಲಿ ಅಳವಡಿಸಬೇಕು.

8. ಪದವಿ ತರಗತಿಗಳ ಅವಧಿ 3 ವರ್ಷವಾಗಿರಬೇಕು ಎಂದು ಶಿಕ್ಷಣ ಆಯೋಗದ ಶಿಫಾರಸ್ಸನ್ನು 22.4.1967ರಲ್ಲಿ ನಡೆದ ಶಿಕ್ಷಣತಜ್ಞರ ವಿಚಾರ ಸಂಕಿರಣದಲ್ಲಿ ಶಿಫಾರಸ್ಸು ಮಾಡಿತು.

ಈ ನಿರ್ಧಾರಗಳಂತೆ ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ 1969ರಿಂದಲೇ ಪ್ರಾರಂಭವಾಯಿತು. 2 ವರ್ಷಗಳ ಅವಧಿಯ ಪಿಯುಸಿ ಶಿಕ್ಷಣವನ್ನು ಜಾರಿಗೆ ತರಲು ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಲಾಯಿತು. ಎರಡು ವರ್ಷಗಳ ಪಿ.ಯು.ಸಿ. ಶಿಕ್ಷಣ ಕ್ರಮ ಹಲವಾರು ಮಾರ್ಪಾಡುಗಳೊಡನೆ ಅಂತಿಮವಾಗಿ 1972ನೇ ಶಾಲಾ ವರ್ಷದಿಂದ ಅನುಷ್ಠಾನಕ್ಕೆ ಬಂದ ನಂತರ ಈ ಯೋಜನೆ ಭಾರತ ಸರ್ಕಾರದ ಮತ್ತು ರಾಜ್ಯ ಸರಕಾರಗಳ ಗಮನ ಸೆಳೆಯಿತು. ಅಲ್ಲದೆ "ಮೈಸೂರು ಯೋಜನೆ" ಎಂಬ ಹೆಸರಿನಿಂದ ಶ್ಲಾಘನೆ ಪಡೆಯಿತು. ಮೈಸೂರು ಯೋಜನೆಗೆ ಎಲ್ಲಾ ರಾಜ್ಯಗಳಿಂದಲೂ ಬೆಂಬಲ ನೀಡಿದವು ಅಲ್ಲದೇ ಎಲ್ಲಾ ರಾಜ್ಯಗಳಲ್ಲೂ 7+3+2+3 ಪದ್ಧತಿ ಜಾರಿಗೆ ಬರಬೇಕೆಂದು ಸಲಹೆ ಮಾಡಿತು ಇದೊಂದು ಮಹತ್ಸಾಧನೆ.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಶಂಕರಗೌಡರು

ಶಂಕರಗೌಡರು ವಿದ್ಯಾಮಂತ್ರಿಂಯಾಗಿದ್ದ ಕಾಲ ಕನ್ನಡದ ಸುವರ್ಣಯುಗವೆಂದು ಹೇಳಬಹುದು. ಇವರ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಸಹಾಯಧನ ನೀಡಿ ಪರಿಷತ್ತಿನ ಎಲ್ಲಾ ಕಾರ್ಯವೈಖರಿಯನ್ನು ಪ್ರಶಂಸಿಸಿ ಉತ್ತೇಜಿಸಿದರು. ಪರಿಷತ್ತಿನ 15 ಲಕ್ಷ ರೂಪಾಯಿಗಳ ತ್ರೈವಾರ್ಷಿಕ ಯೋಜನೆಯ ಅರ್ಧವೆಚ್ಚವನ್ನು ಭರಿಸಿತು. ಪರಿಷತ್ತಿನ ಈ ಯೋಜನೆಯಡಿ ಜಿಲ್ಲಾಮಟ್ಟದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶಾಖೆಗಳು ತೆರೆಯಲ್ಪಟ್ಟವು ಮತ್ತು ಪರಿಷತ್ತಿನಿಂದ ಕನ್ನಡ ನಿಘಂಟು 13 ಸಂಪುಟಗಳಲ್ಲಿ ಹೊರತರಲಾಯಿತು. ಪರಿಷತ್ತಿನಿಂದ ಪ್ರಚಾರೋಪನ್ಯಾಸ ಗಳು, ಸಮ್ಮೇಳನಗಳು ಮತ್ತು ಸಾಹಿತ್ಯೋತ್ಸವಗಳು ಕೇಂದ್ರ, ಪ್ರಾಂತ ಸರಕಾರಗಳು ಮತ್ತು ವಿಶ್ವವಿದ್ಯಾನಿಲಯಗಳೊಡನೆ ಸಹಕಾರ ನೀಡಿ ರಾಜಧಾನಿಯಲ್ಲಿ ಕನ್ನಡದ ಅಭಿಮಾನವನ್ನು ಬೆಳೆಸುವುದು ಇದೇ ಮೊದಲಾದ ಪರಿಷತ್ತಿನ ಯೋಜನೆ ಗಳಿಗೆ ಶಂಕರಗೌಡರು ಬೆಂಬಲಿಸಿ ಸರ್ಕಾರದಿಂದ ಹಣ ಸಹಾಯ ಒದಗಿಸಲು ಸಂಪೂರ್ಣ ಪ್ರಯತ್ನ ಮಾಡಿದರು.

ಇವರು ಕರ್ನಾಟಕ ಸರ್ಕಾರ ಪ್ರಕಟಣಾಲಯವನ್ನು ಸ್ಥಾಪಿಸಲು ಕಾರಣರಾಗಿದ್ದು ಈ ಪ್ರಕಟನಾಲಯದ ವತಿಯಿಂದ ಕಿರಿಯರ ವಿಶ್ವಕೋಶ 7

ಸಂಪುಟಗಳಲ್ಲಿ ಪ್ರಕಟವಾಗಿ ಇದಕ್ಕಾಗಿ ಅಂದಾಜುವೆಚ್ಚ 38 ಲಕ್ಷತಗುಲಿದ್ದು 15000 ಪ್ರತಿಗಳನ್ನು ಶಾಲೆಗಳ ಸಲುವಾಗಿ ಮುಂಗಡವಾಗಿಯೇ ಹಣಕೊಟ್ಟುಕೊಳ್ಳಲು ನಿರ್ಧರಿಸಲಾಯಿತು. ಈ ನಿರ್ಧಾರದ ಕೀರ್ತಿ ಹೆಚ್ಚು ಕಡಿಮೆ ವಿದ್ಯಾಮಂತ್ರಿಯಾಗಿದ್ದ ಕೆ.ವಿ. ಶಂಕರಗೌಡರಿಗೆ ಸಲ್ಲುತ್ತದೆ.

ವಿಜ್ಞಾನ ಶಿಕ್ಷಣಕ್ಕೆ ಒತ್ತು

ಶಂಕರಗೌಡರು ವಿದ್ಯಾಮಂತ್ರಿಯಾಗಿದ್ದ ಅವಧಿಯಲ್ಲಿ ವಿಜ್ಞಾನ ವಿಷಯಕ್ಕೆ ಹೆಚ್ಚು ಒತ್ತು ಕೊಟ್ಟು ಅದರ ಮೂಲಕ ಹಲವು ಸಂಶೋಧನೆಗಳಾಗಬೇಕೆಂದು ಬಯಸಿದರು. ಅದಕ್ಕಾಗಿ ಒಂದು ಸ್ವತಂತ್ರ ಇಲಾಖೆಯನ್ನೇ ಸ್ಥಾಪಿಸಲು ಮುಂದಾದರು. 1968ರ ಏಪ್ರಿಲ್ ತಿಂಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿದರು. ಯಾವ ದೇಶ ವೈಜ್ಞಾನಿಕವಾಗಿ ಮುಂದುವರಿಯುವುದಿಲ್ಲವೋ ಆದೇಶ ಪ್ರಗತಿಯನ್ನು ಸಾಧಿಸುವುದು ಕಷ್ಟ. ಶೀಘ್ರವಾಗಿ ಕೈಗಾರೀಕರಣ ವಾಗಬೇಕಾದರೆ ವಿಜ್ಞಾನ ಮುಂದುವರಿದಿರಬೇಕು ಆದ್ದರಿಂದ ವಿಜ್ಞಾನಕ್ಕೆ ಹೆಚ್ಚು ಗಮನ ಕೊಟ್ಟು ಅದರ ಸೌಲಭ್ಯವನ್ನು ಹೆಚ್ಚು ಮಾಡುವುದಕ್ಕೂ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಯೋಜನೆ ಮಾಡಿಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ 'ರಾಜ್ಯವಿಜ್ಞಾನ ಶಿಕ್ಷಣ ಸಂಸ್ಥೆ (State Institute Of Science) ಎಂಬ ಸಂಸ್ಥೆಯನ್ನು 1968ರಲ್ಲಿ ಪ್ರಾರಂಭಿಸಿದರು. ಈ ಸಂಸ್ಥೆ ರಾಜ್ಯದಲ್ಲಿ ಇರತಕ್ಕ ಎಲ್ಲಾ ಶಾಲೆಗಳಿಗೂ ಮೂರನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ವೈಜ್ಞಾನಿಕ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೂ ಅಲ್ಲದೇ ವಿಜ್ಞಾನದಲ್ಲಿ ಯಾರು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆಯೋ ಅವರನ್ನು ಆರಿಸಿ ಅವರಿಗೆ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನವನ್ನು ಕೊಟ್ಟು ಶಿಕ್ಷಣಕ್ಕೆ ಏರ್ಪಾಡು ಮಾಡುತಕ್ಕ ಒಂದು ವ್ಯವಸ್ಥೆಯನ್ನು ಜಾರಿಗೆ ತಂದರು.

ಪರೀಕ್ಷಾ ಮತ್ತು ಮೌಲ್ಯಮಾಪನಾ ಕಾರ್ಯದಲ್ಲಿ ಸುಧಾರಣೆ

ಎಸ್.ಎಸ್.ಎಲ್.ಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸುವಂತೆ ಮಾಡಲು ನಿರ್ಧರಿಸಿ ಅದರಂತೆ ಮಾರ್ಪಾಡು ಮಾಡಿದರು. ಅಲ್ಲದೇ ಎಸ್.ಎಸ್.ಎಲ್.ಸಿ ಪರೀಕ್ಷೆಗಳನ್ನು ನಡೆಸುವುದಕ್ಕೆ ಒಂದು "ಸ್ಟ್ಯಾಟ್ಯುಟರಿಬೋರ್ಡ್" (Statutery Board) ಸ್ಥಾಪನೆ ಮಾಡಿದರು. ಆ ಬೋರ್ಡು ಪರೀಕ್ಷೆಗಳನ್ನು ನಡೆಸುವುದಲ್ಲದೆ, ಪರೀಕ್ಷೆ ಪದ್ಧತಿಯಲ್ಲಿದ್ದ ನ್ಯೂನತೆಗಳನ್ನು ತಿಳಿಸಿ ಸರ್ಕಾರಕ್ಕೆ ವರದಿ ಮಾಡಬೇಕಾಗಿತ್ತು. ನಂತರ ಅದನ್ನು ಸರಿಪಡಿಸಲು "ಮೌಲ್ಯಮಾಪನಾ

ಘಟಕ" ಎಂಬ ಒಂದು ಯುನಿಟ್ ಅನ್ನು ಸ್ಥಾಪಿಸಲಾಗಿದ್ದು ಈ ಘಟಕ ಸಮರ್ಪಲವಾಗಿ ಕೆಲಸಮಾಡಿ ಆಗಾಗ್ಗೆ ಪರೀಕ್ಷೆಗಳಲ್ಲಿ ಏನು ಸುಧಾರಣೆ ತರಬಹುದು ಎಂಬ ಸೂಚನೆಯನ್ನು ಇಲಾಖೆ ಕೊಡುವಂತೆ ವ್ಯವಸ್ಥೆ ಮಾಡಿದರು. ಇದರ ಜೊತೆಗೆ "Educational Research Board and Guiduance Unite" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಲು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಸಂಶೋಧನೆ ನಡೆಸಿ ಇಲಾಖೆಗೆ ಸಲಹೆಗಳನ್ನು ನೀಡಲು ಈ ಘಟಕವನ್ನು ಸ್ಥಾಪಿಸಿದರು.

1961ರಿಂದೀಚೆಗೆ ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡುವ ಉಪಾಧ್ಯಾಯರುಗಳಿಗೆ ಕನಿಷ್ಠಪಕ್ಷ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕೆಂಬ ನಿಯಮವನ್ನು ಜಾರಿಗೆ ತರಲಾಗಿತ್ತು, ಆದರೆ ಒಂದುವರ್ಷ ಇದ್ದಂತಹ ತರಬೇತಿಯನ್ನು 2 ವರ್ಷಕ್ಕೆ ಮಾರ್ಪಾಟು ಮಾಡಲಾಯಿತು. ಇದರ ಜೊತೆಗೆ ಉಪಾಧ್ಯಾಯರುಗಳಿಗೆ ಇನ್‌ಸರ್ವಿಸ್ ಟ್ರೈನಿಂಗ್‌ನ್ನು ಕೊಡುವ ಏರ್ಪಾಡು ಮಾಡಿದರು. ಇದಕ್ಕಾಗಿ ಎರಡು ಸಂಸ್ಥೆಗಳನ್ನು ಪ್ರಾರಂಭ ಮಾಡಿದರು. ಒಂದು "Regional Instution of English" ಇದರಲ್ಲಿ ಇಂಗ್ಲೀಷ್ ಭಾಷೆ ಕಲಿಯುವ ವಿಷಯವಾಗಿ ಉಪಾಧ್ಯಾಯರಿಗೆ ಶಿಕ್ಷಣ ಕೊಡಲಾಗುತ್ತದೆ. ಇನ್ನೊಂದು "State Institute of Science Education" ಎಂಬುದನ್ನು ಪ್ರಾರಂಭ ಮಾಡಲಾಗಿದ್ದು ಅದರಲ್ಲಿ ವಿಜ್ಞಾನ ವಿಷಯದಲ್ಲಿ ಉಪಾಧ್ಯಾಯರಿಗೆ ತರಬೇತಿ ಕೊಡಲಾಗುತ್ತದೆ. ಇವುಗಳ ಜೊತೆಗೆ "State Institute of Education" ಎಂಬುದನ್ನು ಪ್ರಾರಂಭ ಮಾಡಿದರು. ಇದು ತರಬೇತಿ ಕೊಡುವ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಸಂಸ್ಥೆಯಾಗಿತ್ತು. ಕೊಠಾರಿ ಆಯೋಗದವರು ಶಿಕ್ಷಣಸುಧಾರಣೆ ಮಾಡಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಹೇಳಿದ್ದರೋ ಆ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಕ್ರಮಕೈಗೊಂಡರು.

ವರುಣಾ ನಾಲಾ ವಿರೋಧಿ ಚಳುವಳಿ

ಮಂಡ್ಯ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ನಂತರದ ಪ್ರಮುಖ ರೈತ ಚಳುವಳಿಗಳಲ್ಲಿ 1970ರ ದಶಕದಲ್ಲಿ ನಡೆದ ವರುಣಾ ಚಳುವಳಿಯು ಒಂದು. 1932ರ ಇರ್ವಿನ್ ನಾಲಾ ಚಳುವಳಿಯ ನಂತರ ನಡೆದ ಈ ಚಳುವಳಿಯು ಜಿಲ್ಲೆಯಾದ್ಯಂತ ರೈತರು ಭಾಗವಹಿಸಿದ ಚಳುವಳಿಯಾಗಿದೆ. 1911ರಲ್ಲಿ ಬಿ. ಸುಬ್ಬರಾವ್ ಎಂಬ ಅಧಿಕಾರಿ ಕೆ.ಆರ್.ಎಸ್. ಯೋಜನೆಗೆ ಪೂರ್ವಭಾವಿ ವರದಿ ನೀಡಿದ್ದರಲ್ಲಿ ಬಲದಂಡೆ ನಾಲೆಗೆ ಒಂದು ತೂಬು ಇಡಬಹುದೆಂದು ತಿಳಿಸಿದ್ದರು. ಇದೇ ಆಧಾರದ ಮೇಲೆ

ಮೈಸೂರು ಜಿಲ್ಲೆಯ ಅದರಲ್ಲೂ ಮೈಸೂರು ತಾಲ್ಲೂಕಿನ ರೈತರು ವರುಣಾನಾಲೆಯನ್ನು ಪ್ರಾರಂಭಿಸಬೇಕೆಂದು ಒತ್ತಾಯಿಸಿದರು. ಕೆ.ಆರ್.ಎಸ್. ಅಣೆಕಟ್ಟಿನ ಎರಡೂ ಭಾಗದಲ್ಲೂ ಒಂದೊಂದು ಕಾಲುವೆಯು ಇದೆ. ಎಡಭಾಗದ ಕಾಲುವೆ 'ವಿಶ್ವೇಶ್ವರಯ್ಯ ನಾಲೆ'ಯು ಮಂಡ್ಯ ಹಾಗೂ ಮೈಸೂರು ಜಿಲ್ಲೆಯ 1.91.000 ಎಕರೆಗೂ ಬಲಭಾಗದ ಕಾಲುವೆಯಾದ ಬಲದಂಡೆ ಕೆಳಮಟ್ಟದ ನಾಲೆಯು 3.790 ಎಕರೆಗೂ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ.

ಕೆ.ಆರ್.ಎಸ್. ಸಾಗರದ ಬಲದಂಡೆ ನಾಲೆಯ ತೂಬಿನ ಮೂಲಕ ನೀರನ್ನು ಹಾಯಿಸಿ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ 80,000 ಎಕರೆಯಲ್ಲಿ ಖುಷ್ಕಿ ಬೆಳೆಯನ್ನು ತೆಗೆಯಲು ಅನುಕೂಲವಾಗುವಂತೆ ನೀರಾವರಿ ಸೌಲಭ್ಯವನ್ನು ಒದಗಿಸುವುದೇ ವರುಣಾನಾಲೆ ನಿರ್ಮಾಣದ ಮುಖ್ಯ ಉದ್ದೇಶವಾಗಿದೆ. ತೂಬಿನ ಮೂಲಕ ನೀರನ್ನು 883 ಅಡಿ ಉದ್ದದ ಸುರಂಗ ಮಾರ್ಗವಾಗಿ ಹಾಯಿಸಿ 80,000 ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯನ್ನು ತೆಗೆಯಲು ಆಲೋಚಿಸಿತ್ತು. ಮೈಸೂರು ನಗರದ ಮಧ್ಯೆ ಈ ಕಾಲುವೆ ಹಾದುಹೋಗುವಂತೆ ಮಾಡಲು 156ಲಕ್ಷರೂ ವೆಚ್ಚದಲ್ಲಿ 18 ಕಿ.ಮೀ. ಉದ್ದದ ಮೇಲು ಕಾಲುವೆ ನಿರ್ಮಿಸಿ ಆ ಮೂಲಕ ನೀರನ್ನು ಹಾಯಿಸಲಾಗಿದೆ. ಈ ಯೋಜನೆಗೆ ಒಟ್ಟು 1.850 ಲಕ್ಷ ರೂ. ವೆಚ್ಚವಾಗಿದೆ. ವರುಣಾ ಯೋಜನೆಯಿಂದ ಶ್ರೀರಂಗಪಟ್ಟಣ, ಮೈಸೂರು, ಟಿ. ನರಸೀಪುರ, ನಂಜನಗೂಡು ತಾಲ್ಲೂಕುಗಳ ಒಣಪ್ರದೇಶಕ್ಕೆ ನೀರಾವರಿ ಸೌಕರ್ಯ ಲಭಿಸಿದೆ.

ವೀರೇಂದ್ರ ಪಾಟೀಲರ ಸರ್ಕಾರ ವರುಣಾ ಯೋಜನೆ ಯನ್ನು ಕೈಗೆತ್ತಿಕೊಂಡಾಗ ಆಗ ಮಾಜಿಮುಖ್ಯಮಂತ್ರಿ ಯಾಗಿದ್ದ ಹಾಗೂ ಇರ್ವಿನ್ ನಾಲಾ ರೈತ ಚಳುವಳಿಯ ನಾಯಕತ್ವವನ್ನು ವಹಿಸಿ ಜಿಲ್ಲೆಯ ರೈತರ ಮನಸ್ಸನ್ನು ಗೆದ್ದಿದ್ದ ಎಚ್.ಕೆ. ವೀರಣ್ಣಗೌಡರ ಪ್ರತಿಭಟನೆಯ ಫಲವಾಗಿ ವರುಣಾ ನಾಲಾ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಆಗ ಮಂಡ್ಯ ಲೋಕಸಭಾ ಸದಸ್ಯರಾಗಿದ್ದ ಎಸ್.ಎಂ. ಕೃಷ್ಣ ಅವರು ಮಂಡ್ಯದಲ್ಲಿ ವರುಣಾ ಯೋಜನೆ ವಿರುದ್ಧ ಚಳುವಳಿ ನಡೆಸಿದರು. ಆದರೆ ಪಾಟೀಲರ ಸರ್ಕಾರ ಮುಗ್ಧಂ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ವರುಣಾ ನಾಲೆ ಕಾಮಗಾರಿಯ ಸಾಧಕ – ಭಾದಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಕೋರಿತ್ತು. ಈ ಸಮಿತಿಯು ವರುಣಾ ಪರವಾದ ವರದಿಯನ್ನು ಸಲ್ಲಿಸಿತ್ತು.

ಮುಗ್ಧಂ ಸಮಿತಿಯ ವರದಿಯ ಆಧಾರದ ಮೇಲೆ 1976ರಲ್ಲಿ ಡಿ. ದೇವರಾಜ ಅರಸರ ಸರ್ಕಾರ ವರುಣಾ ನಾಲಾ ನಿರ್ಮಾಣದ ಪ್ರಸ್ತಾಪವನ್ನು

ಪುನಃ ಪ್ರಾರಂಭಿಸಿತು. 29.05.1977ರಂದು ಅರಸರ ಸರ್ಕಾರ ವರುಣಾ ನಾಲಾ ನಿರ್ಮಾಣಕ್ಕಾಗಿ 18.5 ಕೋಟಿ ರೂ. ಹಣ ಮಂಜೂರಾತಿಗಾಗಿ ಸಚಿವ ಸಂಪುಟದಲ್ಲಿ ಮಂಡಿಸಿ ಅನುಮತಿಯನ್ನು ಪಡೆದುಕೊಂಡು ಕಾಮಗಾರಿ ಪ್ರಾರಂಭಿಸಿತು. ಈ ಯೋಜನೆಯನ್ನು ಆರಂಭದಿಂದಲೂ ವಿರೋಧಿಸುತ್ತಿದ್ದ ಎಸ್.ಎಂ. ಕೃಷ್ಣರವರು ಅಂದು ಅರಸು ಸಂಪುಟದಲ್ಲಿ ಕೈಗಾರಿಕಾ ಖಾತೆ ಸಚಿವರಾಗಿದ್ದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮಂಡ್ಯ ಜಿಲ್ಲೆಯ ಮತ್ತೋರ್ವ ನಾಯಕರಾದ ಕೆ.ವಿ. ಶಂಕರಗೌಡರು ಸಹಾ ವರುಣಾ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿದರು. ಈ ವೇಳೆಗೆ ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರಿನ ಹರಿವು ಪ್ರಮಾಣ ಕಡಿಮೆಯಾಗಿ ಮಂಡ್ಯ ಜಿಲ್ಲೆಯ ರೈತರಿಗೆ ಸಾಲದೆ ಪ್ರತಿವರ್ಷ ಶೇ 20 ರಿಂದ 40 ರಷ್ಟು ಭಾಗ ಬೆಳೆನಷ್ಟ ವಾಗುತ್ತಿದ್ದರೂ ಅರಸರೆ ವರುಣಾ ಸಮಸ್ಯೆಯನ್ನು ಸೃಷ್ಟಿಸಿದರೆಂದು ಎಸ್.ಎಂ. ಕೃಷ್ಣ ಟೀಕಿಸಿದ್ದರು. ಅರಸು ತಂತ್ರವನ್ನು ಖಂಡಿಸಿ "ವರುಣಾ ಮಂಡ್ಯ ಜಿಲ್ಲಾ ಜನತೆಯ ಮರಣ" ಎಂದು ತಿಳಿಸಿ ಇದರ ವಿರುದ್ಧ ಮಂಡ್ಯ ಜನತೆಯನ್ನು ಹೋರಾಟಕ್ಕೆ ಸಜ್ಜುಗೊಳಿಸುವಂತೆ ಕರೆನೀಡಿ ಚಳುವಳಿಗೆ ಜಿಲ್ಲೆಯ ಜನರ ಸಂಪೂರ್ಣ ಸಹಕಾರ ನೀಡುವಂತೆ ಕರೆಕೊಟ್ಟರು.

ಕೆ.ವಿ. ಶಂಕರಗೌಡರು ಮತ್ತೊಮ್ಮೆ ಅರಸು ಅವರನ್ನು ಮಂಡ್ಯ ಜಿಲ್ಲೆಗೆ ಮಾರಕವಾಗಿರುವ ವರುಣಾನಾಲೆ ನಿರ್ಮಾಣವನ್ನು ಕೈಬಿಡುವಂತೆ ಮನವಿ ಮಾಡಿಕೊಂಡಿದ್ದರು. ಶಂಕರಗೌಡರು ಅರಸು ನಿರ್ಧಾರದ ಬಗ್ಗೆ ತಮ್ಮ ಕಳಕಳಿ ವ್ಯಕ್ತಪಡಿಸಿ ವರುಣಾ ನಾಲೆ ನಿರ್ಮಿಸಿದ್ದೇ ಆದರೆ ಇಡೀ ಮಂಡ್ಯ ಜಿಲ್ಲೆ ಆರ್ಥಿಕ ದುಸ್ಥಿತಿಗೆ ಈಡಾಗಿ ಇಲ್ಲಿನ ಜನ ಹಸುವಿನಿಂದ ಸಾಯಬೇಕಾದೀತೆಂಬ ಭವಿಷ್ಯದ ಭೀಕರ ಚಿತ್ರವನ್ನು ಮುಖ್ಯಮಂತ್ರಿಗಳ ಮುಂದಿಟ್ಟು, ಹಿಂದಿನಿಂದಲೂ ಈ ಯೋಜನೆಯನ್ನು ಮಂಡ್ಯ ಜಿಲ್ಲಾ ಜನತೆ ವಿರೋಧಿಸುತ್ತಲೇ ಬಂದಿದ್ದಾರೆಂದು ಇದೊಂದು ದುರದೃಷ್ಟಕರವೆಂದೂ ತಿಳಿಸಿದರು. ಶಂಕರಗೌಡರು ನಾಲೆಯ ಬಗ್ಗೆ ತಮ್ಮ ಸಲಹೆಯನ್ನು ಮುಖ್ಯಮಂತ್ರಿಗಳ ಮುಂದಿಟ್ಟು ವರುಣಾನಾಲೆ ನಿರ್ಮಾಣದ ಸಾಧ್ಯ ಸಾಧ್ಯತೆ ಸಾಧಕ – ಭಾದಕಗಳನ್ನು ಪರಿಶೀಲಿಸಲು ತಜ್ಞರ ನಿಷ್ಪಕ್ಷಪಾತ ತನಿಖಾಮಂಡಲಿಯೊಂದನ್ನು ರಚಿಸಿ ಅಭಿಪ್ರಾಯ ಪಡೆಯಬೇಕೆಂದು ಒತ್ತಾಯಿಸಿದರು. ಈ ಒತ್ತಾಯದ ಮೇರೆಗೆ ಸರ್ಕಾರದ ನಿವೃತ್ತ ಇಂಜಿನಿಯರ್ ಎ.ಕೆ. ಚಾರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಒಂದು ತಿಂಗಳ ಅವಧಿಯಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿತು.

ಈ ಸಮಿತಿಯ ಬಗ್ಗೆ ಹಲವರು ಆತಂಕಗೊಂಡು ಈ ಸಮಿತಿಯನ್ನು "ಹೇಳಿ ಬರೆಯಿಸುವ ಸಮಿತಿ" ಎಂದು ಕರೆದರು. ಮುಗ್ಧಂ ವರದಿಯ ಗತಿಯೇ ಈ ವರದಿಯಲ್ಲೂ ಇರುತ್ತದೆಂಬ ಆತಂಕ ಜಿಲ್ಲೆಯ ನಾಯಕರಲ್ಲಿ ಮೂಡಿತು. ಶಂಕರಗೌಡರು ಸೆಪ್ಟೆಂಬರ್ 1977ರಲ್ಲಿ ಮಂಡ್ಯದಲ್ಲಿ ರೈತ ಪ್ರಮುಖರ ಸಭೆ ಕರೆದರು. ಈ ಸಭೆಯಲ್ಲಿ ವರುಣಾ ನಾಲಾ ವಿರೋಧಿ ಹೋರಾಟದ ಸಮಿತಿಯನ್ನು ರಚಿಸಿ ಈ ಸಮಿತಿಯ ಅಧ್ಯಕ್ಷರಾಗಿ ಶಂಕರಗೌಡರು ಸಂಚಾಲಕರುಗಳಾಗಿ ಎಚ್.ಡಿ. ಚೌಡಯ್ಯ, ಜಿ. ಮಾದೇಗೌಡ, ಎಂ. ಮಂಚೇಗೌಡ, ಜಿ. ನಾಗಪ್ಪ, ಎಸ್.ಡಿ. ಜಯರಾಂ ಮತ್ತು ಸದಸ್ಯರಾಗಿ ಕೆ.ಎನ್. ನಾಗೇಗೌಡ ಮುಂತಾದವರು ಸಕ್ರಿಯವಾಗಿ ಭಾಗವಹಿಸಿದ್ದರು. 5.6.1977ರಂದು ಮಂಡ್ಯ ಬಂದ್‌ಗೆ ಕರೆಯನ್ನು ನೀಡಲಾಯಿತು. ರೈತರ ಈ ಕರೆಗೆ ಇಡೀ ಜಿಲ್ಲೆಯ ಜನರು ಅಭೂತಪೂರ್ವ ಬಂದ್ ಆಚರಿಸುವ ವರುಣಾ ನಾಲಾ ವಿರೋಧಿ ಚಳುವಳಿಯನ್ನು ಪ್ರಾರಂಭಿಸಿದರು.

ಚಡ್ಡಿ ಮೆರವಣಿಗೆ

ವರುಣಾ ನಾಲಾವಿರೋಧಿ ಹೋರಾಟ ಸಮಿತಿಯು ಚಳುವಳಿಯನ್ನು ತೀವ್ರಗೊಳಿಸುವ ದೃಷ್ಟಿಯಿಂದ 24.10.1977 ರಂದು ಜಿಲ್ಲೆಯ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳ ಎದುರು ಧರಣಿ, ಸತ್ಯಾಗ್ರಹ ಚಳುವಳಿಯನ್ನು ನಡೆಸಿತು. 25.10.1977ರಂದು ಮೌನ ಮೆರವಣಿಗೆಯುನ್ನು ಏರ್ಪಡಿಸಿದ್ದು ಈ ಮೆರವಣಿಗೆಯಲ್ಲಿ 10,000 ರೈತರು ಭಾಗವಹಿಸಿದ್ದರು. 27.10.1977ರಂದು ವರುಣಾ ನಾಲಾ ವಿರುದ್ಧ ಮೂರು ಲಕ್ಷಕ್ಕೂ ಹೆಚ್ಚುಮಂದಿ ಭಾಗವಹಿಸಿ ಇಡೀ ಕರ್ನಾಟಕದ ಗಮನ ಸೆಳೆದ ಬೃಹತ್ ಚಳುವಳಿಯನ್ನು ಮಂಡ್ಯದಲ್ಲಿ ನಡೆಸಲಾಗಿತ್ತು. ಗುರುವಾರ ಅಕ್ಟೋಬರ್ 27 ಮಂಡ್ಯ ಜಿಲ್ಲೆಯ ಇತಿಹಾಸದಲ್ಲಿ ಸ್ವಾತಂತ್ರ್ಯ ನಂತರ ಒಂದೇ ಒಂದು ಗುರಿಯಿಟ್ಟುಕೊಂಡು ಇಷ್ಟೊಂದು ಅದ್ಭುತ ಜನ ಸಂಘಟನೆ ನಡೆದಿರುವುದು ಮಂಡ್ಯ ಜಿಲ್ಲೆಯಲ್ಲೇ ಮೊದಲು ಎಂದರೆ ಆಶ್ಚರ್ಯವೇನಿಲ್ಲ. ಈ ಚಳುವಳಿಯಲ್ಲಿ ಮುಂದಾಳತ್ವ ವಹಿಸಿದ ಶಂಕರಗೌಡರು ಸೇರಿದಂತೆ ಸುಮಾರು 12,000ಕ್ಕೂ ಹೆಚ್ಚು ರೈತರು ಚಡ್ಡಿಯನ್ನು ಧರಿಸಿ ಮಂಡ್ಯದಲ್ಲಿ ಬೃಹತ್ ಪ್ರತಿಭಟನಾ ಚಳುವಳಿಯನ್ನು ನಡೆಸಿದರು. ಇದೊಂದು ವಿಭಿನ್ನ ರೀತಿಯ ಪ್ರತಿಭಟನಾ ಚಳುವಳಿಯಾಗಿದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದ ನಾಯಕರ ಗಮನ ಸೆಳೆದುದೇ ಅಲ್ಲದೇ ಭಾರತದ ರೈತ ಚಳುವಳಿಯಲ್ಲಿಯೇ "ಚಡ್ಡಿಮೆರವಣಿಗೆ" ಎಂದು ಖ್ಯಾತಿ ಪಡೆದಿದೆ. ಮಂಡ್ಯದ ರೈತಾಪಿ ಜನಗಳ ವಿಶಿಷ್ಟ

ಸೊಗಡನ್ನು ಪಟ್ಟಾಪಟ್ಟಿ ಚಡ್ಡಿಯಲ್ಲಿ ಕಂಡರು, ಮೆರವಣಿಗೆಯಲ್ಲಿ ಭಾಗವಹಿಸಿದ ಸಾವಿರಾರು ರೈತರು ಚಡ್ಡಿ ಬನಿಯನ್ನುಗಳನ್ನು ಧರಿಸಿದ್ದರು. ಚಡ್ಡಿ ಧರಿಸಿದ ಕೆ.ವಿ. ಶಂಕರಗೌಡರು ಮೆರವಣಿಗೆಯ ಅಗ್ರಭಾಗದಲ್ಲಿದ್ದರು. ಅಂದು ನಡೆದ ಚಳುವಳಿಯಲ್ಲಿ ಎಲ್ಲರೂ ಚಡ್ಡಿಯನ್ನು ಧರಿಸಿದ್ದು ವಿಶಿಷ್ಟವಾದ್ದರಿಂದ ಈ ವಿಶಿಷ್ಠ ರೂಪದ ಮೆರವಣಿಗೆ "ಚಡ್ಡಿ ಚಳುವಳಿ" ಎಂದೇ ಸುಪ್ರಸಿದ್ಧವಾಗಿದೆ. ಅಲ್ಲದೇ ಈ ಮೆರವಣಿಗೆ ರಾಜ್ಯದ ಹಾಗೂ ರಾಷ್ಟ್ರದ ಗಮನವನ್ನು ಸೆಳೆದ ಚಳುವಳಿಯಾಗಿತ್ತು.

ಇಷ್ಟಕ್ಕೆ ಸುಮ್ಮನಿರದೇ ನವೆಂಬರ್ 4 1977ರಂದು ಪ್ರಧಾನಿ ಇಂದಿರಾಗಾಂಧಿಯವರು ಬೆಂಗಳೂರಿನಲ್ಲಿ ಭಾಷಣ ಮಾಡುತ್ತಿದ್ದಾಗ ಪ್ರಧಾನಿಯವರಿಗೆ ಈ ಚಳುವಳಿಯ ಬಗ್ಗೆ ಗಮನ ಸೆಳೆಯುವ ದೃಷ್ಟಿಯಿಂದ ಕೆ.ವಿ. ಶಂಕರಗೌಡರ ನೇತೃತ್ವದಲ್ಲಿ ವರುಣಾ ನಾಲಾ ವಿರೋಧ ಸಮಿತಿಯ ಸದಸ್ಯರು ಕಪ್ಪುಬಾವುಟ ಪ್ರದರ್ಶನ ನಡೆಸಿದರು. ಅಂತಿಮವಾಗಿ ಅರಸು ಸರ್ಕಾರ ಕೆ.ವಿ. ಶಂಕರಗೌಡರ ಒತ್ತಾಯಕ್ಕೆ ಮಣಿದು ಮೂರು ಜನ ತಜ್ಞರ ಸಮಿತಿಯೊಂದನ್ನು ನೇಮಿಸಿತು. ಈ ತಜ್ಞರ ಶಿಫಾರಸ್ಸಿನ ಮೇರೆಗೆ ವರುಣಾನಾಲೆಯ 80 ಸಾವಿರ ಎಕರೆ ಪ್ರದೇಶದಲ್ಲಿ ಕೇವಲ 4 ಟಿಎಂಸಿ ನೀರಿನಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ರೈತರು ಮೂರು ತಿಂಗಳ ಮುಂಗಾರು ಅರೆಖುಷ್ಕಿ ಬೇಸಾಯಕ್ಕೆ ಒಪ್ಪಿ ತೀರ್ಮಾನಕ್ಕೆ ಬರಲಾಯಿತು. ಈ ರೀತಿ ಜಿಲ್ಲೆಯ ಜನತೆಗೆ ವರುಣಾ ನಾಲೆ ನಿರ್ಮಾಣದಿಂದ ಆಗುತ್ತಿದ್ದ ತೊಂದರೆಯ ಪ್ರಮಾಣವನ್ನು ಹೋರಾಟದ ಮೂಲಕ ತಪ್ಪಿಸಿದರು.

ಗೋಕಾಕ್ ಚಳುವಳಿಯಲ್ಲಿ ಶಂಕರಗೌಡರು

ಕರ್ನಾಟಕವು ಒಂದುಗೂಡಬೇಕು ಎಂಬ ಏಕೀಕರಣ ಚಳುವಳಿಯನ್ನು ಹೊರತುಪಡಿಸಿದರೆ ಮತ್ತೆ ಅಷ್ಟೇ ಪೂರ್ಣ ಪ್ರಮಾಣದಲ್ಲಿ ಹಾಗೂ ಪ್ರಭಾವಯುತವಾಗಿ ನಡೆದ ಚಳುವಳಿ ಅಂದರೆ ಗೋಕಾಕ್ ಚಳುವಳಿ ಮಾತ್ರ. ನಾಡಿನ ಎಲ್ಲ ಕಡೆಗಳಿಂದಲೂ ಕನ್ನಡಿಗರು ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ ಸ್ಪಂದಿಸಿದ್ದು ಗಮನಾರ್ಹವಾದದ್ದು. ಅಂದಿನ ರಾಜ್ಯದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಅಧಿಕಾರಾವಧಿಯಲ್ಲಿ (1979) ಶಾಲಾ ಪಠ್ಯ ಕ್ರಮದಲ್ಲಿನ ಭಾಷೆಗಳಿಗೆ ಸಂಬಂಧಿಸಿದಂತೆ ಸಮಸ್ಯೆ ಹುಟ್ಟಿತು. ಒಂದನೆಯ ತರಗತಿಯಿಂದ ತಮ್ಮ ಮಾತೃ ಭಾಷೆಯಲ್ಲಿ ಓದಿದವರಿಗೆ ಏಕಾಏಕಿ ಎಂಟನೆಯ ತರಗತಿಯಿಂದ ಹೊಸಭಾಷೆಯಾದ ಸಂಸ್ಕೃತವನ್ನು ಕಲಿಯಲು ಅನುವು

ಮಾಡಿಕೊಡಲಾಗಿತ್ತು. ಕೇವಲ ಪ್ರೌಢಶಾಲೆಯಲ್ಲಿ ಓದಲು ಆರಂಭಿಸುವ ಸಂಸ್ಕೃತವು ಹಿಂದೆ 7 ವರ್ಷಗಳಲ್ಲಿ ಓದಿದ ಭಾಷೆಯೊಂದಕ್ಕೆ ಸಮವೆಂದು ಅಳವಡಿಸಿದ್ದರು. ಇದೊಂದು ಅವೈಜ್ಞಾನಿಕ ಶಿಕ್ಷಣ ನೀತಿ ಆಗಿತ್ತು. ಈ ಅವೈಜ್ಞಾನಿಕ ಭಾಷಾ ಬೋಧನ ಕ್ರಮವನ್ನು ದೇವರಾಜ ಅರಸು ಸರ್ಕಾರ 1979ರ ಅಕ್ಟೋಬರ್‌ನಲ್ಲಿ ಆಜ್ಞೆಯೊಂದರ ಮೂಲಕ ರದ್ದು ಪಡಿಸಿತು. ಆದರೆ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಹಾಲಿ ಅದನ್ನು ಮೂರನೆಯ ಸ್ಥಾನಕ್ಕೆ ಇಳಿಸಲಾಯಿತು. ಸಂಸ್ಕೃತ ಪರವಾದಿಗಳು ಈ ಆಜ್ಞೆಯ ವಿರುದ್ಧ ಪ್ರತಿಭಟಿಸಿದರು. ಈ ಎರಡೂ ಬಣಗಳ ವಾದ ವಿವಾದಗಳು ಸರ್ಕಾರವನ್ನು ಪೇಚಿಗೆ ಸಿಲುಕಿದವು. ಸರ್ಕಾರವು 1980 ರ ಜುಲೈ 5 ರಂದು ಭಾಷಾತಜ್ಞರ ಸಮಿತಿಯ ರಚನೆಯನ್ನು ಕುರಿತು ಆಜ್ಞೆಯೊಂದನ್ನು ಹೊರಡಿಸಿತು. ಈ ಆಜ್ಞೆಯು ಹೊರ ಬಿದ್ದಿದ್ದು ಆರ್. ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಇವರು ನೇಮಿಸಿದ್ದ ಸಮಿತಿಯು ಡಾ. ವಿ. ಕೃ. ಗೋಕಾಕ್‌ರವರ ಅಧ್ಯಕ್ಷತೆಯಲ್ಲಿ ಸದಸ್ಯರಾಗಿ ಜಿ. ನಾರಾಯಣ, ಎಸ್.ಕೆ. ರಾಮಚಂದ್ರರಾವ್, ತ.ಸು. ಶಾಮರಾಯ, ಸಾ. ಮಂಚಯ್ಯ ಅವರು ಇದ್ದರು. ಸಂಸ್ಕೃತ ಶಾಲಾಪಠ್ಯ ವಸ್ತುವಿನಲ್ಲಿ ಅಭ್ಯಾಸದ ವಿಷಯವಾಗಿ ಉಳಿಯಬೇಕೆ? ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ, ತ್ರಿಭಾಷಾ ಸೂತ್ರದಂತೆ ಕನ್ನಡ ಕಡ್ಡಾಯಮಾಡಿ ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೇ? ಎಂಬ 3 ವಿಷಯಗಳ ಬಗ್ಗೆ ಪರೀಶೀಲನೆ, ಅಧ್ಯಯನ ನಡೆಸಿ ಮೂರು ತಿಂಗಳೊಳಗಾಗಿ ವರದಿ ನೀಡಲು ಸೂಚಿಸಿತ್ತು. ವರದಿ ತಯಾರಿಸಲು ಗೋಕಾಕ್ ಕರ್ನಾಟಕದಾದ್ಯಂತ ಸಂಚರಿಸಿದಾಗ ಹಲವಾರು ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು. ಸಂಸ್ಕೃತ ಪರವಾಗಿ ಈ ಪರಿಶೀಲನಾ ಸಮಿತಿ ಬಂದಿರುವುದೆಂದು ಶಂಕಿಸಿ ಧಿಕ್ಕಾರಗಳನ್ನು ಕೂಗಿದ್ದು ಉಂಟು. ಚಂಪಾ, ಕಲಬುರ್ಗಿ ಮೊದಲಾದವರು ಗೋಕಾಕರು ಸಭೆ ಸೇರಿದ್ದ ಕೊಠಡಿಗೆ ನುಗ್ಗಿ "ಗೋಕಾಕ್ ಗೋಬ್ಯಾಕ್" ಎಂಬ ಘೋಷಣೆಗಳನ್ನು ಕೂಗಿ ಪ್ರತಿಕ್ರಿಯಿಸಿದರು. ಅನೇಕ ಪ್ರತಿರೋಧಗಳ ನಡುವೆಯು ಈ ಭಾಷಾ ತಜ್ಞರ ಸಮಿತಿ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತು. ಕನ್ನಡ ಪರವಾದಿಗಳು ಗುಮಾನಿ – ಶಂಕೆಗಳಿಂದ ಗಮನಿಸುತ್ತಿದ್ದ ಗೋಕಾಕ್ ವರದಿಯು ಕನ್ನಡಕ್ಕೆ ಮೊದಲ ಸ್ಥಾನವನ್ನು, ಸಂಸ್ಕೃತಕ್ಕೆ ಮೂರನೆಯ ಸ್ಥಾನವನ್ನು ನೀಡಿತು. ಈ ವರದಿಯ ಜಾರಿಗೊಳಿಸಲು ಸರ್ಕಾರ ಹಿಂಜರಿದಿದ್ದರಿಂದ ಗೋಕಾಕ್ ಜಾರಿಗೆ ಒತ್ತಾಯಿಸಿ 1982ರಲ್ಲಿ ಕನ್ನಡ ನಾಡಿನಾದ್ಯಂತ ಚಳುವಳಿ ಪ್ರಾರಂಭಿಸಿದರು.

ಮಂಡ್ಯ ಜಿಲ್ಲೆಯಲ್ಲೂ 15.02.1982ರಂದು ಮಂಡ್ಯನಗರದಲ್ಲಿ ಹೆದ್ದಾರಿ ಬಂದ್ ಚಳುವಳಿ ನಡೆದು ಇದರಲ್ಲಿ ಪಿ.ಎನ್. ಜವರಪ್ಪಗೌಡ, ಎಚ್.ಎಲ್. ಕೇಶವಮೂರ್ತಿ, ಎಸ್.ಡಿ. ಜಯರಾಂ ಮುಂತಾದವರನ್ನು ಬಂಧಿಸಲಾಯಿತು. ಈ ಸಂದರ್ಭದಲ್ಲಿ ಶಂಕರಗೌಡ ಶಿಕ್ಷಣ ಕಾಲೇಜಿನ ವಿದ್ಯಾರ್ಥಿಗಳು ಘೋಷಣೆ ಕೂಗುತ್ತಾ ಬಂಧಿತರಿಗೆ ಬೆಂಬಲ ಸೂಚಿಸಿದ್ದು ಒಂದು ವೈಶಿಷ್ಟ್ಯ. 16.04.82ರಂದು ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಮಂಡ್ಯದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕೆ.ಸಿ. ಚನ್ನಯ್ಯ, ಪಿ.ಎನ್. ಜವರಪ್ಪಗೌಡ, ಕೆ. ಬೆಟ್ಟಶೆಟ್ಟಿ ಮೊದಲಾದವರು ಗೋಕಾಕ್ ವರದಿ ಅನುಷ್ಠಾನ ಒತ್ತಾಯಿಸಿ ಧರಣಿ ನಡೆಸಿದರು. 18.5.1985ರಂದು ಮಂಡ್ಯದಲ್ಲಿ ಪ್ರಸಿದ್ಧ ಚಿತ್ರನಟ ಡಾ. ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ಬಹಿರಂಗ ಸಭೆ ನಡೆಯಿತು.

ಗೋಕಾಕ್ ಚಳುವಳಿ ಸರ್ಕಾರದ ಹತೋಟಿ ಮೀರಿ ಬೆಳೆದದ್ದರಿಂದ ಮುಖ್ಯಮಂತ್ರಿ ಗುಂಡುರಾಯರು ಜೂನ್ 4 ರಂದು ಚಳುವಳಿಗಾರರನ್ನು ಮಾತುಕತೆಗೆ ಕರೆದರು. ಕುವೆಂಪು, ಮಾಸ್ತಿ, ಶಿವರಾಮಕಾರಂತ, ಗೊರೂರು, ತ.ರಾ.ಸು. ಎಸ್.ಎಲ್. ಭೈರಪ್ಪ, ಕೆ.ವಿ. ಶಂಕರಗೌಡ, ಡಾ. ರಾಜ್‌ಕುಮಾರ್, ಹಂಪನಾ, ಹಾ.ಮಾ. ನಾಯಕ, ಪಾಟೀಲಪುಟ್ಟಪ್ಪ ಮೊದಲಾದ 40ಕ್ಕೂ ಹೆಚ್ಚಿನ ಗಣ್ಯರನ್ನು ಸೇರಿಸಿಕೊಳ್ಳಲಾಗಿತ್ತು. ಸಭೆಯಲ್ಲಿ ಮುಖ್ಯಮಂತ್ರಿಗಳು ಗೋಕಾಕ್ ವರದಿಯ ಪರಿಷ್ಕೃತ ಆದೇಶವನ್ನು ಹೊರಡಿಸುವ ಬಂಧಿತ ಚಳುವಳಿಕಾರರನ್ನು ಬಿಡುಗಡೆಗೊಳಿಸುವ ನಿರ್ಣಯಗಳನ್ನು ಪ್ರಕಟಿಸಿದರು. ಆದರೆ ಎಂದಿನಂತೆ ಸರ್ಕಾರವು ತನ್ನ ಮಾನವ್ರತವನ್ನು ಅನುಸರಿಸಿತು. ಮೌನಮೆರವಣಿಗೆ, ಕಪ್ಪುಬಟ್ಟೆ ಪ್ರದರ್ಶನ ಮೊದಲಾದವು ನಡೆದವು ಪರಿಸ್ಥಿತಿಗಳನ್ನು ಗಮನಿಸದ ಸರ್ಕಾರವು 'ಸರ್ವಸಮ್ಮತ ಭಾಷಾಸೂತ್ರ'ವನ್ನು ಪ್ರಕಟಿಸಿತು. ವಿಧಾನಮಂಡಲದಲ್ಲಿ ಒಪ್ಪಿಗೆ ಪಡೆದ ಈ ಸೂತ್ರದ ಪ್ರಕಟಣೆಯಿಂದ ಗೋಕಾಕ ಚಳುವಳಿಯು ಅಂತ್ಯಗೊಂಡಿತು.

ಕೆ.ವಿ. ಶಂಕರಗೌಡರು ಹಾಗೂ ಖಾದಿ, ಗ್ರಾಮೋದ್ಯೋಗ

ಕೆ. ವಿ. ಶಂಕರಗೌಡರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದವರಲ್ಲಿ ಒಬ್ಬರು. ಬಾಲ್ಯದಿಂದಲೇ ಸಮಾಜ ಸೇವೆಯನ್ನೂ, ಗಾಂಧೀಜಿಯವರ ಅಹಿಂಸಾ ಮಾರ್ಗವನ್ನೂ ಮೈಗೂಡಿಸಿಗೊಂಡು ಅದರಂತೆ ಗಾಂಧೀಜಿಯವರ ಮಾರ್ಗದಲ್ಲಿ ಏನಾದರೂ ಮಾಡಬೇಕೆಂಬ ಚಿಂತೆಯಿಂದ ಮಂಡ್ಯ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳ ಮೂಲಕ ಗಾಂಧಿತತ್ವಗಳು ಜಿಲ್ಲೆಯುಲ್ಲಿ ಪ್ರಸ್ತುತವೂ ನೆಲೆಗೊಳ್ಳುವಂತೆ ಮಾಡಿದ್ದಾರೆ. ಇವರು ಗಾಂಧೀಜಿಯವರ ಗ್ರಾಮ ನೈರ್ಮಲ್ಯ

ತತ್ವದಿಂದ ಪ್ರಭಾವಿತರಾಗಿ 1945ರಲ್ಲಿ ತಮ್ಮ ಸ್ವಗ್ರಾಮ ಕೀಲಾರದಲ್ಲಿ ಗ್ರಾಮಸ್ಥರೊಡನೆ ಗ್ರಾಮ ಸ್ವಚ್ಛತಾ ಕಾರ್ಯವನ್ನು ಕೈಗೊಂಡಿದ್ದರು.

ಗಾಂಧೀಜಿಯುವರ ಆದರ್ಶಗಳನ್ನು ಮೈಗೂಡಿಸಿ ಕೊಂಡಿದ್ದ ಶಂಕರಗೌಡರು ಮಂಡ್ಯದಲ್ಲಿ ಗಾಂಧೀಜಿಯವರ ತತ್ವಗಳನ್ನು ಪ್ರಚುರಪಡಿಸಿ ಅದಕ್ಕೆ ಸ್ಥಿರವಾದ ನೆಲೆಯನ್ನು ಸ್ಥಾಪಿಸಲು 'ಲೋಕಸೇವಾಸಂಘ'ವನ್ನು ಸ್ಥಾಪಿಸಲು ಮುಂದಾದರು. ಅದಕ್ಕಾಗಿ ನಾಡಿನ ಜನತೆಗೆ ಒಂದು ಮನವಿಯನ್ನು ಆಗಸ್ಟ್ 1980ರಂದು ಹೊರಡಿಸಿದರು. ಅದರಲ್ಲಿ ಗಾಂಧೀಜಿಯವರ ಹಲವಾರು ಚಿಂತನೆಯನ್ನು ಬಿಂಬಿಸಿದ್ದಾರೆ. ಕಲಹ, ಮೌಢ್ಯ, ದಾರಿದ್ರ್ಯ, ವಿಪತ್ತು ಸಾಮಾಜಿಕ ಅವ್ಯವಸ್ಥೆ ಮತ್ತು ಅಸಮಾನತೆಗಳಿಂದ ನಮ್ಮ ಸಮಾಜ ಮುಕ್ತಗೊಳ್ಳಬೇಕಾದರೆ ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಗಾಂಧಿ ಮಾರ್ಗ ಹೊರತು ಬೇರೆ ದಾರಿ ಸರ್ವಥಾ ಸಾಧುವಲ್ಲವೆಂದು ಶಂಕರಗೌಡರು ಸಾರಿಸಾರಿ ಹೇಳಿದ್ದಾರೆ.

ಲೋಕಸೇವಕ ಸಂಘಕ್ಕೆ ರೈತರೇ ಮೂಲಾಧಾರವಾಗಿರ ಬೇಕೆಂಬುದು ಗೌಡರ ಸಂಕಲ್ಪವಷ್ಟೇ 1980ನೆಯ ಸಂವತ್ಸರದ ಗಾಂಧೀಜಯಂತಿಯ ದಿನ ಅದನ್ನು ಸ್ಥಾಪಿಸುವ ಉದ್ದೇಶ ಅವರದು. ಅಂದು ರೈತರ ಮಹಾಮೇಳವನ್ನು ಸಮಾವೇಶಗೊಳಿಸಿ, ಅವರ ಸಮ್ಮುಖದಲ್ಲಿ ಉದ್ಘಾಟಿಸುವ ಹವಣಿಕೆಯಾಗಿದ್ದು ಗ್ರಾಮಾಂತರ ಪ್ರದೇಶದಲ್ಲಿ ಬಹುಮುಖ್ಯವಾದ ರೈತಾಪಿ ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಗೌಡರು 10.09.1980ರಂದು 'ರೈತಾಪಿ ಜನರಸಮಸ್ಯೆಗಳು ಮತ್ತು ಪರಿಹಾರ' ಎಂಬ ಕಿರುಹೊತ್ತಿಗೆಯ 5 ಸಾವಿರ ಪ್ರತಿಗಳನ್ನು ಮುದ್ರಿಸಿ ಉಚಿತವಾಗಿ ಹಂಚಿದರು.

ಶಂಕರಗೌಡರು ತಾವು ಅಂದುಕೊಂಡಿದ್ದನ್ನು ಮಾಡಿಯೇ ತೀರುವ ಛಲವಂತರೂ ಬರೀ ಸಂಘ ನೊಂದಾವಣೆ ಹಾಗೂ ಸ್ಥಾಪನೆಯಿಂದಲೇ ತೃಪ್ತರಾಗುವವರಲ್ಲ. ಅದನ್ನು ಕೃತಿಗಳಿಸಿದಾಗಲೇ ಅವರು ನೆಮ್ಮದಿಗೊಳ್ಳುವವರು ಬಾಪೂಜಿ ಗ್ರಾಮ ಕೈ ಕಸುಬುಗಳ ಸಂಘ ಮತ್ತು ಲೋಕಸೇವಕ ಸಂಘದ ಚಾಲನೆಗೆ ಮೂಲ ಬಂಡವಾಳದ ಅವಶ್ಯಕತೆ ಇವರನ್ನು ಚಿಂತೆಗೀಡು ಮಾಡಿತು. ತಮ್ಮ ಸ್ವಂತ ಮನೆಯನ್ನು ಅದೂ ಅವರ ದಾಯಾದಿಗಳ ನೆರವಿನಿಂದ ಕಟ್ಟಿದ್ದು, ಅದನ್ನು ಬ್ಯಾಂಕಿಗೆ ಒತ್ತೆಯಿಟ್ಟು ಎರಡು ಲಕ್ಷ ರೂಪಾಯಿಯ ಮೂಲ ಬಂಡವಾಳವನ್ನೊದಗಿಸಿದರು. ನನ್ನ ಪೂಜ್ಯ ತಂದೆ ತಾಯಿಯವರ ಅನುಗ್ರಹದಿಂದ ಇಂಥ ಬಡಜನರಿಗೆ ಸಲ್ಲಬೇಕಾದ ನನ್ನ ಮನೆತನದ ಅಲ್ಪಕಾಣಿಕೆಗೆ ನನ್ನ ಪತ್ನಿ, ಪುತ್ರರಾಗಲಿ ನನ್ನ ಅಣ್ಣ ತಮ್ಮಂದಿರಾಗಲಿ, ಅವರ ಮಕ್ಕಳೇ ಆಗಲಿ

ಆಕ್ಷೇಪವೆತ್ತಲಿಲ್ಲವೆಂಬುದೇ ನನಗೆ ಹೆಮ್ಮೆಯ ವಿಷಯವಾಗಿದೆ ಎಂದು ಸಭೆಯಲ್ಲಿ ತಿಳಿಸುವಾಗ ಗೌಡರ ಕಣ್ಣಲ್ಲಿ ನೀರು ಮಿಂಚಿತು.

ಖಾದಿ ಗ್ರಾಮೋದ್ಯೋಗ ಕೇಂದ್ರ, ಕೀಲಾರ

ಲೋಕಸೇವಕ ಸಂಘ ಸ್ಥಾಪನೆಯಾದ ನಂತರ ಅವರ ಗಮನ ಖಾದಿಗ್ರಾಮೋದ್ಯೋಗದ ಕಡೆ ಹರಿಯುತ್ತದೆ. ಗ್ರಾಮೋದ್ಯೋಗಕ್ಕೆ ಏನಾದರೂ ಮಾಡಬೇಕೆಂದು ಸ್ವಗ್ರಾಮವಾದ ಕೀಲಾರದಲ್ಲಿ ಜಿಲ್ಲಾ ಜನತಾ ಸೇವಾ ಸಂಘದ ವತಿಯಿಂದ ಚರಕಾ ಕೇಂದ್ರವನ್ನು ತೆರೆದರು. ಆ ವೇಳೆಗಾಗಲೇ ಅವರು ಜನತಾ ಪಕ್ಷದಿಂದ ಗೆದ್ದು ಮಂಡ್ಯ ಲೋಕಸಭಾ ಸದಸ್ಯರಾಗಿದ್ದರು. ತಮ್ಮ ಹುಟ್ಟೂರು ಕೀಲಾರ ಗ್ರಾಮದಲ್ಲಿ ಕ್ರಾಂತಿಕಾರಕವಾದ ರಚನಾತ್ಮಕ ಸೇವಾ ಕಾರ್ಯವೊಂದನ್ನು ಮಾಡಿದರು. ಕೆ.ವಿ. ಶಂಕರಗೌಡರ ಈ ಕಾರ್ಯವನ್ನು 31.10.1985ರ ಶುಕ್ರವಾರದಂದು ಆ ಗ್ರಾಮದಲ್ಲಿ ನಡೆದ ಚರಕಾ ಜಯಂತಿ ಸಂಬಂಧದಲ್ಲಿ ಹಿರಿಕಿರಿಯರು ಮುಕ್ತಕಂಠದಿಂದ ಪ್ರಶಂಶಿಸಿದರು. ಈ ಚರಕಾ ಕೇಂದ್ರದಿಂದ ಹೆಣ್ಣು ಮಕ್ಕಳಿಗೆ ಅದರಲ್ಲೂ ವಿಧವೆಯರಿಗೆ ಉದ್ಯೋಗ ಕಲ್ಪಿಸುವುದೇ ಅವರ ಕನಸಾಗಿತ್ತು. ಇದರಿಂದ ದೀನದಲಿತರ ಹೆಣ್ಣು ಮಕ್ಕಳಿಗೆ ಜೀವಿಕೆಯನ್ನೊದಗಿಸಿ ನೂಲು ತೆಗೆಯುವ ಪ್ರತಿಯೊಬ್ಬ ಸ್ತ್ರೀಗೂ ಮಾಹೆಯಾನ 250 ರಿಂದ 300 ರೂಪಾಯಿವರೆಗೆ ಆದಾಯ ಸಿಗುತ್ತಿತ್ತು. ಅವರಿಗೆ ದಿನಕ್ಕೆ ಆಕಾಲಕ್ಕೆ 15 ರೂಪಾಯಿಯಾದರೂ ಸಿಗಬೇಕೆಂಬುದೇ ಗೌಡರ ಬಯಕೆಯಾಗಿತ್ತು. ಜತೆಗೆ ಮಂಡ್ಯದಲ್ಲಿ ಖಾಧಿಭಂಡಾರದ ಕೇಂದ್ರವನ್ನು ತೆರೆದು ನಡೆಸಿದರು. ಈ ಮೂರು ಕೇಂದ್ರಗಳಿಗೆ ಬೇಕಾದ ಹತ್ತಿಯನ್ನು, ನೂಲನ್ನೋ ಕೊಳ್ಳುವ ಸಲುವಾಗಿ ಹುಬ್ಬಳ್ಳಿ, ತಿರುಪ್ಪೂರು ಮುಂತಾದ ಸ್ಥಳಗಳಿಗೆ ಅವರೇ ಭೇಟಿ ನೀಡಿ ಅಲ್ಲಿಂದ ಖರೀದಿಸುತ್ತಿದ್ದರು. ಗೌಡರು ಗಾಂಧಿತತ್ವಗಳನ್ನು ಪ್ರಚುರ ಪಡಿಸಿ ಅವುಗಳ ಅನುಷ್ಠಾನಕ್ಕೆ ತನುಮನ ಧನವೆಲ್ಲವನ್ನೂ ಧಾರೆಯೆರೆದು ಬೆಳೆಸಿದರು. ಅವರು ನೆಲೆಗೊಳಿಸಿದ ಗಾಂಧೀತತ್ವ ಜಿಲ್ಲೆಯಲ್ಲಿ ಇನ್ನೂ ಹಸಿರಾಗಿದೆ. ಆದ್ದರಿಂದ ಶಂಕರಗೌಡರನ್ನು 'ಮಂಡ್ಯದ ಗಾಂಧಿ' ಎಂದು ಕರೆದರೆ ಅತಿಶಯೋಕ್ತಿಯಾಗಲಾರದು.

ಕೆ.ವಿ.ಶಂಕರಗೌಡ : ರಂಗಭೂಮಿ

ಕೆ.ವಿ. ಶಂಕರಗೌಡರು ರಾಜಕೀಯ ಧುರೀಣ, ಶಿಕ್ಷಣತಜ್ಞ ಮಾತ್ರವಲ್ಲದೇ ಅವರೊಬ್ಬ ಉತ್ತಮ ರಂಗಭೂಮಿ ಕಲಾವಿದರೂ ಆಗಿದ್ದರು. ಕಲೆ ಎಂಬುದು

ರಕ್ತಗತವಾಗಿ ಅವರಿಗೆ ಬಂದಿತ್ತು. ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿರುವವರು ಕಲಾವಿದರಾಗಿರುವುದು ತುಂಬಾ ವಿರಳ. ಇದಕ್ಕೆ ಅಪವಾದವೆಂಬಂತೆ ಶಂಕರಗೌಡರು ಕಲಾಕ್ಷೇತ್ರದಲ್ಲೂ ಗಣನೀಯ ಸೇವೆಸಲ್ಲಿಸಿದ್ದಾರೆ, ಅವರು ನಾಟಕದಲ್ಲಿ ಅಭಿನಯಿಸುವ ಪಾತ್ರಧಾರಿ ಮಾತ್ರವೇ ಅಲ್ಲದೇ, ಸಹಪಾತ್ರಧಾರಿಗಳಲ್ಲಿನ ಪಾತ್ರದ ನ್ಯೂನತೆಯನ್ನು ತಿದ್ದುವ, ವಸ್ತ್ರಾಲಂಕರಗಳನ್ನಣಿಗೊಳಿಸುವ, ರಂಗ ವೇದಿಕೆಯನ್ನು ಸಿದ್ಧಗೊಳಿಸುವುದೇ ಅಲ್ಲದೇ ಸ್ವಯಂ ನಾಟಕಗಳನ್ನು ರಚಿಸುವುದರ ಮೂಲಕ ಸಮಾಜ, ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆಯನ್ನು ತರಲು ಪ್ರಯತ್ನಿಸಿ ಯಶಸ್ವಿ ಕೂಡ ಆಗಿದ್ದರು. ಶಂಕರಗೌಡರು ಮಂಡ್ಯ ಜಿಲ್ಲೆಯಲ್ಲಿ ನಾಟಕ ಕಲೆಯನ್ನು ಉಳಿಸಬೇಕೆನ್ನುವ ದೂರಾಲೋಚನೆಯ ದೃಷ್ಟಿಯಿಂದ ಹಲವಾರು ನಾಟಕ ಸಂಘಗಳ ಸ್ಥಾಪನೆಗೂ ಕಾರಣಕರ್ತರಾಗಿದ್ದಾರೆ. ಅವುಗಳಲ್ಲಿ ಪ್ರಮುಖ ವಾದವುಗಳೆಂದರೆ ಗೆಳೆಯರ ಬಳಗ, ಮಂಕ ಕಲಾವಿದ ತಂಡ ಹಾಗೂ ಪ್ರಕಾಶ್ ಕಲಾ ಸಂಘ ಇವುಗಳ ಪೋಷಕರಾಗಿ ಮಂಡ್ಯ ಜಿಲ್ಲೆಯಲ್ಲಿ ನಾಟಕಾಭಿರುಚಿ ಜೀವಂತ ಇರುವಿಕೆಗಾಗಿ ಶ್ರಮಿಸಿದ್ದರು.

ಕೆ.ವಿ. ಶಂಕರಗೌಡರು ನಾಟಕ ಕಲೆಯ ಬಗ್ಗೆ ಒಮ್ಮೆ ವಿಧಾನಸೌಧದಲ್ಲಿ ಸುದೀರ್ಘವಾದ ಭಾಷಣವನ್ನೇ ಮಾಡಿದರು. ನಾಟಕ ಕಲೆ ಶ್ರೇಷ್ಠವಾದ ಕಲೆ, ನಾಟಕ ಕಲೆ ನಮ್ಮ ಜನಜೀವನದ ಪ್ರತಿಬಿಂಬ. ನಮ್ಮ ಸಂಸ್ಕೃತಿಯ ಪ್ರತಿಬಿಂಬ. ಸಮಾಜದ ಲೋಪದೋಷಗಳನ್ನು, ಒಳ್ಳೆಯದು ಮತ್ತು ಕೆಟ್ಟದ್ದನ್ನು ಎತ್ತಿ ತೋರಿಸಬೇಕಾದರೆ ನಾಟಕ ಅತಿಪ್ರಮುಖವಾದ ಸಾಧನವಾಗಿದೆ. ನಾಟಕ ಕೇವಲ ಮನರಂಜನೆಗಾಗಿ ಮಾತ್ರ ಇಲ್ಲ, ಜ್ಞಾನ ಪ್ರಸಾರ ಸಾಧನವೂ ಕೂಡ ಆಗಿದೆ. ನಾಟಕ ಕಲೆ ಉಳಿದು ಬೆಳೆದುಕೊಂಡು ಹೋಗಬೇಕು ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಇತ್ತೀಚೆಗೆ ಚಲನಚಿತ್ರಗಳು ಬಂದ ಮೇಲೆ ನಾಟಕ ಕಲೆ ಕೆಲಮಟ್ಟಿಗೆ ಕ್ಷೀಣಿಸುತ್ತಾ ಬಂದಿದೆ. ನಾಟಕ ನೋಡುವುದಕ್ಕೆ ಹೋಗುವ ಜನ ಕಡಿಮೆ ಅದೇ ಸಿನಿಮಾ ನೋಡಲು ಜನರು ಸಾಲಿನಲ್ಲಿ ನಿಂತಿರುತ್ತಾರೆ. ಏಕೆಂದರೆ ಸಿನಿಮಾದಲ್ಲಿ ನೋಡಬಹುದಾದಂಥ ಅನೇಕ ದೃಶ್ಯಗಳನ್ನು ನಾಟಕದಲ್ಲಿ ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಜನರು ಸಿನಿಮಾ ಕಡೆಗೆ ನುಗ್ಗುತ್ತಿದ್ದಾರೆ. ಅದೇ ರೀತಿ ಉತ್ತಮ ನಾಟಕಗಳನ್ನು ಬರೆಯುವ ಶಕ್ತಿಯಿರುವ ಜನರು ಇದ್ದಾರೆ, ಆದರೆ ಅವರು ಬರೆಯುತ್ತಿಲ್ಲ. ನಮ್ಮ ನಾಟಕ ಕಲೆ ನಶಿಸಿ ಹೋಗುತ್ತಿರುವುದಕ್ಕೆ ಉತ್ತಮ ನಾಟಕಗಳು ಪ್ರದರ್ಶನಕ್ಕೆ ಭರದೆ ಇರುವುದು ಕಾರಣವಾಗಿದೆ. ಇವತ್ತು ಕಥೆ – ಕಾದಂಬರಿಗಳನ್ನು ಬರೆಯುತ್ತಿದ್ದಾರೆಯೇ ಹೊರತು ನಾಟಕಗಳನ್ನು ಬರೆಯುತ್ತಿಲ್ಲ. ಏಕೆಂದರೆ ಕಥೆಯಲ್ಲಿ ಬರುವ ತಂತ್ರಗಳು ಬಹಳ ಕಠಿಣವಾದುದು.

ನಾಟಕವಾಡಬೇಕೆಂಬ ಆಸೆ ಕೆಲವರಿಗೆ ಇದ್ದರೂ ಕೂಡ ಪ್ರದರ್ಶನಕ್ಕೆ ಯೋಗ್ಯವಾದಂಥ ನಾಟಕಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಚಲನಚಿತ್ರಗಳು ದೋಷಾರೋಪಣೆಗೆ ಗುರಿಯಾಗುವಂತೆ ಈಗ ಪ್ರದರ್ಶನವಾಗುತ್ತಿರುವ ನಾಟಕಗಳು ಕೆಲವು ದೋಷಾರೋಪಣೆಗೆ ಗುರಿಯಾಗಿವೆ ಎಂದು ಹೇಳಿದ್ರೆ ಅದು ಉತ್ಪ್ರೇಕ್ಷೆಯಾಗಲಾರದು. ಅನೇಕ ನಾಟಕಗಳಲ್ಲಿ ತಂತ್ರವಿರುವುದಿಲ್ಲ, ತಿರುಳಿರುವುದಿಲ್ಲ. ಒಳ್ಳೆಯ ನೀತಿ ಇರುವುದಿಲ್ಲ. ಒಳ್ಳೆಯ ಗುರಿ ಇರುವುದಿಲ್ಲ. ಈ ಕಾರಣದಿಂದ ನಾಟಕ ಕಲೆ ಕ್ಷೀಣವಾಗುತ್ತಿದೆ. ನಾಟಕ ಕಲೆ ಉದ್ಧಾರವಾಗಬೇಕಾಗಿದೆ. ಏಕೆಂದರೆ ನಾಟಕ ಪಂಡಿತ ಪಾಮರರಿಬ್ಬರಿಗೂ ಬೇಕಾಗಿದೆ. ನಾಟಕದಿಂದ ಪಾಮರರಿಗೆ ಹೆಚ್ಚಿನ ಉಪಯೋಗವಾಗುತ್ತದೆ. ನಮ್ಮ ದೇಶದಲ್ಲಿ ಬಹುಸಂಖ್ಯೆಯ ಜನರು ನಿರಕ್ಷರಸ್ಥರಾಗಿದ್ದಾರೆ. ಇಂಥವರಿಗೆ ತಿಳುವಳಿಕೆ ಉಂಟಾಗಬೇಕಾದರೆ ನಾಟಕ, ಹರಿಕಥೆ, ಯಕ್ಷಗಾನ ಮುಂತಾದವು ಅವಶ್ಯಕ. ನಮ್ಮ ಮನಸ್ಸಿನ ಮೇಲೆ ಯಾವ ಮಟ್ಟದ ಭಾವಚಲನೆ ಈ ನಾಟಕ ಉಂಟುಮಾಡುತ್ತದೋ ಅದರಂತೆ ಯಾವ ಕಲೆಯೂ ಉಂಟುಮಾಡುವುದಿಲ್ಲ. ಈ ಕಾರಣದಿಂದ ನಾಟಕ ಕಲೆ ಉದ್ಧಾರವಾಗಬೇಕಾಗಿದೆ, ರಂಗಭೂಮಿ ಜೀರ್ಣೋದ್ಧಾರವಾಗಬೇಕಾಗಿದೆ.

ಇವತ್ತು ನಾಟಕಗಳನ್ನು ಆಡುವುದಕ್ಕೆ ಇರುವ ಮುಖ್ಯವಾದ ತೊಡಕು ಎಂದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಇತರ ಮುಖ್ಯ ಊರುಗಳಲ್ಲಿ ಯೋಗ್ಯವಾದ ರಂಗಮಂದಿರಗಳು ಇಲ್ಲದಿರುವುದು. ಕೆಲವು ಹವ್ಯಾಸಿ ನಾಟಕ ಕಂಪನಿಗಳು ಜಿಂಕ್‌ಶೀಟ್‌ನಿಂದ ಅಥವಾ ಬಿದಿರಿನ ಪಟ್ಟಿಗಳಿಂದ ರಂಗಮಂದಿರಗಳನ್ನು ನಿರ್ಮಾಣ ಮಾಡಿಕೊಂಡು ನಾಟಕವಾಡುತ್ತಿದ್ದರು. ಈಗಿನ ಕಾಲದ ಬೆಲೆಯನ್ನು ತೆತ್ತು ರಂಗಮಂದಿರಗಳನ್ನು ಕಟ್ಟಿಕೊಂಡು ನಾಟಕವಾಡುವುದು ಬಹಳ ಕಷ್ಟದ ಕೆಲಸವಾಗಿದೆ. ಮತ್ತು ನಾಟಕದಿಂದ ಬರುವ ಆದಾಯದಿಂದ ಖರ್ಚುವೆಚ್ಚಗಳನ್ನು ತೂಗಿಸುವುದು ಕಂಪನಿಗಳಿಗೆ ಕಷ್ಟವಾಗಿದೆ. ಇದನ್ನು ಮೊದಲು ಪರಿಹಾರ ಮಾಡಿದರೆ ನಾಟಕಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶಿಸಲ್ಪಡಬಹುದು. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ರಂಗಮಂದಿರಗಳನ್ನು ಸ್ಥಾಪನೆ ಮಾಡುವುದಕ್ಕೆ ಯೋಗ್ಯ ಧನಸಹಾಯವನ್ನು ಸರ್ಕಾರ ಕೊಡಬೇಕೆಂದು ಒತ್ತಾಯಿಸಿದ್ದರು. ಅಲ್ಲದೇ ಅವರು ಶಿಕ್ಷಣ ಸಚಿವರಾಗಿದ್ದಾಗ ಕಲಾವಿದರಿಗೆ ಮಾಸಾಶನ ಹಾಗೂ ರಂಗಮಂದಿರಗಳ ನಿರ್ಮಾಣಕ್ಕೆ ಸಹಾಯ ಒದಗಿಸಿದ್ದರು. ಹೀಗೆ ಶಂಕರಗೌಡರು ಸಚಿವರಾಗಿದ್ದಾಗಲೂ ಸರ್ಕಾರದಿಂದ ಕಲಾವಿದರಿಗೆ ದೊರಕುವ ಸೌಲಭ್ಯಗಳನ್ನು ದೊರಕಿಸಿಕೊಟ್ಟಿದ್ದರು. ಇದರಿಂದ ನಾಟಕ ಕಲೆಯ ಬಗ್ಗೆ ಅವರಿಗಿದ್ದ ಪ್ರೀತಿ ವ್ಯಾಮೋಹ ತಿಳಿದುಬರುತ್ತದೆ. ಏಕೆಂದರೆ ಇವರು ಒಬ್ಬ ರಂಗಭೂಮಿ

ಕಲಾವಿದರಾಗಿ, ನಾಟಕಕಾರರಾಗಿ, ಚಲನಚಿತ್ರ ನಿರ್ಮಾಪಕರಾಗಿ ಸ್ವಅನುಭವವುಳ್ಳವರಾಗಿದ್ದರಿಂದಲೇ ಅವರು ಕಲಾವಂತರ ಮನಸ್ಸು ಹಾಗೂ ಅವರ ಬದುಕನ್ನು ಅರಿಯಲು ಹಾಗೂ ಅವರಿಗೆ ಸಹಾಯ ಮಾಡುವ ಮನಸ್ಸು ಇವರಲ್ಲಿ ಬಂದಿತು.

ಶಂಕರಗೌಡರು ಹುಟ್ಟು ಕಲಾವಿದರು. ನಾಟಕಾಭಿರುಚಿ ಬಾಲ್ಯದಿಂದಲೇ ಕರಗತವಾಗಿತ್ತು. ಏಕೆಂದರೆ ಬೆಳೆಯುವಾಗ ಅವರ ಮನೆ ಕಲೆಗೆ ಮತ್ತು ಕಲಾವಿದರಿಗೆ ತವರು ಮನೆಯಾಗಿತ್ತು. ಕಲೆಯ ವಾತಾವರಣ, ಕಲಾವಿದರಾದ ತಂದೆ ಮತ್ತು ಅಣ್ಣದಿಂದ ಪ್ರೋತ್ಸಾಹದ ಫಲವಾಗಿ ಅವರು ಆಜನ್ಮ ಕಲಾವಿದರಾಗುವ ಭಾಗ್ಯಕ್ಕೆ ಭಾಜನರಾಗಿದ್ದರೆಂದೇ ಹೇಳಬಹುದು. ಬಾಲ್ಯದಿಂದಲೇ ಪ್ರಾರಂಭವಾದ ನಾಟಕಾಭಿನಯದ ಗೀಳು ಬರಬರುತ್ತಾ ಅವರ ಜೀವನದ ಒಂದು ಅವಿಭಾಜ್ಯ ಅಂಗವೇ ಆಗಿ ಅವರ ವ್ಯಕ್ತಿತ್ವದ ಸುವರ್ಣರೇಖೆಯಾಗಿ ಪರಿಣಮಿಸಿತು. ಸ್ತ್ರೀಪಾತ್ರದ ಮೂಲಕ ನಾಟಕ ಪ್ರಪಂಚಕ್ಕೆ ಕಾಲಿಟ್ಟ ಗೌಡರು ನಾಟಕದ ಗೀಳಿಗೆ ಸಂಪೂರ್ಣವಾಗಿ ಒಗ್ಗಿಕೊಂಡರು. ಗೌಡರು ನಿತ್ಯ ಕರ್ಮಿಗಳೂ. ಕೆಲವೇ ನಾಟಕಗಳಲ್ಲಿ ಪಾತ್ರನಿರ್ವಹಿಸಿದ್ದರೂ ಕೂಡ ಇವರ ರಂಗಚಟುವಟಿಕೆ, ರಂಗಾನ್ವೇಷಣೆ, ಸಮಾನ ಮನಸ್ಕರ ಒಡನಾಟ, ವ್ಯಕ್ತಿ ಕಲಾವಿದರ ಏಳಿಗೆಗಾಗಿ ದುಡಿಯುವ ಚಿಂತನೆ ಇವೆಲ್ಲವುಗಳ ಅಭಿಲಾಷೆಯನ್ನು ಹೊಂದಿದ್ದ ಗೌಡರು ಮಹತ್ವಪೂರ್ಣರು. ಶಂಕರಗೌಡರು ಬಹುಮುಖ ಪ್ರತಿಭೆಯುಳ್ಳವರು. ನಾಟಕಕಾರರಾಗಿ ಆ ಕ್ಷೇತ್ರದಲ್ಲಿ ಅವಿರತವಾಗಿ ದುಡಿದಿದ್ದಾರೆ. ಮಂಡ್ಯದಲ್ಲಿ ಪ್ರದರ್ಶನಕ್ಕಾಗಿ ಬಂದ ಯಾವುದಾದರೂ ಕಂಪನಿ ನಷ್ಟಕ್ಕೊಳಗಾದದ್ದು ಗೊತ್ತಾದರೆ, ಆ ನಷ್ಟವನ್ನು ತುಂಬಿಕೊಡಲು ಅವರು ಯತ್ನಿಸುತ್ತಿದ್ದರು ಕಲಾವಿದರ ಪಾಲಿಗೆ ಅವರಿ ಕಲ್ಪವೃಕ್ಷವಾಗಿದ್ದರು ಅವರ ಮನೆಯ ಬಳಿಬಂದ ಯಾವೊಬ್ಬ ಕಲಾವಿದನೂ ಬರಿಗೈಯಲ್ಲಿ ಹಿಂದಿರುಗುತ್ತಿರಲಿಲ್ಲ. ಅವರ ಅಭಿಪ್ರಾಯದಲ್ಲಿ ಕಲಾವಿದರು ತೊಂದರೆಗೊಳಗಾದರೆ ಕಲೆ ಸಾಯುತ್ತದೆ, ಕಲೆ ಸತ್ತರೆ ಸಮಾಜ ನಿರ್ಜೀವವಾಗುತ್ತದೆಂಬ ಪಂಥ ಗೌಡರದು. ಕಾಳಿಂಗರಾಯರು, ಸಿ. ಬಸವರಾಜಪ್ಪ, ಕೊಟ್ಟಪ್ಪ, ಶ್ರೀ ಶೇಷಾಚಾರ್ ಮೊದಲಾದವರಿಗೆ ಸಹಾಯ ಮಾಡಿದ್ದರು. ಹಲವಾರು ಹವ್ಯಾಸಿ ನಾಟಕ ಕಂಪನಿಗಳು ನಾಟಕವಾಡುವುದಕ್ಕೆ ಮಂಡ್ಯಕ್ಕೆ ಬಂದಾಗ ಎಲ್ಲರೂ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಿದ್ದರು. ಶಂಕರಗೌಡರು ನಾಟಕಕ್ಕೆ ಬಂದಿದ್ದಾರೆ ಅಂದರೆ ಪರದೆ ಎಳೆಯುವವರಿಂದ, ದೀಪಾಲಂಕಾರ, ವೇಷಭೂಷಣಗಳಿಂದ, ಪಾತ್ರವಹಿಸುವವರಿಂದ ಎಲ್ಲರೂ ಎಚ್ಚರಿಕೆಯಿಂದ ತಮ್ಮ ಕೆಲಸವನ್ನು ಭಯದಿಂದ ಮಾಡುತ್ತಿದ್ದರು.

1952ರಲ್ಲಿ ದಾನಶೂರಕರ್ಣ ನಾಟಕದಲ್ಲಿ ಕರ್ಣನಪಾತ್ರ ಮಾಡಿದ್ದ ಸಂದರ್ಭದಲ್ಲಿ ಒಂದು ಅಚಾತುರ್ಯ ನಡೆಯುತ್ತದೆ. ಕರ್ಣನು ಅಮೃತಕಲಶವನ್ನು ತನ್ನ ಎದೆಯಿಂದ ಸಿಗಿದುಕೊಡಬೇಕು; ಆ ಹೊತ್ತಿನಲ್ಲಿ ವಿಶೇಷ ಲೈಟಿಂಗ್ ಎಫೆಕ್ಟ್ ಮೂಲಕ ಎದೆಗೆ ಮಾತ್ರವೇ ಬಣ್ಣದ ಬೆಳಕು ಬಿಟ್ಟಾಗ ಗೌಡರು ಅಭಿನಯಿಸಬೇಕು ಗೌಡರು ಮಂಡಿಯೂರಿ ಅಭಿನಯಿಸುವಷ್ಟರಲ್ಲಿ ಮುಗಿದುಹೋಯಿತ್ತೇನೋ ಎಂದು ಸೇವಕ ಪರದೆಯನ್ನು ಎಳೆದನು. ಕೋಪಗೊಂಡ ಗೌಡರು ಒಳಕ್ಕೆ ಹೋಗಿ ಅವನಿಗೆ ಚನ್ನಾಗಿ ನಾಲ್ಕೇಟು ಬಾರಿಸಿದರು. ಆನಂತರ ಗೌಡರು ನೊಂದುಕೊಂಡು ಅವನನ್ನು ಪ್ರೀತಿಯಿಂದ ಮಾತಾಡಿಸಿ ಚೆನ್ನಾಗಿ ಕಾಫಿ ತಿಂಡಿ ತಿನ್ನಲು ಹೇಳಿ ದುಡ್ಡು ಕೊಟ್ಟಂತಹ ಒಂದು ಘಟನೆಯನ್ನು ಗೌಡರು ಸ್ಮರಿಸಿಕೊಳ್ಳುತ್ತಿದ್ದರು. ಇದು ಗೌಡರ ಮೃದು ಹೃದಯವನ್ನು ಅರಿಯಲು ಉತ್ತಮ ನಿದರ್ಶನ.

ನಾಟಕವಾಡುವಾಗ ಸರಿಯಾದ ಸೀನರಿಗಳು ಹಾಗೂ ನಾಟಕ ಪರಿಕರಗಳ ಬಗ್ಗೆ ಚಿಂತಿಸುತ್ತಿದ್ದ ಶಂಕರಗೌಡರು ಹಳ್ಳಿಯ ನಾಟಕಗಳ ವಸ್ತ್ರಾಲಂಕಾರ ನೋಡಿ ಬೇಸರಗೊಂಡು, ಹಳ್ಳಿಯ ಜನರಿಂದ ಹಣಕಿತ್ತುಕೊಂಡು ಅವರಿಗೆ ಒಳ್ಳೆಯ ನಾಟಕದ ಸಾಮಾನುಗಳನ್ನು ಒದಗಿಸುತ್ತಿಲ್ಲವಲ್ಲಾ ಎಂದು ಚಿಂತಿಸಿದ ಗೌಡರು ತಾವೇ ನಾಟಕದ ಸಾಮಾನುಗಳನ್ನು ಇಡುವ ಯೋಜನೆ ಮಾಡಿದರು. ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ನಾಟಕದ ಸೀನರಿಗಳೂ, ಒಡವೆ ವಸ್ತ್ರಗಳೂ, ದೀಪ. ಲೌಡ್‌ಸ್ಪೀಕರ್‌ಗಳನ್ನು ಖರೀಸಿದ್ದರು ಆದರೆ ಸರಿಯಾದ ನಿರ್ವಹಣೆ ಇಲ್ಲದೆ ಅರವತ್ತು ಸಾವಿರ ರೂಪಾಯಿಗಳ ನಷ್ಟ ಅನುಭವಿಸಿದರು. ಕೆಲವು ವರ್ಷ 'ಶೋಭಾ ಸೀನರಿ" ಎಂಬ ಹೆಸರಿನಲ್ಲಿ ನಡೆಸುತ್ತಿದ್ದು ಅನಂತರ ಬೇರೆಯವರಿಗೆ ಬಿಟ್ಟುಕೊಟ್ಟರು.

ಶಂಕರಗೌಡರು ಕಲಾಭಿರುಚಿಗೆ ಮಂಡ್ಯ ಜಿಲ್ಲೆಯುಲ್ಲಿರುವ ರಂಗಮಂದಿರಗಳೇ ಸಾಕ್ಷಿಯಾಗಿವೆ. ಗೌಡರ ಕಾಲದಲ್ಲಿ ಮಂಡ್ಯನಗರ ನಾಟಕ ಕಲೆಯ ಕೇಂದ್ರವಾಗಿತ್ತು. ಆ ವೇಳೆಯಲ್ಲಿ ರಂಗಮಂದಿರಗಳ ಕೊರತೆಯನ್ನು ಮನಗಂಡ ಗೌಡರು ಪಿ.ಇ.ಎಸ್. ಪ್ರಥಮದರ್ಜೆ ಕಾಲೇಜಿಗೆ ಹೊಂದಿಕೊಂಡಂತೆ ಒಂದು ರಂಗಮಂದಿರ ನಿರ್ಮಾಣ ಮಾಡಿದರು. ವಿವೇಕಾನಂದ ರಂಗಮಂದಿರ ನಿರ್ಮಾಣ ಕಾರ್ಯಕ್ಕೆ ಹಣದ ಕೊರತೆ ಕಂಡುಬಂದಾಗ ತಮ್ಮ ಸ್ವಂತ ಮನೆಯನ್ನು ಬ್ಯಾಂಕಿಗೆ ಒತ್ತೆಯಿಟ್ಟು ಇದನ್ನು ನಿರ್ಮಿಸಿದರು.

ಶಂಕರಗೌಡರು ತಮ್ಮ ಸ್ವಗ್ರಾಮ ಕೀಲಾರದಲ್ಲೂ ಒಂದು ಸುಸಜ್ಜಿತವಾದ ರಂಗಮಂದಿರವನ್ನು ನಿರ್ಮಿಸಿದ್ದಾರೆ. ಈ ರಂಗಮಂದಿರ ರಾಜ್ಯದ

ಕಲಾಮಂದಿರಗಳಲ್ಲಿ ಒಂದು ಭವ್ಯ ಕಲಾಸ್ಮಾರಕವಾಗಿ ರಾರಾಜಿಸುತ್ತಿದೆ. ತಮ್ಮ ಹುಟ್ಟೂರಿನ ಕಲಾಭಿಮಾನಿಗಳ ಪ್ರತಿಭೆಯನ್ನು ಗುರುತಿಸಲು ಗೌಡರು ಮಾಡಿದ ಸೇವೆ ಅಮೋಘವಾದುದು ಎಂದು ನಿಸ್ಸಂಕೋಚವಾಗಿ ಹೇಳಬಹುದು.

ಬೆಂಗಳೂರಿನ ಕಂಠೀರವ ಸ್ಟುಡಿಯೋ ನಿರ್ಮಾಣದಲ್ಲಿ ಶಂಕರಗೌಡರು ವಹಿಸಿದ ಪಾತ್ರ ಚಿರಸ್ಮರಣೀಯವಾದುದು. ನಿರ್ಮಾಣ ಕಾರ್ಯ ಪ್ರಾರಂಭವಾದ ಮೊದಲ ವರ್ಷಗಳಲ್ಲಿ ಅವರು ಸ್ಟುಡಿಯೋ ಸಮಿತಿಯ ಅಧ್ಯಕ್ಷರು, ನಿರ್ಮಾಣದ ಕೀರ್ತಿಯಲ್ಲಿ ಬಹುಪಾಲು ಅವರಿಗೆ ಸಲ್ಲಬೇಕಾಗಿದೆ. ಶಂಕರಗೌಡರು ನಾಟಕಕಲೆಗೆ ಮಾತ್ರವಲ್ಲದೇ ಚಿತ್ರಕಲೆಗೂ ಅಪಾರವಾದ ಉತ್ತೇಜನವನ್ನು ನೀಡಿದ್ದರು.

ಕೆ.ವಿ. ಶಂಕರಗೌಡರ : ನಾಟಕ ಸಾಹಿತ್ಯ

ಶಂಕರಗೌಡರು ರಾಜಕೀಯ ಜಂಜಾಟಗಳ ನಡುವೆಯೂ ಕಲೆ, ಸಾಹಿತ್ಯ ಕ್ಷೇತ್ರದಲ್ಲಿ ದುಡಿದರೆಂದರೆ ಸೋಜಿಗದ ಸಂಗತಿಯೇ ಸರಿ. ಇದಕ್ಕೆ ಅವರು ರಚಿಸಿದ ಹಲವಾರು ನಾಟಕಗಳು ಹಾಗೂ ಅನುವಾದ ಸಾಹಿತ್ಯಗಳು ಸಾಕ್ಷಿಯಾಗಿವೆ. ಕೆ.ವಿ. ಶಂಕರಗೌಡರು ರಚಿಸಿದ ಮೊಟ್ಟ ಮೊದಲ ನಾಟಕ "ಪಾದುಕಕಿರೀಟ" ಈ ನಾಟಕ ನಾಲ್ಕಂಕ ಹೊಂದಿದ್ದು ಹೆಸರೇ ಸೂಚಿಸುವಂತೆ ರಾಮಪಟ್ಟಾಭಿಷೇಕ ಸಿದ್ಧತೆ, ಸೀತಾ ಲಕ್ಷ್ಮಣರೊಡಗೂಡಿದ ರಾಮನ ಅರಣ್ಯಾಗಮನ, ದಶರಥ ನಿರ್ಮಾಣ, ಭರತರಾಮರ ಸಮಾಗಮ, ಪಾದುಕಕಿರೀಟ ನಂದಿಗ್ರಾಮ ಪ್ರವೇಶ ಈ ಸಂದರ್ಭಗಳನ್ನೊಳಗೊಂಡಿದೆ.

"ಕೂಡಿ ಬಾಳೋಣ" ಶಂಕರಗೌಡರ ಎರಡನೆಯ ನಾಟಕ ಇದು ಆರಂಕಗಳ ನಾಟಕವಾಗಿದ್ದು, ಗಾಂಧಿ ಭೋಧಿಸಿದ ಗ್ರಾಮ ರಾಜ್ಯವನ್ನು ರಾಮರಾಜ್ಯವನ್ನಾಗಿಸುವ ಸಹಕಾರ ತತ್ತ್ವವನ್ನು ಆಧರಿಸಿ ರಚಿತವಾಗಿರುವಂಥದು ಹಾಗೂ ಸಮಾಜ ಹಿತ, ದೇಶದ ಹಿತದ ಆದರ್ಶವನ್ನು ಇಟ್ಟುಕೊಂಡು ರಚಿತವಾಗಿರುವಂಥದು.

"ಶಿಷ್ಟಾಚಾರ" ಶಂಕರಗೌಡರು ರಚಿಸಿದ ಮೂರನೆಯ ಸಾಮಾಜಿಕ ನಾಟಕ. ಇದು ಐದಂಕಗಳುಳ್ಳ ರಾಜಕೀಯ ವಸ್ತುವನ್ನೊಳಗೊಂಡ ಸುಂದರ ನಾಟಕ. ಇದರ ನೆಲಗಟ್ಟು ಇಂದಿನ ರಾಜಕೀಯ ಜೀವನ, ನಮ್ಮ ದೇಶದ ರಾಜಕೀಯ ಪರಿಸ್ಥಿತಿಗೆ ಭೂತಗನ್ನಡಿ ಹಿಡಿಯಲು ಮಾಡಿರುವ ಒಂದು ಪ್ರಯತ್ನ, ಸಾಹಿತ್ಯ ಸಂವೇದನೆಯುಳ್ಳ ಕೆ.ವಿ. ಶಂಕರಗೌಡರು ರಾಜಕೀಯದಲ್ಲಿ ತಮ್ಮ ಜೀವನವನ್ನು ಬೆರೆಸಿಕೊಂಡ ಕಾರಣ ತಮ್ಮ ಅನುಭವನ್ನು ಒಂದು ರೂಪಕ ಚೌಕಟ್ಟಿನಲ್ಲಿ

ಚಿತ್ತರಿಸಲು ಪ್ರಯತ್ನಿಸಿದ್ದರು. ರಾಜಕೀಯ ವಸ್ತುವುಳ್ಳ ಶಿಷ್ಟಾಚಾರ ನಾಟಕವು ಆಸ್ಕರ್‌ವೈಲ್ಡ್‌ರವರ "Ideal Husband" ನಾಟಕದಿಂದ ಪ್ರಭಾವ ಪಡೆದು ರೂಪಾಂತರಗೊಂಡಿದೆ. ಈ ನಾಟಕದ ಪ್ರಧಾನ ವಿಷಯ ಮದ್ಯಪಾನ.

"ಅಪರಂಜಿ" ಶಂಕರಗೌಡರು ರಚಿಸಿದ ನಾಲ್ಕನೆಯ ನಾಟಕ. ಸಮಾಜಸೇವೆಯಲ್ಲಿ ಶ್ರದ್ಧೆಯಿಂದ ದುಡಿದು ಕೀರ್ತಿಗಾಗಿ, ಪ್ರತಿಫಲಕ್ಕಾಗಿ ಏನೂ ಅಪೇಕ್ಷಿಸದೆ ಸಾವಧಾನದಿಂದ ನಡೆದ ವೈದ್ಯನೊಬ್ಬನ ಬದುಕಿನ ಸುತ್ತ ಹೆಣೆದ ಈ ನಾಟಕವನ್ನು ಅಸತ್ಯದಿಂದ ಸತ್ಯದ ಕಡೆಗೆ ಕರೆದೊಯ್ಯುವ ಪ್ರತೀಕವಾಗಿದೆಯೆಂದು ಹೇಳಿದ್ದಾರೆ. ಈ ನಾಟಕದ ಮೂಲಕ ಶಂಕರಗೌಡರು ಒಬ್ಬ ವೈದ್ಯ ಪ್ರಾಮಾಣಿಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದಾಗ ಸಮಾಜದಲ್ಲಿರುವ ಬಡವ ನಿರ್ಗತಿಕರ ಬಗ್ಗೆ ಅನುಕಂಪವುಳ್ಳವನಾದರೆ ಅವರ ಏಳಿಗೆ ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

"ದನಿ" ನಾಟಕ ಹತ್ತು ಅಂಕಗಳುಳ್ಳ ಒಂದು ರಾಜಕೀಯ ನಾಟಕ. ಅನೀತಿ ಅನ್ಯಾಯಗಳ ವಿರುದ್ಧ ಹೋರಾಟ ಈ ನಾಟಕದ ಉದ್ದೇಶವಾಗಿದೆ. ಕೆ.ವಿ. ಶಂಕರಗೌಡರು ರಾಜಕೀಯ ರಂಗದಲ್ಲಿ ಮೌಲ್ಯನಿಷ್ಠವಾದ ಬದುಕು ನಡೆಸಿದ್ದರು. ಅವರ ಮನಸ್ಸಿನಲ್ಲಿ ಯಾವಾಗಲೂ ಸರ್ವೋದಯಪರವಾದ ಯೋಜನೆ, ಯೋಚನೆಗಳು ತುಂಬಿರುತ್ತಿದ್ದವು. ಅವುಗಳನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಪ್ರಯತ್ನಿಸಿ ಯಶಸ್ವಿಯೂ ಆಗಿದ್ದರು. ಅದರ ಮೂಲಕ ಸಮಾಜದ ಅಭ್ಯುದಯವನ್ನು, ಜನತಾ ಕಲ್ಯಾಣವನ್ನು ಸಾಧಿಸಿದ್ದು ಅವರ ಒಂದು ವೈಶಿಷ್ಟ್ಯ. ತಮ್ಮ ವ್ಯಕ್ತಿತ್ವ ವಿಚಾರಧಾರೆ, ನಿಲುವು ನಂಬಿಕೆಗಳನ್ನು ಅವರು ಪ್ರಸ್ತುತ ನಾಟಕದಲ್ಲಿ ಸಾರ್ಥಕವಾಗಿ ತೊಡಗಿಸಿದ್ದರು. ಸಮಾಜವಾದಿ ತತ್ವಗಳು, ಗಾಂಧೀತತ್ವಗಳನ್ನು ಪ್ರತಿಬಿಂಬಿತವಾಗಿವೆ.

"ಕೋಕಿಲ" ಆರು ಅಂಕಗಳುಳ್ಳ ಒಂದು ಸುಂದರ ಸಾಮಾಜಿಕ ನಾಟಕ. ಈ ನಾಟಕದಲ್ಲಿ ಗೌಡರು ಶಿಕ್ಷಣ ಕ್ಷೇತ್ರದಲ್ಲಿರುವ ಲೋಪದೋಷಗಳನ್ನು ತಿದ್ದಲು ಯತ್ನಿಸಿದ್ದಾರೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಅಂದರೆ ವಿದ್ಯಾರ್ಥಿ ವೃಂದದಲ್ಲಿ ಶಿಸ್ತು. ಸಂಯಮ ಹಾಗೂ ಕಲಿಕಾ ಸಾಮರ್ಥ್ಯ ವೃದ್ಧಿಸಿಕೊಳ್ಳುವುದರ ಬದಲು ಹಲವು ದುಶ್ಚಟಗಳಿಗೆ ಬಲಿಯಾಗಿ ಹಾಳಾಗುತ್ತಿದ್ದಾರೆ. ಆದರೆ ಶಿಕ್ಷಕರಾದವರೂ ದುಷ್ಟ ವಿದ್ಯಾರ್ಥಿಗಳನ್ನು ತಿದ್ದಿ ಸೂಕ್ತಮಾರ್ಗದರ್ಶನದ ಮೂಲಕ ವಿದ್ಯಾರ್ಥಿಗಳು ಹಾಗೂ ಸಮಾಜವನ್ನು ಉತ್ತಮಸ್ಥಿತಿಗೆ ತರಬಹುದೆಂದು ಈ ನಾಟಕದ ಮೂಲಕ ತಿಳಿಸಿದ್ದಾರೆ.

"ಇನ್ನೊಂದು ಮುಖ" ಈ ನಾಟಕ ಶಂಕರಗೌಡರ ಕೊನೆಯ ಕೃತಿ. ಇದು ಆರು ಅಂಕಗಳುಳ್ಳ ಸಾಮಾಜಿಕ ನಾಟಕ. ಬದುಕಿನ ಒಳಿತು ಕೆಡಕುಗಳ ಒಂದು ಹಂತದ ಘರ್ಷಣೆಯ ಚಿತ್ರಣವೇ ಈ ನಾಟಕದ ಪ್ರಧಾನ ವಸ್ತು. ವ್ಯಕ್ತಿಯ ನಿಜವಾದ ಮುಖವನ್ನು ಅನಾವರಣ ಮಾಡುವುದೇ ನಾಟಕದ ಉದ್ದೇಶ. ಈ ನಾಟಕವು ಜಾತಿಪದ್ಧತಿ, ಡಾಂಭಿಕತೆ, ಕಟ್ಟರಾಜಕಾರಣ, ಶೋಷಣೆ, ಸೇಡು, ವಿದ್ವೇಷ ಮೊದಲಾದವುಗಳ ವಿರುದ್ಧ ಪ್ರತಿಭಟನಾತ್ಮಕ ಪ್ರವೃತ್ತಿಯ ಮೂಲಕ ಸಮಾಜದ ಆಮೂಲಾಗ್ರ ಬದಲಾವಣೆಗೆ ಯತ್ನಿಸುತ್ತದೆ.

ಶಂಕರಗೌಡರು ನಾಟಕಕಾರರು, ರಂಗಭೂಮಿ ಕಲಾವಿದರೂ ಮಾತ್ರವಲ್ಲ ಅವರು ಸಾಹಿತ್ಯಾಸಕ್ತರಾಗಿದ್ದು ಅನೇಕ ಸಾಹಿತ್ಯ ಕೃತಿಗಳ ರಚನೆ, ಅವುಗಳ ಅಧ್ಯಯನದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಗೌಡರು ಕನ್ನಡ ಹಾಗೂ ಆಂಗ್ಲಭಾಷೆಗಳೆಡರಲ್ಲೂ ಪ್ರಭುತ್ವವನ್ನು ಪಡೆದಿದ್ದರು. ಗೌಡರ ವ್ಯಕ್ತಿತ್ವ ರೂಪಿಸುವಲ್ಲಿ ಗಾಂಧೀಜಿ ಮತ್ತು ಕುವೆಂಪು ಅವರ ಪ್ರಭಾವ ಅನನ್ಯವಾದುದ್ದು. ಅವರ ಭಾಷಾ ಪ್ರೌಢಿಮೆಯನ್ನು ಅರಿಯಬೇಕಾದರೆ ಪ್ಯಾರೇಲಾಲ್‌ರ 'Mahatma Gandhi : The last Phase' ಅನುವಾದ ಕೃತಿ ಮಹಾತ್ಮಗಾಂಧಿ – ಅಂತಿಮ ಹಂತ ಎಂಬ ಕೃತಿಯಕಡೆಗೆ ಗಮನ ಹರಿಸಬೇಕಾಗುತ್ತದೆ.

ಶಂಕರಗೌಡರು ಸಿನಿಮಾ ಪ್ರಪಂಚಕ್ಕೂ ಕಾಲಿಟ್ಟು ಒಂದೆರಡು ಸಿನಿಮಾಗಳನ್ನು ತೆಗೆಸಿದ್ದಾರೆ. 1972ರಲ್ಲಿ ತಾವೇ ರಚಿಸಿದ "ಕೂಡಿಬಾಳೋಣ" ನಾಟಕವನ್ನು ವಿಠಲ್ ನಿರ್ದೇಶನದಲ್ಲಿ ತಯಾರಿಸಿದರು. ಈ ಚಲನಚಿತ್ರದ ಪ್ರಧಾನೋದ್ದೇಶ ಸಹಕಾರ, ಸಹಬಾಳ್ವೆಯ ಮೂಲಕ ಹಳ್ಳಿಯ ಅಭಿವೃದ್ಧಿ ಸಾಧ್ಯವೆಂಬುದನ್ನು ತೋರಿಸಿದ್ದಾರೆ. ಇವರ ಸಿನಿಮಾ ತಯಾರಿಕೆಯ ಪ್ರಧಾನೋದ್ದೇಶ ಗಾಂಧೀಜಿಯ ಸಿದ್ಧಾಂತಗಳನ್ನು ಜನತೆಯಲ್ಲಿ ಪ್ರಚಾರ ಮಾಡುವುದೇ ಆಗಿತ್ತು. 1974ರಲ್ಲಿ "ಹೂಬಾಣ" ಎಂಬ ಕಾದಂಬರಿ ಆಧಾರಿತ "ಮುತ್ತು ಒಂದು ಮುತ್ತು" ಎಂಬ ಸಿನಿಮಾ ತಯಾರಿಸಿದರು. "ಮರೆಯದ ಹಾಡು" "ಚೌಕದ ದೀಪ" ಇನ್ನೂ ಮುಂತಾದ ಸಿನಿಮಾಗಳನ್ನು ಚಿತ್ರರಂಗಕ್ಕೆ ನೀಡಿದ್ದಾರೆ.

ಶಂಕರಗೌಡರು ಕಲೆ, ಸಾಹಿತ್ಯ, ನಾಟಕ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರವಾದದ್ದು. ಉತ್ತಮ ರಾಜಕಾರಣಿ, ಸಾಮಾಜಿಕ ಕಳಕಳಿ, ದೇಶಾಭಿಮಾನ ಮುಂತಾದ ಶ್ರೇಷ್ಠ ಗುಣಗಳನ್ನು ಹೊಂದಿದ್ದ ಶಂಕರಗೌಡರು ಸೃಜನಶೀಲ ವ್ಯಕ್ತಿಗಳಾಗಿದ್ದರು. ಇಂತಹ ಉತ್ತಮ ಗುಣಗಳುಳ್ಳ ಸಜ್ಜನಿಕೆಯ ಸಾಕಾರ

ಮೂರ್ತಿಯಾಗಿದ್ದ ಶಂಕರಗೌಡರ ಜೀವನ ಅನುಕರಣೀಯ ಮತ್ತು ಅವಿಸ್ಮರಣೀಯ.

ಲೋಕಸಭಾ ಸದಸ್ಯರಾಗಿ ಕೆ.ವಿ. ಶಂಕರಗೌಡರು

1984ರ ಕೊನೆಯ ಭಾಗದಲ್ಲಿ ನಡೆದ ಸಂಸತ್ ಚುನಾವಣೆಯಲ್ಲಿ ಆತ್ಮೀಯರ ಒತ್ತಾಯಕ್ಕೆ ಮಣಿದು ಚುನಾವಣೆಗೆ ಸ್ಪರ್ಧಿಸಿದರು. ಶಂಕರಗೌಡರು ಜನತಾಪಕ್ಷದಿಂದ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಉಮೇದುವಾರರಾಗಿ ಸ್ಪರ್ಧಿಸಿದ್ದರು. ಇವರ ಪ್ರತಿಸ್ಪರ್ಧಿಯಾಗಿದ್ದು ಎಸ್.ಎಂ. ಕೃಷ್ಣರವರು ಇವರು ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

ಶಂಕರಗೌಡರು ತಮ್ಮ ಪ್ರಚಾರದಲ್ಲಿ ನನಗೆ ಈ ಚುನಾವಣೆಯೇ ಜೀವನದ ಕೊನೆಯ ಚುನಾವಣೆ ಎಂದು ಘೋಷಿಸಿದ್ದರಿಂದ ರೈತಸಂಘ ತಟಸ್ಥ ನೀತಿಯನ್ನು ಅನುಸರಿಸಿತು. ಈ ಚುನಾವಣೆಯಲ್ಲಿ ಕೆ.ವಿ. ಶಂಕರಗೌಡರು 3.19.176 ಮತಗಳನ್ನು ಗಳಿಸಿ ಪ್ರಚಂಡ ಬಹುಮತದೊಂದಿಗೆ ವಿಜಯಿಯಾದರು. ಇವರ ಪ್ರತಿಸ್ಪರ್ಧಿ ಎಸ್.ಎಂ. ಕೃಷ್ಣ 1.98.780 ಮತಗಳನ್ನು ಪಡೆಯುವಲ್ಲಿ ಮಾತ್ರವೇ ಯಶಸ್ವಿಯಾದರು. ಕೆ.ವಿ. ಶಂಕರಗೌಡರು 1.20.396 ಮತಗಳ ಅಂತರದಲ್ಲಿ ವಿಜಯಿಯಾದರು.

ಶಂಕರಗೌಡರು ಮಂಡ್ಯ ಲೋಕಸಭಾ ಸದಸ್ಯರಾಗಿ ಹಲವಾರು ಜನೋಪಯೋಗಿ ಕಾರ್ಯಗಳನ್ನು ಮಾಡಿದ್ದಾರೆ. ಶಂಕರಗೌಡರು ಆರು ಚುನಾವಣೆಗಳಲ್ಲಿ ಸ್ಪರ್ಧಿಸಿ ಮೂರರಲ್ಲಿ ಗೆದ್ದಿದ್ದರು. ಮಂಡ್ಯ ಲೋಕಸಭಾ ಗೆಲುವು ಜನತಾಪಕ್ಷದ ಗೆಲುವು ಎನ್ನುವುದಕ್ಕಿಂತ ಶಂಕರಗೌಡರ ಗೆಲುವು ಎಂಬುದು ಮನೆ ಮಾತು.

ಗೌಡರು ಸಂಸತ್ ಸದಸ್ಯರಾಗಿದ್ದಾಗ ಮಂಡ್ಯ ಜಿಲ್ಲೆಯ ಬಹುಭಾಗದಲ್ಲಿ ಬರಗಾಲವುಂಟಾಗುತ್ತದೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ವ್ಯವಸ್ಥೆ ಮಾಡುವ ಬಗ್ಗೆ ಸಲಹಾ ರೂಪದ ಮಾತುಕತೆ ನಡೆಸಲು ಪ್ರಧಾನಿ ರಾಜೀವ್‌ಗಾಂಧಿಯವರನ್ನು ಭೇಟಿ ಮಾಡಿ ಬರಗಾಲವು ಒಂದಲ್ಲ ಒಂದು ಕಾರಣದಿಂದ ನಿತ್ಯಕಥೆಯಾಗಿದ್ದು, ಕೇಂದ್ರ ಸರಕಾರ ಶಾಶ್ವತ ಕ್ರಮ ಅನುಸರಿಸಬೇಕೆಂದು ಸಲಹೆ ನೀಡಿದರು. ದನಗಳಿಗೆ ಮೇವು ಬರಗಾಲ ಪೀಡಿತ ಪ್ರದೇಶಗಳ ಜನರಿಗೆ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಲು ಕೇಂದ್ರ ಸರ್ಕಾರ ಸಹಾಯ ಮಾಡಬೇಕೆಂದು ಒತ್ತಾಯಿಸಿದರು. ಸರ್ಕಾರಿ

ನೌಕರರಿಗೆ ದೊರಕುತ್ತಿರುವ ಸೌಲಭ್ಯ ರೈತರಿಗೆ ಸಿಗುತ್ತಿಲ್ಲ. ಸರಕಾರಿ ನೌಕರರಿಗೆ ವರ್ಷಕ್ಕೆ 4 ಭಾರಿ ತುಟ್ಟಿಭತ್ಯೆ ಹೆಚ್ಚಿಸಲಾಗುತ್ತದೆ. ಆದರೆ ರೈತರಿಗೆ ಏನೂ ಸಿಗುತ್ತಿಲ್ಲ. ಆದಕಾರಣ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವ ಹೊಣೆ ಸರಕಾರದ್ದಾಗಿರಬೇಕು ಎಂದು ತಿಳಿಸಿದರು. ಮಂಡ್ಯ ಜಿಲ್ಲೆಯ ಬಹು ಭಾಗ ಕ್ಷಾಮದ ದವಡೆಗೆ ಸಿಕ್ಕಿದೆ ಈ ಪ್ರದೇಶದಲ್ಲಿ ಬರಗಾಲ ಪರಿಹಾರಕ್ಕೆ ಶಾಶ್ವತ ಯೋಜನೆ ಅತ್ಯವಶ್ಯಕ.

ಶಂಕರಗೌಡರು ಲೋಕಸಭಾ ಸದಸ್ಯರಾಗಿದ್ದಾಗ ಪಾರ್ಲಿಮೆಂಟಿನಲ್ಲಿ ದೇಶದ ಹಲವಾರು ವಿಷಯಗಳನ್ನು ಕುರಿತು ಮಾತನಾಡಿದ್ದಾರೆ. 18.04.1985ರಂದು ಕೈಗಾರಿಕಾ ಇಲಾಖೆಯ ಬೇಡಿಕೆಗಳ ಮೇಲೆ ಸಂಸತ್ತಿನಲ್ಲಿ ಮಾತನ್ನಾಡಿದ್ದಾರೆ ಹಾಗೂ ಶಿಕ್ಷಣದ ಕ್ಷೇತ್ರದ ಬಗ್ಗೆ ಅಪಾರ ಒಲವಿದ್ದ ಗೌಡರು 1986ನೆಯ ಪಾರ್ಲಿಮೆಂಟ್ ಅಧಿವೇಶನದಲ್ಲಿ ಹೊಸ ಶಿಕ್ಷಣ ನೀತಿಯನ್ನು ಕುರಿತು ಸಲಹೆಗಳನ್ನು ನೀಡಿದರು.

ಹೀಗೆ ಶಂಕರಗೌಡರು ಮಂಡ್ಯ ಲೋಕಸಭಾ ಸದಸ್ಯರಾಗಿದ್ದಾಗ ಹಲವಾರು ಕ್ರಮಗಳನ್ನು ಕೈಗೊಂಡು ಜಿಲ್ಲೆಯಾದ್ಯಂತ ಕೀರ್ತಿವಂತರಾಗಿದ್ದರು.

❋ ❋ ❋ ❋ ❋



ಬಿ.ಎಲ್. ಸುಬ್ಬಮ್ಮ

– ಡಾ. ಬಿ. ಪಾಂಡುಕುಮಾರ್

ಪರಮ ಪವಿತ್ರವಾದ ಸ್ವಾತಂತ್ರ್ಯ ಕೆಲವು ವ್ಯಕ್ತಿಗಳಿಂದ ಬಂದುದಲ್ಲ ದೇಶದ ಲಕ್ಷಾಂತರ ಮಂದಿಯ ಶ್ರಮದ ಫಲ, ಹೋರಾಟದ ಫಲ, ಮಾನ ಪ್ರಾಣದ ಹಂಗು ತೊರೆದು ಲಾಠಿ ಹಾಗೂ ಗುಂಡಿನೇಟು ತಿಂದು ಗಳಿಸಿದ ಸ್ವಾತಂತ್ರ್ಯ. ಒಂದೊಮ್ಮೆ ಹೆಣ್ಣು ಮಕ್ಕಳು, ಗೃಹಿಣಿಯರು ಮನೆಯಿಂದ ಹೊರಬಾರದಂತೆ ಸಂಪ್ರದಾಯದ ಕಟ್ಟಳೆಯನ್ನು ಹೇರಿದ್ದ ನಮ್ಮ ಸಮಾಜ. ವಿಚಾರಣೆಯಿಲ್ಲದೆ ಬಂಧಿಸಿ ಕಾರಾಗೃಹಕ್ಕೆ ಅಟ್ಟುತ್ತಿದ್ದ ಬ್ರಿಟಿಷರು. ಇಂತಹ ಸನ್ನಿವೇಶದಲ್ಲಿ ಕರ್ನಾಟಕದಲ್ಲಿ ಕೆಲವು ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಉದಾಹರಣೆಗಳಿವೆ. ಅದರಲ್ಲೂ ಒಕ್ಕಲಿಗ ಸಮುದಾಯವು ಕಟ್ಟಾ ಸಂಪ್ರದಾಯಸ್ಥ ಸಮಾಜ. ಇಂತಹ ಸಮುದಾಯದಲ್ಲಿ ಕೆಲವು ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅಂತಹವರಲ್ಲಿ ಶ್ರೀಮತಿ ಬಿ.ಎಲ್. ಸುಬ್ಬಮ್ಮ (ಬೆಳಗೋಡು ಲಿಂಗೇಗೌಡ ಸುಬ್ಬಮ್ಮ) ನವರೂ ಒಬ್ಬರು.

ನಗರದ ಪ್ರಭಾವವಿರದ, ಹೆಚ್ಚಿನ ಶಿಕ್ಷಣವಿಲ್ಲದ, ರಸ್ತೆ, ಸಂಪರ್ಕ, ಸುದ್ಧಿಮಾಧ್ಯಮ ಇವೇ ಮುಂತಾದ ಸೌಲಭ್ಯವಿಲ್ಲದ ಪ್ರದೇಶವೆಂದರೆ ಮಲೆನಾಡು ಪ್ರದೇಶ. ಬ್ರಿಟಷರಿಂದಾಗಿ ಅಲ್ಲಲ್ಲಿ ಕಾಫಿ, ಏಲಕ್ಕಿ, ಅಡಿಕೆ ಇತ್ಯಾದಿ ವಾಣಿಜ್ಯಬೆಳೆ ತಲೆ ಎತ್ತಿತ್ತು. ಇದರ ಲಾಭ ಮಾತ್ರ ಬ್ರಿಟಿಷರಿಗೆ ಆದರೂ ನಮಗೆ ಕೂಲಿಯಾದರೂ ಸಿಕ್ಕಿತಲ್ಲಾ! ಎಂಬ ಧೋರಣೆ ಬಡ ಕೂಲಿಕಾರ್ಮಿಕರದು. ಮೈಸೂರು ಒಡೆಯರ ಆಳ್ವಿಕೆ. ಅರಸರು ನಾಲ್ಕನೆಯ ಮೈಸೂರು ಯುದ್ಧಾನಂತರ ಹೆಚ್ಚು ಕಡಿಮೆ ಬ್ರಿಟಿಷರಿಗೆ ವಿಧೇಯರಾಗಿದ್ದರು. ಅಂದಮೇಲೆ ಬ್ರಿಟಿಷರ ವಿರುದ್ಧ ಹೋರಾಡುವ ಮನಸ್ಥಿತಿ ಇರಲಿಲ್ಲ.

ಮಲೆನಾಡ ಒಕ್ಕಲಿಗರ ಸಂಘ ಸ್ಥಾಪನೆ:-

ಮಲೆನಾಡು ಪ್ರದೇಶದಲ್ಲಿ ಒಕ್ಕಲಿಗರು ದಟ್ಟವಾಗಿದ್ದರು. ಕೆಲವು ಶ್ರೀಮಂತ ಜಮೀನ್ದಾರರು ಮೈಸೂರು ಪ್ರಜಾಪ್ರತಿನಿಧಿ ಸಭಾಸದರಾಗಿದ್ದರು. (ಎಂ.ಆರ್.ಎ.) ಅರ್ಥಾತ್ ಶ್ರೀಮಂತ ಜಮೀನ್ದಾರರು, ಪ್ರತಿಷ್ಠಿತರು, ವಿದ್ಯಾವಂತರು ಆಳರಸರಿಗೆ ವಿಧೇಯರಾಗಿದ್ದರು, ಅದೇ ರೀತಿ ಮೈಸೂರು ಅರಸರು ಬ್ರಿಟಿಷರಿಗೆ ವಿಧೇಯರಾಗಿದ್ದರು. ಬೆಂಗಳೂರಿನಲ್ಲಿ 1906ರಲ್ಲಿ "ರಾಜ್ಯ ಒಕ್ಕಲಿಗರ ಸಂಘ" ಸ್ಥಾಪನೆಯಾದ ವರ್ಷವೇ ಅವರಿಂದ ಪ್ರಭಾವಿತರಾಗಿ ಮೂಡಿಗೆರೆಯಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಯ್ತು. ಬಾಗಮನೆ ದ್ಯಾವೇಗೌಡರು, ಮೋಕೋನಹಳ್ಳಿ ಹುಚ್ಚೇಗೌಡರು, ಬಿ.ಎಲ್. ಲಿಂಗೇಗೌಡರು, ಬಿ.ಎಂ. ಅಣ್ಣೇಗೌಡರು ಇವರೇ ಮುಂತಾದವರ ಸಹಕಾರದಿಂದ ಮಲೆನಾಡೊಕ್ಕಲಿಗರ ಸಂಘ ತಲೆ ಎತ್ತಿತು. ನಂತರದ ದಿನಗಳಲ್ಲಿ ತೀರ್ಥಹಳ್ಳಿ, ಹೊಸನಗರ, ಶಿವಮೊಗ್ಗದಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಯ್ತು. 1913 ರಲ್ಲಿ ಅಂದಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಮೂಡಿಗೆರೆಗೆ ಪ್ರವಾಸ ನಿಮಿತ್ತ ಬಂದಾಗ 'ವಿದ್ಯಾರ್ಥಿ ನಿಲಯ' ಸ್ಥಾಪನೆಗೆ ಅವರಿಂದ ಶಂಕುಸ್ಥಾಪನೆ ಮಾಡಿಸಲಾಯಿತು. ಬಹಳ ಹಿಂದೆಯೇ ಶಿಕ್ಷಣಕ್ಕೆ ಒತ್ತುಕೊಟ್ಟ ಉದಾಹರಣೆ ಎಂದು ಹೇಳಬಹುದು. 1941ರಲ್ಲಿ ಸರ್. ಎಂ. ವಿ. ಯವರು 'ಮಲೆನಾಡು ಅಭಿವೃದ್ಧಿ' ಯೋಜನೆಯನ್ನು ಜಾರಿಗೆ ತಂದರು. ಇದರಿಂದಾಗಿ ಹಿಂದುಳಿದಿದ್ದ ಮಲೆನಾಡು ಭಾಗದ ಜನರ ಶಿಕ್ಷಣ, ಸಾರಿಗೆ, ಆರೋಗ್ಯ ಇವೇ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಯಿತು.

ಬಿ.ಎಲ್. ಸುಬ್ಬಮ್ಮನವರ ಬಾಲ್ಯಜೀವನ

ಚಿಕ್ಕಮಗಳೂರು ಜಿಲ್ಲೆಯ ಬೆಳಗೋಡು ಗ್ರಾಮದ ಲಿಂಗೇಗೌಡ ಮತ್ತು ಭೈರಮ್ಮ ದಂಪತಿಗಳಿಗೆ ಬಿ.ಎಲ್. ಮಂಜಮ್ಮ, ಬಿ.ಎಲ್. ಸುಬ್ಬಮ್ಮ ಮತ್ತು ಬಿ.ಎಲ್. ರಾಮೇಗೌಡ ಎಂಬ ಮೂರು ಮಕ್ಕಳು. 1921ರಲ್ಲಿ ಸುಬ್ಬಮ್ಮನವರು ಜನಿಸಿದರು. ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡಬೇಕೆಂಬ ಹಂಬಲ ಲಿಂಗೇಗೌಡರದಾಗಿತ್ತು. ಈಗಾಗಲೇ ತಿಳಿಸಿರುವಂತೆ ಅಂದು ಇಂದಿನಂತೆ ಶಾಲಾ, ಕಾಲೇಜುಗಳ ಕೊರತೆ, ರಸ್ತೆ ಇವೇ ಮುಂತಾದ ಸಮಸ್ಯೆಗಳಿಂದಾಗಿ ತಮ್ಮ ಊರಿನಿಂದ ಐದಾರು ಕಿಲೋಮೀಟರ್ ದೂರದಲ್ಲಿರುವ ಬಣಗಲ್‌ಗೋ, ಮೂಡಿಗೆರೆಗೂ ಕಳುಹಿಸಬೇಕಾಗಿತ್ತು. ಆ ಕಾಲದಲ್ಲಿ ಮನೆಯ ಬಳಿಗೆ ಬರುವ ವಾಹನ ಸೌಲಭ್ಯ, ಬೆಳಿಗ್ಗೆ ಮಕ್ಕಳಿಗೆ ತಿಂಡಿತಿನಿಸು ಬಾಕ್ಸ್ ರೆಡಿಮಾಡಬೇಕು ಇತ್ಯಾದಿ. ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳನ್ನು ಐದಾರು ಕಿಲೋಮೀಟರ್ ದೂರದ ಶಾಲೆಗೆ ಕಳುಹಿಸಲು ಹಿಂದೇಟು ಹಾಕಿದರು.

ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಲೇ ಬೇಕೆಂಬ ಹಂಬಲ ಲಿಂಗೇಗೌಡರಿಗೆ. ಶಾಲೆಗೆ ಕಳುಹಿಸುವ ಬದಲು ಅಲ್ಲಿನ ಮುಖಂಡರು ತಮ್ಮ ಮನೆಯಲ್ಲೇ ಪಾಠ ಹೇಳಿಕೊಡುವ ಮಾಸ್ತರನ್ನು ನೇಮಕ ಮಾಡಿಕೊಂಡರು. ಕೊಡಗಿನ ಮೊಚಯ್ಯ, ತಿಮ್ಮೇಗೌಡ, ಬೇಲೂರು ಕೇಶವದಾಸರು ತಮ್ಮ ಗುರುಗಳಾಗಿದ್ದರೆಂದು ನೆನೆಯುತ್ತಾರೆ. (ಶ್ರೀಮತಿ ಬಿ.ಎಲ್. ಸುಬ್ಬಮ್ಮ – ಲೇಖಕರು ಡಾ.ಡಿ.ಎಸ್. ಜಯಪ್ಪಗೌಡ) ಓದಿನಲ್ಲಿ ಚುರುಕಾಗಿದ್ದ ಸುಬ್ಬಮ್ಮನವರು ಎಲ್.ಎಸ್. (ಲೋಯರ್ ಸೆಕೆಂಡರಿ) ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿಯಾಗಿ ಕುಳಿತರು. ಆದರೆ ಅದರಲ್ಲಿ ನಪಾಸಾದರು. ಅಂದು ಹೆಣ್ಣು ಮಕ್ಕಳಿಗೆ ಭಾವಗೀತೆ, ಭಕ್ತಿಗೀತೆಯಂತಹ ಸಂಗೀತ ಪಾಠವನ್ನು ಕಲಿಸುತ್ತಿದ್ದರು. ಕಸೂತಿ, ಟೈಲರಿಂಗ್ ಇವೇ ಮುಂತಾದವುಗಳನ್ನು ಬಾಲ್ಯದಲ್ಲಿ ಕಲಿತರು.

ಸ್ವಾತಂತ್ರ್ಯ ಚಳವಳಿಗೆ ಧುಮುಕಿದ ಸುಬ್ಬಮ್ಮನವರು

1885ರಲ್ಲಿ ಕಾಂಗ್ರೆಸ್ ಸ್ಥಾಪನೆಯಾದರೂ ಅದರ ಪ್ರಭಾವ ಹಳೆಯ ಮೈಸೂರಿಗರ ಮೇಲೆ ಪ್ರಭಾವ ಬೀರಲಿಲ್ಲ. 1924ರಲ್ಲಿ ಗಾಂಧೀಜಿಯವರು ಬೆಳಗಾವಿ ಅಧಿವೇಶನವನ್ನು ಮಾಡಿದಾಗಲೂ ಅದರ ಪ್ರಭಾವ ಬೀರಲಿಲ್ಲ. 1936–37ರಲ್ಲಿ ಪ್ರಜಾಮಿತ್ರ ಮಂಡಳಿಯು ಸಂಯುಕ್ತ ಪ್ರಜಾಪಕ್ಷವಾಗಿ ನಂತರ ಕಾಂಗ್ರೆಸ್‌ನೊಂದಿಗೆ ವಿಲೀನವಾಗಲಾಗಿ ಕ್ರಮೇಣ ಮೈಸೂರು ಕಾಂಗ್ರೆಸ್ ಎಲ್ಲೆಡೆ ಪ್ರಭಾವ ಬೀರಿತು. ಹಳೇ ಮೈಸೂರು ಭಾಗದಲ್ಲಿ ಹೆಚ್.ಸಿ. ದಾಸಪ್ಪ, ಸಾಹುಕಾರ ಚನ್ನಯ್ಯ, ಹೆಚ್.ಕೆ. ವೀರಣ್ಣಗೌಡ ಇವರೇ ಮುಂತಾದವರು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಇವರ ಪ್ರಭಾವ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಮತ್ತು ಮಂಗಳೂರಿನವರೆಗೂ ವ್ಯಾಪಿಸಿತು.

ಚಿಕ್ಕಮಗಳೂರು ಜಿಲ್ಲೆಯ ಬಾಗಮನೆ ದ್ಯಾವೇಗೌಡರು, ಆಲ್ದೂರು ಬಸಪ್ಪಶೆಟ್ಟರು, ಬಿ.ಎಂ. ಅಣ್ಣೇಗೌಡರು, ಮಾಕೋನಹಳ್ಳಿ ಎಂ. ಹುಚ್ಚೇಗೌಡ ಸೇರಿದಂತೆ ಹಲವಾರು ಮುಖಂಡರು ಮಲೆನಾಡು ಪ್ರದೇಶಕ್ಕೆ ಸೇರಿದ ಚಿಕ್ಕಮಗಳೂರು, ಶಿವಮೊಗ್ಗ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಹಬ್ಬಿಸಿದರು. ಚಿಕ್ಕಮಗಳೂರು, ಕೊಪ್ಪ, ಶೃಂಗೇರಿ, ಆಲ್ದೂರು, ಮೂಡಿಗೆರೆ ಇವೇ ಮುಂತಾದ ಪ್ರದೇಶಗಳಲ್ಲಿ ಸಭೆ ಸಮಾರಂಭಗಳು, ಮುಷ್ಕರ, ಹರತಾಳಗಳನ್ನು ನಡೆಸ–ತೊಡಗಿದರು. ಸಭೆ ಸಮಾರಂಭಗಳ ಪ್ರಾರಂಭದಲ್ಲಿ ಪ್ರಾರ್ಥನೆ, ಸ್ವಾಗತಭಾಷಣ ಕಡ್ಡಾಯ. ಅಂತಹ ಸಂದರ್ಭದಲ್ಲಿ ಪ್ರಾರ್ಥನೆ ಮಾಡಲು ಬಿ.ಎಲ್. ಸುಬ್ಬಮ್ಮನವರನ್ನು ಸಮಾರಂಭದ ಸಂಘಟಕರು ಆಹ್ವಾನಿಸುತ್ತಿದ್ದರು. ಸುಬ್ಬಮ್ಮನವರು ಬಾಲ್ಯದಲ್ಲಿ ಕಲಿತಿರುವ ಭಕ್ತಿಗೀತೆ,

ಭಾವಗೀತೆ, ದೇಶಭಕ್ತಿಗೀತೆಗಳು ಪ್ರಯೋಜನಕ್ಕೆ ಬಂದುವು. ಆ ಹೆಣ್ಣು ಮಗಳು ಧೈರ್ಯವಾಗಿ ಹಾಡುತ್ತಿದ್ದಳು. ಸಭೆ ಸಮಾರಂಭಗಳಿಗೆ ಮಹಿಳೆಯರನ್ನು ಸೆಳೆಯುವ ಉದ್ದೇಶದಿಂದ ಸುಬ್ಬಮ್ಮನವರಿಂದ ಪುಟ್ಟ ಭಾಷಣಗಳನ್ನು ಮಾಡಿಸುತ್ತಿದ್ದರು. ಸಭಾಕಂಪನವಿಲ್ಲದೆ ಸುಬ್ಬಮ್ಮನವರು ಭಾಷಣ ಮಾಡುತ್ತಿದ್ದರು.

ಸುಬ್ಬಮ್ಮನವರನ್ನು ಅವರ ಬಂಧುವಾದ ಬಾಗಮನೆ ದ್ಯಾವೇಗೌಡರು, ತಳಹಳ್ಳದ ಉದ್ದೇಗೌಡರು, ಬೆಳಗೂಡಿನ ಈರೇಗೌಡರು, ಬಿ.ಎಂ. ಅಣ್ಣೇಗೌಡರು, ಮೂಡಿಗೆರೆಯ ದಾರದಹಳ್ಳಿ ಡಿ.ಎಸ್. ಕೃಷ್ಣಪ್ಪಗೌಡರು, ಬೆಳಗೂಡಿನ ಬಿ.ಇ. ಕೃಷ್ಣೇಗೌಡರು, ಲೋಕಪ್ಪಗೌಡರು, ಬಣಕಲ್ ಶಿವಣ್ಣಗೌಡರು ಸೇರಿದಂತೆ ಹಲವಾರು ಹಿರಿಯರು ಸುಬ್ಬಮ್ಮನವರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುವಂತೆ ಪ್ರೇರೇಪಿಸಿದರು. ಸ್ವಾತಂತ್ರ್ಯ ಹೋರಾಟಗಾರರ ಭಾಷಣಗಳನ್ನು, ಗಾಂಧೀಜಿಯವರ ಸಂದೇಶಗಳನ್ನು ಓದಿ ತಿಳಿದುಕೊಂಡರು. ಸುಬ್ಬಮ್ಮನವರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಭಾಷಣ ಮಾಡತೊಡಗಿದರು. ಮಲೆನಾಡು ಪ್ರದೇಶದಲ್ಲಿ ಒಬ್ಬ ಹೆಣ್ಣುಮಗಳು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ತನು, ಮನ, ಧನವನ್ನರ್ಪಿಸಿದುದೇ ಅಲ್ಲದೆ ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಅಹೋರಾತ್ರಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸುತ್ತಿರುವುದನ್ನು ಕಂಡ ಜನ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸುಬ್ಬಮ್ಮನವರ ಹೆಸರು ಚಿಕ್ಕಮಗಳೂರು ಜಿಲ್ಲೆ, ಶಿವಮೊಗ್ಗ, ಹಾಸನ, ಮಡಿಕೇರಿ,

ದಕ್ಷಿಣ ಕನ್ನಡಕ್ಕೆ ವ್ಯಾಪಿಸಿತು. ಅಂದು ಎಲ್ಲರ ಬಾಯಲ್ಲೂ ಬಿ.ಎಲ್. ಸುಬ್ಬಮ್ಮ. ಅಂದು ಇಂದಿನಂತೆ ದಿನಪತ್ರಿಕೆಗಳು, ಟಿ.ವಿ. ಮಾಧ್ಯಮ-ಗಳಿರಲಿಲ್ಲ. ಬಾಯಿಯಿಂದ ಬಾಯಿಗೆ ಸುದ್ದಿ ಹಬ್ಬುತ್ತಿತ್ತು. ಕರಪತ್ರಗಳನ್ನು ಹಂಚುತ್ತಿದ್ದರು. ಅಂದು ಕರಪತ್ರಗಳು, ಭಿತ್ತಿ ಪತ್ರಗಳು, ಪೋಸ್ಟರ್‌ಗಳು, ಬ್ಯಾನರ್‌ಗಳು ಇವೇ ಮುಂತಾದವುಗಳನ್ನು ಮುದ್ರಿಸಿ ಹಂಚುವುದು ಅಪರಾಧವಾಗಿತ್ತು. ಅಂತಹ ಸಂದರ್ಭದಲ್ಲಿ ಕರಪತ್ರಗಳನ್ನು ಗುಪ್ತವಾಗಿ ಮುದ್ರಿಸಿ ಇಲ್ಲವೆ ಕೈಯಲ್ಲಿ ಬರೆದು ಹಂಚಲಾಗುತ್ತಿತ್ತು. ಗುಪ್ತವಾಗಿ ಸಭೆ, ಸಮಾರಂಭಗಳು ನಡೆಯುತ್ತಿದ್ದವು. ಸುಬ್ಬಮ್ಮನವರಿಂದಾಗಿ ಮಲೆನಾಡು ಪ್ರದೇಶದಲ್ಲಿ ಹಲವಾರು ಮಹಿಳಾ ಸತ್ಯಾಗ್ರಹಿಗಳು ಸ್ವಾತಂತ್ರ್ಯ ಹೋರಾಟಕ್ಕಿಳಿದರು.

ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರು ಸ್ವಾತಂತ್ರ್ಯ ಸಮರಕ್ಕೆ ಇಳಿದು ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದಿದ್ದು ಅತ್ಯಲ್ಪವಾದರೂ ಪರಿಣಾಮ ಅಗಾಧವಾದುದು. ಕೆಲವು ಮಹಿಳೆಯರು ತಾವು ನೇರವಾಗಿ ಸುಬ್ಬಮ್ಮನವರಂತೆ ಹೋರಾಟಕ್ಕಿಳಿಯದಿದ್ದರೂ ತಮ್ಮ ಪತಿರಾಯರಿಗೆ ಧೈರ್ಯ ತುಂಬಿದರು. ಸಂಸಾರದ ಹೊರೆಯನ್ನು, ಹೊಣೆಯನ್ನು ತಾವೇ ಹೊತ್ತರು. ಮನೆಯಲ್ಲಿ ಕುಳಿತಿದ್ದ ಗಂಡಸರಿಗೆ ಸ್ಫೂರ್ತಿಯಾದರು ಎಂದರೆ ತಪ್ಪಾಗಲಾರದು. 1938ರ ಶಿವಪುರ ಸತ್ಯಾಗ್ರಹದಲ್ಲಿ

ಕನಿಷ್ಠ ಐದು ಸಾವಿರ ಮಹಿಳೆಯರು ಭಾಗವಹಿಸಿದ್ದರು ಎಂಬುದಾಗಿ ಅಂಕಿಅಂಶಗಳು ತಿಳಿಸುತ್ತವೆ.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಸುಬ್ಬಮ್ಮನವರು:

ಸುಬ್ಬಮ್ಮನವರು ಪ್ರಾಪ್ತವಯಸ್ಸಿಗೆ ಬರುತ್ತಲೇ ಅವರ ಪೋಷಕರು ಸುಬ್ಬಮ್ಮನವರಿಗೆ ವಿವಾಹ ಮಾಡಬೇಕೆಂದು ತೀರ್ಮಾನಿಸಿದರು. ಸುಬ್ಬಮ್ಮನವರು ಎಷ್ಟು ಜನಪ್ರಿಯರಾಗಿದ್ದರೆಂದರೆ ಅವರನ್ನು ವಿವಾಹವಾಗಲು ಯಾರಾದರು ಮುಂದೆ ಬರುತ್ತಾರೋ ಇಲ್ಲವೋ ಅನ್ನುವ ಭಯ ಪೋಷಕರಿಗೆ. ಒಕ್ಕಲಿಗರು ಹೇಳಿಕೇಳಿ ಸಂಪ್ರದಾಯಸ್ಥರು. ಚಿಕ್ಕಮಗಳೂರು ತಾಲ್ಲೂಕು ತಳಿಹಳ್ಳದ ಶ್ರೀಮತಿ ಶಿವಮ್ಮ ಹೆಗ್ಗಡ್ತಿ ಮತ್ತು ಶ್ರೀ ಅಣ್ಣೇಗೌಡರ ಮಗ ಶ್ರೀ ತಿಪ್ಪೇಗೌಡರು ಸುಬ್ಬಮ್ಮನವರನ್ನು ವಿವಾಹವಾಗಲು ಮುಂದೆ ಬಂದರು. ಈ ತಳಿಹಳ್ಳ ಎಂಬ ಊರು ಚಿಕ್ಕಮಗಳೂರು ಮತ್ತು ಮಲ್ಲಂದೂರು ಮಧ್ಯದಲ್ಲಿದೆ. ಶ್ರೀಮತಿ ಶಿವಮ್ಮ ಹೆಗ್ಗಡ್ತಿ (ಸುಬ್ಬಮ್ಮನವರ ಅತ್ತೆಯವರು) ಅಂದು ಚಿಕ್ಕಮಗಳೂರು ಮತ್ತು ಇಡೀ ಮಲೆನಾಡು ಪ್ರದೇಶದಲ್ಲಿ ಖ್ಯಾತನಾಮರಾಗಿದ್ದ ಬಾಗೆಮನೆ ದ್ಯಾವೇಗೌಡರ ಸಹೋದರಿ. (ಪ್ರತಿಭಾವಂತ ಸಂಸದೀಯ ಪಟುಗಳು ಶ್ರೀಮತಿ ಬಿ.ಎಲ್. ಸುಬ್ಬಮ್ಮ – ಲೇ ಡಾ॥ ಜಯಪ್ಪಗೌಡ) ಶ್ರೀ ಅಣ್ಣೇಗೌಡರಿಗೆ ಐದು ಜನ ಮಕ್ಕಳು. ಅದು ಅವಿಭಕ್ತ ಕುಟುಂಬ. ತುಂಬಿದ ಮನೆಯನ್ನು ಶ್ರೀಮತಿ ಸುಬ್ಬಮ್ಮನವರು ನಿಭಾಯಿಸಬೇಕಾಗಿತ್ತು.

ಭಾರತ ಬಿಟ್ಟು ತೊಲಗಿ ಆಂದೋಲನ :

1942ರಲ್ಲಿ ಚಲೇ ಜಾವ್ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಆಂದೋಲನ ದೇಶದಾದ್ಯಂತ ನಡೆಯ ತೊಡಗಿತು. ಮಲೆನಾಡಿನಲ್ಲೂ ಈಗಾಗಲೇ ಸತ್ಯಾಗ್ರಹಿಗಳು ಸಾಕಷ್ಟು ಜನರಿದ್ದರು. ಅವರಲ್ಲಿ ಬಣಕಲ್ ಶಿವಣ್ಣಗೌಡ, ಬೆಳಗೂಡಿನ ಲೋಕಪ್ಪಗೌಡ, ಕೃಷ್ಣಪ್ಪಗೌಡ, ಡಿ.ಎಸ್. ಕೃಷ್ಣಪ್ಪಗೌಡ, ಬಾಗಮನೆ ದೇವೇಗೌಡರವರೇ ಮುಂತಾದವರು. ಭಾರತ ಬಿಟ್ಟು ತೊಲಗಿ ಆಂದೋಲನ ಎಲ್ಲೆಡೆ ವ್ಯಾಪಿಸಿತು. ಪೋಲಿಸರೊಂದಿಗೆ ಘರ್ಷಣೆಗಿಳಿದರು.

ಮಹಿಳೆಯರನ್ನು ಹಾಗು ಮನೆಯಲ್ಲಿ ಕುಳಿತಿದ್ದ ಸೋಗಲಾಡಿ ಗಂಡಸರನ್ನು ಮನೆಯಿಂದ ಕರೆತರುವ ಉದ್ದೇಶದಿಂದ ಶ್ರೀಮತಿ ಸುಬ್ಬಮ್ಮನವರನ್ನು ಸ್ವಾತಂತ್ರ್ಯ ಹೋರಾಟಕ್ಕಿಳಿಸಲು ತೀರ್ಮಾನಿಸಿದರು. ಆಕೆ ಈಗ ಗೃಹಿಣಿ. ಆದ ಕಾರಣ ಹೇಗೆ ಹೋರಾಟಕ್ಕೆ ಕರೆತರುವುದು ಎಂಬ ಚಿಂತೆ ಕಾಡತೊಡಗಿತು. ಬಾಗಮನೆ ದ್ಯಾವೇಗೌಡರ ನೇತೃತ್ವದಲ್ಲಿ ಮುಖಂಡರು ಸುಬ್ಬಮ್ಮನವರ ಮಾವನರಾದ ಅಣ್ಣೇಗೌಡರನ್ನು ಹಾಗೂ

ಸುಬ್ಬಮ್ಮನವರ ಪತಿ ತಿಪ್ಪಣ್ಣನವರನ್ನು ಕೇಳಿಕೊಂಡರು. ಸುಬ್ಬಮ್ಮನವರಿಗೆ ಇಷ್ಟವಿದ್ದರೆ ಹೋರಾಟಕ್ಕಿಳಿಯಲಿ, ನಮ್ಮ ಅಭ್ಯಂತರವಿಲ್ಲ. ನಾಡಿನ ಸ್ವಾತಂತ್ರ್ಯ ಮುಖ್ಯ ಎಂದರು. ಮುಖಂಡರಿಗೆ ಅಷ್ಟು ಸಾಕಾಗಿತ್ತು.

ಸುಬ್ಬಮ್ಮನವರು ಸ್ವಾತಂತ್ರ್ಯ ಹೋರಾಟಕ್ಕಿಳಿಯಲು ಪ್ರಮುಖ ಕಾರಣವೇನೆಂದರೆ.

1920ರಲ್ಲಿ ಮಹಾತ್ಮಗಾಂಧಿಯವರು ಇಡೀ ಭಾರತದಲ್ಲಿ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದರು. ದೇಶದಾದ್ಯಂತ ಹೆಣ್ಣು ಗಂಡು ಎಂಬ ಭೇಧಭಾವವಿಲ್ಲದೆ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು. ಶ್ರೀಮಂತ ಹಾಗೂ ವಿದ್ಯಾವಂತ ಮಹಿಳೆಯರಲ್ಲಿ ಕೆಲವರು ಮುಂದೆ ಬಂದರು. ಭವಾನಿಬಾಯಿ ಕನಗೋಲ್, ಗಂಗಾಬಾಯಿ, ಮಿರ್ಜಾಂಕರ್, ಲಕ್ಷೀಸೆಹಗಲ್, ಸರೋಜಿನಿ ನಾಯ್ಡು, ಅರುಣ ಅಸಫ್ ಆಲಿ ಇನ್ನು ಮುಂತಾದವರು.

ಅದೇ ರೀತಿ ಕರ್ನಾಟಕದ ಮಹಿಳೆಯರು ಹಿಂದೆ ಬೀಳಲಿಲ್ಲ. ರಾಜ್ಯದ ನಾನಾ ಭಾಗಗಳಿಂದ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕಿಳಿದರು. ಅಂತಹವರಲ್ಲಿ ಕೆಲವರನ್ನು ಹೆಸರಿಸಬಹುದು.

1. ಪಾರ್ವತಮ್ಮ ಸೂರ್ಯನಾರಾಯಣ (ಮೈಸೂರು)
2. ವಿಮಲಾಬಾಯಿ ದಾತರ್ (ಬೆಂಗಳೂರು)
3. ತಾಯಮ್ಮ ವೀರಣ್ಣಗೌಡ (ಮಂಡ್ಯ, ಮದ್ದೂರು)
4. ಎಂ.ಎಸ್.ಗೌರಮ್ಮ (ಮೈಸೂರು)
5. ಸರೋಜಮ್ಮ ಚಿಕ್ಕೇಗೌಡ (ಮಂಡ್ಯ, ಮದ್ದೂರು)
6. ಎಸ್.ಕೆ.ಗೌರಮ್ಮ ಅಪ್ಪಾಜಿಗೌಡ (ಮಂಡ್ಯ)
7. ಸರ್ವಮಂಗಳ (ಮೈಸೂರು)
8. ಲಕ್ಷಮ್ಮ ಎಸ್.ಸಿ.ದೊಡ್ಡಗೌಡ (ಕಿಕ್ಕೇರಿ, ಕೆ.ಆರ್.ಪೇಟೆ)
9. ಇಂದಿರಮ್ಮ ಕೃಷ್ಣಮೂರ್ತಿ
10. ವೆಂಕಮ್ಮ ಸೀತಾರಾಮಯ್ಯ
11. ಕಮಲಾದೇವಿ ಚಟ್ಟೋಪಾಧ್ಯಾಯ (ಮಂಗಳೂರು)
12. ಉಮಾಬಾಯಿ ಕುಂದಾಪುರ (ಹುಬ್ಬಳ್ಳಿ)
13. ಬಳ್ಳಾರಿ ಸಿದ್ದಮ್ಮ (ಹಾವೇರಿ)

14. ನಾಗಮ್ಮ ಪಾಟೀಲ (ಹುಬ್ಬಳ್ಳಿ)
15. ಯಶೋಧರಮ್ಮ ದಾಸಪ್ಪ (ಬೆಂಗಳೂರು)
16. ಜಯದೇವಿ ತಾಯಿ ಲಿಗಾಡೆ (ಸೋಲಾಪುರ)
17. ಲೀಲಾವತಿ ಮಾಗಡಿ (ಹುಬ್ಬಳ್ಳಿ)
18. ಭಾಗೀರತಮ್ಮ (ತುಮಕೂರು)
19. ಸುನಂದಮ್ಮ (ತುಮಕೂರು)
20. ದೇವಮ್ಮ ಹರಿಜನ್ (ಶಿರ್ಶಿ, ಸಿದ್ದಾಪುರ)
21. ಸೀತಾಬಾಯಿ ಮಡಗಾವಂಗರ್ (ಸಿರ್ಸಿ, ಸಿದ್ದಾಪುರ)
22. ಜಯಲಕ್ಷ್ಮಿ ಬಾಯಿ .ಟಿ.ಬಿ (ಬಳ್ಳಾರಿ)
23. ಸುಬ್ಬಮ್ಮ ಜೋಯಿಸ್ (ಸಿರ್ಸಿ, ಸಿದ್ದಾಪುರ)
24. ಕೃಷ್ಣಬಾಯಿ ಪಂಜೇಕರ್ (ಹೊನ್ನಾವರ)
25. ಪದ್ಮಾವತಿ ಬಿದ್ರಿ (ಜಮಖಂಡಿ)
26. ಮೈಲಾರ ಸಿದ್ದಮೇಟಿ (ರೋಣ ಮೊಟೆಬೆನ್ನೂರು)
27. ಕನಗೋಡು ಭವಾನಿಬಾಯಿ (ಸಿರ್ಸಿ, ಸಿದ್ದಾಪುರ)
28. ಗಂಗಾಬಾಯಿ ಮಿರ್ಜಂಕರ್ (ಸಿರ್ಸಿ)
29. ಬಲ್ಯತಂಡ ಮುದ್ದಮ್ಮ (ವಿರಾಜಪೇಟೆ)
30. ಕುರ್ತಕೋಟೆ ಶಕುಂತಲ (ಬೆಳಗಾವಿ)
31. ರಮಾಬಾಯಿ ಯೋಲ್ಗಿ (ಬೆಳಗಾವಿ)
32. ರಾಜಮ್ಮ ತೀರ್ಥಶರ್ಮ (ಬೆಂಗಳೂರು)
33. ಸಿದ್ದಮ್ಮ (ಈಸೂರು)
34. ಪಾರ್ವತಮ್ಮ (ಈಸೂರು)
35. ಹಾಲಮ್ಮ (ಈಸೂರು)
36. ನಾಗರತ್ನಮ್ಮ ಹಿರೇಮಠ (ಚಿತ್ರದುರ್ಗ)
37. ಲಕ್ಷಮ್ಮ.ಎಂ.ಆರ್ (ಬೆಂಗಳೂರು)
38. ರತ್ನಮ್ಮ ಮಾಧವರಾವ್

ಗಾಂಧೀಯುಗದ ಸ್ವಾತಂತ್ರ್ಯ ಹೋರಾಟಗಾರ್ತಿಯರು

1920ರ ಸುಮಾರಿನಲ್ಲಿ ದೇಶದ ವಿವಿದ ಭಾಗಗಳಲ್ಲಿ ಹರಡಿದ ಸ್ವದೇಶಿ ಚಳವಳಿ ಕರ್ನಾಟಕದಲ್ಲೂ ವ್ಯಾಪಿಸಿ ಗಾಂಧಿ ಪ್ರಭಾವ ಆರಂಭವಾಯಿತು. ಭವಾನಿಬಾಯಿ ಕನಗೋಲ್, ಗಂಗಾಬಾಯಿ ಮಿರ್ಜಂಕರ್, ಉಮಾಬಾಯಿ ಕುಂದಾಪುರ ಮೊದಲಾದವರು ಈ ಚಳವಳಿಯಲ್ಲಿ ಭಾಗವಹಿಸಲಾರಂಭಿಸಿದರು. ನಂತರ ಅಸಹಕಾರ ಚಳವಳಿ, ಕಾನೂನುಭಂಗ ಚಳವಳಿಗಳಲ್ಲೂ ಇವರು ಪ್ರಮುಖ ಪಾತ್ರ ವಹಿಸಿದರು. ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಣಬಂದ ಹೋರಾಟಗಾರ್ತಿಯರು ಸುಶಿಕ್ಷಿತ ಮಧ್ಯಮವರ್ಗದ ಮನೆತನ-ದವರಾಗಿದ್ದರು. ಅವರಲ್ಲಿ ಕೆಲವರು ಹೆಸರಾಂತ ರಾಜಕೀಯ ಧುರೀಣರಿಗೆ ಸಂಬಂಧಿಸಿದವರು. ಇನ್ನುಳಿದವರು ಹಿಂದುಳಿದ ವರ್ಗದವರಾಗಿದ್ದರು. ಅವರಲ್ಲಿ ಕೆಲವರು ಇವರು.

ಸುಬ್ಬಮ್ಮನವರ ಕುಟುಂಬ

ಮಕ್ಕಳು ಇವರಲ್ಲಿ ಶ್ರೀ ಟಿ.ವಿಜಯಕುಮಾರ್‌ರವರು ಈಗ ಇಲ್ಲ ಶ್ರೀ ಟಿ.ಜಯಪ್ರಕಾಶ್‌ರವರು ಇನ್ಸಪೆಕ್ಟರ್ ಜನರಲ್ ಆಫ್ ಪೋಲಿಸ್ ಆಗಿ ಸೇವೆ ಸಲ್ಲಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಶ್ರೀಮತಿ ದೇವಕಿ ಮತ್ತು ಟಿ.ಶ್ರೀದೇವಿ ಎಂಬ ಇಬ್ಬರು ಹೆಣ್ಣುಮಕ್ಕಳು.

ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ಉದ್ದೇಶದಿಂದ 1950ರ ದಶಕದಲ್ಲಿ ತಲಿಹಳ್ಳ ಗ್ರಾಮದಿಂದ ಚಿಕ್ಕಮಗಳೂರು ಪಟ್ಟಣಕ್ಕೆ ಬಂದು ನೆಲೆಸಿದರು. ಈ ಎಲ್ಲಾ ಮಕ್ಕಳಿಗೆ ಪಟ್ಟಣದಲ್ಲಿ ಉತ್ತಮವಾದ ಶಿಕ್ಷಣ ದೊರೆಯಲು ಸಾಧ್ಯವಾಯಿತು.

ರಾಜಕೀಯ ರಂಗದಲ್ಲಿ ಗುರ್ತಿಸಿಕೊಂಡ ಸುಬ್ಬಮ್ಮನವರು

1945ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ (ಎಂ.ಆರ್.ಎ) ಮಹಿಳಾ ಮೀಸಲು ಸ್ಥಾನದಿಂದ ಆಯ್ಕೆಯಾದರು. ಬಹುಮತದಿಂದ ಆಯ್ಕೆಯಾಗಿ ಅಂದು ವಿಕ್ರಮ ಸಾಧಿಸಿದರು. ಕಾಲಕ್ರಮೇಣ ಜಿಲ್ಲೆಯ ವಿವಿಧ ಸಂಘಸಂಸ್ಥೆಗಳಲ್ಲಿ ಸುಬ್ಬಮ್ಮನವರು ಸೇವೆ ಸಲ್ಲಿಸಿದರು. 1945 ರಿಂದ 1957ರ ತನಕ ಮೈಸೂರು ಪ್ರಜಾಪ್ರತಿನಿಧಿ ಸಬಾಸದರಾಗಿ ನಂತರ ಶಾಸಕಿಯಾಗಿ ಆಯ್ಕೆಯಾಗುತ್ತಾ ಬಂದರು. ಆ ದಿನಗಳಲ್ಲಿ ಬೆಂಗಳೂರಿನ ವಿಧಾನ ಸೌಧದಲ್ಲಿ ನಡೆಯುತ್ತಿದ್ದ ವಿಧಾನಸಭಾ ಕಲಾಪಗಳಿಗೆ ಹೋಗಿಬರುವುದು ಕಷ್ಟದ ಕೆಲಸವಾಗಿತ್ತು. ತಮ್ಮೊಂದಿಗೆ ಬೆಂಗಳೂರಿಗೆ ಬರುವ ತಮ್ಮ ಅನುಯಾಯಿಗಳಿಗೂ ಬಸ್ ಚಾರ್ಜು ಅನ್ನು ತಾವೇ ನೀಡುವುದೇ ಅಲ್ಲದೆ ಅವರಿಗೆ ಊಟ ತಿಂಡಿಯ ಖರ್ಚನ್ನು ತಾವೇ ಭರಿಸುತ್ತಿದ್ದರು (ಇಂದು?)

ತಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ವಿದ್ಯುತ್ ದೀಪಗಳ ಸೌಕರ್ಯ, ಆಸ್ಪತ್ರೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪಿ.ಯು ಕಾಲೇಜು ಮತ್ತು ಪದವಿ ಕಾಲೇಜುಗಳು ಸ್ಥಾಪನೆಯಾಗಲು ಶ್ರಮಿಸಿದರು. ಸಂಬಂದಪಟ್ಟ ಅಧಿಕಾರಿಗಳ, ಮಂತ್ರಿಗಳ ಮನ ಒಲಿಸಿ ಕ್ಷೇತ್ರಾಭಿವೃದ್ಧಿ ಕಾರ್ಯ ಮಾಡುತ್ತಿದ್ದರು. 1957ರ ಚುನಾವಣೆ ಸ್ಪರ್ಧಿಸಲು ಕಾಂಗ್ರೆಸ್ ಸೀಟು ದೊರೆಯಲಿಲ್ಲ ಕಾಲಾನಂತರ ತಾವು ಪ್ರತಿನಿಧಿಸುತ್ತಿದ್ದ ಮೂಡಿಗೆರೆ ವಿಧಾನಸಭಾ ಕ್ಷೇತ್ರವನ್ನು ಮೀಸಲು ಕ್ಷೇತ್ರವನ್ನಾಗಿ ಪರಿವರ್ತಿಸಿದರು. ಶ್ರೀ ಕೆ.ಹೆಚ್. ರಂಗನಾಥ್‌ರವರು ಪಿ.ಎಸ್.ಪಿ ಪಕ್ಷದಿಂದ ಅಂದು ಆಯ್ಕೆಯಾಗಿದ್ದರು. 1962ರ ವಿಧಾನಸಭಾ ಚುನಾವಣೆಯಲ್ಲಿ ಚಿಕ್ಕಮಗಳೂರಿನಿಂದ ಸ್ಪರ್ಧಿಸಲು ಶ್ರೀಮತಿ ಸುಬ್ಬಮ್ಮನವರಿಗೆ ಕಾಂಗ್ರೆಸ್ ಪಕ್ಷವು ಟಿಕೆಟ್ ನೀಡಿತ್ತು. ಸುಬ್ಬಮ್ಮನವರು ಸುಲಭವಾಗಿ ಆಯ್ಕೆಯಾದರು.

ವಿಧಾನಸಭೆ ಕಲಾಪಗಳಲ್ಲಿ ಭಾಗವಹಿಸಿ ತಮ್ಮ ಕ್ಷೇತ್ರದ ಕುಂದು ಕೊರತೆಗಳೇ ಅಲ್ಲದೆ ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಚರ್ಚಿಸುತ್ತಿದ್ದರು. ಕಲಾಪಕ್ಕೆ ಹೋಗುವ ಮೊದಲು ಅಧ್ಯಯನ ಮಾಡಿಕೊಂಡು ಹೋಗಿ ಚರ್ಚಿಸುತ್ತಿದ್ದರು. ಹಾಸನ ಹಾಗೂ ಮಂಗಳೂರು ರೈಲು ಮಾರ್ಗಕ್ಕೆ ಕಡೂರು, ಮೂಡಿಗೆರೆ–ಸಕಲೇಶಪುರ ಮಾರ್ಗವಾಗಿ ತೆರಳಲು ಒತ್ತಾಯಿಸಿದ್ದು, ಮಲೆನಾಡು ಅಭಿವೃದ್ದಿ ಮಂಡಳಿ ಸ್ಥಾಪಿಸಿದ್ದು, ಚಿಕ್ಕಮಗಳೂರಿನಲ್ಲಿ ಸರ್ಕಾರಿ ಪದವಿ ಸ್ಥಾಪನೆಯಾದದ್ದು ಇವೇ ಮುಂತಾದವು ಗಮನಾರ್ಹವಾದ ಸಾಧನೆಗಳು.

ಶ್ರೀಮತಿ ಸುಬ್ಬಮ್ಮನವರು ಎಂದಿಗೂ ತನ್ನನ್ನು ಮಂಡಳಿಯ ಅಧ್ಯಕ್ಷೆಯನ್ನಾಗಿ ಮಾಡಿ, ಮಂತ್ರಿಯನ್ನಾಗಿ ಮಾಡಿ ಎಂದು ಯಾರನ್ನು ಒತ್ತಾಯಿಸುತ್ತಿರಲಿಲ್ಲ. ತಮಗೆ ಜನರು ಕೊಟ್ಟಿರುವ ಜವಾಬ್ದಾರಿಯನ್ನು ನೆರವೇರಿಸುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯ ಜನತೆ ಸುಬ್ಬಮ್ಮನವರಿಗೆ "ಮಹಿಳಾ ರತ್ನ" ಎಂಬ ಬಿರುದು ನೀಡಿ ಗೌರವಿಸಿದ್ದು ಅವರ ಬದುಕು ಸಾರ್ಥಕ ಎಂದೆನಿಸುತ್ತದೆ.

❋ ❋ ❋ ❋ ❋



ಎಂ.ಎಲ್. ಶ್ರೀಕಂಠೇಶಗೌಡರು

– ಕಾಂತರಾಜಪುರ ಸುರೇಶ್

ಎಂ. ಎಲ್. ಶ್ರೀಕಂಠೇಶಗೌಡರು ಮಂಡ್ಯಜಿಲ್ಲೆಯ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ 1852ರಲ್ಲಿ ಸುಭೇದಾರ್ ಬೈರೇಗೌಡರ ಎರಡನೇ ಮಗನಾಗಿ ಜನಿಸಿದರು. ದೇಶಹಳ್ಳಿ, ಶಿವಪುರ ರೈಲು ನಿಲ್ದಾಣದಿಂದ ಮೂರು ಮೈಲಿ ದೂರದಲ್ಲಿದೆ. ಶ್ರೀಕಂಠೇಶಗೌಡರ ವಂಶವೃಕ್ಷ ಹಕ್ಕಿಗೌಡ ಎಂಬುವರಿಂದ ಆರಂಭವಾಗುತ್ತದೆ. ನಾಗಮಂಗಲ ಭಾಗದಲ್ಲಿ ಭೀಕರ ಬರಗಾಲ ತೋರಿದಾಗ ಇವರ ಪೂರ್ವಿಕರು ಅಲ್ಲಿನ ಮಲ್ಲನಾಯಕನ ಹಳ್ಳಿಯಿಂದ ಮದ್ದೂರು ತಾಲ್ಲೂಕಿನ ದೇಶಹಳ್ಳಿಗೆ ವಲಸೆ ಬಂದರೆಂಬ ಅಭಿಪ್ರಾಯವಿದೆ. ಹಕ್ಕಿಗೌಡರು ದೇಶಹಳ್ಳಿಯಲ್ಲಿ ಆಸ್ತಿಕೊಂಡು, ಮನೆಕಟ್ಟಿಕೊಂಡು ಭದ್ರವಾಗಿ ನೆಲೆಯೂರಿದರು. ಈ ವಂಶದ ಮೂರನೇ ಪೀಳಿಗೆಯಲ್ಲಿ ಲಿಂಗೇಗೌಡ ಎಂಬುವರು ವಿದ್ಯಾವಂತರಾಗಿ ಸ್ವಸಾಮರ್ಥ್ಯದಿಂದ ಸುಭೇದಾರ ಪದವಿಗೇರಿದ್ದರು. ಲಿಂಗೇಗೌಡರಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಪುಟ್ಟೇಗೌಡ, ಬೈರೇಗೌಡ, ಅಣ್ಣೇಗೌಡ ಮತ್ತು ತಮ್ಮೇಗೌಡ. ಲಿಂಗೇಗೌಡರು ತಮ್ಮ ನಾಲ್ಕು ಜನ ಗಂಡು ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ ಕೊಡಿಸಿದರು. ಲಿಂಗೇಗೌಡರ ದಕ್ಷ ಹಾಗೂ ಪ್ರಾಮಾಣಿಕ ಆಡಳಿತವನ್ನು ಕಂಡ ಸರ್ಕಾರ ಈ ನಾಲ್ಕು ಮಂದಿಯನ್ನು ಅಮಲ್ದಾರರನ್ನಾಗಿ ನೇಮಿಸಿಕೊಂಡಿತು.

"ಶ್ರೀಕಂಠೇಶಗೌಡರು ತಮ್ಮ ಆರನೆಯ ವಯಸ್ಸಿನಲ್ಲಿಯೇ ತಾತ ಲಿಂಗೇಗೌಡರ ಹತ್ತಿರ ಬಂದರು. ಲಿಂಗೇಗೌಡರಿಗೆ ತಮ್ಮ ಪ್ರೀತಿಯ ತಾತ ಹಕ್ಕಿಗೌಡರನ್ನು ಹೋಲುತ್ತಿದ್ದ ಈ ಹುಡುಗನನ್ನು ಕಂಡರೆ ತುಂಬಾ ಅಕ್ಕರೆ" ಲಿಂಗೇಗೌಡರು ತಮ್ಮ ಅಧಿಕಾರಕ್ಕೆ ಸೇರಿದ ತಾಲ್ಲೂಕುಗಳ ಹಳ್ಳಿಗಳಿಗೆಲ್ಲಾ ಭೇಟಿಕೊಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಮೊಮ್ಮಗ ಶ್ರೀಕಂಠೇಶಗೌಡರನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು.

ಲಿಂಗೇಗೌಡರಿಗೆ ಯಕ್ಷಗಾನ ಬಯಲಾಟ ಆಡಿಸುತ್ತಿದ್ದರು. ಬಾಲಕ ಶ್ರೀಕಂಠೇಶಗೌಡರ ಮೇಲೆ ಈ ಜನಪದ ಕಲೆಗಳು ಅಪಾರ ಪರಿಣಾಮ ಬೀರಿದ್ದವು. ಬಯಲಾಟದ ಪಾತ್ರಗಳನ್ನು ನೋಡಿದ ಬಾಲಕನಿಗೆ ತಾನೂ ಹಾಗೆ ಪಾತ್ರ ಮಾಡಬೇಕೆಂಬ ಮನಸ್ಸಾಗುತ್ತಿತ್ತು ಬೇಸಿಗೆಯ ಕಾಲದಲ್ಲಿ ಎಲ್ಲರೂ ದೇಶಹಳ್ಳಿ ಸೇರುತ್ತಿದ್ದರು. ಸುಬೇದಾರ ತಂದೆ, ಅಮಲ್ದಾರರ ಮಕ್ಕಳು ಊರಿಗೆ ಬರುತ್ತಾರೆಂದರೆ ಸುತ್ತಮುತ್ತಲಿನ ಜನರಿಗೆಲ್ಲ ಸಂಭ್ರಮ. ಅಲ್ಲಿ ಯಕ್ಷಗಾನ, ಬಯಲಾಟ, ಕಾವ್ಯವಾಚನ ಇದ್ದೇ ಇರುತ್ತಿದ್ದವು. ಇವೆಲ್ಲವೂ ಎಳೆಯ ಶ್ರೀಕಂಠೇಶಗೌಡರ ಹೃದಯದಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಿತು.

ಶಿಕ್ಷಣ : ಕುಣಿಗಲ್‌ನಲ್ಲಿ ಲಿಂಗೇಗೌಡರು ತಮ್ಮ ಮೊಮ್ಮಕ್ಕಳಿಗೆ ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಕಲಿಸುವ ಏರ್ಪಾಡು ಮಾಡಿದ್ದರು. ನುರಿತ ಉಪಾಧ್ಯಾಯರನ್ನು ನೇಮಿಸಿಕೊಂಡಿದ್ದರು. ಶ್ರೀಕಂಠೇಶಗೌಡರು ಓದಿನಲ್ಲಿ ತುಂಬಾ ಚುರುಕಾಗಿದ್ದರು. ಅಧ್ಯಾಪಕರು ಹೇಳಿದ್ದನ್ನೆಲ್ಲಾ ಚೆನ್ನಾಗಿ ಗ್ರಹಿಸುತ್ತಿದ್ದರು. ಬಾಲಕನಿಗೆ ಕನ್ನಡದ ಬಗ್ಗೆ ವಿಶೇಷ ಆಸಕ್ತಿ. ತಾತನ ಗ್ರಂಥ ಸಂಗ್ರಹದಿಂದ ಕುಮಾರವ್ಯಾಸ ಭಾರತ, ಜೈಮಿನಿಭಾರತ ಮುಂತಾದುವನ್ನು ಓದಿದರು. ಜೊತೆಗೆ ಇಂಗ್ಲೀಷ್ ಮತ್ತು ಸಂಸ್ಕೃತದಲ್ಲಿಯೂ ಬಾಲಕ ಶ್ರೀಕಂಠೇಶಗೌಡರು ಹಿಂದೆ ಬೀಳಲಿಲ್ಲ.

ಆ ಕಾಲಕ್ಕಾಗಲೇ ಇಂಗ್ಲೀಷ್ ಶಿಕ್ಷಣ ಮತ್ತು ಶಾಲೆಗಳು ದೇಶದಾದ್ಯಂತ ಆರಂಭವಾಗಿ ನಡೆಯುತ್ತಿದ್ದರು. ಶ್ರೀಕಂಠೇಶಗೌಡರು ಕುಣಿಗಲ್ಲಿನ ಮಾಧ್ಯಮಿಕ ಶಾಲೆಯನ್ನು ಸೇರಿದರು. ಶ್ರೀಕಂಠೇಶಗೌಡರು ತಾತ ಸುಭೇದಾರ್ ಲಿಂಗೇಗೌಡರ ಆಶ್ರಯದಲ್ಲಿ ಬೆಳೆದಿದ್ದರಿಂದ ತಂದೆಯ ಹೆಸರಿರಬೇಕಾದ ಕಡೆ ಲಿಂಗೇಗೌಡರ ಹೆಸರೇ ನಮೂದಿತವಾಯಿತು. ಮನೆಯಲ್ಲಿ ಒಳ್ಳೆಯ ತರಬೇತಿ ದೊರಕಿದ್ದರಿಂದ ಅವರು ತರಗತಿಯಲ್ಲಿ ಮೊದಲನೆಯವರಾಗಿರುತ್ತಿದ್ದರು. ನಾಲ್ಕು ವರ್ಷಗಳ ಕಾಲ ಕುಣಿಗಲ್ಲಿನಲ್ಲಿ ಓದಿದ ಗೌಡರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದುದು ಲಿಂಗೇಗೌಡರಿಗೆ ತುಂಬಾ ಸಂತೋಷ ತಂದಿತು. ರಜೆ ಬಂದೊಡನೆಯೇ ಶ್ರೀಕಂಠೇಶಗೌಡರು ದೇಶಹಳ್ಳಿಗೆ ಓಡಿ ಬರುತ್ತಿದ್ದರು. ತಾತ ಮೊಮ್ಮಗ ಸಾಹಿತ್ಯದ ಬಗ್ಗೆ ಚರ್ಚಿಸುತ್ತಿದ್ದರು. ಪಂಡಿತರು, ಕಲಾವಿದರು ಮೊದಲಾದವರೆಲ್ಲಾ ತಾತನೊಂದಿಗೆ ಮಾತನಾಡುತ್ತಿದ್ದಾಗ ಇವರು ಇರುತ್ತಿದ್ದರು. ಲಿಂಗೇಗೌಡರು ಕಾರ್ಯನಿಮಿತ್ತ ಇಂಗ್ಲೀಷ್ ಅಧಿಕಾರಿಗಳನ್ನು ನೋಡಲು ಹೋಗುವಾಗ ಮೊಮ್ಮಗನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಚಿಕ್ಕಂದಿನಿಂದಲೂ ನಾನಾ ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶವಾಯಿತು. ಯಾವುದಾದರೂ ಗ್ರಂಥವನ್ನು ಓದಿದಾಗ ತಾನು ಇಂಥ ಗ್ರಂಥವೊಂದನ್ನು ಬರೆಯಬೇಕೆಂಬ ಆಸೆ ಹೆಚ್ಚಾಗುತ್ತಿತ್ತು. ಅದಕ್ಕೆ ಬೇಕಾದ ವಾತಾವರಣ, ತಾತ ಲಿಂಗೇಗೌಡರ ಪ್ರೋತ್ಸಾಹವು ಜೊತೆಗಿತ್ತು.

ಲಿಂಗೇಗೌಡರು ಅಧಿಕಾರದಲ್ಲಿದ್ದುದರಿಂದ ಆಂಗ್ಲರ ಮಕ್ಕಳಿಗೆ ಶಿಕ್ಷಣ ನೀಡುವಂಥ ಯುರೋಪಿಯನ್ ಪ್ರೌಢಶಾಲೆ ಯೊಂದರಲ್ಲಿಯೇ ಶ್ರೀಕಂಠೇಶಗೌಡರಿಗೆ ಪ್ರವೇಶ ದೊರೆಯಿತು. ಆದರೆ ಅಲ್ಲಿಯ ವಾತಾವರಣ. ತಮ್ಮ ಧರ್ಮವೇ ಮೇಲು ಎಂಬ ಇಂಗ್ಲೀಷರ ಅಹಂಕಾರ, ಶ್ರೀಕಂಠೇಶಗೌಡರು ಮನಸ್ಸಿನಲ್ಲಿ ಕೋಪವನ್ನು ತರಿಸಿದವು ಆತ್ಮಾಭಿಮಾನಿಯಾದ ಶ್ರೀಕಂಠೇಶಗೌಡರು ಈ ವಿಚಾರವಾಗಿ ತಾತನಿಗೆ ಪತ್ರದ ಮೂಲಕ ಬರೆದು ತಿಳಿಸಿದರು. ತಾತನ ಮಾರ್ಗದರ್ಶನದಲ್ಲಿ ಯೂರೋಪು ಮಾದರಿಯ ಪ್ರೌಢಶಾಲೆಯಿಂದ ಭಾರತೀಯ ಮಾದರಿಗೆ ಬದಲಾಯಿಸಿಕೊಂಡರು. ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶ್ರೀಕಂಠೇಶಗೌಡರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದರು. ಅಷ್ಟು ಹೊತ್ತಿಗೆ ಈ ಪ್ರತಿಭಾವಂತ ವಿದ್ಯಾರ್ಥಿಯ ಹೆಸರು ಸೆಂಟ್ರಲ್ ಕಾಲೇಜಿನ ಜಾನ್ ಕುಕ್ ಅವರ ಕಿವಿಗೂ ಬಿತ್ತು. ಇದರಿಂದ ಅವರ ಜ್ಞಾನಾರ್ಜನೆಗೆ ತಕ್ಕ ಪ್ರೋತ್ಸಾಹ ದೊರೆಯಿತು. ಸೆಂಟ್ರಲ್ ಕಾಲೇಜಿನಲ್ಲಿ ಇವರು ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದರು. ಕನ್ನಡ ವ್ಯಾಕರಣ ಮತ್ತು ಛಂದಸ್ಸುಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಇಂಗ್ಲೀಷ್‌ನಲ್ಲಿರುವ ಎಲ್ಲಾ ಸಾಹಿತ್ಯ ಪ್ರಕಾರಗಳೂ ಕನ್ನಡದಲ್ಲಿ ಏಕಿರಬಾರದು? ಎಂಬ ಪ್ರಶ್ನೆ ಅವರನ್ನು ಸದಾ ಕಾಡುತ್ತಿತ್ತು. ತಮ್ಮ ಇಪ್ಪತ್ತನಾಲ್ಕನೇ ವಯಸ್ಸಿನಲ್ಲಿ ಶ್ರೀಕಂಠೇಶಗೌಡರು ಬಿ.ಎ. ಪದವೀಧರರಾದರು. ತಮ್ಮ ತಾತ ಲಿಂಗೇಗೌಡರಿಗೆ ಮೊಮ್ಮಗ ನ್ಯಾಯಾಧೀಶನೋ, ಕೌನ್ಸಿಲರೋ ಆಗಬೇಕೆಂಬ ಆಸೆಯಿತ್ತು. ಕನ್ನಡ ನಾಡಿನಲ್ಲಿ ಆ ಅನುಕೂಲವಿರಲಿಲ್ಲ. ದೂರದ ಮದರಾಸಿಗೆ ಹೋಗಬೇಕಾಗಿತ್ತು. ಲಿಂಗೇಗೌಡರು ಮೊಮ್ಮಗನಿಗೆ ಧೈರ್ಯ ಹೇಳಿ ಮದರಾಸಿಗೆ ಕಳುಹಿಸಿದರು. ಶ್ರೀಕಂಠೇಶಗೌಡರು ಎರಡು ವರ್ಷಗಳ ಕಾಲ ಮದರಾಸಿನಲ್ಲಿದ್ದು ತಮ್ಮ ಬಿ.ಎಲ್. ಪದವಿಯನ್ನು ಪಡೆದರು. ಈ ಸಂದರ್ಭದಲ್ಲಿ ತಾತ ಲಿಂಗೇಗೌಡರು ತೀರಿಕೊಂಡರು. ಇದು ಅವರ ಮನಸ್ಸಿಗೆ ಅಪಾರ ದುಃಖವನ್ನುಂಟುಮಾಡಿತು.

ಕೌಟುಂಬಿಕ ಜೀವನ : ಶ್ರೀಕಂಠೇಶಗೌಡರು 1885ರಲ್ಲಿ ಸ್ವತಂತ್ರವಾಗಿ ವಕೀಲಿ ವೃತ್ತಿಯನ್ನು ಪ್ರಾರಂಭಿಸುವ ಹೊತ್ತಿಗೆ 1880 ರಲ್ಲಿ ಸುಬ್ಬಮ್ಮನವರನ್ನು ವಿವಾಹವಾಗಿದ್ದರು. ಇವರು ಶ್ರೀಕಂಠೇಶಗೌಡರ ಅಕ್ಕನ ಮಗಳು. ಆದರ್ಶ ಸತಿಪತಿಗಳಾಗಿದ್ದ ಇವರಿಗೆ ಒಂದು ಹೆಣ್ಣು, ಎರಡು ಗಂಡು ಮಕ್ಕಳಿದ್ದರು. ಗೌಡರ ಸಂಸಾರ ನೆಮ್ಮದಿಯಿಂದ ಸಾಗುತ್ತಿತ್ತು. ಅದರೆ ಸುಬ್ಬಮ್ಮನವರು ದೀರ್ಘಬಾಳ್ವೆಯನ್ನು ಪಡೆದು ಬಂದಿರಲಿಲ್ಲ. 1896ರಲ್ಲಿ ಅಕಾಲ ಮೃತ್ಯುವಿಗೆ ತುತ್ತಾದರು. ಈ ಸಂದರ್ಭದಲ್ಲಿ ಗೌಡರಿಗೆ ನ್ಯಾಯಾಧೀಶ ಪದವಿ ಸಿಕ್ಕಿತು. ಮೈಸೂರಿನಲ್ಲಿದ್ದಾಗ ಪತ್ನಿಯ ಸಾವು

ಸದಾ ಕಾಡುತ್ತಿತ್ತು. ಮಕ್ಕಳನ್ನು ತಮ್ಮ ತಾಯಿಯ ಬಳಿ ಬಿಟ್ಟು ಹಾಸನಕ್ಕೆ ಹೊರಟರು. ಮಕ್ಕಳು ಅಜ್ಜಿಯ ಆಸರೆಯಲ್ಲಿ ತಾಯಿ ಇಲ್ಲದ ನೋವನ್ನು ಸ್ವಲ್ಪಮಟ್ಟಿಗೆ ಮರೆತವು. ಆದರೆ ಗೌಡರಿಗೆ ಸಾಹಿತ್ಯ ಸ್ಫೂರ್ತಿಯಾಗಿದ್ದ ಪತ್ನಿಯ ಸಾವು ತುಂಬಲಾರದ ನಷ್ಟವಾಯಿತು.

ಮನೆಯ ಹಿರಿಯರು, ಸ್ನೇಹಿತರು ಗೌಡರನ್ನು ಮತ್ತೊಂದು ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು. ತಮ್ಮ ಮಕ್ಕಳನ್ನು ತಾವು ನೋಡಿಕೊಳ್ಳಲಾಗದ ಸ್ಥಿತಿಯಲ್ಲಿ, ಮಕ್ಕಳಿಗೆ ತಾಯಿಯೊಬ್ಬಳು ಅವಶ್ಯಕತೆಯಿರುವುದು ಶ್ರೀಕಂಠೇಶಗೌಡರ ಮನಸ್ಸಿನಲ್ಲಿ ಮೂಡಿದವು. ಈ ಸಂದರ್ಭದಲ್ಲಿ ನಂಜನಗೂಡಿನ ಹೆಸರಾಂತ ಮನೆತನದವರಾದ ಕರೋಹಟ್ಟಿ ಸಿದ್ದಪ್ಪನವರ ಮಗಳು ಭಗೀರಥಮ್ಮ ಎಂಬ ಹೆಣ್ಣುಮಗಳು ಶ್ರೀಕಂಠೇಶಗೌಡರನ್ನು ಮದುವೆಯಾಗಲು ಹಠ ಹಿಡಿದಿರುವುದಾಗಿ ತಿಳಿದು ಬಂದಿತು. ಈ ಸುದ್ದಿಯು ಶ್ರೀಕಂಠೇಶಗೌಡರಿಗೂ ತಿಳಿದು ಆಶ್ಚರ್ಯವುಂಟಾಯಿತು. ಅನಂತರ ಶ್ರೀಕಂಠೇಶಗೌಡರು ಮದುವೆಗೆ ಒಪ್ಪಬೇಕಾಯಿತು. ಸುಬ್ಬಮ್ಮನವರ ಸ್ಥಾನವನ್ನು ಭಗೀರಥಮ್ಮ ಎಲ್ಲಾ ವಿಧದಲ್ಲಿಯೂ ತುಂಬಿದರು. ಶ್ರೀಕಂಠೇಶಗೌಡರು ಬೆಂಗಳೂರಿಗೆ ವರ್ಗವಾದ ಮೇಲೆ ಬಸವನಗುಡಿಯಲ್ಲಿ ಮನೆಯೊಂದನ್ನು ಕಟ್ಟಿಸಿದರು. 1910ರಲ್ಲಿ ನಿವೃತ್ತರಾದ ಮೇಲೆ ವಿಶ್ರಾಂತಿ ಜೀವನ ಬೆಂಗಳೂರಿನಲ್ಲಿಯೇ ನಡೆಯಿತು. 1926 ನವೆಂಬರ್ 26ರಂದು ಟೈಫಾಯಿಡ್ ಖಾಯಿಲೆಗೆ ತುತ್ತಾಗಿ ತಮ್ಮ 74ನೇ ವಯಸ್ಸಿನಲ್ಲಿ (1852–1926) ಕೊನೆಯುಸಿರೆಳೆದರು.

ವೃತ್ತಿ : ಮದರಾಸಿನಿಂದ ಬಿ.ಎಲ್. ಪದವಿಯನ್ನು ಪಡೆದು ಬಂದ ಶ್ರೀಕಂಠೇಶಗೌಡರು ಬೆಂಗಳೂರಿನ ಪ್ರಸಿದ್ಧ ವಕೀಲರೊಬ್ಬರಲ್ಲಿ ಕೆಲವು ಕಾಲ ಕಿರಿಯ ವಕೀಲರಾಗಿ ಕೆಲಸ ಮಾಡಿದರು. ಆನಂತರ 1885ರಲ್ಲಿ ಮೈಸೂರಿಗೆ ತೆರಳಿ ಸ್ವತಂತ್ರವಾಗಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಆನಂತರ ನ್ಯಾಯಾಧೀಶರಾಗಿ ಹಾಸನ, ಹೊಳೆನರಸೀಪುರ, ಶಿವಮೊಗ್ಗ, ನಂಜನಗೂಡು, ಬೆಂಗಳೂರು, ಕೋಲಾರ, ಮಧುಗಿರಿ ಮುಂತಾದ ಸ್ಥಳಗಳಲ್ಲಿ ಕಾರ್ಯನಿರ್ವಹಿಸಿದರು.

ಶ್ರೀಕಂಠೇಶಗೌಡರು ಒಂದು ಮೊಕದ್ದಮೆಯ ಮೇಲೆ ತೀರ್ಪು ನೀಡಿದರೆಂದರೆ ಅದರ ಮೇಲೆ ಅಪೀಲು ಹೋಗಲೂ ಸಾಧ್ಯವಾಗುತ್ತಿರಲಿಲ್ಲವಂತೆ. ಹಣ ಮತ್ತು ಶಿಫಾರಸ್ಸುಗಳು ಅವರ ಹತ್ತಿರ ಸುಳಿಯುವಂತಿರಲಿಲ್ಲ. ಇದರಿಂದಾಗಿ ಕೆಲವು ಜನ ಮಧ್ಯವರ್ತಿಗಳಿಗೆ ಬರುತ್ತಿದ್ದ ಆದಾಯ ನಿಂತುಹೋಗಿತ್ತು, ಆಗ ಶ್ರೀಕಂಠೇಶಗೌಡರ ಮೇಲೆ ಸೇಡು ತೀರಿಸಿಕೊಳ್ಳಲು ದಾರಿ ಹುಡುಕುತ್ತಿದ್ದರು.

ಶ್ರೀಕಂಠೇಶಗೌಡರಲ್ಲಿ ಒಂದು ಅಭ್ಯಾಸವಿತ್ತು. ತಾವು ತೆಗೆದುಕೊಂಡ ಎಲ್ಲಾ ಮೊಕದ್ದಮೆಗಳ ತೀರ್ಪುಗಳನ್ನು ಒಮ್ಮೆಗೆ ಕುಳಿತು ಬರೆದುಬಿಡುತ್ತಿದ್ದರು. ಹೀಗಾಗಿ ನಂಜನಗೂಡಿನ ಕೋರ್ಟಿನಲ್ಲಿ ಹತ್ತೊಂಬತ್ತು ಮೊಕದ್ದಮೆಗಳ ತೀರ್ಪು ಬರೆಯಬೇಕಾಗಿತ್ತು. ಅವರ ಮೇಲೆ ಮೇಲಧಿಕಾರಿಗಳಿಗೆ ದೂರು ಹೇಳಲು ಕಾಯುತ್ತಿದ್ದವರಿಗೆ ಇದೊಂದು ಒಳ್ಳೆಯ ಅವಕಾಶವಾಯಿತು. ನ್ಯಾಯಾಧೀಶರು ಸದಾ ನಾಟಕ ಸಂಗೀತದಲ್ಲಿ ತಲ್ಲೀನರಾಗಿದ್ದಾರೆ. ಕೋರ್ಟಿನ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಹತ್ತೊಂಬತ್ತು ತೀರ್ಪುಗಳು ಬರೆಯದೆ ಹಾಗೆ ಕುಳಿತಿವೆ ಎಂಬುದಾಗಿ ಮುಖ್ಯ ನ್ಯಾಯಾಧೀಶ ಮಿಲ್ಲರ್ ಅವರಿಗೆ ದೂರು ಹೋಯಿತು. ಮಿಲ್ಲರ್ ಅನಿರೀಕ್ಷಿತ ಭೇಟಿಗೆ ನಿರ್ಧರಿಸಿದರು. ಶ್ರೀಕಂಠೇಶಗೌಡರ ಮಿತ್ರರೊಬ್ಬರಿಗೆ ಮಿಲ್ಲರ್ ಅವರ ಅನಿರೀಕ್ಷಿತ ಭೇಟಿಯ ವಿಷಯ ತಿಳಿಯಿತು. ಕೂಡಲೆ ಅವರಿಗೆ ಈ ವಿಷಯವನ್ನು ತಂತಿಯ ಮೂಲಕ ತಿಳಿಸಿದರು. ತಮ್ಮ ಬೆನ್ನಹಿಂದೆ ನಡೆದಿದ್ದ ವಿಚಾರ ಶ್ರೀಕಂಠೇಶಗೌಡರಿಗೆ ಆಶ್ಚರ್ಯವನ್ನುಂಟುಮಾಡಿತು. ಆಗ ರಾತ್ರಿ ಏಳು ಗಂಟೆಗೆ ಊಟ ಮಾಡಿ ಶ್ರೀಕಂಠೇಶಗೌಡರು ಕೆಲವು ಮೇಣದ ಬತ್ತಿಗಳನ್ನು ತೆಗೆದುಕೊಂಡು ನ್ಯಾಯಾಲಯದಲ್ಲಿ ತಮ್ಮ ಕೊಠಡಿಯಲ್ಲಿ ಹೋಗಿ ಕುಳಿತರು. ಬೆಳಗಿನ ಜಾವ ಐದು ಗಂಟೆಯ ಹೊತ್ತಿಗೆ ಆ ಹತ್ತೊಂಬತ್ತು ತೀರ್ಪುಗಳನ್ನು ಬರೆದು ಸೇವಕನನ್ನು ಏಳಿಸಿ ಮನೆಗೆ ಬಂದರು.

ಹಿಂದಿನ ದಿನ ಬೆಂಗಳೂರಿನಿಂದ ಹೊರಟಿದ್ದ ಮುಖ್ಯ ನ್ಯಾಯಾಧೀಶರು ಹನ್ನೊಂದು ಗಂಟೆಯ ಹೊತ್ತಿಗೆ ನಂಜನಗೂಡನ್ನು ತಲುಪಿದರು. ಶ್ರೀಕಂಠೇಶಗೌಡರು ಎಂದಿನಂತೆ ಹನ್ನೊಂದು ಗಂಟೆಗೆ ನ್ಯಾಯಾಲಯಕ್ಕೆ ಬಂದರು. ಅವರ ವಿರೋಧಿಗಳು 'ಇನ್ನೇನು ಇವರ ಕಥೆ ಮುಗಿಯಿತು' ಎಂದುಕೊಂಡರು. ಮುಖ್ಯ ನ್ಯಾಯಾಧೀಶರು ಎಲ್ಲವನ್ನು ಪರಿಶೀಲಿಸಿದರು ಎಲ್ಲವೂ ಸರಿಯಾಗಿದೆ. ಯಾರು ಈ ದೂರು ಕೊಟ್ಟವರು? ಎಂದರು. ಅದಕ್ಕೆ ಶ್ರೀಕಂಠೇಶಗೌಡರು ಯಾರೋ ತಿಳಿಯದೆ ಮಾಡಿದ್ದಾರೆ ಹೋಗಲಿ ಬಿಡಿ ಎಂದರು. ಮುಖ್ಯ ನ್ಯಾಯಾಧೀಶರು ಶ್ರೀಕಂಠೇಶಗೌಡರ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದರು.

ವ್ಯಕ್ತಿತ್ವ : ಶ್ರೀಕಂಠೇಶಗೌಡರು ತಾತ ಲಿಂಗೇಗೌಡರ ಜೊತೆಯಲ್ಲಿ ಮನೆದೇವರು ಆದಿಚುಂಚನಗಿರಿಯ ಭೈರವನಿಗೆ ಪೂಜೆ ಸಲ್ಲಿಸುತ್ತಿದ್ದರು. ಮನೆಗೆ ನೆಂಟರಿಷ್ಟರು ಬಂದರೇ ಅವರೇ ವಿಶೇಷ ಅಡುಗೆ ಮಾಡುತ್ತಿದ್ದರು. ಚುಟ್ಟಾಸೇದುವ ಅಭ್ಯಾಸವಿತ್ತು. ಅಹಂಕಾರದ ಭಾವಗಳು ಇರಲಿಲ್ಲ.

ಶ್ರೀಕಂಠೇಶಗೌಡರು ವೃತ್ತಿಯಲ್ಲಿ ಪ್ರಾಮಾಣಿಕರೂ, ಕಾರ್ಯನಿರ್ವಹಣೆಯಲ್ಲಿ ದಕ್ಷರೂ ಆಗಿದ್ದರು. ಅವರ ಸ್ಮೃತಿಶಕ್ತಿ ಅದ್ಭುತವಾಗಿತ್ತು. ಇದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಶ್ರೀಕಂಠೇಶಗೌಡರು ಮಧುಗಿರಿಯಲ್ಲಿದ್ದಾಗ ಊರಿಗೆ ಪ್ಲೇಗು ಬಂದ ಪರಿಣಾಮ ಜನರೆಲ್ಲಾ ಊರ ಹೊರಗೆ ಶೆಡ್ಡುಹಾಕಿ ವಾಸಿಸತೊಡಗಿದರು. ನ್ಯಾಯಾಧೀಶರು ಮತ್ತು ನ್ಯಾಯಾಲಯವೂ ಊರ ಹೊರಗೆ ಶೆಡ್ಡಿನಲ್ಲಿ ಇರಬೇಕಾಗಿತ್ತು. ಆಗ ಕೊಲೆಯ ಮೊಕದ್ದಮೆ ನಡೆಯುತ್ತಿತ್ತು. ಅದರಲ್ಲಿ ಭಾಗಿಯಾಗಿದ್ದ ಹಣವಂತನೊಬ್ಬ ಶ್ರೀಕಂಠೇಶಗೌಡರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿದ್ದ ಈ ಕೊಲೆಯ ಮೊಕದ್ದಮೆಗೆ ಸಂಬಂಧಿಸಿದ ಕಾಗದ ಪತ್ರಗಳೆಲ್ಲವನ್ನು ಶ್ರೀಕಂಠೇಶಗೌಡರು ತಮ್ಮ ಗುಡಿಸಿಲಿನಲ್ಲಿ ಇಟ್ಟುಕೊಂಡಿದ್ದರು. ಒಂದು ರಾತ್ರಿ ಅವರ ಗುಡಿಸಿಲಿಗೆ ಆ ಹಣವಂತನ ಕಡೆಯವರು ಬೆಂಕಿಹಾಕಿ, ಎಲ್ಲಾ ಕಾಗದ ಪತ್ರಗಳನ್ನು ಸುಟ್ಟುಹಾಕಿದರು. ನ್ಯಾಯಾಧೀಶರು ಲಂಚಪಡೆದು ತಮ್ಮ ಗುಡಿಸಲಿಗೆ ಬೆಂಕಿ ಹಾಕಿ ಕಾಗದ ಪತ್ರಗಳನ್ನು ಸುಟ್ಟುಹಾಕಿದ್ದಾರೆಂದು ಸರ್ಕಾರಕ್ಕೆ ದೂರು ಹೋಯಿತು. ಶ್ರೀಕಂಠೇಶಗೌಡರು ಹೆದರಲಿಲ್ಲ, ತಮ್ಮ ಅಸಾಧಾರಣ ನೆನಪಿನಿಂದ ಎಲ್ಲವನ್ನು ಮೊದಲಿನಂತೆಯೇ ಬರೆದಿಟ್ಟರು. ಈ ಘಟನೆಯ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿದರು. ತಪ್ಪಿತಸ್ಥರಿಗೆ ಶಿಕ್ಷೆಯಾಯಿತು.

ಶ್ರೀಕಂಠೇಶಗೌಡರಿಗೆ ಕೆಲಸದ ಬಗ್ಗೆ ಗೌರವದ ಭಾವನೆಯಿತ್ತು. ಕೆಲಸಕ್ಕಾಗಿ ಬೇರೆಯವರನ್ನು ಗೋಗರೆದವರಲ್ಲ. ಒಮ್ಮೆ ಅವರು ಕೋಲಾರದಲ್ಲಿದ್ದಾಗ ಗಣಪತಿಯ ಉತ್ಸವಕ್ಕಾಗಿ ಮಂಟಪ ಕಟ್ಟಬೇಕಾಗಿದ್ದವನು ಬರಲಿಲ್ಲ. ತಾವೇ ಹಗಲು ರಾತ್ರಿ ಶ್ರಮವಹಿಸಿ ಕಲಾತ್ಮಕವಾದ ಮಂಟಪವೊಂದನ್ನು ತಯಾರಿಸಿದರು. ಗಣಪತಿ ವಿಸರ್ಜನೆಯ ಬಳಿಕ ತಮ್ಮ ಮನೆಯಲ್ಲಿಯೇ ಮಂಟಪವ-ನ್ನಿರಿಸಿಕೊಂಡರು. ನಂತರ ಇವರ ಮನೆಗೆ ಬಂದ ಮುಸಲ್ಮಾನ ಹಿರಿಯರೊಬ್ಬರು ಅದನ್ನು ಕೇಳಿದರು. ಗೌಡರು ಸಂತೋಷದಿಂದ ತೆಗೆದುಕೊಂಡು ಹೋಗಿ ಎಂದರು. ಅನೇಕರು ಇದನ್ನು ಟೀಕಿಸಿದರು. ಗೌಡರು ದೇವರಿಗೆ ಜಾತಿ ಮತಗಳಿಲ್ಲ ಎಂದು ಹೇಳಿದರು. ಅವರು ಮನೆಯಲ್ಲಿ ಅಡುಗೆ ಮಾಡಲು ಬ್ರಾಹ್ಮಣನೊಬ್ಬನನ್ನು ನೇಮಿಸಿಕೊಂಡಿದ್ದರು. ಮನೆಗೆಲಸಕ್ಕಾಗಿ ಹರಿಜನ, ಟೀ ತಂದುಕೊಂಡು ಮುಸಲ್ಮಾನನನ್ನು ತಮ್ಮ ಮನೆಯಲ್ಲಿರಿಸಿಕೊಂಡಿದ್ದರು. ಇದು ಅವರ ಸರ್ವಧರ್ಮ ಸಮನ್ವಯವನ್ನು ಸಾರುತ್ತದೆ.

ಶ್ರೀಕಂಠೇಶಗೌಡರ ಕೃತಿಗಳಲ್ಲಿ ಹಾಸ್ಯದ ಲೇಪನವಿದ್ದರೂ ತುಸು ಮುಂಗೋಪಿ, ಕಟುಭಾಷೆಯುವರಾಗಿದ್ದರೆಂದು ಡಿ.ವಿ.ಜಿ. 'ಸಾಹಿತ್ಯೋಪಾಸಕರು' ಕೃತಿಯಲ್ಲಿ ತಿಳಿಸಿದ್ದಾರೆ. ಆದರೆ ಶ್ರೀಕಂಠೇಶಗೌಡರ ಕೃತಿಗಳನ್ನು ಅಭ್ಯಾಸಮಾಡಿದ

ಡಿ.ವಿ.ಜಿ.ಯವರಿಗೆ ಲೇಖಕರ ಬಗ್ಗೆ ಅಭಿಮಾನ ಮೂಡುತ್ತದೆ. ಕಂದುಬಣ್ಣದ, ಎತ್ತರದ ನಿಲುವಿನ ಗೌಡರನ್ನು ನೋಡಿದವರು ಹತ್ತಿರ ಬರಲು ಅಂಜುತ್ತಿದ್ದ ರೆಂಬ ಅಭಿಪ್ರಾಯವಿದೆ. ಅವರು ಸ್ವಭಾವತಃ ಮಿತಭಾಷಿಯಾಗಿದ್ದರು. ಸ್ತ್ರೀಯರ ಬಗ್ಗೆ ವಿಶೇಷ ಕಾಳಜಿಯಿತ್ತು. ಮಹಿಳಾ ಶಿಕ್ಷಣದ ಬಗ್ಗೆ ಒತ್ತು ನೀಡುತ್ತಿದ್ದರು. ಭಾನುವಾರ ಬಂದರೆ ತಮ್ಮ ಬಸವನಗುಡಿಯ ಮನೆಯಲ್ಲಿ ಓದುತ್ತಿದ್ದ ತಮ್ಮ ಅಣ್ಣತಮ್ಮಂದಿರ ಮಕ್ಕಳಿಗೆ ಒಂದೊಂದು ರೂಪಾಯಿ ಖರ್ಚಿಗೆ ಕೊಡುತ್ತಿದ್ದರು.

ಕನ್ನಡ ಪ್ರೀತಿ

ಶ್ರೀಕಂಠೇಶಗೌಡರ ಕಾಲದಲ್ಲಿ ಮೈಸೂರಿನ ವಾತಾವರಣದಲ್ಲಿ ಕನ್ನಡಕ್ಕೆ ಪ್ರೋತ್ಸಾಹವೇ ಇರಲಿಲ್ಲ. ಅಂದು ರಾಜ್ಯವು ಮಹಾರಾಜರ ಕೈತಪ್ಪಿ ರೆಸಿಡೆಂಟರ ಕೈಗೆ ಹೋಗಿದ್ದ ಸಮಯ. ಆಂಗ್ಲರ ಪ್ರತ್ಯಕ್ಷ ಆಳ್ವಿಕೆಯಲ್ಲಿದ್ದುದರಿಂದ ಸ್ವಾಭಾವಿಕವಾಗಿ ದೇಶ ಭಾಷೆಗಳು ತಿರಸ್ಕಾರಕ್ಕೆ ಈಡಾಗಿದ್ದವು. ಇಂಗ್ಲಿಷ್ ಭಾಷೆಯ ಲಾಭವನ್ನು ಕನ್ನಡಿಗರಿಗಾಗಿ ಒದಗಿಸಿಕೊಡಬೇಕೆಂದು ಶ್ರೀಕಂಠೇಶಗೌಡರು ಆಶಿಸಿದರು. ಅವರಿಗೆ ಮಾತೃಭಾಷೆಯ ಸೊಬಗು, ಶಕ್ತಿಯ ಅರಿವು ಚೆನ್ನಾಗಿತ್ತು. ಹಳ್ಳಿಗಳಲ್ಲಿ ಅವಿದ್ಯಾವಂತರೇ ಹೆಚ್ಚು ಇರುವ ಈ ದೇಶದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿಯೇ ಶಿಕ್ಷಣ, ಆಡಳಿತ ಎಲ್ಲವು ನಡೆಯಬೇಕೆಂಬುದು ಶ್ರೀಕಂಠೇಶಗೌಡರ ದೃಢವಾದ ಮತ. ಶ್ರೀಕಂಠೇಶಗೌಡರು "ನಮಗೆ ಕನ್ನಡದಿಂದಲೇ ಮುಕ್ತಿ" ಎಂದು ಘೋಷಿಸಿದರು. ಹಲವರು "ಸೋಜಿಗವೆ ಗೌಡ ಕಬ್ಬವ ಪೇಳೆ! ಎಂದರು. ಆದರೆ ಗೌಡರು" ಕರ್ನಾಟಕದೊಳ್ ವಾಣಿಯೆ ರಾಣಿಯು ಸೋಜಿಗವೇ ಕಬ್ಬವ ಪೇಳೆ ಗೌಡಂ? ಎಂದು ಉತ್ತರಿಸಿದರು. ಕರ್ನಾಟಕದಲ್ಲಿ ಕನ್ನಡ ಸರಸ್ವತಿಯು ರಾಣಿಯಾಗಿರುವಾಗ ಒಬ್ಬ ಗೌಡನೂ ಕಾವ್ಯ ಬರೆಯಬಲ್ಲ ಎಂದರು.

ಇಂಗ್ಲೀಷ್‌ನಿಂದ ಕನ್ನಡಕ್ಕೆ ನಾಟಕ, ಕಾದಂಬರಿ, ಜೀವನ ಚರಿತ್ರೆಗಳನ್ನು ಅನುವಾದಿಸಿದರು. ಕನ್ನಡದಲ್ಲಿ ಯಾವ ಭಾಷೆಯ ಯಾವ ವಿಷಯ ವನ್ನು ಬೇಕಾದರೂ ಹೇಳಬಹುದು ಎಂಬುದನ್ನು ತೋರಿಸಿಕೊಟ್ಟರು. ತಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿದರು. ಮಕ್ಕಳ ಇಂಗ್ಲೀಷ್ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಹೇಳುತ್ತಿದ್ದರು. ತಮ್ಮ ಕಿರಿಯ ಮಗಳು ಶಾರದೆಗಾಗಿ ಭೂಗೋಳವನ್ನೇ ಬರೆದರು. ಅದಕ್ಕೆ ಶಾರದ ಭೂಗೋಳ ಎಂಬ ಹೆಸರಿಟ್ಟರು. ಸುರಭಿ ಮತ್ತು ವಿದ್ಯಾದಾಯಿನಿ ಪತ್ರಿಕೆಗಳಲ್ಲಿ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಪಾಠಗಳನ್ನು ಬರೆಯಿಸಿ ಮುದ್ರಿಸಿದರು.

"ಶ್ರೀಕಂಠೇಶಗೌಡರು ನ್ಯಾಯಾಧೀಶರಾದ ಕೂಡಲೆ ಮೊಕದ್ದಮೆ ಗಳನ್ನು ಕನ್ನಡದಲ್ಲಿ ನಡೆಯಿಸಿದರು. ಮೊಟ್ಟಮೊದಲು ಕನ್ನಡದಲ್ಲಿ ತೀರ್ಪನ್ನು ಬರೆದ ಕೀರ್ತಿ ಇವರದ್ದು. ಅವರು ಬರೆದ ತೀರ್ಪುಗಳೆಲ್ಲ ಕನ್ನಡದಲ್ಲಿವೆ." ಅವರು ಹಾಸನದಲ್ಲಿದ್ದಾಗ ಬರೆದ ಕನ್ನಡ ತೀರ್ಪುಗಳ ಪ್ರತಿಗಳು ದೊರೆಯುತ್ತವೆ. ಅವರ ಪತ್ರ ವ್ಯವಹಾರವೆಲ್ಲ ಕನ್ನಡದಲ್ಲಿಯೇ ಇರುವುದನ್ನು ಕಾಣಬಹುದು. "ನಾನು ಎಷ್ಟೇ ಚೆನ್ನಾಗಿ ಇಂಗ್ಲೀಷ್‌ನಲ್ಲಿ ಬರೆದರೂ ಷೇಕ್ಸ್‌ಪಿಯರ್‌ನನ್ನು ಮೀರಿಸಲಾರೆ. ಷೇಕ್ಸ್‌ಪಿಯರ್ ಏನೇ ಮಾಡಿದರೂ ಕನ್ನಡದಲ್ಲಿ ನನ್ನ ಹಾಗೆ ಬರೆಯಲಾರ" ಎಂದು ಹೇಳಿ ಶ್ರೀಕಂಠೇಶಗೌಡರು ಕನ್ನಡ ವಿರೋಧಿ ಸುವವರಿಗೆ ಬಾಯಿ ಮುಚ್ಚಿಸುತ್ತಿದ್ದರು.

ಗೌಡರಿಗೆ ಕನ್ನಡ ನಾಡುನುಡಿಗಳ ಬಗೆಗಿದ್ದ ಅಭಿಮಾನ ಕೃತಿರಚನೆಗೆ ಪ್ರೇರಣೆ ನೀಡಿತು. ಕನ್ನಡದಲ್ಲಿದ್ದ ಶಬ್ದ ಪ್ರಯೋಗ ಚಾತುರ್ಯ, ವಾಕ್ಯಬಂಧ, ಕಾವ್ಯದ ಶಿಲ್ಪಬಂಧ, ಲಕ್ಷಣ, ಅಲಂಕಾರ, ಕವಿತ ಚಮತ್ಕಾರಗಳನ್ನು ಇತರ ಭಾಷೆಗಳಿಂದ ಸ್ವೀಕರಿಸಿ ಕನ್ನಡವನ್ನು ರಸವತ್ತಾಗಿ ಮಾಡಬೇಕೆಂಬ ಅಭಿಲಾಷೆ ಮೂಡಿತು. ಇಂಗ್ಲೀಷ್ ಸಾಹಿತ್ಯದಲ್ಲಿರುವ ಉತ್ತಮ ಕೃತಿಗಳು ಕನ್ನಡಕ್ಕು ಬರಬೇಕೆಂಬ ತೀವ್ರ ಹಂಬಲದಲ್ಲಿ ಇವರ ಕೃತಿಗಳು ಸಾಕಾರಗೊಂಡವು.

ಸಾಹಿತ್ಯಾಧ್ಯಯನ-ಸಾಹಿತ್ಯಸೇವೆ

ಸಾಹಿತ್ಯದ ಪ್ರವೃತ್ತಿಯ ಶ್ರೀಕಂಠೇಶಗೌಡರು ಏನಾದರೊಂದು ಸಾಹಿತ್ಯ ಚಟುವಟಿಕೆಗಳನ್ನು ಆರಂಭಿಸಲು ಯೋಚಿಸುತ್ತಿದ್ದರು. ಮೈಸೂರಿಗೆ ವಕೀಲರಾಗಿ ಬಂದ ನಂತರ ಜಯರಾವ್, ಆನಂದರಾವ್ ಮುಂತಾದ ಕೆಲವು ಮಂದಿ ಸಾಹಿತ್ಯಾಪ್ರಿಯ ಪದವೀಧರರ ಪರಿಚಯವಾಗಿತ್ತು. ಶ್ರೀಕಂಠೇಶಗೌಡರು ಅವರನ್ನೆಲ್ಲಾ ಕೂಡಿಕೊಂಡು ಕನ್ನಡ ಪ್ರಕಾಶನ ಸಂಸ್ಥೆಯೊಂದನ್ನು ತೆರೆಯಲು ನಿರ್ಧರಿಸಿದರು. ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ (ಉ.ಖಿ.ಂ.) ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿದರು. ಇಂಗ್ಲೀಷ್ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿ ಮುದ್ರಿಸುವುದು ಈ ಸಂಸ್ಥೆಯ ಮಹತ್ವದ ಗುರಿ. ಈ ಸಂಸ್ಥೆಯಿಂದಲೇ 'ವಿದ್ಯಾದಾಯಿನಿ' ಎಂಬ ಪತ್ರಿಕೆಯೂ ಆರಂಭವಾಯಿತು. ತಮ್ಮ ವಕೀಲಿ ವೃತ್ತಿಯಿಂದ ಬರುತ್ತಿದ್ದ ಬಹುಪಾಲು ಹಣವನ್ನು ಶ್ರೀಕಂಠೇಶಗೌಡರು ಈ ಸಂಸ್ಥೆಗೆ ಹಾಕಿದ್ದರು. ಆ ಕಾಲದಲ್ಲಿ ಇಂಗ್ಲೀಷ್ ಪುಸ್ತಕಗಳನ್ನು ಓದುವುದು, ಇಂಗ್ಲಿಷ್‌ನಲ್ಲಿ ಮಾತನಾಡುವುದಕ್ಕೆ ದೊಡ್ಡಸ್ತಿಕೆ ಎಂದು ಜನ ತಿಳಿದಿದ್ದರು. ಇಂಥ ಕಾಲದಲ್ಲಿ ಶ್ರೀಕಂಠೇಶಗೌಡರು ಮತು ಅವರ ಮಿತ್ರರು ಕನ್ನಡದ ಮೇಲೆ ತಳೆದ ಅಭಿಮಾನವು ದೊಡ್ಡದು.

ಮೈಸೂರಿಗೆ ಬಂದು ಸೇರಿದ ಮೇಲೆ ಸಾಹಿತಿಗಳ ದೊಡ್ಡ ಬಳಗವನ್ನೇ ಕಟ್ಟಿಕೊಂಡರು. ಅಭಿನವ ಕಾಳಿದಾಸರೆಂದು ಪ್ರಖ್ಯಾತರಾಗಿದ್ದ ಬಸವಪ್ಪಶಾಸ್ತ್ರಿಗಳು, ಪಂಡಿತ ಕರಿಬಸವಶಾಸ್ತ್ರಿಗಳು, ದೇವೋತ್ತಮ ಜೋಯಿಸರು ಮುಂತಾದ ಹಿರಿಯರ ಪರಿಚಯವಾಯಿತು. ಕನ್ನಡದ ಶ್ರೇಷ್ಠ ನಟರಾದ ವರದಾಚಾರ್ಯ, ಮಹಮದ್ ಪೀರ್ ಮುಂತಾದವರೆಲ್ಲ ಶ್ರೀಕಂಠೇಶಗೌಡರಲ್ಲಿಗೆ ಬಂದು ಹೋಗುತ್ತಿದ್ದರು.

ಶ್ರೀಕಂಠೇಶ್ವರ ಕರ್ನಾಟಕ ನಾಟಕ ಮಂಡಳಿ

ಮೈಸೂರಿನ ಅರಮನೆಯ ನಾಟಕ ಮಂಡಳಿಯು ವೃತ್ತಿರಂಗಭೂಮಿಯಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿತ್ತು. ಇದರ ಪ್ರಭಾವದಿಂದಾಗಿ ರಂಗಾಚಾರ್ಯರು, ಎ.ವಿ. ವರದಾಚಾರ್ಯರು ಹೊಸ ನಾಟಕ ಮಂಡಳಿಗಳನ್ನು ಹುಟ್ಟುಹಾಕಿ ಸಾರ್ವಜನಿಕರ ಪ್ರೋತ್ಸಾಹದಿಂದ ಒಳ್ಳೆಯ ಹೆಸರುಗಳಿಸಿದ್ದರು. ನಾಯಕ ನಟರಾದ ನರಸಿಂಹಯ್ಯನವರನ್ನು ಅರಮನೆಯ ಮಂಡಳಿಗೆ ಸೇರಿಸುವ ಪ್ರಯತ್ನಗಳು ವಿಫಲವಾದವು. ಇದೇ ಸಂದರ್ಭದಲ್ಲಿ ಎಸ್.ಎಸ್. ಸೆಟ್ಲೂರ್, ಟಿ. ಗೋಪಾಲ, ಅಯ್ಯಂಗಾರ್ ಮುಂತಾದ ವಿದ್ಯಾವಂತರು ಬೆಂಗಳೂರಿನಲ್ಲಿ ನಾಟಕ ಸಂಘವನ್ನು ಹುಟ್ಟುಹಾಕಿ ಸುಲ್ತಾನ್‌ಪೇಟೆಯ ಮುಸ್ಲಿಂಹಾಲ್‌ನ ಪಕ್ಕದ ನಿವೇಶನದಲ್ಲಿ ರಂಗಸಜ್ಜಿಕೆ ನಿರ್ಮಾಣಮಾಡಿ ನಾಟಕಗಳಲ್ಲಿ ಅಭಿನಯಿಸಿದರು.

ಬೆಂಗಳೂರಿನ ನಾಗರಿಕರು ನಾಟಕದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದರು. ಇದರಿಂದ ಪ್ರಭಾವಿತರಾದ ಎಂ.ಎಲ್. ಶ್ರೀಕಂಠೇಶಗೌಡರು 1895ರಲ್ಲಿ ತಮ್ಮ ಸ್ನೇಹಿತರಾದ ಪೂರ್ಣ ರಾಘವೇಂದ್ರರಾಯರ ಹಾಗೂ ಎಲ್. ಜಯರಾಯರ ನೆರವಿನಿಂದ 'ಶ್ರೀಕಂಠೇಶ್ವರ ಕರ್ನಾಟಕ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು. ಈ ಮಂಡಳಿಯವರು ಪ್ರದರ್ಶಿಸುತ್ತಿದ್ದ ನಾಟಕಗಳೆಂದರೆ 'ಸೀತಾಸ್ವಯಂವರ', 'ಘೋಷಯಾತ್ರೆ', 'ಪ್ರಮೀಳಾರ್ಜುನೀಯ' ಮತ್ತು 'ಹಿಂಸಾಪರ'. ಈ ಮಂಡಳಿಯಲ್ಲಿ ಸುಧರ್ಮಪಂಡಿತರು, ಅಣ್ಣುಲಾಲ್, ನಾರಾಯಣಶಾಸ್ತ್ರಿ, ಕೃಷ್ಣಾಜಟ್ಟಪ್ಪ, ಮಹಾಲಿಂಗಪ್ಪ, ಭೀಮಸೇನರಾವ್ ಮೊದಲಾದವರು ಹೆಸರು ಗಳಿಸಿದ್ದರು. ಈ ನಾಟಕ ಮಂಡಳಿ 1907ರ ವರೆಗೆ ತುಂಬ ಯಶಸ್ವಿಯಾಗಿ ಕೆಲಸಮಾಡಿತು.

ಮೊದಲಿನಿಂದಲೂ ಗೌಡರಲ್ಲಿ ಸಾಹಿತ್ಯಾಸಕ್ತಿ ಬೆಳೆಯುತ್ತ ಬಂದಿತ್ತು. ಜನಪದ ಕಲೆ ಮತ್ತು ಸಾಹಿತ್ಯಗಳು ಅವರ ಮೇಲೆ ತುಂಬಾ ಪ್ರಭಾವ ಬೀರಿದ್ದವು. ಶ್ರೀಕಂಠೇಶಗೌಡರ ಮೇಲೆ ಹೆಚ್ಚು ಪ್ರಭಾವ ಬೀರಿದ್ದ ಛಂದೋರೂಪಗಳೆಂದರೆ ಕಂದ, ವೃತ್ತಗಳು. ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಮೂಲಕ ಗೌಡರು ಆರಂಭಿಸಿದ್ದ ವಿದ್ಯಾದಾಯಿನಿ ಪತ್ರಿಕೆಯಲ್ಲಿ ಅವರ ಮೊದಮೊದಲಿನ

ಬರಹಗಳು ಅಚ್ಚಾಗುತ್ತಿದ್ದವು. ನಾಟಕ, ಸಾಹಿತ್ಯದ ಬಗೆಗೆ ಶ್ರೀಕಂಠೇಶಗೌಡರಿಗೆ ಅಪಾರವಾದ ಒಲವಿತ್ತು. ಇಂಗ್ಲೀಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದ ಅವರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ತರಲು ಬಯಸಿದರು. ತಮ್ಮ ಬಿಡುವಿಲ್ಲದ ವಕೀಲಿ ವೃತ್ತಿ ವೇಳೆಯಲ್ಲಿಯೂ ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್‌ನ ನಾಟಕಗಳ ಅನುವಾದಕ್ಕೆ ಕೈ ಹಾಕಿದರು. ಕನ್ನಡಕ್ಕೆ ಮರೆಯಲಾಗದ ಕೊಡುಗೆಗಳನ್ನು ಇತ್ತರು.

ಶ್ರೀಕಂಠೇಶಗೌಡರ ಕೃತಿಗಳು

ಬಹುಮುಖ ಪ್ರತಿಭೆಯುಳ್ಳ ಶ್ರೀಕಂಠೇಶಗೌಡರು ನಾಟಕಕಾರರಾಗಿ ಪ್ರಸಿದ್ಧರಾಗಿದ್ದರೂ, ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿಮಾಡಿದ್ದಾರೆ. ಮುಖ್ಯವಾಗಿ ನಾಟಕ, ಕಾವ್ಯ, ಕಾದಂಬರಿ, ಜೀವನ ಚರಿತ್ರೆ, ಜಾನಪದ ಹಾಗು ಹಲವು ಬಿಡಿ ಬರಹಗಳನ್ನು ರಚಿಸಿದ್ದಾರೆ. ಲಭ್ಯವಿರುವ ಕೃತಿಗಳೇ ಅವರ ಪ್ರತಿಬೆಯನ್ನು ಸಾರಲು ನಿದರ್ಶನಗಳಾಗಿವೆ. ಹೊಸಗನ್ನಡ ಸಾಹಿತ್ಯದ ಅರುಣೋದಯದ ಕಾಲದಲ್ಲಿ 20ನೇ ಶತಮಾನದ ಆರಂಭದಲ್ಲಿ ಕನ್ನಡದ ಪ್ರಸಿದ್ಧ ಸಾಹಿತಿಗಳಲ್ಲಿ ಶ್ರೀಕಂಠೇಶಗೌಡರು ಒಬ್ಬರಾಗಿದ್ದರು ಎಂಬುದು ನಿರ್ವಿವಾದ ಸಂಗತಿ. ಅವರು ರಚಿಸಿದ ಕೃತಿಗಳು ಆ ಮೂಲಕ ಕನ್ನಡಕ್ಕೆ ಸಲ್ಲಿಸಿದ ಸೇವೆಯನ್ನು ಹೀಗೆ ಗುರುತಿಸಬಹುದು.

ಕಾದಂಬರಿಗಳು

ಶ್ರೀಕಂಠೇಶಗೌಡರು ಇಂಗ್ಲಿಷಿನ ಹೆನ್ರಿ ಟೈಲರ್‌ನ 'ಸಿಸಿಲಿಯನ್ ಸಮ್ಮರ್'ನ್ನು 'ಕನ್ಯಾವಿತಂತು' ಎಂಬ ಹೆಸರಿನಿಂದ 1895ರಲ್ಲಿ ಕನ್ನಡಕ್ಕೆ ತಂದರು. ಇಂಗ್ಲಿಷ್‌ನ ಮರಿಯಾ ವಿಜವರ್ಥಳ 'ದಿ ಲಿಟಲ್ ಮರ್ಚೆಂಟ್ಸ್' ನ್ನು 1895ರಲ್ಲಿ 'ಚಿಕ್ಕಬಣಜಿಗರು' ಎಂದು ಹಾಗು 'ಡಫ್' ಎಂಬ ಇಂಗ್ಲಿಷ್ ಇತಿಹಾಸಕಾರ ಬರೆದ 'ಶಿವಾಜಿ ಕಥೆ'ಯನ್ನು ಆಧಾರವಾಗಿಟ್ಟುಕೊಂಡು 1926 ರಲ್ಲಿ 'ಭವಾನಿಬಾಳು' ಎಂಬ ಕಾದಂಬರಿಯನ್ನು ಬರೆದರು. ಈ ಮೂರು ಕಾದಂಬರಿಗಳು ವಿಭಿನ್ನವಾಗಿ ತೆರೆದುಕೊಂಡಿವೆ.

'ಕನ್ಯಾವಿತಂತು' ಕಾದಂಬರಿಯಲ್ಲಿ ಒಂದು ಕತೆಯೊಳಗೆ ಇನ್ನೊಂದನ್ನು ಹೇಳುವ ತಂತ್ರವನ್ನು ಕಾಣಬಹುದು. ಕರಡಿಕಲೆ, ವೇಷನಾಟ್ಯ ಮುಂತಾದ ಕಲಾ ಪ್ರಕಾರಗಳನ್ನು ಪರಿಚಯಿಸಿದ್ದಾರೆ. ಕರಡಿ ಕುಣಿತವನ್ನು ಮನರಂಜಕ ಕಲೆಯಾಗಿ ಬಳಸದೆ ವ್ಯಕ್ತಿಯ ಗುಣ ನಿರೂಪಣೆಗೆ ಬಳಸಿಕೊಂಡಿದ್ದಾರೆ. ರಾಜ–ರಾಣಿ, ಅರಮನೆ–ದರ್ಬಾರು, ಯುದ್ಧ–ಬೇಟೆ ಇವನ್ನು ಚಿತ್ರಿಸಿದ್ದಾರೆ. ಸಮುದಾಯದ ಮಾತು, ನಡವಳಿಕೆ, ಹಬ್ಬ ಹರಿದಿನಗಳು, ವಿನೋದಗಳು, ಗಾದೆ, ಒಗಡು, ನುಡಿಗಟ್ಟು ಮೊದಲಾದವುಗಳನ್ನು ಅಗತ್ಯಕ್ಕನುಗುಣವಾಗಿ ತಂದಿದ್ದಾರೆ.

'ಚಿಕ್ಕಬಣಜಿಗರು' ಕಾದಂಬರಿಯನ್ನು ಓದಿದಾಗ ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣಗಳ ಗ್ರಾಮೀಣ ಬದುಕಿನ ಚಿತ್ರಣ ಸಿಗುತ್ತದೆ. ರಂಗನಾಥ ದೇವಾಲಯದ ಬಳಿ ಚಿಕ್ಕಬಣಜಿಗರು ಕುಕ್ಕೆಯನ್ನಿಟ್ಟುಕೊಂಡು ವ್ಯಾಪಾರ ಮಾಡುವ ಚಿತ್ರಣವಿದೆ. ಈ ಕಾದಂಬರಿಯಲ್ಲಿ ಬರುವ ಪಾತ್ರಗಳು ಒಬ್ಬ ಸಜ್ಜನಿಕೆಯ, ಇನ್ನೊಬ್ಬ ವಂಚಕತನದ ಸಂಕೇತವಾಗಿ ಯಾವುದೇ ಸಂಕೀರ್ಣತೆಯ ವಿಕಾಸಶೀಲತೆಯ ಸ್ವಭಾವವಿಲ್ಲದೆ ಮೂಡಿ ಬರುತ್ತವೆ. ಇಲ್ಲಿನ ನಿರೂಪಣಾ ಶೈಲಿಯೂ ನಿರೂಪಕನೊಬ್ಬ ಓದುಗ ಸಮುದಾಯಕ್ಕೆ ಕತೆಯನ್ನು ಹೇಳುವ ರೀತಿಯಲ್ಲಿದೆ. ಇಲ್ಲಿ ಹೆಚ್ಚು ಗಾದೆಗಳನ್ನು ಬಳಸಿದ್ದಾರೆ. ಶ್ರೀಕಂಠೇಶಗೌಡರ ಕಾದಂಬರಿ ರಚನೆಯ ಶೈಲಿಯ ಬೇರುಗಳು ಜನಪದದಲ್ಲಿವೆ ಎಂಬುದು ಇದರಿಂದ ತಿಳಿಯುತ್ತದೆ.

'ಭವಾನಿಬಾಳು' ಕಾದಂಬರಿಯಲ್ಲಿ ಶಿವಾಜಿಯ ತಂದೆ ತಾಯಿಯರ ವಿವಾಹವೇ ಕಥಾವಸ್ತು. ವೃತ್ತಿಗಾಯಕರಾದ ಗೊಂದಲಿಗರು ಮನೆಮನೆಗೆ ಬಂದು ಭಿಕ್ಷೆ ಬೇಡುತ್ತ ಊರಿನ ಸಾಮಾಜಿಕ, ರಾಜಕೀಯ, ವಿವರಗಳನ್ನು ಮನೆಯವರಿಗೆ ರಂಜನೀಯವಾಗಿ ವಿವರಿಸುವ ಸನ್ನಿವೇಶವಿದೆ. ಟಗರು ಕಾಳಗ, ಕೋಳಿಕಾಳಗ, ಕೋಲೆ ಬಸವ ಆಡಿಸುವವರು, ಹಾವಾಡಿಗರು. ಕೋಲಾಟವಾಡುವವರನ್ನು ಪರಿಚಯಿಸಿದ್ದಾರೆ. ವೃತ್ತಿಗಾಯಕರಾದ ಗೊಂದಲಿಗರು ಶಿವಾಜಿಯ ಹುಟ್ಟನ್ನು ಕುರಿತು ಹೇಳುತ್ತಾರೆ. ಸಂಭಾಷಣಾ ಪ್ರಜ್ಞೆ, ಮಾತಿನ ಹಿಡಿತ ಮುಂತಾದವುಗಳು ಶ್ರೀಕಂಠೇಶಗೌಡರ ಜಾನಪದ ಮನಸ್ಸನ್ನು ಪರಿಚಯಿಸುತ್ತವೆ.

ಕಾವ್ಯ

ಶ್ರೀಕಂಠೇಶಗೌಡರು 'ಚಾಮನೃಪಚಂದ್ರಪ್ರಭೆ' (1895) ಹಾಗೂ ಇತರ ಬಿಡಿ ಪದ್ಯಗಳನ್ನು ರಚಿಸಿದ್ದಾರೆ. 1693 ರಿಂದ 1894ರ ವರೆಗೆ ಜೀವಿಸಿದ್ದ ಮೈಸೂರು ಅರಸರಾದ ಚಾಮರಾಜ ಒಡೆಯರರ ಜೀವನ ವೃತ್ತಾಂತವನ್ನು ತಿಳಿಸುವ ಕಾವ್ಯ 'ಚಾಮನೃಪಚಂದ್ರಪ್ರಭೆ'. ನೂರು ಪದ್ಯಗಳ ಒಂದು ಸಂಕಲನವಿದು. ಮೊದಲ ಹಾಗೂ ಕೊನೆಯ ಎರಡು ವೃತ್ತಗಳನ್ನು ಬಿಟ್ಟರೆ ಮಿಕ್ಕವೆಲ್ಲವೂ ಕಂದಪದ್ಯಗಳೆ ಆಗಿವೆ. ರಾಜನು ಕನ್ನಡ ಭಾಷೆಯನ್ನು ಬೆಳೆಸಲು ನಾಟಕಗಳನ್ನು ಬರೆಸಿದ ಬಗೆ, ಮೈಸೂರು ಅರಮನೆ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದ ಸಂದರ್ಭ, ಚೀಫ್ ಕೋರ್ಟ್ ಸ್ಥಾಪನೆ, ತಾಲ್ಲೂಕು ಮತ್ತು ಪಟ್ಟಣಗಳಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸಿದ ಸಂಗತಿ, ನಾಲೆಗಳನ್ನು, ಕೆರೆಗಳನ್ನು ಅಭಿವೃದ್ಧಿ ಗೊಳಿಸಿದ್ದು, ಮುಜರಾಯಿ ಇಲಾಖೆಯನ್ನು ಪ್ರತ್ಯೇಕಗೊಳಿಸಿದ್ದು, ಪ್ರಜಾಪ್ರತಿನಿಧಿ ಸಭೆ, ಬ್ಯಾಂಕುಗಳ ಸ್ಥಾಪನೆ,

ಸ್ತ್ರೀಯರ ವಿದ್ಯಾಭ್ಯಾಸದ ಅಭಿವೃದ್ಧಿ, ಚಾಮುಂಡೇಶ್ವರಿ ಪ್ರಭುಗಳ ಮನೆದೇವರಾಗಿದ್ದು, ಬಾಲ್ಯವಿವಾಹ ಕಾನೂನು ಮುಂತಾದ ವಿಷಯಗಳನ್ನು ಪರಿಚಯಿಸಿದ್ದಾರೆ.

'ಈಚಲವನ' ಪದ್ಯದಲ್ಲಿ ಒಂದು ವಸ್ತುವನ್ನು ಹೇಗೆ ಒಳ್ಳೆಯ, ಕೆಟ್ಟ ಕಾರಣಗಳೆರಡಕ್ಕೂ ಉಪಯೋಗಿಸಿಕೊಳ್ಳಬಹು ದೆಂಬುದನ್ನು ತಿಳಿಸಿದ್ದಾರೆ. ಈಚಲಮರದ ಲಾಭವನ್ನು ಅದನ್ನು ಜನರು ಬಳಸಿಕೊಳ್ಳುವ ರೀತಿಯನ್ನು ಸೊಗಸಾಗಿ ಪರಿಚಯಿಸಿದ್ದಾರೆ. ಇವಲ್ಲದೆ ವೃತ್ತ ಪದ್ಯಗಳನ್ನು ರಚಿಸಿದ್ದಾರೆ. ಶತೃಪರವಾದ ಧೋರಣೆಯನ್ನು ಇಲ್ಲಿ ಪರಿಚಯಿಸಿದ್ದಾರೆ. 'ಬುದ್ಧಿಯ ಒಲವೆ ಬಲ' ಎಂಬ ಬಿಡಿ ಪದ್ಯವನ್ನು ರಚಿಸಿದ್ದಾರೆ.

ಜಾನಪದ ಕಥೆಗಳು

ಜಾನಪದವು ಸಾಂಸ್ಕೃತಿಕ ಜಗತ್ತಿನಲ್ಲಿ ಉನ್ನತ ಸ್ಥಾನಮಾನಗಳನ್ನು ಗಳಿಸಿಕೊಂಡಿವೆ. ಈ ಕ್ಷೇತ್ರದಲ್ಲಿ ಸಂಗ್ರಾಹಕರ, ಪಾತ್ರ ಗಮನಾರ್ಹ ವಾದುದು. ಶ್ರೀಕಂಠೇಶಗೌಡರು ಎಂಟು ಜಾನಪದ ಕಥೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅವುಗಳೆಂದರೆ ದ್ವಾದಶ ಕುಮಾರರು, ವಿವೇಕಕ್ಕೆ ತಕ್ಕ ಪ್ರತಿಫಲ, ಪುಷ್ಪಮಂಜರಿಯ ಕಥೆ, ಅಧಿಕಾರ ವಿಧೇಯತೆ, ಕೋತಿಯೂ ಕನ್ನಡಿಯೂ ಭೂಲೋಕದ ಯಮ, ಬುದ್ಧಿವಂತರ ಕಥೆ, ಭಕ್ತಿ ಪಾತಕಥೆ. ಇವುಗಳಲ್ಲಿ ವಿಭಿನ್ನವಾದ ಕಥಾವಸ್ತುವಿದೆ, ಸತ್ವವಿದೆ, ನೀತಿಯಿದೆ. ಜಾನಪದ ಆಶಯವುಳ್ಳ ಈ ಕಥೆಗಳು ಸಹೃದಯರ ಗಮನ ಸೆಳೆಯುತ್ತವೆ. ಈ ಕಥೆಗಳೆಲ್ಲವೂ 1896ರಲ್ಲಿ ಸುರಭಿ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಇತರೆ ಬರಹಗಳು

ಶ್ರೀಕಂಠೇಶಗೌಡರು ಪೆಸ್ಟ್ ಲಾಟ್ಸೆಯವರ ಚರಿತ್ರೆ, ಶಾಲಿವಾಹನನ ಚರಿತ್ರೆ, ಲೋಹಿತಾಶ್ವರಾಯನ ಚರಿತ್ರೆ, ವಾಲ್ಮೀಕಿ ಋಷಿಗಳ ಚರಿತ್ರೆ ಕುರಿತಂತೆ ಕಿರು ಜೀವನಚರಿತ್ರೆಗಳನ್ನು ವಿದ್ಯಾದಾಯಿನಿ ಹಾಗೂ ಸುರಭಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಇವುಗಳಲ್ಲದೆ ಆನರಬಲ್ ಮೆ ಡಂಕನ್, ಮೆ.ಜೆ. ವ್ಯಾನ್ ಸಾಮಿರನ್, ಅರ್ಗಳದ ರಾಣಿ, ಕಿತ್ತೂರುರಾಣಿ, ಗನೂರು ರಾಣಿ, ಲೇಖನಗಳನ್ನು ಬರೆದಿದ್ದಾರೆ. ಸ್ತ್ರೀಯರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಗೌಡರು ಮಹಿಳಾ ಶಿಕ್ಷಣದ ಬಗ್ಗೆ ಮುತುವರ್ಜಿ ವಹಿಸಿದ್ದರು. ಹೀಗಾಗಿ ಅವರು ಸ್ತ್ರೀಯರಿಗಾಗಿಯೇ ಲೇಖನಗಳನ್ನು ಬರೆದಿರುವುದು ಕಂಡುಬರುತ್ತದೆ.

ಶ್ರೀಕಂಠೇಶಗೌಡರು ವಿಜಯದಶಮಿ, ಕಾಲಪರಿಮಾಣ, ವಿವಿಧ ವಾಹನಗಳು, ಕಸುಬುದಾರ ಪ್ರಾಣಿಗಳು, ಸ್ಟಾಕ್ ಹೋಂ ಎಂಬ ಐದು ಪ್ರಬಂಧಗಳನ್ನು ಬರೆದಿದ್ದಾರೆ. 'ವಿಜಯದಶಮಿ'ಯಲ್ಲಿ ಉತ್ಸವವು ಮೈಸೂರಿನಲ್ಲಿ ಆರಂಭವಾದ ಹಿನ್ನೆಲೆಯನ್ನು ಚರ್ಚಿಸಿದ್ದಾರೆ. 'ಕಾಲಪರಿಮಾಣ'ದಲ್ಲಿ ಆದಿಮಾನವನಿಂದ ಆರಂಭಗೊಂಡು ಇಂದಿನವರೆವಿಗೂ ಕಾಲದ ಬಗೆಗೆ ಮಾನವನ ಕಲ್ಪನೆಗಳು, ನಂಬಿಕೆಗಳನ್ನು ಗುರುತಿಸಿದ್ದಾರೆ. ಇಂಗ್ಲೆಂಡ್‌ನಲ್ಲಿ ಮರಳು ಬಟ್ಟಲುಗಳನ್ನು ಬಳಸುತ್ತಿದ್ದ ರೀತಿ. 1450ರಲ್ಲು ಜರ್ಮನಿಯ ನೂರೆಂಬರ್ಗ್ ಪಟ್ಟಣದಲ್ಲಿ ದೊಡ್ಡಗಡಿಯಾರಗಳು ತಯಾರಾದ ಮಾಹಿತಿ ಸಿಗುತ್ತದೆ. ವಿವಿಧ ವಾಹನಗಳಲ್ಲಿ ನೀರಿನ ಮೇಲೆ ತೆಪ್ಪಗಳನ್ನು ಬಳಸಿದ್ದು, ಗ್ರೀಕ್, ಪರ್ಷಿಯನ್ ರಥಗಳನ್ನು ಬಹು ಸುಂದರವಾಗಿ ಕಟ್ಟಿದ್ದು, ಸ್ಪೇನ್ ದೇಶದಲ್ಲಿ ಬಳಸುತ್ತಿದ್ದ ಕುದುರೆ ಪಲ್ಲಕ್ಕಿ, ನಂತರ ಆನೆ, ಒಂಟೆಗಳನ್ನು ವಾಹನಗಳನ್ನಾಗಿ ಮಾಡಿಕೊಂಡ ರೀತಿಯನ್ನು ವಿವರಿಸಿದ್ದಾರೆ. 'ಕಸುಬುದಾರರ ಪ್ರಾಣಿ' ಗಳಲ್ಲಿ ನಾವು ನೋಡಿರುವ ಕೆಲವು ಪ್ರಾಣಿಗಳ ಬದುಕುವ ರೀತಿಯನ್ನು ಕುರಿತು ಚರ್ಚಿಸಿದ್ದಾರೆ. ಜೇಡ ಹುಳುಗಳ ನೇಯ್ಗೆ ಪದ್ಧತಿ, ರೇಷ್ಮೆ ಹುಳುಗಳ ನೂಲುವ ಕಸುಬು, ಜೇನುಹುಳುಗಳ ಗೂಡುಕಟ್ಟುವ ವಿಧಾನ, ಮಿಂಚುಹುಳುಗಳ ಬೆಳಕಿನ ಶಕ್ತಿ ಮುಂತಾದವನ್ನು ಪರಿಚಯಿಸಿದ್ದಾರೆ. 'ಸ್ಟಾಕ್ ಹೋಂ'ನಲ್ಲಿ ಸ್ವೀಡನ್ ದೇಶದ ರಾಜಧಾನಿ 'ಸ್ಟಾಕ್ ಹೋಂ ಪಟ್ಟಣವು ಮೂರು ದ್ವೀಪಗಳ ಮೇಲೆ ಬರ್ಗನ್ ಚಾರ್ಲ್ ಎಂಬಾತನಿಂದ ಕ್ರಿ.ಶ. 1250ರಲ್ಲಿ ಕಟ್ಟಲ್ಪಟ್ಟ ವಿಚಾರ ತಿಳಿಯುತ್ತದೆ. ಈ ನಗರದ ಸೌಂದರ್ಯವನ್ನು ಬಣ್ಣಿಸಿ ಅಲ್ಲಿನ ಅನುಕೂಲಗಳನ್ನು ಚರ್ಚಿಸಿದ್ದಾರೆ.

"ಹರುಕು ಮುರುಕು" ನಗೆ ಬರಹಗಳಲ್ಲಿ ಶ್ರೀಕಂಠೇಶಗೌಡರ ಹಾಸ್ಯಪ್ರಜ್ಞೆಯನ್ನು ಗುರುತಿಸಬಹುದು. ಗಂಡ-ಹೆಂಡತಿ, ರೋಗಿ-ವೈದ್ಯರ ನಡುವಿನ ಹಾಸ್ಯ ಪ್ರಸಂಗಗಳಿವೆ. ಲಾಯರ್ ಬದುಕಿನ ಗಂಭೀರ ಹಾಸ್ಯವಿದೆ. ಪೊಲೀಸರ ಚಾವಡಿಯಲ್ಲಿ ಮನೆ ಯಜಮಾನ ಆಳುಗಳ ನಡುವೆ ಹಾಸ್ಯ ಬೆರೆಸಿದ್ದಾರೆ. 'ಸಂಸಾರ ಸುಖದಲ್ಲಿ' ಆಯಾಸಗೊಂಡು ಮನೆಗೆ ಬಂದ ಗಂಡನನ್ನು ವಿದ್ಯಾವಂತ ಹೆಂಡತಿ ಉಪಚರಿಸುವ ಬಗೆಯಲ್ಲಿ ಹಾಸ್ಯವಿದೆ. 'ಒಂದು ಲಾ ಪಾಯಿಂಟ್'ನಲ್ಲಿ ಪೊಲೀಸು-ಯಜಮಾನರ ಚರ್ಚೆಯಿದೆ. 'ಹಿಡಿದಿರುವ ನಾಣ್ಯವನ್ನು ಹಿಡಿಸತಕ್ಕ ರೀತಿ'ಯಲ್ಲಿ ಜನಸಾಮಾನ್ಯರನ್ನು ಬಳಸಿಕೊಂಡು ಹಾಸ್ಯದ ಲೇಪನವಚ್ಚಿದ್ದಾರೆ. 'ವೈದ್ಯನ ಉಪಾಯ'ದಲ್ಲಿ ವೈದ್ಯನು ಸಂಗೀತಗಾರನನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವ ತಂತ್ರವಿದೆ. 'ಯಾವುದು ನಿಜ'

ಎಂಬಲ್ಲಿ ಶೆಟ್ಟಿ-ಯಜಮಾನರ ಮತ್ತು ಆ ಚಾರಕ ನಡುವೆ ಹಾಸ್ಯ ಗುರುತಿಸುವ ಪ್ರಯತ್ನವಿದೆ. 'ಹೀಗೆ ರೇಗಿಸಿದಳು' ಎಂಬಲ್ಲಿ ನಿತ್ಯ ಬದುಕಿನ ಹಾಸ್ಯವಿರುವುದನ್ನು ಕಾಣಬಹುದು.

– ಹೀಗೆ ಶ್ರೀಕಂಠೇಶಗೌಡರ ಎಲ್ಲ ಬರಹಗಳಲ್ಲಿ ವಿದ್ವತ್ ಪ್ರಜ್ಞೆ ಗಾಂಭೀರ್ಯವೂ, ಅಚ್ಚುಕಟ್ಟುತನವೂ, ಕವಿಯ ಅಸಾಧಾರಣ ಅನುಭವ ವ್ಯವಹಾರ ಜ್ಞಾನವೂ, ಲೋಕಕಲ್ಯಾಣ ಪ್ರೇರಣೆಯು ವ್ಯಕ್ತವಾಗುತ್ತವೆ. ಕನ್ನಡ ಭಾಷಾ ಸಾಹಿತ್ಯವನ್ನು ಸಮೃದ್ಧಗೊಳಿಸಬೇಕೆಂಬ ಉತ್ಸಾಹ, ಇಂಗ್ಲಿಷ್‌ನ ಮೌಲಿಕ ಕೃತಿಗಳು ಕನ್ನಡದಲ್ಲೂ ಲಭ್ಯವಾಗಬೇಕೆಂಬ ಕಳಕಳಿಯಿಂದ ಎಂ.ಎಲ್. ಶ್ರೀಕಂಠೇಶಗೌಡರು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

* * * * *



ಕುವೆಂಪು

– ಡಾ. ಬಿ. ಪಾಂಡುಕುಮಾರ್

ಕುವೆಂಪು ಆ ಹೆಸರಿನಲ್ಲೇ ಏನೋ ಒಂದು ವಿಧವಾದ ಕಂಪು. ಇದು ಕನ್ನಡದ ಕಂಪು. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಏರುಗತಿಯಲ್ಲಿ ಸಾಗಲು ಕುವೆಂಪು ಕಾರಣಕರ್ತರು ಎಂದರೆ ತಪ್ಪಾಗಲಾರದು. ಕವನ, ಕಾವ್ಯ, ಸಣ್ಣಕಥೆಗಳು, ನಾಟಕ, ಕಾದಂಬರಿ, ಮಹಾಕಾವ್ಯ, ವಿಮರ್ಶೆ –ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಾಗೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಮೂಲಕ ಅಜರಾಮರವಾಗಿ ಉಳಿದಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಖ್ಯಾತಿಯನ್ನು ತಂದುಕೊಟ್ಟಿದ್ದಾರೆ.

ಕುವೆಂಪುರವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. ಇವರ ಹುಟ್ಟೂರು ಹಿರೇಕೊಡಿಗೆ. ತಾಯಿಯ ತವರು ಮನೆಯಲ್ಲಿ ಜನನ. ಇದು ಮಲೆನಾಡಿನ ಸೆರಗಿನಲ್ಲಿರುವ ಚಿಕ್ಕಮಗಳೂರು ಜಿಲ್ಲೆ ಕೊಪ್ಪಕ್ಕೆ ಸಮೀಪವಿದೆ. ಇಲ್ಲಿ 1904ನೇ ಇಸವಿ ಡಿಸೆಂಬರ್ ಮಾಹೆ 29ನೇ ತಾರೀಖು ಜನಿಸಿದರು. ತಂದೆ ವೆಂಕಟಪ್ಪಗೌಡ ಮತ್ತು ತಾಯಿ ಶ್ರೀಮತಿ ಸೀತಮ್ಮ. ಅಂದು ಮಲೆನಾಡು ಶಿಕ್ಷಣದಿಂದ ವಂಚಿತವಾಗಿತ್ತು. ಕಂದಾಚಾರ ಮತ್ತು ಮೌಢ್ಯಗಳಿಂದ ತುಂಬಿತ್ತು. ಆದರೆ ಸಹ್ಯಾದ್ರಿ ಪರ್ವತವು ನಿಸರ್ಗವೇ ಬಂದು ಮಲಗಿರುವಂತೆ ಇದ್ದ ಕಾಲವೊಂದಿತ್ತು. ಅಂದಿನ ನಿಸರ್ಗವನ್ನು ಕುವೆಂಪುರವರು ತಮ್ಮ 'ಮಲೆಗಳಲ್ಲಿ ಮದುಮಗಳು' ಸೇರಿದಂತೆ ಕೆಲವು ಕೃತಿಗಳಲ್ಲಿ ವರ್ಣಿಸಿದ್ದಾರೆ. ಬಹುಶಃ ತಾವು ಬೆಳೆದ ಪರಿಸರ ಅವರ ಮೇಲೆ ಬಹುವಾಗಿ ಪ್ರಭಾವ ಬೀರಿರಬಹುದು.

ಪುಟ್ಟಪ್ಪನವರು ಅತಿ ಶ್ರೀಮಂತ ಕುಟುಂಬದಲ್ಲಿ ಜನಿಸಿಲ್ಲದಿದ್ದರೂ ಮೇಲ್ಮಧ್ಯಮ ಕುಟುಂಬದಲ್ಲಿ ಜನಿಸಿದವರು. ಅವರ ತಂದೆಯವರು ಕೂಲಿಮಠದಲ್ಲಿ ಖಾಸಗಿಯಾಗಿ ಅಕ್ಷರಾಭ್ಯಾಸ ಕೊಡಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಐಗಳು ಇವರ ಮೊದಲ ಗುರುವಾಗಿ ಪುಟ್ಟಪ್ಪನವರನ್ನು ತಿದ್ದಿತೀಡಿದರು. ಓದಿನಲ್ಲಿ ಆಸಕ್ತಿ ಹೊಂದಿದ್ದ ಪುಟ್ಟಪ್ಪನವರು ಅಂದು ಶಿಕ್ಷಣದಿಂದ ವಂಚಿತವಾಗಿದ್ದ ಜಿಲ್ಲೆಗೆ ಕ್ರೈಸ್ತಪಾದ್ರಿಗಳು ಬಂದು ಶಿಕ್ಷಣಪ್ರಸರಣ ಮಾಡುವ ನೆಪದಲ್ಲಿ ಕ್ರೈಸ್ತಧರ್ಮ ಪ್ರಚಾರ ಮಾಡಹತ್ತಿದ್ದರು. ಒಮ್ಮೆ ಬಿ.ಎಸ್.ಡಿ. ಮೋಸಸ್ ಎಂಬ ಕ್ರೈಸ್ತ ಪಾದ್ರಿಯ ಬೋಧನೆಯ ಗಾಢ ಪ್ರಭಾವಕ್ಕೆ ಒಳಗಾಗಿದ್ದರು. ಪುಟ್ಟಪ್ಪನವರು ಹಾಗೂ ಅವರ ಬಂಧುಗಳಿಂದ ರಾಮಣ್ಣಗೌಡರು ಕ್ರೈಸ್ತಧರ್ಮಕ್ಕೆ ಸೇರುವರೇನೋ ಎನ್ನುವಷ್ಟರ ಮಟ್ಟಿಗೆ ಆ ಪಾದ್ರಿಯು ಪ್ರಭಾವ ಬೀರಿದ್ದರು. ಊರಿನವರು ಒಗ್ಗೂಡಿ ಕ್ರೈಸ್ತರ ಪ್ರಭಾವವನ್ನು ತಗ್ಗಿಸಿದರು. ಅಂದು ಇಂದಿನಂತೆ ನಾಟಕ, ಸಿನಿಮಾ, ದೂರದರ್ಶನಗಳ ಮನರಂಜನೆಗಳು ಇರಲಿಲ್ಲ. ಭಾಗವತರ ಯಕ್ಷಗಾನ, ರಾಮಾಯಣ, ಮಹಾಭಾರತ ಭಾಗವತಕ್ಕೆ ಸಂಬಂಧಿಸಿದ ನಾಟಕಗಳು, ಕಾವ್ಯವಾಚನ ಇವೇ ಮುಂತಾದವುಗಳು ಅಂದಿನ ಮನರಂಜನೆಗಳಾಗಿದ್ದವು. ಇವುಗಳು ಎಳೆಯ ವಯಸ್ಸಿನ ಪುಟ್ಟಪ್ಪನವರ ಮೇಲೆ ಪ್ರಭಾವ ಬೀರಿದವು.

ತೀರ್ಥಹಳ್ಳಿಯಲ್ಲಿ ತಮ್ಮ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿದ ಪುಟ್ಟಪ್ಪನವರು 1918ರಲ್ಲಿ ಮೈಸೂರಿನ ಹೆಸರಾಂತ ವೆಸ್ಲಿಯನ್ ಮಿಷನ್ ಹೈಸ್ಕೂಲಿಗೆ ಸೇರಿದರು. ಓದಿನ ಬಗ್ಗೆ ತುಂಬು ಕಾಳಜಿ ಹೊಂದಿದ್ದ ಇವರು ಜ್ಞಾನಾರ್ಜನೆ ಮಾಡತೊಡಗಿದರು. ಎಳೆಯ ವಯಸ್ಸಿನಲ್ಲಿ ವಿಶ್ವವಿಖ್ಯಾತ ಕವಿಗಳಾದ ವರ್ಡ್ಸ್‌ವರ್ತ್, ಬಿ.ಪಿ.ಷೆಲ್ಲಿ, ಟಾಲ್‌ಸ್ಟಾಯ್, ಮಿಲ್ಟನ್ ಇವರೇ ಮುಂತಾದವರ ಕೃತಿಗಳನ್ನು ಓದಿ ಪ್ರಭಾವಿತರಾದರು. ತಾನು ಅವರಂತೆ ಮಹಾಕವಿಯಾಗಬೇಕೆಂಬ ಹಂಬಲ ಬೆಳೆಯಿತು. ಅವರ ಕೃತಿರಚನೆ, ಬರೆಯುವ ದಾಟಿ, ಸಿರಿಸೊಬಗನ್ನು ವರ್ಣಿಸುವ ರೀತಿ–ನೀತಿಗಳು ಪುಟ್ಟಪ್ಪನವರ ಮೇಲೆ ಪ್ರಭಾವ ಬೀರಿತು.

ಪುಟ್ಟಪ್ಪನವರ ಮನಸ್ಸು ಸಹಜವಾಗಿ ಲೌಕಿಕಕ್ಕಿಂತಲೂ ಪಾರಮಾರ್ಥಿಕ ದೆಡೆಗೆ ಒಲಿಯಿತು. ಶಂಕರಾಚಾರ್ಯ, ರಾಮಾನುಜಾಚಾರ್ಯ, ಹಿಂದೂಧರ್ಮ, ಕ್ರೈಸ್ತಧರ್ಮ, ರಾಮಾಯಣ, ಮಹಾಭಾರತ, ಭಾಗವತಗಳು ಇವರ ಮೇಲೆ ಪ್ರಭಾವ ಬೀರಿದವು. ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿವಿವೇಕಾನಂದರ ಕೃತಿಗಳನ್ನು ಓದಿ ಪುಲಕಿತರಾದರು ಹಾಗೂ ಪ್ರಭಾವಕ್ಕೊಳಗಾದರು. ಆಗಿಂದಾಗ್ಗೆ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ನಡೆಯುತ್ತಿದ್ದ ವಿಶೇಷ ಉಪನ್ಯಾಸಗಳು, ಭಜನೆ,

ಚರ್ಚೆ ಇವೇ ಮುಂತಾದವುಗಳಲ್ಲಿ ಭಾಗವಹಿಸುತ್ತಿದ್ದರು. ಸ್ವಾಮಿವಿವೇಕಾನಂದರ ಪ್ರಭಾವಕ್ಕೊಳಗಾದರು. ಅಂದು ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ದೇಶ್ವರಾನಂದ ಸ್ವಾಮಿಗಳು ಆ ಯುವಕನಲ್ಲಿದ್ದ ಸಾತ್ವಿಕ ಗುಣಗಳನ್ನು ಮೆಚ್ಚಿಕೊಂಡರು. ಪುಟ್ಟಪ್ಪನವರನ್ನು ತಮ್ಮ ಶಿಷ್ಯವೃಂದದಲ್ಲಿ ಒಬ್ಬರನ್ನಾಗಿ ಸ್ವೀಕರಿಸಿದರು. ಅದೃಷ್ಟವೋ ಏನೋ ಎಂಬಂತೆ ಒಮ್ಮೆ ಪುಟ್ಟಪ್ಪನವರು ಅನಾರೋಗ್ಯಕ್ಕೆ ತುತ್ತಾದರು. ಚೇತರಿಸಿಕೊಂಡ ನಂತರ ಅವರು ಬಾಡಿಗೆಗೆ ವಾಸವಿದ್ದ ಸಣ್ಣಕೋಣೆಯಲ್ಲಿ ಇರುವುದು ಬೇಡವೆಂದು ಹೇಳಿ ಅವರ ಗುರುಗಳಾದ ನಾ. ಕಸ್ತೂರಿಯವರು ಮತ್ತು ಸಿದ್ದೇಶ್ವರ ಸ್ವಾಮೀಜಿಗಳು ರಾಮಕೃಷ್ಣಾಶ್ರಮದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. ಇದು ನಿಜಕ್ಕೂ ಅವರ ಯೋಗಾಯೋಗವೇ ಸರಿ. ಕಾರಣವೇನೆಂದರೆ ಪ್ರಶಾಂತ ವಾತಾವರಣ ಹಾಗೂ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ವಾಸ ಮಾಡುವ ಅವಕಾಶ ದೊರೆಯಿತು. ಪುಟ್ಟಪ್ಪನವರು ಎಂ.ಎ., ಪಾಸು ಮಾಡಿ ಉಪನ್ಯಾಸಕರಾಗಿ ಕೆಲಸಕ್ಕೆ ಸೇರಿದಾಗಲೂ ಆಶ್ರಮವಾಸಿಗಳಾಗಿದ್ದರು, ಎಂದರೆ ಸಿದ್ದೇಶ್ವರಾನಂದರ ಹಾಗೂ ಪುಟ್ಟಪ್ಪನವರ ಸಂಬಂಧ ಹೇಗಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ಓದಿನಲ್ಲಿ ಆಸಕ್ತಿಯಿದ್ದ ಪುಟ್ಟಪ್ಪನವರು ಪದವಿಪೂರ್ವ (ಎಂಟ್ರೆನ್ಸ್ ಎಕ್ಸಾಮ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. ವಿದ್ಯಾರ್ಥಿಯಾಗಿದ್ದ ಪುಟ್ಟಪ್ಪನವರ ಮೇಲೆ ಪ್ರೊ. ಬಿ.ಎಂ.ಶ್ರೀಕಂಠಯ್ಯ, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ, ಪ್ರೊ. ಟಿ.ಎಸ್.ವೆಂಕಣ್ಣಯ್ಯ ಇವರೇ ಮುಂತಾದವರು ಪ್ರಭಾವ ಬೀರಿದರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಪುಟ್ಟಪ್ಪನವರಲ್ಲಿ ಕವಿಯ ಮನಸ್ಸು ಇದ್ದಿತು. ಬಾಲಪ್ರತಿಭೆಯು ತುಂಬಿದ್ದಿತು. ತಮ್ಮ 18ನೇ ವಯಸ್ಸಿನಲ್ಲಿ ಎಂದರೆ 1922ರಲ್ಲಿ ಬಿಗಿನರ್ಸ್ ಮ್ಯೂಸ್ (Beginner's Muse) ಎಂಬ ಹೆಸರಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕವನ ಸಂಕಲನವನ್ನು ಬರೆದು ಅವರ ಗುರುಗಳಾದ ಐರಿಷ್ ಕವಿ ಜೇಮ್ಸ್ ಕಸಿನ್ಸ್‌ರವರಿಗೆ ತೋರಿಸಿದರು. ಕಸ್ಸಿನ್ಸ್‌ರವರು ಅದನ್ನು ಓದಿ ನೀವು ರವೀಂದ್ರನಾಥ ಠಾಗೂರರಂತೆ ನಿಮ್ಮ ಮಾತೃಭಾಷೆಯಲ್ಲೇ ನಿಮ್ಮ ಪಾಂಡಿತ್ಯವನ್ನು ಹೊರಗೆಡವಿ ಎಂದು ತಿಳಿಸಿದರು. ಮೊದಮೊದಲು ಕಸಿನ್ಸ್‌ರವರ ಮಾತು ರುಚಿಸಲಿಲ್ಲ. 'ಏಪ್ರಿಲ್' ಎಂಬ ಆಂಗ್ಲ ಕವನವನ್ನು 'ಚೈತ್ರ–ವೈಶಾಖ' ಎಂಬ ತಲೆಬರಹದೊಂದಿಗೆ ಪುಸ್ತಕದ ರೂಪದಲ್ಲಿ ಹೊರ ತಂದರು. ಓದಿನಲ್ಲಿ ಆಸಕ್ತಿ ಹೊಂದಿದ್ದ ಪುಟ್ಟಪ್ಪನವರು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ., ಪದವಿಗೆ ಸೇರಿದರು. ಓದಿನ ಜೊತೆ ಜೊತೆಗೆ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದರು.

ಮೈಸೂರಿನ ಸಣ್ಣಕೋಣೆಯೊಂದರಲ್ಲಿ ಅವರ ವಾಸ್ತವ್ಯ. ಅಂದಿನ ವಯೋಮಾನದವರಲ್ಲಿರಬೇಕಾದ ಅಮೋದ, ಪ್ರಮೋದ, ಆಟೋಟಗಳ ಬಗ್ಗೆ ಅಷ್ಟಾಗಿ ಆಸಕ್ತಿಯಿರಲಿಲ್ಲ. ಸದಾ ಓದಿನ ಗೀಳು ಹಚ್ಚಿಕೊಂಡಿದ್ದ ಪುಟ್ಟಪ್ಪನವರ ಆರೋಗ್ಯ ಹದಗೆಟ್ಟಿತು. ಆಸ್ಪತ್ರೆ ಸೇರಬೇಕಾಗಿ ಬಂತು.

ರಾಮಕೃಷ್ಣಾಶ್ರಮದ ನಂಟು

ಪುಟ್ಟಪ್ಪನವರಿಗೆ ಸ್ವಾಮಿವಿವೇಕಾನಂದ ಹಾಗೂ ರಾಮಕೃಷ್ಣ ಪರಮಹಂಸರ ಬಗ್ಗೆ ಗೌರವಾದಾರಗಳಿತ್ತು. ರಾಮಕೃಷ್ಣಾಶ್ರಮದೊಂದಿಗೆ ಒಡನಾಟವಿತ್ತು. ಇದರಿಂದಾಗಿ ಅವರ ಗುರುಗಳಾದ ನಾ. ಕಸ್ತೂರಿಯವರ, ವೆಂಕಣ್ಣಯ್ಯನವರ ಸಲಹೆಯಂತೆ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ವಾಸ್ತವ್ಯ ಹೂಡಿದರು. ರಾಮಕೃಷ್ಣಾಶ್ರಮದ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಸ್ವಾಮಿ ಸಿದ್ದೇಶ್ವರಾನಂದರು ಪುಟ್ಟಪ್ಪನವರನ್ನು ಬರಮಾಡಿಕೊಂಡರು. ಪುಟ್ಟಪ್ಪನವರು ವಿವಾಹವಾಗುವ ತನಕ ಆಶ್ರಮವಾಸಿಗಳಾಗಿದ್ದರು. ಕಾಲೇಜಿನಲ್ಲಿ ಪುಟ್ಟಪ್ಪನವರ ಗುರುಗಳಾದ ಬಿ.ಎಂ. ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ ಇನ್ನೂ ಮುಂತಾದವರು ಪುಟ್ಟಪ್ಪನವರನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಪುಟ್ಟಪ್ಪನವರ 'ನೆನಪಿನ ದೋಣಿಯಲ್ಲಿ' ಎಂಬ ಅವರ ಆತ್ಮಚರಿತ್ರೆಯಲ್ಲಿ ಅವರ ಎಲ್ಲಾ ಗುರುಗಳಿಗಿಂತಲೂ ಟಿ.ಎಸ್. ವೆಂಕಣ್ಣಯ್ಯನವರನ್ನು ಹಾಗೂ ತಮಗೆ ಆಶ್ರಯ ನೀಡಿದ ಸ್ವಾಮಿಸಿದ್ದೇಶ್ವರರನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಇಡೀ ವಿಶ್ವಕ್ಕೆ ಆಧ್ಯಾತ್ಮಿಕತೆಯನ್ನು ಸಾರಿದ ಹಾಗೂ ಸಾರುತ್ತಿರುವ ರಾಮಕೃಷ್ಣಾಶ್ರಮವು ಪುಟ್ಟಪ್ಪನವರ ವಾಸ್ತವ್ಯವಾಗಿತ್ತು ಎಂದರೆ ನಿಜಕ್ಕೂ ಯೋಗಾಯೋಗವೇ ಸರಿ.

ಪುಟ್ಟಪ್ಪನವರು ಮೊದಲ ಶ್ರೇಣಿಯಲ್ಲಿ ಬಿ.ಎ. ಪದವಿಯನ್ನು ಪಡೆದರು. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಯವರ ಪ್ರಭಾವ ಹಾಗೂ ನಿರ್ದೇಶನದಂತೆ ಕನ್ನಡ ಎಂ.ಎ.ಗೆ ಸೇರಿದರು. ಯುವಕವಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರ ಎಲ್ಲಾ ಗುರುಗಳಿಗೂ (ಬಿ.ಎ., ಎಂ.ಎ. ಸೇರಿ) ಪುಟ್ಟಪ್ಪನವರು ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಎಂ.ಎ. ಓದುತ್ತಿರುವಾಗಲೇ 'ಜಲಗಾರ', 'ಯಮನಸೋಲು' ಎಂಬ ನಾಟಕಗಳನ್ನು ಬರೆದರು. ಕೇವಲ ನಾಟಕಗಳನ್ನು ಬರೆಯುವುದು ಮಾತ್ರವಲ್ಲ ನಾಟಕಗಳಲ್ಲೂ ಬಣ್ಣಹಚ್ಚಿ ಪಾತ್ರಕ್ಕೆ ಜೀವಕಳೆಯನ್ನು ತುಂಬುತ್ತಿದ್ದರು. ಇಂದಿನ ಕಾಲದಂತೆ ಅಂದು ಸ್ತ್ರೀ ಪಾತ್ರಗಳನ್ನು ಗಂಡಸರೇ ವಹಿಸಿಕೊಳ್ಳಬೇಕಿತ್ತು. ಕುವೆಂಪುರವರು ಸ್ತ್ರೀ ವೇಷವನ್ನು ಧರಿಸಿದ್ದುಂಟು. ಓದುಗರಿಗೆ ರುಚಿಸುವಂತಹ ನೀಳ್ಗವನವನ್ನು ರಚಿಸಲು ಪ್ರಾರಂಭಿಸಿದರು. ರಾಬರ್ಟ್ ಬ್ರೌನಿಂಗ್‌ರವರ The

pied-piper of Hamelin ಕೃತಿಯ ರೂಪಾಂತರವೇ 'ಬೊಮ್ಮನಹಳ್ಳಿ ಕಿಂದರಜೋಗಿ' ಎಂಬ ನೀಳ್ಗವನ. ಇಂತಹ ನೀಳ್ಗವನಗಳನ್ನು ಒಟ್ಟುಗೂಡಿಸಿ 'ಅಮಲನ ಕಥೆ' ಎಂಬ ಕೃತಿಯನ್ನು ರಚಿಸಿದರು. 'ಬೊಮ್ಮನಹಳ್ಳಿಯ ಕಿಂದರಜೋಗಿ' ಅಂದು ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ಕವನವೇ ಸರಿ.

ಅಧ್ಯಾಪಕರಾಗಿ ಪುಟ್ಟಪ್ಪನವರು

ಪುಟ್ಟಪ್ಪನವರ ಶ್ರಮ ವ್ಯರ್ಥವಾಗಲಿಲ್ಲ. 1929ರಲ್ಲಿ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ಪ್ರತಿಭಾವಂತ ವಿದ್ಯಾರ್ಥಿ ಹಾಗೂ ಯುವ ಕವಿ ಪುಟ್ಟಪ್ಪನವರಿಗೆ ಉದ್ಯೋಗ ಕಾಯ್ದಿತ್ತು. ಎಂ.ಎ. ಪಾಸು ಮಾಡಿದ ವರ್ಷವೇ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಅಧ್ಯಯನ, ಅಧ್ಯಾಪನ ಮತ್ತು ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ಅಧ್ಯಾಪಕರಾಗಿರುವಾಗಲೇ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅವರೊಬ್ಬ ಮಾದರಿ ಅಧ್ಯಾಪಕರಾಗಿದ್ದರು. 1933ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. 1933ರಿಂದ ಕವನ, ಕಾದಂಬರಿ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡುತ್ತಾ ಬಂದರು. 1936ರಲ್ಲಿ 'ಚಿತ್ರಾಂಗದ' ಎಂಬ ಕಾವ್ಯವನ್ನು ರಚಿಸಿದರು. ಇದು ಖಂಡಕಾವ್ಯವಾಗಿದೆ.

ವಿವಾಹ ಬಂಧನ

ಈಗಾಗಲೇ ನಿರ್ಧಾರವಾಗಿದ್ದ ಹೆಣ್ಣು ದೇವಂಗಿಯ ರಾಮಣ್ಣಗೌಡರ ಕುಮಾರಿ ಹೇಮಾವತಿ. ಹೇಮಾವತಿಯವರು ಪುಟ್ಟಪ್ಪನವರ ಬಂಧುವಾಗಿದ್ದು ಆಕೆಯ ಹೆಸರನ್ನು ತಾವೇ ಇಟ್ಟಿದ್ದಾಗಿ ಪುಟ್ಟಪ್ಪನವರು ತಮ್ಮ 'ನೆನಪಿನ ದೋಣಿಯಲ್ಲಿ' ಎಂಬ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಮೈಸೂರಿನಲ್ಲಿ ತಾವು ಸಂಸಾರ ಹೂಡುವ ತನಕ ರಾಮಕೃಷ್ಣಾಶ್ರಮವೇ ಅವರ ಮನೆಯಾಗಿತ್ತು. ನಂತರ ಆಶ್ರಮ ಬಿಟ್ಟು ಮೈಸೂರಿನಲ್ಲಿ ಚಿಕ್ಕಮನೆ ಮಾಡಿದರು. ವೈವಾಹಿಕ ಜೀವನಕ್ಕೆ ತಮ್ಮ ಸಾಹಿತ್ಯ ರಚನೆಯಾಗಲಿ, ಉದ್ಯೋಗವಾಗಲೀ ಅಡ್ಡಿಯಾಗದಂತೆ ಒಬ್ಬ ಸದ್ಗೃಹಸ್ಥನಾಗಿ ಬಾಳ್ವೆ ಮಾಡಿದರು (ಅವರ ನೆನಪಿನ ದೋಣಿಯು ಎಲ್ಲರಿಗೂ ಮಾದರಿ).

ಕುವೆಂಪುರವರ ಸಾಹಿತ್ಯದ ಹೊಳಹುಗಳು / ತಿರುಳು

ಕುವೆಂಪುರವರು ಈ ಮೊದಲೇ ಹೇಳಿರುವಂತೆ ಜಾತಿ, ಮತ, ಧರ್ಮ, ಮೂಢನಂಬಿಕೆಗಳಿಗೆ ಬಲಿಯಾಗದೆ ಸಮಾಜವನ್ನು ತಮ್ಮ ಸಾಹಿತ್ಯದಿಂದ ತಿದ್ದಲು

ಪ್ರಯತ್ನ ಮಾಡಿದ್ದಾರೆ. ತಮ್ಮ ಚೊಚ್ಚಲ ಕವನ ಸಂಕಲನವಾದ 'ಕೊಳಲು' ಕವಿಯ ಮನಸ್ಸನ್ನು ತಿಳಿಸುತ್ತದೆ. ಅದು ಪುಟ್ಟಪ್ಪನವರ ಸಾಹಿತ್ಯಕ್ಕೆ ದಾರಿದೀಪವಾಗುತ್ತದೆ. ಎಂ.ಎ. ವಿದ್ಯಾರ್ಥಿ ದೆಸೆಯಲ್ಲಿಯೇ ಬರೆದ ನಾಟಕಗಳಾದ 'ಜಲಗಾರ' ಮತ್ತು 'ಯಮನ ಸೋಲು', 'ಸರಳ ರಗಳೆ'ಯನ್ನು ಮೊದಲ ಬಾರಿಗೆ ನಾಟಕದ ರಚನೆಗೆ ಬಳಸಿಕೊಂಡಿರುವುದು ನಿಜಕ್ಕೂ ಸ್ತುತ್ಯಾರ್ಹ. ಕಾದಂಬರಿಯ ವಿಷಯಕ್ಕೆ ಬಂದರೆ 'ಮಲೆಗಳಲ್ಲಿ ಮದುಮಗಳು'. ಮಲೆನಾಡಿನ ಬದುಕು ಹಾಗೂ ಅಲ್ಲಿನ ವೈಶಿಷ್ಟ್ಯಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅದೇರೀತಿಯ ಮತ್ತೊಂದು ಕಾದಂಬರಿ ಎಂದರೆ ಕಾನೂರು ಸುಬ್ಬಮ್ಮ ಹೆಗ್ಗಡತಿ. ಮಲೆನಾಡು ಜೀವನ ಕುರಿತು ಕುವೆಂಪು ಕಾದಂಬರಿಗಳಲ್ಲಿ ಭಿನ್ನ ಸಾಂಸ್ಕೃತಿಕ ಸ್ತರಕ್ಕೆ ಸೇರಿದ ಪಾತ್ರಗಳು ಬರುತ್ತವೆ. ಅವುಗಳನ್ನು ಸ್ಥೂಲವಾಗಿ ಮೇಲು ವರ್ಗದ ಬ್ರಾಹ್ಮಣರು, ಗೌಡರು (ಒಕ್ಕಲಿಗರು) ಹಳೇಪೈಕದವರು ಅಥವಾ ದೀವರು, ಹರಿಜನರು, ಬೇರೆಡೆಯಿಂದ ಬಂದ ದಕ್ಷಿಣ ಕನ್ನಡದ ಬಿಲ್ಲವರು, ಮುಸ್ಲಿಮರು, ಕ್ರಿಶ್ಚಿಯನರು ಇವರೇ ಮುಂತಾದವರು. ಆಯಾ ವರ್ಗದವರು ಆಡುವ ಕನ್ನಡವನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಕುವೆಂಪುರವರು ತಮ್ಮ ಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ಕುವೆಂಪುರವರು 'ಸರ್ವರಿಗೂ ಸಮಬಾಳು' 'ಸರ್ವರಿಗೂ ಸಮಪಾಲು' ಎನ್ನುವುದನ್ನು ಮೂಲಮಂತ್ರವಾಗಿಟ್ಟುಕೊಂಡು ಎಲ್ಲಾ ಪಾತ್ರಗಳಿಗೂ ಸಮಾನವಾದ ಅವಕಾಶವನ್ನು ನೀಡಿದ್ದಾರೆ. ಕವಿಯ ಮನಸ್ಸಿನ ಸಹೃದಯವನ್ನು ಅವರ ಕೃತಿಗಳಿಂದಲೇ ಕಾಣಬಹುದು.

ಕುವೆಂಪುರವರ ನಾಟಕಗಳು 1930ರ ಸಂದರ್ಭದಲ್ಲಿ ಅವರ ಗುರುಗಳಾದ ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ರಂಗಭೂಮಿಗೆ ಸಾಹಿತ್ಯ ಪ್ರಧಾನವಾದ ನಾಟಕಗಳು ದೊರಕುವಂತಾಯಿತು. ಅಂದಿನಿಂದ ಇಂದಿನವರೆವಿಗೂ ಜಲಗಾರ ಮಹಾರಾತ್ರಿ, ಸ್ಮಶಾನ ಕುರುಕ್ಷೇತ್ರ, ಯಮನ ಸೋಲು, ನನ್ನ ಗೋಪಾಲ, ರಕ್ತಾಕ್ಷಿ ಇವೇ ಮುಂತಾದ ನಾಟಕಗಳು ಶಾಲಾ, ಕಾಲೇಜುಗಳಲ್ಲಿ, ಹಳ್ಳಿಗಳಲ್ಲಿ ನಡೆಯುತ್ತಿವೆ.

ಕಾದಂಬರಿಯ ವಿಷಯಕ್ಕೆ ಬಂದರೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು ಮಲೆಗಳಲ್ಲಿ 'ಮದುಮಗಳು'. ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಯನ್ನು ರಚಿಸಿದ ಮೂವತ್ತು ವರ್ಷಗಳ ನಂತರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ರಚಿಸಿದರು. ಬಂಧದ ಮತ್ತು ವಿನ್ಯಾಸದ ದೃಷ್ಟಿಯಿಂದ ಅವರ ಎರಡೂ ಕಾದಂಬರಿಗಳು ವಿಭಿನ್ನವಾಗಿವೆ. ಸಾಮಾನ್ಯವಾಗಿ

ಮಹಾನ್ ಸಾಹಿತಿಗಳು ಎಳೆಯರ ಅಥವಾ ಮಕ್ಕಳ ಸಾಹಿತ್ಯಕ್ಕೆ ಅಷ್ಟಾಗಿ ಗಮನ ಕೊಡುವುದಿಲ್ಲ. ಆದರೆ ಕುವೆಂಪುರವರು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಟ್ಟು ಒಂಬತ್ತು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅಮಲನ ಕಥೆ, ಮರಿವಿಜ್ಞಾನಿ, ನನ್ನ ಮನೆ, ಮೇಘಪುರ, ಹಾಳೂರು ಮತ್ತು ಬೊಮ್ಮನಹಳ್ಳಿಯ ಕಿಂದರಿಜೋಗಿ ಎಂಬ ಆರು ಪದ್ಯ ಸಂಕಲನಗಳನ್ನು ಹಾಗೂ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕಥೆಯೊಂದನ್ನು ಬಿಟ್ಟರೆ 'ನನ್ನ ಗೋಪಾಲ' ಮತ್ತು 'ಮೋಡಣ್ಣನ ತಮ್ಮ' ಎಂಬ ಎರಡು ನಾಟಕಗಳು. ಕುವೆಂಪುರವರು ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಮಕ್ಕಳ ಪರಿಶುದ್ಧವಾದ ಮನಸ್ಸನ್ನು ಅರಳಿಸುವುದೇ ಅಲ್ಲದೆ ನೈತಿಕತೆಯನ್ನು ಅದರಲ್ಲಿ ತುಂಬಿದ್ದಾರೆ. 'ಬೊಮ್ಮನಹಳ್ಳಿ ಕಿಂದರಿಜೋಗಿ'ಯಂತೂ ಮಕ್ಕಳ ಮನಸ್ಸಿನಷ್ಟೇ ಏಕೆ, ದೊಡ್ಡವರ ಮನಸ್ಸನ್ನೂ ಆಕರ್ಷಿಸಿದೆ. ಈ ಪದ್ಯವು ಕುವೆಂಪುರವರಿಗೆ ಅಪಾರವಾದ ಕೀರ್ತಿ ತಂದುಕೊಟ್ಟಿದ್ದೇ ಅಲ್ಲದೆ ಅವರ ಹೆಸರನ್ನು ನಾಡಿನಾದ್ಯಂತ ಅಜರಾಮರವಾಗಿಸಿದೆ.

ಮಕ್ಕಳ ಕಥೆ, ಮಕ್ಕಳ ಸಾಹಿತ್ಯ ವಿಷಯಕ್ಕೆ ಬಂದರೆ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕೃತಿಯು ಮಕ್ಕಳಿಗೆ ಕುತೂಹಲ ಕೆರಳಿಸುವುದಲ್ಲದೆ ಮಕ್ಕಳ ಸಾಹಿತ್ಯ ರಚನೆಗೆ ಇದು ಸಹಾಯ ಮಾಡುತ್ತದೆ. ಮಕ್ಕಳ ಕುತೂಹಲನ್ನು ಕೃತಿಯ ಹೆಸರಿನಲ್ಲೇ ಕೆರಳಿಸುತ್ತದೆ. ಮಕ್ಕಳಲ್ಲಿ ಏಕಾಗ್ರತೆ ಮೂಡಿಸುವ ಹಾಗೂ ಶಕ್ತಿ ಬಲಗೊಳ್ಳುವಂತೆ ಮಾಡಲು ಇದು ನೆರವಾಗುತ್ತದೆ. ಮುಂದೆ ಮಕ್ಕಳು ಸಾಹಿತ್ಯವನ್ನು ಓದಲು ಹಾಗೂ ರಚಿಸಲು ಇದು ನೆರವಾಗುತ್ತದೆ. 'ನನ್ನ ಗೋಪಾಲ' ಮತ್ತು 'ಮೋಡಣ್ಣನ ತಮ್ಮ' ಮಕ್ಕಳ ನಾಟಕಗಳು. ಮೊದಲನೆಯದು ಸುಲಭವಾದ ಗದ್ಯದಿಂದ ಕೂಡಿ ಸೊಗಸೆನಿಸಿದರೆ ಎರಡನೆಯದು ಲಯಬದ್ಧವಾದ ಪ್ರಾಸಾನು ಪ್ರಾಸಗಳಿಂದ ಕೂಡಿದ್ದು ಗೀತರೂಪಕವಾಗಿದೆ. ಈ ಎರಡೂ ನಾಟಕಗಳು ಮಕ್ಕಳ ಮನಸ್ಸನ್ನು ಜಾಗೃತಗೊಳಿಸುತ್ತವೆ.

ಕುವೆಂಪುರವರು ರಚಿಸಿರುವ ಜೀವನ ಚರಿತ್ರೆಯು ಸಾಧಾರಣ ವ್ಯಕ್ತಿಗಳಲ್ಲ. ಜೀವನ ಚರಿತ್ರೆಗಳನ್ನು ಬರೆಯಲು ಕೆಲವು ಉದ್ದೇಶಗಳಿರುತ್ತವೆ. ತಮ್ಮ ಜೀವಿತಾವಧಿಯಲ್ಲಿ ಸಾಮಾನ್ಯರು ಸಾಧಿಸಲಾಗದ್ದನ್ನು ಸಾಧಿಸಿ ಕೀರ್ತಿವಂತರಾಗುತ್ತಾರೆ. ಇಂತಹ ವ್ಯಕ್ತಿಗಳ ಜೀವನವನ್ನು ಮುಂದಿನ ತಲೆಮಾರಿನ ಜನ ತಿಳಿದುಕೊಂಡು ಅವರಂತಾಗಲು ಇಲ್ಲವೇ ಅವರ ಒಂದು ಅಂಶದಷ್ಟಾದರೂ ಆಗಲು ಪ್ರಯತ್ನಿಸುತ್ತಾರೆ. ಅಂತಹ ಪ್ರಾತಃಸ್ಮರಣೀಯರೆಂದರೆ 'ಶ್ರೀ ರಾಮಕೃಷ್ಣ ಪರಮಹಂಸ' ಮತ್ತು 'ಸ್ವಾಮಿ ವಿವೇಕಾನಂದ' ಎಂಬ ಇಬ್ಬರು ಮಹಾನ್ ವ್ಯಕ್ತಿಗಳ

ಜೀವನಚರಿತ್ರೆ. ಕುವೆಂಪುರವರು ಕಲ್ಕತ್ತಾದ ಬಳಿಯಿರುವ ಬೇಲೂರು ಮಠಕ್ಕೆ ತೆರಳಿ ಅಲ್ಲಿ ಸ್ವಲ್ಪಕಾಲ ತಂಗಿದ್ದು ಶ್ರೀ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರು ಓಡಾಡಿದ ಸ್ಥಳವನ್ನು ಕಂಡು ಪುಲಕಿತರಾದರು. ಶ್ರೀ ರಾಮಕೃಷ್ಣ ಪರಮಹಂಸರಲ್ಲಿದ್ದ ಜ್ಞಾನ, ಜಾತ್ಯಾತೀತ ಮನೋಭಾವ ಕುವೆಂಪುರವರನ್ನು ಆಕರ್ಷಿಸಿತು. ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಅವರ ಪತ್ನಿ ಶ್ರೀ ಶಾರದಾದೇವಿಯವರ ನಡುವಿನ ಅಲೌಕಿಕ ಸಂಬಂಧ ಕುವೆಂಪುರವರ ಮೇಲೆ ಗಾಢ ಪ್ರಭಾವ ಬೀರಿತು. ಪತ್ನಿಯನ್ನು ಮಾತೆಯಂತೆ ನಡೆಸಿಕೊಂಡದ್ದು ಕುವೆಂಪುರವರೂ ತಮ್ಮ ಪತ್ನಿಯನ್ನು ಮಾತೆಯಂತೆ ನಡೆಸಿಕೊಳ್ಳತೊಡಗಿದರು. ತಮ್ಮ ಪತ್ನಿಯನ್ನು ಅಕ್ಕ (ಮಲೆನಾಡಿನಲ್ಲಿ ತಾಯಿಯನ್ನು ಅಕ್ಕ ಎಂತಲೂ, ತಂದೆಯನ್ನು ಅಣ್ಣ ಎಂತಲೂ ಕರೆಯುತ್ತಾರೆ) ಎಂದು ಕರೆಯುತ್ತಿದ್ದುದು ಇದಕ್ಕೆ ಸಾಕ್ಷಿಯಾಗಿದೆ (ನೆನಪಿನ ದೋಣಿಯಲ್ಲಿ ಕೃತಿ). ಅದೇ ರೀತಿ ವಿವೇಕಾನಂದರ ಜೀವನ ಚರಿತ್ರೆಯಲ್ಲಿ ಮಹಾರಾಜ ಮಂಗಳಸಿಂಗರಿಗೆ ಮೂರ್ತಿಪೂಜೆಯಲ್ಲಿ ನಂಬಿಕೆ ಹುಟ್ಟಿಸಲು ಸ್ವಾಮಿ ವಿವೇಕಾನಂದರು ಅನುಸರಿಸಿದ ಕ್ರಮ, ಮಾಯಾವತಿಯಲ್ಲಿ ಶ್ರೀ ರಾಮಕೃಷ್ಣರ ಮೂರ್ತಿ ಪೂಜೆಯನ್ನು ನಿಲ್ಲಿಸಿ ಜ್ಞಾನ ಮಾರ್ಗವನ್ನು ತಿಳಿಯಪಡಿಸಿದುದನ್ನು ಕುವೆಂಪುರವರು ಸ್ವಾಮಿ ವಿವೇಕಾನಂದರ ಕೃತಿಯಲ್ಲಿ ಬರೆದಿದ್ದಾರೆ. ವಿವೇಕಾನಂದರು ಅಮೆರಿಕಾಗೆ ಹೋಗಿದ್ದ ಪರಿ ಚಿಕಾಗೊ ಭಾಷಣವನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ.

ಕುವೆಂಪುರವರು ಕನ್ನಡ ಭಾಷೆಗೆ, ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಕಾದಂಬರಿ, ನಾಟಕಗಳು, ಜೀವನಚರಿತ್ರೆ, ಮಕ್ಕಳ ಸಾಹಿತ್ಯ ಇವೇ ಮುಂತಾದ ಕೃತಿಗಳಿಂದಾಗಿ ಕನ್ನಡ ಭಾಷೆಯು ಸಮೃದ್ಧಗೊಂಡಿದೆ. ಓದುಗನ ವಯೋಮಾನಕ್ಕೆ ತಕ್ಕಂತೆ ಕೃತಿಗಳನ್ನು ರಚಿಸಿರುವುದು ಕುವೆಂಪುರವರ ಜಾಣ್ಮೆಯನ್ನು ಪ್ರದರ್ಶಿಸಿದೆ. ಮಕ್ಕಳ ಮನಸ್ಸನ್ನು ಅರಿತು ಓದಲು ಅನುಕೂಲವಾಗುವಂತೆ ಇರುವ ಸರಳ ಭಾಷೆ, ಪ್ರೌಢರು ಓದಲು ಅನುಕೂಲವಾಗುವಂತೆ ಕಾದಂಬರಿಗಳು ವಿದ್ವಜ್ಜನರಿಗಾಗಿಯೇ ಮೀಸಲಾದ 'ರಾಮಾಯಣ ದರ್ಶನಂ' ಮಹಾಕಾವ್ಯ ನಿಜಕ್ಕೂ ಮೆಚ್ಚುವಂತಹದ್ದು.

ಶೈಕ್ಷಣಿಕ ಸಾಧನೆ

ಕುವೆಂಪುರವರು ತಾವು ಓದಿದ ಕಾಲೇಜಿನಲ್ಲೇ ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿದ್ದರಲ್ಲದೆ 1955ರಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದರು. ಅವರು ಪ್ರಾಂಶುಪಾಲರಾದರೂ ಅಧ್ಯಾಪಕರಾಗಿ ವೃತ್ತಿ

ಆರಂಭಿಸಿದ ಸಂತೋಷ ಸಿಗುತ್ತಿರಲಿಲ್ಲ. ಹೀಗಾಗಿ ಪ್ರಾಂಶುಪಾಲರಾಗಿದ್ದರೂ ಸಿಕ್ಕ ಸಮಯದಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಮನೆಯಲ್ಲಿ ಮಾಮೂಲಿನಂತೆ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ

ಕರ್ನಾಟಕದಲ್ಲಿರುವ ಕವಿಗಳಲ್ಲಿ ಇಲ್ಲವೆ ಜ್ಞಾನಪೀಠ ಪಡೆದ ಕನ್ನಡಿಗರಲ್ಲಿ ಮೊದಲ ಉಪಕುಲಪತಿಗಳು. ಕರ್ನಾಟಕದ ಪ್ರತಿಷ್ಠಿತ ವಿಶ್ವವಿದ್ಯಾಲಯವಾದ ಮೈಸೂರು ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳಾಗಿ 1956ರಲ್ಲಿ ನೇಮಕಗೊಂಡರು. ವಿಶ್ವವಿದ್ಯಾಲಯದ ಭೋದನಾಂಗ, ಕಾರ್ಯಾಂಗ ಮತ್ತು ಪ್ರಸಾರಾಂಗವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಕುವೆಂಪುರವರಿಗೆ ಸಲ್ಲುತ್ತದೆ. ಕೆಲಸದ ಒತ್ತಡದ ನಡುವೆಯೂ ತಮ್ಮ ಬರವಣಿಗೆಗೆ ಭಂಗ ಬಾರದಂತೆ ನೋಡಿಕೊಂಡರು. ಸ್ನಾತಕೋತ್ತರ ಪದವಿಗಳು ನಡೆಯುವ ಸ್ಥಳವನ್ನು ಸುಂದರಗೊಳಿಸುವ ಉದ್ದೇಶದಿಂದ ಒಂದು ಪ್ರದೇಶವನ್ನು ಅಭಿವೃದ್ಧಿಪಡಿಸಿ ಅದಕ್ಕೆ 'ಮಾನಸ ಗಂಗೋತ್ರಿ' ಎಂದು ನಾಮಕರಣ ಮಾಡಿದರು. ಮರ, ಗಿಡಗಳು, ಹೂ ಬಳ್ಳಿಗಳಿಂದ ಕೂಡಿರುವ ವನಸಿರಿ ಅಲ್ಲಿಂದ ನೋಡಿದರೆ 'ಕುಕ್ಕರಹಳ್ಳಿ ಕೆರೆ' ಇನ್ನೂ ಮುಂದಕ್ಕೆ ಕಾಣುವ ಮೈಸೂರು ವಿಶ್ವವಿದ್ಯಾಲಯ ಇಂದಿಗೂ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದ ಕೆಲವೇ ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಕಾಣುತ್ತದೆ. ಇದು ಅವರ ಕನಸಿನ ಕೂಸಾಗಿದ್ದು ಈ ಮಾನಸ ಗಂಗೋತ್ರಿಯನ್ನು ಅಭಿವೃದ್ಧಿಪಡಿಸಿದರು.

ಪ್ರಶಸ್ತಿ ಪುರಸ್ಕಾರಗಳು

ಕುವೆಂಪುರವರಿಗೆ ಕನ್ನಡ ಜನತೆ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ರಾಜ್ಯದ ಹಲವು ವಿಶ್ವವಿದ್ಯಾಲಯಗಳು ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿಗಳು ಅತ್ಯುನ್ನತ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದವು. ಮೈಸೂರು ವಿಶ್ವವಿದ್ಯಾಲಯ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, 1969ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, 1985ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದವು. 1957ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. 1958ರಲ್ಲಿ ಭಾರತ ಸರ್ಕಾರವು 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿತು. 1964ರಲ್ಲಿ 'ರಾಷ್ಟ್ರಕವಿ' ಬಿರುದನ್ನು ನೀಡಿತು. ದೇಶದ ಪ್ರತಿಷ್ಠಿತ ಪ್ರಶಸ್ತಿಯಾದ 'ಜ್ಞಾನಪೀಠ' ಪ್ರಶಸ್ತಿಯನ್ನು 1968ರಲ್ಲಿ ನೀಡಿ

ಗೌರವಿಸಿತು. 1988ರಲ್ಲಿ ಪ್ರತಿಷ್ಠಿತ 'ಪಂಪಪ್ರಶಸ್ತಿ'ಯು ದೊರಕಿತು. ಪ್ರಶಸ್ತಿ ಫಲಕಗಳಿಗೆ ಕಿವಿಗೊಡದ ಕುವೆಂಪುರವರು ಒಂದು ಕಡೆ ಕೀರ್ತಿಶನಿ ತೊಲಗಾಚೆ ಎಂದು ಹೇಳಿರುವುದು ನಿಜಕ್ಕೂ ಸ್ತುತ್ಯಾರ್ಹ. 'ನಭೂತೋ ನಭವಿಷ್ಯತಿ' ಎನ್ನುವಂತೆ ಕುವೆಂಪುರವರು ಕನ್ನಡದ ಮಹಾಕವಿಗಳಾಗಿ, ಮೇರು ವ್ಯಕ್ತಿಯಾಗಿ ಬಾಳ ಬೆಳಗಿದರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಅಪಾರವಾದ ಕೀರ್ತಿ ಗೌರವಗಳನ್ನು ತಂದುಕೊಟ್ಟರು. ಕುವೆಂಪುರವರು ಮನುಜ ಮತ, ವಿಶ್ವಪಥ ಎಂಬ ಸಂದೇಶವನ್ನು ಸಾರಿದರು. ವಿಶ್ವಮಾನವರಾಗಿ ಎಂಬ ಅವರ ಸಂದೇಶ ಎಲ್ಲಾ ಕಾಲಕ್ಕೂ ನಿತ್ಯ ಸತ್ಯ. ಕುವೆಂಪುರವರು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಎಂದರೆ 1994 ನವೆಂಬರ್ 9ರಂದು ಅಮರರಾದರು.

ಕುವೆಂಪುರವರ ಸಾಹಿತ್ಯಕೃಷಿ

ಇಂಗ್ಲಿಷ್‌ನಲ್ಲಿ: 01

Beginner's Muse: ಕುವೆಂಪು ಅವರ ಪ್ರಥಮ ಕೃತಿ. ಮಿತ್ರರ ಒತ್ತಾಯಕ್ಕೆ ಮಣಿದು ತಾವು ರಚಿಸಿದ ಕವನಗಳಲ್ಲಿ ಆಯ್ದ ಆರು ಕವನಗಳುಳ್ಳ ಈ ಸಂಗ್ರಹ 1922ರಲ್ಲಿ ಪ್ರಕಟಿಸಿದರು.

ಮಹಾಕಾವ್ಯ : 01

ಶ್ರೀ ರಾಮಾಯಣ ದರ್ಶನಂ

ಸರಳ ರಗಳೆಯ ಮಹಾಛಂದಸ್ಸಿನಲ್ಲಿ ಮೂಡಿದ ಈ ಯುಗದ ಬೃಹತ್ ಕಾವ್ಯ. 27.01.1936ರಿಂದ 12.01.1945ರವರೆಗಿನ ಅವಧಿಯಲ್ಲಿ ರಚನೆಯಾಗಿದೆ. 4 ಸಂಪುಟಗಳು, 50 ಸಂಚಿಕೆಗಳು, 22284 ಸಾಲುಗಳಿಂದ ಕೂಡಿದೆ. ಕಥೆ ಆದಿಕವಿ ವಾಲ್ಮೀಕಿಯದು, ದರ್ಶನ ಕುವೆಂಪು ಅವರದು. ವಾಲ್ಮೀಕಿಯು ಕೃತಿ ರಚಿಸಿದ ನಂತರ ಅನೇಕರು ಅದನ್ನಾಧರಿಸಿ ರಾಮಾಯಣ ಕೃತಿಗಳನ್ನು ರಚಿಸಿದ್ದಾರೆ. ಅವೆಲ್ಲವನ್ನು ಮತ್ತು ಪಾಶ್ಚಾತ್ಯ ಮಹಾಕಾವ್ಯಗಳ ಅಭಿವ್ಯಕ್ತಿಯನ್ನು ಅಳವಡಿಸಿಕೊಂಡು ರಚಿಸಿರುವ ಈ ಕೃತಿಗೆ ಅತೀಂದ್ರಿಯ ಸಂಬಂಧವು ಇರಬಹುದೆಂದು ಕವಿ ಕುವೆಂಪುರವರೇ ಅಭಿಪ್ರಾಯಪಟ್ಟಿದ್ದಾರೆ.

ಕವನ ಸಂಕಲನ: 28

1. **ಕೊಳಲು:** ಇದು ಕುವೆಂಪು ಅವರ ಮೊದಲ ಕವನ ಸಂಕಲನ. 1930ರಲ್ಲಿ ಪ್ರಕಟವಾದ ಇದರಲ್ಲಿ 70 ಕವನಗಳಿವೆ. ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರು

ಮುನ್ನುಡಿ ಬರೆದಿದ್ದು ಕುವೆಂಪುರವರ ಕವನಗಳಲ್ಲಿ ಅಮೃತತ್ವದ ಸಾರವಿದೆಯೆಂದು ಕೊಂಡಾಡಿದ್ದಾರೆ.

2. **ಪಾಂಚಜನ್ಯ:** ಇದರಲ್ಲಿ 19 ವೀರಗೀತೆಗಳಿವೆ. 1933ರಲ್ಲಿ ಪ್ರಕಟವಾಯಿತು.
3. **ಕಲಾಸುಂದರಿ:** ಇದರಲ್ಲಿ 43 ಕವನಗಳಿವೆ. ಕಲಾಸುಂದರಿ ಆತ್ಮಾಹ್ಲಾದ ಕಾರಿಣಿಯೂ ಹೌದು, ಆತ್ಮೋದ್ಧಾರಕಾರಿಣಿಯೂ ಹೌದು ಎಂಬ ತತ್ವವನ್ನು ಆಧರಿಸಿರುವ ಪ್ರಕೃತಿ ಪ್ರಧಾನ ಕವನಗಳಾಗಿವೆ. 1934ರಲ್ಲಿ ಪ್ರಕಟವಾಯಿತು.
4. **ಚಿತ್ರಾಂಗದಾ:** ಆರು ಪರ್ವಗಳಿಂದ 2496 ಸಾಲುಗಳಿಂದ ಕೂಡಿದ ದೀರ್ಘಕಾವ್ಯ. ಮೊದಲು 1936ರಲ್ಲಿ ಪ್ರಕಟವಾಯಿತು.
5. **ಕಥನ ಕವನಗಳು:** ಹನ್ನೊಂದು ಕಥನ ಕವನಗಳ ಸಂಗ್ರಹ. 1937ರಲ್ಲಿ ಪ್ರಕಟವಾಯಿತು.
6. **ನವಿಲು:** ಇದರಲ್ಲಿ 42 ಕವನಗಳಿವೆ.
7. **ಕೋಗಿಲೆ ಮತ್ತು ಸೋವಿಯತ್ ರಷ್ಯಾ:** ಇದರಲ್ಲಿ 43 ಕ್ರಾಂತಿ ಕವನಗಳಿದ್ದು 1944ರಲ್ಲಿ ಪ್ರಕಟವಾಯಿತು.
8. **ಪ್ರೇಮ ಕಾಶ್ಮೀರ:** 46 ಪ್ರೇಮಗೀತೆಗಳಿದ್ದು 1946ರಲ್ಲಿ ಪ್ರಕಟವಾಯಿತು.
9. **ಅಗ್ನಿಹಂಸ:** ಅನುಭವ ಪ್ರಧಾನವಾದ 45 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.
10. **ಕೃತ್ತಿಕೆ:** ಪ್ರಕೃತಿ ಪ್ರಧಾನವಾದ 93 ಸಾನೆಟ್ಟುಗಳಿದ್ದು 1946ರಲ್ಲಿ ಪ್ರಕಟವಾಯಿತು.
11. **ಪಕ್ಷಿಕಾಶಿ:** ಪ್ರಕೃತಿ ಪ್ರಧಾನವಾದ 47 ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.
12. **ಕಿಂಕಿಣಿ:** 60 ವಚನ ಕವನಗಳಿದ್ದು 1946ರಲ್ಲಿ ಪ್ರಕಟವಾಯಿತು.
13. **ಷೋಡಶಿ:** ಇದರಲ್ಲಿ 45 ಪ್ರೇಮಗೀತೆಗಳಿದ್ದು 1947ರಲ್ಲಿ ಪ್ರಕಟವಾಯಿತು.
14. **ಜೇನಾಗುವಾ:** ಇದರಲ್ಲಿ 56 ಪ್ರೇಮಗೀತೆಗಳಿದ್ದು 1952ರಲ್ಲಿ ಪ್ರಕಟವಾಯಿತು.
15. **ಚಂದ್ರಮಂಚಕೆ ಬಾ ಚಕೋರಿ:** ಇದರಲ್ಲಿ 59 ಪ್ರೇಮಗೀತೆಗಳಿದ್ದು 1954ರಲ್ಲಿ ಪ್ರಕಟವಾಯಿತು.
16. **ಇಕ್ಷು ಗಂಗೋತ್ರಿ:** ದೇಶ–ಸಮಾಜವನ್ನು ಕುರಿತ 25 ಕವನಗಳಿದ್ದು 1957ರಲ್ಲಿ ಪ್ರಕಟವಾಯಿತು.

17. **ಅನಿಕೇತನ:** ಅನುಭವ ಪ್ರಧಾನವಾದ 40 ಕವಿತೆಗಳಿದ್ದು 1963ರಲ್ಲಿ ಪ್ರಕಟವಾಯಿತು.
18. **ಅನುತ್ತರಾ:** 21 ಪ್ರೇಮಗೀತೆಗಳಿದ್ದು 1965ರಲ್ಲಿ ಪ್ರಕಟವಾಯಿತು.
19. **ಮಂತ್ರಾಕ್ಷತೆ:** ಸಂಕೀರ್ಣ ಸ್ವಭಾವದ 117 ಪುಟ್ಟ ಕವನಗಳಿದ್ದು 1966ರಲ್ಲಿ ಪ್ರಕಟವಾಯಿತು.
20. **ಕದರಡಕೆ:** ಪ್ರಕೃತಿ ಪ್ರಧಾನವಾದ 46 ಕವನಗಳಿದ್ದು ಜತೆಗೆ 42 ಪುಟ್ಟ ಕವನಗಳನ್ನು ಒಳಗೊಂಡಿದೆ.
21. **ಪ್ರೇತಕ್ಯೂ:** ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿ ಕುರಿತ 40 ಕವಿತೆಗಳಿದ್ದು 1967ರಲ್ಲಿ ಪ್ರಕಟವಾಯಿತು.
22. **ಕುಟೀಚಕ:** ಅನುಭವ ಪ್ರಧಾನವಾದ 48 ಕವನಗಳು ಈ ಸಂಕಲನದಲ್ಲಿದ್ದು 1967ರಲ್ಲಿ ಪ್ರಕಟವಾಯಿತು.
23. **ಕನ್ನಡ ಡಿಂಡಿಮ:** ಕವನ ಸಂಕಲನ
24. **ಪ್ರಾರ್ಥನಾ ಗೀತಾಂಜಲಿ :** ಕವನ ಸಂಕಲನ
25. **ಕಬ್ಬಿಗನ ಕೈ ಬುಟ್ಟಿ:** ಕವನ ಸಂಕಲನ
26. **ಹೊನ್ನ ಹೊತ್ತಾರೆ:** ಕವನ ಸಂಕಲನ
27. **ಸಮುದ್ರ ಲಂಘನ:** ಕವನ ಸಂಕಲನ
28. **ಮಹಾದರ್ಶನ ಮತ್ತು ಪ್ರಾಯಶ್ಚಿತ್ತ:** ಕಾವ್ಯ.

ನಾಟಕಗಳು: 12

1. **ಯಮನ ಸೋಲು:** ಸಾವಿತ್ರಿ ಸತ್ಯವಾನರ ಲೋಕಪ್ರಸಿದ್ಧಿ ಕಥೆಯನ್ನಾಧರಿಸಿದ ನಾಟಕ. ಕುವೆಂಪು ರಚಿಸಿದ ಮೊದಲ ನಾಟಕ.
2. **ಜಲಗಾರ:** ಎರಡು ದೃಶ್ಯಗಳನ್ನು ಹೊಂದಿರುವ ಈ ನಾಟಕ 1928ರಲ್ಲಿ ಮೊದಲು ಪ್ರಕಟವಾಯಿತು. ಬೀದಿಗುಡಿಸುವ ಜಲಗಾರನೊಬ್ಬನ ಮಾನಸಿಕ ಔನ್ನತ್ಯದ ಚಿತ್ರಣವಿದೆ. ತನ್ನ ದಿನನಿತ್ಯದ ಕರ್ತವ್ಯದಲ್ಲಿ ಮಗ್ನನಾಗಿದ್ದುಕೊಂಡು ಅದರಲ್ಲಿಯೇ ದೈವವನ್ನು ಕಂಡ ಕರ್ಮಯೋಗಿ ಆ ಜಲಗಾರ.

3. **ಬಿರುಗಾಳಿ:** ಷೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕದ ರೂಪಾಂತರವಾಗಿದ್ದು ಟಿ.ಎಸ್. ವೆಂಕಣ್ಣಯ್ಯನವರು ಮುನ್ನುಡಿ ಬರೆದಿದ್ದಾರೆ.
4. **ವಾಲ್ಮೀಕಿಯ ಭಾಗ್ಯ:** ಸೀತಾವನವಾಸದ ವಸ್ತು.
5. **ಮಹಾರಾತ್ರಿ:** ಸಿದ್ಧಾರ್ಥನು ಬುದ್ಧನಾಗಲು ಹೊರಡುವ ಮಹಾರಾತ್ರಿಯ ಕಥೆ.
6. **ಸ್ಮಶಾನ ಕುರುಕ್ಷೇತ್ರಂ:** ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶ, ಅವಿವೇಕ, ವಿಧಿ ವಿಫಲತೆ, ಸಂಸ್ಕೃತಿಯ ಸಾವು ಇವುಗಳಿಂದ ಕೂಡಿದ ಮಹಾಭಾರತ ಕಥಾವಸ್ತು.
7. **ರಕ್ತಾಕ್ಷಿ:** ಬಿದನೂರಿನ ಇತಿಹಾಸವನ್ನು ಆಧರಿಸಿದ ಕಥೆ. ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದ ಪ್ರಭಾವವಿದೆ.
8. **ಶೂದ್ರತಪಸ್ವಿ:** ಮೂರು ದೃಶ್ಯಗಳಿಂದ 48 ಪುಟಗಳಿಂದ ಕೂಡಿರುವ ಈ ನಾಟಕ 1944ರಲ್ಲಿ ಪ್ರಕಟವಾಯಿತು.
9. **ಬೆರಳ್ಗೆ ಕೊರಳ್:** ಮೂರು ದೃಶ್ಯಗಳಿಂದ 72 ಪುಟಗಳನ್ನೊಂದಿರುವ ಈ ನಾಟಕವು 1947ರಲ್ಲಿ ಪ್ರಕಟವಾಯಿತು.
10. **ಬಲಿದಾನ:** ಮೂರು ದೃಶ್ಯಗಳಿಂದ 34 ಪುಟಗಳನ್ನೊಂದಿರುವ ಈ ನಾಟಕ 1948ರಲ್ಲಿ ಪ್ರಕಟವಾಯಿತು.
11. **ಚಂದ್ರಹಾಸ:** ಪೌರಾಣಿಕ ಚಂದ್ರಹಾಸನ ಕಥೆಯನ್ನೊಂದಿರುವ ನಾಟಕ. ಆದಿ, ಮಧ್ಯ ಮತ್ತು ಅಂತ್ಯ ರಂಗಗಳು ಎಂಬ ಮೂರು ಭಾಗಗಳಿಂದ ಇಪ್ಪತ್ತೊಂದು ದೃಶ್ಯಗಳನ್ನೊಂದಿದೆ.
12. **ಕಾನೀನ:** ಕರ್ಣನ ಕಥೆಯನ್ನಾಧರಿಸಿದ ನಾಟಕ.

ಕಥಾಸಂಕಲನ: 03

1. **ಸಂನ್ಯಾಸಿ ಮತ್ತು ಇತರ ಕಥೆಗಳು:** ಸಂನ್ಯಾಸಿ, ಕ್ರಿಸ್ತನಲ್ಲ–ಪಾದ್ರಿಯ ಮಗಳು, ಈಶ್ವರನೂ ನಕ್ಕಿರಬೇಕು, ಆರಾಣೆ ಮೂರು ಕಾಸು, ಯಾರು ಅರಿಯದ ವೀರ, ಹೋಳಿಗೆ ಪ್ರತಿಜ್ಞೆ, ವ್ಯಾಯದ ಮನೆ, ದೆವ್ವದ ಕಾಟ, ಶ್ರೀ ಶ್ರೀಮನ್ಮೂಕವಾಗಿತ್ತು ಎಂಬ ಒಂಬತ್ತು ಸಣ್ಣ ಕಥೆಗಳ ಸಂಕಲನ.
2. **ನನ್ನ ದೇವರು ಮತ್ತು ಇತರ ಕಥೆಗಳು:** ನನ್ನ ದೇವರು, ಸಾಲದ ಮಗು, ಆದರ್ಶ ಸಾಧನೆ, ಔದಾರ್ಯ, ಗಂಟು (ಗುಪ್ತಧನ), ಮೀನಾಕ್ಷಿ ಮನೆ

ಮೇಷ್ಟರು, ಧನ್ವಂತರಿಯ ಚಿಕಿತ್ಸೆ, ವೈರಾಗ್ಯದ ಮಹಿಮೆ ಅಥವಾ ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ ಎಂಬ ಎಂಟು ಕಥೆಗಳ ಸಂಕಲನ.

3. **ಆರಂಭದಲ್ಲಿ ಕಥೆಗಳೊಡನೆ:** ಹಲವು ಕಥೆಗಳನ್ನೊಳಗೊಂಡ ಕಥಾಸಂಕಲನ.

ಜೀವನ ಚರಿತ್ರೆ: 02

1. **ಶ್ರೀರಾಮಕೃಷ್ಣ ಪರಮಹಂಸ:** ಉದಯ, ಚೈತ್ರಯಾತ್ರೆ, ಯಾತ್ರಿಕರು, ಕಾಮಿನಿ, ಶ್ರೀಮಾತೆ, ದೇವಶಿಲ್ಪಿ, ಮಹಾಸಮಾಧಿ, ಅನಂತರ ಎಂಬ ಎಂಟು ಅಧ್ಯಾಯಗಳನ್ನು ಹೊಂದಿದೆ.

2. **ಸ್ವಾಮಿ ವಿವೇಕಾನಂದ:** ಯಾರಿವನು? ಜನನ ಮತ್ತು ಬಾಲ್ಯ, ಹಿನ್ನೆಲೆ, ನಿರಂಕುಶಮತಿ, ಮುಕ್ತಿ ರಾಹು, ಅಗ್ನಿ ಪರೀಕ್ಷೆ, ಅನುಭೂತಿ, ದರ್ಮನೀಡವಿರಚನೆ, ಪರಿವ್ರಾಜಕ ಸನ್ಯಾಸಿ, ಕಡಲಿನಾಚೆಗೆ, ಹಸುಳೆಯ ಗೆಲುವಿಗೆ ಹೆತ್ತಮ್ಮನ ಹೆಮ್ಮೆ, ಸಹಸ್ರ ದ್ವೀಪೋದ್ಯಾನದಲ್ಲಿ, ಯೂರೋಪಿನಲ್ಲಿ, ಯುಗ ಪ್ರವರ್ತಕ, ಸಂಘ ಸ್ಥಾಪನೆ, ಜೀವನ ಸಂಧ್ಯೆ ಕರೆಯುತಿದೆ ಯುಗವಾಣಿ ಎಂಬ ಹದಿನೇಳು ಅಧ್ಯಾಯಗಳನ್ನು ಹೊಂದಿರುವ ಈ ಕೃತಿ 1932ರಲ್ಲಿ ಪ್ರಕಟವಾಯಿತು.

ಪ್ರಬಂಧ / ಗದ್ಯಚಿತ್ರ: 01

1. **ಮಲೆನಾಡಿನ ಚಿತ್ರಗಳು:** ಹಾಸ್ಯ ಚಟಾಕಿ, ಕಾಡಿನಲ್ಲಿ ಕಳೆದ ಒಂದಿರುಳು, ಅಜ್ಜಯ್ಯನ ಅಭ್ಯಂಜನ, ಬಂದನಾ ಹುಲಿರಾಯನು, ಪುಟ್ಟಾಚಾರಿಯ ಕಾಡುಕೋಳಿ, ಮನೆಯ ಶಾಲೆಯ ಐಗಳ ಮಾಲೆ, ತೋಟದಾಚೆಯ ಭೂತ, ಅಪ್ಪಣ್ಣನ ರೇಷ್ಮೆ ಕಾಯಿಲೆ, ಮಲೆನಾಡಿನ ಗೋಪಾಲಕರು, ಜೇನುಬೇಟೆ, ಕತೆಗಾರ ಮಂಜಣ್ಣ, ರಾಮರಾವಣರ ಯುದ್ಧ ಎಂಬ ಹನ್ನೆರಡು ಗದ್ಯಚಿತ್ರಗಳ ಸಂಕಲನ.

ಅನುವಾದ: 03

1. **ವೇದಾಂತ:** ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಧರ್ಮವನ್ನು ಸಿಂಹ ಕಂಠದಿಂದ ಸಾರಿ ಭರತ ವರ್ಷಕ್ಕೆ ಹಿಂದಿರುಗಿ ಬಂದಮೇಲೆ ಲಾಹೋರಿನಲ್ಲಿ ಮಾಡಿದ ಭಾಷಣದ ಭಾಷಾಂತರ.

2. **ಜನಪ್ರಿಯ ವಾಲ್ಮೀಕಿ ರಾಮಾಯಣ:** ವಾಲ್ಮೀಕಿ ರಾಮಾಯಣ ಕಥೆಯನ್ನು ಹೊಸದಾಗಿ ಓದು ಕಲಿತ ವಯಸ್ಕರಿಗೆ ಹೇಳಿದ ಕೃತಿ.

3. **ಗುರುವಿನೊಡನೆ ದೇವರಡಿಗೆ:** (ಭಾಗ-1, -2) ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ಕುವೆಂಪುರವರ ದೀಕ್ಷಾ ಗುರುಗಳೂ ಆದ ಸ್ವಾಮಿ ಶಿವಾನಂದರ ಮಾತುಕತೆಗಳು ಇಲ್ಲಿವೆ.

ಸಾಹಿತ್ಯ ವಿಮರ್ಶೆ: 06

1. **ಕಾವ್ಯ ವಿಹಾರ:** ಲಕ್ಷ್ಮೀಶನ ಸೀತಾವನವಾಸ, ಕುಮಾರವ್ಯಾಸನ ದುರಂತಕರ್ಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಎಂಬ ಮೂರು ವಿಮರ್ಶಾ ಲೇಖನಗಳಿವೆ.
2. **ತಪೋನಂದನ:** ಮಹಾಶ್ವೇತೆಯ ತಪಸ್ಸು, ಪ್ರತಿಮಾ ಮತ್ತು ಪ್ರಕೃತಿ, ಪಂಪನಲ್ಲಿ ಭವ್ಯತೆ, ಮಹೋಪಮೆ, ಸರೋವರದ ಸಿರಿಗನ್ನಡಿಯಲ್ಲಿ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಋಷಿ ವಾಲ್ಮೀಕಿಯ ಕಾವ್ಯ ಜಾಹ್ನವಿ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ ಎಂಬ ಎಂಟು ಪ್ರಬಂಧಗಳಿವೆ.
3. **ವಿಭೂತಿ ಪೂಜೆ:** ಕವಿಯಲ್ಲಿ ವಿಭೂತಿ, ಶಕ್ತಿ ಕವಿ ರನ್ನ, ಕಲಿಯದವರಿಗೂ ಕಾಮಧೇನು, ಇಂದಿನ ಹೊಸಗನ್ನಡ ಕವಿತೆ ಮತ್ತು ಅದರ ಮುಂದಿನ ನಡೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಮಲೆನಾಡಿನ ನಿಸರ್ಗ ವಿಭೂತಿ, ವಚನಕಾರ ಬಸವೇಶ್ವರರು, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪರಮಹಂಸರ ವಚನಾಮೃತದಲ್ಲಿ ದೃಷ್ಟಾಂತ ಕಥಾ ವಿಧಾನ, ದಿವಂಗತ ರಾಷ್ಟ್ರಪಿತ ಬಾಪೂಜಿಗೆ ಭಾಷ್ಪಾಂಜಲಿ, ಪೂರ್ಣದೃಷ್ಟಿಗೆ ಗಾಂಧೀಜಿ, ಕವಿ ರವೀಂದ್ರರು, ಶ್ರೀ ಅರವಿಂದರು, ಪ್ರಖ್ಯಾತ ಪೌರಾಣಿಕ ಯುದ್ಧಗಳು, ಶ್ರೀ ರಾಮಾಯಣ ದಿವ್ಯಶಿಲ್ಪ ಎಂಬ ಹದಿನಾರು ಲೇಖನಗಳಿವೆ.
4. **ದ್ರೌಪದಿಯ ಶ್ರೀಮುಡಿ:** ದ್ರೌಪದಿಯ ಶ್ರೀಮುಡಿ, ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ, ಶ್ರೀ ಕೃಷ್ಣ ಜನ್ಮಾಷ್ಟಮಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯ ದೃಷ್ಟಿ, ಇದಾವ ನ್ಯಾಯ? ಕವಿಕೃತಿಯಲ್ಲಿ ಅನನ್ಯ ಪರತಂತ್ರತೆ, ಭಾಷೆ; ಲೋಕೋಪಯೋಗಿ ಮತ್ತು ಭಾವೋಪಯೋಗಿ ಮುಂದಿನ ಸಾಹಿತ್ಯದಲ್ಲಿ ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ –ಎಂಬ ಎಂಟು ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಪ್ರಬಂಧಗಳಿವೆ.
5. **ರಸೋ ವೈ ಸಃ :** ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮ ಸಾಹಿತ್ಯ, ರಸಾನುಭವದ ಅಲೌಕಿಕತೆ, ಸಾಹಿತ್ಯದಲ್ಲಿ ಪ್ರತಿಮಾ, ಭೂಮಾನುಭೂತಿ ಮತ್ತು

ಭವ್ಯಕತಾ ಅನುಭವದ ಮೀಮಾಂಸೆ, ರಸೋ ವೈ ಸಃ ಎಂಬ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆ ಕುರಿತ ಐದು ಪ್ರಬಂಧಗಳಿವೆ.

6. **ಇತ್ಯಾದಿ:** ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಯ ಲೇಖನಗಳು ಇಲ್ಲಿವೆ. ಪ್ರಕೃತಿ ಸೌಂದರ್ಯ, ಉಪಮಾಲೋಲ ಲಕ್ಷ್ಮೀಶ, ರನ್ನನ ವೀರಕೌರವ, ಉಪನಿಷತ್ತಿನ ಋಷಿಯ ದರ್ಶನ, ದಿವಂಗತ ಶ್ರೀಯವರು, ಶಿಲ್ಪಿಯ ಕವಿತೆಯ ಸಮರ್ಥನೆ ಕುರಿತ 6 ಪ್ರಬಂಧಗಳು ಈ ಕೃತಿಯಲ್ಲಿ ಇವೆ.

ಭಾಷಣ/ಲೇಖನಗಳ ಸಂಕಲನ: 07

1. **ಸಾಹಿತ್ಯ ಪ್ರಚಾರ:** ವಿದ್ಯಾರ್ಥಿ ಕವಿಗಳಲ್ಲಿ ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು, ಕವಿಯ ದರ್ಶನದಲ್ಲಿ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಕನ್ನಡ ಸಾಹಿತ್ಯ, ದೇಶದೇವಿಯ ಪೂಜೆಗೆ ಬನ್ನಿ ಎಂಬ ಆರು ಭಾಷಣಗಳ ಈ ಕೃತಿ 64 ಪುಟಗಳನ್ನೊಂದಿದೆ. 1930ರಲ್ಲಿ ಪ್ರಕಟವಾಯಿತು.

2. **ನಿರಂಕುಶಮತಿಗಳಾಗಿ:** ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ? ಎಂಬ ನಾಲ್ಕು ಭಾಷಣಗಳ ಈ ಕೃತಿ 62 ಪುಟಗಳನ್ನೊಂದಿದೆ. 1944ರಲ್ಲಿ ಪ್ರಕಟವಾಯಿತು.

3. **ಷಷ್ಠಿನಮನ:** ಸಂಸ್ಕೃತಿ ಕರ್ಣಾಟಕ, ವಿಶ್ವಮಾನವ, ಮಾನಸ ಗಂಗೋತ್ರಿ, ನಮಗೆ ಬೇಕಾಗಿರುವ ಇಂಗ್ಲೀಷ್, ತೀರ್ಥಯಾತ್ರೆ, ಶ್ರೀ ರಾಮಕೃಷ್ಣ ವಚನವೇದ, ಭಾರತದಲ್ಲಿ ಇಂಗ್ಲೀಷಿನ ಸ್ಥಾನ, ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಶ್ರೀ ವಿನೋಬಾಜಿ, ವಿಶ್ವವಿದ್ಯೆ ಮತ್ತು ಪ್ರಸಾರಾಂಗ, ಸಮನ್ವಯ ರಾಷ್ಟ್ರದಲ್ಲಿ ವಿಶ್ವವಿದ್ಯೆ, ಶ್ರೀ ಅರವಿಂದರ ಕಾವ್ಯದರ್ಶನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಯೆ, ಡಾಕ್ಟರೇಟ್ ಪ್ರಶಸ್ತಿ ಕೊಲಂಬೋ ಇಂದ ಅಲ್ಮೋರಕ್ಕೆ, ಪಂಪನ ಕರ್ಣ, ಮಹಾ ಪುರುಷ ಸ್ವಾಮಿ ಶಿವಾನಂದರು, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ ಎಂಬ 30 ಭಾಷಣ / ಮುನ್ನುಡಿಗಳ ಈ ಕೃತಿಯು 272 ಪುಟಗಳನ್ನೊಂದಿದೆ. 1964ರಲ್ಲಿ ಮೊದಲು ಪ್ರಕಟವಾಯಿತು.

4. **ಮನುಜಮತ–ವಿಶ್ವಪಥ:** 1971ರಲ್ಲಿ ಪ್ರಕಟವಾದ ಭಾಷಣ ಲೇಖನಗಳ ಸಂಗ್ರಹವಾಗಿದೆ.

5. **ವಿಚಾರ ಕ್ರಾಂತಿಗೆ ಆಹ್ವಾನ:** 1976ರಲ್ಲಿ ಪ್ರಕಟವಾದ 140 ಪುಟಗಳ ಭಾಷಣ, ಲೇಖನ ಮತ್ತು ಸಂದೇಶಗಳ ಸಂಗ್ರಹವಾಗಿದೆ. ವಿಚಾರ ಕ್ರಾಂತಿಗೆ ಆಹ್ವಾನ, ಬರೆಯಬಯಸುವವರಿಗೆ ಎಚ್ಚರಿಕೆ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಕರ್ನಾಟಕ ಇಟ್ಟ ಹೆಸರು ಕೊಟ್ಟಮಂತ್ರ, ಶಿವಾನಂದರು, ರಾಮಕೃಷ್ಣರ ಕುರಿತು ಟಾಯ್ನಬಿ, ಲಿಪಿ, ಭಾಷೆ, ಭಾವೈಕ್ಯತೆ ಮೊದಲಾದ ಲೇಖನಗಳಿವೆ.
6. **ವಿಶ್ವವಿದ್ಯಾನಿಲಯ ಪ್ರಸಾರಾಂಗ:** ಪ್ರಸಾರಾಂಗ, ವಿದ್ಯಾಭ್ಯಾಸ ಅಂದು ಇಂದು, ಕನ್ನಡ ಮಾಧ್ಯಮ, ಪ್ರಕಟಣೆಗಳು, ಪ್ರಸಾರಾಂಗದ ಮುನ್ನಡೆ, ಇತ್ಯಾದಿ ಮೈಸೂರು ವಿಶ್ವವಿದ್ಯಾಲಯ ಉಪಕುಲಪತಿಗಳಾಗಿ ಮಾಡಿದ ಭಾಷಣಗಳ ಆಯ್ದ ಭಾಗಗಳು.
7. **ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ:**

ಕಾದಂಬರಿಗಳು

1. **ಕಾನೂರು ಸುಬ್ಬಮ್ಮ ಹೆಗ್ಗಡತಿ:** ಕುವೆಂಪು ರಚಿಸಿದ ಮೊದಲ ಕಾದಂಬರಿ. 1936ರಲ್ಲಿ ಪ್ರಕಟವಾಯಿತು. ಮಹಾಭಾರತವನ್ನು ಹೋಲುವ ಈ ಮಹಾಕೃತಿಯ ಮುನ್ನುಡಿಯಲ್ಲಿ ಕುವೆಂಪು "ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಲ್ಲಿ ಒಂದು ಹನಿ" ಎಂದಿದ್ದಾರೆ. ಅತೀಂದ್ರಿಯ ಅಂಶಗಳಿದ್ದು ಪ್ರಾದೇಶಿಕ ಸೊಗಡು ಪ್ರಧಾನವಾಗಿದೆ. ಕಾನೂರು ಸುಬ್ಬಮ್ಮ ಹೆಗ್ಗಡತಿ ಕ್ಷೇತ್ರ, ಯಂತ್ರ, ನಾಗರಿಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ ಇವುಗಳಿಂದ ಕೂಡಿದ ಪ್ರಗತಿಗಾಮಿ ಪ್ರಪಂಚದಿಂದ ಬಹುದೂರವಾದ ಮಲೆನಾಡಿನ ಕೊಂಪೆಯ ಚಿತ್ರಣ ಆಗಿದೆ. ನಿತ್ಯ ಚಲನಶೀಲವಾಗಿದ್ದು ದಿನ ದಿನವೂ ಬದಲಾಗುತ್ತಿರುವ ಹೊರಗಿನ ವಿಶಾಲ ಜಗತ್ತಿಗೆ ಪ್ರತಿಯಾದ ಕಾನೂರು, ಮುತ್ತಳ್ಳಿ, ಸೀತೆಮನೆಗಳ ಸಂಕುಚಿತ ಬದುಕು ಈ ಕಾದಂಬರಿಯ ತಿರುಳು.

2. **ಮಲೆಗಳಲ್ಲಿ ಮದುಮಗಳು:** ಕುವೆಂಪು ರಚಿಸಿದ ಎರಡನೆ ಕಾದಂಬರಿ. 1967ರಲ್ಲಿ ಪ್ರಕಟವಾಯಿತು. ಕಾದಂಬರಿಯ ಕ್ಷೇತ್ರ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಸೀಮೆ ದುರ್ಗಮ ಪರ್ವತಾರಣ್ಯಗಳ ನೆಲೆವೀಡು. ಈ ಮಲೆನಾಡ ಮಡಿಲಲ್ಲಿರುವ ಸಿಂಬಾವಿ, ಲಕ್ಕುಂದ, ಮೇಗರವಳ್ಳಿ, ಹಳೇಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಇವುಗಳಲ್ಲಿನ ಶ್ರೀಸಾಮಾನ್ಯರ ಬದುಕು– "ಕ್ಷುದ್ರ ಅಲ್ಪ ಜಟಿಲರಾಗದ್ವೇಷಮಯ ಜೀವನ ಜಾಲ" ಈ ಕಾದಂಬರಿ. ವಿವರ ವರ್ಣನೆಯ ರಾಮಾಯಣವನ್ನು ಹೋಲುವ ಈ ಕಾದಂಬರಿಯ ವಸ್ತು ಕಾಮ. ಸಾಮಾನ್ಯರ ಪಾತ್ರಗಳ ಸರಳತೆ ಕಾಣಬರುತ್ತದೆ.

ಆತ್ಮಚರಿತ್ರೆ: 01

ನೆನಪಿನ ದೋಣಿಯಲ್ಲಿ

ಕವಿ ಕುವೆಂಪು ಅಂಬಿಗನಾಗಿ ಜೀವನ ವಾಹಿನಿಯಲ್ಲಿ ತೇಲುತ್ತಾರೆ, ದಾಟುತ್ತಾರೆ. ಹುಟ್ಟು ಹಾಕುತ್ತಾ ಗತಜೀವನದೆಡೆಗೆ ಹಿನ್ನೋಟದ ಚಿತ್ರಣ ನೀಡಿದ್ದಾರೆ. ರಾಮಕೃಷ್ಣರ ಆಶೀರ್ವಾದ ಮತ್ತು ನಿರಂತರ ತಪಸ್ಸಿನಿಂದ ಸಿಕ್ಕ ಜ್ಯೋತಿಯೇ ಕುವೆಂಪು ಅವರ ಪ್ರಾಣ ರಕ್ಷೆಯೆಂದು, ಭಗವತ್ಕೃಪೆ ಅವರ ಚಾಲಕ ಕ್ರಿಯೆಯೆಂಬುದು ಈ ಕೃತಿಯಿಂದ ವ್ಯಕ್ತವಾಗುತ್ತದೆ. ವಿರಕ್ತ ಜೀವನ, ಆಧ್ಯಾತ್ಮ ಸಾಧನೆ, ಕಾವ್ಯರಚನೆ, ಅವಿಭಕ್ತ ಕುಟುಂಬದ ಸ್ಥಿತಿಗತಿ, ಬೈಬಲ್ ವ್ಯಾಸಂಗ, ಮಂಜಪ್ಪಗೌಡರ ಸಂಪರ್ಕ, ಮೈಸೂರು ಹೋಟೆಲುವಾಸ, ಕೃತಿಗಳ ರಚನೆ, ರೋಗಗಳು, ಸಿದ್ಧೇಶ್ವರರ ಆಧ್ಯಾತ್ಮ ಸಂಪರ್ಕ ಇವೆಲ್ಲ ಬದುಕನ್ನು ರೂಪಿಸಿವೆ. ಇಂಗ್ಲೀಷಿನಲ್ಲಿ ಆರಂಭವಾದ ಕಾವ್ಯರಚನೆ ಕ್ರಮೇಣ ಕನ್ನಡದತ್ತ ತಿರುಗಿಸಿ ಸಾಧಿಸಿದ ಸಾಹಸ ವಿಕ್ರಮಗಳ ಕತೆ ಇಲ್ಲಿದೆ.

ಶಿಶುಸಾಹಿತ್ಯ: 09

1. **ಅಮಲನ ಕಥೆ:** 190 ಚೌಪದಿಗಳ 39 ಪುಟಗಳಿಂದ ಕೂಡಿದ ಈ ಕೃತಿ ಮೊದಲು 1924ರಲ್ಲಿ ಪ್ರಕಟವಾಯಿತು. ಅಚ್ಯುತನ ಭಕ್ತನಾದ ಅಮಲನು ಒಮ್ಮೆ ಮರ ತರಲು ಕಾಡಿಗೆ ಹೋಗಿದ್ದನು. ಅಲ್ಲಿ ಕಂಡ ಪ್ರಕೃತಿ ಸೌಂದರ್ಯವೆಲ್ಲ ದೇವರ ಕರುಣೆಯೆಂದು ಹಾಡುತ್ತಾ ಸಾಗುತ್ತಾನೆ. ಒಂದಿಷ್ಟು ಮರಕಡಿದು ಎಳಗರುಕೆ ಮೇಲೆ ವಿಶ್ರಮಿಸಿಕೊಳ್ಳುತ್ತಿರುವಾಗ ಪ್ರಾಣಿಯೊಂದು ಓಡಿ ಬರುತ್ತಿರುವ ಶಬ್ದ ಕೇಳಿಸುತ್ತದೆ. ಎದ್ದಾಗ ಹರಿಣ (ಜಿಂಕೆ)ವೊಂದು ಬಂದು ತನ್ನನ್ನು ಕೊಲ್ಲ ಬರುತ್ತಿರುವ ಶಬರನಿಂದ ರಕ್ಷಿಸು ಎನ್ನುತ್ತದೆ. ಅಮಲ ಅಭಯ ನೀಡುವಷ್ಟರಲ್ಲಿ ಶಬರನು ಬರುವನು. ಅಮಲ ಮತ್ತು ಶಬರರಿಬ್ಬರಿಗೂ ವಾಗ್ವಾದ ಜಗಳಗಳಾಗುತ್ತವೆ. ಅಮಲನು ಸೋಲುತ್ತಾ ಬಂದಾಗ ದೈವ ಪ್ರಾರ್ಥನೆ ಮಾಡುತ್ತಾನೆ. ಎಷ್ಟು ಹೊತ್ತಾದರೂ ತನ್ನ ತಂದೆ ಬರಲಿಲ್ಲವೆಂದು ತಾಯಿಯ ಸಲಹೆಯಂತೆ ಅಮಲನ ಮಗ ಮಧುರನು ತಂದೆಯನ್ನು ಹುಡುಕಲಾರಂಭಿಸುತ್ತಾನೆ. ಭಾರೀ ಮಳೆಯಲ್ಲಿ ಮಧುರನು ದೇವರನ್ನು ಪ್ರಾರ್ಥಿಸಿದಾಗ ಪ್ರತ್ಯಕ್ಷವಾಗಿ ಅವನ ಕಷ್ಟ ನಿವಾರಣೆಯಾಗುತ್ತದೆ. ಎಲ್ಲರೂ ಸುಖವನ್ನೊಂದುತ್ತಾರೆ. ಇದರಲ್ಲಿ ನಿರ್ಮಲ ಭಕ್ತಿ ಪ್ರತಿಪಾದನೆಯಾಗಿದೆ.

2. **ಮೋಡಣ್ಣನ ತಮ್ಮ:** 1926ರಲ್ಲಿ ಪ್ರಕಟವಾಯಿತು. ಮಕ್ಕಳಲ್ಲಿ ಸಹಜವಾಗಿರುವ ಕಲ್ಪನಾಶಕ್ತಿ, ಪ್ರಚೋದಿಸುವ ವಸ್ತು, ಆಗಸದಲ್ಲಿ ತೇಲುತ್ತಿರುವ ಮೋಡ, ಮಿನುಗುತ್ತಿರುವ ನಕ್ಷತ್ರ, ಬೀಸುವ ಗಾಳಿ, ಕುಕಿಲಿಯಿರಿಯುವ ಹಕ್ಕಿಗಳು ಇವುಗಳನ್ನು ಕಲ್ಪನಾಲೋಕದಲ್ಲಿ ವಿಹರಿಸುವ ಮಕ್ಕಳು ಇಲ್ಲಿ ಕಾಣಬರುತ್ತಾರೆ.
3. **ಹಾಳೂರು:** 1926ರಲ್ಲಿ ಪ್ರಕಟವಾಯಿತು. ನವನಾಗರಿಕತೆ ಪ್ರಭಾವದಿಂದ ನಮ್ಮ ಹಳ್ಳಿಗಳು ಹೇಗೆ ಸಂಸ್ಕೃತಿ ಕಳೆದುಕೊಂಡು ಬಂಜೆಯಾಗುತ್ತಿವೆ ಎಂಬುದೇ ಇಲ್ಲಿನ ಕಥಾವಸ್ತುವಾಗಿದೆ.
4. **ಬೊಮ್ಮನಹಳ್ಳಿಯ ಕಿಂದರಿಜೋಗಿ:** ಇಂಗ್ಲಿಷ್ ಕವಿ ಬ್ರೌನಿಂಗ್‌ನ the pide of the Hamelin ಆಧರಿಸಿ ಬರೆದದ್ದು. ಬೊಮ್ಮನಹಳ್ಳಿಯಲ್ಲಿ ಇಲಿಗಳಿಂದಾಗುವ ಹಾವಳಿಯನ್ನು ಮಕ್ಕಳಿಗೆ ಮನಕ್ಕೆ ಮುಟ್ಟುವಂತೆ ರಚಿಸಲಾಗಿದೆ.
5. **ನನ್ನ ಗೋಪಾಲ:** 1930ರಲ್ಲಿ ಪ್ರಕಟವಾಯಿತು. ವಿಧವೆ ಮತ್ತು ಬಡವೆ ತಾಯಿಯೊಬ್ಬಳ ಭಕ್ತಿಯಿಂದ ಮಗ ಗೋಪಾಲನಿಗೆ ಶ್ರೀಕೃಷ್ಣನು ಅಣ್ಣನಾಗಿ ದರ್ಶನ ಕೊಟ್ಟ ಕಥೆ. ಗುರುಭಕ್ತಿ ಕಾಣಿಕೆಗೆ ಏನೂ ಇಲ್ಲದೆ ಮೊಸರಿನ ಕುಡಿಕೆ ಕೊಟ್ಟಾಗ ಅದು ಅಕ್ಷಯವಾಗುತ್ತದೆ. ತಾಯಿಯ ಭಕ್ತಿ ಮತ್ತು ಗೋಪಾಲನ ನಂಬಿಕೆ ಭಗವಂತನು ಒಲಿಯಲು ಕಾರಣವೆಂಬುದು ಇಲ್ಲಿ ವ್ಯಕ್ತವಾಗಿದೆ.
6. **ಮರಿವಿಜ್ಞಾನಿ:** 1947ರಲ್ಲಿ ಪ್ರಕಟವಾಯಿತು. ಅರಳುತ್ತಿರುವ ಮಕ್ಕಳ ಮನಸ್ಸು ತಾಳುವ ವೈಜ್ಞಾನಿಕ ದೃಷ್ಟಿಯ ಗೀತೆಗಳ ಸಂಕಲನವಿದು.
7. **ಮೇಘಪುರ:** 1947ರಲ್ಲಿ ಪ್ರಕಟವಾಯಿತು. ಹಕ್ಕಿ, ನದಿ, ಮುಗಿಲುಗಳೊಡನೆ ಸಂಬಂಧಪಟ್ಟ ಮಕ್ಕಳ ಸ್ವಪ್ನಾತಿಶಯಗಳ ಚಿತ್ರಣವೇ ಈ ಗೀತೆಗಳ ವಸ್ತು.
8. **ನನ್ನ ಮನೆ:** 1946ರಲ್ಲಿ ಪ್ರಕಟವಾಯಿತು. ಪ್ರಕೃತಿ, ಮಾತೃ ಮತ್ತು ಕನ್ನಡ ಪ್ರೇಮವನ್ನು ಚಿತ್ರಿಸುವ ಕೃತಿ.
9. **ನರಿಗಳಿಗೇಕೆ ಕೋಡಿಲ್ಲ:** ಮಕ್ಕಳಿಗಾಗಿ ರಚಿಸಿದ ಕೃತಿ.

* * * * *



ನಾಡೋಜ ಎಚ್.ಎಲ್. ನಾಗೇಗೌಡ

ಡಾ. ಸಿ. ಶಿವಲಿಂಗಯ್ಯ

ಜೀವನ ಮತ್ತು ಸಾಧನೆ :

ಜಗತ್ತಿನ ಜನತೆಗೆ ಅಕ್ಷರ ದಕ್ಕುವ ಪೂರ್ವದಲ್ಲಿ ಮನುಷ್ಯ ಬದುಕಿನ ಸಮಸ್ತ ವ್ಯವಹಾರಗಳು ಮೌಖಿಕ ಸಂಪ್ರದಾಯದ ಮೂಲಕವೇ ಹರಿದು ಬಂದಿದ್ದವು. ಕೇಳಿದ್ದನ್ನು ನೆನಪಿಸಿಕೊಳ್ಳುತ್ತ, ನೋಡಿದ್ದನ್ನು ಅನುಕರಿಸುತ್ತ ಬಂದಿರುವ ಈ ಸಂಪ್ರದಾಯವು ಅನೂಚಾನವಾಗಿ ಪರಂಪರಾಗತ ಜ್ಞಾನವನ್ನು ಮುಂದುವರಿಸಿಕೊಂಡು ಬಂದಿತ್ತು. ಗೀತೆ, ಕಥೆ, ಗಾದೆ, ಒಗಟು, ಪುರಾಣ, ಐತಿಹ್ಯ, ಭಾಷೆ, ನಂಬಿಕೆ, ಆಚರಣೆ, ಕಲೆ, ವೈದ್ಯ, ವ್ಯವಸಾಯ ಕ್ರಮ, ಅಡಿಗೆ, ಬೇಟೆ ವಿಧಾನ, ಆಟ, ಮಂತ್ರ-ಮಾಟ ಹೀಗೆ ಎಲ್ಲವೂ ಅನುಕರಣೆಯ ಮೂಲಕ, ನೆನಪಿನ ಮೂಲಕ ಉಳಿದು ಬೆಳೆದು ಬಂದಿವೆ. ಕಾಲಾಂತರದಲ್ಲಿ ಅಕ್ಷರ ಜ್ಞಾನ ತಲೆದೋರಿ ಕ್ರಮೇಣ ಓದು-ಬರಹ ಬೆಳೆದಂತೆಲ್ಲಾ ಮೌಖಿಕ ಪರಂಪರೆಯೊಂದಿಗೆ ಗ್ರಂಥಸ್ಥ ಪರಂಪರೆಯೂ ಹುಟ್ಟಿಕೊಂಡಿತು. ಅದುವರೆಗೂ ಸಮಗ್ರ ಮಾನವ ವ್ಯವಹಾರಗಳ ಏಕೈಕ ವಾಹಕವಾಗಿದ್ದ, ಕಂಠಸ್ಥ ಸಂಪ್ತದಾಯದ ಸಂದರ್ಭದಲ್ಲಿ, ಅಕ್ಷರ ಜ್ಞಾನ ದಕ್ಕಿದ ಮೇಲೆ ಮನುಷ್ಯನು ತನ್ನ ಅನುಭವ ಮತ್ತು ಜ್ಞಾನವನ್ನು ಗ್ರಂಥಸ್ಥಗೊಳಿಸಲು ಸಾಧ್ಯವಾಯಿತು. ಇದರಿಂದ ಮೌಖಿಕ ಸಂಸ್ಕೃತಿಗೆ ಧಕ್ಕೆಯೇನೂ ಒದಗಲಿಲ್ಲ. ಬದಲಾಗಿ ತನಗೆ ಅನುಕೂಲವಾದ ಪರಿಸರದಲ್ಲಿ ಕಂಠಸ್ಥ ಸಂಪ್ರದಾಯವೂ ಉಳಿದು ಬಂದಿತು. ಹೀಗೆ ಜನತೆಯ ನಾಲಿಗೆಯ ತೂಗುದೊಟ್ಟಿಲಿನ ಮೇಲೆ ನರ್ತಿಸುತ್ತಾ, ಜನಸಾಮಾನ್ಯರ ಸರ್ವತೋಮುಖ ಅಭಿವ್ಯಕ್ತಿಯಾಗಿ, ಮನುಷ್ಯನ ಹುಟ್ಟಿನ ಜತೆಗೆ ತಾನೂ ಪ್ರಾದುರ್ಭವಿಸಿ, ಮನುಷ್ಯ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ

ತಲೆತಲೆಮಾರುಗಳಿಂದಲೂ ಮೌಖಿಕ ಪರಂಪರೆಯಲ್ಲಿ ಸಾಗಿ ಬಂದ ಪರಂಪರಾನುಗತ ಜ್ಞಾನವೇ ಜಾನಪದ.

ದೇ.ಜ.ಗೌ.ಹೇಳುವಂತೆ "ಜಾನಪದ ಅಭಿವ್ಯಕ್ತಗೊಳ್ಳುವ ಎರಡು ಮುಖ್ಯ ಮಾಧ್ಯಮಗಳೆಂದರೆ ಮಾತು ಮತ್ತು ಕೃತಿ. ಪುರಾಣ, ಐತಿಹ್ಯ, ಗೀತೆ, ಕಥೆ, ಗಾದೆ, ಒಗಟು ಮೊದಲಾದ ಶಾಬ್ದಿಕ ಪ್ರಕಾರಗಳಿಗೆ ಮಾತು ಮಾಧ್ಯಮವಾದರೆ, ನಂಬಿಕೆ-ಸಂಪ್ರದಾಯ-ಉಪಾಸನೆ-ಶಿಲ್ಪ-ಚಿತ್ರ-ನರ್ತನ-ಆಟಪಾಟ ಮೊದಲಾದವುಗಳಿಗೆ ಕೃತಿ ಮಾಧ್ಯಮವಾಗುತ್ತದೆ." ಮಾತು ಮತ್ತು ಕೃತಿಯು ಒಳಗೊಂಡ ಎಲ್ಲಾ ಸಂಗತಿಗಳ ಮೊತ್ತವನ್ನು 'ಜನಪದ ಸಂಸ್ಕೃತಿ' ಎಂದು ಕರೆಯಲಾಗುತ್ತದೆ.

ಜಾನಪದ ಅಧ್ಯಯನ ಎನ್ನುವಂಥದ್ದು ಸಮಾಜದ ಭೂತ-ವರ್ತಮಾನಗಳ ಸ್ಥಿತಿಗತಿಗಳನ್ನು ಭವಿಷ್ಯಕ್ಕೆ ಕೊಂಡೊಯ್ಯುವ ಸಾಧನವಾಗಿದೆ. ಜಾನಪದ ಇಲ್ಲದೆ ಸಂಸ್ಕೃತಿ ಬೆಳೆಯುವುದಿಲ್ಲ. ಸಂಸ್ಕೃತಿ ಬೆಳೆದಂತೆ ಜಾನಪದವೂ ಬೆಳೆಯುತ್ತದೆ. ಜಾನಪದ ಎನ್ನುವುದು ಜನರು ಬದುಕುವ ಆಚರಣೆಯಲ್ಲಿದೆ. ಜನಜೀವನದ ಅನುಭವದಿಂದಲೇ ಕೊನರುತ್ತದೆ. ಎಲಿಯಾಸ್ ಲೊನ್ರಾಟ್ ಎಂಬ ಜಾನಪದ ವಿದ್ವಾಂಸನ ಪ್ರಕಾರ ಜಾನಪದವು ಸಮಕಾಲೀನ ಬದುಕಿನ ಬದಲಾವಣೆಗಳನ್ನು ಬಿಂಬಿಸುತ್ತದೆ ಹಾಗೂ ಅದರಿಂದ ಬೆಳವಣಿಗೆ ಸಾಧಿಸುತ್ತದೆ. ಜಾನಪದ ಎನ್ನುವುದು ಮೂಲತ: ಸಾಂಸ್ಕೃತಿಕ ಚಟುವಟಿಕೆ. ಸಂಸ್ಕೃತಿಯು ಸ್ಥಿತಿ. ಅದು ಎಲ್ಲದರಲ್ಲೂ ತನ್ನದೇ ಆದ ಉದ್ದೇಶವನ್ನು ಕಂಡುಕೊಂಡಿರುತ್ತದೆ. ಜಾನಪದ ಜೀವಂತ ಸಮಾಜವೊಂದರ ಜೀವದ್ರವ್ಯವೇ ಹೊರತು ಕೇವಲ ಸಾಮಗ್ರಿಯಲ್ಲ. ಜಾನಪದವನ್ನು ಹುಟ್ಟುಹಾಕುವರು ಮತ್ತು ರವಾನಿಸುವವರು ಜನಪದರೇ ಆಗಿರುತ್ತಾರೆ.

20ನೇ ಶತಮಾನದಲ್ಲಿ ಕನ್ನಡ ಜಾನಪದವನ್ನು ಶ್ರೀಮಂತಗೊಳಿಸಿದ ಅಗ್ರಗಣ್ಯರಲ್ಲಿ ನಾಗೇಗೌಡರು ಪ್ರಾತ:ಸ್ಮರಣೀಯರಾಗಿದ್ದಾರೆ. ಆಧುನಿಕ ಜಾನಪದ ಅಧ್ಯಯನಕ್ಕೆ ಅವರ ಕೊಡುಗೆ ಅಸಾಧಾರಣವಾದುದು. ಅವರ ಜಾನಪದ ಚಟುವಟಿಕೆಗಳನ್ನು ಗಮನಿಸಿದಾಗ ನಮ್ಮ ಪರಿಸರದ ಸ್ಥಳೀಯ ಪರಂಪರೆಯ ಅಧ್ಯಯನ, ಸಂಶೋಧನೆಗಳಿಗೊಂದು ಹೊಸ ಬಗೆಯ ಆಲೋಚನೆಯ ನೆಲೆ, ವಿಶ್ಲೇಷಣೆಯ ದೃಷ್ಟಿ ಪ್ರಾಪ್ತವಾಗುತ್ತದೆ. ಆಡಳಿತರಂಗದಲ್ಲಿ ಉತ್ತಮ ಅಧಿಕಾರಿ ಎಂದು ಹೆಸರು ಪಡೆದು, ಜಾನಪದಕ್ಕೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು,

ಸಾಹಿತ್ಯಿಕವಾಗಿ, ಸಾಂಸ್ಥಿಕವಾಗಿ ಸಾಧನೆಗೈದು, ಕನ್ನಡ ಜಾನಪದ ವಿದ್ವಾಂಸರ ಮೇಲೆ ಗಾಢವಾದ ಪ್ರಭಾವ ಬೀರಿದ ನಾಗೇಗೌಡರು ಕನ್ನಡ ಜಾನಪದ ಪರಂಪರೆಯ ವಿಶಿಷ್ಟ ದರ್ಶನ ಮಾಡಿಕೊಟ್ಟವರು.

ಒಂದು ಕಾಲಕ್ಕೆ ತೆಂಗಿನಕಾಯಿಗೆ ಹೆಸರಾಗಿದ್ದ ಹೆರಗನಹಳ್ಳಿ ನಾಗೇಗೌಡರ ಹುಟ್ಟೂರು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮೂಲೆಯಲ್ಲಿ ಹುದುಗಿದ್ದ ಈ ಕೊಂಪೆಯ ಜನ ಅದುವರೆಗೂ ಬದುಕಿನಲ್ಲೆಂದೂ ಬಸ್ಸು-ಬೈಸಿಕಲ್‌ಗಳನ್ನು ಕಂಡವರಲ್ಲ. ಇಂತಹ ಕುಗ್ರಾಮದಲ್ಲಿ 1915 ರ ಫೆಬ್ರವರಿ 11 ರಂದು ನಾಗೇಗೌಡರು ದೊಡ್ಡಮನೆ ಕುಟುಂಬದಲ್ಲಿ ಜನಿಸಿದರು. ತಂದೆ ಲಿಂಗೇಗೌಡ, ತಾಯಿ ಶ್ರೀಮತಿ ಹುಚ್ಚಮ್ಮ. ಕುಲಕಸುಬಾದ ವ್ಯವಸಾಯದೊಂದಿಗೆ ಸೇಂದಿ ಕಂಟ್ರಾಕ್ಟ್ ನಡೆಸುತ್ತಿದ್ದ ಲಿಂಗೇಗೌಡರು ಆ ಕಾಲಕ್ಕೆ ಉಳಿದವರಿಗಿಂತ ತುಸು ಹೆಚ್ಚಿಗೆ ತಿಳಿದವರಾಗಿದ್ದರು. ಆ ಊರು ಈ ಊರು ಸುತ್ತಿದ್ದರು. ದೊಡ್ಡಮನೆಯಲ್ಲಿ ಲಿಂಗೇಗೌಡರ ಅಣ್ಣ ತಮ್ಮಂದಿರು, ಅವರ ಹೆಂಡತಿ ಮಕ್ಕಳು, ಅಕ್ಕತಂಗಿಯರು, ಅವರ ಮಕ್ಕಳು, ಆಳು ಕಾಳು, ದನಕರ, ಕುರಿಕೋಳಿ ಎಲ್ಲವೂ ಸೇರಿ ಹೆಸರಿಗೆ ತಕ್ಕಂತೆ ಅದು ದೊಡ್ಡಮನೆಯೇ ಆಗಿತ್ತು.

ನಾಗೇಗೌಡರು ಹುಟ್ಟಿದ ಮೂರೇ ವರುಷಕ್ಕೆ ಅವರ ತಾಯಿ ಹುಚ್ಚಮ್ಮನವರು ಇನ್‌ಫ್ಲೂಯೆಂಜಾ ಬಂದು ತೀರಿಕೊಂಡರು. ಅಜ್ಜಿ-ಅಂದರೆ ತಂದೆಯವರ ತಾಯಿಯ ಆರೈಕೆಯಲ್ಲಿ ಬೆಳೆದ ಗೌಡರಿಗೆ ತಾಯಿಯ ಮುಖ ಕಂಡ ನೆನಪಿಲ್ಲ. ಬಾಲ್ಯದಲ್ಲೇ ಸಿಡುಬು ರೋಗಕ್ಕೆ ತುತ್ತಾದ ಅವರು ಬದುಕಿ ಉಳಿದದ್ದು ಪವಾಡವೇ ಸರಿ. ಹಳ್ಳಿ ಮಕ್ಕಳಿಗೆ ಅನಿವಾರ್ಯವಾದ ಹೊಲಗದ್ದೆಗಳ ನಡುವಿನ ವಾತಾವರಣದಲ್ಲಿ ಬೆಳೆದ ಗೌಡರು ಎಲ್ಲರಂತೆ ಎಮ್ಮೆ, ದನ, ಕುರಿ ಕಾದವರು. ಹೊಲ ಉತ್ತಿ ಬಿತ್ತಿ ಕಳೆ ಕಿತ್ತವರು. ಕೂಲಿಮಠದಲ್ಲಿ ಬೆರಳಿಗೆ ಬೇಲಿ ಮೇಲಣ ಗಜ್ಜುಗ ಹಾಕಿಕೊಂಡು ಮರಳಿನಲ್ಲಿ ಅಕ್ಷರ ತಿದ್ದಿದವರು.

ಬಾಲ್ಯದಿಂದಲೂ ನಾಗೇಗೌಡರು ಅಸಾಧಾರಣ ಬುದ್ಧಿವಂತರು, ಸೂಕ್ಷ್ಮಮತಿಗಳೂ ಆಗಿದ್ದರು. ಹೆರಗನಹಳ್ಳಿಯ ಕೂಲಿಮಠದ ಓದು ಪೂರೈಸಿ ಅಳೀಸಂದ್ರದ ಪ್ರಾಥಮಿಕ ಶಾಲೆ ಮುಗಿಸಿ, ನಾಗತಿಹಳ್ಳಿಯಲ್ಲಿ ಕನ್ನಡ ಲೋವರ್ ಸೆಕೆಂಡರಿ ಪಾಸು ಮಾಡಿದರು. ಮಗ ಕನ್ನಡ ಲೋವರ್ ಸೆಕೆಂಡರಿ ಪಾಸು ಮಾಡಿದ್ದು ತಂದೆಗೆ ಬಹಳಷ್ಟು ಸಂತಸ ತಂದಿತು. ಸೇಂದಿ ಬಾಬಿಗೆಂದು ಊರೂರು ಸುತ್ತುತ್ತಿದ್ದ ಲಿಂಗೇಗೌಡರು ಹೋದೆಡೆಯಲ್ಲೆಲ್ಲಾ ಮಗನ ಗುಣಗಾನ ಮಾಡಿದರು. ತಮ್ಮ ಮಗನು, ಹಳ್ಳಿಗಳಿಗೆ ಕಂದಾಯ ವಸೂಲಿಗೆ ಕುದುರೆ

ಮೇಲೆ ಬರುತ್ತಿದ್ದ 'ಶೇಕ್‌ದಾರ್'ಗಿಂತ ದೊಡ್ಡ ಅಮಲ್ದಾರನಾಗಬೇಕು ಎನ್ನುವುದು ಅವರ ಆಸೆಯಾಗಿತ್ತು.

ಇಂಗ್ಲಿಷ್‌ಲೋವರ್ ಸೆಕೆಂಡರಿ ಓದಲು ಚನ್ನರಾಯಪಟ್ಟಣಕ್ಕೆ ಹೋದ ನಾಗೇಗೌಡರು ತಮ್ಮ ದೂರದ ಸಂಬಂಧಿಯೊಬ್ಬರ ಮನೆಯಲ್ಲಿ ಉಳಿದುಕೊಂಡು ಮೂರು ವರ್ಷಗಳ ಕಾಲ ಇಂಗ್ಲಿಷ್ ಓದಿ, 1930 ರಲ್ಲಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪಾಸು ಮಾಡಿದರು. ಮುಂದೆ ಹೈಸ್ಕೂಲು ಶಿಕ್ಷಣಕ್ಕಾಗಿ ಚನ್ನಪಟ್ಟಣದತ್ತ ಪಯಣ ಬೆಳೆಸಿದರು. ಆ ಕಾಲಕ್ಕೆ ಹಾಸನ, ತಿಪಟೂರು, ಬೆಂಗಳೂರು, ಮೈಸೂರು ಮತ್ತು ಚನ್ನಪಟ್ಟಣಗಳಲ್ಲಷ್ಟೇ ಹೈಸ್ಕೂಲು ಇದ್ದದ್ದು. ಇವರು ಚನ್ನರಾಯಪಟ್ಟಣದಲ್ಲಿ ಇಂಗ್ಲಿಷ್ ಲೋವರ್ ಸೆಕೆಂಡರಿ ಓದುತ್ತಿದ್ದಾಗ, ಇವರ ದೂರದ ಸಂಬಂಧಿ ದೊಡ್ಡಮ್ಮನ ಹಿರಿಯ ಮಗ ಚನ್ನಪಟ್ಟಣದಲ್ಲಿ ಹೈಸ್ಕೂಲು ಮುಗಿಸಿ ಬೆಂಗಳೂರಿನಲ್ಲಿ ಎಲ್.ಎಂ.ಪಿ. ಮಾಡುತ್ತಿದ್ದುದರಿಂದ, ನಾಗೇಗೌಡರೂ ಸಹ ಹೈಸ್ಕೂಲು ಶಿಕ್ಷಣಕ್ಕೆ ಚನ್ನಪಟ್ಟಣಕ್ಕೆ ಬಂದರು. ತಿಟ್ಟಮಾರನಹಳ್ಳಿ ವೆಂಕಟಪ್ಪನವರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ಒಕ್ಕಲಿಗರ ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡರು.

ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾಲ. ಮೈಸೂರು ಪ್ರಾಂತದಲ್ಲಿನ್ನೂ ಕಾಂಗ್ರೆಸ್ ಉದಿಸಿರಲಿಲ್ಲ. ಪ್ರಜಾಪಕ್ಷ ಪ್ರವರ್ಧಮಾನದಲ್ಲಿತ್ತು. ಬಾಲಕ ನಾಗೇಗೌಡನ ಮೇಲೆ ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿಯವರಂತಹ ಮಹಾನುಭಾವರ ಪ್ರಭಾವ ಕೆಲಸ ಮಾಡಿತು. ಚನ್ನಪಟ್ಟಣದಲ್ಲಿ ನಡೆದ ಪ್ರಜಾಪಕ್ಷ ಸಮ್ಮೇಳನದಲ್ಲಿ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಿದರು. ಗಾಂಧೀಜಿಯವರು ಬಾಲಕನ ಮನಸ್ಸಿನಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರಜ್ವಲಗೊಳಿಸಿದರು. ಪರಿಣಾಮವಾಗಿ ನಾಗೇಗೌಡರೂ ಸಹ ವಿದೇಶಿ ವಸ್ತುಗಳನ್ನು ಸುಟ್ಟರು . ಖಾದಿ ಬಟ್ಟೆ ಧರಿಸಿದರು. ಹರಿಜನ ಕೇರಿ ಸ್ವಚ್ಛ ಮಾಡಿದರು. ರಜೆಯಲ್ಲಿ ಊರಿಗೆ ಬಂದಾಗ ಅಟ್ಟದ ಮೇಲಿದ್ದ ಹಳೆಯ ಚರಕ ತೆಗೆದು, ಬೇಲಿಯಲ್ಲಿ ಬೆಳೆದ ಜಡೆಹತ್ತಿ ಬಿಡಿಸಿ ತಂದು ನೂಲು ತೆಗೆದರು. ದಲಿತರಿಗೆ ಮದ್ಯಪಾನ ನಿಷೇಧವನ್ನು ಬೋಧಿಸಿದರು. ಇವೆಲ್ಲದರ ನಡುವೆ, 1933 ರಲ್ಲಿ ಎಸ್.ಎಸ್.ಎಲ್.ಸಿ ಪಾಸು ಮಾಡಿದರು.. ಇಂಟರ್ ಮೀಡಿಯಟ್ ಓದಲು ಬೆಂಗಳೂರಿಗೆ ಬಂದರು. ವಿಶ್ವೇಶ್ವರಪುರದಲ್ಲಿದ್ದ ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿದರು. ಇಷ್ಟು ಹೊತ್ತಿಗಾಗಲೇ, ತಾರುಣ್ಯದ ಹೊಸ್ತಿಲಲ್ಲಿದ್ದ ನಾಗೇಗೌಡರ ವ್ಯಕ್ತಿತ್ವದಲ್ಲಿ ರಾಷ್ಟೀಯ ಪ್ರಜ್ಞೆಯೊಂದಿಗೆ ಸೇವಾ ಮನೋಭಾವವೂ ಬೇರು ಬಿಡಲಾರಂಭಿಸಿತ್ತು. ರಾಮಕೃಷ್ಣಾಶ್ರಮಕ್ಕೆ ತಪ್ಪದೆ ಭೇಟಿ

ನೀಡುತ್ತಿದ್ದರು. ಈ ಸಂದರ್ಭದಲ್ಲಿ ವಿಶ್ವೇಶ್ವರಪುರದಲ್ಲಿದ್ದ ಪಂಡಿತ ತಾರಾನಾಥರ ಪರಿಚಯವಾಯಿತು. ಬಾಲ್ಯದಿಂದಲೂ ನಾಗೇಗೌಡರನ್ನು ಕಾಡುತ್ತಿದ್ದ ಮಲಬದ್ಧತೆಯ ರೋಗವನ್ನು ಪಂಡಿತ ತಾರಾನಾಥರು ಆಯುರ್ವೇದ ಔಷಧಿಯಿಂದ ಗುಣಪಡಿಸಿದರು. ತಲೆನೋವನ್ನು ಡಾ. ಮೇಖ್ರಿಯವರು ಪರೀಕ್ಷಿಸಿ ಕನ್ನಡಕ ಕೊಟ್ಟರು. ಈ ಇಬ್ಬರು ಮಹನೀಯರ ಹಸ್ತಗುಣದಿಂದಾಗಿ ಬಹುದಿನಗಳಿಂದ ನಾಗೇಗೌಡರನ್ನು ಕಾಡುತ್ತಿದ್ದ ಈ ದೈಹಿಕ ತೊಂದರೆಗಳು ದೂರವಾದವು.

ಬೆಂಗಳೂರಿನಲ್ಲಿದ್ದಾಗ ನಾಗೇಗೌಡರಿಗೆ ಗಾಂಧೀಜಿ, ಸರೋಜಿನಿ ನಾಯ್ಡು, ರೈಟ್ ಆನರಬಲ್ ಶ್ರೀನಿವಾಸ ' ಶಾಸ್ತ್ರಿಗಳಂತಹ ಪ್ರಸಿದ್ಧ ವಾಗ್ಮಿಗಳ ಭಾಷಣ ಕೇಳುವ ಪುಣ್ಯ ಲಭಿಸಿತು. ವಿ.ಸೀತಾರಾಮಯ್ಯನವರು ಕನ್ನಡ ಕಲಿಸಿದರು. ಬಿ.ಎಂ.ಶ್ರೀಕಂಠಯ್ಯನವರು ಇಂಗ್ಲಿಷ್ ಕಲಿಸಿದರು.. ಬಿ.ಎಂ.ಶ್ರೀಯವರ ಪಾಠ ಹೇಗಿತ್ತೆಂಬುದಕ್ಕೆ ನಾಗೇಗೌಡರು ಸೊಗಸಾದ ವಿವರಣೆ ನೀಡುತ್ತಾರೆ. "ಶ್ರೀಕಂಠಯ್ಯನವರು ಇಂಗ್ಲಿಷ್ ಡ್ರಾಮಾ ಪಾಠ ಹೇಳಲು ನಮ್ಮ ಕಾಲೇಜಿಗೆ ಬರುತ್ತಿದ್ದರು. ಬಂದ ಮೊದಲನೆಯ ದಿನವೇ ಅಟೆಂಡೆನ್ಸ್ ಕರೆಯುವಾಗ ನನ್ನ ಹೆಸರು ಊರು ಕೇಳಿ ತಾವೂ ಬೆಳ್ಳೂರಿನವರೆಂದು ಹೇಳಿಕೊಂಡಾಗ ನನಗೆ ಕೋಡು ಮೂಡಿದ್ದವು. ಷೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ನಮಗಿಟ್ಟಿದ್ದ ಇಂಗ್ಲಿಷ್ ಡ್ರಾಮ. ವರ್ಷವೆಲ್ಲಾ ಪಾಠ ಮಾಡಿದ ಮೇಲೆ ಪರೀಕ್ಷೆಗೆ ಮುನ್ನ ಶ್ರೀಕಂಠಯ್ಯನವರ ಸ್ಪೆಷಲ್ ಲೆಕ್ಚರ್. ಕಾಲೇಜಿನ ದೊಡ್ಡ ಹಾಲ್, ಅದರ ತುಂಬ ಕ್ಲಾಸಿನ ಹುಡುಗರಲ್ಲದೆ ಕಾಲೇಜಿನ ಹುಡುಗರೂ ಕೂಡ. ಗರಿಗರಿ ಇಸ್ತ್ರೀ ಮಾಡಿದ ಕ್ಲೋಸ್ ಕಾಲರ್ ಸೂಟು ತೊಟ್ಟ, ಸೊಗಸಾದ ಜರತಾರಿ ಪೇಟ ಹಾಕಿಕೊಂಡ, ಮುದ್ದು ಮುಖದ ಶ್ರೀಕಂಠಯ್ಯನವರು ತಮ್ಮ ಶ್ರೀಕಂಠದಿಂದ ಮಧ್ಯಾಹ್ನ ಮೂರು ಗಂಟೆಗೆ ಲೆಕ್ಚರ್ ಆರಂಭಿಸಿದರು. ಪೂರ್ತಿ ಎತ್ತಿದ ಕೆರೆಯ ತೂಬಿನಿಂದ ನೀರು ನುಗ್ಗಿ ಬಂದಂತೆ ಅವರ ಬಾಯಿಂದ ಭಾಷಣವು ಸರಳವಾದ ಇಂಗ್ಲೀಷಿನಲ್ಲಿ ಹರಿದು ಬರುತ್ತಿತ್ತು. ರಾತ್ರಿ ಒಂಬತ್ತು ಗಂಟೆಯಾದರೂ ಭಾಷಣ ನಡೆದಿತ್ತು! ಹುಡುಗರೆಲ್ಲಾ ಕುಳಿತೇ ಇದ್ದರು! ವೀಸಿಯವರು ನಮ್ಮ ಕನ್ನಡ ಮೇಷ್ಟ್ರು. ಉಡುಪಿನ ಶುಭ್ರತೆ ಎಂದರೆ ಇವರನ್ನು ನೋಡಬೇಕಾಗಿತ್ತು. ಪೇಟಕ್ಕೆ ಜರಿ ಇದ್ದರೆ ಆ ಶುಭ್ರತೆಗೆಲ್ಲಿ ಕುಂದುಂಟಾದೀತೋ ಎಂದು ಬಿಳೀ ಮಲ್ಲಿನ ಪೇಟ ಸುತ್ತಿ ಕ್ಲಾಸಿಗೆ ಬರುತ್ತಿದ್ದರು. ನಾವು ಬರೆದ ಪ್ರಬಂಧಗಳನ್ನು ಒದಿ ಒಬ್ಬೊಬ್ಬರನ್ನಾಗಿ ತಮ್ಮ ಕೋಣೆಗೆ ಕರೆಸಿಕೊಂಡು ತಪ್ಪುಗಳನ್ನು ಬಹು ವಿನಯದಿಂದ ತೋರಿಸಿಕೊಡುತ್ತಿದ್ದರು.

ಇಂಟರ್ ಮೀಡಿಯಟ್ ಪಾಸಾಗುತ್ತಿದ್ದಂತೆ, ಲಿಂಗೇಗೌಡರಿಗೆ ತಮ್ಮ ಮಗನನ್ನು ಅಮಲ್ದಾರನ ಬದಲಿಗೆ ಲಾಯರ್ ಮಾಡಬೇಕೆಂಬ ಆಸೆ ಹುಟ್ಟಿತು. ಆದಕಾರಣ ನಾಗೇಗೌಡರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎಸ್‌ಸಿ ಗೆ ಸೇರಬೇಕಾಗಿ ಬಂತು. ವಿ.ಎಲ್.ಡಿಸೋಜ, ಎ.ಆರ್.ವಾಡಿಯಾ, ಟಿ.ಎಸ್.ವೆಂಕಣ್ಣಯ್ಯ, ಎ.ಅರ್.ಕೃಷ್ಣಶಾಸ್ತ್ರಿ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್ ಅವರಂತಹ ಅತಿರಥ ಮಹಾರಥರುಗಳ ಗರಡಿಯಲ್ಲಿ ಪಳಗಿದರು. ನಾಗೇಗೌಡರು ಬಿ.ಎಸ್‌ಸಿ. ಓದುವಾಗ ಮೈಸೂರಿನ ರಾಜಕುಮಾರ ಜಯಚಾಮರಾಜ ಒಡೆಯರ್ ಅವರೂ ಇಂಟರ್‌ಮೀಡಿಯಟ್ ವಿದ್ಯಾರ್ಥಿ. ಮೈಸೂರಿನಲ್ಲಿಯೂ ಸಹ ಒಕ್ಕಲಿಗರ ಹಾಸ್ಟೆಲ್‌ನಲ್ಲೇ ನಾಗೇಗೌಡರ ಬಿಡಾರ. ಈ ಹಾಸ್ಟೆಲ್ಲನ್ನು ಆಗಿನ ಪ್ರಸಿದ್ಧ ಅಡ್ವೊಕೇಟ್ ಹೆಚ್.ಸಿ.ದಾಸಪ್ಪನವರು ನೋಡಿಕೊಳ್ಳುತ್ತಿದ್ದರು.

ನಾಗೇಗೌಡರು ಹೆಸರಿಗೆ ದೊಡ್ಡಮನೆ ಕುಟುಂಬದಿಂದ ಬಂದವರಾದರೂ ಅವರ ವಿದ್ಯಾಭ್ಯಾಸವು ಸುಗಮವಾಗಿಯೇನೂ ಸಾಗಲಿಲ್ಲ. ಕಾಸಿಗೆ ಕಾಸು ಲೆಕ್ಕವಿರಿಸಿ ತಮ್ಮ ಓದು ಪೂರೈಸಿದರು. ದೊಡ್ಡಮನೆಯ ಸಂಸಾರ ನಿರ್ವಹಣೆಗಾಗಿ ಅವರ ತಂದೆ ಪಡುತ್ತಿದ್ದ ಕಷ್ಟದ ಅರಿವು ಅವರಿಗಿತ್ತು. ಕಷ್ಟಪಟ್ಟು ಬಿ.ಎಸ್‌ಸಿ. ಪಾಸು ಮಾಡಿದರು. 1937ರಲ್ಲಿ ಬಿ.ಎಸ್‌ಸಿ. ಪದವಿ ಪಡೆದ ಗೌಡರು ಇಡೀ ನಾಗಮಂಗಲ ತಾಲ್ಲೂಕಿಗೇ ಒಕ್ಕಲಿಗರಲ್ಲಿ ಎರಡನೆಯ ಗ್ರಾಜುಯೇಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅನಂತರದಲ್ಲಿ ತಮ್ಮ ತಂದೆಯ ಆಸೆ ಪೂರೈಸಲು ವಕೀಲಿ ಓದುವ ಸಲುವಾಗಿ ಪೂನಾಕ್ಕೆ ಹೋದರು ಆಗ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ಲಾ ಕಾಲೇಜು ಇರಲಿಲ್ಲ, ಕೊಲ್ಲಾಪುರಕ್ಕೋ ಪೂನಾಕ್ಕೋ ಹೋಗಬೇಕಾಗಿತ್ತು. ಬಿ.ಎಲ್. ಓದುವುದಿದ್ದರೆ ಮದ್ರಾಸಿಗೆ ಹೋಗಬಹುದಿತ್ತು.

ಪುಣೆಯ ಪ್ರಕೃತಿ ಸೌಂದರ್ಯವು ನಾಗೇಗೌಡರನ್ನು ಪ್ರಬಲವಾಗಿ ಆಕರ್ಷಿಸಿ, ಅವರಲ್ಲಿ ಹುದುಗಿದ್ದ ಕವಿಚೇತನವನ್ನು ಉದ್ದೀಪನಗೊಳಿಸಿತು. ಇಷ್ಟು ಹೊತ್ತಿಗಾಗಲೇ ಮೈಸೂರಿನಲ್ಲಿ ಓದುವಾಗ ಬರವಣಿಗೆಯತ್ತ ಆಕರ್ಷಿತರಾಗಿದ್ದ ಗೌಡರು ಹೆರಗನಹಳ್ಳಿಯಲ್ಲಿ ಅವರು ಕಂಡ ವೈವಿಧ್ಯಮಯ ವ್ಯಕ್ತಿಗಳ ಚಿತ್ರಗಳು ಮತ್ತು ಹಳ್ಳಿಯ ಚಿತ್ರಗಳನ್ನು ಬರೆದಿದ್ದರು. ಈ ವ್ಯಕ್ತಿ ಚಿತ್ರಗಳೆಲ್ಲವೂ ಮುಂದೆ ಅವರ 'ನನ್ನೂರು' ಕೃತಿಯಲ್ಲಿ ಸೇರಿಹೋದವು. ಪುಣೆಯಲ್ಲಿ ಅವರು ಬರೆದ ಬಹುಪಾಲು ಕವಿತೆಗಳು 'ನಾನಾಗುವೆ ಗೀಜಗನ ಹಕ್ಕಿ' ಕವನ ಸಂಗ್ರಹಕ್ಕೆ

ಕಾರಣವಾದವು. ಎಲ್.ಎಲ್.ಬಿ. ಮುಗಿಸಿ ಡಬಲ್ ಗ್ರಾಜುಯೇಟ್ ಎನಿಸಿಕೊಂಡು ಊರಿಗೆ ಮರಳಿದರು.

ಎರಡು ಪದವಿಗಳನ್ನು ಪಡೆದ ನಾಗೇಗೌಡರ ವೃತ್ತಿ ಜೀವನವು ನರಸಿಂಹರಾಜಪುರದಲ್ಲಿ 50 ರೂಪಾಯಿ ಸಂಬಳದ ಮುನ್ಸಿಪ್ ಕೋರ್ಟ್ ಹೆಡ್ ಮುನ್ಷಿ ಕೆಲಸಕ್ಕೆ ಕಾಲಿರಿಸುವುದರೊಂದಿಗೆ ಮೊದಲಾಯಿತು. ವೃತ್ತಿ ಜೀವನದೊಂದಿಗೆ ವೈವಾಹಿಕ ಋಣಾನುಬಂಧವೂ ಬೆರೆತುಕೊಂಡು ಬಂದಿತು. ತಂದೆ ಲಿಂಗೇಗೌಡರು ಹುಡುಕಿ ತಡಕಿ ಹಳ್ಳಿಗೂ ದಿಲ್ಲಿಗೂ ಹೊಂದಿಕೊಳ್ಳುವಂತಹ ಎಲ್ಲ ಸಲ್ಲಕ್ಷಣಗಳುಳ್ಳ ಶ್ರೀಮತಿ ಲಕ್ಷ್ಮಮ್ಮನವರನ್ನು ತಮ್ಮ ಸೊಸೆಯಾಗಿ ಮನೆ ತುಂಬಿಸಿಕೊಂಡರು. ಕಂಕಣಬಲದೊಂದಿಗೆ ನಾಗೇಗೌಡರಿಗೆ ಅಲ್ಲಿಂದೀಚೆಗೆ ಅದೃಷ್ಟ ಯೋಗವೂ ಕೂಡಿ ಬಂದಿತು.

ನರಸಿಂಹರಾಜಪುರದಿಂದ ಚಿಕ್ಕಮಗಳೂರಿಗೆ ವರ್ಗವಾದಾಗ ನಾಗೇಗೌಡರು ಎಂ.ಸಿ.ಎಸ್.ಪರೀಕ್ಷೆ ತೆಗೆದುಕೊಂಡರು. ಎಂ.ಸಿ.ಎಸ್. ಎಂದರೆ ಮೈಸೂರು ಸಿವಿಲ್ ಸರ್ವಿಸ್ ಎಂದು. ಈಗಿನ ಕೆ.ಎ.ಎಸ್. ಪರೀಕ್ಷೆ ಇದ್ದಂತೆ. ಪರೀಕ್ಷೆಗೆ ಕುಳಿತಿದ್ದ 43 ಮಂದಿಯಲ್ಲಿ ಮೊದಲ ಪಟ್ಟಿಯಲ್ಲಿ ಆಯ್ಕೆಯಾದ 34 ಜನರ ಪೈಕಿ ನಾಗೇಗೌಡರೂ ಒಬ್ಬರಾಗಿದ್ದರು. ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್, ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಕೃಪೆಯಿಂದ 1941 ರಲ್ಲಿ ನಾಗೇಗೌಡರಿಗೆ ಗೆಜೆಟೆಡ್ ಹುದ್ದೆ ಲಭಿಸಿತು. ವಿವಿಧ ಇಲಾಖೆಗಳಲ್ಲಿ ವಿವಿಧ ಬಗೆಯ ತರಬೇತಿ ಮುಗಿಸಿ 1943 ರಲ್ಲಿ ನಾಗೇಗೌಡರು ಹರಿಹರದ ಅಮಲ್ದಾರರಾದರು. ಕೊನೆಗೂ ಮಗ ಅಮಲ್ದಾರನಾದದ್ದನ್ನು ಕಂಡ ತಂದೆಗೆ ಹಿಡಿಸಲಾಗದಷ್ಟು ಸಂತೋಷವಾಯಿತು. ಈ ಆನಂದವನ್ನು ಗೌಡರು ಹೀಗೆ ವಿವರಿಸಿದ್ದಾರೆ. "ನನ್ನ ಬಾಳಿನ ಒಂದು ಹಂತ ಮುಗಿಯಿತು. ಹತ್ತಾರು ಮೆಟ್ಟಿಲುಗಳನ್ನು ಒಂದೇ ಸಲ ಹತ್ತಿಬಿಟ್ಟೆ. 1941 ರಲ್ಲಿ ನನ್ನ ಹೊಸ ಬಾಳು ಆರಂಭವಾಯಿತು. ನನ್ನ ತಂದೆಗಾದ ಆನಂದ ಹೇಳತೀರದು. ಮದುವೆ ಮುಂಜಿಗಳಲ್ಲಿ ಅವರ ಮಗನ ಬಗ್ಗೆ ಹೇಳಿಕೊಂಡು ಹಿಗ್ಗಿದರು; ನಾಡಿನ ಮೇಲೆಲ್ಲಾ ಮೆರೆಸಿದರು. 'ಪುರುಷನ ಪುಣ್ಯ ನಾರೀ ಭಾಗ್ಯ!' ಎಂದು ತಮ್ಮ ಸೊಸೆಯನ್ನು ಕುರಿತು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಹೊಗಳುತ್ತಿದ್ದರು.

ಶ್ರೀ ನಾಗೇಗೌಡರು ಅಧಿಕಾರ ವಹಿಸಿಕೊಂಡ ಕಾಲ ನಿಜವಾಗಿ ಕಷ್ಟಕರವಾದ ದಿನಗಳಿಂದ ಕೂಡಿತ್ತು. ದ್ವಿತೀಯ ಮಹಾಸಮರದ ಜ್ವಾಲೆಯ ಬಿಸಿ ಎಲ್ಲೆಡೆ ತಗುಲಿತ್ತು. ಅಲ್ಲಲ್ಲಿ ಕ್ಷಾಮ ತಲೆದೋರಿತ್ತು. ಆಹಾರ ಧಾನ್ಯಗಳ ಅಭಾವ.

ಜನತೆ ಸಂಕಷ್ಟದಲ್ಲಿದ್ದರು. ದನಗಳಿಗೂ ಸಹ ಮೇವಿನ ಕೊರತೆ ಇತ್ತು. ಆಹಾರ ಧಾನ್ಯಗಳ, ಬಟ್ಟೆಬರೆಗಳ ಕಂಟ್ರೋಲ್, ಜಾನುವಾರುಗಳ ಕಂಟ್ರೋಲ್ ಸಹ ಇತ್ತು. ಹಳೇ ಮೈಸೂರು ಸಂಸ್ಥಾನದ ಗಡಿ ತಾಲ್ಲೂಕು ಹರಿಹರ. ಇಲ್ಲಿಂದ ಆಹಾರ ಧಾನ್ಯಗಳು, ಜಾನುವಾರುಗಳೂ ಕಳ್ಳ ಸಾಗಾಣಿಕೆ ಮೂಲಕ ಬ್ರಿಟೀಷ್ ಆಡಳಿತ ಪ್ರಾಂತಗಳಾದ ಬೊಂಬಾಯಿ, ಮದ್ರಾಸ್ (ಧಾರವಾಡ–ಬಳ್ಳಾರಿ ಜಿಲ್ಲೆಗಳ ಗಡಿ) ಗಳಿಗೆ ಸಾಗುತ್ತಿದ್ದುದರಿಂದ ಆ ಗಡಿಗಳಿಗೆ ಹೊಂದಿಕೊಂಡಿದ್ದ ತಾಲ್ಲೂಕಿನಲ್ಲಿ ಸಮರ್ಥ ಬಿಗಿ ಆಡಳಿತದ ಅವಶ್ಯವಿತ್ತು. ಇಂತಹ ಸಮಯದಲ್ಲಿ ಆಡಳಿತದ ಹೊಣೆ ಹೊತ್ತ ನಾಗೇಗೌಡರು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಸರ್ವರ ಮೆಚ್ಚುಗೆಗೆ ಪಾತ್ರರಾದರು. ಸಂಕಷ್ಟದಲ್ಲಿದ್ದ ತಾಲ್ಲೂಕಿನ ಜನತೆಗೆ ಸಕಾಲದಲ್ಲಿ ಸಹಾಯ, ಸಹಕಾರ ನೀಡಿ ಜನರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದರು. ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸಾಮಾನ್ಯ ಜನರಿಗಿದ್ದ ಆಲಸ್ಯ ಅಲಕ್ಷ್ಯತನಗಳ ಬಗ್ಗೆ ತಿಳಿ ಹೇಳಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವ ಪರಿಪಾಠ ಮೈಗೂಡಿಸಿಕೊಳ್ಳುವಂತೆ ಮಾಡಿ ಅಡಿಪಾಯ ಹಾಕಿದರು. ಹರಿಹರದಲ್ಲಿ ಹೈಸ್ಕೂಲು ಇಲ್ಲದ್ದನ್ನು ಗಮನಿಸಿ, ತಾಲ್ಲೂಕಿನ ಮುಖಂಡರೊಂದಿಗೆ ಸಮಾಲೋಚಿಸಿ, ಮಹಾದಾನಿಗಳೆನಿಸಿಕೊಂಡ ದಾವಣಗೆರೆಯ ಧರ್ಮರತ್ನಾಕರ ರಾಜನಹಳ್ಳಿ ಮದ್ದೂರಾಯಪ್ಪನವರಲ್ಲಿಗೆ ತೆರಳಿ ಅವರ ಮನ ಒಲಿಸಿ ಹರಿಹರದಲ್ಲಿ ಧರ್ಮರತ್ನಾಕರ ರಾಜನಹಳ್ಳಿ ಮದ್ದೂರಾಯಪ್ಪ ಪ್ರೌಢಶಾಲೆ ನಿರ್ಮಾಣವಾಗಲು ನಾಗೇಗೌಡರೇ ಕಾರಣರಾದರು. ಇಂದು ಹರಿಹರ ತಾಲ್ಲೂಕಿನಲ್ಲಿ ವಿದ್ಯಾವಂತರ ಸಂಖ್ಯೆ ಬೆಳೆಯಲು ನಾಗೇಗೌಡರು ಕಾರಣಕರ್ತರೆಂದರೆ ಉತ್ಪ್ರೇಕ್ಷೆಯಾಗಲಾರದು." ಎಂದು ಎಚ್.ಜೆ.ಕೆ.ಲಕ್ಕಪ್ಪಗೌಡರು ಕೊಂಡಾಡಿದ್ದಾರೆ.

ನಾಗೇಗೌಡರು ಹರಿಹರದ ಅಮಲ್ದಾರರಾಗಿದ್ದಾಗ, ಅಲ್ಲಿನ ಮುನಿಸಿಪಾಲಿಟಿಯ ಅಧ್ಯಕ್ಷರೂ ಆಗಿದ್ದರು. ಪಟ್ಟಣದ ಏಳಿಗೆಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಗ್ರಾಮೀಣ ರಸ್ತೆಗಳನ್ನು ಸುಧಾರಿಸಿದರು. ಸಂಚಾರ ಸಂಪರ್ಕ ಕಾಮಗಾರಿಗಳನ್ನು ನಿರ್ಮಾಣ ಮಾಡಿಸಿದರು. ಮನೆ ಇಲ್ಲದವರಿಗೆ ಮನೆಗಳ ನಿರ್ಮಾಣಕ್ಕೆ ಅವಶ್ಯಕವಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಎಲ್ಲಕ್ಕಿಂತ ಮಿಗಿಲಾಗಿ ಹರಿಹರದಿಂದ ಕೇವಲ ಆರು ಮೈಲಿ ದೂರದಲ್ಲಿ ತುಂಗಭದ್ರಾ ನದೀ ತೀರದಲ್ಲಿದ್ದ 'ಐರಣಿ ಹೊಳೆಮಠದ' ಮುಪ್ಪಿನಾರ್ಯ ಸ್ವಾಮಿಗಳ ಕೃಪೆಗೆ ಪಾತ್ರರಾದರು. ಐರಣಿ ಹೊಳೆಮಠವು ನಾಗೇಗೌಡರ ಬದುಕಿನುದ್ದಕ್ಕೂ ಧಾರ್ಮಿಕ ಶ್ರದ್ಧಾಕೇಂದ್ರವಾಗಿ ಮಾರ್ಪಟ್ಟಿತ್ತು.

ಹರಿಹರದಿಂದ ದಾವಣಗೆರೆ, ಈ ನಡುವೆ ತಂದೆ ಲಿಂಗೇಗೌಡರ ನಿಧನ. ದಾವಣಗೆರೆಯಿಂದ ಚಿಕ್ಕಬಳ್ಳಾಪುರ, ಅಲ್ಲಿಂದ ಹಾಸನ, ಹಾಸನದಿಂದ ಬೆಂಗಳೂರಿನ ಅಠಾರಾ ಕಛೇರಿಯ ವಿದ್ಯಾ ಇಲಾಖೆ, ಗಾಂಧೀಜಿ ಮರಣ, ಮತ್ತೆ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರ್ ಆಗಿ ನೇಮಕಗೊಂಡರು. ಗೌಡರು ಇಲ್ಲಿರುವಾಗಲೇ ಭಾರತದ ಸಂವಿಧಾನದ ಪ್ರಕಾರ ದೇಶದಲ್ಲೆಲ್ಲಾ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಒಂದೊಂದು ಕ್ಷೇತ್ರವನ್ನು ಮುಗಿಸಿ ಇಡೀ ಸಿಬ್ಬಂದಿ ಇನ್ನೊಂದು ಕ್ಷೇತ್ರದ ಚುನಾವಣೆಯನ್ನು ನಡೆಸಬೇಕಾಗಿದ್ದ ಕಾರಣ ಸುಮಾರು ಒಂದು ತಿಂಗಳ ತನಕ ನಡೆದ ಆ ಚುನಾವಣೆಯ ಗುರುತರ ಜವಾಬ್ದಾರಿಯನ್ನು ಗೌಡರು ಯಶಸ್ವಿಯಾಗಿ ನಿರ್ವಹಿಸಿದರು. ಚುನಾವಣೆ ಮುಗಿದು ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾದರು. ಗೌಡರು ರಾಜ್ಯದ ರೆವಿನ್ಯೂ ಕಮೀಷನರ್ ಅವರ ಪ್ರಥಮ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟರು.

1953 ರಲ್ಲಿ ಮೈಸೂರು ಜಿಲ್ಲಾ ಫುಡ್ ಅಸಿಸ್ಟೆಂಟ್ ಹಾಗೂ ಮೈಸೂರು ನಗರದ ರೇಷನಿಂಗ್ ಆಫೀಸರ್ ಆಗಿ ಸರ್ಕಾರವು ನೇಮಿಸಿತು. ಅಷ್ಟರಲ್ಲಿ ಪಡಿತರ ಪದ್ಧತಿಯನ್ನು ತೆಗೆದುಹಾಕಿದ್ದರಿಂದ ಇಲಾಖೆಯನ್ನು ಮುಚ್ಚಬೇಕಾಗಿ ಬಂತು. 1955 ರಿಂದ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಆಡಳಿತ ಮಂಡಳಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ತುಂಬಾ ಜವಾಬ್ದಾರಿಯುತವಾದ ಈ ಹುದ್ದೆಯಲ್ಲಿ 1958 ರವರೆಗೆ ಸೇವೆ ಸಲ್ಲಿಸಿದ ಗೌಡರು, ಇನ್ನೂ ನಿರ್ಮಾಣದ ಹಂತದಲ್ಲಿದ್ದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಕಾರ್ಯದರ್ಶಿಯಾಗಿ, ಅನಂತರ ಅದರ ಮ್ಯಾನೇಜಿಂಗ್ ಡೈರೆಕ್ಟರಾಗಿ, ಕಾರ್ಖಾನೆಯ ನಿರ್ಮಾಣವನ್ನು ಪೂರ್ಣಗೊಳಿಸಿ, ಮೊತ್ತ ಮೊದಲಿಗೆ ಕಬ್ಬು ಅರೆದು, ಎಲ್ಲರಿಗೂ ಸಕ್ಕರೆ ತಿನ್ನಿಸಿ, 1961 ರಲ್ಲಿ ಐ.ಎ.ಎಸ್. ಶ್ರೇಣಿಗೆ ಸೇರ್ಪಡೆಯಾದರು.

ಐ.ಎ.ಎಸ್. ಶ್ರೇಣಿಗೆ ಆಯ್ಕೆಯಾದ ಗೌಡರು 1961 ರಿಂದ 1963 ರವರೆಗೆ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಈ ವೇಳೆಗಾಗಲೇ ಗ್ರಾಮಾಭಿವೃದ್ಧಿ ಯೋಜನೆಯು ವ್ಯವಸ್ಥಿತ ರೂಪಕ್ಕೆ ಬಂದಿತ್ತು. ಗೊ.ರು.ಚನ್ನಬಸಪ್ಪನವರನ್ನು ಇಲ್ಲಿ ಗ್ರಾಮಾಭಿವೃದ್ಧಿ ಕೆಲಸಕ್ಕೆ ಬಳಸಿಕೊಂಡ ಗೌಡರು ಅವರನ್ನು ಸಮಾಜ ಶಿಕ್ಷಣ ವಿಸ್ತರಣಾಧಿಕಾರಿಯಾಗಿ ಮತ್ತು 'ಪ್ರಗತಿ' ಪತ್ರಿಕೆಯ ಸಂಪಾದಕರನ್ನಾಗಿ ನೇಮಕ ಮಾಡಿಕೊಂಡರು. ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ ವ್ಯಾಲಿ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್, ಅಂಬ್ಲಿಗೋಳ ಪ್ರಾಜೆಕ್ಟ್ ಮೊದಲಾದ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಯೋಜನೆಗಳು ನಡೆಯುತ್ತಿದ್ದು, ಲಕ್ಷಾಂತರ ಎಕರೆ ಭೂಮಿ

ಮುಳುಗಡೆಯಾಗುತ್ತಿತ್ತು. ಲಿಂಗನಮಕ್ಕಿ ಜಲಾಶಯದ ಕಾರಣ ಸಹಸ್ರಾರು ಎಕರೆ ಭೂಮಿ, ನೂರಾರು ಹಳ್ಳಿಗಳು, ಗುಡಿಗೋಪುರಗಳು, ಪುರಾತನ ವಸ್ತುಗಳು ನೀರಿನಲ್ಲಿ ಮುಳುಗಡೆಯಾಗುತ್ತಿರುವುದನ್ನು ಕಣ್ಣಾರೆ ಕಂಡ ಗೌಡರಿಗೆ ಸುಮ್ಮನಿರಲಾಗಲಿಲ್ಲ. ಒಂದು ವರ್ಷ ಕಾಲ ಸರ್ಕಾರಿ ಕೆಲಸ ಕಾರ್ಯಗಳ ಜೊತೆಗೆ ವಸ್ತು ಸಂಗ್ರಹ ಕಾರ್ಯ ನಡೆಸಿದರು. ಅಟ್ಟ–ಬೆಟ್ಟಗಳನ್ನು ಹತ್ತಿದರು. ಕಣಿವೆ–ಕಂದರಗಳಲ್ಲಿ ಅಡ್ಡಾಡಿದರು. ಸಹಸ್ರಾರು ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿ, ಶಿವಮೊಗ್ಗದಲ್ಲಿ ಒಂದು ಜಿಲ್ಲಾ ಮ್ಯೂಜಿಯಂ ಸ್ಥಾಪನೆ ಮಾಡಿದರು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಇದರ ಪ್ರಾರಂಭೋತ್ಸವ ನೆರವೇರಿಸಿಕೊಟ್ಟರು.

ನಾಗೇಗೌಡರು 1965 ರಿಂದ 1969 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಬಹುಮುಖ ಸೇವೆ ಸಲ್ಲಿಸಿ, ದಕ್ಷ ಹಾಗೂ ಜನಪ್ರಿಯ ಜಿಲ್ಲಾಧಿಕಾರಿ ಎನಿಸಿಕೊಂಡರು. ಮೂರು ಜಿಲ್ಲೆಗಳಲ್ಲಿ ಸತತವಾಗಿ ಡೆಪ್ಯೂಟಿ ಕಮಿಷನರ್ ಆಗಿ ದಾಖಲೆ ಸ್ಥಾಪಿಸಿದ ಗೌಡರು 1969 ರಲ್ಲಿ ರಾಜ್ಯದ ಲೇಬರ್ ಕಮೀಷನರ್ ಆಗಿ ನೇಮಕಗೊಂಡರು. ಅಲ್ಲಿಂದ ಅವರು ಬೆಂಗಳೂರಿನಲ್ಲಿ ಖಾಯಂ ಆಗಿ ನೆಲೆಸಿದರು. 1972 ರಿಂದ 1973 ರವರೆಗೆ ಸರ್ವೆ ಇಲಾಖೆಯ ಮುಖ್ಯಾಧಿಕಾರಿ ಹಾಗೂ ಮುಜರಾಯಿ ಇಲಾಖೆಯ ಕಮಿಷನರ್ ಆಗಿ ಸೇವೆ ಸಲ್ಲಿಸಿದರು.

ಹೀಗೆ ಮೂರುವರೆ ದಶಕಗಳಷ್ಟು ಕಾಲ ಸರ್ಕಾರದ ಹತ್ತಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಾಗೇಗೌಡರ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ, ಸಂಘಟನಾ ಶಕ್ತಿಗಳನ್ನು ಗುರುಸಿದ ಕರ್ನಾಟಕ ಸರ್ಕಾರವು ಅವರನ್ನು 1973 ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನಾಗಿ ನೇಮಕ ಮಾಡಿತು. ಗ್ರಾಮೀಣ ಹಿನ್ನೆಲೆಯಿಂದ ಬಂದ ಗೌಡರಿಗೆ ಗ್ರಾಮೀಣ ವಿದ್ಯಾವಂತ ತರುಣರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲು ಹಾದಿ ಮಾಡಿಕೊಟ್ಟಂತಾಯಿತು. ತಮ್ಮ ಸದಸ್ಯತ್ವದ ಅವಧಿಯಲ್ಲಿ ಗೌಡರು ಸಾವಿರಾರು ಮಂದಿ ಗ್ರಾಮೀಣ ಅರ್ಹ ಬಡ ಮಕ್ಕಳಿಗೆ ನಿರ್ವಂಚನೆಯಿಂದ, ನಿಷ್ಪಕ್ಷಪಾತವಾಗಿ ಉದ್ಯೋಗಾವಕಾಶಗಳನ್ನು ನೀಡಿದ್ದು ಚರಿತ್ರೆಯಾಗಿದೆ.

ಎಚ್.ಎಲ್.ನಾಗೇಗೌಡರು ವಾಚಿಕ ಪರಂಪರೆಯು ಇನ್ನೂ ಸಮೃದ್ಧವಾಗಿ ಉಳಿದಿರುವ ಮಂಡ್ಯ ಜಿಲ್ಲೆಯ ಜನಪದದ ನಡುವೆ ತಮ್ಮ ಜೀವನಾನುಭವವನ್ನು ಗಟ್ಟಿಮಾಡಿಕೊಂಡವರು. ಮಂಡ್ಯ ಜಿಲ್ಲೆಯ ಭೂಮಿ, ಭೌಗೋಳಿಕತೆ, ಬಡತನ

ಮತ್ತು ಬದುಕಿನ ಸಂಘರ್ಷಗಳು ಅಲ್ಲಿನ ಜನಪದವನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡು ಬಂದಿವೆ. ಇಂತಹ ನೆಲೆಯಿಂದ ತಮ್ಮ ಜಾನಪದ ಯಾತ್ರೆಯನ್ನು ಪ್ರಾರಂಭಿಸಿದ ಇವರು, ಜನಪದರ ಬದುಕಿನ ಸಾಹಿತ್ಯವನ್ನು ಸಂಗ್ರಹಿಸುವುದರೊಂದಿಗೆ, ಅಲ್ಲಿನ ಪ್ರದರ್ಶನ ಕಲೆಗಳು ಮತ್ತು ಜನಾಂಗೀಯ ಮೂಲವನ್ನು ತಡಕಿದವರು. ವ್ಯಕ್ತಿಯಾಗಿ ಮತ್ತು ಪರಂಪರೆಯಾಗಿ ನಾಗೇಗೌಡರು ಕರ್ನಾಟಕ ಜಾನಪದ ಪರಂಪರೆಯ ಅವಿಭಾಜ್ಯ ಅಂಗ. ಅವರ ಬದುಕು ಮತ್ತು ಬರಹಗಳಲ್ಲಿ ಈ ಪರಂಪರಾಗತ ಜಾನಪದೀಯ ಪ್ರಜ್ಞೆ ಸೃಷ್ಟಿಕ್ರಿಯೆಯಾಗಿ ಎದ್ದು ಕಾಣುತ್ತದೆ. ಅವರ ಬರವಣಿಗೆಯಲ್ಲಿ ಕಂಡುಬರುವ ಜನಪದ ಸತ್ವ ಅವರ ಚಿಂತನೆಯಲ್ಲಿ ಶೋಧಿತವಾಗುವ ಜನಪದಗಳ ಸ್ವಭಾವಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

ನಾಗೇಗೌಡರ ಜಾನಪದ ಕ್ಷೇತ್ರಕಾರ್ಯದ ಮೂಲ ಸೆಲೆ ಅವರಲ್ಲಿದ್ದ ಶ್ರದ್ಧೆ, ಬದ್ಧತೆ, ತಾಳ್ಮೆ ಮತ್ತು ಅದಮ್ಯ ಜೀವನ ಪ್ರೀತಿಯಿಂದ ಹುಟ್ಟಿದವುಗಳು. ಜನಪದ ಸಾಹಿತ್ಯ ಸಂಗ್ರಹಣೆ ಅವರ ಬದುಕಿನ ಪರಮ ಗುರಿಯಾಗಿತ್ತು. ಅದಕ್ಕಾಗಿ ತಮ್ಮ ಕೌಟುಂಬಿಕ ಜವಾಬ್ದಾರಿಯನ್ನು ಬದಿಗಿಟ್ಟು ಸಂಗ್ರಹಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅತೀವವಾದ ಕಾಳಜಿ ಮತ್ತು ಪ್ರೀತಿ ಈ ಕೆಲಸಕ್ಕೆ ಕೈಹಾಕುವಂತೆ ಅವರನ್ನು ಪ್ರೇರೇಪಿಸಿದವು. ಜನಪದ ಸಾಹಿತ್ಯದ ಪ್ರಚಾರಕಾರ್ಯವು ಜಗತ್ತಿನ ಹಲವು ರಾಷ್ಟ್ರಗಳಲ್ಲಿ ನಡೆದಿದ್ದು, ಅದನ್ನು ತಮ್ಮ ವಿದೇಶ ಪ್ರವಾಸಗಳಿಂದ, ವ್ಯಾಪಕ ಓದಿನಿಂದ ಅರಿತಿದ್ದ ನಾಗೇಗೌಡರು ಜಾನಪದ ಪ್ರಚಾರಕ್ರಿಯೆಯಲ್ಲಿಯೂ ಮುಂದಾದರು. ಜನಪದ ಸಾಹಿತ್ಯ ಸಂಗ್ರಹಣೆ ಎನ್ನುವುದು ಎಷ್ಟು ಮುಖ್ಯವೋ ಅದರ ಪ್ರಚಾರವೂ ಕೂಡ ಅಷ್ಟೇ ಮುಖ್ಯ ಎಂಬುದನ್ನು ತಿಳಿದಿದ್ದರು. ನಾಡಿನ ಜನಪದರೊಂದಿಗೆ ಅವರು ಹೊಂದಿದ್ದ ಸಂಪರ್ಕ ಮತ್ತು ಒಡನಾಟಗಳು ಇದನ್ನು ಸ್ಪಷ್ಟಪಡಿಸುತ್ತವೆ. ಅವರೆಂದೂ ಬೆಳೆಯುತ್ತಿರುವ ಸಾಮಾಜಿಕ ಅನ್ಯತೆಗಳ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಅವರದೇನಿದ್ದರೂ ಎಲ್ಲೇ ಹೋದರೂ ಒಂದೇ ಮಂತ್ರ–ಅದು ಜಾನಪದ. ಜನಪದರ ಬದುಕಿನ ಸಾಮಾನ್ಯತೆಯಲ್ಲಿ ಸಾಮಾನ್ಯರಾಗಿ ತಲ್ಲೀನಗೊಂಡಿದ್ದರಿಂದ ಅವರಿಗೆ ಇದು ಸಾಧ್ಯವಾಯಿತು. ನಾಗೇಗೌಡರ ಜಾನಪದ ಸಾಮಗ್ರಿಯ ಕಣಜ ದೊಡ್ಡದು. ಮುಂದಿನ ಹಲವಾರು ವರ್ಷಗಳ ಬಳಕೆಗೆ ಬೇಕಾದ ಸಾಮಗ್ರಿಗಳನ್ನು ಅವರು ಸಂಗ್ರಹಿಸಿದ್ದಾರೆ. ಅದರ ತಿಳುವಳಿಕೆಯ ಮೂಲಗಳನ್ನು ಸೂಚಿಸಿದ್ದಾರೆ. ಕರ್ನಾಟಕದಲ್ಲಿ ಜಾನಪದವನ್ನು, ಜಾನಪದ ವಿದ್ವಾಂಸರನ್ನು ಏಕಕಾಲದಲ್ಲಿ ಎಬ್ಬಿಸಿದ್ದಾರೆ. ಅವರ ಸಂಪಾದನಾ ಕೃತಿಗಳು

ಜಾನಪದ ವಿದ್ವಾಂಸರಿಗೆ ಮಾರ್ಗದರ್ಶಿಯಾಗಿವೆ. ಕನ್ನಡ ಜಾನಪದ ಸಂಗೀತದ ಲಯ, ರಾಗ, ಸಂಪ್ರದಾಯ, ಸೊಲ್ಲು-ಪಲ್ಲವಿಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಅಲ್ಲದೆ, ಕನ್ನಡದಲ್ಲಿ ಜಾನಪದ ಕೋಶ ಹೊರಬರಬೇಕೆಂಬ ಮಹಾದಾಸೆಯಿಂದ ಕೆಲಸ ಮಾಡಿದ್ದಾರೆ. ಅವರು ಹೊರತಂದಿರುವ 'ಕನ್ನಡ ಜಾನಪದ ಕೋಶ'ದಲ್ಲಿ ಅಡಕವಾಗಿರುವ ಅಪಾರವಾದ ಶಬ್ದ ಸಂಪತ್ತು. ಕನ್ನಡದ ವಿವಿಧ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ಮಾತುಗಳು, ಗಾದೆ ನಾಣ್ಣುಡಿಗಳು, ಜಾನಪದ ಪ್ರಯೋಗಗಳು ನಾಗೇಗೌಡರ ಕರ್ತವ್ಯನಿಷ್ಠೆ ಮತ್ತು ಕೆಲಸದಲ್ಲಿನ ಅಚ್ಚುಕಟ್ಟುತನವನ್ನು ಪ್ರತಿಬಿಂಬಿಸುತ್ತವೆ.

ಜನಪದ ಸಂಸ್ಕೃತಿ, ಭಾಷೆ, ಸಾಹಿತ್ಯದ ಬಗ್ಗೆ ಆಸಕ್ತಿ ವಹಿಸಿ, ಅದರ ಅಭ್ಯುದಯಕ್ಕೆ ಯಾವ ರೀತಿಯಲ್ಲಿ ದುಡಿಯಬೇಕು ಎಂಬುದಕ್ಕೆ ಎಚ್.ಎಲ್.ನಾಗೇಗೌಡರು ಅತ್ಯುತ್ತಮ ನಿರ್ದರ್ಶನವಾಗಿದ್ದಾರೆ. ಕರ್ನಾಟಕದಲ್ಲಿ ಸುಮಾರು ಅರ್ಧ ಶತಮಾನದಷ್ಟು ಕಾಲ ಜಾನಪದ ಸೇವೆಯನ್ನು ನಿರಂತರವಾಗಿ ಕೈಗೊಂಡ ಇವರು, ಧೀಮಂತ ಕನ್ನಡಿಗರಾಗಿ, ನಿಷ್ಠ ಐ.ಎ.ಎಸ್.ಅಧಿಕಾರಿಯಾಗಿ, ಉತ್ಕೃಷ್ಟ ಸೃಜನಶೀಲ ಲೇಖಕರಾಗಿ, ಜಾನಪದ ಸಂಗ್ರಾಹಕರಾಗಿ, ಸಂಶೋಧಕರಾಗಿ, ಮಾದರಿ ಸ್ವರೂಪದ ಭಾಷಾತಜ್ಞರಾಗಿರುವುದರ ಜೊತೆಗೆ ಕನ್ನಡ ಜನಪದ ಸಮುದಾಯಗಳ ಹಿತಚಿಂತನೆ ನಡೆಸಿದ್ದಾರೆ. ಜಾನಪದದ ಉಳಿವಿಗಾಗಿ ಸಂಸ್ಥೆಗಳನ್ನು ಕಟ್ಟಿದ್ದಾರೆ.

"ನಾಗೇಗೌಡರ ಜೀವನಾನುಭವದ ವ್ಯಾಪ್ತಿ ಎಷ್ಟು ವಿಶಾಲ, ಅಪರಿಮಿತ ಎಂಬುದಕ್ಕೆ ಅವರು ರಚಿಸಿರುವ ಸುಮಾರು 45 ಕೃತಿಗಳು ಉತ್ತಮ ಸಾಕ್ಷ್ಯಗಳನ್ನು ಒದಗಿಸುತ್ತವೆ. ತಮ್ಮ ತಾರುಣ್ಯದಲ್ಲಿ ರಚಿಸಿದ 'ನಾನಾಗುವೆ ಗೀಜಗನ ಹಕ್ಕಿ' ಕವನ ಸಂಕಲನದಿಂದ ಮೊದಲುಗೊಂಡು 'ಮಲೆನಾಡ ವಾಲ್ಮೀಕಿ'ಯವರೆಗೂ ಕಾಡು ಹಕ್ಕಿಯ ಹಾಡಿನಂತೆ ಸಹಜವಾಗಿ, ಸರಾಗವಾಗಿ, ಸುಲಲಿತವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. ತಾನು ಹುಟ್ಟಿ ಬೆಳೆದ ಮಣ್ಣಿನ ಬದುಕಿನ ವಿಸ್ತಾರಲೋಕದ ಚಿತ್ತಾರಗಳನ್ನು ಕಂಡಿರಿಸಿದ್ದಾರೆ. ಪರಿಣಾಮವಾಗಿ ನಾಗೇಗೌಡರ ಕೃತಿಗಳಿಗೆ ಸಾಹಿತ್ಯಿಕ ಮೌಲ್ಯವಷ್ಟೇ ಅಲ್ಲದೆ ಸಾಂಸ್ಕೃತಿಕ ಮೌಲ್ಯವೂ ಸಿದ್ಧಿಸಿದೆ." ಎಂದು ಡಾ. ಚಕ್ಕೆರೆ ಶಿವಶಂಕರ್ ಮುಕ್ತ ಕಂಠದಿಂದ ಹೊಗಳಿದ್ದಾರೆ.

ನಾಗೇಗೌಡರ ದೊಡ್ಡಮನೆ, ಭೂಮಿಗೆ ಬಂದ ಗಂಧರ್ವ, ಸೊನ್ನೆಯಿಂದ ಸೊನ್ನೆಗೆ ಕಾದಂಬರಿಗಳು, 'ನನ್ನೂರು' ಗ್ರಾಮೀಣ ಚಿತ್ರಗಳು ಕನ್ನಡ ಭಾಷೆಗೆ ಗ್ರಾಮೀಣ ಜೀವಸತ್ವವನ್ನು, ಮೊನಚನ್ನು ಅನನ್ಯತೆಯನ್ನು ತಂದುಕೊಟ್ಟಿವೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು"ಶ್ರೀಮಾನ್ ನಾಗೇಗೌಡರ 'ನನ್ನೂರು' ಹಳ್ಳಿಗಳ ವಿಶ್ವರೂಪವನ್ನು ತೋರಿಸುವ ಹೃದಯಂಗಮವಾದ ಕೃತಿ. ಪುಸ್ತಕದ ಉದ್ದಕ್ಕೂ ಪಾಯಸದಲ್ಲಿ ಗೋಡಂಬಿ, ದ್ರಾಕ್ಷಿ ಚೂರುಗಳಂತೆ ಗಾದೆಗಳೂ, ಆಡುಮಾತುಗಳೂ, ನಾಣ್ನುಡಿ ಮತ್ತು ಪಡೆನುಡಿಗಳೂ ದೊರೆಯುತ್ತವೆ. ನಮ್ಮ ಹಳ್ಳಿಗಳಲ್ಲಿ ಇನ್ನೂ ಉಳಿದಿರಬಹುದಾದ ನಮ್ಮತನವನ್ನು ಅರಿಯಲು 'ನನ್ನೂರು' ಒಳ್ಳೆಯ ಸಾಧನವಾಗಿದೆ' ಎಂದು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ನಾಗೇಗೌಡರ ಸೃಜನಶೀಲ ಬರವಣಿಗೆಯಂತೆಯೇ ಅನುವಾದ ಸಾಹಿತ್ಯವೂ ಕೂಡ ಕೇವಲ ರೂಪಾಂತರವಾಗಿಯಷ್ಟೇ ಉಳಿಯದೆ ಪುನರ್ ಅವತರಣ ಕ್ರಿಯೆಯನ್ನು ಸಾಧಿಸಿದೆ. ಕೆನಿಲ್‌ವರ್ತ್‌ನಿಂದ ಮೊದಲುಗೊಂಡು ಮಾರ್ಕೊಪೋಲೋ ಪ್ರವಾಸ ಕಥನ, 'ಪ್ರವಾಸಿ ಕಂಡ ಇಂಡಿಯಾ' ಕೃತಿಯ ಎಂಟು ಸಂಪುಟಗಳಿಗೂ ಈ ಮಾತು ಅನ್ವಯಿಸುತ್ತದೆ. ಇಂಗ್ಲೀಷ್ ಭಾಷೆಯ ಮೇಲೆ ವಿದ್ವತ್ಪೂರ್ಣ ಪ್ರಭುತ್ವವನ್ನು ಹೊಂದಿದ್ದ ಗೌಡರು ಆ ಭಾಷೆಯನ್ನು ಪೂರ್ಣ ಪ್ರಮಾಣದಲ್ಲಿ ಕನ್ನಡದ ಜಾಯಮಾನಕ್ಕೆ ಒಗ್ಗಿಸಿಕೊಂಡಿದ್ದಾರೆ. ಮೂಲದ ಸೊಗಡನ್ನು ಎಲ್ಲಿಯೂ ಬಿಟ್ಟುಕೊಡದೆ, ಅದರ ಅಂದ-ಚಂದಗಳನ್ನು ಸಮಗ್ರವಾಗಿ ತಮ್ಮ ಅನುವಾದ ಕೃತಿಗಳಲ್ಲಿ ಕಂಡಿರಿಸಿದ್ದಾರೆ. ಅನಾದಿ ಕಾಲದಿಂದಲೂ ಜಗತ್ತಿನ ನಾನಾ ಮೂಲೆಗಳಿಂದ, ನಾನಾ ಕಾರಣಗಳಿಂದಾಗಿ ಭಾರತಕ್ಕೆ ಭೇಟಿ ನೀಡಿದ್ದ ಪ್ರವಾಸಿಗರು ಭಾರತದ ಬಗ್ಗೆ, ಭಾರತೀಯರ ಬದುಕು ಸಂಸ್ಕೃತಿಗಳ ಬಗ್ಗೆ ಬರೆದಿದ್ದ ಅಭಿಪ್ರಾಯಗಳೆಲ್ಲವೂ ಬಹುತೇಕ ಇಂಗ್ಲೀಷ್ ಭಾಷೆಯಲ್ಲಿ ಹುದುಗಿ ಹೋಗಿದ್ದವು. ಅಂತಹ ದಾಖಲೆಗಳನ್ನು ಹುಡುಕಿ ತೆಗೆದು ಕ್ರೋಢೀಕರಿಸಿ ಅಧ್ಯಯನ ಮಾಡಿ ಅವುಗಳೆಲ್ಲವನ್ನೂ ಕನ್ನಡಕ್ಕೆ ತಂದ ಕೀರ್ತಿ ಎಚ್.ಎಲ್.ನಾಗೇಗೌಡರದು. ಕುವೆಂಪುರವರು ನಾಗೇಗೌಡರನ್ನು ಕುರಿತು "ಕನ್ನಡ ಸಾಹಿತ್ಯ ವಾಹಿನಿಗೆ ಒಂದು ಹೊಸ ಹೊಳೆ ಸಂಗಮಿಸುವಂತೆ ಮಾಡಿ ಕನ್ನಡಿಗರ ಹೃದಯಶ್ರೀ ನೆರೆಯುಕ್ಕುವಂತೆ ಮಾಡಿದ್ದಾರೆ.ಈ ಬೃಹತ್ ಪ್ರವಾಸ ಕಥನ ಕೃತಿಯ ಮೂಲಕ "ಪ್ರವಾಸಿ ಕಂಡ ಇಂಡಿಯಾ'ದ ಪುಟಗಳನ್ನು ತಿರುಹುವಾಗ ಗತಕಾಲದ ಭಾರತೀಯ ಸಂಸ್ಕೃತಿಯ ವೈಭವದ ಚಿತ್ರಪಟವನ್ನು ನಮ್ಮ ಕಣ್ಮುಂದೆ ಸುರುಳಿಬಿಚ್ಚಿ ಹರಡಿದಂತೆ ಭಾಸವಾಗುತ್ತದೆ. ದಕ್ಷ ಆಡಳಿತಗಾರರಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಅಜರಾಮರವಾದ ಕೀರ್ತಿಯನ್ನು ಸಂಪಾದಿಸಿರುವ ಅಪರೂಪದ ವ್ಯಕ್ತಿಗಳಲ್ಲಿ ಶ್ರೀ ಎಚ್.ಎಲ್.ನಾಗೇಗೌಡರೊಬ್ಬರು. ಗ್ರಾಮೀಣ ಸಂಸ್ಕೃತಿಯ ಬಸಿರಲ್ಲಿ ಹುಟ್ಟಿ ಬೆಳೆದು, ಆಧುನಿಕ ಶಿಕ್ಷಣದಿಂದ ಪರಿಪುಷ್ಟಿಗೊಂಡು, ಸರ್ಕಾರದ ನಾನಾ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದರ ಪರಿಣಾಮವಾಗಿ ಅವರ ಅನುಭವ ಕೋಶ

ಶ್ರೀಮಂತವಾಗಿದೆ. ಈ ಅನುಭವ ಭಾವದೀಪ್ತವಾಗಿ, ಪ್ರತಿಭಾಗ್ನಿಯಲ್ಲಿ ಮಿಂದಾಗ ಸಾಹಿತ್ಯ ರೂಪದಲ್ಲಿ ಮೂರ್ತಗೊಂಡು ಹೊರ ಹೊಮ್ಮುತ್ತದೆ". 'ನನ್ನೂರು' ಹೊತ್ತಿಗೆಯ ಚಿತ್ರಗಳೂ, 'ದೊಡ್ಡಮನೆ' ಕಾದಂಬರಿಯ ಜೀವಂತ ದೃಶ್ಯಗಳೂ ಗ್ರಾಮೀಣ ಸಂಸ್ಕೃತಿಗೆತ್ತಿದ ಆರತಿಯಾದರೆ, 'ಭೂಮಿಗೆ ಬಂದ ಗಂಧರ್ವ' ಶ್ರೀಯುತರ ಕಲ್ಪನಾ ಪ್ರತಿಭೆಯ ಸುಂದರ ಸೃಷ್ಟಿಯಾಗಿದೆ" ಎಂಬ ಕುವೆಂಪುರವರ ಮಾತುಗಳು ನಾಗೇಗೌಡರ ಸಾಹಿತ್ಯ ಕೃಷಿಗೆ ಭಾಷ್ಯ ಬರೆದಂತಿದೆ.

'ಪ್ರವಾಸಿ ಕಂಡ ಇಂಡಿಯಾ' ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಅದ್ವಿತೀಯ ಕೊಡುಗೆಯಾಗಿದೆ. 'ಇತಿಹಾಸಕಾರರಿಗೆ, ಸಾಂಸ್ಕೃತಿಕ ಲೋಕದಲ್ಲಿ ಕೃಷಿ ಮಾಡುವವರಿಗೆ, ಸಮಾಜ ಹಾಗೂ ಜನಾಂಗ ವಿಜ್ಞಾನಿಗಳಿಗೆ, ಜಾನಪದ ವಿದ್ವಾಂಸರಿಗೆ ಹಾಗೂ ಪುರಾತತ್ವ ಸಂಶೋಧಕರಿಗೆ, ಸಾಹಿತಿಗಳಿಗೆ ಇದೊಂದು ತವನಿಧಿರೂಪದ ಆಕರ ಗ್ರಂಥವಾಗಿದೆ. ಸೀಮಾಕೃತಿಯಂತಿರುವ ಈ ಅಮೂಲ್ಯ ಗ್ರಂಥ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.

ಜಾನಪದ ಲೋಕ ಸ್ಥಾಪನೆ:

ಎಚ್.ಎಲ್.ನಾಗೇಗೌಡರು ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ಕಾರಣ ಮುಳುಗಡೆಯಾಗುತ್ತಿದ್ದ ಪ್ರದೇಶಗಳಲ್ಲಿ ಸುತ್ತಾಡಿ,ಮೂಲೆ ಮುಡುಕುಗಳನ್ನೆಲ್ಲ ಹುಡುಕಿ ತಡಕಿ, ಹೆಕ್ಕಿ ತೆಗೆದು ಶಿವಮೊಗ್ಗ ಜಿಲ್ಲಾ ವಸ್ತು ಸಂಗ್ರಹಾಲಯ ಸ್ಥಾಪನೆಗೆ ನಾಂದಿ ಹಾಡಿದರಷ್ಟೆ. ಅಲ್ಲಿಂದ ಅವರ ಆಸಕ್ತಿ ಈ ದಿಸೆಯಲ್ಲಿ ದಿನೇ ದಿನೇ ಹೆಚ್ಚುತ್ತಾ ಬಂದಿತು. ಮಂಗಳೂರಿನ ಜಿಲ್ಲಾಧಿಕಾರಿಯಾಗಿದ್ದಾಗ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟ ಜಾನಪದ ವಸ್ತು ಸಂಗ್ರಹಾಲಯಕ್ಕೆ ಅಪೂರ್ವ ವಸ್ತುಗಳನ್ನು ಸಂಗ್ರಹಿಸಿಕೊಟ್ಟ ಗೌಡರಲ್ಲಿ ತಾವೇ ಒಂದು ಜಾನಪದ ವಸ್ತು ಸಂಗ್ರಹಾಲಯ ಸ್ಥಾಪಿಸುವ ಆಸೆ ಬಲವತ್ತರವಾಗಿ ಬೆಳೆಯಿತು. ಅನೇಕ ವಸ್ತು ಸಂಗ್ರಹಾಲಯಗಳನ್ನು ವೀಕ್ಷಿಸಿದರು. ಮುಂಬಯಿ, ದೆಹಲಿ,ಕಲ್ಕತ್ತ, ಮದರಾಸು ಮುಂತಾದ ಕಡೆಗಳಲ್ಲಿ ನಡೆದ ಹಲವಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಳನಗಳು,, ಸೆಮಿನಾರ್‌ಗಳಲ್ಲಿ ಭಾಗವಹಿಸಿದರು. ಅಲ್ಲದೆ ವಿದೇಶ ಪ್ರವಾಸ ಕೈಗೊಂಡಾಗಲೆಲ್ಲಾ ತಾವು ಭೇಟಿ ನೀಡಿದ ದೇಶಗಳ ಜನಪದ ಗೀತೆಗಳ ಡಿಸ್ಕ್ ಗಳನ್ನು ಸ್ಲೈಡ್ ಗಳನ್ನು, ವಿಡಿಯೋ ಚಿತ್ರಗಳನ್ನು ಶೇಖರಿಸಿಕೊಂಡು ಬಂದರು. ಥಾಯ್‌ಲ್ಯಾಂಡ್ ದೇಶದ ರಾಜಧಾನಿ ಬ್ಯಾಂಕಾಕ್ ನಲ್ಲಿರುವ ಥೈ ವಿಲೇಜ್ ನೋಡಿಕೊಂಡು ಬಂದರು. ಅಂದಿನಿಂದ ಗೌಡರ ಮನಸ್ಸಿನಲ್ಲಿ

ಬೆಂಗಳೂರಿನಲ್ಲಿಯೂ ಇಂತಹುದೊಂದು ಸಾಂಸ್ಕೃತಿಕ ಗ್ರಾಮವನ್ನು ಸ್ಥಾಪನೆ ಮಾಡಬೇಕೆಂಬ ಆಸೆ ಬಲವತ್ತರವಾಗಿ ಮೊಳೆಯಿತು. ಈ ಗ್ರಾಮ ಕಲ್ಪನೆಯೇ ಮುಂದೆ ಅವರ ಮನಸ್ಸಿನಲ್ಲಿ 'ಜಾನಪದ ಲೋಕ' ವಾಗಿ ರೂಪುಗೊಂಡಿತು.

1980ರಲ್ಲೇ ಜಾನಪದ ಲೋಕ ನಿರ್ಮಾಣದ ಕನಸು ಕಂಡ ನಾಗೇಗೌಡರು ಅದಕ್ಕಾಗಿ ಬೆಂಗಳೂರಿನಲ್ಲಿ 25 ಎಕರೆ ಭೂಮಿ ಬೇಡಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಬೆಂಗಳೂರಿನ ಕಬ್ಬನ್ ಪಾರ್ಕ್ ನಲ್ಲಿ ಇಲ್ಲವೆ ಸೆಂಟ್ರಲ್ ಜೈಲಿನಲ್ಲಿ ಜಾನಪದ ಲೋಕವನ್ನು ನಿರ್ಮಾಣ ಮಾಡಬೇಕೆನ್ನುವುದು ಗೌಡರ ಉದ್ದೇಶವಾಗಿದ್ದಿತು. ಜಾನಪದ ಲೋಕದ ನೀಲನಕಾಶೆಯನ್ನು ಸಿದ್ಧಪಡಿಸಲು ಮುಂದಾದ ಗೌಡರ ನೆರವಿಗೆ ಇಂಟಾಕ್ ಸಂಸ್ಥೆಯ ಬೆಂಗಳೂರು ಶಾಖೆಯ ನವೊಮಿಮೆಡೊಸ್ ಬಂದರು. ಮೆ॥ ಬೋಪಯ್ಯ ಅಸೋಸಿಯೇಟ್ಸ್ ಅವರು 'ಜಾನಪದ ಲೋಕ'ದ ಮಾಸ್ಟರ್ ಪ್ಲಾನ್ ತಯಾರಿಸಿಕೊಟ್ಟರು. ಆ ಮಾಸ್ಟರ್ ಪ್ಲಾನ್ ನಂತೆ ಒಂದು ಟೇಬಲ್ ಮಾಡೆಲ್ ತಯಾರಿಸಿ ಕರ್ನಾಟಕ ಜಾನಪದ ಟ್ರಸ್ಟ್‌ನಲ್ಲಿ ಪ್ರದರ್ಶನಕ್ಕಿಟ್ಟ ಗೌಡರು ಬಂದವರು ಹೋದವರಿಗೆಲ್ಲಾ ತಮ್ಮ ಕನಸನ್ನು ಬಿತ್ತರಿಸುತ್ತಾ ಹೋದರು. ಮಾಸ್ಟರ್ ಪ್ಲಾನ್ ಹಿಡಿದುಕೊಂಡು ಬಿ.ಡಿ.ಎ, ಕಾರ್ಪೋರೇಷನ್, ವಿಧಾನಸೌಧ ಎಂದು ಬೆಂಗಳೂರಿನ ತುಂಬೆಲ್ಲಾ ಓಡಾಡಿದರು. ಆದರೆ ಎಲ್ಲಿಯೂ ಗೌಡರಿಗೆ ಜಾಗ ಸಿಗಲಿಲ್ಲ. ನಿರಾಶರಾಗದ ಗೌಡರು ಬೆಂಗಳೂರಿನಲ್ಲಿ ಸಿಗದಿದ್ದರೇನಂತೆ, ಬೆಂಗಳೂರಿನ ಹೊರಗಡೆ ಹುಡುಕೋಣ ಎಂದು ಹೊರಟಾಗ ಅವರ ಕಣ್ಣಿಗೆ ಬಿದ್ದದ್ದು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದಿಂದ ಎರಡು ಕಿ.ಮೀ ಗಳ ಮುಂದೆ ಹಳ್ಳಕೊಳ್ಳ, ಗಿಡಗೆಂಟೆಗಳು, ಹಾವಿನ ಹುತ್ತಗಳಿಂದ ತುಂಬಿದ್ದ ಜಮೀನು. ಭಾರತದಲ್ಲೇ ಅತ್ಯುತ್ತಮ ಗ್ರಾಮೀಣ ಸಾಂಸ್ಕೃತಿಕ ಕೇಂದ್ರವನ್ನಾಗಿ ಜಾನಪದ ಲೋಕವನ್ನು ರೂಪಿಸಬೇಕು ಎಂಬುದು ಅವರ ಮಹತ್ವದ ಉದ್ದೇಶವಾಗಿತ್ತು. ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಕಟ್ಟಡಗಳು ಮೇಲೇಳಬೇಕೆನ್ನುವುದು ಅವರ ಆಶಯವಾಗಿದ್ದು ಬಯಲು ರಂಗಮಂದಿರ, ಒಳಾಂಗಣ ಮತ್ತು ಹೊರಾಂಗಣ ಸಂಗ್ರಹಾಲಯುಗಳು, ಪೂಜಾಮಂದಿರ ಮತ್ತು ಅದಕ್ಕೆ ಹೊಂದಿಕೊಂಡಂತೆ ಕಲ್ಯಾಣಿ, ಕಲಾವಿದರ ವೇಷಭೂಷಣಗಳು, ವಾದ್ಯಗಳು ಮತ್ತು ಇತರ ಗ್ರಾಮೀಣ ವಸ್ತುಗಳ ತಯಾರಿಕೆಗಾಗಿ ಕಟ್ಟಡಗಳು, ಕರಕುಶಲ ವಸ್ತುಗಳ ತಯಾರಿಕೆ ಹಾಗೂ ಮಾರಾಟ ಕೇಂದ್ರಗಳು, ಚಲನಚಿತ್ರ, ವಿಡಿಯೋ, ಸ್ಲೈಡ್ಸ್ ಮುಂತಾದವುಗಳ ಮೂಲಕ ಮನರಂಜನೆ ಒದಗಿಸಲು ಚಿತ್ರಮಂದಿರಗಳು, ವಿಚಾರಗೋಷ್ಠಿ, ಕಮ್ಮಟಗಳಿಗೆ ಬೇಕಾದ ಕೋಣೆಗಳು, ಕಲಾವಿದರು,

ಸಂಶೋಧಕರು, ಶಾಲಾಕಾಲೇಜು ವಿದ್ಯಾರ್ಥಿಗಳು ಉಳಿಯಲು ವಸತಿ ಸೌಕರ್ಯ ಇತ್ಯಾದಿ ಕಟ್ಟಡಗಳನ್ನು ಕಟ್ಟಬೇಕೆನ್ನುವುದು ಗೌಡರ ಆಲೋಚನೆಯಾಗಿದ್ದು ಅವುಗಳನ್ನು ಕಾರ್ಯಗತಗೊಳಿಸಿದರು.

ಜಾನಪದ ಲೋಕದ ಮಹತ್ವದ ಅಕರ್ಷಣೆಯೇ ಅದರ ಮಹಾದ್ವಾರ. ಹರಿಗೆ ಮತ್ತು ಕೊಂಬುಗಳಿಂದ ಅಲಂಕೃತವಾದ ವಿಶಾಲ ಮಹಾದ್ವಾರ. ಇಕ್ಕೆಲಗಳಲ್ಲಿ ಎತ್ತರದ ನಂದಿ ಧ್ವಜಗಳು. ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡರ ಸಮ್ಮಿಲನ ಈ ಮಹಾದ್ವಾರದ ರಚನೆಯಲ್ಲಿ ಎದ್ದು ಕಾಣುತ್ತದೆ. ಒಳಹೋಗುತ್ತಿದ್ದಂತೆ ಕಣ್ಣಿಗೆದುರಾಗಿ ಕಾಣುವ ಬೀಸುವ ಕಲ್ಲಿನ ಅರ್ಥಪೂರ್ಣವಾದ ಲಾಂಛನ. ಕೋಣಗಳನ್ನು ಕಟ್ಟಿ ಎಳೆಸುತ್ತಿದ್ದ ಬೃಹತ್ತಾದ ಬೀಸುವ ಕಲ್ಲು, ಗಿರಿಜನರ ಅಡುಗೆ ಮನೆಯ ವಿವಿಧ ವಸ್ತುಗಳ ಸಂಗ್ರಹಾಲಯವಾದ ಲೋಕಮಾತಾ ಮಂದಿರ, ನಾಗೇಗೌಡರ ಜಾನಪದ ಬೆಳವಣಿಗೆಯನ್ನು ಪ್ರತಿಬಿಂಬಿಸುವ ಚಿತ್ರಕುಟೀರ, ಕಲಾವಿದರು ತಂಗಲೆಂದೇ ನಿರ್ಮಿಸಿರುವ ತೊಟ್ಟಿಕಂಬಗಳನ್ನೊಳಗೊಂಡ ದೊಡ್ಡಮನೆ, ಜಾನಪದಕ್ಕೆ ಸಂಬಂಧಪಟ್ಟ ಎಲ್ಲಾ ಬಗೆಯ ಸುಮಾರು 5000ಕ್ಕೂ ಹೆಚ್ಚು ವಸ್ತುಗಳನ್ನು ಕಲಾತ್ಮಕವಾಗಿ ಹಾಗೂ ವೈಜ್ಞಾನಿಕವಾಗಿ ಕಾಯ್ದಿರಿಸಿರುವ ಎರಡು ಅಂತಸ್ತುಗಳ ಕಟ್ಟಡವಾದ ಲೋಕಮಹಲ್, ಕಲ್ಲಿನಲ್ಲಿ ಕತೆ ಹೇಳುವ ಶಿಲ್ಪಮಾಳ, ಆಯಗಾರರಮಾಳ, ಜಾನಪದ ಲೋಕವನ್ನು ವೀಕ್ಷಿಸಲೆಂದು ಬರುವವರನ್ನು ಹರಸಲೆಂದೇ ಇಲ್ಲಿ ನೆಲೆಯಾಗಿರುವ ಲೋಕಪ್ರಿಯ ಮಹಾಗಣಪತಿಯ ದೇವಸ್ಥಾನ, ಸುಮಾರು ಒಂದು ಸಾವಿರ ಮಂದಿ ಕುಳಿತುಕೊಳ್ಳಬಹುದಾದ ಗ್ರೀಕ್ ಮಾದರಿಯ ಬೃಹತ್ತಾದ ಬಯಲು ರಂಗ ಮಂದಿರ, ಮಕ್ಕಳ ಮನರಂಜನೆಗೆ ದೋಣಿವಿಹಾರ, ಕುದುರೆ ಸವಾರಿ, ಆಟವಾಡಲು ವಿಶಾಲವಾದ ಆಟದ ಮಾಳ, ಗ್ರಾಮೀಣ ತಿಂಡಿ ತಿನಿಸುಗಳಿಗಾಗಿ ಲೋಕರುಚಿ ಉಪಾಹಾರ ಮಂದಿರ ಎಲ್ಲವನ್ನೂ ನಾಗೇಗೌಡರು ಜಾನಪದ ಲೋಕದಲ್ಲಿ ನಿರ್ಮಾಣ ಮಾಡಿದ್ದಾರೆ.

ಗೌಡರ ಆದರ್ಶದಂತೆಯೇ ಕರಕುಶಲ ಕಲಾವಿದರು ಈ ಲೋಕದಲ್ಲಿದ್ದುಕೊಂಡು ತಮ್ಮ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಡೊಳ್ಳುಕುಣಿತ, ಸುಗ್ಗಿಕುಣಿತ, ಕೋಲಾಟ, ಗೊರವರ ಕುಣಿತದಂತಹ ಪ್ರದರ್ಶನದ ಕಲೆಗಳಲ್ಲಿ ತರಬೇತಿ ನೀಡಿ ಕಲಾತಂಡಗಳನ್ನು ರೂಪಿಸಲಾಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯವು ಜಾನಪದ ಲೋಕವನ್ನು ಸಂಶೋಧನಾ ಕೇಂದ್ರವಾಗಿ ಮಾನ್ಯ ಮಾಡಿದೆ. 1999ರಿಂದ ಜಾನಪದ ಮಹಾವಿದ್ಯಾಲಯವನ್ನು ಪ್ರಾರಂಭಿಸಲಾಗಿದ್ದು

ಜಾನಪದ ಡಿಪ್ಲೊಮಾ ಮತ್ತು ಜಾನಪದ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ನಾಗೇಗೌಡರಲ್ಲಿ ಜಾನಪದ ದೃಷ್ಟಿ ಮತ್ತು ಸೃಷ್ಟಿಗಳೆರಡೂ ಪ್ರಕ್ರಿಯಾಭಿಮುಖವಾದವುಗಳು. ಅವರಲ್ಲಿ ಒಬ್ಬ ಸರಳ ಜಾನಪದ ವಿದ್ವಾಂಸ ಮತ್ತು ಸುಂದರ ಸೃಷ್ಟಿಕರ್ತ ಇಬ್ಬರೂ ಕುಳಿತಿದ್ದಾರೆ. ಜಾನಪದ ಪರಂಪರೆಯನ್ನು ಅದರ ಅನಂತ ಬೆಳವಣಿಗೆಯಲ್ಲಿ ಕಲ್ಪಿಸಿಕೊಳ್ಳುವ ಕನಸು ಕಂಡವರು. ಇದರ ಫಲವಾಗಿ ರೂಪುಗೊಂಡದ್ದು ಸುಂದರ 'ಜಾನಪದ ಲೋಕ'. ಈ ಜಾನಪದ ಲೋಕವನ್ನು ಸಂದರ್ಶಿಸಿದ ವಿದ್ವಾಂಸರ ಜ್ಞಾನವು ಪರಿಪೂರ್ಣವಾಗುವುದರಲ್ಲಿ ಸಂಶಯವಿಲ್ಲ. ಜನಪದರ ಬದುಕಿನ ವಿರಾಟ್ ಸ್ವರೂಪದಲ್ಲಿ, ಅವರ ಜೀವನವನ್ನು ಬಹುಮುಖ್ಯವಾಗಿ ರೂಪಿಸುವ ವಸ್ತು ಸಾಮಗ್ರಿಗಳನ್ನು ಸಂಗ್ರಹಿಸಿ ತಂದ ನಾಗೇಗೌಡರು, ಅನನ್ಯ ರೀತಿಯಲ್ಲಿ ಈ ಜಾನಪದ ಲೋಕದಲ್ಲಿ ಕಾಯ್ದಿರಿಸಿದ್ದಾರೆ. ಇಂತಹ ತೊಡಗುವಿಕೆಯಿಂದಾಗಿ ಅವರು ಕನ್ನಡ ಜಾನಪದ ಕ್ಷೇತ್ರದಲ್ಲಿ ಜೀವಂತವಾಗಿ ಉಳಿದಿದ್ದಾರೆ.

ಡಾ.ಹಿ.ಶಿ.ರಾಮಚಂದ್ರೇಗೌಡರು ಜಾನಪದ ಎನ್ನುವುದು ಬರಿಯ ಹಾಡು, ಕಥೆ, ಕುಣಿತ, ಮೆರೆತಗಳ ಸಂಗತಿಯಲ್ಲ ಅದು ಜನರ ಬದುಕು, ತಾಯಿಬೇರು, ತಾಯಿತನ ಇಲ್ಲದ ಬದುಕು ತಬ್ಬಲಿ ಬದುಕು. ಆದರೆ ಇಂದು "ನಮ್ಮ ಬೃಹತ್ ಕೈಗಾರಿಕೀಕರಣ, ಕ್ರೇಂದ್ರೀಕೃತ ಯೋಜನಾ ವ್ಯವಸ್ಥೆ, ಕೇಂದ್ರಿಕೃತ ಉತ್ಪಾದನಾ ಪದ್ಧತಿಗಳು ಜನಪದರ ಪಾರಂಪರಿಕ ಸಂಬಂಧಗಳನ್ನು ಹಾಳು ಮಾಡುತ್ತಿವೆ. ಇದರಿಂದ ಜನರಲ್ಲಿ ಆಂತರಿಕ ಶಿಸ್ತು, ಧರ್ಮ, ಹೊಂದಾಣಿಕೆ ಸಹಕಾರಗಳು ಹಾಳಾಗುತ್ತಿವೆ. ಎಲ್ಲೆಲ್ಲೂ ಸಾಮಾಜಿಕ ಗೊಂದಲಗಳು, ರಾಜಕೀಯ ಅರಾಜಕತೆಗಳು ತಲೆದೋರುತ್ತಿವೆ. ಇವಕ್ಕೆಲ್ಲ ಉತ್ತರ ನಮ್ಮ ಲೋಕ 'ಜಾನಪದ ಲೋಕ' ಆಗಬೇಕಾಗಿದೆ." ಎಂಬ ಆಶಯ ವ್ಯಕ್ತಪಡಿಸಿದ್ದಾರೆ.


ನಾಗೇಗೌಡರು ಆಡಳಿತ, ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಅನನ್ಯ ಸೇವೆಗಾಗಿ ನಾಡಿನಾದ್ಯಂತ ಹತ್ತು ಹಲವು ಪ್ರಶಸ್ತಿಗಳು ಗೌರವಗಳು, ಮಾನ–ಸನ್ಮಾನಗಳು ಅವರನ್ನು ಅರಸಿ ಬಂದವು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ಅಖಿಲ ಭಾರತ 64ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ, ಪ್ರೇರಣಾ ಪ್ರಶಸ್ತಿ, ಎಸ್.ಡಿ.ಜಯರಾಂ ಪ್ರಶಸ್ತಿ ಮತ್ತು ಮಂಗಳೂರಿನ ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿ, ಭಾರತದ ಸಾರ್ವಜನಿಕ ಸಂಪರ್ಕ ಸಂಸ್ಥೆಯ

ವಿಆರ್‌ಎಸ್‌ಟಿ ಎಕ್ಸಲೆನ್ಸಿ ಪ್ರಶಸ್ತಿ, ಶ್ರೀ ಆದಿ,ಚುಂಚನಗಿರಿ ಮಹಾ ಸಂಸ್ಥಾನ ಮಠದ ಚುಂಚಶ್ರೀ ಪ್ರಶಸ್ತಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕ ಸರ್ಕಾರದ ಅತ್ಯುನ್ನತ ಗೌರವವಾದ ಪಂಪ ಪ್ರಶಸ್ತಿ ಇವು ಗೌಡರ ಸಾಧನೆಗೆ ಸಂದ ಪ್ರಶಸ್ತಿಗಳು ಹಾಗೂ ಗೌರವಗಳು.

ನಾಡಿನ ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದದ ಮಹತ್ವ ಎಷ್ಟೆಂಬುದನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಅನೇಕ ಪ್ರಯೋಗಗಳನ್ನು ನಡೆಸಿದ ಗೌಡರು ಜಾನಪದ ಪ್ರಯೋಗಶೀಲರು. ಅಲೆಮಾರಿ ಜಾನಪದ ಸಂಗ್ರಾಹಕರು. ಜಾಗತೀಕರಣದ ಹೆಸರಿನಲ್ಲಿ ವಿಭಿನ್ನ ಸಂಸ್ಕೃತಿ ವಿನ್ಯಾಸಗಳು ದಟ್ಟ ಪ್ರಭಾವವನ್ನು ಬೀರುತ್ತಿರುವ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಜನಪದ ಸಂಸ್ಕೃತಿಯ ಆಶಯವನ್ನು ಅನಾವರಣಗೊಳಿಸುವುದು ನಾಗೇಗೌಡರ ಉದ್ದೇಶವಾಗಿತ್ತು. ಈ ಕಾರಣದಿಂದ ನಾಡಿನ ಜಾನಪದ ಸಂಗ್ರಹ, ಅಭ್ಯಾಸಗಳು ಎಷ್ಟು ತ್ವರಿತವಾಗಿ ನಡೆದರೆ ಅಷ್ಟೂ ಒಳ್ಳೆಯದೆಂಬ ಸದುದ್ದೇಶದಿಂದ ತಾವೇ ಸಾಹಿತ್ಯವನ್ನು ಸಂಗ್ರಹಿಸಿ, ಗೀತೆಗಳನ್ನು ಧ್ವನಿಮುದ್ರಿಸಿ, ಕಲೆಗಳನ್ನು ತರಬೇತುಗೊಳಿಸಿ ಜಾನಪದ ಕ್ಷೇತ್ರಕ್ಕೆ ಉತ್ತಮ ಫಲಗಳನ್ನು ಅರ್ಪಿಸಿದವರು. ನಾಗೇಗೌಡರ ಈ ಕೊಡುಗೆ ಜಾನಪದ ಕ್ಷೇತ್ರಕ್ಕೆ ಅನನ್ಯವಾದುದು ಎಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ. ನಾಗೇಗೌಡರ ಯಾವುದೇ ಜಾನಪದ ಕೆಲಸವೂ ಕೇವಲ ಕಸುಗಾಯಿ ಆಗಿರದೆ ದೂರದೃಷ್ಟಿಯಿಂದ ಕೂಡಿದ, ಪರಿಶ್ರಮಪೂರ್ಣವಾದ ಸಾಧನೆಯಾಗಿದೆ. ನಿಜವಾದ ಅರ್ಥದಲ್ಲಿ ನಾಗೇಗೌಡರು ಕನ್ನಡನಾಡು ಕಂಡ ಅಪರೂಪದ ಸಾಂಸ್ಕೃತಿಕ ಕೆಲಸಗಾರರು. ನಾಗೇಗೌಡರ ಕಾಣ್ಕೆ, ಪ್ರಯೋಗಶೀಲತೆ, ಪರಿಶ್ರಮಪೂರ್ಣದುಡಿಮೆ, ಅವ್ಯಾಜ ಜಾನಪದ ಪ್ರೀತಿ ಎಲ್ಲವೂ ಸಾಂಸ್ಕೃತಿಕ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ.

ತೊಂಬತ್ತು ವರ್ಷಗಳ ಕಾಲ ಕನ್ನಡನಾಡಿನ ಜನಸಮುದಾಯದ ಸಾಹಿತ್ಯ-ಸಂಸ್ಕೃತಿ ಕಲೆಯ ಉನ್ನತಿಗಾಗಿ ಅವಿಶ್ರಾಂತವಾಗಿ ಶ್ರಮಿಸಿದ ಹಿರಿಯ ಜೀವವು ದಿನಾಂಕ 21.09.2005 ರಂದು ಶಾಶ್ವತ ವಿಶ್ರಾಂತಿಯ ಚಿರನಿದ್ರೆಗೈದಿತು. ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಎಂದಿಗೂ ಅಳಿಸಿಹಾಕಲಾಗದ ಹೆಜ್ಜೆಗುರುತುಗಳನ್ನು ಊರಿರುವ ಎಚ್.ಎಲ್.ನಾಗೇಗೌಡರು ನಮ್ಮ ನಡುವಣ ಮೇರು ಶಿಖರ. ಇವರ ಬದುಕು ಎನ್ನುವಂಥದ್ದು ಕನ್ನಡ ಸಾಹಿತ್ಯ-ಜಾನಪದ-ಇತಿಹಾಸ ಮತ್ತು ಸಂಸ್ಕೃತಿಗಳ ಚರಿತ್ರೆ. ಈ ದೃಷ್ಟಿಯಿಂದ ನಾಗೇಗೌಡರ ಆತ್ಮಕಥಾನಕವು ಈ ನಾಡಿನ ಬಹುಜನ ಸಮುದಾಯಗಳ ಶ್ರಮ ಸಂಸ್ಕೃತಿಯ ಕಥಾನಕವಾಗಿದೆ.

❋ ❋ ❋ ❋ ❋



ದೇಜಗೌ

– ಪ್ರೊ. ವಸಂತಕುಮಾರ್

ಕ್ಷಣ ಮಾಧ್ಯಮದ ಯಶಸ್ಸು ಆಡಳಿತ ಮಾಧ್ಯಮವನ್ನವಲಂಭಿಸಿದೆ. ಆಡಳಿತ ಮಾಧ್ಯಮದ ಜಾರೀಕರಣ ಇಡೀ ಮಂದಿ ಅಧಿಕಾರಿಗಳ ಮನೋಧರ್ಮವನ್ನು ಅವಲಂಭಿಸಿದೆ. ಬೂರ್ಜ್ವಾ ಭಾವನೆ-ಯಿಂದಾಗಲಿ, ಆಂಗ್ಲರ ಪ್ರಸಾದದಿಂದೊದಗಿರುವ ಗುಲಾಮೀ ಭಾವನೆಯಿಂದಾಗಲೀ, ನಾವಿನ್ನು ಮುಕ್ತರಾಗಿಲ್ಲ, ಪರಭಾಷೆಯ ಆಡಳಿತ ಮಾಧ್ಯಮ ಪ್ರಜಾಸತ್ತೆಯ ಮುಖಕ್ಕೆಸೆದ ಅವಹೇಳನವಾಗಿದೆ; ಪರಭಾಷಾ ಶಿಕ್ಷಣ ಮಾಧ್ಯಮದ ಮುಂದುವರಿಕೆ ಶಿಕ್ಷಣ ಕ್ಷೇತ್ರದ ಅಸ್ತಿತ್ವವನ್ನೇ ಪ್ರಶ್ನಿಸುವ, ಅದರ ವಿಫಲತೆಯನ್ನು ಸಾರುವ ಅನಿಷ್ಟವಾಗಿದೆ. ಜಗತ್ತಿನ ಯಾವ ಸ್ವತಂತ್ರ ರಾಷ್ಟ್ರದಲ್ಲೂ ಇಂತಹ ಶೋಚನೀಯ ಪರಿಸ್ಥಿತಿ ಇಲ್ಲ. ಗುರು-ಶಿಷ್ಯರಿಗೆ ಹಾಗೂ ಮಂತ್ರಿ-ಪ್ರಜೆಗಳಿಗೆ ಹೃದಯ ಸಂವಾದವಿಲ್ಲದಾಗ, ಶಿಷ್ಯನ ಏಳಿಗೆಯಾಗಲೀ, ಪ್ರಜೆಯ ಕ್ಷೇಮ ಸಾಧನೆಯಾಗಲಿ ಸಾಧ್ಯವಾಗುವುದಿಲ್ಲ. ಈ ಹೃದಯ ಸಂವಾದ ಸ್ವಭಾಷೆಯ ಮೂಲಕ ಸಾಧ್ಯ. ದೇಶಭಾಷೆಯಲ್ಲಿ ಪಾಠ ಕಲಿಯುವುದೆಂತು ವಿದ್ಯಾರ್ಥಿಯ ಹಕ್ಕೋ, ಅಂತೆಯೇ ಆ ಮೂಲಕ ತಮಗೆ ಆಡಳಿತ ಬೇಕೆಂದು ಕೇಳುವುದು ಪ್ರಜೆಯ ಹಕ್ಕು, ಭಾಷೆ ಬೆಳೆಯದಿದ್ದರೆ ಸ್ವಷ್ಟಾಲೋಚನೆ ಅಸಾಧ್ಯ. ಆಡು ಮಾತನ್ನು ಗ್ರಾಂಥಿಕ ಭಾಷೆಯಲ್ಲಿ ಅಳವಡಿಸಿಕೊಂಡದ್ದಾದರೆ ಭಾಷೆಗೆ ಬಿಗಿ ನೀಡಿ ಬೆಡಗು ಬಿನ್ನಾಣಗಳು ತಾವಾಗಿಯೇ ಒದಗಿ, ಅದು ಸದಾ ನಿತ್ಯ ನೂತನವಾಗಿರುತ್ತದೆ. ಒಂದು ಮಾತು, ಒಂದು ನುಡಿಗಟ್ಟು ಬಳಕೆಯಿಂದ ಜೀವಂತವಾಗುತ್ತದೆ. ಹಣ ಕಳೆದು ಹೋದರೆ ಅದು ಮತ್ತೆ ಸಿಗಬಹುದು, ಸಿಗದಿದ್ದರೂ ಬಾಧಕವಿಲ್ಲ, ಸಂಪಾದಿಸಬಹುದು. ಒಮ್ಮೆ ಮರೆಯಾದ ಭಾಷೆ ಎಂದೆಂದಿಗೂ ಮರೆತಂತೆಯೇ. ಅದು ದುಡ್ಡು ಕೊಟ್ಟರೆ ಸಿಗುವಂತದ್ದಲ್ಲ" – ಈ ಹೇಳಿಕೆಯೂ ಇತ್ತೀಚೆಗಷ್ಟೇ

ನಮ್ಮನ್ನಗಲಿದ ಕನ್ನಡ ಸಾರಸ್ವತ ಲೋಕದ ನಾಡೋಜ ಪ್ರೊ. ದೇಜಗೌ ಅವರ ಅಂತರಂಗದಿಂದ ಹೊರಹೊಮ್ಮಿದ್ದು. ಪ್ರಾಥಮಿಕ ಶಿಕ್ಷಣದಲ್ಲಿ ಭಾಷಾ ಮಾಧ್ಯಮ ಯಾವುದಿರಬೇಕು ಎಂಬ ಗೊಂದಲದಲ್ಲಿರುವ ಪ್ರಸಕ್ತ ಸಮಾಜಕ್ಕೆ ಜವರೇಗೌಡರ ಈ ನುಡಿಗಳು ದಾರಿದೀಪವಾಗಲಿ ಎಂಬ ಆಶಯ ನಮ್ಮದು.

'ದೇಜಗೌ' ಎಂಬ ಮೂರಕ್ಷರದ ಕಾವ್ಯನಾಮದಿಂದ ನಾಡಿನ ಜನಮಾನಸದಲ್ಲಿ ಅಜರಾಮರಾಗಿ ಉಳಿದಿರುವ ಪ್ರೊ. ದೇ. ಜವರೇಗೌಡರು ಶ್ರೀ ದೇವೇಗೌಡ ಹಾಗೂ ಶ್ರೀಮತಿ ಚೆನ್ನಮ್ಮ ದಂಪತಿಗಳ ಸುಪುತ್ರರಾಗಿ 06 ಜುಲೈ 1918ರಲ್ಲಿ ಜನಿಸಿದರು. ಇಂದಿನ ರಾಮನಗರ ಜಿಲ್ಲೆಗೆ ಸೇರಿರುವ ಚನ್ನಪಟ್ಟಣ ತಾಲ್ಲೂಕಿನ 'ಚಕ್ಕೆರೆ' ಎಂಬ ಕುಗ್ರಾಮ ಶ್ರೀಯುತರ ಹುಟ್ಟೂರು. ತುಂಬ ಬಡತನದ ಕೃಷಿಕ ಕುಟುಂಬದಲ್ಲಿ ಜನಿಸಿದ ಇವರು ಬೆಳೆದಿದ್ದು ದನದ ಕೊಟ್ಟಿಗೆಯಲ್ಲಿ. ಇವರ ಹೆತ್ತವರು ನಿರಕ್ಷರ ಕುಕ್ಷಿಗಳು. ಇಂತಹ ವಾತಾವರಣದಲ್ಲಿ ಹುಟ್ಟಿ ಬೆಳೆಯುತ್ತಿರುವ ಬಾಲಕನಿಗೆ ಶಾಲೆಗೆ ಹೋಗುವ ಬಯಕೆ. ಆದರೆ ಮನೆಯಲ್ಲಿನ ಆರ್ಥಿಕ ಪರಿಸ್ಥಿತಿ ಹುಡುಗನ ಕಲಿಯುವ ಆಸೆಗೆ ತಣ್ಣೀರೆರಚುತ್ತದೆ. ಮಗನ ಸಣ್ಣ ಆಸೆಯನ್ನು ಈಡೇರಿಸಲಾಗದ ತಂದೆ ತಾಯಿಗಳು ಕುರಿ ಕಾಯುವ ಕಾಯಕಕ್ಕೆ ದೂಡುತ್ತಾರೆ. ಅಕ್ಷರ ಕಲಿಯುವ ಹಂಬಲವಿದ್ದ ಬಾಲಕ ಕುರಿಗಳನ್ನು ಬಯಲಲ್ಲಿ ಮೇಯಲು ಬಿಟ್ಟು ಊರಿನ ಸಮೀಪದ ಶಾಲೆಯ ಕಿಟಕಿಯ ಬಳಿ ನಿಂತು ಮೇಷ್ಟ್ರು ಮಕ್ಕಳಿಗೆ ಪಾಠ ಹೇಳುತ್ತಿದ್ದುದನ್ನು ತದೇಕಚಿತ್ತದಿಂದ ಆಲಿಸುತ್ತಿದ್ದ. ಬಾಲಕ ಜವರೇಗೌಡನ ಈ ಪರಿಯ ವರ್ತನೆ ಪ್ರತಿನಿತ್ಯ ನಡೆಯುತ್ತಿತ್ತು. ಅದೇ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಂಗಸ್ವಾಮಯ್ಯ ಅಯ್ಯಂಗಾರ್ ಎಂಬ ಶಿಕ್ಷಕರು ಇದನ್ನು ಗಮನಿಸಿದರು. ಹುಡುಗನಿಗಿರುವ ಆಸಕ್ತಿ, ಶ್ರದ್ಧೆ ಹಾಗೂ ಉತ್ಸಾಹದ ಬಗ್ಗೆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಚ್.ಕೆ. ವೀರಣ್ಣಗೌಡರಿಗೆ ವಿಷಯ ಮುಟ್ಟಿಸಿದರು. ಆದಿನ ಬಾಲಕ ಜವರೇಗೌಡನ ಬದುಕಿಗೆ ಹೊಸ ತಿರುವು ಕೊಟ್ಟಂತಹ ಸುದಿನ ಎನ್ನಬಹುದು. ಆಗ ವೀರಣ್ಣಗೌಡರು ಬಾಲಕನ ಮನೆಗೆ ನೇರವಾಗಿ ಬಂದು ಶಾಲೆಗೆ ಕಳುಹಿಸುವಂತೆ ಒತ್ತಾಯಿಸುತ್ತಾರೆ. ಬಾಲಕನ ಮನೆಯ ದಯನೀಯ ಸ್ಥಿತಿಯನ್ನು ಕಂಡ ಗುರುಗಳು, ಆತನ ತಂದೆತಾಯಿಯ ಮನವೊಲಿಸಿ ಹುಡುಗನ ಶಿಕ್ಷಣದ ಜವಾಬ್ದಾರಿಯನ್ನು ತಾವೇ ಹೊರುತ್ತಾರೆ. ಓದಿಗೆ ಅಗತ್ಯವಾದ ಎಲ್ಲ ಪರಿಕರಗಳನ್ನು ತಮ್ಮ ಸ್ವಂತ ಖರ್ಚಿನಿಂದಲೇ ಕೊಡಿಸಿ ಶಾಲೆಗೆ ಸೇರಿಸಿಕೊಂಡರು. ಹೀಗೆ ಆಕಸ್ಮಿಕವಾಗಿ ಶಾಲೆಯ ಮೆಟ್ಟಿಲೇರಿದ ಹುಡುಗ, ಮುಂದೆ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದು, ಸಾಹಿತ್ಯಲೋಕದ ಸಾಮ್ರಾಟನಾಗಿದ್ದು ಸಾಮಾನ್ಯ ಸಂಗತಿಯಲ್ಲ.

'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಅನ್ನ' ಎಂಬಂತೆ ಬಾಲಕ ಅತ್ಯಂತ ಶ್ರದ್ಧೆ ವಹಿಸಿ ಓದಿನಲ್ಲಿ ಮುನ್ನಡೆಯಲು ಪ್ರಯತ್ನಪಟ್ಟನು. ಪ್ರಾಥಮಿಕ ಶಿಕ್ಷಣ ಚಕ್ಕೆರೆಯಲ್ಲಿಯೂ, ಮಾಧ್ಯಮಿಕ ಶಿಕ್ಷಣ ಚನ್ನಪಟ್ಟಣದಲ್ಲಿಯೂ ಯಾವುದೇ ಎಡರುತೊಡರುಗಳಿಲ್ಲದೇ ನಡೆಯಿತು. ಲೋಯರ್ ಸೆಕೆಂಡರಿಯನ್ನು ಕನ್ನಡದಲ್ಲಿ ಯಶಸ್ವಿಯಾಗಿ ಮುಗಿಸಿದ ನಂತರ ಹಣಕಾಸಿನ ಕೊರತೆ ಕಾಡಿತು. ಆಗ ಅಲ್ಲಿಯ ಶಿಕ್ಷಕ ಕೃಪಾಸಾಗರ್‌ರವರು ಶಿಷ್ಯನ ಬೆಂಬಲಕ್ಕೆ ನಿಂತು, ಶಿಷ್ಯವೇತನ ದೊರಕಿಸುವಲ್ಲಿ ಸಹಾಯ ಮಾಡಿದರು. ಹೀಗೆ ಅನೇಕ ಗುರುವರ್ಯರ ಬೆಂಬಲದಿಂದ ಉತ್ಸಾಹಿತನಾದ ಯುವಕ ಜವರೇಗೌಡ ಬೆಂಗಳೂರು ಮತ್ತು ಮೈಸೂರುಗಳಲ್ಲಿ ತಮ್ಮ ಕಾಲೇಜು ಶಿಕ್ಷಣವನ್ನು ಮಾಡಿದರು ಆನಂತರ ಕನ್ನಡ ಸ್ನಾತಕೋತ್ತರ ಪದವಿ ಹಾಗು ಡಿ.ಲಿಟ್ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಪಡೆದರು. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಗಾದೆ ಮಾತಿನಂತೆ ಜವರೇಗೌಡರಿಗೆ ಬಾಲ್ಯದಿಂದಲೇ ರಾಷ್ಟ್ರಪಿತ ಗಾಂಧೀಜಿಯವರ ಮೇಲೆ

ಅಪಾರ ಪ್ರೀತಿ ಮತ್ತು ಗೌರವ. ಹಾಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧೀಜಿಯವರು ವಹಿಸಿದ ಪಾತ್ರ ಕಂಡು ಆಕರ್ಷಿತರಾಗಿದ್ದರು.

ಈ ಹಿಂದೆ ಮಹಾತ್ಮ ಗಾಂಧೀಜಿಯವರು ಚನ್ನಪಟ್ಟಣಕ್ಕೆ ಭೇಟಿ ನೀಡಿದಾಗ ಅವರನ್ನು ಬಹಳ ಸನಿಹದಿಂದ ಕಂಡು ಪುಳಕಿತರಾದವರಲ್ಲಿ ಜವರೇಗೌಡರು ಒಬ್ಬರು. ಗಾಂಧೀಜಿಯವರ ಸತ್ಯ, ಶಾಂತಿ, ಉಪವಾಸ ಸತ್ಯಾಗ್ರಹ ಚಿಂತನೆಗಳು ಇವರ ಮೇಲೆ ಬಹಳ ಪ್ರಭಾವ ಬೀರಿವೆ. ಜವರೇಗೌಡರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ಇತರೇ ಮಹನೀಯರುಗಳೆಂದರೆ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದ, ಬುದ್ಧ, ಬಸವ, ಅಂಬೇಡ್ಕರ್ ಹಾಗು ಇವರ ನೇರ ಗುರುಗಳಾಗಿದ್ದ ಕುವೆಂಪು ಅವರು. ಯೌವನಾವಸ್ಥೆಯಲ್ಲಿ ಮಹಾಕವಿಯ ಒಡನಾಟಕ್ಕೆ ಸಿಲುಕಿದ ಇವರು, ಅವರ ಜೀವಮಾನಪೂರ್ತಿ ಪರಮಾಪ್ತ ಶಿಷ್ಯರಾಗಿ ಉಳಿದಿದ್ದರು ಎಂಬುದು ಪ್ರಮುಖ ಸಂಗತಿ.

1943ರಲ್ಲಿ ಸಚಿವಾಲಯದಲ್ಲಿ ಸಾಮಾನ್ಯ ಗುಮಾಸ್ತನಾಗಿ ತಮ್ಮ ವೃತ್ತಿ ಬದುಕನ್ನು ಆರಂಭಿಸಿದರು. ಮಹತ್ವಾಕಾಂಕ್ಷಿಯಾಗಿದ್ದ ಜವರೇಗೌಡರಿಗೆ ಗುಮಾಸ್ತೆಯ ಕೆಲಸ ಬಹಳ ದಿನಗಳ ಕಾಲ ರುಚಿಸಲಿಲ್ಲ. 1946ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಅಧ್ಯಾಪಕರಾಗಿ ಬಂದ ಶ್ರೀಯುತರು 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆಯಾದ

ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ 1963ರಿಂದಲೂ ಸಂಪರ್ಕ ಇಟ್ಟುಕೊಂಡು ನಿಘಂಟು ಕಾರ್ಯದಲ್ಲಿ ಸಹಭಾಗಿಯಾಗಿದ್ದರು. ಮೈಸೂರು ವಿ.ವಿ.ಯ ಪ್ರಸಾರಾಂಗದ ಪ್ರಥಮ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. 1955ರಲ್ಲಿ ಉಪಪ್ರಾಧ್ಯಾಪಕರಾಗಿ, 1957ರಲ್ಲಿ ಮೈಸೂರು ವಿ.ವಿ.ಯ ಪರೀಕ್ಷಾಧಿಕಾರಿಯಾಗಿ, 1960ರಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾಗಿ ಆಡಳಿತದ ಚಾಕಚಕ್ಯತೆ ಮೆರೆದಿದ್ದಾರೆ. 1964ರಲ್ಲಿ ಮೈಸೂರು ವಿ.ವಿ.ಗೆ ಹಿಂತಿರುಗಿದ ಇವರು ವಿಭಾಗದ ಮುಖ್ಯಸ್ಥರಾಗಿ, ಕಲಾ ವಿಭಾಗದ ಡೀನ್ ಆಗಿ, ಸಿಂಡಿಕೇಟ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. 1969ರ ನವೆಂಬರ್ 1ರಂದು ಮೈಸೂರು ವಿ.ವಿ.ಯ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡು ಎರಡು ಅವಧಿ ಕಾರ್ಯನಿರ್ವಹಿಸಿ ನಿವೃತ್ತರಾದರು. ಜವರೇಗೌಡರು ಕುಲಪತಿಯಾಗಿದ್ದ ವೇಳೆ ಮೈಸೂರು ವಿ.ವಿ.ಗೆ ಅಭಿವೃದ್ಧಿಯ ಪರ್ವಕಾಲ. ತಮ್ಮ ಗುರು ಕುವೆಂಪು ಅವರು ಅಲಂಕರಿಸಿದ್ದ ಕುಲಪತಿಯ ಸ್ಥಾನ ತನ್ನ ಪಾಲಿಗೆ ಒದಗಿ ಬಂದಾಗ ಬಹಳ ಗೌರವಪೂರ್ವಕವಾಗಿಯೇ ಸ್ವೀಕರಿಸಿ ನಿರಂತರ ಕಾರ್ಯ–ಚಟುವಟಿಕೆಯ ಕೇಂದ್ರವನ್ನಾಗಿಸಿದರು. ಹಲವಾರು ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ಮುನ್ನಡೆಸಿದರು. ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಜಾರಿಗೆ ತಂದ ಯೋಜನೆಗಳು ಹತ್ತಾರು.

ಶ್ರಮಿಕ ವರ್ಗದಿಂದ ಅದರಲ್ಲೂ, ನಿರ್ಲಕ್ಷಿಸಲ್ಪಟ್ಟ ದಲಿತ ವರ್ಗದಿಂದಲೇ ಸೃಷ್ಟಿಯಾದ ಜಾನಪದಕ್ಕೆ ಕರ್ನಾಟಕದಲ್ಲಿ ಮೊಟ್ಟ ಮೊದಲು ವಿಶ್ವವಿದ್ಯಾನಿಲಯದ ಅಧ್ಯಯನದ ಶಿಸ್ತನ್ನಾಗಿ ರೂಪಿಸಿ, ಅನ್ಯರಿಗೆ ಮಾರ್ಗದರ್ಶಿಯಾದರು. ಜಾನಪದದ ಬಗ್ಗೆ ಅಪಾರ ಆಸ್ಥೆ ವಹಿಸಿರುವ ಇವರು ಜಾನಪದ ಅಧ್ಯಯನ, ಜನಪದ ಗೀತಾಂಜಲಿ, ಜಾನಪದ ಸೌಂದರ್ಯ ಎಂಬ ಮೇರು ಕೃತಿಗಳನ್ನು ರಚಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರಿಗೆ ಈ ಕೃತಿಗಳು ಇಂದಿಗೂ ಸಹ ಆಕರ ಗ್ರಂಥಗಳಾಗಿವೆ. ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಶ್ವಕೋಶ, ಹಳೆಗನ್ನಡ ಗ್ರಂಥಗಳ ಸಂಪಾದನೆಗೆ ಪ್ರೋತ್ಸಾಹ, ಜಾನಪದ ಮತ್ತು ಪತ್ರಿಕೋದ್ಯಮ, ಜಾನಪದ ವಸ್ತು ಸಂಗ್ರಹಾಲಯ ಸೇರಿದಂತೆ ವಿವಿಧ 30 ವಿಭಾಗಗಳನ್ನು ಆರಂಭಿಸಿ ವಿ.ವಿ.ಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ದೇಶದಾದ್ಯಂತ ಶಿಕ್ಷಣಾರ್ಥಿಗಳನ್ನು ಸೆಳೆಯುವಂತೆ ಮಾಡಿದರು. ಕುಲಪತಿಯಾಗಿದ್ದ ಸಂದರ್ಭದಲ್ಲಿ ಇವರು ಮಾಡಿದ ಭಾಷಣಗಳು ಹಾಗು ಬರೆದಂತಹ ಪತ್ರಗಳೇ ಆರು ಸಂಪುಟಗಳಲ್ಲಿ ಪ್ರಕಟವಾಗಿವೆ.

ಸಾಹಿತ್ಯ ಪಥ

ನಿರಂತರವಾದ ಓದು – ಬರಹದ ಮೂಲಕ ಅತ್ಯಂತ ಕ್ರಿಯಾಶೀಲರಾಗಿದ್ದ ಜವರೇಗೌಡರು ಹಳೆಗನ್ನಡ ಸಾಹಿತ್ಯದ ಮೇಲೆ ಪ್ರಭುತ್ವ ಸ್ಥಾಪಿಸಿದ್ದರು. ವಿದ್ಯಾರ್ಥಿಗಳ ಪಾಲಿನ ನೆಚ್ಚಿನ ಗುರುವಾಗಿದ್ದು ಮಾತ್ರವಲ್ಲದೇ ಸೃಜನಶೀಲ ಬರವಣಿಗೆಯತ್ತಲೂ ಗಮನ ಹರಿಸಿದ್ದರು. 1949ರಲ್ಲಿ 'ನೆನಪು ಕಹಿಯಲ್ಲ' ಎಂಬ ಚೊಚ್ಚಲ ಕೃತಿಯ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಶ್ರೀಯುತರು, ತಮ್ಮ ಗುರು ಕುವೆಂಪು ಅವರಂತೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯು ಸಮೃದ್ಧ ಕೃಷಿ ಮಾಡಿ ಸರಿಸುಮಾರು 200ಕ್ಕೂ ಅಧಿಕ ಮೌಲಿಕ ಕೃತಿಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಕಾವ್ಯ, ಚುಟುಕು, ವಚನ, ನಾಟಕ, ವಿಮರ್ಶೆ, ಮಕ್ಕಳ ಸಾಹಿತ್ಯ, ಜಾನಪದ, ಪ್ರಬಂಧ, ಹರಟೆ, ಜೀವನ ಚರಿತ್ರೆ, ಆತ್ಮಕಥೆ, ಸಂಶೋಧನೆ, ಪ್ರವಾಸ ಸಾಹಿತ್ಯ, ಅನುವಾದ – ಹೀಗೆ ಬಹುಮುಖಿ ನೆಲೆಗಳಲ್ಲಿ ಶ್ರೀಯುತರ ಸಾಹಿತ್ಯ ಸುಧೆ ಹರಿದಿದೆ. ಗದ್ಯ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವುದರಿಂದ ಇವರನ್ನು 'ಗದ್ಯ ಸಾಹಿತ್ಯಬ್ರಹ್ಮ' ಎಂದೇ ಸಾರಸ್ವತಲೋಕ ಗೌರವಿಸಿದೆ.

ರಸಋಷಿ ಕುವೆಂಪು ಅವರ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯದ ಗದ್ಯದ ಅವರತರಣಿಕೆಯಾದ "ಶ್ರೀರಾಮಾಯಣದರ್ಶನಂ ವಚನಚಂದ್ರಿಕೆ"ಯು ಜವರೇಗೌಡರ ಗದ್ಯ ಬರಹದ ಸೋಪಜ್ಞತೆಗೆ ಹಿಡಿದ ಕೈಗನ್ನಡಿ. ಈ ಕೃತಿಯ ಓದು ಮೂಲದ ಮಹಾಕಾವ್ಯವನ್ನೇ ಓದಿದಷ್ಟು ಸಂತೃಪ್ತಿಯನ್ನು ನೀಡುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಈ ಕೃತಿಯ ಕೆಲ ಭಾಗಗಳು ಹಲವಾರು ವಿ.ವಿ.ಗಳಲ್ಲಿ ಪಠ್ಯವಾಗಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರವಾಗಿದೆ. ಕೇವಲ ಸಾಹಿತ್ಯಾಸಕ್ತರಿಗಷ್ಟೇ ಅಲ್ಲದೇ ಸಾಮಾನ್ಯ ಓದುಗರಿಗೂ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ತಿರುಳು ಮುಟ್ಟಿಸುವಲ್ಲಿ ಇವರ ಶ್ರಮ ಅಧಿಕವಾದುದು. ಗ್ರಂಥ ಸಂಪಾದನೆಯಲ್ಲೂ ಆಸಕ್ತರಾಗಿದ್ದ ಇವರು ಧರ್ಮಾಮೃತ ಸಂಗ್ರಹ, ಕಬ್ಬಿಗರ ಕಾವಂ, ರಾಮಧಾನ್ಯ ಚರಿತೆ, ಲೀಲಾವತಿ ಪ್ರಬಂಧಂ ಸೇರಿದಂತೆ ಇನ್ನೂ ಅನೇಕ ಪ್ರಾಚೀನ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವುದರ ಮುಖೇನ ಸಂಪಾದನಾ ಕ್ಷೇತ್ರಕ್ಕೆ ಗುರುತರವಾದ ಕೊಡುಗೆ ನೀಡಿದ್ದಾರೆ. ಜೀವನ ಚರಿತ್ರೆಗಳ ರಚನೆಯಲ್ಲೂ ಸಿದ್ಧಹಸ್ತರಾಗಿದ್ದರು. ಕ್ರಾಂತಿಕಾರಿ ಅಂಬೇಡ್ಕರ್, ಆಲ್ಬರ್ಟ್ ಐನ್‌ಸ್ಟೈನ್, ಮೋತಿಲಾಲ್ ನೆಹರು, ರಾಷ್ಟ್ರಕವಿ ಕುವೆಂಪು. ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ

ಡಾ. ಎಂ.ಎಚ್. ಮರಿಗೌಡ ಎಂಬ ಇವರ ಮುಂತಾದ ಕೃತಿಗಳು ಜನಮನ್ನಣೆ ಪಡೆದಿವೆ. ಕನ್ನಡ ನಾಡು ಕಂಡ ಕೆಲವೇ ಕೆಲವು ಶ್ರೇಷ್ಠ ಅನುವಾದಕರ ಸಾಲಿನಲ್ಲಿ ದೇ.ಜ.ಗೌ. ಮೊದಲಿಗರಾಗಿ ನಿಲ್ಲುತ್ತಾರೆ. ವಾಸ್ತವಿಕವಾಗಿ ಇವರ ಸಾಹಿತ್ಯಕೃಷಿ

ಆರಂಭವಾದುದೇ ಅನುವಾದದಿಂದ. ಪುನರುತ್ಥಾನ, ಹಮ್ಮುಬಿಮ್ಮು, ಟಾಲ್‌ಸ್ಟಾಯ್‌ನ 'ಅನ್ನಾಕರೆನಿನಾ' ಮತ್ತು 'ಯುದ್ಧ ಮತ್ತು ಶಾಂತಿ' ಇನ್ನೂ ಮುಂತಾದವು ಅನುವಾದ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ. 'ಪುನರುತ್ಥಾನ' ಎಂಬ ಇವರ ಭಾಷಾಂತರ ಕೃತಿಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ ಲಭಿಸಿರುವುದು ಸ್ಮರಿಸಬೇಕಾದ ಸಂಗತಿ.

ಜವರೇಗೌಡರದು ಬಾಲ್ಯದಿಂದ ಹಿಡಿದು ಪ್ರತಿಯೊಂದು ಹಂತದಲ್ಲೂ ಹೋರಾಟದ ಬದುಕೇ ಆಗಿತ್ತು ಎಂಬುದನ್ನು ಅವರ ಆತ್ಮಕಥೆ 'ಗುಡಿಸಲಿನಿಂದ ಗಂಗೋತ್ರಿಗೆ' ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ತನ್ನ ಪಾಲಿಗೆ ಶಿಕ್ಷಣ ದೊರಕಿದುದೇ ಒಂದು ಆಕಸ್ಮಿಕ. 'ನನ್ನ ಬಾಳೇ ಒಂದು ಪವಾಡ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಈ ಆತ್ಮಕಥನ ಜವರೇಗೌಡರ ಬದುಕಿನ ಏರಿಳಿತಗಳನ್ನು ಪ್ರಾಮಾಣಿಕವಾಗಿ ಚಿತ್ರಿಸುತ್ತದೆ ಎನ್ನಬಹುದು. ಸ್ವಭಾವತಃ ಚಾರಣಪ್ರಿಯರಾದ ದೇ.ಜ.ಗೌ. ಅನೇಕ ದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆದಂತಹ ಅದ್ಭುತವಾದ ಅನುಭವಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ವಿದೇಶದಲ್ಲಿ ನಾಲ್ಕುವಾರ, ಪ್ರವಾಸಿಯ ದಿನಚರಿ, ಆಫ್ರಿಕಾಯಾತ್ರೆ, ಏಸು–ವಿಭೀಷಣರ ನಾಡಿನಲ್ಲಿ, ಜಗತ್ತಿನ ನೆತ್ತಿಯ ಮೇಲೆ ಇನ್ನೂ ಮುಂತಾದ ಪ್ರವಾಸಕಥನಗಳನ್ನು ರಚಿಸಿದ್ದಾರೆ. ನಾಟಕ ಕ್ಷೇತ್ರದಲ್ಲೂ ಕೈಯಾಡಿಸಿರುವ ಶ್ರೀಯುತರು ಬೆಂಗಳೂರು ಕೆಂಪೇಗೌಡ, ಗಂಡುಗಲಿ ಕುಮಾರರಾಮದಂತಹ ದೇಸಿಸೊಗಡಿನ ನಾಟಕಗಳನ್ನು ರಚಿಸಿದ್ದಾರೆ. ಇವುಗಳು ಹಲವಾರು ಬಾರಿ ಪ್ರದರ್ಶನ ಕಂಡು ರಂಗಾಸಕ್ತರ ಮೆಚ್ಚುಗೆ ಗಳಿಸಿವೆ.

ಅಪ್ಪಟ ಕನ್ನಡ ಪ್ರೇಮಿ

'ಕನ್ನಡಕ್ಕಾಗಿ ಕಿರುಬೆರಳೆತ್ತು, ನಿನ್ನ ಕೈಕಲ್ಪವೃಕ್ಷವಾಗುವುದು' ಎಂದಿರುವ ಕವಿ ಕುವೆಂಪು ಅವರಿಂದ ಕನ್ನಡ ದೀಕ್ಷೆಯನ್ನು ಪಡೆದ ದೇ.ಜ.ಗೌ. ಕನ್ನಡ – ಕನ್ನಡಿಗ – ಕರ್ನಾಟಕದ ಸರ್ವತೋಮುಖ ಏಳಿಗೆಗೆ ಕಟಿಬದ್ಧರಾಗಿ ದುಡಿದ ಮಹಾಸೇನಾನಿಯಾಗಿದ್ದರು. ನಾಡು ಕಂಡ ಮಹಾನ್ ಹೋರಾಟಗಾರರಲ್ಲಿ ಇವರು ಒಬ್ಬರು.

ಕನ್ನಡ ನಾಡು–ನುಡಿಯ ವಿಚಾರದಲ್ಲಿ ರಾಜಕಾರಣಿಗಳು ತಳೆದಿರುವ ಅಸಡ್ಡೆ, ನಿರ್ಲಕ್ಷ್ಯ ಹಾಗು ಹೇಡಿತನವನ್ನು ಯಾವುದೇ ಮುಲಾಜಿಲ್ಲದೇ ಖಂಡಿಸಿದವರು. ಕನ್ನಡದ ಎಲ್ಲಾ ಸಮಸ್ಯೆಗಳು ದಿನೇ ದಿನೇ ಹೆಚ್ಚಾಗಲು ನಮ್ಮ ಜನಪ್ರತಿನಿಧಿಗಳ ಸೋಗಲಾಡಿತನವೇ ಕಾರಣ ಎಂದು ನೇರವಾಗಿ ಹೇಳುವ ನಿಷ್ಠುರವಾದಿ. ಕನ್ನಡಪರ ಕಾರ್ಯಕ್ರಮಗಳು ಹಾಗೂ ಹೋರಾಟಗಳು ಎಲ್ಲಿಯೇ ನಡೆದರೂ ಅಲ್ಲೆಲ್ಲ ಭಾಗವಹಿಸಿ ತಮ್ಮ ಕನ್ನಡದ ಬದ್ಧತೆಯನ್ನು ಮೆರೆದಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗ ಆರಂಭವಾದ ಹಂತದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ಇಂಗ್ಲೀಷಿನಲ್ಲಿಯೇ ನಡೆಯುತ್ತಿತ್ತು. ಈ ಬಗ್ಗೆ ಗಮನಹರಿಸಿದ ಪ್ರೊ. ದೇ.ಜ.ಗೌ. ಅವರು ಕೆ.ಪಿ.ಎಸ್.ಸಿ. ಕಛೇರಿ ಮುಂದೆ ನಡೆಸಿದ ಹೋರಾಟದ ಪ್ರತಿಫಲ ಕನ್ನಡದಲ್ಲಿ ಪರೀಕ್ಷೆಗಳು ನಡೆಯುವಂತಾಗಿದ್ದು ಶ್ಲಾಘನೀಯ ವಿಚಾರ. ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ಘೋಷಿಸಿದ ಕೇಂದ್ರ ಸರ್ಕಾರ, ಕನ್ನಡ ಭಾಷೆಗೆ ಆ ಗೌರವ ಕೊಡಲು ಮೀನ–ಮೇಷ ಎಣಿಸಿದಾಗ ಹಿರಿಯರಾಗಿದ್ದ ದೇ.ಜ.ಗೌ. ಸುಮ್ಮನೆ ಕೂರಲಿಲ್ಲ. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕಾಗಿ ಒತ್ತಾಯಿಸಿ ತಮ್ಮ ಇಳಿವಯಸ್ಸಿನಲ್ಲಿಯೂ ಅಮರಣಾಂತ ಉಪವಾಸ ಮಾಡಿ, ಮೇಲಿಂದ ಮೇಲೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದರು. ಛಲಬಿಡದ ತ್ರಿವಿಕ್ರಮನಂತೆ ಹೋರಾಟಕ್ಕೆ ನಿಂತ ದೇ.ಜ.ಗೌ. ಅವರನ್ನು ಕಂಡು ಇಡೀ ನಾಡಿನ ಜನರ ಒಕ್ಕೊರಲಿನ ಕೂಗಾಗಿ ಹೋರಾಟದ ಕಿಚ್ಚು ಕಾಳ್ಗಿಚ್ಚಿನಂತೆ ಎಲ್ಲೆಡೆ ಹಬ್ಬಿತು. ಪರಿಸ್ಥಿತಿಯ ಗಾಂಭೀರ್ಯತೆಯನ್ನು ಅರಿತ ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಗೌರವವನ್ನು ನೀಡಿತು. ಕಾವೇರಿ ನೀರಿನ ಚಳವಳಿಯಲ್ಲೂ ಅವರು ತೋರಿದ ಉತ್ಸಾಹ ಇತರರಿಗೆ ಮಾರ್ಗದರ್ಶಿಯಾಗಿತ್ತು. ಕಾವೇರಿ ನೀರಿನ ಸಮಸ್ಯೆ ಭುಗಿಲೆದ್ದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಯುವ ಬರಹಗಾರರ ಬಳಗವು ಹಮ್ಮಿಕೊಂಡಿದ್ದ 'ಕಾವೇರಿಗಾಗಿ ಕಾವ್ಯ ಚಳವಳಿ'ಯ ನಾಯಕತ್ವ ವಹಿಸಿ ತಮ್ಮ ಕಾವ್ಯಧ್ವನಿಯ ಮುಖೇನ ಗುಡುಗಿದ್ದನ್ನು ಜನರು ಇನ್ನು ಮರೆತಿಲ್ಲ. ಸಾಮಾಜಿಕ ಅಸಮಾನತೆ, ಭ್ರಷ್ಟಾಚಾರದ ವಿರುದ್ಧವೂ ತಮ್ಮ ಹೋರಾಟದ ಕಹಳೆಯೂದಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಪ್ರದರ್ಶಿಸಿದ್ದಾರೆ. ಹಿರಿತನದ ಅನುಭವದ ಮೂಸೆಯಲ್ಲಿ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಸರ್ಕಾರಗಳಿಗೆ ಸಂದರ್ಭಾನುಸಾರ ಕಿವಿ ಹಿಂಡುವ ಕಾರ್ಯ ಮಾಡಿ ಆಡಳಿತ ಯಂತ್ರ ಪಾರದರ್ಶಕವಾಗಿರುವಂತೆ ನೋಡಿಕೊಂಡಿದ್ದಾರೆ. 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬ ವಿಚಾರವನ್ನು ಮನದಟ್ಟು ಮಾಡಿಕೊಂಡಿದ್ದ ದೇ.ಜ.ಗೌ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಂಬಲಿಸಿ, ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು 'ಕರ್ನಾಟಕ ಬಾಲವಿಕಾಸ ಅಕಾಡೆಮಿ' ಸ್ಥಾಪನೆಗೆ ಕಾರಣಕರ್ತರಾಗಿದ್ದಾರೆ.

ಮಹಾಕವಿ ಕುವೆಂಪು ಅವರ ವೈಚಾರಿಕ ಪ್ರಜ್ಞೆಗೆ ಮಾರುಹೋಗಿದ್ದ ಜವರೇಗೌಡರು, ಕುವೆಂಪು ಅವರ 'ವಿಶ್ವಮಾನವ ಸಂದೇಶ' ಹಾಗು 'ಮಂತ್ರ ಮಾಂಗಲ್ಯ'ವನ್ನು ಜನಸಾಮಾನ್ಯರೆಡೆಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಗುರುವಿನ ಮೇಲಿನ ಅಪಾರ ಗೌರವದಿಂದ 'ಕುವೆಂಪು ವಿದ್ಯಾವರ್ಧಕ ಟ್ರಸ್ಟ್'

ಆರಂಭಿಸಿ ಆ ಮೂಲಕ ನಾಡುನುಡಿಯ ಸೇವೆಯಲ್ಲಿ ನಿರತರಾಗಿದ್ದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿರುವ ಮಹನೀಯರಿಗೆ 'ವಿಶ್ವಮಾನವ ಪ್ರಶಸ್ತಿ' ನೀಡಿ ಬೆನ್ನು ತಟ್ಟುವ ಕಾಯಕವನ್ನು ನಿರಂತರವಾಗಿ ಮಾಡುತ್ತ ಬಂದಿದ್ದರು.

ನಾಡಿನ ಹಿರಿಯ ಸಾಹಿತ್ಯ ದಿಗ್ಗಜರಿಗೆ ಸಲ್ಲುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಶ್ರೀಯುತರಿಗೆ ಸಂದಿದೆ. ಇವರ ಸರ್ವಾಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ 47ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಾರಿ ಯಶಸ್ಸನ್ನು ಕಂಡದ್ದು ದಾಖಲೆಯೇ ಸರಿ. ತಮ್ಮ ಜೀವಮಾನಪೂರ್ತಿ ಅತ್ಯಂತ ಕ್ರಿಯಾಶೀಲತೆಯನ್ನು ಉಳಿಸಿಕೊಂಡು ನಾಡಿನ ಪ್ರತಿಯೊಂದು ಮಹತ್ತರವಾದ ಆಗು–ಹೋಗುಗಳಿಗು ಸ್ಪಂದಿಸುತ್ತಿದ ಪರಿ ನಿಜಕ್ಕೂ ಅನುಕರಣೀಯ. ಬತ್ತದ ಉತ್ಸಾಹ, ನವಿರಾದ ಹಾಸ್ಯಪ್ರಜ್ಞೆ, ಸಂತತ ಓದು ಇವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣ. ಬದುಕಿದರೆ ಇವರಂತಹ ಸಾರ್ಥಕ್ಯದ ಬದುಕನ್ನು ಬಾಳಬೇಕು ಎಂಬುದನ್ನು ನಾವೆಲ್ಲರೂ ಅವರನ್ನು ನೋಡಿ ಕಲಿಯಬೇಕು. ಅಂತಹ ಮೇರು ಸದೃಶವಾದಂತಹ, ಆದರ್ಶಮಯ ಬದುಕನ್ನು ನಡೆಸಿದವರು ಪ್ರೊ. ದೇ.ಜ.ಗೌ. ಅಂತಹ ದಿವ್ಯ ಚೇತನಕ್ಕೆ ನಮ್ಮ ಭಾವಪೂರ್ಣ ಶಬ್ದಾಂಜಲಿ.

* * * * *



ರಾವ್ ಬಹದ್ದೂರ್ ಎಚ್. ಸಿ. ಜವರಾಯ

– ಡಾ. ಪ್ರಮಿಳದೇವಿ

ಮೈಸೂರು ರಾಜ್ಯದ ಸರ್ವತೋಮುಖ ಬೆಳವಣಿಗೆಯಲ್ಲಿ ಹಲವರ ಪಾಲಿದೆ. ಮಹಾರಾಜ ಕೃಷ್ಣರಾಜ ಒಡೆಯರ್ ತಮ್ಮ ರಾಜ್ಯದ ಅಭಿವೃದ್ಧಿಯಲ್ಲಿ ದಕ್ಷತೆ, ಪಾಂಡಿತ್ಯ ಪರಿಣತಿಗಳಿಗೆ ಪ್ರಸಿದ್ಧರಾದವರನ್ನು ತಮ್ಮ ರಾಜ್ಯದ ಸೇವೆಯಲ್ಲಿ ಬಳಸಿಕೊಂಡು ಅವರಿಗೆ ತಮ್ಮ ಪರಿಣತಿಗಳ ಸದುಪಯೋಗಕ್ಕೆ ಸೂಕ್ತ ಅವಕಾಶ ನೀಡಿದ್ದರಿಂದ ರಾಜ್ಯ ಅನೇಕ ವಿಷಯಗಳಲ್ಲಿ ಶ್ರೇಷ್ಠತೆಯನ್ನು, ಖ್ಯಾತಿಯನ್ನು ಪಡೆದು, ಭಾರತದ ಮಾದರಿ ರಾಜ್ಯವೆಂಬ ಕೀರ್ತಿಗೆ ಭಾಜನವಾಯಿತು. ರಾಜ್ಯದ ಘನತೆ ಕೀರ್ತಿ ಪ್ರತಿಷ್ಠೆಗಳಿಗೆ ತಮ್ಮ ಅಮೂಲ್ಯ ಸೇವೆಯ ಧಾರೆಯೆರೆದವರ ಪಟ್ಟಿ ಸಾಕಷ್ಟು ದೊಡ್ಡದಿದೆ. ಮಹಾರಾಜರ ಉದಾರತೆಯನ್ನು ಸಾಮಾನ್ಯ ಜನರಿಗೆ ಮುಟ್ಟಿಸಿ, ಸರ್ಕಾರದ ಸಾಧನೆಗಳ ಫಲಾನುಭವಿಗಳಾಗುವಂತೆ ಮಾಡಿದ ಮಾಂತ್ರಿಕರು ಕೆಲವರು. ಸರ್.ಎಮ್. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯೇಲ್, ರಾಜತಾಂತ್ರಿಕ ನಿಪುಣರಾದ ಹೊಸಕೊಪ್ಪ ಕೃಷ್ಣರಾವ್, ಜನ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿದ್ದ, ಎಂ. ವೆಂಕಟಕೃಷ್ಣಯ್ಯ, ಕೆ.ಎಚ್. ರಾಮಯ್ಯ ಹಾಗೂ ಸುಂದರ ಉದ್ಯಾನಗಳ ನಿರ್ಮಾತೃ ಎಚ್. ಸಿ. ಜವರಾಯ ಈ ರೀತಿಯಲ್ಲಿ ಮಹಾರಾಜರೊಂದಿಗೆ ರಾಜ್ಯದ ಸರ್ವಾಂಗೀಣ ಏಳಿಗೆಯಲ್ಲಿ ಭಾಗಿಗಳಾಗಿದ್ದಾರೆ. ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಬ್ರಿಟಿಷರ ಅಧಿಪತ್ಯವಿದ್ದಾಗ ಅಲ್ಲಲ್ಲಿ ತಮ್ಮ ಸೇವಾ ದಕ್ಷತೆ, ವಿಷಯ ಪರಿಣತೆಯನ್ನು ಭದ್ರ ಅಡಿಪಾಯವಾಗಿಸಿಕ್ಕೊಂಡು ಅಧಿಕಾರದ

ಸೋಪಾನಗಳನೇರುತ್ತಾ ಸಾಗಿದ, ಉನ್ನತ ಹುದ್ದೆಗಳನ್ನು ಧರಿಸಿ ತಮ್ಮ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ಮಹಾನುಭಾವರಲ್ಲಿ ಹೆಚ್.ಸಿ.ಜವರಾಯನವರು ಪ್ರಮುಖರು.

ಮೈಸೂರಿನ ಇತಿಹಾಸದಲ್ಲಿ ರಾಜ್ಯವನ್ನು ಆಧುನೀಕರಣಗೋಳಿಸಿ ಅದನ್ನು ದಕ್ಷತೆಯಿಂದಾಳಿ, ಜನರು ತಮ್ಮ ಮೇಲಿಟ್ಟಿದ್ದ ಅಪಾರ ಗೌರವಾಧಾರಗಳಿಗೆ, ರಾಜಭಕ್ತಿಗೆ ತಕ್ಕವರಂತೆ ನಡೆದುಕೊಂಡಿದ್ದ ಇಪ್ಪತ್ತನೆ ಶತಮಾನದಲ್ಲಿ ಆಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರೆಂದು ಪರಿಗಣಿಸಬಹುದಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಒಬ್ಬರು.ತಮ್ಮ ಉದಾತ್ತ ಗುಣಗಳಿಂದ ಮೈಸೂರಿನ ಘನತೆಯನ್ನು ಹೆಚ್ಚಿಸಿದ ಸೌಂದರ್ಯ ಪ್ರಿಯರೂ, ಪ್ರಕೃತಿ ಆರಾಧಕರೂ ಆಗಿದ್ದ ನಾಲ್ವಡಿ ಕೃಷ್ಣರಾಜರು ರಾಜ್ಯದಲ್ಲಿ ಸುಂದರವಾದ ಪ್ರಕೃತಿ ಧಾಮಗಳನ್ನು, ನಾಡಿನಾದ್ಯಂತ ಸುಂದರ ಫಲಪುಷ್ಪಗಳ ಸಂಪತ್ತು ಹೊಂದಿದ್ದ ತೋಟಗಳನ್ನು ಬೆಳಸಿದ್ದರು. ಅವರ ರಾಜಧಾನಿ ಮೈಸೂರು ಸುಂದರವಾದ ಅನೇಕ ಉದ್ಯಾನಗಳನ್ನು ಹೊಂದಿದ್ದು, ಅದರ ಬೀದಿಗಳು ಅಲಂಕಾರಿಕ, ಹೂವಿನ ಮರಗಳಿಂದ ಕಂಗೊಳಿಸುತ್ತಿತ್ತು. ರಾಜ್ಯದ ಪ್ರಮುಖ ನಗರ ಬೆಂಗಳೂರಂತೂ ಲಾಲ್‌ಬಾಗ್, ಕಬ್ಬನ್ ಪಾರ್ಕ್‌ಗಳಲ್ಲದೆ ಅನೇಕ ಸುಂದರ ತೋಟಗಳಿಂದ ಕಂಗೊಳಿಸಿ 'ಭಾರತದ ಉದ್ಯಾನಗಳ ನಗರಿ' ಎಂಬ ಕೀರ್ತಿಗೆ ಭಾಜನವಾಗಿತ್ತು. ಸರ್. ಎಮ್. ವಿಶ್ವೇಶ್ವರಯ್ಯನವರು ಕಾವೇರಿ ನದಿಗೆ ನಿರ್ಮಿಸಿದ್ದ ಕನ್ನಂಬಾಡಿ ಅಣೆಕಟ್ಟಿನ ಕೆಳಭಾಗವನ್ನು ವಿಶ್ವದ ಆಕರ್ಷಕ ಬೃಂದಾವನ ಗಾರ್ಡನ್ ಆಗಿ ಪರಿವರ್ತಿಸಿದರು. ಈ ಎಲ್ಲಾ ಪ್ರಕ್ರಿಯೆಗಳ ಹಿಂದೆ, ಮಹಾರಾಜರಿಗೆ ಒತ್ತಾಸೆಯಾಗಿ ನಿಂತವರು ನಮ್ಮವರೇ ಆದ ಎಚ್. ಸಿ ಜವರಾಯ. ಪ್ರತಿಷ್ಠಿತ ಕುಂಟುಂಬಕ್ಕೆ ಸೇರಿದ್ದರೂ, ತಮ್ಮ ಪರಿಣತಿ, ಶ್ರಮಗಳ ಮೂಲಕ ರಾಜ್ಯದ ತೋಟಗಾರಿಕೆ ಇಲಾಖೆಯ ಉನ್ನತ ಹುದ್ದೆ ಧರಿಸಿದ ಜವರಾಯ, ರಾಜ್ಯವೆ ಅಲ್ಲದೆ ಭಾರತದ ವಿವಿಧ ಭಾಗಗಳಲ್ಲಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ ಶ್ರೇಷ್ಠ ಸಾಧಕ.

ಜವರಾಯನವರು ಜನಿಸಿದ್ದು ದಕ್ಷಿಣದ ಕಾಶ್ಮೀರ ಕೊಡಗಿನ ಕೇಂದ್ರ ಮಡಿಕೇರಿಯಲ್ಲಿ. ಕೊಡಗು ಆಗ ಬ್ರಿಟೀಷರ ನೇರ ಆಳ್ವಿಕೆಗೆ ಒಳಪಟ್ಟಿದ್ದು ಅಲ್ಲಿದ್ದ ಕೊಡಗಿನ ಹಾಗೂ ಇಂಗ್ಲೀಷರ ಸಂಸ್ಕೃತಿಯ ಪ್ರಭಾವ ಅಲ್ಲಿನ ಜನರ ಮೇಲಿತ್ತು. ದಕ್ಷತೆಗೆ ಮಾತ್ರ ಆಸ್ಪದ ನೀಡಿದ್ದ ಬ್ರಿಟಿಷರ ಆಡಳಿತದಲ್ಲಿ ತಮ್ಮ ಸ್ವ ಸಾಮಾರ್ಥ್ಯದಿಂದ ಮೇಲೇರಿದವರಿಗೆ ಮನ್ನಣೆ. ಅಂತಹ ಮುಕ್ತ ವಾತಾವರಣ, ಸುಂದರ ಪರಿಸರ ಅಲ್ಲಿ ಜನಿಸಿದ ಜವರಾಯನವರ ಮೇಲಾಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಕೊಡಗಿನ ಜಿಲ್ಲಾ ಸಬ್.ಜಡ್ಜ್ ಹಿರಳ್ಳಿ ಚೆನ್ನಯ್ಯನವರ ಹಿರಿಯ ಮಗನಾಗಿ. ಜವರಾಯ 1889ರಲ್ಲಿ ಜನಿಸಿದರು. ಚೆನ್ನಯ್ಯನವರಿಗೆ ಇವರೇ ಮೊದಲ ಮಗುವಲ್ಲ. ಚೆನ್ನಯ್ಯನವರಿಗೆ ಈ ಮೊದಲು ಜನಿಸಿದ ಮಕ್ಕಳೆಲ್ಲಾ ಮರಣ ಹೊಂದುತ್ತಿದ್ದರು. ಆದರೆ ಅದರಿಂದ ಧೃತಿಗೆಡದ ಚೆನ್ನಯ ದಂಪತಿಗಳಿಗೆ ಸಾವನ್ನು ಗೆಲ್ಲುವ ಛಲ, ತಮಗಾಗಿ ಮಕ್ಕಳು ಬೇಕೆಂಬ ಹಂಬಲ. ಅದ್ದರಿಂದ ತಮ್ಮ ಮೂರನೆ ಮಗುವಿನ ಜನನದ ನಂತರ ಆ ಗಂಡು ಮಗುವಿಗೆ ಜವರಾಯ ಎಂದು ಯಮನ ಹೆಸರನ್ನೆ ಇಟ್ಟು ಅದರಿಂದಲಾದರೂ ಮಗುವನ್ನು ಮರಣದಿಂದ ತಪ್ಪಿಸಬಹುದೆಂಬ ನಂಬಿಕೆ. ಅವರ ನಂಬಿಕೆಗೆ ಪುಷ್ಟಿ ಕೊಡುವಂತೆ ಈ ಮಗು ಬದುಕುಳಿಯಿತು. ಸಾವನ್ನು ಗೆದ್ದ ಆ ಮಗುವೇ ಈ ಲೇಖನದ ಕೇಂದ್ರಬಿಂದು ಎಚ್.ಸಿ. ಜವರಾಯ. ದೇವರು ತನಗೊದಗಿಸಿದ ಜೀವ, ಹಾಗೂ ತನ್ನನು ಸಾಕಿಸಲುಹಿದ ತನ್ನ ತಂದೆತಾಯಿಗಳು, ಬಂಧುಬಳಗದವರು ಹೆಮ್ಮೆ ಪಡುವಂತೆ ಜೀವಿಸಿ, ದೇಶದ ಉನ್ನತ ಹುದ್ದೆಯನ್ನು ಧರಿಸಿ, ದೇಶಕ್ಕೆ ಹಾಗೂ ತನ್ನ ರಾಜ್ಯಕ್ಕೆ ಕೀರ್ತಿ ತಂದುಕೊಟ್ಟವರು ಈ ಜವರಾಯ. ಅವರ ನಂತರ ಚೆನ್ನಯ್ಯನವರಿಗೆ ಮೂರು ಗಂಡು ಹಾಗೂ ಮೂರು ಹೆಣ್ಣುಮಕ್ಕಳು ಹುಟ್ಟಿದರು. ಅದೊಂದು ಸೌಹಾರ್ಧಯುತ ವಾತಾವರಣವಿದ್ದ ದೊಡ್ಡ ಕುಟುಂಬ.

ಕೊಡಗು ಆಗ ಬ್ರಿಟಿಷ್‌ರ ನೇರ ಆಳ್ವಿಕೆಗೊಳಪಟ್ಟು, ಅದರ ಆಡಳಿತದ ಜವಾಬ್ದಾರಿ ಮೈಸೂರಿನ ರೆಸಿಡೆಂಟಿನದಾಗಿತ್ತು. ಅಲ್ಲಿನ ಆಡಳಿತದಲ್ಲಿ ಎಲ್ಲರೂ ಯೋರೋಪಿಯನ್‌ರೇ ಆಗಿದ್ದರೆ, ಕೊಡಗಿಗರೆ ಜೀವನೋಪಾಯಕ್ಕಾಗಿ ಹಿರಳ್ಳಿಯಿಂದ ಬಂದಿದ್ದ ಬೇಲೂರಯ್ಯನವರ ಮಗ ಚೆನ್ನಯ್ಯ ತಮ್ಮ ಸ್ವಸಾಮಾರ್ಥ್ಯದಿಂದ ಹಂತಹಂತವಾಗಿ ಮೇಲ್ ದರ್ಜೆಯ ಹುದ್ದೆಗಳನ್ನು ಧರಿಸಿಕೊಳ್ಳುತ್ತಾ ಕೊಡಗಿನ ಜಿಲ್ಲಾ ಸಬ್ ಜಡ್ಜ್ ಹುದ್ದೇಗೇರಿದ್ದು ಅಂದಿನ ದಿನಗಳಲ್ಲಿ ಭಾರತೀಯನೊಬ್ಬನಿಗೆ ಸಂದ ಗೌರವವಾಗಿತ್ತು. ತಕ್ಕಮಟ್ಟಿಗೆ ಅನುಕೂಲಸ್ಥರಾಗಿದ್ದ ಹಿರಳ್ಳಿ ಚೆನ್ನಯ್ಯ ತಮ್ಮ ಮಕ್ಕಳ ಪಾಲನೆ ಪೋಷಣೆಗೆ ಸಾಕಷ್ಟು ಗಮನ ನೀಡಿ ಶಿಕ್ಷಣ ಆಟಪಾಠಗಳಿಗೆ ಅವಕಾಶ ಒದಗಿಸಿದ್ದರು.

ಜವರಾಯ ತಮ್ಮ ಹೈಸ್ಕೂಲ್ ಮಟ್ಟದ ವಿದ್ಯಾಭ್ಯಾಸವನ್ನು ಮಡಿಕೇರಿಯಲ್ಲಿ ಮುಗಿಸಿದರು. ಪಾಠವಲ್ಲದೆ ಆಟದಲ್ಲೂ ಮುಂದಿದ್ದ ಜವರಾಯ ಭಾರತದಲ್ಲಿ ಹಾಕಿ ಕ್ರೀಡೆಯ ಕೇಂದ್ರವಾದ ಮಡಿಕೇರಿಯಲ್ಲಿದ್ದಾಗ ಹಾಕಿ ಆಟದಲ್ಲಿ ಪರಿಣತಿಯನ್ನು ಗಳಿಸಿದರು. ಉತ್ತಮ ಕ್ರಿಡಾಪಟು ಜವರಾಯ, ಹಾಕಿಯಲ್ಲದೆ, ಗಾಲ್ಫ್, ಟೆನಿಸ್, ಕ್ರಿಕೇಟ್‌ಗಳಲ್ಲೂ ಉತ್ತಮ ಸ್ಥಾನ ಪಡೆಯುತ್ತಿದ್ದರು. ಮುಂದಿನ

ದಿನಗಳಲ್ಲಿ ತಮ್ಮ ಕ್ರಿಡಾ ಆಸಕ್ತಿಯನ್ನು ಮತ್ತಷ್ಟು ಬೆಳಸಿಕೊಂಡು ಮಹಾರಾಜರ ಗಾಲ್ಫ್ ತಂಡದ ಸದಸ್ಯರಾಗಿದ್ದಲ್ಲದೆ ಹಾಕಿಯಲ್ಲಿ ಉತ್ತಮ ಸಾಧನೆಗೈದಿದ್ದರು. ಇಂಗ್ಲೀಷರೆ ಹೆಚ್ಚಾಗಿ ಆಡುತ್ತಿದ್ದ ಕ್ರಿಕೇಟ್‌ನಲ್ಲಿ ಅವರಿಗಿದ್ದ ಪರಿಣತಿಯಿಂದಾಗಿ ಜವರಾಯರು ಮೈಸೂರು ರಾಜ್ಯ ತಂಡದ ಕ್ಯಾಪ್ಟನ್ ಆಗಿದ್ದರು.

ಬೆಂಗಳೂರಿನ ಸೆಂಟ್ ಜೋಸೆಫ್ ಶಾಲೆಯಲ್ಲಿ ಇಂಟರ್‌ಮೀಡಿಯೇಟ್ ಮುಗಿಸಿ ಕೊಯಮತ್ತೂರಿನ ಕೃಷಿ ಕಾಲೇಜಿಗೆ ಸೇರಿ ಕೃಷಿಯಲ್ಲಿ ಪದವಿ ಪಡೆದರು. ತಮ್ಮ ವಿದ್ಯಾರ್ಥಿಜೀವನದುದ್ದಕ್ಕೂ ಕಲಿಕೆ ಹಾಗೂ ಆಟೋಟಗಳಲ್ಲಿ, ಮುಂದಿದ್ದ ಜವರಾಯ ಕೋಯಮತ್ತೂರಿನ ಕೃಷಿ ಕಾಲೇಜಿನ ಪದವಿಯ ನಂತರ ತಮ್ಮ ಭವಿಷ್ಯವನ್ನು ಆರಂಬಿಸಿದ್ದಾಗ, ಮೈಸೂರಿನ ಮಹಾರಾಜ ಕೃಷ್ಣರಾಜರು ಅವರನ್ನು ತಮ್ಮ ಸೇವೆಗೆ ಬರುವಂತೆ ಆಮಂತ್ರಿಸಿದರು. ತಮ್ಮ ನಿವೃತ್ತಿಯ ನಂತರ ಮೈಸೂರು ರಾಜ್ಯದಲ್ಲಿ ನೆಲಸಲು ನಿರ್ಧರಿಸಿದ ತಂದೆಯವರ ನಿರ್ಧಾರದಿಂದ ಜವರಾಯ ಮೈಸೂರನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಳ್ಳಬೇಕಾಯಿತು. ಕೃಷಿ ಪದವಿ ಪಡೆದಿದ್ದ ಜವರಾಯನವರನ್ನು ಮಹಾರಾಜರು ತಮ್ಮ ತೋಟಗಾರಿಕೆಯ ಸೇವೆಗೆ ಸೇರುವಂತೆ ಮಾಡಿದರು. 1913ರ ವೇಳೆಗಾಗಲೆ ಜವರಾಯ ಮಹಾರಾಜರ ಮೆಚ್ಚಿನ ಕ್ಷೇತ್ರ ತೋಟಗಾರಿಕೆಯ ಕಡೆ ಗಮನ ಹರಿಸಬೇಕಾಯಿತು.

ಜವರಾಯರ ಸೇವೆ ಆರಂಭವಾದದ್ದು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ. ಸೇವೆಯ ಬಹಳಷ್ಟು ವರುಷದ ಸಮಯ ಕಳೆದದ್ದು ಲಾಲ್‌ಬಾಗಿನಲ್ಲಿ. ಅಂದಿನ ದಿನಗಳಲ್ಲಿ ಅದೊಂದು ಪ್ರತಿಷ್ಠೆಯ ಕ್ಷೇತ್ರವಾಗಿದ್ದು ಹಲವಾರು ಶ್ರೇಷ್ಠ ಸಸ್ಯೋಧ್ಯಮಿಗಳ ಸೇವೆಯ ಫಲವಾಗಿ, ರಾಜ್ಯದ ಹೆಮ್ಮೆಯ ಕೇಂದ್ರವಾಗಿತ್ತು. ಲಾಲ್‌ಬಾಗ್‌ನ ಸ್ಥಾಪಕ ಹೈದರಾಲಿ. ಇದನ್ನು ಅವನು ತನ್ನ ಮನಸ್ಸಿಗೆ ಮುದ ನೀಡುವ ಹೂಗಳ ತೋಟವನ್ನಾಗಿ ಬೆಳಸಿ ಅಲ್ಲಿ ಅಪರೂಪದ ಹೂವಿನ ಮರಗಿಡಗಳನ್ನು ಪೋಷಿಸಿದ್ದು ಆ ತೋಟ, ಗುಲಾಬಿ ಹೂಗಳಿಗೆ ಪ್ರಸಿದ್ಧವಾಗಿತ್ತು. ಇಲ್ಲಿನ ಕೆಂಪು ಗುಲಾಬಿಗಳಿಂದಲೇ ಇದಕ್ಕೆ 'ಲಾಲ್‌ಬಾಗ್'(ಕೆಂಪು ಹೂವಿನ ತೋಟ) ಎಂದು ಹೆಸರು ಬಂದದ್ದು. ಮೈಸೂರಿನ ಹುಲಿ ಟಿಪ್ಪು ಸುಲ್ತಾನನ ತಂದೆ ನೆಡಿಸಿದ ಗುಲಾಬಿ ಹೂಗಳ ಸುಂದರ ತೋಟವನ್ನು ಆಸಕ್ತಿಯಿಂದ ಪೋಷಿಸಿದನು. ಲಾಲ್‌ಬಾಗ್ ಮೈಸೂರು ರಾಜ್ಯದ ಸುಂದರ ತಾಣಗಳಲ್ಲಿ ಒಂದಾಗಿತ್ತು. 1800 ರ ನಂತರ ಬೆಂಗಳೂರು ಕಂಟೋನ್ಮೆಂಟ್ ಬ್ರಿಟಿಷರ ವಶವಾಗಿ ಲಾಲ್‌ಬಾಗ್ ಅವರ ಸುಪರ್ಧಿಯಲಿತ್ತು.

1881ರ ನಂತರ ಮರಳಿ ಅಧಿಕಾರ ಪಡೆದ ಹತ್ತನೆ ಚಾಮಾರಾಜ ಒಡೆಯರ ಈ ತೋಟದ ಬೆಳವಣಿಗೆಯ ಬಗ್ಗೆ ವಹಿಸಿದ ಆಸಕ್ತಿಯಿಂದ ಅದು ಮತ್ತೆ ತನ್ನ ಪ್ರತಿಷ್ಠೆಯನ್ನುಳಿಸಿಕೊಂಡು ದೇಶದ ಸುಂದರ ಉದ್ಯಾನಗಳಲ್ಲಿ ಒಂದಾಯಿತು. ಅದರ ನಿರ್ವಹಣೆಗೆಂದು ಯೂರೋಪಿನ ದಕ್ಷ ಅಧಿಕಾರಿಗಳನ್ನು ನೇಮಿಸಿಕೊಂಡು, ಲಾಲ್‌ಬಾಗ್ ಅನ್ನು ತಮ್ಮ ಕನಸಿನ ಸುಂದರ ಉದ್ಯಾನವನ್ನಾಗಿ ಪರಿವರ್ತಿಸಲು ಮುಂದಾದರು. ಕೆಲ ವರ್ಷಗಳ ಕಾಲ ಪಾಳುಬಿದ್ದಿದ್ದರೂ ಕಮೀಷನ್ನರ್‌ಗಳ ಆಡಳಿತದಲ್ಲಿ ಇದಕ್ಕೆ ಮತ್ತೇ ಪ್ರೋತ್ಸಾಹ ದೊರೆಯಿತು. 1881ರ ನಂತರ ಮಹಾರಾಜರ ಸರ್ಕಾರದ ಹೆಮ್ಮೆಯ ತೋಟಗಾರಿಕೆಯ ಕೇಂದ್ರವಾದ ಮತ್ತು ಐತಿಹಾಸಿಕ ಹಿನ್ನಲೆಯಿದ್ದ ಲಾಲ್‌ಬಾಗ್‌ನಲ್ಲಿ ಸೇವೆ ಸಲ್ಲಿಸುವುದೆ ಹೆಮ್ಮೆಯ ವಿಷಯ. ಲಾಲ್‌ಬಾಗ್ ಜವರಾಯರನ್ನು ಪರಿಪೂರ್ಣ ಸಸ್ಯೋದ್ಯಮಿಯಾಗಿಸಿತು. ಜವರಾಯ ಅಲ್ಲಿ ಸೇವೆ ಸಲ್ಲಿಸಿದ ಅವಧಿ ಲಾಲ್‌ಬಾಗಿನ ಹಾಗೂ ಜವರಾಯರ ಕೀರ್ತಿಗಳು ಜವರಾಯರ ಆಸಕ್ತಿಯ ಫಲವಾಗಿ ರಾಜ್ಯದ ತೋಟಗಾರಿಕೆಯ ಪ್ರಯೋಗಾಲಯವಾಗಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದ ಪ್ರತಿಷ್ಠಿತ ತೋಟವಾಯಿತು. ಸಾಕಷ್ಟು ದೀರ್ಘ ಅವಧಿಯನ್ನು ಇಲ್ಲಿ ಕಳೆದ ಜವರಾಯ ಅದರಕೀರ್ತಿ ಪ್ರತಿಷ್ಠೆಗಳಲ್ಲಿ ಪಾಲು ಹೊಂದಿದ್ದಾರೆ. ಏಕೆಂದರೆ ಅಲ್ಲಿದ್ದ ಪರಿಸ್ಥಿತಿಯೇ ಹಾಗಿತ್ತು.

1881ರಲ್ಲಿ ಅಧಿಕಾರನ್ನು ಪುನರ್ ಪಡೆದ ಮಹಾರಾಜ ಚಾಮರಾಜರು ಲಾಲ್‌ಬಾಗ್ ತನ್ನ ರಾಜ್ಯದ ಉದ್ಯಾನಗಳ ಕೇಂದ್ರವಾಗಬೇಕೆಂದು ಬಯಸಿ ಅದರ ಬೆಳವಣಿಗೆ ಪೂರಕವಾಗುವ ಕ್ರಮ ಕೈಗೊಂಡರು. ಅವರ ನೆರವಿಗೆ ಬಂದವರು ಜಾನ್ ಕ್ಯಾಮರಾನ್. ಆ ಕಾಲದ ಶ್ರೇಷ್ಠ ಸಸ್ಯೋದ್ಯಮಿ,. ಅಲ್ಪ ಕಾಲದಲ್ಲಿ ಕ್ಯಾಮರಾನ್ ಮಹಾರಾಜರ ಕನಸನ್ನು ನನಸು ಮಾಡಿ ರಾಜ್ಯದ ಮಾತ್ರವಲ್ಲದೆ ದೇಶದ ಜನರ ಗಮನ ಸೆಳೆಯುವಂತೆ ಮಾಡಿದರು. ಅವರನ್ನು ಅನುಸರಿಸಿದವರು ಜರ್ಮನ್ ಸಂಜಾತ ಕೃಂಬಿಗಲ್. ಇವರಿಬ್ಬರ ಸೇವೆಯನ್ನು ಕನ್ನಡಿಗರು ನೆನಯಲೇಬೇಕು. ಅಲಂಕಾರಿಕ ಮರಗಿಡಗಳ ಬಗ್ಗೆ ಅತಿ ಆಸಕ್ತಿ ಹೊಂದಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜರು ಲಾಲ್‌ಬಾಗನ್ ನಿರ್ವಹಣೆಗೆ ತಜ್ಞರಾದ ಜಾನ್ ಕ್ಯಾಮಾರಾನ್, ಜಿ.ಹೆಚ್ಚ್. ಕೃಂಬಿಗಲ್‌ರಂತಹ ದಕ್ಷ ಅಧಿಕಾರಿಗಳ ಸೇವೆಯನ್ನು ಮುಂದುವರೆಸಿದ್ದರು.

ಎಲ್ಲಾ ವಿಧದಲ್ಲೂ ತನ್ನ ತಂದೆಯ ಹಾದಿಯನ್ನು ಅನುಸರಿಸಿದ ನಾಲ್ವಡಿಯವರು, ತಂದೆಯಂತೆ ವೃಕ್ಷಪ್ರೇಮಿ, ಪರಿಸರವನ್ನು ಕಾಪಾಡುವಲ್ಲಿ, ಸಂರಕ್ಷಿಸುವಲ್ಲಿ ಅಪಾರ ಕಾಳಜಿ. ದಕ್ಷರನ್ನು ಗುರುತಿಸುವ, ಯುವಕರನ್ನು ಪ್ರೋತ್ಸಾಹಿಸುವ ಗುಣವಿದ್ದ ಮಹಾರಾಜರಿಗೆ ಮಣ್ಣಿನ ಮಗನೇ ಆಗಿದ್ದ

ಜವರಾಯ ಕೃಷಿ ಪದವೀಧರರಾದ್ದರಿಂದ ಅವರು ಬೇರೆಲ್ಲೂ ಸೇವೆಗೆ ಹೋಗದಂತೆ ಲಾಲ್‌ಬಾಗ್‌ನಲ್ಲಿ ಸೇವೆಗೆ ಸೇರುವಂತೆ ನೋಡಿಕೊಂಡು, ಜವರಾಯರನ್ನು ರಾಜ್ಯದಲ್ಲಿ ಉಳಿಸಿಕೊಂಡರು. ಇಂತಹ ಪ್ರತಿಷ್ಠ ಹೊಂದಿದ್ದ ಲಾಲ್‌ಬಾಗ್‌ನಲ್ಲಿ ಸೇವೆ ಸಲ್ಲಿಸುವುದೆ ಪ್ರತಿಷ್ಠೆಯ ವಿಷಯ. ತಂದೆಯವರ ಒತ್ತಾಸೆಯಂತೆ ಲಾಲ್‌ಬಾಗ್‌ನಲ್ಲಿ ತಮ್ಮ ಸೇವಾವೃತ್ತಿಯನ್ನು ಆರಂಭಿಸಿದರು. ಯುವಕ ಜವರಾಯರ ತರಬೇತಿ, ಆಸಕ್ತಿ ವ್ಯರ್ಥವಾಗದೆ ಅಲ್ಲಿ ಅವರ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಮತ್ತಷ್ಟು ವೃದ್ಧಿಯಾಯಿತು.

ಆಗ ಭಾರತದ ಉಳಿದ ಭಾಗಗಳಲ್ಲಿದ್ದಂತೆ ರಾಜ್ಯದಲ್ಲೂ ಯೂರೋಪಿಯನ್ ಅಧಿಕಾರಿಗಳ ಪ್ರಾಬಲ್ಯ. ಎಲ್ಲಾ ಉನ್ನತ ಹುದ್ದೆಗಳೂ ಅವರಿಗೆ, ಮೈಸೂರಿನ ಸ್ಥಿತಿಯೇನೂ ಭಿನ್ನವಲ್ಲ. ಈ ಹಿನ್ನಲೆಯಲ್ಲಿ ತೋಟಗಾರಿಕೆಯ ಇಲಾಖೆಯಲ್ಲಿ ಕಿರಿಯ ಹುದ್ದೆಯಿಂದಾರಂಬಿಸಿ ಜವರಾಯ ಕೃಂಬಿಗಲ್‌ರ ನೇತೃತ್ವದಲ್ಲಿ ತಮ್ಮ ತರಬೇತಿ ಪಡೆದರು. ಕೃಂಬಿಗಲ್ ಸಸ್ಯೋಧ್ಯಾನಗಳ ನಿರ್ಮಾಣದಲ್ಲಿ ವಿಶ್ವವಿಖ್ಯಾತ. ಅವರ ಕೆಳಗೆ ಕೆಲಸ ಮಾಡುವದರ ಮೂಲಕ ಜವರಾಯ ತಮ್ಮ ದಕ್ಷತೆಯನ್ನು ಹೆಚ್ಚಿಸಿಕೊಂಡರು. ಜವಾರಯ ಈ ಅಧಿಕಾರಿಗಳಿಂದ ಕಲಿತದ್ದು ಹೆಚ್ಚು. ಕ್ಯಾಮರಾನ್‌ರ ನಂತರ ಲಾಲ್‌ಬಾಗ್‌ನ ಡೈರೆಕ್ಟರ ಆದ ಕುಂಬೈಗಲ್, ಲಾಲ್‌ಬಾಗನ್ನು ಅಪರೂಪದ ಸಸ್ಯಗಳ ಕೆಂದ್ರವಾಗಿಸಿದರು. ಪ್ರಪಂಚದ ಬೇರೆಬೇರೆ ಕಡೆಗಳಲ್ಲಿ ಬೆಳೆಯುವ ಸಸ್ಯಗಳನ್ನು, ಮರಗಳ ಸಸಿಗಳನ್ನು ತರಿಸಿ ನೆಡೆಸಿದರು. ಅದ್ದರಿಂದ ಲಾಲ್‌ಬಾಗ್ ಭಾರತದ ವಿಶಿಷ್ಟ ತೋಟವಾಗಿತ್ತು.

ಮೊದಲಿನಿಂದಲೂ ಭಾರತೀಯರ ಸೇವೆಯನ್ನೇ ಇಷ್ಟಪಡುತ್ತಿದ್ದ ಮಹಾರಾಜರಿಗೆ ಜವರಾಯರ ಸೇವೆ ಅವಶ್ಯವೆನಿಸಿತು. ಅದ್ದರಿಂದ ಜವರಾಯರು ಬೇರೆಲ್ಲೂ ಹೋಗದೆ ತಮ್ಮ ರಾಜ್ಯದಲ್ಲೇ ಸೇವೆಸಲ್ಲಿಸುವಂತೆ ಮಹಾರಾಜರು ಅವರನ್ನು ಉತ್ತೇಜಿಸಿದರು. ಕೃಂಬಿಗಲ್‌ರಂತಹ ಅಧಿಕಾರಿಗಳ ಕೆಳಗೆ ತರಬೇತಿ ಹೊಂದಿದ್ದ ಜವರಾಯರನ್ನು ಮಹಾರಾಜರು 1914ರಲ್ಲಿ ಮೈಸೂರಿನ ಅರಮನೆಗಳ ತೋಟಗಳ ಅಧಿಕಾರಿಯಾಗಿ ನೇಮಿಸಿಕೊಂಡರು. ಆಗ ತಾನೇ ನಿರ್ಮಾಣವಾಗಿದ್ದ ಆ ಭವ್ಯ ಅರಮನೆ ಹಾಗೂ ಜಗನ್ಮೋಹನ ಭವನಗಳ ಸುತ್ತಲೂ ಇದ್ದ ತೋಟಗಳನ್ನು ಆರ್ಕಷಕವಾಗಿಸುವ ಹೊಣೆಗಾರಿಕೆ ಜವರಾಯನವರದು. ದಸರಾ ಪ್ರಖ್ಯಾತಿಯ ಈ ಅರಮನೆಗಳ ನಗರಿ ಮೈಸೂರಿನ ಉದ್ಯಾನಗಳ ನಿರ್ವಹಣೆ, ಅವುಗಳನ್ನು ಜನಾಕರ್ಷಕ ಸ್ಥಳಗಳಾಗಿಸಬೇಕಾದ ಹೊಣೆಗಾರಿಕೆ ಜವರಾಯರದು.

ಅದುವರೆಗೂ ಬೆಂಗಳೂರಿನಲ್ಲಿ ಮಾತ್ರ ಉತ್ತಮವಾದ ಉದ್ಯಾನಗಳಿದ್ದು, ಮೈಸೂರಿನಲ್ಲೂ ಅಂತಹ ಉದ್ಯಾನಗಳನ್ನು ಸ್ಥಾಪಿಸುವ ಆಸೆ ಮಹಾರಾಜರದು. ಅವರು ತಮ್ಮ ಅರಮನೆಗಳ ಸುತ್ತಲೂ ಸುಂದರ, ಬಣ್ಣ ಬಣ್ಣಗಳ ಹೂಗಿಡಗಳನ್ನು ಮಾತ್ರವಲ್ಲದೆ, ಫಲ ನೀಡುವ ವೃಕ್ಷಗಳನ್ನು ಹೊಂದುವಂತೆ ಜವರಾಯ ಅರಮನೆಗಳ ಬಯಲು ಹಾಗೂ ಹಿತ್ತಲುಗಳು ಆರ್ಥಿಕವಾಗಿಯೂ ಲಾಭಕಾರಿಯಾಗುವಂತಹ ಯೋಜನೆಯನ್ನು ಸಿದ್ಧಗೊಳಿಸಿದರು. ಅದರಂತೆ ಕಾರ್ಯ ಪ್ರವೃತ್ತರಾದ ಜವರಾಯ ಮಹಾರಾಜರ ಒಪ್ಪಿಗೆಯ ಮೇರೆಗೆ ಅರಮನೆಗಳ ಸುತ್ತಲೂ ಸಸ್ಯಕಾಶಿ ಇರುವಂತೆ ನೋಡಿಕೊಂಡರು.

ಸುಸಂಸ್ಕೃತರೂ, ಉತ್ಕೃಷ್ಟ ಅಭಿರುಚಿಯನ್ನು ಹೊಂದಿದ್ದ ಮಹಾರಾಜರನ್ನು ತೃಪ್ತಿ ಪಡಿಸುವುದು ಸುಲಭವಲ್ಲ. ಸದಾ ಹೊಸದನ್ನು ಸುಂದರ ವಾತಾವರಣವನ್ನು ಬಯಸುತ್ತಿದ್ದ ಮಹಾರಾಜರು ತಮ್ಮ ಅರಮನೆಗಳ ಸುತ್ತಲೂ ಮನಸ್ಸಿಗೆ ಉಲ್ಲಾಸ ನೀಡುವ ಸಸ್ಯ ಕಾಶಿಯನ್ನು ಬಯಸುತ್ತಿದ್ದರು .ದಸರಾದ ಆಚರಣೆಯಲ್ಲಿ, ಸಂಭ್ರಮದಲ್ಲಿ ಅಲ್ಲಿನ ಉದ್ಯಾನಗಳ ಪಾಲೂ ಇರಬೇಕೆಂಬುದು ಮಹಾರಾಜರ ಹಂಬಲ. ಅವರ ಆಸೆಗೆ ನೀರೆರೆದು ಪೋಷಿಸಿದವರು ಜವರಾಯ.

ಮೈಸೂರಿನಲ್ಲಿದ್ದ ಹಲವು ಸುಂದರ ಅರಮನೆಗಳಲ್ಲದೆ ಅಲ್ಲಿನ ಬೀದಿಗಳು ಹೂ ಬಿಡುವ ವೃಕ್ಷಗಳನ್ನು ಹೊಂದಿರಬೇಕೆಂಬುದು ಜವರಾಯರ ಇಚ್ಛೆ. ವರ್ಷಕ್ಕೊಮ್ಮೆ ನಡೆಯುವ ದಸರಾ ಮಹೋತ್ಸವ ಅವರಿಗೆದುರಾದ ಮತ್ತೊಂದು ಸವಾಲು. ದಸರಾದ ಆಕರ್ಷಣೆಯನ್ನು ಹೆಚ್ಚಿಸುವ ಹಾಗೇ ಅಲ್ಲಿನ ರಸ್ತೆಗಳು ಫಲಪುಷ್ಪಗಳಿಂದ ತುಂಬಿರುವ ಮರಗಳನ್ನು ಹೊಂದಿರಬೇಕಿತ್ತು. ಮಹಾರಾಜರ ಅಸಕ್ತಿಯನ್ನು ಅರಿತುಕೊಂಡ ಹಾಗೆ ಜವರಾಯ ಸತತವಾಗಿ ಶ್ರಮವಹಿಸಿ ಅಲ್ಪ ಸಮಯದಲ್ಲೆ ಮೈಸೂರಿನ ಉದ್ಯಾನಗಳು ಕಳೆಕಟ್ಟುವಂತೆ ನೋಡಿಕೊಂಡರು. ಜವರಾಯರ ಸೇವೆ ಮಹಾರಾಜರ ಮೆಚ್ಚುಗೆ ಗಳಿಸಿ ಅವರಿಗೆ ಮಹಾರಾಜರು ತಮ್ಮ ದಸರಾ ದರ್ಭಾರಿನಲ್ಲಿ ಚಿನ್ನದ ಉಂಗುರವನ್ನು ಕೊಡುಗೆಯಾಗಿ ನಿಡಿ ಸನ್ಮಾನಿಸಿದರು.

ಪ್ರಥಮಗಳ ಸಾಲಿನಲ್ಲಿ:

ತಮ್ಮ ಕಾರ್ಯಕ್ಷಮತೆಯಿಂದ ಮಹಾರಾಜರ ಮೆಚ್ಚುಗೆ ಪಡೆದ ಜವರಾಯ ಸೇವೆಯಲ್ಲಿ ಉನ್ನತಿ ಹೊಂದಿ 1916ರಲ್ಲಿ ಲಾಲ್‌ಬಾಗ್‌ನಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆದರು. ರಾಜ್ಯದ ತೋಟಗಾರಿಕೆಯ ಕೇಂದ್ರ ಲಾಲ್‌ಬಾಗ್, ಅದರ ಜೊತೆಯಲ್ಲಿ ಕಬ್ಬನ್ ಪಾರ್ಕ್ ಮತ್ತು ಉಳಿದ ಪಾರ್ಕ್‌ಗಳ ನವೀಕರಣದ

ಬಿಡುವಿಲ್ಲದ ಕೆಲಸದಲ್ಲಿ ತೊಡಗಿಕೊಂಡಿದ್ದ ಕೃಂಬಿಗಲ್ ಅನಿರೀಕ್ಷಿತವಾಗಿ ತಮ್ಮ ಹುದ್ದೆಯಿಂದ ನಿರ್ಗಮಿಸಬೇಕಾಯಿತು. ಅದು ಆದದ್ದು ಹೀಗೆ: ಕೃಂಬಿಗಲ್ ಜರ್ಮನ್ ಸಂಜಾತ, ಅವರನ್ನು ಮೈಸೂರಿನ ಸೇವೆಯಲ್ಲಿರಿಸಿ ಕೊಂಡದ್ದು ಇಲ್ಲಿನ ಬ್ರಿಟಿಷ್ ಅಧಿಕಾರಿಗಳಿಗೆ ಇಷ್ಟವಿರಲ್ಲಿಲ್ಲ. 1914ರಿಂದ ಆರಂಭವಾದ ಮೊದಲನೆಯ ಮಹಾಯುದ್ಧದಲ್ಲಿ ಇಂಗ್ಲೇಂಡ್ ಹಾಗೂ ಶತೃ ಬಣಗಳಲ್ಲಿದ್ದುದ್ದರ ನೆಪವಾಗಿ ಕೃಂಬಿಗಲ್‌ರನ್ನು ಸೇವೆಯಿಂದ ವಜಾ ಮಾಡುವಂತೆ ರೆಸಿಡೆಂಟ್‌ರ ಒತ್ತಡ, ಅಂತಹ ದಕ್ಷ ಅಧಿಕಾರಿಯನ್ನು ಸಸ್ಯೋದ್ಯಮಗಳ ತಜ್ಞನನ್ನು ಬಿಟ್ಟುಕೊಡಬಾರದೆಂಬುದು ಮಹಾರಾಜರ ಅನಿಸಿಕೆ, ಆದರೆ ಏನೂ ಮಾಡುವಂತಿರಲ್ಲಿಲ್ಲ. ಆ ಕಾರಣದಿಂದಲೆ ಬಹುಶಃ ಮಹಾರಾಜರು ಮೈಸೂರಿನಲ್ಲಿ ಉತ್ತಮವಾಗಿ ಸೇವೆ ಸಲ್ಲಿಸುತ್ತಿದ್ದ ಜವರಾಯರನ್ನು, ತಮ್ಮ ಜವಾಬ್ದಾರಿ ಪೂರ್ಣಗೊಳ್ಳುವ ಮೊದಲೆ ಬೆಂಗಳೂರಿಗೆ ಕೃಂಬಿಗಲ್‌ರ ಅಸಿಸ್ಟೆಂಟ್ ಆಗಿ ನೇಮಿಸಿದರು. ಯುದ್ಧ ಮುಗಿಯುವವರೆಗೆ ಕೃಂಬಿಗಲ್ಲರನ್ನು ಊಟಿಯಲ್ಲಿ ಗೃಹಬಂಧನದಲ್ಲಿರಿಸಿದರು.

ತೆರವಾದ ಸ್ಥಾನಕ್ಕೆ ಜವರಾಯರನ್ನು ಲಾಲಾಬಾಗಿನ ಸೂಪರಿಂಟೆಂಡೆಂಟ್ ಆಗಿ ನೇಮಿಸಿದರು. ಇಂತಹ ಉನ್ನತ ಹುದ್ದೆಗೇರಿದ ಪ್ರಥಮ ಭಾರತೀಯರಾಗಿದ್ದಲ್ಲದೆ, ಚಿಕ್ಕ ವಯಸ್ಸಿನಲ್ಲೆ ದೊಡ್ಡ ಜವಾಬ್ದಾರಿಯ ನಿರ್ವಹಣೆ ಹೊತ್ತವರು ಜವರಾಯ. ಭಾರತೀಯರೊಬ್ಬರಿಗೆ ಅದರಲ್ಲೂ ಕೆಳವರ್ಗದರೊಬ್ಬರಿಗೆ ಯಾವ ಮೀಸಲಾತಿಯೂ ಇಲ್ಲದೆ ದೊರೆತ ಸ್ಥಾನ ಅದು. ಮಹಾರಾಜರಿಗೆ ಬೇಕಿದ್ದರೆ ಬ್ರಿಟಿಷ್ ಅಥವಾ ಯೂರೋಪಿಯನ್ ಸಂಜಾತನೊಬ್ಬನನ್ನು ದೇಶದ ಹೊರಗಿನಿಂದ ಕರೆಯಿಸಬಹುದಿತ್ತು. ಆದರೆ ತಮ್ಮ ಜನರ ಸಾಧನೆಗಳ ಬಗ್ಗೆ ಹೆಮ್ಮೆ ಹಾಗೂ ಅವರ ಸಾಮರ್ಥ್ಯದ ಬಗ್ಗೆ ಅಪಾರ ವಿಶ್ವಾಸ ಹೊಂದಿದ್ದ ಮಹಾರಾಜರು ಜವರಾಯರ ವಿದ್ಯೆ, ಗುಣಮೌಲ್ಯಗಳನ್ನು ಗುರುತಿಸಿ ಅವರನ್ನೆ ರಾಜ್ಯದ ಪ್ರಥಮ ಭಾರತೀಯ ಸೂಪರಿಂಟೆಂಡೆಂಟ್ ಆಗಿ ನೇಮಿಸಿದರು.

ಅಂದು ಜಾನ್ ಕ್ಯಾಮರಾನ್ ಮತ್ತು ಕೃಂಬಿಗಲ್‌ರವರನ್ನು ಅನುಸರಿಸುವುದು ಕಷ್ಟದಾಯಕ. ಇವರಿಬ್ಬರೂ ವಿಶ್ವದ ಖ್ಯಾತ ಸಸ್ಯೋಧ್ಯಮಿಗಳಾಗಿದ್ದರು. ಅವರ ತರಬೇತಿ ಅಂದಿನ ಪ್ರಸಿದ್ಧ ಕೇಂದ್ರಗಳಲ್ಲಾಗಿ ಅಂದು ಆ ದೇಶಗಳಲ್ಲಿನ ಕೃಷಿ ಹಾಗೂ ತೋಟಗಾರಿಕೆಯ ಮುನ್ನಡೆ ಅದ್ಭುತವಾದ ಅನುಭವ ಅವರನ್ನು ಶ್ರೇಷ್ಠ ತೋಟಗಾರಿಕಾ ತಜ್ಞರಾಗಿಸಿತ್ತು. ಜವರಾಯ ಅವರನ್ನು ಅನುಸರಿಸಿ, ತೋಟಗಾರಿಕೆಯಲ್ಲಿ ರಾಜ್ಯಕ್ಕಿದ್ದ ಉತ್ತಮ ಹೆಸರನ್ನು ಉಳಿಸಿಕೊಳ್ಳುವುದು, ಕೃಂಬಿಗಲ್ ಸಾಧನೆಯನ್ನು ಸರಿಗಟ್ಟುವುದು ಕಷ್ಟಕರವಾಗಿತ್ತು.

ಆದರೂ ನಾಲ್ಕು ವರ್ಷಗಳ ಕಾಲ ಕೃಂಬಿಗಲ್‌ರು ಬದಲಾಗಿ ಕಾರ್ಯ ನಿರ್ವಹಿಸಿದ ಅವರ ಯೋಜನೆಗಳ ಸಾಫಲ್ಯತೆಗೆ ಶ್ರಮಿಸಿದರು.

ತೋಟಗಾರಿಕೆ ಇಲಾಖೆ:

ಅಲ್ಲಿಯವರೆಗೂ ತೋಟಗಾರಿಕೆ ಕೇವಲ ಕೆಲವರ ಹವ್ಯಾಸವಾಗಿ, ಸರ್ಕಾರದ ಪ್ರತಿಷ್ಠೆ ಪ್ರದರ್ಶನಗಳಿಗೆ ಮಾತ್ರವೆಂದಾಗಿತ್ತು. ತೋಟಗಾರಿಕೆ ಕೃಷಿ ಇಲಾಖೆಯ ಭಾಗವಾಗಿದ್ದು ಪ್ರತ್ಯೇಕವಾದ ಇಲಾಖೆಯಾಗಿರಲಿಲ್ಲ, ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಮಾತ್ರ ಅದರ ಚಟುವಟಿಕೆ ಸೀಮಿತವಾಗಿತ್ತು. ಜವರಾಯ ಈ ವ್ಯವಸ್ಥೆಯನ್ನು ವಿಸ್ತರಿಸಿ ತೋಟಗಾರಿಕೆ ಸರ್ಕಾರದ ಆದ್ಯತೆ ಪಡೆಯುವಂತೆ ಮಾಡಿದರು. ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ತೋಟಗಾರಿಕೆಯ ವಿಭಾಗಗಳನ್ನು ತೆರೆದು, ಜನ ಸಾಮಾನ್ಯರೂ ಅದರ ಬೆಳವಣಿಗೆಯಲ್ಲಿ ಆಸಕ್ತಿ ಹೊಂದುವಂತೆ ನೋಡಿಕೊಂಡರು. ಕೇವಲ ಮೈಸೂರು ಹಾಗೂ ಬೆಂಗಳೂರುಗಳನ್ನು ಮಾತ್ರ ತನ್ನ ಕಾರ್ಯಕ್ಷೇತ್ರವಾಗಿಸಿಕೊಂಡಿದ್ದ ಇಲಾಖೆ ಈಗ ತನ್ನ ಕಾರ್ಯ ಬಾಹುಳ್ಯವನ್ನು ರಾಜ್ಯಾದ್ಯಂತ ವ್ಯಾಪಿಸುವಂತೆ ನೊಡಿಕೊಂಡಿತು. ರಾಜ್ಯದಲ್ಲಿ ಲಾಲ್‌ಬಾಗ್ ಮಾತ್ರ ಸಸ್ಯೋದ್ಯಾನವಾಗಿದ್ದು ರಾಜ್ಯದಲ್ಲಿದ್ದ ಉಳಿದ ತೋಟ, ಉದ್ಯಾನಗಳು ಅದರ ಸುಪರ್ದಿನಲ್ಲಿದ್ದವು. ಅವುಗಳ ನಿರ್ವಹಣೆಯಲ್ಲಿ ವ್ಯವಸ್ಥಿತವಾದ ನಿರ್ದೇಶನಗಳಿರಲಿಲ್ಲ. ಈ ಕೊರತೆಯನ್ನು ಮನಗೊಂಡ ಜವರಾಯ ಬೆಂಗಳೂರು, ಮೈಸೂರು ಹಾಗೂ ಉಳಿದ ಜಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯ ಶಾಖೆಗಳನ್ನು ತೆರೆದು ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಹಾಗೂ ಖಾಸಗೀ ತೋಟಗಳ ಬೆಳವಣಿಗೆಗೆ ಸೂಕ್ತ ನಿರ್ದೇಶನ ದೊರೆಯುವಂತೆ ಮಾಡಿ, ರಾಜ್ಯದ ಎಲ್ಲಾ ಜಿಲ್ಲೆಗಳ ಜನರು ತೋಟಗಾರಿಕೆಯ ಲಾಭ ಪಡೆದುಕೊಳ್ಳುವಂತೆ ಮಾಡಿದರು. ಇವುಗಳ ಕೇಂದ್ರ ಸ್ಥಾನವಾಗಿ ಲಾಲ್‌ಬಾಗ್ ಅನ್ನು ಅಭಿವೃದ್ಧಿಗೊಳಿಸಿ ಅದನ್ನು ರಾಜ್ಯದ ತೋಟಗಾರಿಕೆಯ ಕೇಂದ್ರ ಸ್ಥಾನವಾಗುವಂತೆ ಮಾಡಿದರು.

ಈಗ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ನಾಗನಹಳ್ಳಿ ಕೃಷಿ ಫಾರ್ಮ ಆರಂಭವಾದ್ದದು ಇವರ ಅಧಿಕಾರಾವಧಿಯಲ್ಲಿ.ಅದರಂತೆ ಕೆಂಗೇರಿಯ ಬಳಿಯ ಹಣ್ಣಿನ ಗಿಡಗಳ ಪ್ರಯೋಗಶಾಲೆ, ಗಂಜಾಮಿನ(ಶ್ರೀರಂಗಪಟ್ಟಣ್ಣ ಬಳಿ), ಹಾಗೂ ಬೆಂಗಳೂರಿನ ಹೆಸರಘಟ್ಟ ಮತ್ತು ಹೆಬ್ಬಾಳದ ಕೃಷಿ ಕೇಂದ್ರದ ಸ್ಥಾಪನೆಯಲ್ಲಿ ಜವರಾಯರ ಪ್ರಮುಖ ಪಾತ್ರವಿದೆ. ಜವರಾಯರ ಸೇವಾ ಅವಧಿ ಮೈಸೂರಿನ ತೋಟಗಾರಿಕೆಯ, ಬಟಾನಿಕಲ್ ಗಾರ್ಡನ್‌ಗಳ ಬೆಳವಣಿಗೆಯ ಅಭೂತಪೂರ್ವ ಸಾಧನೆಯಲ್ಲಿ ಜವರಾಯ ಗಣನೀಯ ಕಾಣಿಕೆ ನಿಡಿದ್ದಾರೆ. ತಮ್ಮ ಸೇವಾವಧಿ ರಾಜ್ಯದ ಉದ್ಯಾನಗಳ ಬೆಳವಣಿಗೆಗೆ ತಮ್ಮೆಲ್ಲಾ ತಜ್ಞತೆಯ

ಲಾಭ ತಮ್ಮ ರಾಜ್ಯಕ್ಕೆ ದೊರೆಯುವಂತೆ ಮಾಡಿದ್ದು ಅವರ ಪ್ರಮುಖ ಸಾಧನೆ ಸ್ವತಂತ್ರ್ಯಪೂರ್ವ ಮೈಸೂರು ರಾಜ್ಯದ ತೋಟಗಾರಿಕೆಯ ಬೆಳವಣಿಗೆಯಲ್ಲಿ ಜವರಾಯರ ಮಹತ್ತರ ಕೊಡುಗೆ ಇದೆ.

ತಮ್ಮ ನಾಲ್ಕು ವರ್ಷಗಳ ಅಧಿಕಾರಾವದಿಯಲ್ಲಿ ಜವರಾಯ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕಗಳನ್ನು ರಾಜ್ಯದ ತೋಟಗಾರಿಕೆಯ ಕೇಂದ್ರವಾಗಿಸಿ, ಇಲ್ಲಿ ಆಸಕ್ತರಿಗೆ ತೋಟಗಾರಿಕೆಯ ತರಬೇತಿ ದೋರೆಯುವ ವ್ಯವಸ್ಥೆ ಮಾಡಿದರು. ಹೊಸ ಸಸ್ಯಗಳ ಕಸಿ ಮಾಡುವಿಕೆ, ಹೊಸ ತಳಿಗಳ ಪ್ರಯೋಗದಲ್ಲಿ ಮುಂದಿದ್ದ ಲಾಲ್‌ಬಾಗ್ ಅಂದಿನ ಸಸ್ಯಪ್ರೇಮಿಗಳ ಸ್ವರ್ಗವಾಯಿತು. ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದ ಅನೇಕ ಕಡೆಗಳಿಂದ ಅಪರೂಪದ ಪ್ರಭೇದಗಳನ್ನು ತರಿಸಿ ಅವುಗಳಿಗೆ ಸೂಕ್ತ ಆರೈಕೆ ದೊರೆಯುವಂತೆ ನೋಡಿಕೊಂಡಿದ್ದರಿಂದ, ಲಾಲ್ ಬಾಗ್ ಭಾರತದ ವಿಶಿಷ್ಟ ಸಸ್ಯ ಸಂಗ್ರಹಾಗಾರವಾಯಿತು. ಸಸ್ಯಪ್ರೇಮಿಗಳನ್ನು ಆಕರ್ಷಿಸಿ, ಅವರ ಆಸಕ್ತಿಯನ್ನು ಬೆಳೆಸಿತು.

ಮೈಸೂರ್ ಹಾರ್ಟಿಕಲ್ಚರಲ್ ಸೂಸೈಟಿಯ ಸ್ಥಾಪನೆ:

ಇಂದಿಗೆ 203ನೇ ಫಲಪುಷ್ಪ ಪ್ರದರ್ಶನ ಆಚರಿಸಿಕೊಳ್ಳುತ್ತಿರುವ ರಾಜ್ಯಮಟ್ಟದ ಫಲಪುಷ್ಪ ಪ್ರದರ್ಶನ ನಡೆಸುವ ಮೂಲಕ ನಾಡಿನ ಜನತೆಗೆ ತಮ್ಮ ಸಾಧನಗೆಳ ಪ್ರಾದರ್ಶಿಕೆ ಇದಾಗಿದ್ದೂ, ಈ ಕ್ಷೇತ್ರಗಳಲ್ಲಿ ವಿಶ್ವ ಮಟ್ಟದಲ್ಲಿ ಆಗಿರುವ ಬದಲಾವಣೆಗಳನ್ನು ಜನರಿಗೆ ತಿಳಿಯಪಡಿಸುವ ಪದ್ಧತಿ ಆರಂಭವಾದುದು ಈ ದಿನಗಳಲ್ಲೆ. ಇದೊಂದು ಉತ್ತಮ ಬೆಳವಣಿಗೆಯಾಗಿದ್ದು, ರಾಜ್ಯದ ಜನತೆಗೆ ತೋಟಗಾರಿಕೆಯುಲ್ಲಿ ಆಸಕ್ತಿ ಮೂಡುವಂತೆ ಮಾಡುವದು ಇದರ ಮುಖ್ಯ ಉದ್ಧೇಶ. ಕೇವಲ ಸರ್ಕಾರವೇ ಅಲ್ಲದೆ ಜನಸಾಮಾನ್ಯರಲ್ಲೂ ತೋಟಗಾರಿಕೆಯ ಬಗೆಗಿದ್ದ ಆಸಕ್ತಿಯನ್ನು ಬೆಳೆಸುವುದು, ಜನರಿಗೆ ಪ್ರಾದರ್ಶಿಕೆ, ತರಬೇತಿ, ಸಸ್ಯಗಳ ಉತ್ಪತಿಯ ಬಗ್ಗೆ ತಿಳುವಳಿಕೆ ನೀಡುವ ಅನುಕೂಲತೆಗಳನ್ನು ಇಲಾಖೆ ಕಲ್ಪಿಸಲಾರಂಬಿಸಿತು. ವರ್ಷಕ್ಕೊಮ್ಮೆ ತನ್ನೆಲ್ಲಾ ಬಣ್ಣ ಹಾಗೂ ವೈವಿದ್ಯತೆಯ ಪ್ರದರ್ಶನಕ್ಕೆ ಸಜ್ಜಾಗುತ್ತಿದ್ದ ಲಾಲ್ ಬಾಗನ ವಾರ್ಷಿಕ ಪ್ರದರ್ಶನ ಅತ್ಯಂತ ಫಲಪ್ರದವಾಗಿ ಸಾವಿರಾರು ಜನರನ್ನು ಆಕರ್ಷಿಸುತಿತ್ತು.

ಈ ಉದ್ಧೇಶ ಫಲ ನೀಡಿ ಸ್ವಲ್ಪ ವರ್ಷಗಳಲ್ಲಿ ವೈಸೂರ್ ಹಾರ್ಟಿಕಲ್ಚರಲ್ ಸೋಸ್ಯೆಟಿ ಆರಂಭಗೊಂಡು ಜನರು ತಮ್ಮ ಮನೆಗಳ ಸುತ್ತಲ ಖಾಲಿ ಜಾಗವನ್ನು ಸೂಕ್ತವಾಗಿ ಬಳಸಿಕೊಂಡು, ಅದರಿಂದ ಲಾಭ ಪಡೆಯುವಂತಾಯಿತು.

ಲಾಲ್‌ಬಾಗ್ ಅಲ್ಲದೆ ರಾಜ್ಯಾದ್ಯಾಂತ ಹಲವಾರು ಉದ್ಯಾನಗಳನ್ನು ಅಭಿವೃದ್ದಿ ಪಡಿಸಲು ನಿರ್ಧರಿಸಿದ ಸರ್ಕಾರ ಅನೇಕ ಕಡೆಗಳಲ್ಲಿ ತೋಟಗಾರಿಕೆಯ ಪ್ರಯೋಗಶಾಲೆಗಳನ್ನು, ಕೇಂದ್ರಗಳನ್ನು ತೆರೆಯಲು ಜವರಾಯ ಕಾರಣರು. ಮೊದಲ ಮಹಾ ಯುದ್ಧ ವು ಮುಗಿದು ಶಾಂತಿ ಸಂಧಾನವಧೆರ್ಪಟ್ಟ ಮೇಲೆ ವಾತಾವರಣ ತಿಳಿಗೊಂಡಿದ್ದರಿಂದ ಗೃಹ ಬಂಧನದಲ್ಲಿದ್ದ ಕೃಂಬಿಗಲ್ ಮತ್ತೊಮ್ಮೆ ಲಾಲ್‌ಬಾಗ್‌ನ ನಿರ್ದೇಶಕರಾದರು. ಈ ಅವಕಾಶ ಬಳಸಿಕೊಂಡ ಜವರಾಯ ಉನ್ನತ ತರಬೇತಿಗೆ ತಮ್ಮನ್ನು ಇಂಗ್ಲೇಂಡಿಗೆ ಕಳುಹಿಸಬೇಕೆಂಬ ಮನವಿಗೆ ಮಹಾರಾಜರು ಸೂಕ್ತವಾಗಿ ಸ್ಪಂದಿಸಿದರು.

ಲಾಲ್‌ಬಾಗ್‌ನ ಹಾಗೂ ರಾಜ್ಯ ತೋಟಗಾರಿಕೆ ಇಲಾಖೆಯ ಮುಖ್ಯಸ್ಥರಾಗಿ ಕೃಂಬಿಗಲ್ ರ ಅನುಪಸ್ಥಿತಿಯಲ್ಲಿ ನಾಲ್ಕು ವರ್ಷಗಳ ತೃಪ್ತಿಕರವಾದ ಸೇವೆ ಸಲ್ಲಿಸಿದ್ದರಿಂದ ಜವರಾಯ ತನ್ನ ಕ್ಷೇತ್ರದಲ್ಲಿ ಮತ್ತಷ್ಟು ಪರಿಣತಿ ಹೆಚ್ಚಿಸಿಕೊಳ್ಳಲು ಮಹಾರಾಜರ ಅನುಮತಿಯಂತೆ ಲಂಡನ್ನಿನ ಪ್ರಸಿದ್ಧ ಕ್ಯೂ ಬಟಾನಿಕಲ್ ಗಾಡರ್ನ್‌ನ ಕಾಲೇಜ್ ಸೇರಿದರು. ಆಗ ಕ್ಯೂ ಬಟಾನಿಕಲ್ ಗಾರ್ಡನ್ ಪ್ರಪಂಚದ ಸಸ್ಯೋದ್ಯಮ ಕ್ಷೇತ್ರದ ಪ್ರಖ್ಯಾತ ತಜ್ಞರನ್ನು ತಯಾರು ಮಾಡಿದ ಸಂಸ್ಥೆ. ಇಲ್ಲಿ ಪದವಿ ಪಡೆದ ಪ್ರಥಮ ಭಾರತೀಯ ಎಂಬ ಕೀರ್ತಿಯೂ ಜವರಾಯರಿಗಿದೆ. ಜವರಾಯ ಅಲ್ಲಿದ್ದಷ್ಟು ಕಾಲ ಅಲ್ಲಿನ ವಿವಿಧ ತರಬೇತಿಗಳಲ್ಲಿ ಪಾಲ್ಗೊಂಡು, ಸಾಕಷ್ಟು ಪರಿಣತಿಯನ್ನು ಪಡೆದರು. ಅಲ್ಲಿನ ತಜ್ಞರ ಸಹವಾಸ, ಪ್ರಯೋಗಶೀಲತೆಗಿರುವ ಅವಕಾಶ ಇವರ ವಿಚಾರವಂತಿಕೆಯನ್ನು ಹೆಚ್ಚಿಸಿತು. ಕ್ಯೂ ಗಾರ್ಡನ್ ಅಂದಿನ ವೈವಿದ್ಯಮಯ ಹೂ, ಹಣ್ಣಿನ ಗಿಡಗಳ, ವಿವಿಧ ಸಸ್ಯಗಳ ವಿವಿಧ ತಳಿಗಳ ತಯಾರಿಕೆಗೆ, ಕಸಿ ಪದ್ಧತಿಗೆ ಹೆಸರಾಗಿದ್ದರಿಂದ ಜವರಾಯನವರಿಗೆ ವಿಶ್ವದ ಸಸ್ಯೋದ್ಯಮಗಳ ಪರಿಚಯವಾದಂತಾಯಿತು. ಈ ಪರಿಣತಿಗೆ ಇಂಬು ಕೊಟ್ಟಂತೆ ಸಸ್ಯ ವಿಜ್ಞಾನಿಗಳ ಸಹವಾಸ, ಪುಸ್ತಕ ಭಂಡಾರದ ಉಪಯೋಗ ಜವರಾಯನವರನ್ನು ಶ್ರೇಷ್ಠ ಸಸ್ಯೋದ್ಯಮಿಯಾಗಿಸಿದ್ದಲ್ಲದೆ ಇವರ ಪರಿಣತಿಗೆ ದೊರೆತ ಮಾನ್ಯತೆಯಿಂದ ಜವರಾಯನವರಿಗೆ ಪ್ರತಿಷ್ಠಿತ ರಾಯಲ್ ಸೊಸೈಟಿ ಆಫ್ ಹಾರ್ಟಿಕಲ್ಚರ್‌ನ ಸದಸ್ಯತ್ವ ದೊರಕಿತು. ಈ ಸದಸ್ಯತ್ವ ಜವರಾಯನವರನ್ನು ವಿಶ್ವ ಸಸ್ಯೋದ್ಯಮಿಗಳ ಸಾಲಿನಲ್ಲಿ ಸೇರಿಸಿತು. ಈ ಅರ್ಹತೆ, ಗೌರವ ಪಡೆದ ಪ್ರಥಮ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿಸಿತು. ಇದು ಅವರ ವೃತ್ತಿ ಕೌಶಲ್ಯ, ಆಸಕ್ತಿ ಹಾಗೂ ಪರಿಣತಿಗಳಿಗೆ ಸಂದ ಗೌರವ. ಜವರಾಯನವರು ತಮ್ಮ ತಜ್ಞತೆಗೆ ತಕ್ಕಂತೆ ಬರೆದ ಹಲವಾರು ಲೇಖನಗಳು ಅಂದಿನ ಹೆಸರಾಂತ ಅಂತರ್‌ರಾಷ್ಟ್ರೀಯ ಜರ್ನಲ್‌ಗಳಲ್ಲಿನ ಪ್ರಕಟಗೊಂಡವು. ಅವರ ಆಸಕ್ತಿ, ಕಾರ್ಯ

ಚಟುವಟಿಕೆ ಒಂದೇ ಕ್ಷೇತ್ರದಲ್ಲಿದ್ದರಿಂದ ಜವರಾಯ ಭಾರತದ ಪ್ರಥಮ ತೋಟಗಾರಿಕಾ ತಜ್ಞರೆಂಬ ಕೀರ್ತಿಗೆ ಅರ್ಹರಾಗಿದ್ದು ಆಶ್ಚರ್ಯವಲ್ಲ.

ಅಲ್ಲಿಂದ ಹಿಂದಿರುಗಿದ ಜವರಾಯನವರನ್ನು ಮಹಾರಾಜರು ಮೈಸೂರಿನ ಅರಮನೆಗಳ ತೋಟಗಳ ಮುಖ್ಯಸ್ಥರಾಗಿ ನೇಮಿಸಿದರು. ಮೈಸೂರಿನಲ್ಲಿ ಅವರ ಎರಡನೇ ಅವಧಿಯ ಸೇವೆ ಮತ್ತಷ್ಟು ಫಲಪ್ರಧವಾಗಿದ್ದು ಮೈಸೂರಿನ ಹಲವು ತೋಟಗಳ ಅಭಿವೃದ್ಧಿಗೆ ಕಾರಣವಾಯಿತು. ಸದಭಿರುಚಿಯ ಮಹಾರಾಜರ ಅನಿಸಿಕೆಗೆ ತಕ್ಕಂತೆ ಕಾರ್ಯ ನಿರ್ವಹಿಸುವುದು ಸುಲಭವಾಗಿರಲಿಲ್ಲ. ಅರಮನೆಗಳ ಸುತ್ತಲೂ ಇದ್ದ ಖಾಲಿ ಜಾಗವನ್ನು ಫಲ ನೀಡುವ ಹಣ್ಣಿನ, ಹೂಗಳ ತೋಟವಾಗಿಸುವ ಬಯಕೆ ಮಹಾರಾಜರದು, ಅವರನ್ನು ಬೆಂಬಲಿಸಿದ ಜವರಾಯ, ಮೈಸೂರಿನ ಎಲ್ಲ ಅರಮನೆಗಳ ಸುತ್ತಲೂ ಹಣ್ಣಿನ ಮರಗಳನ್ನು ನೆಡೆಸಿದ್ದಲ್ಲದೆ ಅವು ಕಾಲಕಾಲಕ್ಕೆ ಫಲ ನೀಡುವಂತೆ ಮತ್ತು ಅರಮನೆಗೂ ವರಮಾನ ಬರುವಂತೆ ಮಾಡಿದರು.

ಅವರ ಪ್ರಮುಖ ಸಾಧನೆಗಳು ಇಂತಿವೆ:

ಮೈಸೂರಿನ ಲಲಿತ ಮಹಲ್ ಅರಮನೆಯ ಸುತ್ತಲೂ ಲಲಿತಾದ್ರಿವನದ ನಿರ್ಮಾಣ. ಲಲಿತಾದ್ರಿ ತೋಟ ಅರಮನೆಗಳ ತೋಟದಲ್ಲೆ ಉತ್ತಮವೆಂಬ ಖ್ಯಾತಿ ಪಡೆದು ಹಲವು ವಿಧದ ಹಣ್ಣಿನ, ಹೂಗಳ ಪ್ರಬೇಧಗಳನ್ನೊಳಗೊಂಡು ಆಕರ್ಷಕವಾಯಿತು,

ಅರಮನೆಯ ತಾರಸಿಯ ಮೇಲೆ ಸುಂದರ ಹೂಗಿಡಗಳ ಟೆರೆಸ್ ಗಾರ್ಡನ್‌ನ್ನು ನಿರ್ಮಿಸಿದ್ದು ಅದೊಂದು ವಿಶಿಷ್ಟ ಪ್ರಯೋಗವಾಗಿತ್ತು. ಮೈಸೂರಿನ ಬೀದಿಗಳು ಸರ್ವ ಋತುಗಳಲ್ಲೂ ಹೂಗಳಿಂದ ಅಲಂಕೃತವಾಗಿರುವಂತೆ ಯೋಜಿಸಲಾಗಿತ್ತು. ಪ್ರತಿಯೊಂದು ಋತುವಿಗೂ ಮೈಸೂರಿನ ಅರಮನೆಗಳು ಮಾತ್ರವಲ್ಲದೆ ಬೀದಿಗಳು ಬಣ್ಣ ಬಣ್ಣದ ಹೂ ಬಿಡುವ ಮರಗಳಿಂದ ತುಂಬಿರುವಂತೆ ಮಾಡಿದರು. ವಿಶೇಷವಾಗಿ ದಸರಾ ಸಮಯದಲ್ಲಿ ಮೈಸೂರಿನ ಬೀದಿಗಳು ಆಕರ್ಷಕ ಹೂಗಳಿಂದ ತುಂಬಿರುವಂತೆ ಯೋಜಿಸಲಾಯಿತು. ಹಗಲಲ್ಲಿ ಬಣ್ಣಬಣ್ಣದ ಹೂಗಳ ಅಲಂಕಾರ, ರಾತ್ರಿಯ ವೇಳೆ ಬಣ್ಣಬಣ್ಣದ ವಿದ್ಯುತ್ ದೀಪಾಲಂಕಾರ ಹೊಂದಿದ್ದ ರಾಜಧಾನಿ ಸಾಕ್ಷಾತ ಇಂದ್ರಲೋಕದಂತೆ ಕಾಣುತ್ತಿತ್ತು. ಅದ್ದರಿಂದ ಮೈಸೂರಿನ ಆಕರ್ಷಣೆ ಮತ್ತಷ್ಟು ಹೆಚ್ಚಾಗಿ ಈ ಉದ್ಯಾನಗಳ ನಗರ ಪ್ರವಾಸಿಗಳ ಸ್ವರ್ಗವೆಂಬ ಕೀರ್ತಿಗೆ ಭಾಜನವಾಯಿತು.

ಕ್ರೆಂಬಿಗಲ್‌ರ ನಿವೃತ್ತಿಯ ನಂತರ ಜವರಾಯ ಪೂರ್ಣ ಪ್ರಮಾಣದ ಸೂಪರಿಂಟೆಂಡೆಂಟ್ ಆಗಿ ನೇಮಕಗೊಂಡ ನಂತರ ರಾಜ್ಯದ ತೋಟಗಾರಿಕೆಯ ಬೆಳವಣಿಗೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಈ ವೇಳೆಗಾಗಲೆ ಅವರು ವಿದೇಶದಲ್ಲಿ ಗಳಿಸಿದ್ದ ಪರಿಣಿತಿಯ ಪೂರ್ಣ ಲಾಭ ರಾಜ್ಯಕ್ಕಾಯಿತೆಂದರೆ ತಪ್ಪಿಲ್ಲ. ಮೈಸೂರು ರಾಜ್ಯದ ತೋಟಗಾರಿಕಾ ಇಲಾಖೆಯ ಪ್ರಥಮ ಭಾರತೀಯ ಡೈರೆಕ್ಟರ್ ಆಗಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ದೊರೆತ ಅವಕಾಶದ ಸದುಪಯೋಗ ಪಡಿಸಿಕ್ಕೊಂಡ ಜವರಾಯ ಮಹಾರಾಜರು ತಮ್ಮ ಮೇಲಿಟ್ಟಿದ್ದ ನಂಬಿಕೆಯನ್ನು ಹಾಗೂ ರಾಜ್ಯದ ತೋಟಗಾರಿಕೆಯ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಲು ನಿರ್ಧರಿಸಿದ್ದರು.

ದೆಹಲಿಯ ಸೌಂದರ್ಯೀಕರಣಕ್ಕೆ ಜವರಾಯರ ನಿಡಿದ ಅಮೂಲ್ಯ ಕೊಡುಗೆಯನ್ನು ಗಮನಿಸಿದ

ತೋಟಗಾರಿಕೆಯ ಪ್ರಥಮ ಭಾರತೀಯ ಡೈರೆಕ್ಟರ್ ಆಗಿ ಸೇವೆ 1932–44.

ಲಾಲ್‌ಬಾಗ್‌ನಲ್ಲಿ ಅಪೂರ್ವವಾದ ಹಲವಾರು ಸಸ್ಯಗಳನ್ನು ದೇಶ ವಿದೇಶಗಳಿಂದ ತರಿಸಿ, ಅವುಗಳಿಗೆ ಸೂಕ್ತವಾದ ಹವಾಮಾನ ದೊರೆಯುವಂತೆ ಮಾಡಿದರು. ಲಾಲ್‌ಬಾಗ್ ಹೂಗಿಡಗಳ ಆಕರ್ಷಣೆಯೊಂದಿಗೆ ಅಪರೂಪದ ಗಿಡಮರಗಳ ಪ್ರಭೇಧಗಳನ್ನು ಹೊಂದಿ ಪ್ರಸಿದ್ಧ ಬಟಾನಿಕಲ್ ಗಾರ್ಡನ್ ಆಯಿತು. ಅದರೊಂದಿಗೆ ಲಾಲ್‌ಬಾಗ್‌ನ ವಿಸ್ತರಣೆ, ಅದರ ಸೌಂದರ್ಯ ಹೆಚ್ಚಿಸಲು ಹಲವಾರು ರೀತಿಯ ಆಕಾರದ ಕ್ರೋಟ್‌ನ್‌ಗಳು, ವಿಶಿಷ್ಟ ಆಕಾರದ ಪ್ರಬೇಧಗಳ ಮರಗಳ ಬೆಳವಣಿಗೆ ಲಾಲ್‌ಬಾಗ್‌ಗೆ ವಿಶಿಷ್ಟ ಸ್ಥಾನ ದೊರಕಿಸಿತು. ಆವರಾಯರ ಸೇವೆಯ ಅವಿರತ ಭಾಗವಾದ ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳ ಬೆಳವಣಿಗೆಯೊಂದಿಗೆ ಜವರಾಯುರ ವೃತ್ತಿ ಜೀವನದ ಏಳಿಗೆಯನ್ನು ಸಮೀಕರಿಸಬಹುದು.

ಲಾಲ್‌ಬಾಗ್ ಮಾತ್ರ ಮೈಸೂರಿನ ಹೆಮ್ಮೆಯ ತೋಟಗಾರಿಕಾ ಕೇಂದ್ರವಾಗಿರದೆ, ಜನಮನಕ್ಕೆ ಹತ್ತಿರವಾದ ಮತ್ತೊಂದು ಉದ್ಯಾನ ಕಬ್ಬನ್ ಪಾರ್ಕ್. ಇಂದು ಸದಾ ಜನದಟ್ಟಣೆ, ಅಧಿಕಾರದ ಕೇಂದ್ರ ಸ್ಥಳದ ಮಧ್ಯದಲ್ಲಿದ್ದರೂ ತನ್ನ ಸಸ್ಯರಾಶಿ ಪ್ರಶಾಂತ ಹವೆ, ವಾಯು ಮಾಲೀನ್ಯಕ್ಕೆ ಉತ್ತರವೆಂಬಂತ್ತಿರುವ ಕಬ್ಬನ್‌ಪಾರ್ಕ್ ಬೆಂಗಳೂರಿನ ಮತ್ತೊಂದು ಸುಂದರ ತೋಟವಾಗಿ ಬೆಳೆದು ಹಲವಾರು ರೀತಿಯ ಸಸ್ಯಗಳ ಬೆಳವಣಿಗೆಯಿಂದ ಬೆಂಗಳೂರನ್ನು ಭಾರತದ ಉದ್ಯಾನಗಳ ನಗರವೆಂಬ ಕೀರ್ತಿ ತಂದುಕೊಟ್ಟಿತು. ಇದರ ಬೆಳವಣಿಗೆಯಲ್ಲಿ

ಜವರಾಯರದು ಪ್ರಮುಖ ಪಾತ್ರ. ಕಬ್ಬನ್ ಪಾರ್ಕ್ ಮೈಸೂರಿನ ಸರ್ವಾಂಗೀಣ ಏಳಿಗೆಗೆ ಕಾರಣರಾಗಿದ್ದ ಮಾರ್ಕ್ ಕಬ್ಬನ್‌ರ ಸ್ಮರಣಾರ್ಥ ಸ್ಥಾಪಿಸಲಾದ ಉದ್ಯಾನ. ತೋಟಗಾರಿಕೆಯಲ್ಲಿ ಲಾಲ್‌ಬಾಗ್‌ಗಿದ್ದ ಆದ್ಯತೆ, ಬೇರೆ ಉದ್ಯಾನಗಳಿಗಿಲ್ಲ ಎಂಬ ಟೀಕೆಯಿಂದ ಹೊರಬರಲು ನಿರ್ಧರಿಸಿದ ಜವರಾಯ ತೋಟಗಾರಿಕೆ ಇಲಾಖೆಯ ನಿರ್ದೇಶಕರಾದಾಗ ಕಬ್ಬನ್ ಪಾರ್ಕ್‌ನ ಅಭಿವೃದ್ಧಿಗೆ ವಿಶೇಷ ಗಮನ ನೀಡಿದರು.

ಕಬ್ಬನ್‌ಪಾರ್ಕ್‌ನಲ್ಲಿನ ಸಸ್ಯರಾಶಿಯನ್ನು ವಿಶೇಷಯಾಗಿ ಯೋಜಿಸಿ ಇಲ್ಲಿ ಅಪರೂಪದ ವೃಕ್ಷಗಳ ಪ್ರಬೇಧಗಳಿದ್ದು, ಅದು ತನ್ನ ನೈಜ್ಯ ಸೌಂದರ್ಯವನ್ನು ಉಳಿಸಿಕೊಳ್ಳುವಂತೆ ಅದರ ನಕ್ಷೆಯನ್ನು ರೂಪಿಸಲಾಯಿತು. ಇಲ್ಲಿ ಸಾರ್ವಜನಿಕರ ಮನೋರಂಜನೆಗೆ, ಅದರಲ್ಲೂ ಮುಖ್ಯ ಮಕ್ಕಳ ಸಂತಸದ ಕಲರವಕ್ಕೆ ಹೆಚ್ಚಿನ ಆಸ್ಪದ ನೀಡಲಾಯಿತು. ವಿದೇಶಗಳಿಂದ ತರಿಸಿದ ಅಪರೂಪದ ಸಸಿಗಳನ್ನು ಬೆಳೆಸಿ ಅವುಗಳು ಇಲ್ಲಿ ಪ್ರಕೃತಿಯೊಂದಿಗೆ ಹೊಂದಿಕೊಳ್ಳುವಂತಹ ತಂಪಾದ ಅಹ್ಲಾದಕರ ವಾತಾವರಣವಿರುವಂತೆ ಯೋಜಿಸಿಲಾಗಿದೆ. ಬೆಂಗಳೂರಿನ ಲಾಲ್‌ಬಾಗ್ ಬಟಾನಿಕಲ್ ಗಾರ್ಡನ್ ಆದರೆ, ಕಬ್ಬನ್ ಪಾರ್ಕ್ ವಿಶಿಷ್ಟವಾದ ಸಸ್ಯೋದ್ಯಾನ ಹಾಗೂ ಮನೋರಂಜನಾ ತಾಣವಾಗುವಂತೆ ಆಯೋಜಿಸಲಾಯಿತು. ಇಂದಿನ ದಿನಗಳಲ್ಲಿ ಶೀರ್ಘವಾಗಿ ಬೆಳೆಯುತ್ತಿರುವ ವಾಯು ಮಾಲಿನ್ಯದ ತಡೆಗೆ ಬಹು ಮುಖ್ಯ ಕಾಣಿಕೆ ಸಲ್ಲಿಸುತ್ತಿರುವ ಈ ಉದ್ಯಾನಗಳು ಅಂದಿನ ಅಳರಸರ, ಜವರಾಯನಂತಹವರ ಅಮೂಲ್ಯ ಸೇವೆಯ ಫಲ.

ಇವುಗಳೊಂದಿಗೆ ಬೆಂಗಳೂರಿನ ಹಲವು ಬಡಾವಣೆಗಳಲ್ಲಿ ಸುಂದರ ಉದ್ಯಾನಗಳ ಬೆಳವಣಿಗೆಗೆ ಅವಕಾಶ ಕಲ್ಪಿಸಲಾಯಿತು. ಹೊಸದಾಗಿ ರಚಿತವಾದ ಪ್ರತಿಯೊಂದು ಬಡಾವಣೆ, ವಸತಿ ಸಮುಚ್ಛಯ ತನ್ನ ಕೇಂದ್ರಭಾಗದಲ್ಲಿ ಉದ್ಯಾನವನ್ನು ಹೊಂದಿರಬೇಕೆಂದು ಶಾಸನ ರೂಪಿಸಲಾಯಿತು. ಬೆಂಗಳೂರಿನ ಹಳೆಯ ಹಾಗೂ ಹೋಸ ಬಡವಣೆಗಳಲ್ಲಿ ಉದ್ಯಾನಗಳ ಬೆಳವಣಿಗೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲು ಅವಕಾಶ ಕಲ್ಪಿಸಿದ್ದು ಅವರ ಮತ್ತೊಂದು ಸಾಧನೆ. ಜವರಾಯರ ಆಸಕ್ತಿಯ ಫಲ, ಹಾಗೂ ಹಾರ್ಟಿಕಲ್ಚರಲ್ ಸೊಸೈಟಿಯ ಕಾರ್ಯ ವಿಸ್ತರಣೆಯಿಂದಾಗಿ ಅನೇಕ ಸುಂದರ ಉದ್ಯಾನಗಳು ಬೆಳವಣಿಗೆ ಕಂಡವು. ಅದ್ದರಿಂದ ಬೆಂಗಳೂರು ಉದ್ಯಾನಗಳ ನಗರಿ ಎಂಬ ಕೀರ್ತಿಗೆ ಬಾಜನವಾಯಿತು.

ಬೃಂದಾವನ್ ಗಾರ್ಡನ್: ಇಂದು ಕನಾಟಕದ ಪ್ರಸಿದ್ಧ ಬೃಂದಾವನ್ ಗಾರ್ಡನ್‌ನ ಸ್ಥಾಪನೆ ರಾಜ್ಯಕ್ಕೆ ಜವರಾಯರ ಪ್ರಮುಖ ಕೊಡುಗೆ. 1933ರಲ್ಲಿ ದಿವಾನರಾದ ಮಿರ್ಜಾರ ಆಸಕ್ತಿಯ ಹಾಗೂ ಜವರಾಯರ ನಿಷ್ಣಾತೆಯ ಫಲವಾಗಿ ರೂಪಗೊಂಡದ್ದು ಕನ್ನಂಬಾಡಿಯ ಕೆಳಗಿನ ಸುಂದರ ಬೃಂದಾವನ.

ಆಣೆಕಟ್ಟೆಯ ಕೆಳಗಿನ ವಿಸ್ತಾರವಾದ ಬಯಲನ್ನು ಸುಂದರವಾದ ಉದ್ಯಾನವಾಗಿಸುವುದು ಮಿರ್ಜಾರ ಕನಸು. ಆ ಕನಸ್ಸಿಗೆ ನೀರೆರದು ಪೋಷಿಸಿದವರು ಜವರಾಯ. ಕನ್ನಂಬಾಡಿಯ ಕೆಳಗಿನ ವಿಸ್ತಾರ ಬಯಲನ್ನು ಆಕರ್ಷಕ ತೋಟವಾಗಿಸಲು ಜವರಾಯ ರವರಿಗೆ ತಮ್ಮ ತಜ್ಞತೆಗೆ ತಕ್ಕಂತೆ ಅದನ್ನು ಭೂಲೋಕದ ಭವ್ಯ ತೋಟವಾಗಿಸುವ ಉತ್ಸುಕತೆ. ಅದಕ್ಕೆ ಮಿರ್ಜಾರ ಸಂಪೂರ್ಣ ಒತ್ತಾಸೆ. ಬಹುಶಃ ಜವರಾಯರ ಸಸ್ಯೋದ್ಯಮದ ಪೂರ್ಣ ಪ್ರಮಾಣದ ಬೆಳವಣಿಗೆಗೆ, ಅವರ ಸುಂದರ ಕನಸುಗಳಿಗೆ ಆವಿಷ್ಕಾರ ದೊರೆತದ್ದು ಬೃಂದಾವನ ತೋಟದಲ್ಲಿ.

ಎರಡು ಬೆಟ್ಟಗಳ ನಡುವೆ ನಿರ್ಮಿಸಲಾಗಿರುವ ಅಣೆಕಟ್ಟೆಯ ಮುಂದಿನ ಇಳಿಜಾರು, ಸುತ್ತಲು ನೀರಿನಿಂದಾವೃತವಾದ ಬಯಲು ಅವರ ಕನಸುಗಳಿಗೆ ಮತ್ತಷ್ಟು ಪ್ರೇರಣೆಯಾಗಿತ್ತು. ಸೌಂದರ್ಯೋಪಾಸಕರಾದ ಮಹಾರಾಜರು, ಕನಸುಗಾರ ದಿವಾನ್ ಮಿರ್ಜಾ ಹಾಗೂ ತಮ್ಮೆಲ್ಲಾ ಪರಿಣತೆಯನ್ನು ಧಾರೆಯೆರೆಯಲು ಸಿದ್ಧರಿದ್ದ ಜವರಾಯ ಅಪರೂಪದ ತ್ರಿವೇಣಿ ಸಂಗಮ. ಇವರ ಕನಸುಗಳ, ಯೋಚನಾ ಲಹರಿಯ ಫಲಶೃತಿಯೇ ಸುಂದರ ಬೃಂದಾವನ್ ಗಾರ್ಡನ್.

ಹಂತ ಹಂತವಾಗಿ ಏರುವ ಆ ಬರಡು ಭೂಮಿಯಲ್ಲಿ ದೇವಲೋಕದ ಭ್ರಮೆಯನ್ನು ಹುಟ್ಟಿಸುವ, ಇಂದ್ರನ ಬೃಂದಾವನವನ್ನು ನಾಚಿಸುವ ತೋಟದ ಸೃಷ್ಟಿಯ ಕಾರಣಕರ್ತ ಹಿರಳ್ಳಿ ಜವರಾಯ. ಅಲ್ಲಿನ ಒಂದಿಂಚೂ ಭೂಮಿಯೂ ವ್ಯರ್ಥವಾಗದಂತೆ ಸುತ್ತಲೂ ಬೃಹದಾಕಾರದ ವೃಕ್ಷಗಳ ಬೆಳವಣಿಗೆಯಿಂದ ಸದಾ ತಂಪಾದ ಹವೆ. ನೆರಳು ಇರುವಂತೆ ಮರಗಳಿಂದ ಆವರಣಗೊಂಡ ಸುಂದರ ಹೂರಾಶಿ ಅಲ್ಲಿರುವಂತೆ ಈ ತೋಟವನ್ನು ಯೋಜಿಸಲಾಗಿದೆ. ತರತರದ ಬಣ್ಣಗಳ ಹೂಗಿಡಗಳು, ಸದಾ ಹಸಿರಿನಿಂದ ಕಂಗೊಳಿಸುವ ಮರಗಳು, ಎಲ್ಲಾ ಕಾಲದಲ್ಲೂ ಹೂವಿನಿಂದ ತುಂಬಿರುವಂತೆ ಈ ಪುಷ್ಪಕಾಶಿಯನ್ನು ಆಯೋಜಿಸಲಾಗಿದೆ. ಹಗಲಲ್ಲಿ ಹೂಗಳ ರಾಶಿ, ಜುಳುಜುಳು ಹರಿಯುವ ಸಣ್ಣಪುಟ್ಟ ಕಾರಂಜಿಗಳು ಹಗಲಿನಲ್ಲಿ ಮನೋಲ್ಲಾಸಕರವಾಗಿದ್ದರೆ, ರಾತ್ರಿಯ ಹೊತ್ತಿನ ಪ್ರೇಕ್ಷಕರಿಗೆ ಸುತ್ತಲೂ ಬಣ್ಣಬಣ್ಣದ ಕಾರಂಜಿಗಳು ವಿದ್ಯುದ್ ದೀಪಗಳಿಂದ ಅಲಂಕೃತವಾದ ಬೃಂದಾವನ ದೇವಲೋಕದ ಬೃಂದಾವನವನ್ನು ಮೀರಿಸುವಂತಿದ್ದು. ಅದರ ಆಕರ್ಷಣೆಯಿಂದ ದೇಶವಿದೇಶಿಗಳ ಪ್ರವಾಸಿಗರ ಮೆಚ್ಚಿನ ತಾಣವಾಯಿತು. ಬೆಳವಣಿಗೆಯ ಹಂತದಲ್ಲೇ ಜನರ ಪ್ರೋತ್ಸಾಹಕರ

ಮೆಚ್ಚುಗೆಗೆ ಪಾತ್ರವಾದರೆ, ಜವರಾಯರ ಪ್ರಯತ್ನ ವಿಫಲವಾಗಲಿಲ್ಲ ಅದು ಪೂರ್ಣಗೊಂಡನಂತರ ದೇಶವಿದೇಶ ಪ್ರವಾಸಿಗರನ್ನು ಮಂತ್ರಮುಗ್ಧರಾಗಿಸುತ್ತಾ ಆ ಮೂಲಕ ತಮ್ಮ ಜನಕನಿಗೆ ಪ್ರವಾಸಿಗರು ಮನಃಪೂರ್ವಕ ನಮನ ಸಲ್ಲಿಸುವಂತೆ ಮಾಡಿದೆ.

ಈ ಸುಂದರ ಉದ್ಯಾನದ ಕೆಳಭಾಗವನ್ನು ಪಾಳು ಬಿಡದೆ ಅದನ್ನು ಉಪಯುಕ್ತವಾದ ಸಸ್ಯೋದ್ಯಮವಾಗಿಸಿದರು. ಅಲ್ಲಿ ತೋಟಗಾರಿಕೆಯ ಪ್ರಯೋಗ ಶಾಲೆಯನ್ನು ಸ್ಥಾಪಿಸಿ ಸುತ್ತಲಿನ ರೈತ ಸಮುದಾಯಕ್ಕೆ ತರತರದ ಹಣ್ಣಿನ ಸಸಿಗಳನ್ನು ಸರಬರಾಜು ಮಾಡುವದಲ್ಲದೆ, ಅದು ಕೇವಲ ಸುಂದರ ಉದ್ಯಾನವಾಗಿರುವದಲ್ಲದೆ ಸುತ್ತಲಿನ ರೈತ ಸಮೂಹಕ್ಕೆ ಅರಿವು ಮೂಡಿಸುವ, ಸಲಹೆ ನಿಡುವ ಜವಾಬ್ದಾರಿಯನ್ನು ಹೊಂದುವಂತೆ ನೋಡಿಕೊಳ್ಳಲಾಯಿತು ವಿವಿಧ ಬೆಳೆಗಳ ಬಗ್ಗೆ, ಪ್ರಾಕ್ಷಿಕತೆಗಳ ಮೂಲಕ ಅವರು ತಮ್ಮ ಕೃಷಿ ಲಾಭಕಾರಿಯಾಗುವಂತೆ ನೋಡಿಕೊಂಡದ್ದು ಅವರ ದೂರದರ್ಶಿತ್ವಕ್ಕೆ, ರೈತ ಸಮುದಾಯಗಳ ಕಷ್ಟನಷ್ಟಗಳಿಗೆ ಸ್ಪಂದಿಸುವ ಪರಿ ಇದಾಗಿತ್ತು. ಕೆ.ಆರ್.ಎಸ್ ಕ್ರಮೇಣವಾಗಿ ರೈತಸ್ನೇಹಿ ಸಂಸ್ಥೆಯಾಗಿ ಬೆಳೆದು ಅಲ್ಲಿನ ಪ್ರಯೋಗಳ ಪ್ರಯೋಜನ ರೈತರಿಗೆ ದೊರಕುವಂತಾಗಿ ಅಲ್ಲಿನ ಅಧಿಕಾರಿಗಳು ರೈತ ಬಾಂಧವರಾದರು. ವಿಶೇಷವಾಗಿ ಅಲ್ಲಿ ತೆಂಗಿನ ಬೆಳೆಯ ಬಗ್ಗೆ ನಡೆದ ಪ್ರಯೋಗಗಳು, ಸೀಬೆ, ಸಪೋಟಾ, ಮುಂತಾದ ಹಣ್ಣಿನ ಗಿಡಗಳ ತಳಿಗಳು ಸುತ್ತಲಿನ ರೈತರಿಗೆ ಮಹದುಪಕಾರ ಮಾಡಿವೆ. ಈ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಸುತ್ತಮುತ್ತಲಿನ ಜನರಲ್ಲದೆ, ರಾಜ್ಯದ ವಿವಿಧ ಭಾಗಗಳ ಜನರು ಇಲ್ಲಿನ ಕೃಷಿ ಪ್ರಯೋಗಗಳ ಲಾಭ ಪಡೆದದ್ದು ಅದೆಷ್ಟು ಲಾಭಕಾರಿಯಾಗಿತ್ತನ್ನಲೊಂದು ಉದಾಹರಣೆ.

ನಾಗನಹಳ್ಳಿಯ ಫಾರ್ಮನಲ್ಲಿ ನಡೆಯುತ್ತಿದ್ದ ಕೃಷಿ ಪ್ರಯೋಗಗಳು ಉತ್ತಮ ಫಲಿತಾಂಶ ನೀಡಿದ್ದರಿಂದ ಪ್ರೇರಿತರಾದ ಜವರಾಯ ಬೆಂಗಳೂರಿನ ಬಳಿ ಹೆಸರುಘಟ್ಟದಲ್ಲಿ ಮತ್ತೊಂಧು ಕೃಷಿ ಪ್ರಯೋಗ ಕೇಂದ್ರವನ್ನು ತೆರೆದರು ಅದು ಮುಂದೆ ಬೆಳೆದು ಭಾರತದ ಪ್ರಮುಖ ತೋಟಗಾರಿಕೆ ಪಯೋಗಾಲಯವಾಗಿದ್ದಲ್ಲದೆ, ಇಂದಿನ ಕೃಷಿ ಸಂಶೋಧನಾಲಯವಾಗಿದೆ. ಅಂತಯೇ ಕೆಂಗೇರಿ, ಶ್ರೀರಂಗಪಟ್ಟಣದ ಗಂಜಾಂನ ಹಣ್ಣಿನ ತೋಟಗಳು ಮಾದರಿಯಾಗಿವೆ. ಜವರಾಯನವರ ಕಾಲ ತೋಟಗಾರಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡ ಕಾಲವದು. ವ್ಯಕ್ತಿಯೋಬ್ಬರು ತನ್ನ ಸೇವೆಯನ್ನು ಎಷ್ಟು

ಜನೋಪಯೋಗಿಯಾಗಿ ಪರಿಣಾಮಕಾರಿಯಾಗಿ ಕಾಯ ನಿರ್ವಹಿಸಬಲ್ಲರೆಂಬುದಕ್ಕೆ ಇಲ್ಲಿದೆ ಉದಾಹರಣೆ.

ಲಾಲ್‌ಭಾಗ್‌ನ ಸೌಂದರ್ಯೀಕರಣ:

ತಮ್ಮ ಸೇವಾವಧಿಯ ಬಹಳಷ್ಟು ಕಾಲ ಲಾಲ್‌ಬಾಗಿನ ಅವರಣದಲ್ಲಿ, ಅಲ್ಲಿನ ಮರಗಿಡಗಳೊಂದಿಗೆ ಕಳೆದ ಜವರಾಯ; ಅದರ ಸೌಂದರ್ಯವನ್ನು ಹೆಚ್ಚಿಸಲು, ಉಪಯುಕ್ತತೆಯನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳಲ್ಲಿ ಅಲ್ಲಿನ ಗಾಜಿನ ಮನೆಯ ವಿಸ್ತರಣೆ, ಕಾವಲು ಗೋಪುರದ ನಿರ್ಮಾಣ, ಕಮಲದ ಕೊಳ, ಪ್ರಾಣಿಗಳ ವಿಭಾಗವನ್ನು ತೆರೆದ್ದದು. ಇವೆಲ್ಲವೂ ಲಾಲ್ ಬಾಗಿನ ಸೌಂದರ್ಯವನ್ನು ಮತ್ತು ಅದರ ಜನಾಕರ್ಷಣೆಯನ್ನು ಹೆಚ್ಚಿಸಲು ಕಾರಣ.

ಗಾಜಿನ ಮನೆ 1890ರ ಸುಮಾರಿಗೆ ನಿರ್ಮಾಣವಾಗಿದ್ದು, ಅಂದಿನ ಬ್ರಿಟಿಷ ರಾಜಕುಮಾರ ಆಲ್ಬರ್ಟ್ ವಿಕ್ಟರ್ ಮೈಸೂರು ರಾಜ್ಯವನ್ನು ಸಂದರ್ಶಿಸಿ, ಬೆಂಗಳೂರಿನಲ್ಲಿ ನೆಲೆಸಿದ್ದಾಗ ಲಾಲ್‌ಬಾಗಿಗೆ ಬೇಟಿ ನೀಡಿದ್ದರ ನೆನಪಿಗಾಗಿ, ಇಂಗ್ಲೇಂಡಿನ ಸುಂದರ ಅರಮನೆ 'ಕ್ರಿಸ್ಟಲ್ ಪ್ಯಾಲೆಸ್'ನ ಮಾದರಿಯಲ್ಲಿ ಅದನ್ನು ಕಟ್ಟಲಾಗಿತ್ತು. ಆದರೆ ಅದು ಪರಿಪೂರ್ಣವಾದ ಕಟ್ಟಡವಾಗಿರದೆ ಮೂರು ಭಾಗಗಳು ಮಾತ್ರವಿತ್ತು. ಈ ಕಟ್ಟಡಕ್ಕೆ ಪರಿಪೂರ್ಣತೆಯನ್ನು ತಂಧುಕೊಡಲು ನಿರ್ಧರಿಸಿದ ಜವರಾಯ 1930ರಲ್ಲಿ ಅದಕ್ಕೆ ಪೂರಕವಾಗಿ ನಾಲ್ಕನೆ ಭಾಗವನ್ನು ಸೇರಿಸಲು ಇಚ್ಚಿಸಿದರು.

ಆದರೆ ಅದು ಕಷ್ಟಕರವಾದ ಕೆಲಸ. ಅದರ ಬಳಕೆಗೆ ವಿದೇಶದಿಂದ ಅಮುದಾದ ಗಾಜು, ಹಾಗೂ ವಿದೇಶೀ ತಂತ್ರಜ್ಞಾನವನ್ನು ಬಳಸಲಾಗಿತ್ತಾದ್ದರಿಂದ ಈಗ ಮೊದಲನೇ ಮಹಾಯುದ್ಧದ ಕರಿನೆರಳು ದಾಟಿ, ಜಗತ್ತು ಚೇತರಿಸಿಕೊಳ್ಳುತ್ತಿರುವಾಗ, ವಿಶ್ವವು ಭಯಾನಕ ಆರ್ಥಿಕ ಕುಸಿತಕ್ಕೀಡಾಗಿರುವಾಗ ಮೈಸೂರು ಸರ್ಕಾರವೂ ಈ ಯೋಜನೆಯನ್ನೆತ್ತಿಕೊಳ್ಳಲಾರದಂತಹ ಸ್ಥಿತಿ. ಆದರೆ ಜವರಾಯ ಮಹಾರಾಜರ ಮನವೊಲಿಸಿ ಯೋಜನೆ ಕಾರ್ಯಗತಗೊಳಿಸಲು ಮುಂದಾಗಿ, ಅದಕ್ಕಾಗಿ ಸ್ಥಳೀಯವಾಗಿ ದೊರಕುವ ಗಾಜು, ಮತ್ತು ಸರ್ಕಾರಿ ಸ್ವಾಮ್ಯದ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕನ್ನು ಬಳಸಿ ಹಣ ಉಳಿಯುವಂತೆ ನೋಡಿಕೊಂಡರು. ಅವರ ಪರಿಶ್ರಮದ ಫಲವೇ ಗಾಜಿನ ಮನೆಯ ಪೂರ್ವದ ಭಾಗ, ಇದನ್ನು ಉಳಿದ ಭಾಗಗಳಂತೆ ಅವುಗಳ ಸೌಂದರ್ಯಕ್ಕೆ ಸರಿದೂಗಿಸುವಂತೆ ಪೂರ್ಣಗೊಳಿಸಿದರು. ಲಾಲ್‌ಬಾಗಿನ ಕೇಂದ್ರಬಿಂದು ಗಾಜಿನ ಮನೆಯಾಗಿರುವಂತೆ, ಅದರ ನಾಲ್ಕು ದ್ವಾರಗಳಿಗೆ ಬಂದು ಸೇರುವಂತೆ ಎಲ್ಲಾ ದಿಕ್ಕುಗಳಿಂದಲೂ ಬಂದು

ಕೂಡುವಂತೆ ರಸ್ತೆಗಳನ್ನು ನಿರ್ಮಿಸಲಾಯಿತು. ವಿಶೇಷ ಸಂದರ್ಭಗಳಲ್ಲಿ ಅಲ್ಲಿ ಸಂಗೀತ ಸಂಜೆಗಳನ್ನು, ದೇಶಿಯ ಹಾಗೂ ವಿದೇಶಿ ಬ್ಯಾಂಡ್‌ಗಳನ್ನೇರ್ಪಡಿಸುತ್ತಾ

ಕಾವಲು ಗೋಪುರ: ಲಾಲ್‌ಬಾಗಿನ ಅತ್ಯಂತ ಆಕರ್ಷಕವಾದ ವಿಶಿಷ್ಟಾಕೃತಿಯ ಕಾವಲು ಗೋಪುರ ನಿರ್ಮಾಣವಲ್ಲ: ಸ್ಥಳಾಂತರ. ಅದೊಂದು ಮಹತ್ತರವಾದ ಕ್ಲಿಷ್ಟ ಕಾರ್ಯ ಈಗ ಲಾಲ್‌ಬಾಗಿನ ಪ್ರಮುಖ ಆಕರ್ಷಣೆಯಾಗಿರುವ ಕಾವಲು ಗೋಪುರ, ಬೆಂಗಳೂರಿನ ದಿವಾನ ಕೃಷ್ಣಮೂರ್ತಿಯವರ ಹಳೆಯ ಭವನದ ಕಾವಲು ಗೋಪುರವಾಗಿದ್ದು, ಅತ್ಯಂತ ಕಲಾತ್ಮಕವಾಗಿದ್ದ ಈ ಗೋಪುರವನ್ನು ದುಃಸ್ಥಿತಿಯಲ್ಲಿದ್ದ ಭವನದೊಂದಿಗೆ ಕೆಡವಲ್ಪಡಲು ನಿಶ್ಚಯಿಸಲಾಗಿತ್ತು. ಆ ಗೋಪುರದ ಸೌಂದರ್ಯಕ್ಕೆ ಮನಸೋತ ಜವರಾಯ ಅದನ್ನು ಉಳಿಸಿಕೊಳ್ಳಲು ನಿರ್ಧರಿಸಿ ಅದನ್ನು ಲಾಲ್‌ಬಾಗಿಗೆ ಸ್ಥಳಾಂತರಿಸಲು ಪ್ರಯತ್ನಿಸಿದರು.

ಲಾಟೀನ್ ಆಕಾರದ ಒಂದಸ್ತಿನ ಕಟ್ಟಡ, ಅದರ ಹೊರ ಗೋಡೆಗಳು, ಕಿಟಕಿಗಳು ಕಲಾತ್ಮಕವಾಗಿ ಕೆತ್ತಲ್ಪಟ್ಟ ಕಲ್ಲಿನ ಗೋಪುರ ಅತ್ಯಂತ ಆಕರ್ಷಕವಾಗಿತ್ತು. ಅದರ ಸೌಂದರ್ಯಕ್ಕೆ, ಪರಿಪೂರ್ಣತೆಗೆ ದಕ್ಕೆ ಬರದಂತೆ ಅದನ್ನು ಸಾಗಿಸುವದು ಕಷ್ಟಕರವಾಗಿತ್ತು. ಕಟ್ಟಡದ ಯಾವ ಭಾಗವೂ ಊನವಾಗದಂತೆ ಅದರ ಸಾಗಾಣಿಕೆಯಾಗಬೇಕಿತ್ತು. ಅದಕ್ಕಾಗಿ ಕಲ್ಲುಗಳನ್ನು ಬೇರ್ಪಡಿಸಿ, ಅವುಗಳಿಗೆ ಸಂಖ್ಯೆಗಳನ್ನು ನೀಡಿ, ಅಲ್ಲಿಂದ ಲಾಲ್‌ಬಾಗಿಗೆ ಸಾಗಿಸಿ, ಅದನ್ನು ಮತ್ತೆ ಅದೇ ಆಕಾರದಲ್ಲಿ ಜೋಡಿಸಲಾಯಿತು. ಇದೊಂದು ಅಪೂರ್ವ ಸಾಧನೆಯಾಗಿದ್ದು, ಇಂತಹ ಕೆಲಸ ಭಾರತದಲ್ಲಿ ಇದುವರೆಗೂ ಆಗಿರಲಿಲ್ಲ. ಕಾವಲು ಗೋಪುರದ ಆಗಮನ ಲಾಲ್‌ಬಾಗಿನ ಆಕರ್ಷಣೆಯನ್ನು, ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿತು. ಇಂತಹ ಅಮೂಲ್ಯ ವಾಸ್ತುಶಿಲ್ಪ ಕೃತಿಯನ್ನು ಉಳಿಸಿಕೊಂಡದ್ದು ಜವರಾಯರ ಹಿರಿಮೆ.

ಜವರಾಯರು ನಿರ್ಮಿಸಿದ ವಿಶಿಷ್ಟಾಕೃತಿಯ ತಾವರೆ ಕೊಳ; ಲೋಟಸ್ ಪಾಂಡ್, ಮತ್ತು ಮಕ್ಕಳಿಗಾಗಿ ನಿರ್ಮಿಸಿದ ಮಿನಿ ಝೂ ಅದರ ಪರಿಪೂರ್ಣತೆಯನ್ನು ಹೆಚ್ಚಿಸಿದವು. ಈ ನಿರ್ಮಾಣಗಳು, ಕಲಾತ್ಮಕ ಕಟ್ಟಡಗಳು ಲಾಲ್‌ಬಾಗ್ ಭಾರತದ ಅತ್ಯಂತ ಸುಂದರ ಸಸ್ಯೋದ್ಯಮದ ತಾಣವಾಗಿಸಿದವು. ಇಂತಹ ಪರಿಪೂರ್ಣ ಬೇರೆಲ್ಲೂ ಇರಲ್ಲಿಲ.

ಇಂತಹ ಅಭೂತಪೂರ್ವ ಸೇವೆಯನ್ನು ಸಲ್ಲಿಸಿ ರಾಜ್ಯದ ಘನತೆ ಪ್ರತಿಷ್ಠಗಳಿಗೆ ಮತ್ತೊಂದು ಆಯಾಮವನ್ನು ರೂಪಿಸಿದ ಜವರಾಯ

ಸ್ತುತ್ಯಾರ್ಹರು. ಅವರ ಪರಿಶ್ರಮ, ಅಮೂಲ್ಯ ಸೇವೆ ವ್ಯರ್ಥವಾಗಲಿಲ್ಲ. ಮಹಾರಾಜ ನಾಲ್ವಡಿಯವರ ವಿಶ್ವಾಸವನ್ನು ಗಳಿಸಿದ್ದ ಜವರಾಯರನ್ನು, ನಂತರ ಬಂದ ಜಯಚಾಮರಾಜೇಂದ್ರರು ಹಾಗೇಯೆ ನೋಡಿಕೊಂಡರು. ಅನೇಕ ಬಿರುದುಬಾವಲಿಗಳಗೆ (**ರಾಜಸೇವಾಸಕ್ತ ಮುಂತಾದ ಗೌರವಗಳಿಗೆ**) ಪಾತ್ರರಾದ ಜವರಾಯ ರಾಜ್ಯವು ಕಂಡ ಅಪರೂಪದ ಸಜ್ಜನಿಕೆಯ ಸುಸಂಸ್ಕೃತ ವ್ಯಕ್ತಿತ್ವದ ಬಹುಮುಖ ಪ್ರತಿಭೆ. ಜವರಾಯರು ಕೇವಲ ಉದ್ಯಾನಗಳ ಶಿಲ್ಪಿ ಮಾತ್ರವಾಗಿರದೆ, ವೈಯಕ್ತಿಕವಾಗಿ ಸರಳ ಸಜ್ಜನಿಕೆ ಸಾಕಾರ ಮೂರ್ತಿ. ಬೆಂಗಳೂರಿನ ಅನೇಕ ಸೇವಾ ಸಂಸ್ಥೆಗಳೊಂದಿಗೆ ಸಂಬಂಧವಿದ್ದ ಇವರು ತಮ್ಮ ತಂದೆಯವರಂತೆ ಸಮಾಜಮುಖಿ. ದಲಿತರ ಮಕ್ಕಳ ಶಿಕ್ಷಣಕ್ಕಾಗಿ ತಂದೆ ಚೆನ್ನಯ್ಯನವರು ಸ್ಥಾಪಿಸಿದ್ದ ನರಸಿಂಹರಾಜ ಹಾಸ್ಟೆಲ್‌ನ ಪೋಷಕರಾಗಿದ್ದರು. ಸೇವಾ ಸಂಸ್ಥೆಗಳಿಗೆ ಉದಾರ ದೇಣಿಗೆ ನೀಡಿ, ಅವಶ್ಯಕವಿದ್ದಲಿ ಅಶಕ್ತರಿಗೆ ಸೂಕ್ತ ಅವಕಾಶಗಳನ್ನು ರೂಪಿಸುತ್ತಿದ್ದರು.

ಮೈಸೂರು ರಾಜ್ಯದ ಯಶಸ್ವಿ ಸಸ್ಯೋದ್ಯಮಿ ಜವರಾಯರ ಸೇವೆ ರಾಜ್ಯಕ್ಕೆ ಮಾತ್ರ ಸೀಮಿತವಾಗಲಿಲ್ಲ. ಇವ ಕಾರ್ಯ ತತ್ಪರತೆಯನ್ನು, ಸಾಧನೆಗಳನ್ನು ಗಮನಿಸುತ್ತಿದ್ದ ದೆಹಲಿಯಲ್ಲಿನ ಬ್ರಿಟಿಷ ಅಧಿಕಾರಿಗಳು 1933ರಲ್ಲಿ ಇವರ ಸೇವೆಯನ್ನು ಎರವಲು ಪಡೆಯಲು ಇಚ್ಚೆಸಿದರು. ಇದು ಬ್ರಿಟಿಷರಿಂದ ಭಾರತೀಯನೊಬ್ಬನಿಗೆ ಸಂದ ಗೌರವ. ಆಗ ತಾನೇ ಸ್ಥಾಪಿಸಲ್ಪಟ್ಟಿದ್ದ ಭಾರತ ಕೃಷಿಮಾರುಕಟ್ಟೆ ಇಲಾಖೆಯ ಮುಖ್ಯಸ್ಥರಾಗಿ ಜವರಾಯರನ್ನು ನೇಮಿಸಿಕೊಂಡಿತ್ತು. ಭಾರತೀಯರೊಬ್ಬರು ಅಖಿಲ ಭಾರತ ಮಟ್ಟದ ಇಲಾಖೆಯ ಮುಖ್ಯಸ್ಥರಾದುದು ಇದೇ ಮೊದಲು. ಆಗ ಭಾರತವೆಂದರೆ ಇಂದಿನ ಭಾರತ, ಪಾಕಿಸ್ತಾನ್, ಬಾಂಗ್ಲಾದೇಶ್ ಮತ್ತು ಬರ್ಮಾಗಳನ್ನೊಳಗೊಂಡಿತ್ತು. ಹೊಸದಾಗಿ ಸ್ಥಾಪಿಸಲ್ಪಟ್ಟಿದ್ದ ಇಲಾಖೆಯೆಂದರೆ ಅದರ ಸ್ಥಾಪನೆ, ರೂಪುರೇಷೆಗಳ ಸಿದ್ಧತೆ, ಕಾರ್ಯ ಯೋಜನೆ ಅವುಗಳ ಅನುಷ್ಠಾನ ಹೀಗೆ ಹತ್ತು ಹಲವು ಜವಾಬ್ದಾರಿಗಳು. ದಕ್ಷತೆಗೆ ಹೆಸರಾಗಿದ್ದ ಜವರಾಯ ತನ್ನ ಬ್ರಿಟಿಷ್ ಸಹೊದ್ಯೋಗಿಗಳಂತೆಯೆ ಕಾರ್ಯ ನಿರ್ವಹಿಸಿ ಅವರ ಮೆಚ್ಚುಗೆ ಪಡೆದರು.

ಕೃಷಿ ಮಾರುಕಟ್ಟೆಗಳ ಸ್ಥಾಪನೆ:

ಇಲಾಖೆಯ ಮೂಲಕ ದೇಶದ ಅಗತ್ಯತೆಗೆ ತಕ್ಕಂತೆ ದೇಶಾದ್ಯಂತ ಮಾರುಕಟ್ಟೆಗಳನ್ನು ನಿರ್ಮಿಸಿ ಉತ್ಪಾಧಕರ ವಸ್ತುಗಳಿಗೆ ನ್ಯಾಯವಾದ ಬೆಲೆ ದೊರಕುವಂತೆ ಮಾಡುವದು. ಅದೇನಿದ್ದರೂ ಮಧ್ಯವರ್ತಿಗಳ ಮೇಲುಗೈ. ಅದರ

ಪರಿಹಾರ ಸರ್ಕಾರ ತಾನೇ ದೇಶದ ಪ್ರಮುಖ ಭಾಗಗಳಲ್ಲಿ, ಮಾರುಕಟ್ಟೆಗಳನ್ನು ಸ್ಥಾಪಿಸುವುದು. ದೇಶದ ಹಲವು ಭಾಗಗಳಲ್ಲಿ ಮಾರುಕಟ್ಟೆಗಳು ನಿರ್ಮಾಣವಾದವು. ಈ ಮಾರುಕಟ್ಟೆಗಳ ಸ್ಥಾಪನೆಯಿಂದ ದೇಶದ ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹ ದೊರೆತು, ಹಲವು ಉಧ್ಯಮಗಳು, ವರ್ತಕ ಸಮುದಾಯಗಳು ಇದರ ಲಾಭ ಪಡೆದರು. ಇದು ದೇಶ ಆರ್ಥಿಕ ಬೆಳವಣಿಗೆಯ ಪ್ರಮುಖ ಬೆಳವಣಿಗೆ ಎಂದೇ ಗುರುತಿಸಲ್ಪಟ್ಟಿದೆ. ಬಹುಕಾಲದಿಂದ ದೇಶದ ಆಡಳಿತಗಾರರನ್ನು ಕಾಡುತ್ತಿದ್ದ ಸಮಸ್ಯೆಯಾಗಿದ್ದು, ಅದಕ್ಕೆ ದೀರ್ಘಕಾಲ ಪರಿಣಾಮ ಬೀರಬಲ್ಲ, ರೈತಾಪಿ ವರ್ಗಕ್ಕೆ ನೆರವಾಗಬಲ್ಲ ಕಾರ್ಯಸೂಚಿ ಸಿದ್ದವಾಗಬೇಕಿತ್ತು.

ಹೇಳಿಕೇಳಿ ಭಾರತ ಕೃಷಿಕರ ದೇಶ. ಕೃಷಿಯೆ ಭಾರತದ ಆರ್ಥಿಕತೆಯ ಬೆನ್ನೆಲಬು. ರೈತನು ಬೆಳೆದ ಧಾನ್ಯ, ಕಚ್ಚಾವಸ್ತುಗಳಿಗೆ ಸೂಕ್ತ ವ್ಯವಸ್ಥೆ ಇಲ್ಲದಿದ್ದರೆ ದೇಶದ ಆರ್ಥಿಕ ಸಬಲೀಕರಣವಾಗಲಾರದು. ಮಾರುಕಟ್ಟೆಗಳ ನಿರ್ಮಾಣದಿಂದಷ್ಟೆ ರೈತರ ಹಾಗೂ ವರ್ತಕರ ಸಮಸ್ಯೆ ಪರಿಹಾರವಾಗದು. ಅದರ ಮೂಲವಾದ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಬೇಕಿತ್ತು. ರೈತರು ತಾವು ಬೆಳೆದ ಬೆಳೆಗೆ ಸೂಕ್ತ ಬೆಲೆ ದೊರಕದೆ ಅನ್ಯಾಯವಾಗುತ್ತಿರುವದನ್ನು ಗಮನಿಸಿದ ಜವರಾಯ ಮಾರುಕಟ್ಟೆಯು ಪ್ರಯೋಜನ ರೈತರಿಗಾಗಿ ಬೇಕೆಂದು ತಿಳಿದು ಮಹಾರಾಜರ ಮನವೊಲಿಸಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಕೃಷಿ ಮಾರುಕಟ್ಟೆಗಳನ್ನು ತೆರೆಯುವಂತೆ ಮಾಡಿದರು. ಅದರಂತೆ 1939ರ ಸುಮಾರಿಗೆ ರಾಜ್ಯದಲ್ಲಿ ಕೃಷಿ ಮಾರುಕಟ್ಟೆಗಳು ಸ್ಥಾಪನೆಯಾಗಲು ಪ್ರತ್ಯೇಕ ಇಲಾಖೆಯೊಂದನ್ನು ತೆರೆದು, ಜಿಲ್ಲಾ ಮಟ್ಟದಲ್ಲಿ ಕೃಷಿ ಮಾರುಕಟ್ಟೆಗಳನ್ನು ತೆರೆಯಲಾಯಿತು. ಇದೋಂದು ಪ್ರಗತಿಪರ ಬೆಳವಣಿಗೆ. ಇದರಿಂದ ಲಕ್ಷಾಂತರ ರೈತರಿಗೆ ಸಹಾಯವಾಯಿತು. ಅದರಿಂದ ಮದ್ಯವರ್ತಿಗಳ ಕೈಗೆ ಸಿಕ್ಕಿ ನರಳುತ್ತಿದ್ದ, ತಾನು ಬೆಳೆದ ಬೆಳೆಯನ್ನು ಮಧ್ಯವರ್ತಿಗಳು ಮನಸೋಯಿಚ್ಚೆ ನಿಗದಿ ಪಡಿಸಿದ ಬೆಲೆಗೆ ಮಾರಬೇಕಿದ್ದ ರೈತರನ್ನು ಆ ಸಂಕಷ್ಟದಿಂದ ಬಿಡಿಸಲು ಮಾಡಿದ ಈ ದಿಟ್ಟ ಪ್ರಯತ್ನ ಮುಂದಿನ ದಿನಗಳಲ್ಲಿ ಯಶಸ್ಸು ಕಂಡಿತು. ಇಂದು ವ್ಯಾಪಕವಾಗಿ ಹರಡಿರುವ ಕೃಷಿ ಮಾರುಕಟ್ಟೆಗಳ ನಿರ್ಮಾತ ಜವರಾಯರೆಂದರೆ ತಪ್ಪಲ್ಲ.

ವೃತ್ತಿ ಮತ್ತು ಪ್ರವೃತ್ತಿಗಳೆರಡು ಸಸ್ಯೋಧ್ಯಮವಾಗಿದ್ದ ಜವರಾಯ ದೆಹಲಿಯಲ್ಲಿನ ತಮ್ಮ ಜವಾಬ್ದಾರಿಯಲ್ಲಿ ತೊಡಗಿಸಿಕೊಂಡಿದ್ದರು. ಅವರ ಮನಸ್ಸೆಲ್ಲಾ ಉಧ್ಯಾನಗಳ ಕಡೆಗಿತ್ತು. ಬರಡು ಬರಡಾಗಿದ್ದ ದೆಹಲಿಯ ರಸ್ತೆಗಳ ಪಕ್ಕಗಳಲ್ಲಿ ಹೂವಿನ ಮರಗಳನ್ನು ಬೆಳೆಸಲು ಅವರು ಮಾಡಿದ ಸಲಹೆಗೆ ಸೂಕ್ತ ಪ್ರತಿಕ್ರಿಯೆ

ದೊರಕಿತು. 1935ರಲ್ಲಿ ಇಂದಿನ ನವದೆಹಲಿ, ವೈಸರಾಯ್ ಭವನಗಳು ಅದರ ಸುತ್ತಲ ಭವನಗಳು ಸುಪ್ರಿಂಕೋರ್ಟ ನಿರ್ಮಾಣದ ಹಂತದಲ್ಲಿದ್ದವು. ದೆಹಲಿಯ ಅಧಿಕಾರಿಗಳು ಜವರಾಯರನ್ನು ಸಂಪರ್ಕಿಸಿ ಅಲ್ಲಿನ ಬೀದಿಗಳ ಸೌಂದರ್ಯವನ್ನು ಹೆಚ್ಚಿಸಲು ಅವರು ನೀಡಿದ ಸಲಹೆಗಳನ್ನು ಕಾರ್ಯ ರೂಪಕ್ಕೆ ತಂದರು. ಅದರಂತೆ ಬಣ್ಣಬಣ್ಣದ ಹೂಗಳನ್ನು ಬಿಡುವ ಮರಗಳನ್ನು ವಿಶಾಲವಾದ ರಸ್ತೆಗಳೆರಡೂ ಬದಿಗಳಲ್ಲಿ ಬೆಳಸುವಂತೆ ಮಾಡಿ, ರಾಜಧಾನಿಯೂ ಯಾವಾಗಲೂ ಹೂಗಳಿಂದ ಅಲಂಕೃತವಾಗಿರುವಂತೆ ಮಾಡಿದರು. ದೆಹಲಿಯಲ್ಲಿದ್ದಷ್ಟು ಕಾಲ ಚಟುವಟಿಕೆಯಿಂದ ಅಲ್ಲಿ ಮೇಲ್ವರ್ಗದ, ಅಧಿಕಾರಿ ವರ್ಗದ ಸಮೂಹದಲ್ಲಿದ್ದರೂ, ಎಂದು ತಮ್ಮ ಸರಳತೆಯನ್ನು ಬಿಟ್ಟವರಲ್ಲ.

ವೈಸರಾಯ್ ಭವನ (ಇಂದಿನ ರಾಷ್ಟ್ರಪತಿ ಭವನ)ದ ವಿಶಾಲವಾದ ಅಂಗಳದಲ್ಲಿ ಸುಂದರವಾದ ಸಸ್ಯೋಧ್ಯಮದ ಬೆಳವಣಿಗೆಯಲ್ಲಿ ಜವರಾಯರವರ ಪಾಲಿದೆ. ಅದರ ರೋಸ್ ಗಾರ್ಡನ್ ಜಗತ್ ಪ್ರಸಿದ್ಧ ಮೊಘಲ್ ಗಾರ್ಡನ್ಸ್‌ನ ಸೌಂದರ್ಯವನ್ನು ಹೆಚ್ಚಿಸುವಂತಹ ಯೋಜನೆ ತಯಾರಿಸಿದ ಜವರಾಯ ಅದು ಪೂರ್ಣಗೊಂಡಾಗ. ಅದರ ಜನಾಕರ್ಷಣೆಯನ್ನು ಹೆಚ್ಚಿಸಲು ಮೈಸೂರಿನಲ್ಲಿದ್ದಂತೆ ವರ್ಷಕ್ಕೊಮ್ಮೆ ಫ್ಲವರ್ ಷೋ ಏರ್ಪಡಿಸಲು ಕಾರಣರಾದರು. ಅಂತಯೇ ಪ್ರತಿವರ್ಷ ಜನವರಿ-ಫೆಬ್ರವರಿ ತಿಂಗಳುಗಳಲ್ಲಿ, ರಾಷ್ಟ್ರಪತಿ ಭವನದ ಈ ವಿಶಾಲ ಮೊಘಲ್ ಗಾಡನ್ಸ್ ಸಾರ್ವಜನಿಕರಿಗೆ ತೆರೆದುಕೊಂಡು ತನ್ನ ಮನಮೋಹಕ ವರ್ಣರಂಜಿತ ಹೋಗಿಡಗಳಿಂದ ಸಸ್ಯ ಪ್ರಬೇಧಗಳಿಂದ ಲಕ್ಷಾಂತರ ಜನರನ್ನು ಅಕರ್ಷಿಸುತ್ತದೆ.

ಉತ್ತಮ ಗಾಲ್ಫ್ ಆಟಗಾರ ಜವರಾಯ ದೆಹಲಿಯ ಗಾಲ್ಫ್ ಕ್ಲಬ್‌ನ ಸದಸ್ಯರಾಗಿದ್ದ ಜವರಾಯ ಗಾಲ್ಫ ಆಟಗಾರರಿಗೆ ಸುಂದರವಾದ ಗಾಲ್ಫ್ ಮೈದಾನವನ್ನು ಸಿದ್ಧಪಡಿಸಿದರು. ಜವರಾಯರ ಸೇವೆಯನ್ನು ಮೆಚ್ಚಿಕೊಂಡ ಭಾರತ ಸರ್ಕಾರ ಅವರಿಗೆ **'ರಾವ್ ಬಹದ್ದೂರ್'** ಬಿರುದನ್ನು ನೀಡಿ ಸನ್ಮಾನಿಸಿತು.

1944ರಲ್ಲಿ ತಮ್ಮ ದೀರ್ಘಕಾಲದ ಸೇವೆಯಿಂದ ನಿವೃತ್ತರಾದ ಜವರಾಯ ಸುಮ್ಮನೆ ಕೂರುವ ವ್ಯಕ್ತಿಯಲ್ಲ. ಅವರ ತಜ್ಞತೆಯನ್ನು ಅರಿತಿದ್ದ, ಭೋಪಾಲದ ನವಾಬರು ಜವರಾಯರನ್ನು ತಮ್ಮ ರಾಜ್ಯದಲ್ಲಿನ ತೋಟಗಾರಿಕೆಯ ಬೆಳವಣಿಗೆಗೆ ಸಹಕರಿಸಲು ಕೋರಿಕೊಂಡು ಅವರನ್ನ ತಮ್ಮ ಸರ್ಕಾರದ ಸಲಹೆಗಾರರಾಗಿಸಿ ಕೊಂಡರು. ಇಲ್ಲಿಯೂ ಜವರಾಯ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಅನೇಕ ಸುಂದರ ತೋಟಗಳ ನಿರ್ಮಣಕ್ಕೆ ಕಾರಣರಾದರು.

ಭೋಪಾಲದ ರಾಜಭಾನಿ ನಗರದ ಮಧ್ಯೆ ವಿಸ್ತಾರವಾಗಿ ಹರಡಿಕೊಂಡಿದ್ದ ನೈಸರ್ಗಿಕ ಸರೋವರವಿತ್ತು. ಅದು ಕೊಳಚೆ ನೀರು ತುಂಬಿ, ದುರ್ವಾಸನೆ ಬೀರುತ್ತಾ, ಸುತ್ತಲಿನ ಜನರ ಆರೋಗ್ಯದ ಮೇಲೆ ದುಷ್ಟ ಪರಿಣಾಮ ಬೀರುತಿತ್ತು. ಆ ಸರೋವರವೇ ಒಂದು ಸಮಸ್ಯೆಯಾಗಿತ್ತು. ಈ ಸರೋವರವನ್ನು ಸುಂದರ ಕೊಳವಾಗಿಸಿದ ಕೀರ್ತಿ ಜವರಾಯರದು. ಅವರು ಮಲಿನ ನೀರು ಸರೋವರಕ್ಕೆ ಬರುವದನ್ನು ತಡೆದು, ಸತ್ತಲು ಗೋಡೆ ಎತ್ತರಿಸಿ, ಅದರ ಉಳಿದ ಭಾಗದಲ್ಲಿ ಸುಂದರವಾದ ತರತರದ ಹೂ ಗಿಡಗಳನ್ನು ನೆಡಿಸಿ ಆಕರ್ಷಕ ಉದ್ಯಾನವಾಗಿಸಿದರು. ಜವರಾಯರು ಭೋಪಾಲದ ಸರೋವರದ ರಕ್ಷಣೆಗೆ ಕೈಗೊಂಡ ಈ ಕ್ರಮ ಆ ನೈಸರ್ಗಿಕ ಸರೋವರವನ್ನು ಉಳಿಸಿ ಅದು ಆ ನಗರದ ಹೆಮ್ಮೆಯ, ಉಪಯುಕ್ತ ತಾಣವಾಗಿಸಿರುವುದು ಸರ್.ಎಮ್. ವಿಶ್ವೇಶ್ವರಯ್ಯನವರು ಹೈದರಾಬಾದಿನಲ್ಲಿ ಮೂಸಾ ನದಿಗೆ ನಿರ್ಮಿಸಿರುವ ಕೊಲ ಮತ್ತು ಉದ್ಯಾನಕ್ಕೆ ಸಮನಾಗಿದೆ. ಅದು ಇಂದಿಗೂ ಭೋಪಾಲದ ಜನರ ಮೆಚ್ಚಿನ ತಾಣವಾಗಿದ್ದು ಮಕ್ಕಳು–ವೃದ್ಧರಾದಿಯಾಗಿ ಕಾಲ ಕಳೆಯುವ ಸ್ಥಳವಾಗಿದೆ. ಇಂತಹ ಅನೇಕ ಸುಂದರ ಉದ್ಯಾನಗಳನ್ನು ಭೋಪಾಲದ ಹಲವು ಕಡೆಗಳಲ್ಲಿ ನಿರ್ಮಿಸಿದರು. ಅವರಿನ್ನೂ ಭೋಪಲಾದ ಸೇವೆಯಲ್ಲಿದ್ದಾಗಲೆ (1946ರಲ್ಲಿ) ಆ ನಗರದಲ್ಲಿಯೆ ನಿಧನರಾದರು.

ಜವರಾಯರ ಅಮೂಲ್ಯ ಸೇವೆಯನ್ನು ಗಮನಿಸಿದ ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಮಹಾರಾಜರ ಸಹಕಾರವಲ್ಲದೆ, ಬ್ರಿಟಿಷ ಸರ್ಕಾರದಿಂದಲೂ ಸನ್ಮಾನಿತರಾದ ಜವರಾಯರನ್ನು ಮೈಸೂರು ಸರ್ಕಾರ ಗೌರವಿಸಿ ಲಾಲ್‌ಬಾಗಿನ ಮುಖ್ಯಪ್ರವೇಶದ ಸರ್ಕಲ್‌ಗೆ 'ಜವರಾಯ ಸರ್ಕಲ್' ಎಂದು ಹೆಸರನಿಟ್ಟಿದೆ. ಲಾಲ್‌ಬಾಗ್ ತನ್ನ ಲೈಬ್ರರಿಯಲ್ಲಿ ಜವರಾಯರು ಸಂಗ್ರಹಿಸಿದ ಪುಸ್ತಕಗಳನ್ನಿಟ್ಟು ಆ ಭಾಗಕ್ಕೆ ಅವರ ಹೆಸರಿಟ್ಟಿದೆ. ಲಾಲ್‌ಬಾಗ್‌ನ ಬೆಳವಣಿಗೆಯಲ್ಲಿ ಸತತವಾಗಿ ತನ್ನನ್ನು ತೊಡಗಿಸಿಕೊಂಡಿದ್ದ ಜವರಾಯರ ಸ್ಮರಣಾರ್ಥ ತೋಟಗಾರ ಎಂಬ ಪುಸ್ತಕವನ್ನು ಹೋರತಂದಿದೆ. ಅದಲ್ಲದೆ ಅನೇಕ ಪತ್ರಿಕೆಗಳು ಅವರ ಸೇವೆಯನ್ನು ಸ್ಮರಿಸಿ ಲೇಖನಗಳನ್ನು ಹೊರತಂದಿವೆ.

ಶ್ರೇಷ್ಠ ತೋಟಗಾರಿಕೆಯ ತಜ್ಞ, ದಕ್ಷ ಅಧಿಕಾರಿ, ಹಾಗೂ ನಿಷ್ಣಾತ ಸಸ್ಯೋಧ್ಯಮಿಯಾಗಿದ್ದ ಜವರಾಯರ ಸಾಧನೆ ಅಪ್ರತಿಮ. ಇಂದು ಈ ರೀತಿಯ ಸಾಧಕರರನೇಕರಿರಬಹುದು. ಆದರೆ ಆ ದಿನಗಳಲ್ಲಿ, ದೇಶವು ಎದುರಿಸುತ್ತಿದ್ದ ತುಮುಲಗಳ, ದೇಶಭಕ್ತಿ, ರಾಜಭಕ್ತಿಯ ವೈರುಧ್ಯತೆಗಳ, ನಡುವೆ ತಮ್ಮನ್ನು ತಮ್ಮ ಸೇವೆಗೆ ಸಮರ್ಪಿಸಿಕೊಂಡಿದ್ದ ಜವರಾಯನವರಂತಹವರು ಅಪರೂಪ. ಇವರು

ತಮ್ಮ ಪರಿಣಿತೆ, ಉತ್ಕೃಷ್ಟ ಮಟ್ಟದ ಸೇವೆಯಿಂದ ಬ್ರಿಟಿಷ್ ಅಧಿಕಾರಿಗಳಿಂದ ಬಿರುದುಬಾವಲಿಗಳನ್ನು ಗಳಿಸಿದ್ದರೆ, ಇವರ ಸಹೋದರ ಎಚ್. ಸಿ ದಾಸಪ್ಪ ಮತ್ತು ಅವರ ಪತ್ನಿ ಯಶೋಧರಾ ದಾಸಪ್ಪ ಬ್ರಿಟಿಷರ ವಿರುದ್ಧ ತನ್ನ ಹೋರಾಟವನ್ನು ನಡೆಸುತ್ತಿದ್ದರು. ಈ ಭಿನ್ನತೆಗಳೇನಿದ್ದರು ಅವು ತಾತ್ವಿಕವಾಗಿದ್ದವು ಅವರ ಕುಟುಂಬಗಳ ನಡುವಿನ ಸೌಹಾರ್ದತೆಗೆ ದಕ್ಕೆ ಬರದಂತೆ ನೋಡಿಕೊಂಡಿದ್ದ ಸುಂಸ್ಕೃತ ಜೀವನ ಅವರದು: ಮೈಸೂರಿನ ಪ್ರಖ್ಯಾತ ಅಡ್ವೋಕೇಟ್ ಆಗಿದ್ದ ಅವರ ಮಗ ದೇವನಾಥ ತಮ್ಮ ತಂದೆಯ ಹೃದಯವಂತಿಕೆಯನ್ನು ಸ್ಮರಿಸಿಕೊಳ್ಳುತ್ತಾ ಅವರ ಹುದ್ದೇ , ಅವರಿಗೆ ದೊರಕಿದ ಪ್ರತಿಷ್ಠೆ ಗೌರವಗಳು ಅಂದೂ ಕುಟುಂಬದಲ್ಲಿ ಹೆಂಡತಿ, ಮಕ್ಕಳು, ನೆಂಟರಿಷ್ಟರ ನಡುವಿನ ಸಂಬಂಧಕ್ಕೆ ಅಡ್ಡಿ ಬಂದಿರಲಿಲ್ಲವೆಂದು ಹೇಳುತ್ತಿದ್ದರು.

ಬಾಲ್ಯದಿಂದಲೂ ಸಹೃದಯತೆಯನ್ನು, ಬಡಬಗ್ಗರ ಬಗ್ಗೆ ಅಂತಃಕರಣವನ್ನು ಬೆಳಸಿಕೊಂಡಿದ್ದ ಜವರಾಯ ಸುಸಂಸ್ಕೃತ ನಡೆನುಡಿಯನ್ನು ಹೊಂದಿದಲ್ಲದೆ ಸಾಧ್ಯವಿದ್ದಾಗಲೆಲ್ಲಾ ಅಸಹಾಯಕರ ನೆರವಿಗೆ ಧಾವಿಸುತ್ತಿದ್ದರು. ರಾಮಕೃಷ್ಣಾಶ್ರಮದ ಚಟುವಟಿಕೆಗಳು ಪ್ರವಚನಗಳಲ್ಲಿ ಭಾಗವಹಿಸುವುದು ಅವರಿಗಿಷ್ಟ, ಅದರ ಪ್ರಭಾವದಿಂದಾಗಿ ಸಾತ್ವಿಕತೆ ಅವರ ಜೀವನದ ಶೈಲಿಯಾಗಿತ್ತು. ತಂದೆಯಂತೆ ಸಾಮಾಜಿಕ ಸುಧಾರಣೆಯ ಬಗ್ಗೆಯೂ ಆಸಕ್ತರಾಗಿದ್ದ ಜವರಾಯ. ತಂದೆ ಚೆನ್ನಯ್ಯ ಮತ್ತವರ ಸ್ನೇಹಿತರು ಬೆಂಗಳೂರಿನಲ್ಲಿ ದಲಿತರ ಮಕ್ಕಳಿಗಾಗಿ ನಡೆಸುತ್ತಿದ್ದ 'ನರಸಿಂಹರಾಜ ಹಾಸ್ಟೆಲ್'ನ ಪೋಷಕರೊಬ್ಬರಾಗಿದ್ದರು. ಆ ಮಕ್ಕಳಿಗೆ ಸಂಗೀತ ಕಲಿಸಿ ಅವರು ನರಸಿಂಹರಾಜ ಬ್ಯಾಂಡ್ ಅನ್ನು ಸ್ಥಾಪಿಸಿದಾಗ ಅದನ್ನು ಪ್ರೋತ್ಸಾಹಿಸಿ ಲಾಲ್‌ಬಾಗ್ ಬ್ಯಾಂಡ್ ಸ್ಟ್ಯಾಂಡನಲ್ಲಿ ಈ ಮಕ್ಕಳ ಕಾರ್ಯಕ್ರಮವಿರುವಂತೆ ನೋಡಿಕೊಳ್ಳುತ್ತಿದ್ದರು. ಇದು ಆ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುತ್ತಿತ್ತು. ಇದು ಬಹಳ ವರ್ಷಗಳ ಕಾಲ ಮುಂದುವರೆಯಿತು. ಇಂತಹ ಸೃಜನಶೀಲ ವ್ಯಕ್ತಿಗಳ ಕಾರ್ಯವನ್ನು ಆಗಾಗ ನೆನಪಿಸಿಕೊಳ್ಳುವುದು ಸಮಾಜದ ಏಳಿಗೆಗೆ ಪೂರಕ ಹಾಗೂ ನಾವು ಅವರಿಗೆ ಸಲ್ಲಿಸಬೇಕಾದ ಗೌರವ.

* * * * *



ಡಾ. ಬಿ. ಪಾಂಡುಕುಮಾರ್ ಇವರು 1980ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು, 1998ರಲ್ಲಿ ಪಿಹೆಚ್.ಡಿ ಪದವಿಯನ್ನು ಗಳಿಸಿರುತ್ತಾರೆ. ಇಂದಿಗೆ ಮೂವತ್ತು ವರ್ಷಗಳಿಂದ ವಿವೇಕಾನಂದ ಪದವಿ ಕಾಲೇಜಿನಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಸಲ್ಲಿಸಿದರು. ರಾಜ್ಯ ರಾಷ್ಟ್ರ ಮತ್ತು ಅಂತರರಾಷ್ಟ್ರಮಟ್ಟದ ವಿಚಾರಸಂಕಿರಣಗಳಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಇವರ ವಿಚಾರಪೂರಿತ ಲೇಖನಗಳು ಸಾಕಷ್ಟು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 1990ರಿಂದ ಮಧುರೈ ಕಾಮರಾಜ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶಕರಾಗಿದ್ದು ಪಿಹೆಚ್.ಡಿ ಮತ್ತು ಎಂ.ಪಿಲ್ ಪದವಿಗಳು ಹೊರ ಬಂದಿವೆ. ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಬರೇಲಿ (2004)ಯಲ್ಲಿ ನಡೆದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಶ್ರೀಯುತರು ಮಂಡಿಸಿದ **"Bangalore is the only city in Inida to have Hydro Electricity Power"** ಎಂಬ ಪ್ರಬಂಧವು ದ್ವಿತೀಯ ಬಹುಮಾನಗಳಿಸಿತು. 2005ರಲ್ಲಿ, **"Role of Vokkaligar Sangha in the Change of Social & Political activities in Karnataka - A Study"** ಎಂಬ ಯು.ಜಿ.ಸಿ. ಪ್ರಾಯೋಜಿತ ಸಂಶೋಧನಾ ಯೋಜನೆಯನ್ನು ಪೂರ್ಣಗೊಳಿಸಿರುತ್ತಾರೆ. 2001ರಲ್ಲಿ ಅಮೇರಿಕಾದ ಟೆಕ್ಸಾಸ್ **A&M** ವಿಶ್ವವಿದ್ಯಾಲಯವು ಶ್ರೀಯುತರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು, 2005ರಲ್ಲಿ ಜನತಾಶಿಕ್ಷಣ ಸಂಸ್ಥೆಯು ಪ್ರೊ. ಸಂಕೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

2007ರಲ್ಲಿ ಶ್ರೀಯುತರು ರಚಿಸಿದ '1600 ವರ್ಷಗಳ ಒಕ್ಕಲಿಗರ ಇತಿಹಾಸ' ಎಂಬ ಕೃತಿಯು ಕರ್ನಾಟಕ ರಾಜ್ಯ ಗ್ರಂಥಾಲಯ ಇಲಾಖೆ ಹಾಗೂ ಸಹೃದಯ ಓದುಗರಿಂದಾಗಿ ಇದುವರೆವಿಗು ಆರು ಮುದ್ರಣಗಳನ್ನು ಕಂಡು ಒಟ್ಟು 18000 ಪ್ರತಿಗಳು ಮಾರಾಟವಾಗಿವೆ. ದಿನಾಂಕ 05 ಡಿಸೆಂಬರ್ 2012ರಲ್ಲಿ 'ದೆಹಲಿ ಕರ್ನಾಟಕ ಸಂಘ' ನವದೆಹಲಿ ಇಲ್ಲಿ 500ನೇ ವರ್ಷದ ಕೆಂಪೇಗೌಡ ಜಯಂತೋತ್ಸವದ ಆಚರಣೆಯ ಅಂಗವಾಗಿ ರಚಿಸಿದ 'ಬೆಂಗಳೂರು ನಿರ್ಮಾಪಕ ಕೆಂಪೇಗೌಡ' ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಯ್ತು. 2014ರಲ್ಲಿ "ಕರ್ನಾಟಕದ ರತ್ನಗಳು" ಕೃತಿ ಲೋಕಾರ್ಪಣೆ ಗೊಂಡಿತು. ಶ್ರೀಯುತರು 2011ರಿಂದ 2013ರ ಅವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಇತಿಹಾಸ ಅಧ್ಯಾಪಕರ ವೇದಿಕೆಯ ಅಧ್ಯಕ್ಷರಾಗಿದ್ದು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಏರ್ಪಡಿಸಿ 2014 ಜುಲೈ ತಿಂಗಳಿನಲ್ಲಿ ಸಂಶೋಧನಾ ಪ್ರಬಂಧಗಳ ಮಾಲಿಕೆಗಳನ್ನು ಲೋಕಾರ್ಪಣೆ ಮಾಡಲಾಯಿತು. 2013ರಲ್ಲಿ ಶ್ರೀಯುತರಿಗೆ ಕೆಂಪೇಗೌಡ ಪ್ರಶಸ್ತಿಯು ಲಭಿಸಿದೆ.

ತಲಕಾಡು ಚಿಕ್ಕರಂಗೇಗೌಡ
ಅಧ್ಯಕ್ಷರು, ಕೃಷಿಕ ಸಾಹಿತ್ಯ ಪರಿಷತ್ತು

₹ 250/-